ವಿಜಯನಗರ ಕಾಲದ ವಸ್ತ್ರ ಮತ್ತು ಆಭರಣಗಳು

(ಕನ್ನಡ ವಿಶ್ವವಿದ್ಯಾಲಯಕ್ಕೆ ಪಿಎಚ್.ಡಿ ಪದವಿಗಾಗಿ ಸಲ್ಲಿಸುತ್ತಿರುವ ಮಹಾಪ್ರಬಂಧ)

ಸಂಶೋಧನೆ

ವೀಣಾ, ಎನ್.,

ಮಾರ್ಗದರ್ಶನ

ಡಾ.ಎಸ್.ವೈ.,ಸೋಮಶೇಖರ್

ಸಹಾಯಕ ಪ್ರಾಧ್ಯಾಪಕರು

ಪ್ರಾಚೀನ ಇತಿಹಾಸ ಮತ್ತು ಪುರಾತತ್ವ ಅಧ್ಯಯನ ವಿಭಾಗ

ಪ್ರಾಚೀನ ಇತಿಹಾಸ ಮತ್ತು ಪುರಾತತ್ವ ಅಧ್ಯಯನ ವಿಭಾಗ

ಸಮಾಜ ವಿಜ್ಞಾನಗಳ ನಿಕಾಯ

ಕನ್ನಡ ವಿಶ್ವವಿದ್ಯಾಲಯ, ಹಂಪಿ

ವಿದ್ಯಾರಣ್ಯ- ೫೮೩ ೨೭೬

೨೦೧೬

ವಿಜಯನಗರ ಕಾಲದ ವಸ್ತ್ರ ಮತ್ತು ಆಭರಣಗಳು

(ಕನ್ನಡ ವಿಶ್ವವಿದ್ಯಾಲಯಕ್ಕೆ ಪಿಎಚ್.ಡಿ ಪದವಿಗಾಗಿ ಸಲ್ಲಿಸುತ್ತಿರುವ ಮಹಾಪ್ರಬಂಧ)

ಸಂಶೋಧನೆ

ವೀಣಾ, ಎನ್.,

ಮಾರ್ಗದರ್ಶನ

ಡಾ. ಎಸ್. ವೈ., ಸೋಮಶೇಖರ್

ಸಹಾಯಕ ಪ್ರಾಧ್ಯಾಪಕರು

ಪ್ರಾಚೀನ ಇತಿಹಾಸ ಮತ್ತು ಪುರಾತತ್ವ ಅಧ್ಯಯನ ವಿಭಾಗ

ಪ್ರಾಚೀನ ಇತಿಹಾಸ ಮತ್ತು ಪುರಾತತ್ವ ಅಧ್ಯಯನ ವಿಭಾಗ

ಸಮಾಜ ವಿಜ್ಞಾನಗಳ ನಿಕಾಯ,

ಕನ್ನಡ ವಿಶ್ವವಿದ್ಯಾಲಯ, ಹಂಪಿ,

ವಿದ್ಯಾರಣ್ಯ – ೫೮೩ ೨೭೬.

೨೦೧೬

ದೃಢೀಕರಣ ಪತ್ರ

ಶ್ರೀಮತಿ ವೀಣಾ.ಎನ್ ಅವರು **'ವಿಜಯನಗರ ಕಾಲದ ವಸ್ತ್ರ ಮತ್ತು ಆಭರಣಗಳು'** ಎಂಬ ಶೀರ್ಷಿಕೆಯ ಮಹಾಪ್ರಬಂಧವನ್ನು ನನ್ನ ಮಾರ್ಗದರ್ಶನದಲ್ಲಿ ಸಿದ್ಧಪಡಿಸಿರುತ್ತಾರೆ. ಪಿಎಚ್.ಡಿ. ಪದವಿಗಾಗಿ ಕನ್ನಡ ವಿಶ್ವವಿದ್ಯಾಲಯದ ಪ್ರಾಚೀನ ಮತ್ತು ಪುರಾತತ್ವ ಅಧ್ಯಯನ ವಿಭಾಗಕ್ಕೆ ಸಲ್ಲಿಸುತ್ತಿರುವ ಪ್ರಸ್ತುತ ಮಹಾಪ್ರಬಂಧವನ್ನು ಈ ಮೊದಲು ಯಾವುದೇ ಪದವಿಗಾಗಿ ಸಲ್ಲಿಸಿರುವುದಿಲ್ಲವೆಂದು ದೃಢೀಕರಿಸುತ್ತೇನೆ.

ದಿನಾಂಕ: ೧೬/೦೮/೨೦೧೭

ಸ್ಥಳ: ವಿದ್ಯಾರಣ್ಯ.

(ಡಾ. ಎಸ್.ವೈ., ಸೋಮಶೇಖರ್)
ಮಾರ್ಗದರ್ಶಕರು ಹಾಗೂ ಸಹಾಯಕ ಪ್ರಾಧ್ಯಾಪಕರು,
ಪ್ರಾಚೀನ ಇತಿಹಾಸ ಮತ್ತು ಪುರಾತತ್ವ ಅಧ್ಯಯನ ವಿಭಾಗ,
ಕನ್ನಡ ವಿಶ್ವವಿದ್ಯಾಲಯ, ಹಂಪಿ, ವಿದ್ಯಾರಣ್ಯ.

ಪ್ರಮಾಣ ಪತ್ರ

'ವಿಜಯನಗರ ಕಾಲದ ವಸ್ತ್ರ ಮತ್ತು ಆಭರಣಗಳು' ಎಂಬ ಶೀರ್ಷಿಕೆಯ ಮಹಾಪ್ರಬಂಧವನ್ನು ಡಾ. ಎಸ್.ವೈ., ಸೋಮಶೇಖರ್ ಅವರ ಮಾರ್ಗದರ್ಶನದಲ್ಲಿ ಸಿದ್ಧಪಡಿಸಿ, ಪಿಎಚ್.ಡಿ. ಪದವಿಗಾಗಿ ಕನ್ನಡ ವಿಶ್ವವಿದ್ಯಾಲಯದ ಪ್ರಾಚೀನ ಮತ್ತು ಪುರಾತತ್ವ ಅಧ್ಯಯನ ವಿಭಾಗಕ್ಕೆ ಈ ಮಹಾಪ್ರಬಂಧವನ್ನು ಸಲ್ಲಿಸುತ್ತಿದ್ದೇನೆ. ಪ್ರಸ್ತುತ ಮಹಾಪ್ರಬಂಧವು ಮೂಲವಾಗಿದ್ದು, ಈ ಮೊದಲು ಯಾವುದೇ ಪದವಿಗಾಗಿ ಸಲ್ಲಿಸಿರುವುದಿಲ್ಲವೆಂದು ಪ್ರಮಾಣೀಕರಿಸುತ್ತೇನೆ.

ದಿನಾಂಕ: 16-08-2016

ಸ್ಥಳ : ವಿದ್ಯಾರಣ್ಯ.

N. Veena

(ವೀಣಾ. ಎನ್.,)

ಸಂಶೋಧನಾರ್ಥಿ,

ಪ್ರಾಚೀನ ಇತಿಹಾಸ ಮತ್ತು ಪುರಾತತ್ವ ಅಧ್ಯಯನ ವಿಭಾಗ,

ಕನ್ನಡ ವಿಶ್ವವಿದ್ಯಾಲಯ, ಹಂಪಿ, ವಿದ್ಯಾರಣ್ಯ.

ವಿಜಯನಗರ ಕಾಲದ ವಸ್ತ್ರ ಮತ್ತು ಆಭರಣಗಳು

ಪರಿವಿಡಿ

ಅಧ್ಯಾಯ ಒಂದು : ಪ್ರಸ್ತಾವನೆ

ಅಧ್ಯಯನದ ಉದ್ದೇಶ, ವ್ಯಾಪ್ತಿ, ಸಮೀಕ್ಷೆ, ವಿಧಾನ ಮತ್ತು ಸ್ವರೂಪ

ಪ್ರಸ್ತಾವನೆ

ಇತಿಹಾಸ ಎಂದರೆ ಸಾಮಾನ್ಯವಾಗಿ ರಾಜ-ಮಹಾರಾಜರ ನಡುವಿನ ಯುದ್ಧ, ಆಕ್ರಮಣ ಹಾಗೂ ಆಡಳಿತಾತ್ಮಕ ಸಾಧನೆಯಷ್ಟೆ ಅಲ್ಲ, ಅದರಾಚೆಗೂ ಅನೇಕ ಸಾಂಸ್ಕೃತಿಕ ಸಂಗತಿಗಳನ್ನು ಒಳಗೊಂಡ ಇತಿಹಾಸವನ್ನು ವಿವಿಧ ಆಕರಗಳಿಂದ ಕಟ್ಟಿಕೊಡಲು ಸಾಧ್ಯವಿದೆ. ಮನುಷ್ಯ ತನಗೆ ತಿಳುವಳಿಕೆ ಬಂದಂದಿನಿಂದಲೂ ಅಲಂಕಾರ ಪ್ರಿಯನಾಗಿದ್ದಾನೆ. ಸಮಾಜದಲ್ಲಿ ತನ್ನ ವೈಶಿಷ್ಟ್ಯವನ್ನು ತೋರುತ್ತಾ, ಅಹಮಿಕೆ, ಸ್ವಂತಿಕೆಯನ್ನು ಪ್ರದರ್ಶಿಸುವ ಪ್ರವೃತ್ತಿ ಹಿಂದಿನಿಂದಲೂ ಇದೆ. ಈ ಅಲಂಕಾರಕ್ಕೆ ಬಳಸುವ ಸಾಧನಗಳಲ್ಲಿ ವಸ್ತ್ರ ಮತ್ತು ಆಭರಣಗಳು ಪ್ರಮುಖವಾಗಿವು. ಹೀಗೆ ಬಳಸುವ ವಸ್ತ್ರ ಮತ್ತು ಆಭರಣಗಳ ವಿಶೇಷತೆ ಏನೆಂಬುದು ಕುತೂಹಲಕರ ಸಂಗತಿಯಾಗಿದೆ. ಶೈಕ್ಷಣಿಕವಾಗಿ ಈ ಬಗೆಗಿನ ಸಂಶೋಧನೆಗೆ ನೀಡಿದ ಪ್ರಾಶಸ್ತ್ಯ ಅತ್ಯಂತ ಕಡಿಮೆ ಎನ್ನಬಹುದು.

ಶಬ್ದಾರ್ಥ ದೃಷ್ಟಿಯಿಂದ 'ಕಲೆ' ಎಂದರೆ 'ಗುರುತು', 'ಲಲಿತವಿದ್ಯೆ' ಎಂಬ ಅರ್ಥಗಳಿವೆ. ಅರವತ್ನಾಲ್ಕು ಕಲೆಗಳಲ್ಲಿ ಹನ್ನೆರಡು ದೇಹಾಲಂಕಾರವನ್ನು ಕುರಿತಿವೆ. ಹೀಗಾಗಿ ಮಾನವನ ಜೀವನದ ಅಗತ್ಯತೆಗಳಲ್ಲಿ ವಸ್ತ್ರ ಮತ್ತು ಆಭರಣಗಳು ಪ್ರಮುಖವಾಗಿದ್ದು, ಸ್ವಯಂ ಅಭಿವ್ಯಕ್ತಿಗೂ ಸಹಾಯಕವಾಗಿವೆ; ನಾಗರಿಕತೆಯ ವಿಕಾಸದಲ್ಲಿ ಮಹತ್ವದ ಪಾತ್ರ ವಹಿಸಿವೆ. ಮಾನವ ತನ್ನ ವಿವೇಚನೆಯಿಂದ ಆಚಾರ-ವಿಚಾರ, ನಾಗರಿಕತೆ ಮತ್ತು ಸಂಸ್ಕೃತಿಯನ್ನು ಬೆಳೆಸಿಕೊಂಡ. ಪ್ರಾಗಿತಿಹಾಸ ಕಾಲದ ಮಾನವ ತನ್ನ ದೇಹವನ್ನು ಮಳೆ, ಚಳಿ, ಗಾಳಿಯಿಂದ ರಕ್ಷಿಸಿಕೊಳ್ಳಲು ಪ್ರಾಣಿಯ ಚರ್ಮ ಮತ್ತು ಎಲೆಗಳನ್ನು ಬಟ್ಟೆಯಂತೆ ಸುತ್ತಿಕೊಂಡ. ಇತಿಹಾಸ ಕಾಲದ ಮಾನವ ಈ ಮೇಲಿನ ಕಾರಣ ಮತ್ತು ಮಾನರಕ್ಷಣೆಗಾಗಿ ಬಟ್ಟೆಯನ್ನು ಬಳಸಿಕೊಂಡನು. ಅಲಂಕಾರ ಪ್ರಿಯತೆ ಮಾನವನ ಸಹಜ ಗುಣ. ತಾನು ಇತರರಿಗಿಂತ ಸುಂದರವಾಗಿ ಕಾಣಬೇಕೆಂಬ ಆಸೆ ಆಕಾಂಕ್ಷೆಗಳೇ ಆಭರಣಗಳ ಅನ್ವೇಷಣೆಗೆ ದಾರಿ ಮಾಡಿಕೊಟ್ಟಿತೆನ್ನಬಹುದು. ಹಾಗಾಗಿ ಪ್ರಕೃತಿದತ್ತವಾಗಿ ಸಿಗುತ್ತಿದ್ದ ಹೂವು, ಕಪ್ಪೆಚಿಪ್ಪು, ಶಂಖ, ದಂತ, ಕಲ್ಲಿನ ಹರಳು ಮುಂತಾದವುಗಳನ್ನು ಆಭರಣಗಳಾಗಿ

ಧರಿಸಲು ಪ್ರಾರಂಭಿಸಿದ. 'ವಸ್ತ್ರ' ಮಾನವನ ಶರೀರವನ್ನು ಮುಚ್ಚುವ, ರಕ್ಷಿಸುವ ಮತ್ತು ಅಲಂಕಾರಿಕ ಸಾಧನವಾದರೆ, 'ಆಭರಣ'ವು ಅಲಂಕಾರ, ಪ್ರತಿಷ್ಠೆ ಹಾಗೂ ಸಂಪತ್ತಿನ ಆಕರವಾಗಿ ಜೀವನದ ಸಾಂಸ್ಕೃತಿಕ ಕುರುಹಾಯಿತು. ಕ್ರಮೇಣ ಮಾನವನ ಆರ್ಥಿಕ ಮತ್ತು ಸಾಮಾಜಿಕ ಜೀವನವನ್ನು ಪ್ರತಿನಿಧಿಸುವ ಮಹತ್ವದ ಸಾಧನಗಳಾದ ವಸ್ತ್ರ ಮತ್ತು ಆಭರಣಗಳು ಲೌಕಿಕ ಸಂಸ್ಕೃತಿಯ ಪ್ರತೀಕವೆನಿಸಿವೆ.

ವಸ್ತ್ರ ಮತ್ತು ಆಭರಣಗಳು ಹಲವು ಸಂಗತಿಗಳನ್ನು ಹೊರಗೆಡಹುತ್ತವೆ: ಅವುಗಳಲ್ಲಿ ಮುಖ್ಯವಾಗಿ ಆ ದೇಶದ ವಾಯುಗುಣ; ನೈಸರ್ಗಿಕ ಸಂಪನ್ಮೂಲಗಳ ಲಭ್ಯತೆ; ಮನೋವೈಜ್ಞಾನಿಕ ಮತ್ತು ಸಾಮಾಜಿಕ ಸ್ಥಿತಿಯ ಪಾತ್ರ ; ವಸ್ತ್ರಾಭರಣ ಧರಿಸುವವರ ಮನಃಸ್ಥಿತಿ; ಮಾನವನ ದೇಹರಚನೆಯ ಲಕ್ಷಣ; ಇವೆಲ್ಲಕ್ಕಿಂತ ಬಹುಮುಖ್ಯವಾದದ್ದು ಆರ್ಥಿಕ ಸ್ಥಿತಿಯಾಗಿದೆ. ಇದರೊಂದಿಗೆ ವಿದೇಶಿಯರ ಪ್ರಭಾವವನ್ನು ಅಲ್ಲಗಳೆಯುಂತಿಲ್ಲ. ಹಾಗಾಗಿ ಈ ಎಲ್ಲ ಅಂಶಗಳು ವಸ್ತ್ರ ಮತ್ತು ಆಭರಣಗಳ ಧಾರಣೆಯ ಪ್ರಮಾಣವನ್ನು ನಿರ್ಧರಿಸುವ ಪ್ರಮುಖ ಸಂಗತಿಗಳಾಗಿವೆ.

ವಸ್ತ್ರಗಳ ವೈವಿಧ್ಯವನ್ನು ಹೀಗೆ ಪಟ್ಟಿ ಮಾಡಬಹುದು, ಉಷ್ಣೀಷ(ರುಮಾಲು) ಅಥವಾ ಕುಲಾವಿ, ನಿಲುವಂಗಿ, ಧೋತಿ, ಉತ್ತರೀಯ, ದ್ವಿಪದಿ, ಕೌಪೀನ, ಸೀರೆ, ಸ್ತನೋತ್ತರೀಯ ಮತ್ತು ರವಿಕೆ ಮುಂತಾದವು. ಹಾಗೆಯೇ, ಆಭರಣಗಳಲ್ಲಿ ಶಿರ, ನಾಸಿಕ, ಭುಜ, ಬಾಹು, ಉದರ ಮತ್ತು ಕಾಲಿನ ಆಭರಣಗಳು ಪ್ರಮುಖವಾಗಿವೆ. ಸೌಂದರ್ಯಪ್ರಿಯ ಮಾನವ ವಸ್ತ್ರ ಮತ್ತು ಆಭರಣಗಳನ್ನು ತಾನು ಧರಿಸುವುದರೊಂದಿಗೆ ತನ್ನ ಸಾಕು ಪ್ರಾಣಿಗಳಿಗೂ ತೊಡಿಸಿ ಸಂತೋಷಪಡುತ್ತಿದ್ದ. ಸಾಮಾನ್ಯವಾಗಿ ಪ್ರಾಣಿಗಳಿಗೆ ತೊಡಿಸುತ್ತಿದ್ದ ಆಭರಣಗಳೆಂದರೆ ಗಂಟೆ, ಗಂಟೆಸರ, ಗೆಜ್ಜೆಸರ, ಮೊಗರಂಭ, ಕೊಂಬು, ಕಳಸಗಳು ಮುಖ್ಯವಾಗಿವೆ.

ವಸ್ತ್ರ ಮತ್ತು ಆಭರಣಗಳಲ್ಲಿ ವಿವಿಧ ಬಗೆ, ವಿನ್ಯಾಸಗಳನ್ನು ವಿಜಯನಗರ ಕಾಲದ ಸಾಹಿತ್ಯ ಕೃತಿ ಹಾಗೂ ಸ್ಮಾರಕ ಅವಶೇಷಗಳಲ್ಲಿ ಕಾಣಬಹುದು. ವಿಜಯನಗರ ಕಾಲದಲ್ಲಿ ಹತ್ತಿ, ರೇಷ್ಮೆ, ವೆಲ್‌ವೆಟ್, ಸ್ಯಾಟೀನ್ ಬಟ್ಟೆಗಳು ಹಾಗೂ ಚಿನ್ನ, ಬೆಳ್ಳಿ, ತಾಮ್ರ ಹಾಗೂ ಬೆಲೆಬಾಳುವ ಹರಳುಗಳಿಂದ ವಿವಿಧ ಆಭರಣಗಳನ್ನು ತಯಾರಿಸಿ ಧರಿಸುತ್ತಿದ್ದುದಕ್ಕೆ ಆಧಾರಗಳಿವೆ.

ಪರ್ಷಿಯಾದ ರಾಯಭಾರಿ ಅಬ್ದುರ್ ರಜ಼ಾಕ್ ಹೇಳುವಂತೆ, "ವಿಜಯನಗರದ ಬೀದಿಗಳಲ್ಲಿ ಗುಲಾಬಿ ಹೂ ಮಾರುತ್ತಿದ್ದಂತೆ ವಜ್ರವೈಢೂರ್ಯಗಳನ್ನು ಮಾರುತ್ತಿದ್ದರು. ರಾಜರು ಅರಮನೆಯ ನೆಲಮಾಳಿಗೆಯಲ್ಲಿ ಚಿನ್ನದ ಗಟ್ಟಿಗಳನ್ನು ರಾಶಿ ಹಾಕಿದ್ದರು. ಈ ದೇಶದ ಪ್ರತಿಯೊಬ್ಬ ನಿವಾಸಿಯೂ, ಅವನು ಮೇಲ್ತರಗತಿಯವನಾಗಿರಲೀ ಅಥವಾ ಸಾಮಾನ್ಯ ನಾಗಿರಲೀ, ಕೊನೆಗೆ ಅಂಗಡಿ ಬೀದಿಯಲ್ಲಿ ಕೆಲಸ ಮಾಡುವವರೂ ಕೊರಳು, ಕೈ, ತೋಳು ಮತ್ತು ಬೆರಳುಗಳಿಗೆ ಮುತ್ತುಗಳನ್ನೋ ಅಥವಾ ರತ್ನಖಚಿತವಾದ ಬೆಲೆಯುಳ್ಳ ಒಡವೆ ಗಳನ್ನೋ ಧರಿಸುತ್ತಾರೆ."[1] ಇದರಿಂದ ಅಂದಿನ ಜನರಿಗಿದ್ದ ಆಭರಣ ಪ್ರಿಯತೆ, ಮುಕ್ತ ವ್ಯಾಪಾರ ಪದ್ಧತಿ ಹಾಗೂ ಸಾಮಾನ್ಯ ನಾಗರೀಕನ ಆರ್ಥಿಕ ಪರಿಸ್ಥಿತಿ ವ್ಯಕ್ತವಾಗುತ್ತದೆ.

ವಸ್ತ್ರ ಮತ್ತು ಅಭರಣಗಳ ಮೂಲಕ ವಿಜಯನಗರ ಕಾಲದ ಸಾಮಾಜಿಕ, ಆರ್ಥಿಕ, ಧಾರ್ಮಿಕ ಹಾಗೂ ಆಡಳಿತಾತ್ಮಕ ಹೀಗೆ ವಿವಿಧ ಹಂತಗಳನ್ನು ತಿಳಿಯಲು ಸಹಾಯಕ ವಾಗುತ್ತದೆ. ವಸ್ತ್ರ ಮತ್ತು ಆಭರಣಗಳ ಮೇಲೆ ಯಾರಿಗೆ ಹೆಚ್ಚು ಮೋಹ? ಎಂಬ ಪ್ರಶ್ನೆ ಬಂದರೆ ಅದು 'ಸ್ತ್ರೀ' ಕೇಂದ್ರಿತವೇ ಎಂಬುದು ಎಲ್ಲರ ಒಮ್ಮತ ಹಾಗೂ ಒಪ್ಪಿತ ಉತ್ತರ. ಆದರೆ ವಿಜಯನಗರ ಕಾಲದ ವಸ್ತ್ರ ಮತ್ತು ಆಭರಣಗಳು ಎಂಬ ಈ ಶೀರ್ಷಿಕೆಯ ಅಡಿಯಲ್ಲಿ ಆ ಕಾಲದ ಸಾಮಾಜಿಕ ಶ್ರೇಣೀಕರಣದಲ್ಲಿ ಸ್ತ್ರೀ-ಪುರುಷ, ಪ್ರಾಣಿ ವರ್ಗ ಹಾಗೂ ದೇವತೆಗಳು ಧರಿಸುತ್ತಿದ್ದ ವಸ್ತ್ರ ಮತ್ತು ಆಭರಣಗಳನ್ನು ಸಮಗ್ರವಾಗಿ ತಿಳಿಯುವ ಉದ್ದೇಶ ಈ ಅಧ್ಯಯನದ್ದಾಗಿದೆ.

ವ್ಯಾಪ್ತಿ

ಅಧ್ಯಯನದ ರಚನೆಗೆ ಚೌಕಟ್ಟು ಅಗತ್ಯ. ಪ್ರಸ್ತುತ ಅಧ್ಯಯನವನ್ನು ವಿಜಯನಗರ ಸಾಮ್ರಾಜ್ಯದ ಆಳ್ವಿಕೆಯ ಅವಧಿಯೆಂದು ಗುರುತಿಸಲಾದ ಕ್ರಿ.ಶ. ೧೩೩೬ ರಿಂದ ೧೫೬೫ರ ವರೆಗಿನ ಕಾಲಘಟ್ಟಕ್ಕೆ ಸೀಮಿತಗೊಳಿಸಲಾಗಿದೆ. ಹಾಗಿದ್ದೂ ವಿಜಯನಗರ ಪೂರ್ವ ಹಾಗೂ ವಿಜಯನಗರೋತ್ತರ ಕಾಲದ ಸಂಗತಿಗಳನ್ನು ಸಂದರ್ಭಾನುಸಾರ ಬಳಸಿಕೊಳ್ಳಲಾಗಿದೆ.

ಆಕರಗಳು

ಯಾವುದೇ ಅಧ್ಯಯನದ ವಿಷಯಕ್ಕೆ ಪೂರಕವಾದ ಮಾಹಿತಿಯನ್ನು ಸಂಗ್ರಹಿಸಲು ಆಕರಗಳು ಬಹುಮುಖ್ಯ. ವಿಜಯನಗರ ಕಾಲದ ವಸ್ತ್ರ ಮತ್ತು ಆಭರಣಗಳು ಎಂಬ ವಿಷಯ ಆಧ್ಯಯನದಲ್ಲಿ ಅಂದಿನ ಕಾಲದ ಸಾಹಿತ್ಯ ಕೃತಿಗಳು, ಪ್ರವಾಸಿಗರ ವರದಿ, ಶಾಸನ, ಉತ್ಖನನ, ನಾಣ್ಯ ಮೊದಲಾದ ಪ್ರಾಥಮಿಕ ಆಕರಗಳನ್ನು ಬಳಸಿಕೊಳ್ಳಲಾಗಿದೆ. ಕಾವ್ಯಗಳಲ್ಲಿ ಕೃಷ್ಣದೇವರಾಯನ 'ಆಮುಕ್ತಮಾಲ್ಯದ'ವು ಅರಸ ಹಾಗೂ ಸಾಮಾನ್ಯ ಜನರು ಧರಿಸುತ್ತಿದ್ದ ವಸ್ತ್ರ ಮತ್ತು ಆಭರಣಗಳ ಬಗ್ಗೆ ಹಾಗೂ ವಸ್ತ್ರಗಳಿಗೆ ಹಾಕುತ್ತಿದ್ದ ಬಣ್ಣ ಹಾಗೂ ಅಲ್ಲಿ ಮುತ್ತುಗಳು ದೊರೆಯುತ್ತಿದ್ದ ಸ್ಥಳದ ಬಗೆಗೆ ತಿಳಿಸುತ್ತದೆ. ಕನಕದಾಸರ ಮೋಹನತರಂಗಿಣಿ ಕೃತಿಯಲ್ಲಿ ಹಂಪಿಯ ಬೀದಿಗಳ ಬಗೆಗೆ ಹಾಗೂ ವಸ್ತ್ರ ಮತ್ತು ಆಭರಣ ಧಾರಣೆ ಮತ್ತು ವಿನ್ಯಾಸದ ಕುರಿತು ವಿವರಿಸುವುದು.

ನಂಜುಂಡ ಕವಿಯ ರಾಮನಾಥ ಚರಿತವು ಕಂಪಿಲರಾಯ ಮತ್ತು ಆತನ ಮಗ ಕುಮಾರರಾಮನಿಗೆ ಸಂಬಂಧಿಸಿದ್ದರೂ, ಅದರಲ್ಲಿ ವ್ಯಕ್ತವಾಗುವ ವಸ್ತ್ರ ಮತ್ತು ಆಭರಣಗಳಾದ ತುರುಬಿನ ಮಣಿ, ಮುದ್ರಿಕೆ, ಕಟಿಸೂತ್ರ, ಕಾಲಪೆಂಡೆಯ ಮತ್ತು ವಸ್ತ್ರಗಳಾದ ತೊಡೆ ಚಲ್ಲಣ, ಮೊಲೆಕಟ್ಟು, ಸೀರೆ ಮುಂತಾದ ಸಮಕಾಲೀನ ವಸ್ತ್ರ ಮತ್ತು ಆಭರಣಗಳ ವಿನ್ಯಾಸ ಮತ್ತು ಬಗೆಗಳ ಕುರಿತು ಯಥಾವತ್ತಾದ ಚಿತ್ರಣವನ್ನು ನೀಡುತ್ತದೆ. ರಾಯವಾಚಕಮು ಕೃತಿಯು ಶ್ರೀಕೃಷ್ಣದೇವರಾಯ ಧರಿಸುತ್ತಿದ್ದ ಆಭರಣಗಳ ದೊಡ್ಡ ಪಟ್ಟಿಯನ್ನೇ ನೀಡುತ್ತದೆ. ಈ ಮೇಲಿನ ಕಾವ್ಯಗಳಲ್ಲದೆ ತೆರಕಣಾಂಬಿ ಬೊಮ್ಮರಸನ ಸನತ್ಕುಮಾರ ಚರಿತೆ, ವಿರೂಪಾಕ್ಷ ಪಂಡಿತನ ಚೆನ್ನಬಸವ ಪುರಾಣ, ಲಕ್ಕಣದಂಡೇಶನ ಶಿವತತ್ತ್ವಚಿಂತಾಮಣಿ, ಕೆಳದಿ ಬಸವರಾಜನ ಶಿವತತ್ತ್ವರತ್ನಾಕರ, ಗೋವಿಂದವೈದ್ಯನ ಕಂಠೀರವ ನರಸರಾಜ ವಿಜಯ ಮುಂತಾದ ಕೃತಿಗಳು ವಿಜಯನಗರ ಕಾಲದ ವಸ್ತ್ರ ಮತ್ತು

ಆಭರಣಗಳನ್ನು ಅರಿಯುವಲ್ಲಿ ಸಹಾಯಕವಾಗಿವೆ.

ಸಾಹಿತ್ಯ ಕೃತಿಗಳಷ್ಟೆ ಅಲ್ಲದೇ ವಿದೇಶಿಯರ ಬರವಣಿಗೆಗಳು ಸಹ ವಿಜಯನಗರ ಚರಿತ್ರೆಯನ್ನು ಅರಿಯುವಲ್ಲಿ ಪೂರಕ ಆಕರಗಳಾಗಿವೆ. ವಿಜಯನಗರಕ್ಕೆ ಸ್ವತಃ ಭೇಟಿ ನೀಡಿದ್ದ ಪ್ರವಾಸಿಗರಲ್ಲಿ ಅಥನೇಷಿಯಸ್ ನಿಕಿಟಿನ್, ನಿಕೊಲೊ–ದೆ–ಕೊಂತಿ, ಅಬ್ದುರ್ ರಜಾಕ್, ಡೊಮಿಂಗೊ ಪಾಯೇಸ್, ಡುಯೆರ್ಟ್ ಬಾರ್ಬೋಸಾ, ಫೆರ್ನಾವೊ, ನ್ಯೂನಿಜ್, ಸೀಸರ್ ಫ್ರೆಡರಿಕ್ ಪ್ರಮುಖರು. ಇವರ ವರದಿಗಳಲ್ಲಿ ಅಂದಿನ ಜನಜೀವನ, ನಗರ ವ್ಯವಸ್ಥೆ, ಸಾಮ್ರಾಜ್ಯದ ವರ್ಣನೆ, ವ್ಯಾಪಾರ, ಆಚರಣೆಗಳ ಸಂದರ್ಭದಲ್ಲಿ ಧರಿಸುತ್ತಿದ್ದ ವಸ್ತ್ರ ಮತ್ತು ಆಭರಣಗಳ ಕುರಿತು ಕಂಡು–ಕೇಳಿದ ವಿಷಯಗಳನ್ನು ದಾಖಲಿಸಿದ್ದಾರೆ. ಹಾಗಾಗಿ ಅಂದಿನ ವಸ್ತ್ರ ಮತ್ತು ಆಭರಣಗಳ ಕುರಿತಂತೆ ಅಧ್ಯಯನ ಮಾಡುವಾಗ ಪ್ರವಾಸಿಗರ ವರದಿಗಳು ಮಹತ್ವದ ಆಕರಗಳಾಗಿವೆ.

ಸಾಹಿತ್ಯ ಕೃತಿಗಳಲ್ಲಿ ಉಲ್ಲೇಖವಾದ ಘಟನೆಗಳನ್ನು ಸಮರ್ಥಿಸುವಲ್ಲಿ ಪ್ರಮುಖ ಪ್ರಾಥಮಿಕ ಆಕರಗಳಾದ ಪ್ರಾಕ್ತನ ಆಕರಗಳು ಪ್ರಮುಖ ಪಾತ್ರ ವಹಿಸುತ್ತವೆ. ಅವುಗಳಲ್ಲಿ ಶಾಸನ, ಸ್ಮಾರಕ, ಚಿತ್ರಕಲೆ, ವೀರಗಲ್ಲು, ನಾಣ್ಯ, ಉತ್ಖನನ ವರದಿಗಳು ಮುಖ್ಯವಾಗಿವೆ. ಶಾಸನಗಳು ಬಹುತೇಕ ದೇವರಿಗೆ ನೀಡಿದ ಆಭರಣಗಳ ದಾನದ ಕುರಿತು ಮಾಹಿತಿಯನ್ನು ಒಳಗೊಂಡಿರುತ್ತದೆ. ಸ್ಮಾರಕಗಳ ಮೇಲಿನ ಉಬ್ಬುಶಿಲ್ಪಗಳು ಅಂದಿನ ವಸ್ತ್ರ ಮತ್ತು ಆಭರಣಗಳ ನೈಜ ಚಿತ್ರಣ ನೀಡುತ್ತವೆ. ಶಿಲ್ಪಗಳಲ್ಲಿ ಲಿಂಗ, ವರ್ಣ, ವೃತ್ತಿ ಪ್ರಾಣಿಗಳಿಗೆ ಹಾಕಿರುವ ವಸ್ತ್ರ ಮತ್ತು ಅಭರಣಗಳು ಅಲ್ಲದೆ ಅವುಗಳ ವಿನ್ಯಾಸ ಪ್ರಮಾಣದ ಕುರಿತು ಸಮಕಾಲೀನ ಚಿತ್ರಣವನ್ನು ಸಾಕ್ಷೀಕರಿಸುತ್ತವೆ.

ಇವುಗಳೊಂದಿಗೆ ಉತ್ಖನನದ ವರದಿಗಳಿಂದ ವಸ್ತ್ರ ಮತ್ತು ಆಭರಣಗಳಿಗೆ ಸಂಬಂಧಿಸಿದ ಮಾಹಿತಿಯು ಬಹಳಷ್ಟು ಲಭ್ಯವಿದೆ. ಹೀಗೆ ಎಲ್ಲ ವಿಧದ ಆಕರಗಳಿಂದ ವಿಜಯನಗರ ಕಾಲದ ವಸ್ತ್ರ ಮತ್ತು ಆಭರಣಗಳನ್ನು ಕಟ್ಟಿಕೊಡುವ ಪ್ರಯತ್ನವನ್ನು ಪ್ರಸ್ತುತ ಅಧ್ಯಯನದಲ್ಲಿ ಮಾಡಲಾಗಿದೆ.

ಅಧ್ಯಯನದ ಸಮೀಕ್ಷೆ

ಪ್ರಾಚೀನ ಕಾಲದಿಂದಲೂ ಬಳಕೆಯಲ್ಲಿದ್ದ ವಸ್ತ್ರ ಮತ್ತು ಆಭರಣಗಳನ್ನು ಮೊದ ಮೊದಲು ಅಧ್ಯಯನದ ದೃಷ್ಟಿಯಿಂದ ನೋಡದಿದ್ದರೂ ಭಾರತೀಯ ರಸಿಕಜೀವನದಲ್ಲಿ ಶಿಲ್ಪಕಲೆ, ಚಿತ್ರಕಲೆ, ಸಾಹಿತ್ಯದ ಉಲ್ಲೇಖ, ಭೂಉತ್ಖನನದ ಅವಶೇಷಗಳಲ್ಲಿ, ಪಳಿಯುಳಿಕೆಗಳಾಗಿ ಉಳಿದುಕೊಂಡು ಬಂದಿವೆ. ಆದರೆ ಕಳೆದ ನಾಲ್ಕು ದಶಕಗಳಿಂದೀಚೆಗೆ ಸ್ವಲ್ಪಮಟ್ಟಿನ ಅಧ್ಯಯನದ ದೃಷ್ಟಿ ವಸ್ತ್ರ ಮತ್ತು ಆಭರಣಗಳ ಮೇಲೆ ಹೊರಳಿರುವುದನ್ನು ಗಮನಿಸಬಹುದು. ಈ ಕುರಿತಂತೆ ಹಲವು ಅಧ್ಯಯನಗಳು ನಡೆದಿವೆ. ಅದರಂತೆ ಸಚ್ಚಿದಾನಂದ ಸಹ್ಯರವರ 'ಇಂಡಿಯಾನ್ ಕಾಸ್ಟುಮ್, ಕೊಯಿಫೆರ್ ಅಂಡ್ ಆರ್ನ್‌ಮೆಂಟ್ಸ್' ಎಂಬ ಕೃತಿಯು ಮುಖ್ಯವಾಗಿ ಈಶಾನ್ಯ ಭಾರತದ ಅದರಲ್ಲೂ ಬಿಹಾರ ವ್ಯಾಪ್ತಿಯನ್ನು ಪರಿಗಣಿಸಿ ಕ್ರಿ.ಪೂ. ೩೨೫ ರಿಂದ ಕ್ರಿ.ಶ.೧೨೦೦ರ ವರೆಗಿನ ಅವಧಿಯ ವಸ್ತ್ರ, ವಿನ್ಯಾಸ ಮತ್ತು ಆಭರಣಕ್ಕೆ ಸಂಬಂಧಿಸಿದ ಸಂಶೋಧನಾ ಕೃತಿಯಾಗಿದೆ. ಮೌರ್ಯರಿಂದ ಹಿಡಿದು ಪಾಲರು, ಸೇನರ ಕಾಲದವರೆಗಿನ ಮಾಹಿತಿ ಒಳಗೊಂಡಿದೆ. ಈ ಕೃತಿಯಲ್ಲಿ ಪುರುಷರ ವಸ್ತ್ರ, ಸ್ತ್ರೀಯರ

ವಸ್ತ್ರ, ಸ್ತ್ರೀ-ಪುರುಷರ ಕೇಶ ವಿನ್ಯಾಸ ಹಾಗೂ ಸ್ತ್ರೀಪುರುಷರ ಆಭರಣಗಳಿಗೆ ಸಂಬಂಧಿಸಿದಂತೆ ವಿವರಣೆಗಳಿವೆ.

ಸಿ.ಎಸ್., ಉಮಾಮಹೇಶ್ವರಿಯವರ 'ಡ್ರೆಸ್ ಅಂಡ್ ಜ್ಯೂವೆಲರಿ ಆಫ್ ವಿಮಿನ್' ಈ ಕೃತಿಯಲ್ಲಿ ಶಾತವಾಹನರಿಂದ ಕಾಕತೀಯ ಕಾಲದವರೆಗೆ ವ್ಯಾಪ್ತಿಯಲ್ಲಿ ಆಂಧ್ರಪ್ರದೇಶವನ್ನು ಮಾತ್ರ ಅಧ್ಯಯನಕ್ಕೆ ಒಳಪಡಿಸಲಾಗಿದೆ. ಮಹಿಳೆಯರ ವಸ್ತ್ರ ಮತ್ತು ಆಭರಣಗಳಿಗೆ ಸಂಬಂಧಿಸಿದಂತೆ ಶಾಸನ, ಸಾಹಿತ್ಯ ಹಾಗೂ ಶಿಲ್ಪಗಳನ್ನು ಅಧ್ಯಯನಕ್ಕೆ ಒಳಪಡಿಸಲಾಗಿದೆ. ಈ ಕೃತಿಯು ವಸ್ತ್ರ ಮತ್ತು ಆಭರಣಗಳ ಇತಿಹಾಸವನ್ನು ತಿಳಿಯಲು ಸಹಾಯಕವಾಗಿದೆ.

ಸುಲೋಚನಾ ಅಯ್ಯರ್‌ರವರ 'ಕಾಸ್ಟ್ಯುಮ್ಸ್ ಅಂಡ್ ಆರ್ನ್‌ಮೆಂಟ್ಸ್ ಡಿಪಿಕ್ಟೆಡ್ ಇನ್ ದ ಸ್ಕಲ್‌ಪ್ಚರ್ಸ್ ಆಫ್ ಗ್ವಾಲಿಯರ್ ಮ್ಯೂಸಿಯಮ್' ಈ ಕೃತಿಯು ಮುಖ್ಯವಾಗಿ ಗ್ವಾಲಿಯರ್ ಕೇಂದ್ರಿಯ ಪುರಾತನ ಮ್ಯೂಸಿಯಂನಲ್ಲಿರುವ ಶಿಲ್ಪಗಳನ್ನು ಅಧ್ಯಯನಕ್ಕೆ ಒಳಪಡಿಸಲಾಗಿದೆ. ಈ ಅಧ್ಯಯನದಲ್ಲಿ ಶುಂಗ, ನಾಗ ಮತ್ತು ಗುಪ್ತರ ಕಾಲದ ಶಿಲ್ಪಗಳನ್ನು ಒಳಪಡಿಸಲಾಗಿದೆ.

ಮಿಶೆಲ್ ಪೋಸ್ಟೆಲ್‌ರವರ 'ಇಯರ್ ಆರ್ನ್‌ಮೆಂಟ್ಸ್ ಆಫ್ ಏನ್ಷಿಯಂಟ್ ಇಂಡಿಯಾ' ಎಂಬ ಕೃತಿಯು ಪ್ರಾಚೀನ ಭಾರತದ ಕಿವಿಯಾಭರಣಗಳಿಗೆ ಸಂಬಂಧಿಸಿದ ಅಧ್ಯಯನವಾಗಿದೆ. ಈ ಕೃತಿಯು ಹರಪ್ಪ ಸಂಸ್ಕೃತಿಯ ಕಾಲದಿಂದ ಗುಪ್ತರ ಆಳ್ವಿಕೆಯವರೆಗೆ ಕಿವಿಯ ಆಭರಣಗಳ ಕುರಿತು ವಿವರಗಳನ್ನು ನೀಡುತ್ತದೆ. ಕುಶಾನರು ಮತ್ತು ಗುಪ್ತರ ಕಾಲದಲ್ಲಿ ತುಂಬಾ ಆಧುನಿಕ, ಸರಳ ಆಯ್ಕೆಯಲ್ಲಿ ಆಭರಣಗಳನ್ನು ಧರಿಸುತ್ತಿದ್ದರು ಎಂಬುದಾಗಿ ತಿಳಿಸುತ್ತದೆ.

ಎಸ್.ಪಿ., ತೆವಾರಿಯವರ 'ನೂಪುರ' – ದಿ ಆ್ಯನ್‌ಕ್ಲಟ್ ಇನ್ ಇಂಡಿಯನ್ ಲಿಟ್‌ರೇಚರ್ ಅಂಡ್ ಆರ್ಟ್' ಎಂಬ ಕೃತಿಯು ಭಾರತೀಯ ಸಾಹಿತ್ಯ ಕೃತಿಗಳನ್ನು ಆಧರಿಸಿದ ಸಂಶೋಧನೆಯಾಗಿದೆ. ವಿವಿಧ ಸಾಹಿತ್ಯ ಕೃತಿಗಳಲ್ಲಿ ನೂಪುರ ಅಥವಾ ಪಾದಭೂಷಣಕ್ಕೆ ವಿವಿಧ ಹೆಸರುಗಳಿಂದ ಕರೆದಿರುವುದು ತಿಳಿದು ಬರುತ್ತದೆ. ನೂಪುರದ ಶಬ್ದ ಸಹ ಮಾನವನನ್ನು ಉದ್ದೀಪನಗೊಳಿಸುವ ರಸಗಳಂತೆ ಒಂದು ಎಂಬುದಾಗಿ ತಿಳಿಸಿದ್ದಾರೆ. ಅಲ್ಲದೆ ರಾಮಾಯಣ ಕಾಲದಲ್ಲಿ ಲಕ್ಷ್ಮಣನು ಸುಗ್ರೀವನ ಆಸ್ಥಾನದಲ್ಲಿದ್ದಾಗ ಕಾಲಿನ ಗೆಜ್ಜೆಯ ಸದ್ದು ಲಕ್ಷ್ಮಣನನ್ನು ಭಾವುಕನನ್ನಾಗಿ ಮಾಡಿತ್ತು ಎಂಬುದಾಗಿ ವಿವರಿಸು ವರು. ಹೀಗೆ ವಿವಿಧ ಮಾದರಿಯ ಪಾದಭೂಷಣಗಳ ಕುರಿತು ತಿಳಿಯಲು ಈ ಕೃತಿ ನೆರವಾಗುತ್ತದೆ.

ಕರ್ನಾಟಕದಲ್ಲಿ ಈ ಮೇಲಿನಂತೆ ಪ್ರತ್ಯೇಕ ಅಧ್ಯಯನಗಳು ಅಲ್ಪಮಟ್ಟಿಗೆ ನಡೆದಿವೆ. ಎಸ್.ವಿ. ಕಮಲಮ್ಮ ನವರ 'ಜನಪದ ಮಹಿಳೆಯರ ಉಡುಗೆ-ತೊಡುಗೆಗಳು' ಎಂಬ ಪ್ರೌಢಪ್ರಬಂಧವು ಚಿತ್ರದುರ್ಗ ಜಿಲ್ಲಾ ವ್ಯಾಪ್ತಿಯನ್ನು ಒಳಗೊಂಡ ಅಧ್ಯಯನವಾಗಿದೆ. ಈ ಮಹಾಪ್ರಬಂಧವು ಜನಪದ ಹಿನ್ನೆಲೆಯಲ್ಲಿ ರಚಿತವಾಗಿದ್ದು, ಪ್ರತಿ ಆಭರಣದ ಹೆಸರನ್ನು ಹೆಸರಿಸುವಾಗಲೂ ಗಾದೆ ಮಾತುಗಳನ್ನು ಹಾಗೂ ಸಾಹಿತ್ಯ ಕೃತಿಗಳ ಸಾಲುಗಳನ್ನು ಜೋಡಿಸಿರುತ್ತಾರೆ. ಈ ಮಹಾಪ್ರಬಂಧದಿಂದ ಉಡುಗೆ-ತೊಡುಗೆಗಳು ಜನಪದ ಹಿನ್ನೆಲೆಯಲ್ಲಿ ಹೀಗೆ ಬೆಳೆದುಬಂದಿದೆ ಎಂಬುದನ್ನು ತಿಳಿಯಲು ಅನುವು ಮಾಡಿಕೊಡುತ್ತದೆ.

ಕುಮಾರಿ ಶಾಂತ ಎನ್. ಕಾಲವಾಡರವರ 'ಜನಪದ ಆಭರಣಗಳ ಸಾಂಸ್ಕೃತಿಕ ಅಧ್ಯಯನ' ಮಹಾಪ್ರಬಂಧದಲ್ಲಿ ಸ್ತ್ರೀಪುರುಷರಿಂದ ಹಿಡಿದು ಪ್ರಾಣಿಗಳವರೆಗೆ ಧರಿಸುತ್ತಿದ್ದ ಆಭರಣಗಳ ಕುರಿತು ವಿವರಿಸಲಾಗಿದೆ. ಇಲ್ಲಿ ಹೆಚ್ಚಾಗಿ ಸಾಹಿತ್ಯ ಕೃತಿಗಳ ಬಳಕೆಯನ್ನು ಮಾಡಲಾಗಿದೆ. ಆಭರಣಗಳ ತಯಾರಿಕೆಯಲ್ಲಿ ಮಾಧ್ಯಮವಾಗಿ ಬಳಸುವ ವಿವಿಧ ವಸ್ತುಗಳು ಸಸ್ಯಜನ್ಯ, ಪ್ರಾಣಿಜನ್ಯ ಮತ್ತು ಖನಿಜಜನ್ಯ ವಸ್ತಗಳು ಎಂಬುದಾಗಿ ವಿಭಾಗಿಸಿರುವರು. ಸೃಷ್ಟಿಯ ಪ್ರತಿರೂಪವಾಗಿ ಆಭರಣಗಳಿಗೆ ಆಯಾ ಹೆಸರುಗಳನ್ನು ನೀಡಿದ್ದಾರೆ ಎಂಬುದನ್ನು ತಿಳಿಸುತ್ತದೆ. ಉದಾಹರಣೆ ಚಂದ್ರಹಾರ, ಸೂರ್ಯಹಾರ, ಚಿಂತಾಕು ಇತ್ಯಾದಿ. ಹೀಗೆ ಆಭರಣಗಳ ಕುರಿತು ಹಲವಾರು ವಿಷಯಗಳನ್ನು ತಿಳಿಯಲು ಈ ಮಹಾಪ್ರಬಂಧ ನೆರವಾಗಿದೆ.

ಸೌಭಾಗ್ಯವತಿ, ಕೆ ಅವರ 'ಜನಪದ ಆಭರಣಗಳು' ಕೃತಿಯಲ್ಲಿ ಪ್ರತಿ ಆಭರಣ ಮತ್ತು ಸಾಹಿತ್ಯಕ್ಕೂ ನಂಟು ಕಲ್ಪಿಸಿದ್ದಾರೆ. ಅಲ್ಲದೇ ಹೆಚ್ಚಾಗಿ ಜನಪದ ಸಾಹಿತ್ಯವನ್ನು ಹಾಗೂ ಒಗಟುಗಳನ್ನು ಸಹ ಆಧಾರವಾಗಿ ಬಳಸಿಕೊಂಡು ರಚಿತವಾದ ಕೃತಿಯಾಗಿದೆ.

ವಸ್ತ್ರ ಮತ್ತು ಆಭರಣಗಳಿಗೆ ಸಂಬಂಧಿಸಿದಂತೆ ಇನ್ನು ಹೆಚ್ಚಿನ ಪ್ರತ್ಯೇಕ ಅಧ್ಯಯನಗಳು ನಡೆದಿಲ್ಲ. ಆದರೆ ಸಂಶೋಧನಾ ವಿಷಯದ ಒಂದು ಭಾಗವಾಗಿ ಕೆಲವು ವಿದ್ವಾಂಸರು ತಮ್ಮ ಕೃತಿಗಳಲ್ಲಿ ಹಾಗೂ ಹಲವು ಲೇಖನಗಳಲ್ಲಿ ಸಂದರ್ಭಕ್ಕನುಗುಣವಾಗಿ ಚರ್ಚಿಸಿರುವರು. ಅವುಗಳಲ್ಲಿ ಕೆ.ಪದ್ಮನಾಭರವರ 'ಹೊಯ್ಸಳ ಸ್ಕಲ್ಪ್ಚರ್ಸ್ – ಎ ಕಲ್ಚರಲ್ ಸ್ಟಡಿ' ಎಂಬ ಪಿಎಚ್.ಡಿ. ಮಹಾಪ್ರಬಂಧದಲ್ಲಿ ವಸ್ತ್ರ ಮತ್ತು ಆಭರಣಗಳ ಕುರಿತು ಒಂದು ಪ್ರತ್ಯೇಕ ಅಧ್ಯಯದಲ್ಲಿ ಚರ್ಚಿಸಿದ್ದಾರೆ. ಇದರಲ್ಲಿ ಆಭರಣಗಳಿಗೆ ಸಂಬಂಧಿಸಿದಂತೆ ಶಿರದಿಂದ ಕಾಲಿನ ಆಭರಣದವರೆಗೆ ಸಂಕ್ಷಿಪ್ತ ವಿವರಣೆಯನ್ನು ಒಳಗೊಂಡಿದೆ.

ಸುದರ್ಶನ, ಎಸ್. ರವರ 'ವಿಮಿನ್ ಇನ್ ಹೊಯ್ಸಳ ಸ್ಕಲ್ಪ್ಚರ್ಸ್'–ಎ ಕಲ್ಚರಲ್ ಸ್ಟಡಿ' ಎಂಬ ಮಹಾಪ್ರಬಂಧದಲ್ಲಿ 'ಕಾಸ್ಟುಮ್ಸ್' ಎಂಬ ಅಧ್ಯಾಯವಿದೆ. ಇದರಲ್ಲಿ ರಾಜಮನೆತನದ ಸ್ತ್ರೀಯರಿಂದ ಹಿಡಿದು ಬುಡಕಟ್ಟು ಮಹಿಳೆಯರ ವಸ್ತ್ರ ಮತ್ತು ಆಭರಣದ ಬಗೆಗೆ ವಿಶ್ಲೇಷಿಸಿದ್ದಾರೆ. ಅಲ್ಲದೇ ಆಭರಣಗಳಿಗೆ ಸಂಬಂಧಿಸಿದ ಉಪ ಅಧ್ಯಾಯದಲ್ಲಿ ಶಿರದಿಂದ ಪಾದಗಳವರೆಗೆ ದೇಹದ ವಿವಿಧ ಭಾಗಗಳಿಗೆ ಧರಿಸುತ್ತಿದ್ದ ಆಭರಣಗಳನ್ನು ಕುರಿತು ಹೆಸರಿಸಿದ್ದಾರೆ. ವಿವರಣೆಯು ಸಂಕ್ಷಿಪ್ತವಾಗಿದ್ದು, ಆಭರಣಗಳ ಹೆಸರು ತಿಳಿಯಲು ಸಹಾಯಕ ವಾಗಿದೆ.

ಜ್ಯೋತ್ಸ್ನಾ, ಕೆ. ಕಾಮತ್‌ರವರ 'ಸೋಷಿಯಲ್ ಲೈಫ್ ಇನ್ ಮಿಡಿವಲ್ ಕರ್ನಾಟಕ' ಎಂಬ ಪ್ರೌಢ ಪ್ರಬಂಧದಲ್ಲಿ ಒಂದು ಪ್ರತ್ಯೇಕ ಅಧ್ಯಾಯವಾಗಿ ವಸ್ತ್ರ ಮತ್ತು ಆಭರಣಗಳು ಹಾಗೂ ಸೌಂದರ್ಯವರ್ಧಕ, ಕೇಶ ವಿನ್ಯಾಸದ ಬಗೆಗೆ ವಿವರಿಸಿದ್ದಾರೆ. ಅಂತೆಯೇ ಬೆಟಗೇರಿ ಕೃಷ್ಣಶರ್ಮರ 'ಕರ್ನಾಟಕದ ಜನಜೀವನ' ಎಂಬ ಕೃತಿಯ 'ಊಟ–ಉಡುಗೆ–ತೊಡುಗೆಗಳು' ಅಧ್ಯಾಯದಲ್ಲಿ ಸಮಕಾಲೀನ ವಸ್ತ್ರ ಮತ್ತು ಆಭರಣಗಳ ಕುರಿತು ವಿವರಿಸಿದ್ದಾರೆ. ಎಂ. ಚಿದಾನಂದಮೂರ್ತಿರವರ 'ಕನ್ನಡ ಶಾಸನಗಳ ಸಾಂಸ್ಕೃತಿಕ ಅಧ್ಯಯನ' ಎಂಬುದು ಅಗತ್ಯವಾಗಿ ಓದಲೇಬೇಕಾದ ಕೃತಿ.

ಶಾಸನಗಳನ್ನಾಧರಿಸಿ ರಚಿಸಲಾದ ಈ ಕೃತಿಯಲ್ಲಿ ಸ್ತ್ರೀ-ಪುರುಷರ ವಸ್ತ್ರ ಮತ್ತು ಆಭರಣಗಳ ಕುರಿತು ಚರ್ಚಿಸಿದ್ದಾರೆ. ಆರ್., ಶೇಷಶಾಸ್ತ್ರಿಯವರ 'ಕರ್ನಾಟಕದ ವೀರಗಲ್ಲುಗಳು' ಎಂಬ ಕೃತಿ ವೀರಗಲ್ಲುಗಳ ಸಂಪೂರ್ಣ ಮಾಹಿತಿ ನೀಡುತ್ತದೆ. ಇಲ್ಲಿ ಸ್ತ್ರೀ-ಪುರುಷ ಹಾಗೂ ಕುದುರೆ, ಆನೆಗಳಿಗೆ ಏಕೆ ಆಭರಣಗಳನ್ನು ಧರಿಸುತ್ತಿದ್ದರು ಎಂಬುದಕ್ಕೆ ಸಂದರ್ಭಾನುಸಾರ ಚರ್ಚಿಸಿದ್ದಾರೆ.

ಚೂಡಾಮಣಿ ನಂದಗೋಪಾಲ್‌ರವರ ಶಿಲೆ-ಕಲೆ ಎಂಬ ಕೃತಿಯಲ್ಲಿ ನರ್ತಕಿಯರು ಧರಿಸುತ್ತಿದ್ದ ಆಭರಣಗಳ ಕುರಿತು, ಅವುಗಳ ಪ್ರಮಾಣ, ವಿನ್ಯಾಸಗಳ ಕುರಿತು ವಿವರಿಸಿದ್ದಾರೆ. ಅಲ್ಲದೇ ವಿವಿಧ ಕೇಶವಿನ್ಯಾಸದ ಕುರಿತು ಅದಕ್ಕೆ ಅಲಂಕರಿಸಿಕೊಳ್ಳುತ್ತಿದ್ದ ಆಭರಣಗಳ ಕುರಿತು ತಿಳಿಸಿದ್ದಾರೆ. ವಿವಿಧ ರಾಜಮನೆತನಗಳ ಕಾಲದಲ್ಲಿ ವಸ್ತ್ರ ಮತ್ತು ಆಭರಣಗಳು ಬೆಳೆದು ಬಂದ ಬಗೆಯನ್ನು ತಿಳಿಯಲು ಇದು ಉತ್ತಮ ಕೃತಿಯಾಗಿದೆ.

ವಿಜಯನಗರ ಕಾಲಕ್ಕೆ ಬಂದರೆ ಅದಕ್ಕೆ ಸಂಬಂಧಿಸಿದಂತೆ ಹಲವು ಅಧ್ಯಯನಗಳು ಅಂದಿನ ಸಾಮಾಜಿಕ, ಧಾರ್ಮಿಕ, ಆರ್ಥಿಕ, ಆಡಳಿತ, ಸಾಂಸ್ಕೃತಿಕ, ಕಲೆ ಮತ್ತು ವಾಸ್ತುಶಿಲ್ಪ ಹಾಗೂ ಜನಜೀವನಕ್ಕೆ ಸಂಬಂಧಿಸಿದಂತೆ ವಿವಿಧ ಅಧ್ಯಯನ ಮತ್ತು ಸಂಶೋಧನೆಗಳು ನಡೆದು ಕೃತಿ ಹಾಗೂ ಲೇಖನಗಳು ಹೊರಬಂದಿವೆ. ವಿಜಯನಗರ ಕಾಲದ ವಸ್ತ್ರ ಮತ್ತು ಆಭರಣಗಳ ಕುರಿತಂತೆ ಸ್ವಲ್ಪ ಮಟ್ಟಿನ ಕೆಲಸ ನಡೆದಿದೆ. ಇಂತಹ ಅಧ್ಯಯನಗಳಲ್ಲಿ ಕೆಲವನ್ನು ಇಲ್ಲಿ ಪ್ರಸ್ತಾಪಿಸಲಾಗಿದೆ. ರೆಡ್ಡೆಪ್ಪ, ಕೆ. ಇವರ 'ಮಟೀರಿಯಲ್ ಕಲ್ಚರ್ ಡಿಪಿಕ್ಟ್‌ಟೆಡ್ ಇನ್ ವಿಜಯನಗರ ಟೆಂಪಲ್ಸ್' ಎಂಬ ಕೃತಿಯಲ್ಲಿ ವಿಜಯನಗರ ಕಾಲದ ವಸ್ತ್ರ ಮತ್ತು ಆಭರಣಗಳ ಕುರಿತ ಅಧ್ಯಾಯವೊಂದರಲ್ಲಿ ಸಂಕ್ಷಿಪ್ತವಾಗಿ ವಿವರಿಸಿದ್ದಾರೆ.

ಸರಸ್ವತಿ, ಎನ್., ರವರ ಕೃತಿಯಾದ 'ವಿಜಯನಗರ ಕಾಲದ ಮಹಿಳೆಯರ ಕೊಡುಗೆ ಗಳು' ಎಂಬ ಕೃತಿಯಲ್ಲಿ ವಿಜಯನಗರ ಕಾಲದಲ್ಲಿ ರಾಜರಿಂದ ಹಿಡಿದು ಸಾಮಾನ್ಯ ಸ್ತ್ರೀಯರು ಧರಿಸುತ್ತಿದ್ದ ವಸ್ತ್ರ ಮತ್ತು ಆಭರಣಗಳ ಕುರಿತು ಒಂದು ಅಧ್ಯಾಯದಲ್ಲಿ ಉಲ್ಲೇಖಿಸಿದ್ದಾರೆ. ಎಸ್.ವೈ., ಸೋಮಶೇಖರ್ ಅವರ 'ವಿಜಯನಗರ ಕಾಲದ ಸೈನ್ಯ ವ್ಯವಸ್ಥೆ ಮತ್ತು ಯುದ್ಧನೀತಿ' ಎಂಬ ಕೃತಿಯಲ್ಲಿ ಸೈನಿಕರು, ಆನೆ ಮತ್ತು ಕುದುರೆಗಳಿಗೆ ತೊಡಿಸುತ್ತಿದ್ದ ವಸ್ತ್ರಾಭರಣಗಳನ್ನು ಸಂದರ್ಭಾನುಸಾರ ಚರ್ಚಿಸಿದ್ದಾರೆ. ಕೆ.ಶ್ರೀಕಂಠಯ್ಯರವರ 'ವಿಜಯನಗರ ಕಾಲದ ಕನ್ನಡ ಸಾಹಿತ್ಯದಲ್ಲಿ ಜನಜೀವನ ಚಿತ್ರ' ಈ ಕೃತಿ ಸಂಪೂರ್ಣ ಕಾವ್ಯಗಳನ್ನು ಬಳಸಿಕೊಂಡು ರಚನೆಯಾಗಿದ್ದು, ಆ ಮೂಲಕವೂ ಒಂದು ಅಧ್ಯಾಯದಲ್ಲಿ ಸಮಕಾಲೀನ ವಸ್ತ್ರ ಮತ್ತು ಆಭರಣಗಳನ್ನು ಕಟ್ಟಿಕೊಡುವ ಪ್ರಯತ್ನ ಮಾಡಿದ್ದಾರೆ.

ಮಹಾಲಿಂಗಂ, ಟಿ.ವಿ., ಅವರ 'ಅಡ್‌ಮಿನಿಸ್ಟ್ರೇಷನ್ ಅಂಡ್ ಸೋಷಿಯಲ್ ಲೈಫ್ ಅಂಡರ್ ವಿಜಯನಗರ' ಎಂಬ ಕೃತಿಯಲ್ಲಿ ಸಂದರ್ಭಾನುಸಾರ ವಸ್ತ್ರ ಮತ್ತು ಆಭರಣಗಳ ಕುರಿತು ಉಲ್ಲೇಖಿಸಿದ್ದಾರೆ. ಅದರೆ ಹೆಚ್ಚಿನ ವಿವರಣೆಗಳಿಲ್ಲ. ಹಾಗೆಯೇ ಚೆಲುವರಾಜುರವರ 'ಹಂಪಿಯ ಸ್ಮಾರಕಗಳಲ್ಲಿ ಜಾನಪದೀಯ ಅಂಶಗಳು' ಈ ಕೃತಿಯಲ್ಲಿ ಶಿಲ್ಪಗಳನ್ನೇ ಪ್ರಧಾನವಾಗಿಟ್ಟುಕೊಂಡು

ರೇಖಾಚಿತ್ರಗಳನ್ನು ರಚಿಸಲಾಗಿದೆ. ಇದರಲ್ಲಿ ರಾಜ-ರಾಣಿ, ಬೇಟೆಗಾರರು, ವಾದ್ಯಗಾರರ ಕುರಿತು ಮಾಹಿತಿಯಿದ್ದು, ಅವರ ವಸ್ತ್ರ ಮತ್ತು ಆಭರಣಗಳನ್ನು ಸೂಚ್ಯವಾಗಿ ಉಲ್ಲೇಖಿಸಿದ್ದಾರೆ.

ಜ್ಯೋತ್ಸ್ನಾ ಕಾಮತ್‌ರವರ 'ವಿಜಯನಗರ ಕಾಲೀನ ಕನ್ನಡತಿಯರ ಸೀರೆಗಳು' ಎಂಬ ಲೇಖನದಲ್ಲಿ ಆಂಧ್ರಪ್ರದೇಶದ ಲೇಪಾಕ್ಷಿಯ ವೀರಭದ್ರದೇವಾಲಯದ ಮಹಾಮಂಟಪದ ನೆಲಮಾಳಿಗೆಯ ವರ್ಣಚಿತ್ರಗಳಲ್ಲಿರುವ ಸ್ತ್ರೀಯರು ಧರಿಸಿರುವ ವಿವಿಧ ವಿನ್ಯಾಸದ ಸೀರೆಗಳನ್ನು ವಿವರಿಸಿದ್ದಾರೆ.

ಸ್ವರೂಪ, ಕೆ., ಅವರ 'ಕಾಸ್ಟೂಮ್ ಅಂಡ್ ಡ್ರೆಸ್ ಮೇಕಿಂಗ್ ಆಫ್ ದ ಕಾಕತೀಯ ಪಿರಿಯಡ್' ಎಂಬ ಲೇಖನದಲ್ಲಿ ಕಾಕತೀಯರ ವಸ್ತ್ರಗಳ ಕುರಿತು ತಿಳಿಸಿದ್ದಾರೆ. ಸೀರೆಗಳ ಅಂಚುಗಳು ಚಿತ್ರಗಳಿಂದ ಕೂಡಿದ್ದು, ಉದ್ದಗೀರಿನ ವಿನ್ಯಾಸವಿರುವ ಅವು ಹತ್ತಿ, ರೇಷ್ಮೆ ಮತ್ತು ವಿವಿಧ ನೂಲಿನಿಂದ ತಯಾರಿಸಲಾಗುತ್ತಿತ್ತು. ನೀಲಿ, ಹಳದಿ ಕಪ್ಪು, ಕೆಂಪು ಮೊದಲಾದ ಬಣ್ಣಗಳನ್ನು ವಸ್ತ್ರಗಳಿಗೆ ಹಾಕುತ್ತಿದ್ದರು. ಹೀಗೆ ಕೆಲವು ಸಂಗತಿಗಳನ್ನು ಈ ಲೇಖನದಲ್ಲಿ ಚರ್ಚಿಸಿದ್ದಾರೆ.

ಹೇಮಾವತಿ, ಪಿ., ಮತ್ತು ರವಿಕುಮಾರ್‌ರವರ 'ಟೆಕ್ಸ್‌ಟೈಲ್ ಡಿಸೈನಿಂಗ್ ಇನ್ ಮಿಡಿವಲ್ ಆಂಧ್ರದೇಶ' ಎಂಬ ಲೇಖನದಲ್ಲಿ ಭಾರತೀಯರು ವಸ್ತ್ರಗಳಿಗೆ ಬಣ್ಣ ಹಾಕುವ ಜ್ಞಾನ ಹೊಂದಿದ್ದರು ಎಂಬುದನ್ನು ವಿವರಿಸಿದ್ದಾರೆ. ಅಲ್ಲದೆ ಗೀರುಗೀರಿನ ಸೀರೆಗಳಲ್ಲಿ ಹಲವಾರು ಚಿತ್ರಗಳನ್ನು ಅದರಲ್ಲಿ ಮೂಡಿಸಿದ್ದರು. ಅವು ಹಂಸ, ಅಳಿಲು, ಗಿಣಿ, ಸಿಂಹ, ಆನೆ, ಕುದುರೆ ಮತ್ತು ನವಿಲಿನ ಚಿತ್ರಗಳನ್ನು ಹೊಂದಿದ್ದವು ಬಣ್ಣಗಳಿಗೆ ಸಂಬಂಧಿಸಿದಂತೆ ಕನಕಾಂಬರ ಬಣ್ಣ, ರೋಜ್, ಪಿಂಕ್, ಹಳದಿ ಮೊದಲಾದ ಬಣ್ಣಗಳನ್ನು ವಸ್ತ್ರಗಳಿಗೆ ಹಾಕುತ್ತಿದ್ದರು ಎಂಬ ಮಾಹಿತಿಯನ್ನು ದಾಖಲಿಸಿದ್ದಾರೆ.

ಈ ಮೇಲಿನ ಅಧ್ಯಯನಗಳು ತಮ್ಮ ಇಡೀ ಅಧ್ಯಯನದ ಒಂದು ಭಾಗವಾಗಿ ವಸ್ತ್ರ ಮತ್ತು ಆಭರಣಗಳ ಕುರಿತು ಸಂದರ್ಭಕ್ಕೆ ಅನುಗುಣವಾಗಿ ಚರ್ಚಿಸಿವೆ. ಆದರೆ ಈ ಕುರಿತ ಪ್ರತ್ಯೇಕ ಅಧ್ಯಯನಗಳು ನಡೆದಿರುವುದಿಲ್ಲ. ಈ ಹಿನ್ನೆಲೆಯಲ್ಲಿ 'ವಿಜಯನಗರ ಕಾಲದ ವಸ್ತ್ರ ಮತ್ತು ಆಭರಣಗಳು' ಕುರಿತಂತೆ ಪ್ರತ್ಯೇಕ ಅಧ್ಯಯನದ ಅಗತ್ಯವನ್ನು ಮನಗಂಡು ಪ್ರಸ್ತುತ ವಿಷಯವನ್ನು ಆಯ್ದುಕೊಳ್ಳಲಾಗಿದೆ.

ವಿಧಾನ

ಅಧ್ಯಯನ ವಿಧಾನವು ಸಂಶೋಧನೆಗೆ ಬಹುಮುಖ್ಯ. ಇದು ಅಧ್ಯಯನವನ್ನು ಕ್ರಮ ಬದ್ಧವಾಗಿ ನಡೆಸಿಕೊಂಡು ಹೋಗಲು ಸಹಕಾರಿ. ಪ್ರಸ್ತುತ ಅಧ್ಯಯನವನ್ನು ಪ್ರಾರಂಭಿಸುವ ಮುನ್ನ ವಿಜಯನಗರ ಸಾಮ್ರಾಜ್ಯ ಕುರಿತು ಗ್ರಂಥಸೂಚಿ ತಯಾರಿಸಿ, ಅಧ್ಯಯನ ವಿಷಯಗಳ ಸಮೀಕ್ಷೆ ನಡೆಸಲಾಯಿತು. ಇಲ್ಲಿಯ ವರೆಗೆ ನಡೆದ ಅಧ್ಯಯನಗಳ ಜೊತೆಗೆ ಮುಂದೆ ನಡೆಯ ಬೇಕಾದ ಅಧ್ಯಯನಗಳನ್ನು ಮಾರ್ಗದರ್ಶಕರು ಹಾಗೂ ವಿದ್ವಾಂಸರೊಂದಿಗೆ ಚರ್ಚಿಸಿ ಪ್ರಸ್ತುತ ಶೀರ್ಷಿಕೆಯಾದ 'ವಿಜಯನಗರ ಕಾಲದ ವಸ್ತ್ರ ಮತ್ತು ಆಭರಣಗಳು' ಎಂಬ ವಿಷಯವನ್ನು ಆಯ್ಕೆ ಮಾಡಿಕೊಳ್ಳಲಾಯಿತು.

ವಿಷಯದ ಆಯ್ಕೆ ಅಧಿಕೃತವಾದ ನಂತರ ಅದರ ಕುರಿತು ನಡೆದ ಅಧ್ಯಯನಗಳತ್ತ ಗಮನಹರಿಸಿ 'ವಸ್ತ್ರ ಮತ್ತು ಆಭರಣಗಳು' ಒಳಗೊಳ್ಳಬೇಕಾದ ವಿವಿಧ ಅಂಶಗಳ ಪಟ್ಟಿಯನ್ನು ಸಿದ್ಧಪಡಿಸಲಾಯಿತು. ಹಲವು ವಿಶ್ವವಿದ್ಯಾಲಯಗಳ ಗ್ರಂಥಾಲಯಗಳಿಗೆ ಭೇಟಿ ನೀಡಿ ನನ್ನ ಅಧ್ಯಯನ ವಿಷಯಕ್ಕೆ ಸಂಬಂಧಿಸಿದಂತೆ ಹಲವು ಮೂಲ ಹಾಗೂ ಅನುಷಂಗಿಕ ಆಕರಗಳಾದ ಕಾವ್ಯಗಳು, ಕೃತಿಗಳು, ಮಹಾಪ್ರಬಂಧ, ಲೇಖನಗಳು, ಪ್ರವಾಸಿಗರ ವರದಿಗಳು ಮತ್ತು ಶಾಸನಗಳಲ್ಲಿ ಉಲ್ಲೇಖ ವಾದ ಮಾಹಿತಿಯನ್ನು ಯಥಾವತ್ತಾಗಿ ಪಟ್ಟಿಕೆಗಳಲ್ಲಿ ವಿಷಯ ಮತ್ತು ಕಾಲಕ್ಕೆ ಅನುಗುಣವಾಗಿ ದಾಖಲಿಸಿಕೊಳ್ಳಲಾಯಿತು. ಇದರೊಂದಿಗೆ ಕ್ಷೇತ್ರಕಾರ್ಯವನ್ನು ಕೈಗೊಂಡು, ಶಿಲ್ಪಗಳ ಛಾಯಾಚಿತ್ರಗಳನ್ನು ತೆಗೆದುಕೊಂಡು, ಅವುಗಳಿಗೆ ಪೂರಕ ಮಾಹಿತಿಯನ್ನು ಸಂಗ್ರಹಿಸಿ, ದಾಖಲಿಸಿ ಅಧ್ಯಯನಕ್ಕೆ ಬಳಸಿಕೊಳ್ಳಲಾಯಿತು. ಹೀಗೆ ಅಧ್ಯಯನಕ್ಕೆ ನೆರವಾಗುವ ಎಲ್ಲ ಬಗೆಯ ಆಕರಗಳನ್ನು ಸಂದರ್ಭಾನುಸಾರ ಬಳಸಿಕೊಂಡು ಪ್ರಸ್ತುತ ಅಧ್ಯಯನವನ್ನು ಕಟ್ಟಿಕೊಡುವ ಪ್ರಯತ್ನವನ್ನು ಮಾಡಲಾಗಿದೆ.

ಸ್ವರೂಪ

ಪ್ರಸ್ತುತ ವಿಷಯವನ್ನು ಅಧ್ಯಯನದ ಅನುಕೂಲಕ್ಕಾಗಿ ಆರು ಅಧ್ಯಾಯಗಳಾಗಿ ವಿಭಾಗಿಸಲಾಗಿದೆ. ಈ ಅಧ್ಯಾಯಗಳಲ್ಲಿ ಉಪಶೀರ್ಷಿಕೆಗಳೂ ಇವೆ. ಪ್ರತಿಯೊಂದು ಅಧ್ಯಾಯ ದಲ್ಲಿ ಚರ್ಚಿಸುವ ವಿಷಯವನ್ನು ಕುರಿತಂತೆ ಅದರ ಸಂಕ್ಷಿಪ್ತ ವಿವರಗಳನ್ನು ಇಲ್ಲಿ ನೀಡಲಾಗಿದೆ.

ಮೊದಲನೆಯ ಅಧ್ಯಾಯವು ಪ್ರಸ್ತಾವನೆಯಾಗಿದ್ದು, ಇಲ್ಲಿ ಅಧ್ಯಯನದ ಉದ್ದೇಶ, ವ್ಯಾಪ್ತಿ, ಮಹತ್ವ ಮತ್ತು ವಿಧಾನ ಹಾಗೂ ಈವರೆಗೆ ನಡೆದ ಅಧ್ಯಯನಗಳ ಸಮೀಕ್ಷೆಯ ವಿವರಗಳಿವೆ.

ಎರಡನೆಯ ಅಧ್ಯಾಯವು ಹಿನ್ನೆಲೆಯಾಗಿದ್ದು, ಇದರಲ್ಲಿ ವಿಜಯನಗರ ಪೂರ್ವ ಕಾಲದ ವಸ್ತ್ರ ಮತ್ತು ಆಭರಣಗಳ ಚಾರಿತ್ರಿಕ ಹಿನ್ನೆಲೆಯನ್ನು ಕಟ್ಟಿಕೊಡಲಾಗಿದೆ.

ಮೂರನೆಯ ಅಧ್ಯಾಯವು ವಿಜಯನಗರ ಕಾಲದ ವಸ್ತ್ರ ಮತ್ತು ಆಭರಣಗಳ ಕುರಿತಾಗಿದ್ದು, ಇಲ್ಲಿ ಆಡಳಿತವರ್ಗದವರು, ವೃತ್ತಿನಿರತರು, ಸ್ತ್ರೀಯರು, ದಾರ್ಶನಿಕರು, ದೇವತೆಗಳು ಮತ್ತು ಪ್ರಾಣಿವರ್ಗಕ್ಕೆ ತೊಡಿಸುತ್ತಿದ್ದ ವಸ್ತ್ರ ಮತ್ತು ಆಭರಣಗಳ ಕುರಿತು ಚರ್ಚಿಸಲಾಗಿದೆ.

ನಾಲ್ಕನೆಯ ಅಧ್ಯಾಯವು ವಸ್ತ್ರ ಮತ್ತು ಆಭರಣಗಳ ತಯಾರಿಕಾ ವರ್ಗದ ಕುರಿತಿದೆ. ವಿಜಯನಗರ ಕಾಲದ ವಸ್ತ್ರ ಮತ್ತು ಆಭರಣ ತಯಾರಿಕಾ ವರ್ಗವಾದ ನೇಕಾರರು ಮತ್ತು ಅಕ್ಕಸಾಲಿಗರ ಜೀವನ, ಅವರಲ್ಲಿದ್ದ ಪಂಗಡಗಳು, ದೈವಾರಾಧನೆ, ಅವರ ಮೇಲೆ ವಿಧಿಸುತ್ತಿದ್ದ ತೆರಿಗೆ, ಉತ್ಪಾದನಾ ಕೇಂದ್ರಗಳು ಇನ್ನು ಮುಂತಾದ ವಿಚಾರಗಳನ್ನು ಒಳಗೊಂಡಿದೆ.

ಐದನೆಯ ಅಧ್ಯಾಯವು ವಿಜಯನಗರ ಕಾಲದ ವಸ್ತ್ರ ಮತ್ತು ಆಭರಣಗಳ ಸಾಂಸ್ಕೃತಿಕ ಚಿತ್ರಣವನ್ನು ಕುರಿತಿದೆ. ಈ ನಾಡಿನ ಸಾಂಸ್ಕೃತಿಕ ಶ್ರೀಮಂತಿಕೆಯನ್ನು ಹೆಚ್ಚಿಸುವಲ್ಲಿ ಮತ್ತು ಇತಿಹಾಸವನ್ನು ಕಟ್ಟಿಕೊಡುವಲ್ಲಿ ವಸ್ತ್ರ ಮತ್ತು ಆಭರಣಗಳ ಪಾತ್ರ, ಮಹತ್ವ ಹಾಗೂ ಪ್ರಸ್ತುತ ಸಂದರ್ಭದಲ್ಲಿ ಅವುಗಳ ಕಾರ್ಯವೈಖರಿಗಳನ್ನು ಚರ್ಚಿಸಿ ವಿಶ್ಲೇಷಿಸಲಾಗಿದೆ.

ಆರನೆಯ ಅಧ್ಯಾಯವು ಸಮಾರೋಪವಾಗಿದ್ದು, ಒಟ್ಟು ಅಧ್ಯಯನದ ಫಲಿತವಿದು. ಅನುಬಂಧದಲ್ಲಿ ವಸ್ತ್ರ ಮತ್ತು ಆಭರಣಗಳ ಪದಕೋಶ, ಗ್ರಂಥಸೂಚಿ, ಸಂಕ್ಷೇಪಸೂಚಿ ಮತ್ತು ಛಾಯಾಚಿತ್ರಗಳನ್ನು ಒಳಗೊಂಡ ಮಾಹಿತಿಯನ್ನು ನೀಡಲಾಗಿದೆ. ಹೀಗೆ ವಿಜಯನಗರ ಕಾಲದ ವಸ್ತ್ರ ಮತ್ತು ಆಭರಣಗಳು ಎಂಬ ಅಧ್ಯಯನ ವಿಷಯದ ಕುರಿತು ಇದುವರೆಗೆ ದೊರೆತ ಆಕರಗಳ ಹಿನ್ನೆಲೆಯಲ್ಲಿ ಕಟ್ಟಿಕೊಡುವ ಪ್ರಯತ್ನ ಮಾಡಲಾಗಿದೆ.

ಆಕರ ಗ್ರಂಥಗಳು

೧. ಪ್ರ.ಕಂ.ಇ., ಸಂ-೨, ಪು.ಸಂ. ೧೪೪.

ಅಧ್ಯಾಯ ಎರಡು : ಹಿನ್ನೆಲೆ

ಹಿನ್ನೆಲೆ

'Dress, ornament, perfume, woman, couch, singing, food and betel were regarded by Indian savants as the eight enjoyments of life.'[೧] ಎಂದು ಶ್ರೀ ಕೆ. ಕಂಠಯ್ಯನವರು ವಿಜಯನಗರ ಕಾಲದ ಕನ್ನಡ ಸಾಹಿತ್ಯದಲ್ಲಿ ಜನಜೀವನ ಚಿತ್ರ ಗ್ರಂಥದಲ್ಲಿ ಹೇಳುತ್ತಾರೆ. ಅದೇ ರೀತಿಯಲ್ಲಿ ಕನ್ನಡ ಭಾಷೆಯ ನಾಣ್ನುಡಿಯೊಂದು 'ಊಟ ತನ್ನಿಚ್ಚೆ ಉಡುಪು ಪರರಿಚ್ಚೆ' ಎನ್ನುತ್ತದೆ. ಊಟ ಮನುಷ್ಯನ ದೇಹಕ್ಕೆ ಅತ್ಯಗತ್ಯವಾದರೆ, ವಸ್ತ್ರ ಮತ್ತು ಆಭರಣಗಳು ನೆರೆಹೊರೆಯವರು ತನ್ನನ್ನು ಆದರಣೀಯವಾಗಿ ನೋಡಬೇಕೆಂಬ ಸಲುವಾಗಿ ಎಂಬುದಾಗಿದೆ. ಮಾನವನ ಅಗತ್ಯತೆಗಳಲ್ಲಿ ವಸ್ತ್ರ ಮತ್ತು ಆಭರಣಗಳು ಪ್ರಮುಖ ಪಾತ್ರವಹಿಸುತ್ತವೆ. ಆದಿಕಾಲದಲ್ಲಿ ಪ್ರಾಣಿಯಂತಿದ್ದ ಮಾನವ ಚಳಿ, ಮಳೆ, ಬಿಸಿಲು ಮುಂತಾದ ಹವಾಮಾನ ವೈಪರೀತ್ಯಗಳಿಂದ ರಕ್ಷಿಸಿಕೊಳ್ಳಲು ಹುಲ್ಲು, ಎಲೆ, ಮರದ ತೊಗಟೆ ಹಾಗೂ ನಾರಿನಿಂದ ದೇಹವನ್ನು ಮುಚ್ಚಿಕೊಳ್ಳಲು ಯತ್ನಿಸಿದ. ನಂತರ ತಾನು ಬೇಟೆಯಾಡಿದ ಪ್ರಾಣಿಯ ಚರ್ಮದಿಂದ ದೇಹವನ್ನು ಸುತ್ತಿಕೊಂಡನು. ಕಾಲಕ್ರಮೇಣ ಬೌದ್ಧಿಕ ವಿಕಾಸ ದೊಂದಿಗೆ, ತಾನು ಇತರರಿಗಿಂತ ಸುಂದರವಾಗಿ ಕಾಣಬೇಕೆಂದು ತನ್ನಲ್ಲಿದ್ದ ಸುಪ್ತ ಸೌಂದರ್ಯ ಪ್ರಜ್ಞೆಯನ್ನು ಪ್ರಚುರಗೊಳಿಸಿದ. ಹಾಗಾಗಿ ಅದಕ್ಕೆ ಪೂರಕ ಸಾಧನಗಳಾಗಿ ವಸ್ತ್ರ ಮತ್ತು ಆಭರಣಗಳು ಹಾಗೂ ಇತರ ಪ್ರಸಾದನ ಕಲೆಯನ್ನು ಕಲ್ಲು, ಮಣ್ಣು, ದಂತ ಲೋಹ ಮೊದಲಾದವುಗಳನ್ನು ಬಳಸಿ ಆಭರಣ ತಯಾರಿಸಲು ಪ್ರಾರಂಭಿಸಿದನು.

'ವಸ್ತ್ರ' ಎಂಬುದಕ್ಕೆ 'ವಸನ', ಬಟ್ಟೆ, ಉಡುಗೆ, ಇನ್ನೂ ಮುಂತಾದ ಸಮಾನಾರ್ಥ ಗಳಿವೆ. ವಸ್ತ್ರದ ಮೂಲ ರೂಪ 'ವಸ' ಅಥವಾ 'ವಸನ'. ವಸ್ತ್ರದ ಕುರಿತು ಫ್ಲುಗಲ್‌ರು 'Dress is a sign of rank, occupation, locality and display of wealth'.[೨] ಎಂದಿದ್ದಾರೆ. Ghure.G.S ಹೇಳುವಂತೆ, 'Costume has been functioning as a fashioner of personality'.[೩] ಸಾಕ್ರಟೀಸ್ ಹೇಳುವಂತೆ, 'ಉಪಯುಕ್ತತೆಯೇ ಸೌಂದರ್ಯ', 'The dress that proclaims

the man'.[೪] ಎಂದು ಹೇಳಿರುವ ಷೇಕ್ಸ್‌ಪಿಯರ್‌ನ ಮಾತು ಇಂದಿಗೂ ನಿಜವಾಗಿದೆ. ಹಾಗಾಗಿ ವಸ್ತ್ರವೆಂಬುದು ಧರಿಸುವವರ ದೇಹ ರಕ್ಷಣೆ, ಸೌಂದರ್ಯ, ಉಪಯುಕ್ತತೆ, ಅಂತಸ್ತು ಹಾಗೂ ಅಭಿವ್ಯಕ್ತಿಗಳನ್ನು ಒಳಗೊಂಡ ಮಾಧ್ಯಮ.

'ಆಭರಣ' ಎಂಬುದಕ್ಕೆ 'ಒಡವೆ', 'ಭೂಷಣ' ಮುಂತಾದ ಅರ್ಥಗಳಿವೆ.[೫] ಬೆಲೆ ಬಾಳುವ ಲೋಹದಿಂದ ಹಿಡಿದು ಸಾಮಾನ್ಯವಾದ ಕಲ್ಲು, ಕಪ್ಪೆಚಿಪ್ಪು, ಕವಡೆ, ಶಂಖ, ಮಣಿಗಳವರೆಗೆ ಎಲ್ಲವೂ ಭೂಷಣ ಸಾಮಗ್ರಿಗಳೇ.

ಆದಿ ಕಾಲದಲ್ಲಿ ಮಾನವ ಹೂವು, ಬಳ್ಳಿ, ಎಲೆ, ಕಾಯಿ, ಬೀಜ ಮುಂತಾದವುಗಳನ್ನು ಆಭರಣಗಳಂತೆ ಬಳಸಿದ. ನಂತರ ಲೋಹಗಳನ್ನು ಆಭರಣ ತಯಾರಿಕೆಯ ಮಾಧ್ಯಮವಾಗಿ ಬಳಸಿದನು. ಆಯಾ ಲೋಹಗಳನ್ನು ತಾನು ಈ ಮೊದಲೇ ಬಳಸಿಕೊಂಡಿದ್ದ. ನಿಸರ್ಗದ ಹೂವು, ಎಲೆ, ಬಳ್ಳಿ, ಕಾಯಿ ಮುಂತಾದ ಮಾದರಿಗಳನ್ನು ಈ ಲೋಹಗಳ ಮೇಲೆ ರೂಪಿಸಲು ಪ್ರಾರಂಭಿಸಿ ಕರಗತಮಾಡಿಕೊಂಡನು.

ಇದರೊಂದಿಗೆ ಲೋಹದ ಆಭರಣಗಳ ಮೇಲೆ ತಾನು ನಿಸರ್ಗದಲ್ಲಿ ಕಂಡ ಸೂರ್ಯ, ಚಂದ್ರ, ನಕ್ಷತ್ರ, ಪ್ರಾಣಿ, ಪಕ್ಷಿ ಮುಂತಾದ ನಿಸರ್ಗ ವಿನ್ಯಾಸಗಳನ್ನು ರೂಪಿಸಿದನು. ಹಾಗಾಗಿ ಈ ವಿನ್ಯಾಸಗಳನ್ನು ಒಳಗೊಂಡ ಲೋಹದ ಆಭರಣಗಳೆಲ್ಲವೂ ಸೃಷ್ಟಿಯ ಪ್ರತಿರೂಪ ಅಥವಾ ಸೃಷ್ಟಿಯ ಪುನರ್‌ಸೃಷ್ಟಿಗಳೆಂಬುದು ಗಮನಾರ್ಹ. ಆಭರಣಗಳಿಗೆ ಆಯಾ ವಿನ್ಯಾಸ ಅಥವಾ ಮಾದರಿಯಿಂದಲೇ 'ಸೂರ್ಯಹಾರ', 'ಚಂದ್ರಹಾರ', 'ನಾಗಮುರಿಗೆ', 'ನಾಗಕಂಕಣ' ಮುಂತಾದ ಹೆಸರುಗಳಿಂದ ಕರೆದರು. ಅಲ್ಲದೇ ದೇಹದ ವಿವಿಧ ಭಾಗಗಳಿಗೆ ಧರಿಸುತ್ತಿದ್ದ ಆಭರಣಗಳು ಆಯಾ ದೇಹದ ಭಾಗವನ್ನು ಜೊತೆಗೂಡಿಸಿ ಹೆಸರಿಸಲಾಯಿತು. ಉದಾಹರಣೆಗೆ ಕರ್ಣಾಭರಣ, ಕಂಠಾಭರಣ, ತೋಳ್ಬಂದಿ, ಸೊಂಟಪಟ್ಟಿ, ಕಾಲ್ಗಡಗ ಮುಂತಾದವು. ಆಭರಣಗಳಿಗೆ ನಿರ್ದಿಷ್ಟ ಹೆಸರು ಬರಲು ಪ್ರಕೃತಿಯ ಸೃಷ್ಟಿ ಒಂದು ಕಾರಣವಾದರೆ, ಮತ್ತೊಂದು ಮಾನವನ ದೇಹ ರಚನೆಯ ಪ್ರಕೃತಿ. ಇವರೆಡರಿಂದ ಆಭರಣಗಳಿಗೆ ನಿರ್ದಿಷ್ಟ ಹೆಸರು ಸೃಷ್ಟಿಯಾಯಿತು ಎನ್ನಬಹುದು.

ವಿಜಯನಗರ ಪೂರ್ವ ಕಾಲದ ವಸ್ತ್ರ ಮತ್ತು ಆಭರಣಗಳು

ವಿಜಯನಗರ ಕಾಲದ ವಸ್ತ್ರ ಮತ್ತು ಆಭರಣಗಳನ್ನು ಅರಿಯುವ ಮುನ್ನ ಪ್ರಾಚೀನ ಕಾಲದ ವಸ್ತ್ರ ಮತ್ತು ಆಭರಣಗಳನ್ನು ತಿಳಿದುಕೊಳ್ಳುವುದು ಬಹುಮುಖ್ಯ. ಸಿಂಧೂ ನಾಗರಿಕತೆಗೆ ಸಂಬಂಧಿಸಿದಂತೆ ಅಲ್ಲಿ ಸಿಕ್ಕಿರುವ ಅವಶೇಷಗಳಿಂದ ಅಂದಿನ ಜನರು ಅತೀ ಕಡಿಮೆ ವಸ್ತ್ರಗಳನ್ನು ಧರಿಸುತ್ತಿದ್ದರು. ಹರಪ್ಪ ಮತ್ತು ಮೆಹೆಂಜೊದಾರೊ ಉತ್ಖನನಗಳಿಂದ ವಸ್ತ್ರ ಕುರಿತ ಕೆಲ ಸಂಗತಿಗಳನ್ನು ತಿಳಿಯಬಹುದು. ಮೆಹೆಂಜೊದಾರೊನಲ್ಲಿ ಸಿಕ್ಕಿರುವ ನೇಯ್ಗೆ ಮಗ್ಗ ಪ್ರಮುಖ ಕೈಗಾರಿಕಾ ಸಾಧನವಾಗಿದೆ. ಅಲ್ಲಿನ ಜನತೆ ಹೆಚ್ಚಾಗಿ ಸ್ಪಿನ್ ಬಟ್ಟೆ ಬಳಸುತ್ತಿದ್ದರು.[೬] ಪುರುಷರು ಸಾಮಾನ್ಯವಾಗಿ ಉದ್ದವಾದ ವಸ್ತ್ರವೊಂದನ್ನು ಬಳಸಿ ದೇಹವನ್ನು ಮುಚ್ಚಿಕೊಳ್ಳುತ್ತಿದ್ದರು. ಕೆಲ ಪ್ರತಿಮೆಗಳಲ್ಲಿ ವಸ್ತ್ರವೊಂದು ಕಟಿಯ ಸುತ್ತ ಸುತ್ತಿಕೊಂಡಿರುವುದು ಕಂಡುಬಂದರೆ ಇನ್ನು ಕೆಲ ಪ್ರತಿಮೆ ಅಥವಾ ಶಿಲ್ಪಗಳಲ್ಲಿ

ದ್ವಿವಸ್ತ್ರವನ್ನು ಬಳಸಿದ್ದಾರೆ.[೭] ಈ ನಾಗರಿಕತೆಯಲ್ಲಿ ದೊರೆತಿರುವ ನೃತ್ಯ ಭಂಗಿಯ ಸ್ತ್ರೀ ಪ್ರತಿಮೆಯಂತೂ ಪೂರ್ಣ ಬೆತ್ತಲೆಯಾಗಿದೆ. ಹರಪ್ಪ ನಾಗರಿಕತೆಯ ಸ್ತ್ರೀಯರು ಸಾಮಾನ್ಯ ಉಡುಪನ್ನು ಧರಿಸುತ್ತಿದ್ದರು. ಒಟ್ಟಾರೆ ಹರಪ್ಪ ಮತ್ತು ಮೆಹೆಂಜೊದಾರೊ ಉತ್ಖನನದಲ್ಲಿ ದಾರವನ್ನು ಹುರಿ ಮಾಡಿಕೊಳ್ಳುವ ತಕಲಿಗಳು ದೊರೆತಿರುವುದು ವಸ್ತ್ರ ತಯಾರಿಕೆ ಆಂದಿನ ಜನರಿಗೆ ತಿಳಿದಿದ್ದುದು ಹಾಗೂ ಈ ನಾಗರಿಕತೆಯ ಜನರು ಆಭರಣಪ್ರಿಯರಾಗಿದ್ದರು ಎಂಬುದು ಆಕರಗಳಿಂದ ದೃಢಪಡುತ್ತದೆ. ಈ ಸಂಸ್ಕೃತಿಗೆ ಸಂಬಂಧಪಟ್ಟಂತೆ ಫಯಾನ್ಸ್ ಎಂಬ ಸುಟ್ಟ ಮಣ್ಣಿನ ವಿವಿಧ ಹರಳುಗಳು, ತಾಮ್ರ, ಬೆಳ್ಳಿ, ಬಂಗಾರದ ಆಭರಣಗಳು ದೊರೆತಿದ್ದು. ಅವು ಕುಸುರಿ ಕೆಲಸದಿಂದ ಕೂಡಿರುವುದು ಕಂಡುಬಂದಿದೆ.[೮] ಸಿಂಧು ನಾಗರಿಕತೆಗೆ ಸಂಬಂಧಿಸಿದಂತೆ ಗುಜರಾತಿನ ಲೋಥಲ್‌ನಲ್ಲಿ ಮಣಿಗಳನ್ನು ತಯಾರಿಸುವ ಉದ್ಯಮವು ಉತ್ಖನನದಿಂದ ದೊರೆತಿದ್ದು, ಇದು ಅಂದಿನ ಆಭರಣ ಪ್ರಿಯತೆಗೆ ಪುಷ್ಠಿ ನೀಡುತ್ತದೆ. ಈ ಸಂಸ್ಕೃತಿಯ ಉತ್ಖನನದಲ್ಲಿ ದೊರೆತಿರುವ ಆಭರಣಗಳಾದ ಬಳೆ, ಡಾಬು, ಕರ್ಣಾಭರಣ, ಅಂದಿಗೆ, ಕಂಠಾಭರಣ, ಉಂಗುರ ಮುಂತಾದವುಗಳನ್ನು ಸ್ತ್ರೀ ಪುರುಷರಿಬ್ಬರೂ ಧರಿಸುತ್ತಿದ್ದರು.[೯]

ವೇದಕಾಲದ ಜನರಿಗೆ ನೇಯ್ಗೆ ತಿಳಿದಿತ್ತೆಂಬ ಮಾಹಿತಿಯನ್ನು ಜಿ.ಎಸ್. ಗುರ್ರೈಯವರ 'ದಿ ಇಂಡಿಯನ್ ಕಾಸ್ಟೂಮ್ಸ್' ಕೃತಿಯಲ್ಲಿ ಹೇಳಿದ್ದಾರೆ. ಈ ಕಾಲದವರು 'ಪೂಷನ್' ದೇವತೆ ಯನ್ನು 'ಉಡುಪಿನ' ಅಥವಾ 'ನೇಯ್ಗೆ' ದೇವತೆ ಎಂದು ಕರೆದಿದ್ದಾರೆ.[೧೦] ವೇದಕಾಲದಲ್ಲಿ ಮೂರು ರೀತಿಯ ವಸ್ತ್ರವನ್ನು ಧರಿಸುತ್ತಿದ್ದ ಬಗ್ಗೆ ಉಲ್ಲೇಖವನ್ನು ಕಾಣಬಹುದು. ಅವು ಉತ್ತರೀಯ (ಮೇಲುವಸ್ತ್ರ), ನೀವಿ (ಕೆಳವಸ್ತ್ರ) ಮತ್ತು ಅದಿವಾಸ (ಒಳಉಡುಪು).[೧೧] ವೇದಕಾಲದ ಸ್ತ್ರೀಯರು ವಸನ, ದ್ರಾಪಿ (ಕುಸುರಿ ಕೆಲಸದಿಂದ ಕೂಡಿದ ಕೋಟ್), ಉಪವಸನ (ದುಪ್ಪಟ) ಮುಂತಾದ ವಸ್ತ್ರಗಳನ್ನು ಧರಿಸುತ್ತಿದ್ದ ಬಗೆಗೆ ವೇದಗಳಲ್ಲಿ ಉಲ್ಲೇಖವಿರುವುದು ವಸ್ತ್ರ ವಿಕಾಸಕ್ಕೆ ಪುಷ್ಠಿಯಾಗಿದೆ.[೧೨] ಪ್ರಾಚೀನ ಕಾವ್ಯಗಳಾದ ರಾಮಾಯಣ ಮತ್ತು ಮಹಾಭಾರತಗಳಲ್ಲಿ ಹತ್ತಿ, ಉಣ್ಣೆ, ರೇಷ್ಮೆ ವಸ್ತ್ರಗಳ ಹಾಗೂ ಹಲವಾರು ಆಭರಣಗಳು ಪ್ರಸ್ತಾಪವಾಗಿರುವುದು ತಿಳಿದಿರುವ ಅಂಶ. ಕೌಟಲ್ಯನ ಅರ್ಥಶಾಸ್ತ್ರವು ನೇಯ್ಗೆ ಮತ್ತು ಹೊಲಿದ ವಸ್ತ್ರದ ಬಗೆಗೆ ತಿಳಿಸುತ್ತದಲ್ಲದೆ, ಕಂಠಾಭರಣ, ಏಕಾವಳಿ, ರತ್ನಾವಳಿ ತ್ರಿಸರ ಎಂಬ ಆಭರಣಗಳ ಉಲ್ಲೇಖವನ್ನು ನೀಡುತ್ತದೆ.[೧೩] ಮೆಗಾಸ್ತನೀಸನು ತನ್ನ ಬರವಣಿಗೆಯಲ್ಲಿ ಭಾರತೀಯರು ಹೂವಿನ ಚಿತ್ರವಿರುವ ಮಸ್ಲಿನ್ ಬಟ್ಟೆಗಳನ್ನು ಧರಿಸುತ್ತಿದ್ದ ಹಾಗೂ ಆಳುವ ವರ್ಗ ಚಿನ್ನದಜರಿ ಕುಸುರಿ ಕೆಲಸವಿದ್ದ ವಸ್ತ್ರ ಧರಿಸುತ್ತಿದ್ದ ಬಗ್ಗೆ ತಿಳಿಸಿದ್ದಾನೆ.[೧೪] ಇವು ಮೌರ್ಯಕಾಲದ ವಸ್ತ್ರ ಮತ್ತು ಆಭರಣಗಳ ಬಗೆಗೆ ತಿಳಿಯಲು ಸಹಾಯಕವಾಗಿವೆ.

ಹಾಗೆಯೇ ಗುಪ್ತಕಾಲಕ್ಕೆ ಬಂದರೆ ಅಮರಕೋಶದಲ್ಲಿ ಚೋಲಿ, ಕೂರ್ಪಾಸ, ಸ್ತನಪಟ್ಟಿಗಳು ಉದ್ದನೆಯ ನೀಲುವಂಗಿ, ಉತ್ತರೀಯ, ಕಂಚುಕ, 'ಗಾತ್ರಿಕ' ಎಂಬ ಹೊದಿಕೆಯನ್ನು ಸ್ತನಗಳ ಮಧ್ಯೆ ಗಂಟು ಹಾಕಿ ಧರಿಸುತ್ತಿದ್ದರು. ಆಭರಣಗಳಾದ ಏಕಾವಳಿ, ತ್ರಿಸರ ಮುಕ್ತಾವಳಿ, ಚಿನ್ನದ ನಾಣ್ಯಗಳನ್ನು ಪೋಣಿಸಲಾಗಿರುವ ಹಾರ ನಿಷ್ಕ, ನಿಷ್ಕದ ಆಧುನಿಕ ರೂಪವೇ ಕಾಸಿನಸರ. ಚೂಡಾಮಣಿ, ಕರ್ಣಾಪೂರ, ಮಣಿಕುಂಡಲ, ಮಕುಟ, ಲಾಲಾಟಿಕ (ಹಣೆಯ ಮೇಲ್ಗಡೆ ತೂಗಾಡುವ

ಆಭರಣ), ಗೋಸ್ತನ (ಇಪ್ಪತ್ನಾಲ್ಕು ಎಳೆಗಳಿಂದಾದ ಹಾರ), ನಕ್ಷತ್ರ ಮಾಲಾ (ಇಪ್ಪತ್ತೇಳು ಮುತ್ತುಗಳಿಂದ ರಚಿತವಾದ ಒಂದೆಳೆಯ ಹಾರ), ಊರ್ಮಿಕ (ಉಂಗುರ), ಕಡಗ, ಕೇಯೂರ, ಶೃಂಖಲ (ಪುರುಷರ ಸೊಂಟದ ಆಭರಣ)[೧೫] ಮೊದಲಾದ ಹೆಸರು, ಅವುಗಳ ಅರ್ಥವನ್ನು ತಿಳಿಯುವಲ್ಲಿ ಅಮರಕೋಶ ನೆರವಾಗುತ್ತದೆ.

ಕುಶಾನರ ಕಾಲದಲ್ಲಿ ಕತ್ತರಿಸಿ ಹೊಲಿದ ಉಡುಪುಗಳನ್ನು ಕಾಣಬಹುದು. ಗಾಂಧಾರ ಶಿಲ್ಪಗಳಲ್ಲಿ ಉದ್ದವಾದ ಒಂದೇ ವಸ್ತ್ರದಿಂದ ಇಡೀ ಶರೀರವನ್ನು ಮುಚ್ಚುವಂತಹ ಸೀರೆಯ ರೀತಿಯ ಉಡುಪನ್ನು ಕಾಣಬಹುದು.[೧೬] ಪುರುಷರು ಉದ್ದ ತೋಳಿನ ಹಾಗೂ ತೊಡೆಯ ಭಾಗದವರೆಗೂ ಇರುವ ಉದ್ದವಾದ ಮೇಲಂಗಿಯನ್ನು ಧರಿಸುತ್ತಿದ್ದರು. ಉತ್ತರೀಯ ಹೊದೆಯುತ್ತಿದ್ದರು. ಅಲ್ಲದೇ ರತ್ನಾವಳಿ ಮುಂತಾದ ಆಭರಣಗಳನ್ನು ಧರಿಸುತ್ತಿದ್ದರು.[೧೭] ಕುಶಾನರ ಕಾಲದ ವಸ್ತ್ರಗಳನ್ನು ಗಮನಿಸಿದಾಗ ಭಾರತೀಯರು ವಸ್ತ್ರ ಕ್ರಮದಲ್ಲಿ ವ್ಯಾಪಕವಾದ ಬದಲಾವಣೆ ಆಗಿರುವ ವಿವರಗಳು ನಮಗೆ ತಿಳಿಯುತ್ತವೆ. ಸ್ತ್ರೀಯರ ಉಡುಪಿನ ವ್ಯತ್ಯಾಸವನ್ನು (ಸೀರೆ ಉಡುವ ಕ್ರಮ) ಸ್ಪಷ್ಟವಾಗಿ ತೋರಿಸುತ್ತಿದ್ದ ಕಾಲವಿದು.

ಹಾಲನ ಗಾಥಾಸಪ್ತಸತಿಯಲ್ಲಿ ಪುರುಷರು ಧರಿಸುವ ಧೋತ್ರ, ಲಂಗೋಟಿ (ಕೌಪೀನ)ದ ಬಗೆಗೆ ಹಾಗೂ ಸ್ತ್ರೀಯರು ಧರಿಸುವ ವಸ್ತ್ರದ ಬಗೆಗೆ ತಿಳಿಸಲಾಗಿದೆ.[೧೮] ಹಾಗೂ ರೇಷ್ಮೆ ವಸ್ತ್ರಗಳು ಬಳಕೆಯುಲ್ಲಿದ್ದುದರ ಬಗೆಗೆ ಸಹ ತಿಳಿಸಲಾಗಿದೆ.[೧೯]

ಪ್ರಾಚೀನ ಭಾರತದಂತೆ ಕರ್ನಾಟಕದಲ್ಲಿ ಕದಂಬರ ಕಾಲದಿಂದಲೂ ವಸ್ತ್ರ ಮತ್ತು ಆಭರಣಗಳ ಉಲ್ಲೇಖವನ್ನು ಕಾಣಬಹುದು. ಕದಂಬರ ಕಾಲದಲ್ಲಿ ಉತ್ತರೀಯ, ಕಟಿಯಿಂದ ತೊಡೆಯ ಭಾಗದವರೆಗೂ ಧೋತಿಯನ್ನು ಧರಿಸುತ್ತಿದ್ದುದು ಶಿಲ್ಪಗಳಿಂದ ತಿಳಿಯಬಹುದು. ಅಲ್ಲದೆ ಯಜ್ಞೋಪವೀತ ಕಂಠಾಭರಣ, ಕೇಯೂರ, ಉದರಬಂಧ ಮುಂತಾದ ಕರ್ಣಾಭರಣಗಳನ್ನು ಗಮನಿಸಬಹುದು.

ಪ್ರಾಚೀನ ಕರ್ನಾಟಕದ ಪ್ರಸಿದ್ಧ ಅರಸು ಮನೆತನಗಳಲ್ಲಿ ಬಾದಾಮಿ ಚಾಲುಕ್ಯರು ಪ್ರಮುಖ ಸ್ಥಾನ ಪಡೆದಿದ್ದಾರೆ. ಚಾಲುಕ್ಯ ರಾಜ್ಯದಲ್ಲಿ ಹತ್ತಿಯ ಬಟ್ಟೆ ಹಾಗೂ ಪುಷ್ಪ ನಕ್ಷೆಗಳಿಂದ ಕೂಡಿದ ಉಡುಪುಗಳಿದ್ದುದನ್ನು ಹ್ಯೂಯನ್‌ತ್ಸಾಂಗ್‌ನು ತನ್ನ ವರದಿಯಲ್ಲಿ ಉಲ್ಲೇಖಿಸಿದ್ದಾನೆ.[೨೦] ಈ ಕಾಲದ ಸ್ತ್ರೀ-ಪುರುಷರ ವಸ್ತ್ರ ಮತ್ತು ಆಭರಣಗಳ ವೈವಿಧ್ಯವನ್ನು ಅರಿತುಕೊಳ್ಳಲು ಚಾಲುಕ್ಯ ಶಿಲ್ಪಗಳು ಪ್ರಮುಖ ಆಕರಗಳಾಗಿವೆ. ವಿವಿಧ ಮಾದರಿಯ ಹಾಗೂ ಅಳತೆಯ ವಸ್ತ್ರಗಳನ್ನು ಧರಿಸಿರುವುದು ಶಿಲ್ಪಗಳಿಂದ ತಿಳಿದುಬರುವ ಅಂಶ. ಈ ಕಾಲದ ಜನರು ಉಡುತ್ತಿದ್ದ ವಸ್ತ್ರಗಳಲ್ಲಿ ಉಷ್ಣೀಷ, ದ್ವಿಪದಿ(ಚಲ್ಲಣ), ಕಟಿಬಂಧ, ಉತ್ತರೀಯ, ಸ್ತನೋತ್ತರೀಯ, ಅಂತರೀಯ, ಲಂಗೋಟಿ, ಕೌಪೀನ, ಸೀರೆ ಮುಂತಾದ ವಸ್ತ್ರಗಳು ಹಾಗೂ ವಿವಿಧ ಮಾದರಿಯ ಕಿರೀಟ, ಕರ್ಣಾಭರಣ, ಕಂಠಾಭರಣ, ಬಾಹುಭೂಷಣ, ಉದರಬಂಧ, ಒಡ್ಯಾಣ, ಪಾದಭೂಷಣಗಳು ಪ್ರಮುಖವಾಗಿವೆ. ಈ ರೀತಿಯ ವಸ್ತ್ರ ಮತ್ತು ಆಭರಣಗಳ ವಿನ್ಯಾಸವನ್ನು ಬಾದಾಮಿ ಮತ್ತು ಐಹೊಳೆಯ ಗುಹಾಲಯಗಳಲ್ಲಿನ ಶಿಲ್ಪಗಳಿಂದ ತಿಳಿಯಲು ಸಾಧ್ಯ. ಕ್ರಿ.ಶ. ಆರರಿಂದ ಎಂಟನೆಯ ಶತಮಾನದ ವೇಳೆಗೆ ಸ್ತ್ರೀಯರ

ಉಡುಪು ಮೊಣಕಾಲಿನಿಂದ ಹಿಡಿದು ಪಾದಗಳವರೆಗೆ ಸೀರೆಯ ಮಾದರಿಯಲ್ಲಿ ಧರಿಸುತ್ತಿದ್ದುನ್ನು ಈ ಕಾಲದ ಶಿಲ್ಪಗಳಲ್ಲಿ ಕಾಣಬಹುದು.[೨೧] ಬಾದಾಮಿ ಚಾಲುಕ್ಯರ ಕಾಲವನ್ನು ನೋಡಿದಾಗ, ವಸ್ತ್ರಗಳನ್ನು ನೇಯುವುದು, ಬಣ್ಣ ಹಾಕುವುದು, ಹೊಲಿಯುವುದು ಮತ್ತು ವಿನ್ಯಾಸಗೊಳಿಸುವ ಕಲೆಯಲ್ಲಿ ಆಗಿನ ಜನರು ಪರಿಪೂರ್ಣತೆಯನ್ನು ಸಾಧಿಸಿದ್ದುದಂತೂ ಸ್ಪಷ್ಟ.

ಕಲ್ಯಾಣ ಚಾಲುಕ್ಯರ ಕಾಲದಲ್ಲಿ ವಸ್ತ್ರ ಮತ್ತು ಆಭರಣಗಳಲ್ಲಿ ಉತ್ತಮ ಗುಣಮಟ್ಟದ ಸಾಧನೆಯಾಗಿದ್ದು, ಹೊಲಿಗೆಯ ಕಲೆ ಅವರಿಗೆ ತಿಳಿದಿತ್ತು. ಅವರು ಬಿಗಿಯಾದ ವಸ್ತ್ರಗಳನ್ನು ದೇಹದ ಅಳತೆಗೆ ತಕ್ಕಂತೆ ಹೊಲಿದು ಧರಿಸುವ ಕಲೆಯನ್ನು ಕಂಡುಕೊಂಡಿದ್ದರು. ಈ ರೀತಿಯ ಬಿಗಿಯಾಗಿ ಧರಿಸುತ್ತಿದ್ದ ವಸ್ತ್ರಗಳನ್ನು ಕುರುವತ್ತಿಯ ಶಿಲ್ಪಗಳಲ್ಲಿವೆ. ಅಲ್ಲದೇ ವಿವಿಧ ವಿನ್ಯಾಸ ಮತ್ತು ಕಸೂತಿ ಕಲೆಯನ್ನು ವಸ್ತ್ರಗಳಲ್ಲಿ ಮೂಡಿಸಿ ಧರಿಸುತ್ತಿದ್ದದ್ದು ಗಮನಾರ್ಹ ಅಂಶವಾಗಿದೆ.[೨೨] ವಿವಿಧ ಆಭರಣಗಳು, ಅದರ ವಿನ್ಯಾಸ ಮತ್ತು ಲಕ್ಷಣಗಳನ್ನು ಈ ಕಾಲದ ಶಿಲ್ಪಗಳಲ್ಲಿ ಗಮನಿಸಬಹುದು. ಸೋಮೇಶ್ವರನ ಮಾನಸೋಲ್ಲಾಸ ಗ್ರಂಥದಲ್ಲಿ ರತ್ನಗಳ ಒಂದು ಪಟ್ಟಿಯನ್ನೇ ನೀಡುತ್ತಾನೆ. ಅಲ್ಲದೇ ಸುಮಾರು ಅರವತ್ತು ರೀತಿಯ ಆಭರಣಗಳ ಹೆಸರು ಹಾಗೂ ಅವುಗಳನ್ನು ರಚಿಸುವ ವಿನ್ಯಾಸವನ್ನು ತಿಳಿಸುತ್ತಾನೆ.[೨೩] ಈ ಗ್ರಂಥವು ಕಲ್ಯಾಣ ಚಾಲುಕ್ಯರ ವಸ್ತ್ರ ಮತ್ತು ಆಭರಣಗಳ ತಯಾರಿಕೆ ಮತ್ತು ಧಾರಣೆಯ ಕುರಿತು ಹಾಗೂ ಅವರ ಅಭಿರುಚಿ, ಆಸಕ್ತಿಯನ್ನು ತಿಳಿಯುವಲ್ಲಿ ಉತ್ತಮ ಆಕರವಾಗಬಲ್ಲದು.

ಹೊಯ್ಸಳರ ಕಾಲದ ಶಿಲ್ಪಗಳಲ್ಲಿಯೂ ಸಾಕಷ್ಟು ಸಂಖ್ಯೆಯಲ್ಲಿ ವೈವಿಧ್ಯತೆಯಿರುವಂತಹ ವಸ್ತ್ರದ ಅಲಂಕಾರ ಗಮನಕ್ಕೆ ಬಂದರೂ ಹೆಚ್ಚಿನ ಸಂಖ್ಯೆಯ ಆಭರಣಗಳಿಂದ ವಸ್ತ್ರವು ಗೌಣವಾಗಿ ಕಾಣುತ್ತದೆ. ಹೊಯ್ಸಳರ ಆಭರಣಗಳ ಅಲಂಕರಣೆಯ ಕುರಿತು ವಿದ್ವಾಂಸ ರೊಬ್ಬರು ಹೀಗೆ ಉದ್ಗರಿಸಿದ್ದಾರೆ. "ಹೊಯ್ಸಳ ಶಿಲ್ಪವೆಂದರೆ ಆಭರಣಗಳನ್ನು ನೇತು ಹಾಕಿರುವ ನಿಲುವು". ಈ ಕಾಲದಲ್ಲಿ ರಾಜರು ಕಸೂತಿ ಕೆಲಸದಿಂದ ಕೂಡಿದ ಅಧೋವಸ್ತ್ರ, ನಡುಪಟ್ಟಿಯನ್ನು, ಸ್ತ್ರೀಯರು ಕಟಿಯಿಂದ ಮೊಣಕಾಲಿನವರೆಗೆ ಧರಿಸಿರುವ ವಸ್ತ್ರವನ್ನು ಕಾಣಬಹುದು. ಅಲ್ಲದೇ ದುಪ್ಪಟ ಮುಂತಾದ ವಸ್ತ್ರಗಳನ್ನು ಧರಿಸುತ್ತಿದ್ದರು. ಹೊಯ್ಸಳ ಕಾಲದ ಶಿಲ್ಪಗಳಲ್ಲಿ ಎದೆಕಟ್ಟು ಅಥವಾ ಕಂಚುಕವನ್ನು ಧರಿಸುತ್ತಿದ್ದ ಶಿಲ್ಪಗಳು ತುಂಬಾ ವಿರಳ ವಾಗಿವೆ. ಕೆಲವು ಶಿಲ್ಪಗಳಲ್ಲಿ ದುಪ್ಪಟ ಮಾತ್ರವಿದೆ. ಹಾಗೆಯೇ ಪುರುಷ ಶಿಲ್ಪಗಳಲ್ಲಿ ಉತ್ತರೀಯ ವಿರಳವಾಗಿದೆ. ಅಧೋವಸ್ತ್ರವನ್ನು ಮೊಣಕಾಲಿನವರೆಗೆ ಮಾತ್ರ ಧರಿಸುತ್ತಿದ್ದುದು ಗಮನಾರ್ಹ.[೨೪] ಆದರೆ ಆಭರಣಗಳೇ ಪ್ರಧಾನ ಪಾತ್ರವನ್ನು ಇಲ್ಲಿ ಹೊಂದಿರುವುದು ಗಮನಾರ್ಹ. ಈ ಕಾಲದ ಶಿಲ್ಪಗಳಲ್ಲಿ ವಿನ್ಯಾಸಗೊಂಡಿರುವ ಹಾರ, ಕಂಠಾಭರಣ, ಕರ್ಣಾಭರಣ, ಬಳೆ, ಪಾದಾಭರಣ, ಬ್ರಹ್ಮಸೂತ್ರ ಮುಂತಾದ ಆಭರಣಗಳು ಹಲವಾರು. ಅವುಗಳ ವಿನ್ಯಾಸ, ಮಾದರಿಗಳು ವಿಭಿನ್ನ ಹಾಗೂ ವಿಶಿಷ್ಟವೂ ಆಗಿವೆ. ಈ ಹಿಂದಿನ ಕಾಲಕ್ಕಿಂತ ಹೊಸ ಬಗೆಯ ತಂತ್ರಗಳನ್ನು ಅನ್ವಯಿಸಿ, ಆಭರಣ ಕಲೆಯನ್ನು ಹುಟ್ಟು ಹಾಕಿದ ಕಾಲ ಹೊಯ್ಸಳ ಕಾಲ ಎಂದರೆ ತಪ್ಪಾಗಲಾರದು. ನೋಡುಗರಿಗೆ ಮುದವನ್ನೀಡುವ ಹೊಯ್ಸಳರ ಆಭರಣಗಳ ಕಲೆಗಾರಿಕೆ ನಿಜಕ್ಕೂ ಶ್ಲಾಘನೀಯ.

ಹೀಗೆ ವಿಜಯನಗರ ಪೂರ್ವ ಕಾಲದ ಕರ್ನಾಟಕದಲ್ಲಿ ವಿವಿಧ ಅರಸು ಮನೆತನಗಳು ವಸ್ತ್ರ ಮತ್ತು ಆಭರಣ ವಿಕಾಸ ಕ್ರಮದಲ್ಲಿನ ವ್ಯವಸ್ಥಿತ ರೂಪವನ್ನು ಅನುಸರಿಸಿಕೊಂಡು ಬಂದಿರುವುದನ್ನು ಕಾಣಬಹುದು. ವಿಜಯನಗರದಲ್ಲಿ ಪ್ರಾಚೀನ ಕರ್ನಾಟಕದ ವಸ್ತ್ರ ಮತ್ತು ಆಭರಣ ಕ್ರಮಗಳನ್ನು ಅಳವಡಿಸಿಕೊಂಡಿದ್ದರೂ ಕೆಲವು ಶಿಲ್ಪಗಳಲ್ಲಿ ಆಭರಣಗಳ ವೈಭವೀಕರಣದ ಬದಲಿಗೆ ಸರಳವಾದ ರೀತಿಯ ತಂತ್ರವನ್ನು ಅನುಸರಿಸಿರುವುದು ಗಮನಾರ್ಹ. ಇದಕ್ಕೆ ಮತ್ತೊಂದು ಕಾರಣ ಆ ಶಿಲ್ಪ ರಚನೆಗೆ ಬಳಸಿರುವ ಕಣಶಿಲೆಯು ಸೂಕ್ಷ್ಮ ಕೆತ್ತನೆಗೆ ಹೊರತಾಗಿರುವುದಾಗಿದೆ. ಹಾಗಿದ್ದೂ, ಈ ಕಾಲದ ಸಾಹಿತ್ಯ ಮತ್ತು ಶಿಲ್ಪ ಹಾಗೂ ಇತರ ಆಕರಗಳ ಅಧ್ಯಯನದಿಂದ ಈ ಕಾಲದ ವಸ್ತ್ರ ಮತ್ತು ಆಭರಣಗಳ ಶ್ರೀಮಂತಿಕೆ, ಅಭಿರುಚಿ, ಧಾರಣೆಯ ಬಗ್ಗೆ ಹಾಗೂ ವಿದೇಶಿ ವ್ಯಾಪಾರ ಮುಂತಾದ ಅಂಶಗಳ ಬಗೆಗೆ ಈ ಕಾಲದ ವಸ್ತ್ರ ಮತ್ತು ಆಭರಣಗಳ ಪರಿಣಾಮ ಗಮನಾರ್ಹ ಬದಲಾವಣೆಗಳನ್ನು ಉಂಟುಮಾಡಿದೆ. ಅಲ್ಲದೆ ವಿಜಯನಗರ ಕಾಲದಲ್ಲಿನ ವಸ್ತ್ರ ಮತ್ತು ಆಭರಣಗಳು ರಾಜರಿಂದ ಹಿಡಿದು ಜನ ಸಾಮಾನ್ಯರವರೆಗೂ ವಿಶೇಷ ಮನ್ನಣೆಯನ್ನು ಪಡೆದ ಸಂಗತಿಗಳಾಗಿವೆ.

ಆಕರ ಗ್ರಂಥಗಳು

೧. ಶ್ರೀಕಂಠಯ್ಯ, ಕೆ., ವಿ.ಕಾ.ಕ.ಸಾ.ಜ.ಚಿತ್ರ, ಪು.ಸಂ.೪೦೧.
೨. Padmanabha, K., Hoysala Scupture : A Cultural Study, P.No.12.
೩. Ghure, G.S., Indian Costume. P.No.15.
೪. ಕಮಲಮ್ಮ, ಎಸ್.ವಿ., ಜನಪದ ಮಹಿಳೆಯರ ಉಡುಗೆ–ತೊಡುಗೆಗಳು, ಪು.ಸಂ.೧೨.
೫. ಚಕ್ರವರ್ತಿ, ಜಿ.ಎನ್., ಸಂಸ್ಕೃತ–ಕನ್ನಡ ನಿಘಂಟು.
೬. Sachidananda Sahay, Indian Costumes, Coiffure and Ornment, P.No.2.
೭. ಅದೇ,
೮. ಶಾಂತ, ಎನ್., ಕಾಲವಾಡ, ಜನಪದ ಆಭರಣಗಳ ಸಾಂಸ್ಕೃತಿಕ ಅಧ್ಯಯನ, ಪು.ಸಂ.೩೧.
೯. ಅದೇ, ಪು.ಸಂ.೩೩.
೧೦. ಕಮಲಮ್ಮ, ಎಸ್.ವಿ., ಪೂರ್ವೋಕ್ತ, ಪು.ಸಂ.೨೩.
೧೧. ಸಚ್ಚಿದಾನಂದ ಸಹ್ಯ, ಪೂರ್ವೋಕ್ತ, ಪು.ಸಂ.೨.
೧೨. ಅದೇ, ಪು.ಸಂ.೩೩.
೧೩. ಕೌಟಲ್ಯನ ಅರ್ಥಶಾಸ್ತ್ರ, ಪು.ಸಂ.೫೭.
೧೪. ಕರಕುಶಲ ಕಲೆಗಳು, ಪು.ಸಂ.೫೩.
೧೫. ರಂಗನಾಥ ಶರ್ಮ, ಎನ್(ಸಂ), ಅಮರಕೋಶ(ಅಮರಸಿಂಹ), ಪು.ಸಂ.೫೦.
೧೬. ಕಮಲಮ್ಮ, ಎಸ್.ವಿ., ಪೂರ್ವೋಕ್ತ, ಪು.ಸಂ.೩೩.
೧೭. ಕರಕುಶಲ ಕಲೆಗಳು, ಪೂರ್ವೋಕ್ತ, ಪು.ಸಂ.೬೧–೬೨.
೧೮. ಶೀಲಾಕಾಂತ ಪತ್ತಾರ, ಬಾದಾಮಿ: ಸಾಂಸ್ಕೃತಿಕ ಅಧ್ಯಯನ, ಪು.ಸಂ.೯೦.

೧೯. Umamaheshwri, Dress and Jewellery of Women Satavahana to Kakatiya, P.No.05.

೨೦. ಶೀಲಾಕಾಂತ ಪತ್ತಾರ, ಪೂರ್ವೋಕ್ತ, ಪು.ಸಂ.೯೦.

೨೧. ಕಮಲಮ್ಮ, ಎಸ್.ವಿ., ಪೂರ್ವೋಕ್ತ, ಪು.ಸಂ.೩೩.

೨೨. ಚೂಡಾಮಣಿ ನಂದಗೋಪಾಲ್, ಶಿಲೆ-ಕಲೆ, ಪು.ಸಂ.೩೨೫.

೨೩. ಅದೇ, ಪು.ಸಂ.೩೦೩-೦೪.

೨೪. ಪದ್ಮನಾಭ, ಕೆ., ಪೂರ್ವೋಕ್ತ, ಪು.ಸಂ.೧೬.

ಅಧ್ಯಾಯ ಮೂರು : ವಸ್ತ್ರ ಮತ್ತು ಆಭರಣಗಳು

೩.೧. ಆಡಳಿತವರ್ಗ

೩.೨. ವೃತ್ತಿನಿರತರು

೩.೩. ಸ್ತ್ರೀಯರು

೩.೪. ದಾರ್ಶನಿಕರು

೩.೫. ದೇವತೆಗಳು

೩.೬. ಪ್ರಾಣಿಗಳು

ವಸ್ತ್ರ ಮತ್ತು ಆಭರಣಗಳು

೩.೧. ಆಡಳಿತ ವರ್ಗದವರು

೩.೧.೧. ರಾಜ

ರಾಜ್ಯದ ಆಡಳಿತವನ್ನು ಸುವ್ಯವಸ್ಥಿತವಾಗಿ ನಡೆಸಿಕೊಂಡು ಹೋಗಲು ಆಡಳಿತ ವರ್ಗದವರ ಪಾತ್ರ ಮುಖ್ಯವಾದುದು. ಆಡಳಿತ ವರ್ಗದಲ್ಲಿ ಪ್ರಧಾನ ಪಾತ್ರವನ್ನು ವಹಿಸುವ ರಾಜರು ಆಡಳಿತದ ಇತರ ವಿಷಯಗಳಿಗೆ ನೀಡಿದಷ್ಟೇ ಪ್ರಾಮುಖ್ಯತೆಯನ್ನು ತಾವು ಧರಿಸುವ ವಸ್ತ್ರ ಮತ್ತು ಆಭರಣಗಳಿಗೆ ನೀಡುತ್ತಿದ್ದುದು ಗಮನಾರ್ಹ. ಈ ಕುರಿತು ಹೆಚ್ಚಿನ ಮಾಹಿತಿ ಲಭಿಸುವುದು ವಿದೇಶಿ ಪ್ರವಾಸಿಗರ ಬರಹಗಳಿಂದ. ಕಾರಣ ಬೇರಾವ ರಾಜಮನೆತನಗಳ ಆಳ್ವಿಕೆಯ ಕಾಲದಲ್ಲಿ ಭೇಟಿ ನೀಡದಷ್ಟು ವಿದೇಶಿ ಪ್ರವಾಸಿಗರು ವಿಜಯನಗರಕ್ಕೆ ಭೇಟಿ ನೀಡಿ, ತಾವು ಸ್ವತಃ ಕಂಡು, ಕೇಳಿದ ಸಂಗತಿಗಳನ್ನು ಮನದಣಿಯೆ ದಾಖಲಿಸಿದ್ದಾರೆ. ಇದರಿಂದ ವಿದೇಶಿಯರ ವೇಷಭೂಷಣದ ಪ್ರಭಾವ ಅರಸರ ಮೇಲೆ ಎಷ್ಟರಮಟ್ಟಿಗೆ ಆಗಿತ್ತೆಂಬುದು ಗಮನೀಯ ಅಂಶ. ವಿಜಯನಗರವನ್ನು ಆಳ್ವಿಕೆ ಮಾಡಿದ ಶ್ರೇಷ್ಠ ದೊರೆಗಳಲ್ಲಿ ಎರಡನೇ ದೇವರಾಯ, ಶ್ರೀಕೃಷ್ಣದೇವರಾಯ, ಅಚ್ಯುತರಾಯ ಮತ್ತು ರಾಮರಾಯರು ಪ್ರಮುಖರು.

ರಾಯವಾಚಕಮುದಲ್ಲಿ ರಾಜನು ಹೇಗಿರಬೇಕು ಎಂಬುದರ ಬಗ್ಗೆ ತಿಳಿಸಿದೆ. ರಾಜನೆಂದರೆ ಸಭಾಪತಿ ಅವನು ಹೇಗಿರಬೇಕೆಂದರೆ;

ತರುಣನಾಗಿ ನವರತ್ನ
ಭರಣನಾಗಿ ಗಂಧ ಪುಷ್ಪ ಪರಿಮಳಯುತನಾಗಿ
ನರನಾಯಕ ಪರಿವೃತನಾಗಿ
ಆಸೀನನಾದವನೇ ಸಭಾಪತಿಯೆನಿಸುವನ್ನೈ[೧]

ದಕ್ಷಿಣ ಭಾರತದ ಚರಿತ್ರೆಯಲ್ಲಿ ವಿಜಯನಗರ ಸಾಮ್ರಾಜ್ಯವು ವಸ್ತ್ರ ಮತ್ತು ಆಭರಣಗಳ ಮಟ್ಟಿಗೆ ಹೇಳುವುದಾದರೆ 'ಸುವರ್ಣಯುಗ'ವಾಗಿತ್ತು. ಚಿನ್ನ, ಮುತ್ತು, ರತ್ನ, ಪಚ್ಚೆ ಮತ್ತು ವಜ್ರ ವೈಢೂರ್ಯಗಳನ್ನು ರಸ್ತೆಯ ಬದಿಗಳಲ್ಲಿ ಅಳೆದು ಮಾರುತ್ತಿದ್ದರು ಎಂಬ ಸಂಗತಿಯನ್ನು ಅಬ್ದುರ್ ರಜಾಕ್‌ನಿಂದ ತಿಳಿದು ಬರುತ್ತದೆ.[೨] ಅಲ್ಲದೆ ರಾಜರು ಬಹಳಷ್ಟು ಹಣವನ್ನು ತಮ್ಮ ವಸ್ತ್ರ ಮತ್ತು ಆಭರಣಗಳಿಗೆ ಖರ್ಚು ಮಾಡುತ್ತಿದ್ದರು. ಇದಕ್ಕೆ ಪುಷ್ಟಿಯೆಂಬಂತೆ ಆಮುಕ್ತಮಾಲ್ಯದಲ್ಲಿ ಹೇಳಿರುವಂತೆ ರಾಜ್ಯಾದಾಯವನ್ನು ನಾಲ್ಕು ಭಾಗ ವಿಂಗಡಿಸಿ ಅದರಲ್ಲಿ ಒಂದು ಭಾಗವನ್ನು ರಾಜ ತನ್ನ ಭೋಗಾದಿಗಳಿಗೆ ಬಳಸಬಹುದು ಎಂದು ಹೇಳಿದೆ. ಪರ್ಷಿಯಾದ ರಾಯಭಾರಿ ಅಬ್ದುರ್ ರಜಾಕ್‌ನು ಎರಡನೇ ದೇವರಾಯನ ಕಾಲದಲ್ಲಿ ವಿಜಯ ನಗರಕ್ಕೆ ಭೇಟಿ ನೀಡಿದ್ದನು. ಆ ಸಂದರ್ಭದಲ್ಲಿ ಎರಡನೇ ದೇವರಾಯ ಧರಿಸಿದ್ದ ವಸ್ತ್ರ ಮತ್ತು ಆಭರಣಗಳ ಬಗೆಗೆ ತಿಳಿಸುತ್ತಾ, "ತಾನು ರಾಜನನ್ನು ಭೇಟಿಯಾದ ಸಂದರ್ಭ ದಲ್ಲಿ ರಾಜನಿಗೆ ಸುಂದರವಾದ ಕುದುರೆಗಳನ್ನು, ಬೆಲೆಯಾದ ಡಮಾಸ್ಕ್ ಮತ್ತು ಸ್ಯಾಟೀನ್ ಬಟ್ಟೆಗಳ ಥಾನುಗಳನ್ನು ಅರ್ಪಿಸಿದನು, ಮುಂದುವರೆಸಿ, ಆ ಸಂದರ್ಭದಲ್ಲಿ ರಾಜನು ಹಸಿರು ಬಣ್ಣದ ಸ್ಯಾಟೀನ್ ಬಟ್ಟೆಯನ್ನು ಧರಿಸಿದ್ದನು. ಚಿನ್ನದಿಂದ ಕಸೂತಿ ಕೆಲಸ ಮಾಡಿದ್ದ ಬಜರೀಸ್ ಎಂಬ ಉದ್ದನೆಯ ಅಂಗಿಯನ್ನು ಧರಿಸಿದ್ದ ಹಾಗೂ ಅವನು ಧರಿಸಿದ್ದ ಕುಲಾಯಿ ಆರರಿಂದ ಎಂಟು ಡಯಾಮೀಟರ್ ಅಳತೆಯದಾಗಿತ್ತು[೩] ಎಂದು ಹೇಳುತ್ತಾನೆ. ರಾಜ ಕೊರಳಸುತ್ತ ವಜ್ರ, ವೈಢೂರ್ಯ ಮತ್ತು ಮುತ್ತುಗಳ ಕೊರಳ ಪಟ್ಟಿಯನ್ನು ಹಾಕಿಕೊಂಡಿ ದ್ದನು.[೪] ಆ ಅಚ್ಚು ಮುತ್ತಿನ ಹಾರದ ಬೆಲೆಯನ್ನು ಕಟ್ಟಲು ಸರಾಫರಿಗೂ ಸಾಧ್ಯವಿಲ್ಲವೇನೊ! ಎಂದು ಹೇಳುತ್ತಾನೆ.[೫] ರಜಾಕ್ ಹಾಗೆಯೇ ಮುಂದುವರೆದು ವಿಜಯನಗರ ಸಾಮ್ರಾಜ್ಯದ ಸುವರ್ಣ ಸಂಪತ್ತನ್ನು ಕುರಿತು, "ರಾಜನು ಅರಮನೆಯ ನೆಲಮಾಳಿಗೆಯಲ್ಲಿ ಚಿನ್ನದ ಗಟ್ಟಿಗಳನ್ನು ರಾಶಿ ಹಾಕಿದ್ದಾನೆ. ಈ ದೇಶದ ಪ್ರತಿಯೊಬ್ಬ ನಿವಾಸಿಯೂ, ಅವನು ಮೇಲ್ತರಗತಿಯವನಿರಲಿ ಅಥವಾ ಸಾಮಾನ್ಯನಿರಲಿ, ಕೊನೆಗೆ ಅಂಗಡಿಯ ಬದಿಯಲ್ಲಿ ಕೆಲಸ ಮಾಡುವವರು ಸಹ ಕೊರಳು, ಕೈ, ತೋಳು ಮತ್ತು ಬೆರಳುಗಳಲ್ಲಿ ಮುತ್ತುಗಳನ್ನೋ, ರತ್ನಖಚಿತವಾದ ಬೆಲೆಯುಳ್ಳ ಒಡವೆಗಳನ್ನೋ ಧರಿಸಿರುತ್ತಾರೆ"[೬] ಎಂದು ಹೇಳಿರುವನು. ಇದರಿಂದ ಆ ಕಾಲದ ಶ್ರೀಸಾಮಾನ್ಯರ ಆಭರಣ ಪ್ರಿಯತೆ ಅರ್ಥವಾಗುತ್ತದೆ.

ಪಾಯೇಸ್‌ನು ಶ್ರೀಕೃಷ್ಣದೇವರಾಯನ ಕಾಲದಲ್ಲಿ ವಿಜಯನಗರಕ್ಕೆ ಭೇಟಿ ನೀಡಿದ್ದು, ತಾನು ಸ್ವತಃ ರಾಯನನ್ನು ಕಂಡಿದ್ದನು. ಅವನು ರಾಯನ ದಿನಚರಿಯ ಕುರಿತು, "ಕೃಷ್ಣದೇವರಾಯನು ನಿತ್ಯವೂ ಬೆಳಕು ಹರಿಯುವ ಮುನ್ನ ಒಂದಿಷ್ಟು ಎಳ್ಳೆಣ್ಣೆಯನ್ನು ಕುಡಿದು ಮೈಗೂ ತಿಕ್ಕಿಸಿಕೊಳ್ಳುತ್ತಾನೆ. ವಸ್ತ್ರಗಳನ್ನು ತೆಗೆದು ಬರೀ ಚಡ್ಡಿ ಹಾಕಿಕೊಂಡು ಕಸರತ್ತು ಮಾಡುತ್ತಾನೆ".[೭] ಇದನ್ನು ಶ್ರೀಕೃಷ್ಣದೇವರಾಯನ ದಿನಚರಿಯಲ್ಲೂ ಕಾಣಬಹುದು. ಇದರಿಂದ ರಾಜನು ವ್ಯಾಯಾಮ ಮಾಡುವಾಗ ಧರಿಸಿದ್ದ ವಸ್ತ್ರದ ಸ್ಪಷ್ಟ ಚಿತ್ರಣ ದೊರೆಯುತ್ತದೆ.

ರಾಯನೇ ಬರೆದಿರುವ ಆಮುಕ್ತಮಾಲ್ಯದಲ್ಲಿ ಹೀಗೆ ಹೇಳಿದೆ, "ವಿಜಯನಗರದ ರಾಜರು ಅಲಂಕಾರ ಮಾಡಿಕೊಳ್ಳುವುದಕ್ಕೆ ಬಹಳ ಇಷ್ಟಪಡುತ್ತಿದ್ದರು. ಪನ್ನೀರಿನಲ್ಲಿ ಕಸ್ತೂರಿ ಬೆರೆಸಿ ಮೈಗೆ

ಲೇಪಿಸಿಕೊಳ್ಳುತ್ತಿದ್ದರು. ರಾಜನು ಸ್ನಾನದ ನಂತರ ಕೆಂಪು ಅಂಚಿನ ಬಿಳಿಯ ಧೋತ್ರಗಳನ್ನುಟ್ಟು ಕೊಳ್ಳುತ್ತಿದ್ದ ಹಾಗೂ ಕಿವಿಗಳಿಗೆ ದೊಡ್ಡ ಕಡಕುಗಳನ್ನು, ಕಂಠದಲ್ಲಿ ಮುತ್ತಿನ ಹಾರಗಳನ್ನು ಧರಿಸಿಕೊಳ್ಳುತ್ತಿದ್ದ".[೯] ಹಾಗೆಯೇ ಮುಂದುವರಿಸುತ್ತಾ ರಾಜನ ದಿನಚರಿಯ ಕುರಿತು ಆಮುಕ್ತ ಮಾಲ್ಯದಲ್ಲಿ ಹೀಗೆ ಹೇಳಿದೆ, "ರಾಜನು ಉಜ್ವಲವಾಗಿ ಬೆಳಗಲು ಯಾವಾಗಲೂ ಒಂದು ಉತ್ತಮ ಮಣಿಯನ್ನು ಧರಿಸಿರಬೇಕು. ಇದೂ ಅಲ್ಲದೇ ವಿವಿಧ ಶ್ರೇಷ್ಠಮಣಿಗಳಿಂದ ಕೂಡಿದ ಕಂಠಾಭರಣವನ್ನು ಪೀಡೆ ನಿವಾರಣೆಗಾಗಿ ಧರಿಸುವುದು ಒಳ್ಳೆಯದು, ಹಾಗೆಯೇ ಮುಂದುವರೆಸುತ್ತಾ ಮಹಾಕುರ್ಪಸ ಅಂದರೆ ನಿಲುವಂಗಿ, ಕುಲಾಯಿ, ರುಮಾಲು, ಪಾದಗಳವರೆಗೂ ಚಲ್ಲಣಗಳು ಹಾಗೂ ಉತ್ತರೀಯ ನಡುಕಟ್ಟುಗಳು ಇವು ರಾಜರ ವೇಷಭೂಷಣಗಳಾಗಿದ್ದವು ಎಂದು ತಿಳಿಸಿದೆ".[೧೦] ಇದರಿಂದ ರಾಜನ ಆಭರಣಧಾರಣೆಯು ಅಲಂಕರಣೆ, ಆಸಕ್ತಿ, ಶ್ರೀಮಂತಿಕೆಗಷ್ಟೇ ಅಲ್ಲದೇ ಶ್ರೇಯಸ್ಸಿಗೋಸ್ಕರ ವಾಗಿಯೂ ಧರಿಸುವುದು ಅಗತ್ಯವಾಗಿತ್ತು ಎಂಬುದು ಸ್ಪಷ್ಟವಾಗುತ್ತದೆ.

ಪಾಯೇಸ್ ರಾಜನನ್ನು ಭೇಟಿ ಮಾಡಿದ್ದ ಸಮಯದಲ್ಲಿ, "ಶ್ರೀಕೃಷ್ಣದೇವರಾಯನು ಜರತಾರಿಯ ಚಿನ್ನದ ಎಳೆಗಳಿಂದ ಗುಲಾಬಿ ಹೂಗಳ ಕಸೂತಿ ಹಾಕಿ ಅಲಂಕರಿಸಿದ ಪದರು ಪದರಿನ ಬಿಳಿ ರೇಷ್ಮೆಯ ವಸ್ತ್ರಗಳನ್ನು ತೊಟ್ಟು, ಕೊರಳಲ್ಲಿ ಬಹುಬೆಲೆಯಾದ ವಜ್ರಗಳ ಪದಕವನ್ನು, ತಲೆಯ ಮೇಲೆ ರೇಷ್ಮೆ ಹಾಗೂ ಕಿಂಕಾಪಿನ ಗೆಲಿಸಿಯನ್ ಪಾಗನ್ನು ಧರಿಸಿದ್ದನು. ಕಾಲಿಗೆ ಪಾದರಕ್ಷೆಗಳಿರಲಿಲ್ಲ. ರಾಜನ ಬಳಿ ಯಾರು ಪಾದರಕ್ಷೆಗಳನ್ನು ಹಾಕಿಕೊಂಡು ಹೋಗುವಂತಿರಲಿಲ್ಲ".[೧೧] ಹಾಗೆಯೇ ರಾಜನು ಧರಿಸಿದ್ದ ಆಭರಣಗಳನ್ನು ಕುರಿತು, "ರಾಜನ ಕಿರೀಟ ಚಿನ್ನದಿಂದ ಮಾಡಲ್ಪಟ್ಟಿದ್ದು ಎರಡು ಸ್ಪ್ಯಾನ್‌ಗಳ ಉದ್ದವಿದೆ" ಎಂದು ಹೇಳಿರುವನು. ಇಂತಹ ಕುಲಾಯಿಯನ್ನು ಲೇಪಾಕ್ಷಿಯ ವರ್ಣಚಿತ್ರಗಳಲ್ಲಿ ಹಾಗೂ ಹಂಪಿಯ ಶಿಲ್ಪ ಗಳಲ್ಲಿಯೂ ಗಮನಿಸಬಹುದು. ಪಾಯೇಸ್ ಹಾಗೆಯೇ ಮುಂದುವರೆಸುತ್ತಾ, "ರಾಜನ ಕಂಠದ ಸುತ್ತ ಬೆಲೆಬಾಳುವ ಚಿನ್ನದ ಕುಸುರಿ ಕೆಲಸದ ವಜ್ರ, ರೂಬಿ, ಮುತ್ತುಗಳ ಹಾರ, ಹಲವಾರು ಎಳೆಗಳಿಂದ ಕೂಡಿದ ಮುತ್ತಿನಸರ; ಮತ್ತು ಭುಜಬಂಧಿ, ಬಾಹುಬಂಧಿಗಳು, ಕಂಕಣ, ಇವುಗಳು ಬೆಲೆಬಾಳುವ ಹರಳುಗಳಿಂದ ಕೂಡಿದ್ದು ಒಂದೇ ವಿನ್ಯಾಸದವಾಗಿದ್ದವು; ಸೊಂಟಪಟ್ಟಿಯು ಚಿನ್ನ ಮತ್ತು ಹರಳುಗಳಿಂದ ಕೂಡಿದ್ದು ಒಂದರ ಕೆಳಗೆ ಒಂದರಂತೆ ಹಲವಾರು ಎಳೆಗಳಿಂದ ಮಾಡಿದವುಗಳಾಗಿದ್ದು, ಒಂದರ ಕೆಳಗೆ ಒಂದರಂತೆ ಇಳಿಬಿದ್ದಿದ್ದವು; ಬೆಲೆಬಾಳುವ ಮುತ್ತುಗಳಿಂದ ತಯಾರಾದ ಕಾಲ್ಕಡಗ ಬೇರೆಲ್ಲವುಗಳಿಗಿಂತ ಬೆಲೆಬಾಳುವ ಆಭರಣವಾಗಿತ್ತು"[೧೨] ಎಂದು ವಿವರಿಸಿರುವನು.

ಶ್ರೀಕೃಷ್ಣದೇವರಾಯನ ಕಾಲದಲ್ಲಿ ಭೇಟಿ ನೀಡಿದ್ದ ಪೋರ್ಚುಗೀಸ್ ರಾಯಭಾರಿ ಫಿಗ್ಯೆರೆಡೋ "ರಾಜನು ತಮ್ಮ ನಾಯಕನಿಗೆ(ಫಿಗ್ಯೆರೆಡೋ) ಕಿಂಕಾಪಿನ ಅಂಗಿಯನ್ನು, ತಾನು ಧರಿಸಿದ್ದಂತಹ ತಲೆಯುಡಿಗೆಯನ್ನು ಕೊಟ್ಟು ಸತ್ಕರಿಸಿ ಬೀಳ್ಕೊಟ್ಟನು. ಪ್ರತಿಯೊಬ್ಬ ಪೋರ್ಚುಗೀಸನಿಗೂ ಸುಂದರವಾದ ಚಿತ್ರಗಳಿದ್ದ ಮುಗುಟಗಳನ್ನು ಕೊಟ್ಟನು"[೧೩] ಎಂದು ಹೇಳುತ್ತಾ ಅದನ್ನು ನೀಡಿದ್ದು ಇಲ್ಲಿನ ಪದ್ಧತಿ ಹಾಗೂ ಸ್ನೇಹ ಮತ್ತು ಪ್ರೀತಿಗಾಗಿ ಎಂಬ ವಾಸ್ತವ ಅಂಶವನ್ನು ಪಾಯೇಸ್ ಬಿಂಬಿಸುತ್ತಾನೆ.

ಶ್ರೀಕೃಷ್ಣದೇವರಾಯನು ಹಂಪಿಯ ಹಜಾರರಾಮಸ್ವಾಮಿ ದೇವಾಲಯದ ದೇವರ ಸೇವೆಗಾಗಿ

ಒಂದು ವಿಶೇಷ ಉತ್ಸವವನ್ನು ಏರ್ಪಡಿಸಿದ್ದನು. ಆಸ್ಥಾನ ಕವಿಯಿಂದ ರಚಿಸಲ್ಪಟ್ಟ ಪಾರಿಜಾತ ಹರಣಮು ಕವಿತೆಯನ್ನಾಧರಿಸಿದ ಒಂದು ನೃತ್ಯ ಪ್ರದರ್ಶನವನ್ನು ಏರ್ಪಡಿಸಲಾಗಿತ್ತು. ದುರ್ಗಾವತಿ ಎಂಬ ವಾರಂಗನೆಯು ಸತ್ಯಭಾಮಳ ಪಾತ್ರವನ್ನು ನಿರ್ವಹಿಸಿದ್ದಳು. ಅವಳ ನಾಟ್ಯಕ್ಕೆ ಮೆಚ್ಚಿ ಬಹುಮಾನವಾಗಿ ಕೃಷ್ಣದೇವರಾಯನು ಬಹಳ ದುಬಾರಿಯಾದ ವಜ್ರಗಳಿಂದ ಅಲಂಕರಿಸಿದ ಚಿನ್ನದ ಸೊಂಟಪಟ್ಟಿಯನ್ನೇ ಕೊಡುಗೆಯಾಗಿ ನೀಡಿದ್ದನು.[೧೪] ರಾಜ ಬಹುಶಃ ತಾನು ಧರಿಸಿದ್ದ ಸೊಂಟಪಟ್ಟಿಯನ್ನೇ ಕೊಡುಗೆಯಾಗಿ ನೀಡಿರುವ ಸಾಧ್ಯತೆಯಿದೆ. ಇದರಿಂದ ರಾಜರು ಸದಾ ಆಭರಣಗಳನ್ನು ಧರಿಸಿದ್ದರು, ಅದು ಅಲಂಕರಣೆಗಷ್ಟೇ ಅಲ್ಲದೇ ಕೆಲವೊಮ್ಮೆ ಕೊಡುಗೆಗಳಾಗಿ ನೀಡಲು ಬಳಸುತ್ತಿದ್ದರು ಎಂಬುದು ಗಮನಾರ್ಹ ಸಂಗತಿ.

ಶ್ರೀಕೃಷ್ಣದೇವರಾಯನು ರಾಯಚೂರು ದಂಡಯಾತ್ರೆಯನ್ನು ಕೈಗೊಂಡ ಸಂದರ್ಭದಲ್ಲಿ ಯುದ್ಧಕ್ಕೆ ಮುನ್ನ ಹಾಕಿದ್ದ ಶಿಬಿರವನ್ನು ನ್ಯೂನಿಜ್ ಹೀಗೆ ವಿವರಿಸುತ್ತಾನೆ. "ಇವರ ಅಂಗಡಿಗಳೊಂದಿಗೆ ಚಿನ್ನದ ಒಡವೆಗಳನ್ನು, ವಜ್ರವೈಢೂರ್ಯ ಮತ್ತು ಮಾಣಿಕ್ಯಗಳನ್ನು ಮಾರುವ ಅಂಗಡಿಗಳೇ ಇದ್ದವು" ಎಂದು ಹೇಳುತ್ತಾನೆ.[೧೫] ಈ ಮೂಲಕ ವಿಜಯನಗರದ ಜನತೆ ಎಷ್ಟರಮಟ್ಟಿಗೆ ಆಭರಣ ಪ್ರಿಯರಾಗಿದ್ದರು ಎಂಬುದನ್ನು ತಿಳಿಯಬಹುದು. "ಅದೇ ಯುದ್ಧದ ಸಂದರ್ಭದಲ್ಲಿ ಕೃಷ್ಣದೇವರಾಯನು ತನ್ನ ಬೆರಳಿನಿಂದ ಒಂದು ಉಂಗುರವನ್ನು ಬಿಚ್ಚಿ ತನ್ನ ಸೇವಕನೊಬ್ಬನಿಗೆ ಕೊಟ್ಟು, ತಾನು ಸತ್ತರೆ ಅದನ್ನು ತನ್ನ ರಾಣಿಯರಿಗೆ ತೋರಿಸಬೇಕೆಂದೂ, ಅದನ್ನು ನೋಡಿ ಅವರು ಚಿತೆಯೇರುವರೆಂದೂ ಹೇಳಿದನು".[೧೬] ಇದರಿಂದ ಆ ಉಂಗುರದ ಮಹತ್ವವು ಅರಿವಾಗುತ್ತದೆ. ಬಹುಶಃ ಸೈನಿಕರನ್ನು ಪ್ರೇರೇಪಿಸುವ ಉದ್ದೇಶದಿಂದಲು ಹಾಗೇ ಮಾಡಿರುವ ಸಾಧ್ಯತೆಯನ್ನು ಅಲ್ಲಗಳೆಯಲಾಗದು. ಅಲ್ಲದೆ ರಾಜ ಮನೆತನದಲ್ಲಿಯೂ ಸತಿಪದ್ಧತಿ ಆಚರಣೆಯಲ್ಲಿತ್ತು ಎಂಬುದು ಇದರಿಂದ ಸ್ಪಷ್ಟವಾಗುತ್ತದೆ.

ರಾಯವಾಚಕಮು ಕೃತಿಯು ಕೃಷ್ಣದೇವರಾಯ ಧರಿಸಿದ್ದ "ಬೆಣ್ಣೆಮುದ್ದೆ ಕಂಠಮಾಲೆ, ನವರತ್ನದ ಶುಕತಾಳಿ, ವೈಢೂರ್ಯಮಾಲೆ, ವಜ್ರದ ಸರಪಳಿ, ಮರಕತ ಕಂಕಣ, ಹುರುಮಂಜಿ, ಮುತ್ತಿನ ಪಚ್ಚೆಯಸರ ಇಂದ್ರನೀಲ ಮುಕುಟ, ವಜ್ರದ ಪದಕದ ಉಡುದಾರ, ಕೆಂಪಿನಸರ, ಮುತ್ತಿನ ಕಾಲ್ಗಡಗ, ವಜ್ರದ ಬಾಹುಬಂದಿ, ದೊಡ್ಡಮುತ್ತಿನ ಅಡ್ಡಗತ್ತಿ, ನವರತ್ನಖೇಡ, ನವರತ್ನದ ಸಿಂಹಲಲಾಟ, ಮುತ್ತಿನ ಪಗುರ" ಇನ್ನು ಮುಂತಾದ ಹದಿನಾರು ಅಮೂಲ್ಯ ಆಭರಣಗಳ ಪಟ್ಟಿಯನ್ನೇ ನೀಡುತ್ತದೆ. ಇದೇ ವಿಷಯವು ಶ್ರೀಕೃಷ್ಣ ದೇವರಾಯನ ದಿನಚರಿಯಲ್ಲಿಯೂ ಉಲ್ಲೇಖವಾಗಿದೆ. ಅಲ್ಲದೇ ಒರಿಸ್ಸಾದ ಗಜಪತಿಯನ್ನು ಸೋಲಿಸಲು ಅವನಿಂದ ಅವನ ಷೋಡಷ ಪಾತ್ರರನ್ನು ಬೇರೆ ಮಾಡಲು ಈ ಆಭರಣಗಳನ್ನು ಅಸ್ತ್ರಗಳಾಗಿ ಬಳಸಿದನು ಎಂಬುದು ಗಮನಿಸಬೇಕಾದ ಅಂಶವಾಗಿದೆ.[೧೭] ರಾಜರ ಆಭರಣಗಳ ಧಾರಣೆಯು ಶ್ರೀಮಂತಿಕೆ, ಆಸಕ್ತಿ, ಆಭಿರುಚಿ, ತೋರಿಕೆ, ಬಹುಮಾನವಾಗಿ ನೀಡುವುದಲ್ಲಷ್ಟೇ ಅಲ್ಲದೇ ವಿಜಯ ಸಾಧನೆಗಾಗಿ ಭೇದೋಪಾಯ ಮಾರ್ಗವಾಗಿಯೂ ಬಳಕೆಯಾಗಿದೆ.

ಮೇಲಿನ ವಿವರಣೆಗಳು ರಾಜನಾಗಿದ್ದಾಗ ಧರಿಸಿದ್ದ ವಸ್ತ್ರ ಮತ್ತು ಆಭರಣಗಳ ಕುರಿತು ಚಿತ್ರಣ ನೀಡುತ್ತದೆ. ರಾಜ ದೇವರ ಭಕ್ತನಾಗಿದ್ದಾಗ ಅವನ ವೇಷಭೂಷಣ ಸಾಧಾರಣವಾಗಿ ರುತ್ತಿದ್ದವು ಎಂಬುದಕ್ಕೆ ಉತ್ತಮ ಉದಾಹರಣೆಯಾಗಿ ತಿರುಪತಿಯ ವೆಂಕಟೇಶ್ವರ

ದೇವಾಲಯದಲ್ಲಿರುವ ಕೃಷ್ಣದೇವರಾಯ ಮತ್ತು ಆತನ ರಾಣಿಯರ ಕಂಚಿನ ಪ್ರತಿಮೆಗಳಿಂದ ತಿಳಿಯಬಹುದು. ಈ ಪ್ರತಿಮೆಯಲ್ಲಿ ರಾಜ ಭಕ್ತನಾಗಿ ಕೈಮುಗಿದು ನಿಂತಿದ್ದು, ಅವನು ಧರಿಸಿರುವ ಧೋತಿ ನೆರಿಗೆಗಳಿಂದ ಕೂಡಿದ್ದು, ಮೊಣಕಾಲಿನವರೆಗೆ ಇದೆ. ಉತ್ತರೀಯವನ್ನು ಕಟಿ ಭಾಗದಲ್ಲಿ ಕಟ್ಟಿದ್ದಾನೆ. ದೇಹದ ಮೇಲ್ಭಾಗ ಬೆತ್ತಲೆಯಾಗಿದೆ. ಅಲ್ಲದೆ ಉದ್ದನೆಯ ಕುಲಾಯಿ ಧರಿಸಿದ್ದು, ಕಿವಿಗೆ ಸಣ್ಣಗಾತ್ರದ ಕುಂಡಲಗಳು, ಮಧ್ಯದಲ್ಲಿ ಪದಕವಿರುವ ದ್ವಿಸರವನ್ನು ಕಂಠದಲ್ಲಿ ಧರಿಸಿದ್ದಾನೆ. ತೋಳ್ಬಂದಿ ಮತ್ತು ಮುಂಗೈಗಳಿಗೆ ಎರಡೆಳೆಯಿಂದ ಕೂಡಿದ ಹಾಗೂ ಒಂದೇ ಮಾದರಿಯಿರುವ ಕಟಕವಲಯ ಅಥವಾ ಕಂಕಣಗಳನ್ನು ಧರಿಸಿದ್ದಾನೆ. ಧೋತಿಯ ಮೇಲೆ ಸೊಂಟಪಟ್ಟಿ ಮತ್ತು ಮೂರೆಳೆಯ ಕಟಿಸೂತ್ರವನ್ನು ಧರಿಸಿದ್ದು, ಇದು ಹಲವಾರು ಸರಗಳಿಂದ ತೂಗಿಬಿದ್ದಿರುವಂತೆ ಅಲಂಕರಣೆಗೊಂಡಿದೆ. ಇದರೊಂದಿಗೆ ಕಾಲ್ಗಡಗವನ್ನು ಗಮನಿಸಬಹುದು. ಹೀಗೆ ರಾಜ ಒಬ್ಬ ಭಕ್ತನಾಗಿದ್ದಾಗ ಅವನ ವೇಷಭೂಷಣಗಳು ವಿಭಿನ್ನವಾಗಿರುತ್ತಿದ್ದವು ಎಂಬ ಅಂಶ ತಿಳಿಯಲು ಈ ಪ್ರತಿಮೆ ಉತ್ತಮ ಆಕರವಾಗಬಲ್ಲದು.

ಪೋರ್ಚುಗೀಸ್ ಪ್ರವಾಸಿಯಾದ ನ್ಯೂನಿಜ್ ಅಚ್ಯುತದೇವರಾಯನ ಕಾಲದಲ್ಲಿ ವಿಜಯನಗರಕ್ಕೆ ಭೇಟಿ ನೀಡಿದ್ದನು. ಇವನ ಬರವಣಿಗೆಯೂ ರಾಜರ ವಸ್ತ್ರ ಮತ್ತು ಆಭರಣಗಳ ಬಗೆಗೆ ಬೆಳಕು ಚೆಲ್ಲುತ್ತದೆ. ನ್ಯೂನಿಜ್, "ರಾಜನು ಯಾವುದೇ ವಸ್ತ್ರವನ್ನು ಒಮ್ಮೆಗಿಂತ ಹೆಚ್ಚು ಸಲ ಧರಿಸುವುದಿಲ್ಲ. ಅದನ್ನು ತೆಗೆದಾಗ ಆ ಕರ್ತವ್ಯವನ್ನು ಹೊಂದಿದ ಕೆಲವು ಅಧಿಕಾರಿಗಳಿಗೆ ಅದನ್ನು ಕೊಡುತ್ತಾನೆ. ಅವರು ಲೆಕ್ಕ ಕೊಡುತ್ತಾರೆ; ಈ ವಸ್ತ್ರಗಳನ್ನು ಎಂದೂ ಯಾರಿಗೂ ಕೊಡಲಾಗುವುದಿಲ್ಲ. ಇದನ್ನು ದೊಡ್ಡ ಘನತೆಯ ಕುರುಹೆಂದು ಪರಿಗಣಿಸಲಾಗುತ್ತದೆ. ಅವನ ಬಟ್ಟೆಗಳು ಚಿನ್ನದ ಎಳೆಯಿಂದ ಜರತಾರಿ ಹಾಕಿದ ರೇಷ್ಮೆಯ ಅರಿವೆಗಳಾಗಿರುತ್ತವೆ. ಪ್ರತಿಯೊಂದು ಹತ್ತು ಪಾರ್ದಾ ಬೆಲೆಯುಳ್ಳದ್ದಾಗಿರುತ್ತವೆ. ಅವರು ಕೆಲವೊಮ್ಮೆ ಅದೇ ತರಹದ ಬಾಜುರಿಗಳನ್ನು ಧರಿಸುತ್ತಾರೆ. ಅವು ಅಂಚುಗಳಿದ್ದ ಅಂಗಿಗಳಂತಿ ರುತ್ತವೆ. ತಲೆಯ ಮೇಲೆ ಕಿಂಕಾಪಿನ ಕುಲಾಯಿಯನ್ನು ಧರಿಸುತ್ತಾರೆ. ಅದು ಬಹು ಬೆಲೆಯುಳ್ಳದ್ದಾಗಿದೆ. ಇವುಗಳಲ್ಲೊಂದು ಸುಮಾರು ಇಪ್ಪತ್ತು ಕ್ರುಜೆಡೊಗಳಷ್ಟು ಬೆಲೆಯುಳ್ಳ ದ್ದಾಗಿದೆ. ಅವನು ಒಂದು ಸಲ ತಲೆಯ ಮೇಲಿಂದ ತೆಗೆದ ಕುಲಾಯಿಯನ್ನು ಮತ್ತೊಮ್ಮೆ ಧರಿಸುವುದಿಲ್ಲ".[೧೮] ನ್ಯೂನಿಜ್ ರಾಜನ ಆಭರಣದ ಕುರಿತು, "ಪದಕವಿರುವ ಕಂಠೀಹಾರ, ಅವನ ಕಿರೀಟವು ಶ್ರೇಷ್ಠದರ್ಜೆಯ ರತ್ನಗಳಿಂದ ಮಾಡಲ್ಪಟ್ಟಿತ್ತು".[೧೯] ಹಾಗೇ ಮುಂದುವರೆ ಸುತ್ತಾ ಅಚ್ಯುತರಾಯನ ಉಂಗುರದ ಬಗೆಗೆ ಹೇಳುತ್ತಾ, "ರಾಜನು ಲಿಖಿತವಾದ ಆಜ್ಞೆಗಳನ್ನು ಹೊರಡಿಸುವುದಿಲ್ಲ, ದಾನಧರ್ಮ ಮಾಡಿದರೆ ಅದೂ ಲಿಖಿತ ರೂಪದಲ್ಲಿರುವುದಿಲ್ಲ. ಅವೆಲ್ಲವೂ ಭಕ್ಷಿಗಳ ಪುಸ್ತಕಗಳಲ್ಲಿ ಬರೆಯಲ್ಪಟ್ಟಿರುತ್ತವೆ. ಆದರೆ ರಾಜನು ಯಾರಿಗೆ ಅನುಗ್ರಹ ತೋರಿಸುತ್ತಾನೋ ಅವರಿಗೆ ಮೇಣದ ಮೇಲೆ ತನ್ನ ಉಂಗುರದ ಮುದ್ರೆಯನ್ನು ಒತ್ತಿಕೊಡುತ್ತಾನೆ. ಈ ಮುದ್ರೆಗಳು ಸ್ವಾಮ್ಯದ ಸನ್ನದುಗಳು ಇದ್ದಂತೆ".[೨೦] ಇದರಿಂದ ಆ ಉಂಗುರ ರಾಜಮುದ್ರೆಯ ಉಂಗುರವೆಂದು ಸ್ಪಷ್ಟವಾಗುತ್ತದೆ.

ಈ ಮೇಲಿನ ವಿವರಣೆಗಳಿಂದ ವಿಜಯನಗರ ಕಾಲದ ರಾಜರು ತಾವು ಧರಿಸುತ್ತಿದ್ದ ವಸ್ತ್ರ

ಮತ್ತು ಆಭರಣಗಳನ್ನು ಆಸಕ್ತಿ, ಅಭಿರುಚಿ ಮತ್ತು ಅಂತಸ್ತಿನ ರೂಪವಾಗಿ ಧರಿಸಿದ್ದರೂ, ಬಹುಮಾನವಾಗಿ ನೀಡಿದ್ದ ಉದಾಹರಣೆಯನ್ನು ಶ್ರೀಕೃಷ್ಣದೇವರಾಯನ ಕಾಲದಲ್ಲಿ ಕಾಣುತ್ತೇವೆ. ಆದರೆ ನ್ಯೂನಿಜ್‌ನ ಬರಹದಿಂದ ಅಚ್ಯುತದೇವರಾಯನ ಕಾಲದ ಹೊತ್ತಿಗೆ ರಾಜನು ಧರಿಸುತ್ತಿದ್ದ ಹಾಗೂ ಒಮ್ಮೆ ಧರಿಸಿ ತೆಗೆದ ವಸ್ತ್ರಗಳನ್ನು ಬೇರಾರಿಗೂ ನೀಡುವುದಿಲ್ಲ ಮತ್ತು ರಾಜ ತೆಗೆದ ವಸ್ತ್ರಗಳನ್ನು ಲೆಕ್ಕವಿಡುವ ಕೆಲಸಕ್ಕಾಗಿ ಅಧಿಕಾರಿಗಳನ್ನು ನೇಮಿಸಿದ್ದರು ಎಂದರೆ ರಾಜನ ವಸ್ತ್ರಗಳು ಎಷ್ಟು ಬೆಲೆಬಾಳುವಂತಹವು ಎಂಬುದು ಅರ್ಥವಾಗುತ್ತದೆ. ಅಲ್ಲದೆ ಅವುಗಳ ಘನತೆಯನ್ನು ಕಾಪಾಡುವ ನಿಟ್ಟಿನಲ್ಲಿ ಬಹುಶಃ ಈ ಕಟ್ಟುನಿಟ್ಟಿನ ಕ್ರಮ ಅಚ್ಯುತದೇವರಾಯ ಅನುಸರಿಸಿರುವ ಸಾಧ್ಯತೆ ಇದೆ.

ಹಂಪಿಯ ಅಚ್ಯುತರಾಯ ದೇವಾಲಯದ ಸ್ತಂಭದ ಮೇಲಿರುವ ಶಿಲ್ಪದಿಂದ (ಚಿತ್ರ–೧) ರಾಜರ ವೇಷಭೂಷಣಗಳನ್ನು ತಿಳಿಯಲು ಸಹಾಯಕವಾಗಿದೆ. ಶಿಲ್ಪವೊಂದ ರಲ್ಲಿರುವಂತೆ ರಾಜ ಉದ್ದವಾದ ನಿಲುವಂಗಿಯನ್ನು ಕತ್ತಿನ ಮೇಲ್ಭಾಗದಿಂದ (ಹೈ–ನೆಕ್) ಮೊಣಕಾಲಿನ ವರೆಗೆ ಧರಿಸಿದ್ದು, ನಿಲುವಂಗಿಯ ತೋಳುಗಳು ಮಣಿಕಟ್ಟಿನವರೆಗೂ ಇವೆ. ನಿಲುವಂಗಿಯ ಮುಂಭಾಗ ತೆರೆದಿದ್ದು ಅದನ್ನು ಹಲವಾರು ಗುಂಡಿಗಳ ಮುಖಾಂತರ ಸೇರಿಸಲಾಗಿದೆ. ಈ ಗುಂಡಿಗಳನ್ನು ಸೇರಿಸುವ ಕ್ರಮ ಕಲಾತ್ಮಕವಾಗಿದ್ದು, ನವೀನ ಮಾದರಿಯಲ್ಲಿದೆ. ನಿಲುವಂಗಿಗೆ ಕತ್ತು ಪಟ್ಟಿ ಇಲ್ಲದಿರುವುದು ವಿಶೇಷ. ಅಲ್ಲದೇ ಆಂಗ್ಲ ಭಾಷೆಯ 'ವಿ' ಅಕ್ಷರದ(V) ಆಕಾರದಲ್ಲಿ ಕತ್ತಿನ ಮುಂಭಾಗವನ್ನು ಕತ್ತರಿಸಿ ಹೊಲಿದಿರುವುದನ್ನು ಕಾಣಬಹುದು. ಉತ್ತರೀಯವು ಕಟಿಯ ಮತ್ತು ಅದರ ಸ್ವಲ್ಪ ಕೆಳಭಾಗದವರೆಗೆ ಎಡಭಾಗದಿಂದ ಸುತ್ತಿ ಕಟಿಯ ಮುಂಭಾಗಕ್ಕೆ ಬಂದು ಎಡ ಮೊಣಕೈ ಮೇಲೆ ವಿಭಿನ್ನ ಶೈಲಿಯಲ್ಲಿ ಹಿಡಿದಿರುವ ಕ್ರಮ ಗಮನಾರ್ಹ. ಅಧೋವಸ್ತ್ರ (ಚಲ್ಲಣಗಳು)ವನ್ನು ಪಾದಗಳವರೆಗೆ ಧರಿಸಿರುವುದನ್ನು ಕಾಣಬಹುದು. ಅಲ್ಲದೇ ಉದ್ದನೆಯ ಕಿರೀಟ, ಕಿರೀಟದ ಮೇಲ್ಭಾಗದ ತುದಿಯ ಹಿಂದೆ ಎರಡು ಸಣ್ಣ ಗೊಂಡೆಗಳು ಹಾಗೂ ಎಡ ಕೆನ್ನೆಯ ಮೇಲೆ ಒಂದು ಗೊಂಡೆ ಇಳಿಬಿದ್ದಿರುವುದನ್ನು ಗಮನಿಸಬಹುದು. ಕುಂಡಲಗಳು (ರಿಂಗ್ ಮಾದರಿಯ), ಕಂಠೀಹಾರ ಹಾಗೂ ಎಲ್ಲಾ ಕೈ ಬೆರಳುಗಳಿಗೂ ಉಂಗುರಗಳನ್ನು ಧರಿಸಿರುವುದು ಕಂಡುಬರುತ್ತದೆ. ಉಳಿದಂತೆ ಇಲ್ಲಿ ವಸ್ತ್ರ ದೇಹಭಾಗವನ್ನೆಲ್ಲಾ ಆವರಿಸಿರುವುದರಿಂದ ಆಭರಣಗಳು ಹೆಚ್ಚು ಕಂಡುಬರುವುದಿಲ್ಲ. ಮತ್ತೊಂದು ಗಮನಿಸಬೇಕಾದ ಅಂಶ ರಾಜನ ಮೀಸೆಯು ದಪ್ಪವಾಗಿದ್ದು, ಗಲ್ಲದ ಭಾಗದವರೆಗೂ ಬೆಳೆಸಿರುವುದು ರಾಜ ಗಾಂಭೀರ್ಯತೆಯನ್ನು ಪ್ರದರ್ಶಿಸುವಂತಿದೆ. ಇಂತಹ ರಾಜನ ಹಾಗೂ ರಾಜ ದರ್ಬಾರಿನ ಶಿಲ್ಪಗಳು ವಿಜಯನಗರ ಕಾಲದಲ್ಲಿ ಹಲವಾರು ಸಿಗುತ್ತವೆ. ಈ ಎಲ್ಲಾ ಶಿಲ್ಪಗಳ ವಸ್ತ್ರ ಧಾರಣೆಯ ಸ್ವರೂಪ ಬಹುತೇಕ ಒಂದೇ ಮಾದರಿಯಲ್ಲಿವೆ. ರಾಜನ ವಸ್ತ್ರದ ಮತ್ತೊಂದು ವಿಶೇಷತೆ ಎಂದರೆ ದೇಹದ ಅಳತೆಗೆ ತಕ್ಕಂತೆ ಕತ್ತರಿಸಿ ಬಿಗಿಯಾಗಿ (ಟೈಟ್ ಫಿಟಿಂಗ್) ಹೊಲಿದ ವಸ್ತ್ರ ಧರಿಸಿರುವುದನ್ನು ಗಮನಿಸಬಹುದು.

ಒಟ್ಟಾರೆಯಾಗಿ ಹೇಳಬೇಕೆಂದರೆ ವಿಜಯನಗರದ ರಾಜರು ಮಹಾಕೂರ್ಪಸ ಅಂದರೆ ನಿಲುವಂಗಿ, ಧೋತ್ರ, ಕುಲಾಯಿ, ಪಾದಗಳವರೆಗೂ ಧರಿಸಿರುವ ಚಲ್ಲಣಗಳು ಹಾಗೂ ಉತ್ತರೀಯ

ನಡುಕಟ್ಟು, ಜರಿತಾರಿ ಹಾಕಿದ ವಸ್ತ್ರಗಳು ಮತ್ತು ಕಿರೀಟ, ಕಂಠೀಹಾರ, ಪದಕಸರ, ವಿವಿಧ ಎಳೆಗಳಿಂದ ಕೂಡಿದ ಮುತ್ತಿನಸರ, ಕುಂಡಲಗಳು, ಸೊಂಟಪಟ್ಟಿ, ಬಾಹುಬಂದಿ, ಕಂಕಣ, ಮುದ್ರೆಯುಂಗುರದ ಜೊತೆಗೆ ಇತರೆ ಹಲವು ಉಂಗುರಗಳನ್ನು ಧರಿಸುತ್ತಿದ್ದರು. ಅವು ಕುಸುರಿ ಕೆಲಸದಿಂದ ಕೂಡಿದ್ದ ಆಭರಣಗಳಾಗಿದ್ದವು. ಈ ರಾಜರು ವಸ್ತ್ರ ಮತ್ತು ಆಭರಣಗಳಿಗೆ ಪರ್ಶಿಯಾದಿಂದ ಡಮಾಸ್ಕ್ ಮತ್ತು ಸ್ಯಾಟೀನ್ ಬಟ್ಟೆ, ಚೀನಾ ಮತ್ತು ಅಲೆಗ್ಸಾಂಡ್ರಿಯಾದಿಂದ ರೇಷ್ಮೆ ಮತ್ತು ಕೆಂಪು ಬಟ್ಟೆ, ಅರೇಬಿಯ, ಓರ್ಮುಜ್ ಮತ್ತು ಕಾಯಲ್‌ಗಳಿಂದ ಮುತ್ತು, ಪೆಗು ಮತ್ತು ಸಿಲೋನ್‌ಗಳಿಂದ ವಜ್ರ ವೈಢೂರ್ಯಗಳು ವಿಜಯನಗರಕ್ಕೆ ಆಮದು ಮಾಡಿಕೊಳ್ಳುತ್ತಿದ್ದರು. ಅರೇಬಿಯಾದಿಂದ ತಂದ ಸಣ್ಣ ಮುತ್ತುಗಳನ್ನು ಕಂಡರೆ ವಿಜಯನಗರದ ರಾಜರಿಗೆ ಬಲುಪ್ರಿಯ ಎಂದು ವಿದೇಶಿ ಪ್ರವಾಸಿಗರ ಬರಹಗಳಲ್ಲಿ ಗಮನಿಸಬಹುದು. ಅಂದರೆ ಈ ರಾಜರು ವಿದೇಶಿ ವಿನ್ಯಾಸದ ಉದ್ದನೆಯ ನಿಲುವಂಗಿ ಮತ್ತು ಅವುಗಳ ಕುಸುರಿ ಕೆಲಸಗಳಲ್ಲಿಯೂ ವಿದೇಶಿ ಸಾಮಗ್ರಿಗಳನ್ನು ಬಳಸುತ್ತಿದ್ದರು ಎಂದರೆ ಹೊರ ದೇಶದ ಪ್ರಭಾವವನ್ನು ಇಲ್ಲಿನ ವಸ್ತ್ರ ಮತ್ತು ಆಭರಣಗಳ ಮೇಲೆ ಆಗಿರುವುದನ್ನು ಅರಿಯಬಹುದು. ಅಲ್ಲದೇ ಇವರ ಅಲಂಕಾರಪ್ರಿಯತೆ ಅವುಗಳ ಸಿದ್ದಪಡಿಸುವಿಕೆಗೆ ಬಹಳಷ್ಟು ದುಬಾರಿ ಬೆಲೆಯನ್ನೇ ವೆಚ್ಚ ಮಾಡುತ್ತಿದ್ದರು. ಇಷ್ಟು ದುಬಾರಿ ಬೆಲೆಯಾದ ವೇಷಭೂಷಣಗಳನ್ನು ರಾಜರು ಏಕೆ ಧರಿಸುತ್ತಿದ್ದರೆಂದರೆ ಇತರರಿಗಿಂತ ಭಿನ್ನವಾಗಿ ಕಾಣಲು ಹಾಗೂ ಶ್ರೀಮಂತಿಕೆಯ, ರಾಜಗಾಂಭೀರ್ಯ ಮತ್ತು ಸ್ಥಾನದ ತೋರ್ಪಡಿಕೆಯ ಕುರುಹಾಗಿ ಎಂದೇ ಹೇಳಬಹುದು. ಅಲ್ಲದೇ ಹಾಗೆ ಧರಿಸುವುದು ಒಂದು ಸಂಪ್ರದಾಯ, ಸಂಸ್ಕೃತಿ, ಪದ್ಧತಿ ಮತ್ತು ಶ್ರೇಯಸ್ಸಿಗಾಗಿಯೂ ಹೌದು.

೩.೧.೨. ದಂಡನಾಯಕ

ಆಡಳಿತ ವ್ಯವಸ್ಥೆಯಲ್ಲಿ ರಾಜನ ನಂತರದ ಪ್ರಮುಖ ಸ್ಥಾನ ದಂಡನಾಯಕನದು. ವಿಜಯನಗರ ಕಾಲದಲ್ಲಿ ಇವರು ಪ್ರಧಾನ ಹುದ್ದೆಯನ್ನು ಅಲಂಕರಿಸಿದ್ದರು. ದಂಡ ನಾಯಕನಿಗೆ ದಣ್ಣಾಯಕ, ದಳವಾಯಿ, ದಳನಾಯಕ, ಸೇನಾಧಿಪತಿ ಮುಂತಾದ ಹೆಸರುಗಳಿಂದ ಕರೆಯುತ್ತಿದ್ದರು. ಇವರು ಮಹಾಪ್ರಧಾನರಾಗಿ, ಮಂತ್ರಿಮಂಡಲದ ಸದಸ್ಯರಾಗಿ, ಸೇನಾ ವ್ಯವಸ್ಥೆಯ ಮುಖಂಡ ರಾಗಿಯೂ ಕಾರ್ಯಗಳನ್ನು ನಿರ್ವಹಿಸುತ್ತಿದ್ದರು. ವಿಜಯನಗರ ಸಾಮ್ರಾಜ್ಯದ ಆಡಳಿತ ವ್ಯಾಪ್ತಿ ತುಂಬಾ ವಿಸ್ತಾರವಾಗಿದ್ದ ಕಾರಣದಿಂದ ರಾಜ್ಯವನ್ನು ಹಲವು ಭಾಗಗಳಾಗಿ ವಿಭಾಗಿಸಿ, ಅವುಗಳಿಗೆ ರಾಜ್ಯಪಾಲರುಗಳಾಗಿ ದಂಡನಾಯಕರನ್ನು ನೇಮಿಸುತ್ತಿದ್ದರು. ಇವರು ಆಡಳಿತ ನಿರ್ವಹಣೆ ಯೊಂದಿಗೆ, ಸಾಮ್ರಾಜ್ಯ ವಿಸ್ತರಣೆ, ಸಾಮಾಜಿಕ, ಧಾರ್ಮಿಕ, ಕಾರ್ಯಗಳನ್ನು ನಿರ್ವಹಿಸುತ್ತಿದ್ದರಷ್ಟೇ ಅಲ್ಲದೇ ಕೆಲವರು ಸ್ವತಃ ವಿದ್ವಾಂಸರೂ ಆಗಿದ್ದರು. ಸ್ವತಃ ಕವಿಯಾಗಿದ್ದ ಲಕ್ಕಣ್ಣ ದಂಡನಾಯಕ ರಚಿಸಿರುವ 'ಶಿವತತ್ತ್ವ ಚಿಂತಾಮಣಿ' ಗ್ರಂಥವು ವಿಜಯನಗರ ಸಾಮ್ರಾಜ್ಯದ ಕುರಿತು ಹಲವು ಮಹತ್ವದ ಅಂಶಗಳನ್ನು ತಿಳಿಯುವಲ್ಲಿ ಸಹಾಯಕ. ಮತ್ತೊಬ್ಬ ಪ್ರಮುಖ ದಂಡನಾಯಕನೆಂದರೆ ಸಾಳ್ವ ತಿಮ್ಮರಸ.

ದಂಡನಾಯಕರಿಗೆ ವಿಶೇಷವಾದ ಅಧಿಕಾರ ಹಾಗೂ ಗೌರವಗಳನ್ನು ವಿಜಯನಗರದ ರಾಜರು ನೀಡಿದ್ದರು. ಅಲ್ಲದೇ ಹಲವಾರು ಬಿರುದುಗಳನ್ನು ಈ ದಂಡನಾಯಕರು ಹೊಂದಿದ್ದರು.

ಅಬ್ದುರ್ ರಜಾಕ್ ಹೇಳುವಂತೆ, "ದಿವಾನ್‌ಖಾನೆಯಿಂದ ದೈಯ್ಯಾಂಗ್ ಹೊರಟಾಗ ಅವನ ಮುಂದೆ ವಿವಿಧ ಬಣ್ಣಗಳ ಛತ್ರಿಗಳನ್ನು ಹಿಡಿದುಕೊಂಡು ಹೋಗುತ್ತಾರೆ. ವಾದ್ಯಗಳು ಮೊಳಗುತ್ತಿರುತ್ತವೆ. ಅವನ ಅಕ್ಕ-ಪಕ್ಕದಲ್ಲಿ ಹೋಗುವ ಹೊಗಳುಭಟ್ಟರು ಬಹುಪರಾಕು ಹೇಳುತ್ತಿರುತ್ತಾರೆ".[೨೧] ರಜಾಕ್‌ನ ಹೇಳಿಕೆಗೆ ಪುಷ್ಠಿಯೆನ್ನುವಂತೆ ಚೆನ್ನಮ್ಮರಾಜು ರಚಿಸಿದ ಚಾರುಚಂದ್ರೋದಯವು ಸೇನಾಪತಿಯು ಹೊಂದಿದ್ದ ಚಿಹ್ನೆಗಳನ್ನು ಉಲ್ಲೇಖಿಸುತ್ತದೆ. ಅವುಗಳಲ್ಲಿ, 'ಗರುಡ ನಾರಾಯಣ ಧ್ವಜ, ಕೆಂಪು ಬಟ್ಟೆಯ ಬಂಗಾರದ ಹೂವಿನ ಕುಸುರಿ ಮಾಡಿದ ತುರಾಯಿ, ಆನೆ, ಬೆಲೆಯುಳ್ಳ ಕುದುರೆ, ಕಂಠಹಾರ, ತಾಳಿಚೌಕಟ್ಟು, ಬೆಲೆಬಾಳುವ ಬಳೆಗಳು, ಕಾಲಬಳೆ(ಗಂಡಪೆಂಡೇರ), ಅಲಂಕಾರಿಕ ಖಡ್ಗಗಳು ಮುಖ್ಯವಾಗಿವೆ'.[೨೨]

ರಾಜಸಭೆ ನಡೆಯುತ್ತಿದ್ದ ಸಂದರ್ಭದಲ್ಲಿ ಕೃಷ್ಣದೇವರಾಯನೊಂದಿಗೆ ದಳವಾಯಿಗಳು, ಮಾಂಡಲೀಕರು ಯಾವ ರೀತಿ ಸಭಾವಿನಯವನ್ನು ಅನುಸರಿಸಿ ಮಾತನಾಡುತ್ತಿದ್ದರು ಎಂಬುದನ್ನು ಪಾಯೇಸ್ ಹೀಗೆ ತಿಳಿಸುವನು, "ರಾಜಕಾರ್ಯಗಳೆಲ್ಲ ಮುಗಿದ ಮೇಲೆ ರಾಜನು ಹೊರಗಡೆ ಕಾಯುತ್ತಿರುವ ದಳವಾಯಿಗಳಿಗೂ, ಮಂಡಲೀಕರಿಗೂ ಹೇಳಿ ಕಳುಹಿಸುತ್ತಾನೆ. ಅವರು ಬಂದು ನಮಸ್ಕರಿಸಿ ದೂರದಲ್ಲಿ ನಿಂತುಕೊಳ್ಳುತ್ತಾರೆ. ಅವರು ಮಾತನಾಡದೆ ಮೌನವಾಗಿರುತ್ತಾರೆ. ಬಾಯಲ್ಲಿ ವೀಳ್ಯವನ್ನು ಅಗಿಯುವುದಿಲ್ಲ. ತಮ್ಮ ಅಂಗಿಯ ತೋಳಿನೊಳಗೆ ಕೈಯಿಟ್ಟುಕೊಂಡು ನೆಲದ ಕಡೆ ನೋಡುತ್ತಾ ನಮ್ರ ಭಾವದಿಂದ ನಿಂತಿರುತ್ತಾರೆ..."[೨೩]

ವಿಜಯನಗರದಲ್ಲಿ ದಂಡನಾಯಕರಿಗೆ ರಾಜರಿಗೆ ನೀಡುವಷ್ಟು ಗೌರವ ನೀಡುತ್ತಿದ್ದರು. ಶ್ರೀಕೃಷ್ಣದೇವರಾಯ ತನ್ನ ದಂಡನಾಯಕ(ಮಂತ್ರಿಯಾದ)ನಾದ ತಿಮ್ಮರಸನನ್ನು ಪ್ರೀತಿಯಿಂದ ಅಪ್ಪಾಜಿ ಎಂದು ಕರೆದು ಗೌರವಿಸುತ್ತಿದ್ದನು. ಪಾಯೇಸ್ ಹೇಳುವಂತೆ, "ತಿಮ್ಮರಸುವಿನತ್ತ ಶ್ರೀಕೃಷ್ಣದೇವರಾಯನಿಗೆ ಅಪಾರ ಪ್ರೀತಿ ಗೌರವವಿತ್ತು, ಹಾಗಾಗಿ ಮಹಾಪ್ರಭುಗಳು ಅವನೊಂದಿಗೆ ರಾಜನೊಂದಿಗೆ ನಡೆದುಕೊಂಡಂತೆಯೇ ನಡೆದುಕೊಳ್ಳುತ್ತಿದ್ದರು".[೨೪]

ರಾಜನು ದಿಗ್ವಿಜಯಗಳನ್ನು ಕೈಗೊಳ್ಳುವುದರಲ್ಲಿನ ಮುಖ್ಯ ಧ್ಯೇಯೋದ್ದೇಶಗಳನ್ನು ವಿವರಿಸಿ, ಅನೇಕ ಉಪಯುಕ್ತ ಸಲಹೆಗಳನ್ನು ನೀಡಿದ ಬುದ್ಧಿಸಾಗರನೆಂಬ ಮಂತ್ರಿಗೆ ಭರತ ಚಕ್ರವರ್ತಿಯು ಉಡುಗೊರೆ ಕೊಟ್ಟು ಸನ್ಮಾನಿಸಿದ ವಿಚಾರವನ್ನು ರತ್ನಾಕರನು ಭರತೇಶವೈಭವ ದಲ್ಲಿ ಹೇಳುತ್ತಾನೆ'.[೨೫] ಇದಕ್ಕೆ ಪುಷ್ಠಿ ಎಂಬಂತೆ ರಾಯವಾಚಕಮುದಲ್ಲಿ ಹೇಳಿರುವಂತೆ, "ಶ್ರೀಕೃಷ್ಣದೇವರಾಯನು ಒರಿಸ್ಸಾದ ದಂಡಯಾತ್ರೆಯ ದಿಗ್ವಿಜಯಕ್ಕೆ ಅಪ್ಪಾಜಿಯ ಪಾತ್ರ ಅಪಾರವಾಗಿತ್ತು. ಅಲ್ಲಿ ಉಪಯುಕ್ತ ಸಲಹೆ ಸೂಚನೆಗಳನ್ನು ರಾಯನು ತಿಮ್ಮರಸನಿಂದ ಪಡೆದಿದ್ದನು, ಹಾಗಾಗಿ ದಂಡಯಾತ್ರೆ ಮುಗಿದ ಮೇಲೆ ಕೃಷ್ಣದೇವರಾಯನು ಹಂಪಿಗೆ ಬಂದು ಅಲ್ಲಿ ಎಲ್ಲರನ್ನು ಕರೆಯಿಸಿ, "ಒಡ್ಡೋಲಗದಲ್ಲಿ ಅಪ್ಪಾಜಿಯನ್ನು ರತ್ನಕಂಬಳಿಯ ಮೇಲೆ ಕೂಡಿಸಿ, ರತ್ನಾಭಿಷೇಕ, ಕನಕಾಭಿಷೇಕ, ಮಾಡಿದನು". ನಾಲ್ಕು ಪೆಟ್ಟಿಗೆಯಲ್ಲಿ ಪಟ್ಟೆ ಪೀತಾಂಬರಗಳನ್ನು, ಮುಂಗೈಸರಗಳನ್ನು, ಪಚ್ಚೆಯ ಕಡಗ, ರತ್ನ ಹಾರಗಳನ್ನು ಪಚ್ಚೆಯ ಕಿರೀಟ, ಮುತ್ತಿನ ತುರಾಯಿ, ವಜ್ರದ ಕಂಠೀಹಾರ, ಕೆಂಪಿನ ಉಂಗುರಗಳನ್ನು, ಅಲ್ಲದೇ ನಾನಾ ವಿಧದ ಆಭರಣಗಳನ್ನು ನೀಡಿದನು".[೨೬] ಈ ಕನಕಾಭಿಷೇಕದ ಸ್ಮರಣೆಗೋಸ್ಕರ

ಕೃಷ್ಣದೇವರಾಯ ತಾಮ್ರದ ನಾಣ್ಯಗಳನ್ನು ಅಚ್ಚು ಹಾಕಿಸಿ, ಅದರ ಒಂದು ಕಡೆ ತನ್ನ, ಮತ್ತೊಂದು ಮುಖದಲ್ಲಿ ತಿಮ್ಮರಸುಗಾರು ಎಂಬ ಹೆಸರನ್ನು ಬರೆಯಿಸಿದನು. ಈ ರೀತಿ ಪ್ರಧಾನಿ(ದಂಡನಾಯಕ) ಮತ್ತು ಚಕ್ರವರ್ತಿಯ ಹೆಸರು ಜೊತೆಗಿರುವುದು ಅಪೂರ್ವವಾಗಿದೆ. ಆದ್ದರಿಂದಲೋ ಏನೋ ಬಾಪಟ್ಟ ತಾಲ್ಲೂಕಿನ ಒಂದು ಶಾಸನವು ತಿಮ್ಮರಸು ಮತ್ತು ಕೃಷ್ಣದೇವರಾಯರು ಏಕಶರೀರದಂತಿದ್ದರು ಎಂದು ದಾಖಲಿಸಿದೆ.[೨೭] ಈ ಮೇಲಿನ ಎಲ್ಲ ವಿವರಣೆಗಳಿಂದ ರಾಜ ದಂಡನಾಯಕರೊಂದಿಗೆ ಪ್ರೀತಿ ಗೌರವ ಸಂಬಂಧವನ್ನು ಹೊಂದಿದ್ದು, ಅವರ ಸೇವೆಯನ್ನು ಗೌರವಿಸಿ ಅವರನ್ನು ಪುರಸ್ಕರಿಸುತ್ತಿದ್ದ ಅಂಶ ಶ್ಲಾಘನೀಯ.

ಹಂಪಿಯ ಅಚ್ಯುತರಾಯ ದೇವಾಲಯದ ಸ್ತಂಭವೊಂದರಲ್ಲಿ ರಾಜ ಮತ್ತು ದಂಡನಾಯಕರ ಉಬ್ಬು ಶಿಲ್ಪವಿದೆ (ಚಿತ್ರ–೧). ದಂಡನಾಯಕರ ವಸ್ತ್ರ ಮತ್ತು ಆಭರಣಗಳನ್ನು ತಿಳಿಯುವಲ್ಲಿ ಈ ಶಿಲ್ಪ ಸಹಾಯಕವಾಗುತ್ತದೆ. ರಾಜನೊಂದಿಗಿರುವ ದಂಡನಾಯಕನ ವೇಷಭೂಷಣಗಳು ಬಹುತೇಕ ರಾಜನ ವೇಷಭೂಷಣಗಳನ್ನು ಹೋಲುತ್ತಿವೆ ಎಂಬುದು ಗಮನಾರ್ಹ ಸಂಗತಿ. ಈ ಚಿತ್ರದಲ್ಲಿರುವ ದಂಡನಾಯಕ ಶಿಲ್ಪ ಉದ್ದನೆಯ ನಿಲುವಂಗಿಯನ್ನು ಮೊಣಕಾಲಿನವರೆಗೂ ಹಾಗೂ ತೋಳುಗಳು ಮಣಿಕಟ್ಟಿನವರೆಗೂ ಧರಿಸಿದ್ದಾರೆ. ಅಲ್ಲದೆ ಈ ನಿಲುವಂಗಿಗೆ ಕಾಲರ್ (ಕತ್ತುಪಟ್ಟಿ) ಇಲ್ಲ ಹಾಗೂ ನಿಲುವಂಗಿಯ ಮುಂಭಾಗ ತೆರದ ಹಾಗೆ ಹೊಲಿದಿದ್ದು ಅದನ್ನು ಹಲವು ಗುಂಡಿಗಳಿಂದ ಸೇರಿಸಿರುವ ಕ್ರಮ ಹಾಗೂ ಇದು ನವೀನ ಮಾದರಿಯಲ್ಲಿರುವುದು ಗಮನಾರ್ಹ. ಚಲ್ಲಣಗಳನ್ನು ಪಾದದವರೆಗೂ ಧರಿಸಿದ್ದಾನೆ. ನಿಲುವಂಗಿ ಮತ್ತು ಚಲ್ಲಣಗಳು ದೇಹದ ಅಳತೆಗೆ ತಕ್ಕಂತೆ ಬಿಗಿಯಾದ ಉಡುಗೆಯಾಗಿವೆ. ಉತ್ತರೀಯವನ್ನು ಕಟಿ ಭಾಗದಿಂದ ಸ್ವಲ್ಪ ಕೆಳಕ್ಕೆ ಹಾದು ಅಗಲವಾಗಿ ಮಡಿಚಿ ಕಟಿಯ ಎಡಭಾಗವನ್ನು ಬಳಸಿ ಹಿಂಭಾಗದಿಂದ ಬಂದು ಕಟಿಯ ಮುಂಭಾಗದಲ್ಲಿ ಗಂಟುಹಾಕಿ ಕಟ್ಟಿಕೊಂಡಿದ್ದಾರೆ. ಕಿರೀಟ ರಾಜನ ಕಿರೀಟಕ್ಕಿಂತ ಉದ್ದದಲ್ಲಿ ಕಡಿಮೆಯಿದ್ದು, ಸಾದಾ ಶೈಲಿಯಲ್ಲಿದೆ.

ದಂಡನಾಯಕನ ಕುಂಡಲಗಳು (ರಿಂಗಿನ ಮಾದರಿಯ) ಹಾಗೂ ಮೀಸೆ ಮಾತ್ರ ಈ ಶಿಲ್ಪದಲ್ಲಿ ಕಾಣಬಹುದು. ರಾಜ ಮತ್ತು ದಂಡನಾಯಕನ ಕುಂಡಲಗಳು ಒಂದೇ ಮಾದರಿಯಲ್ಲಿರುವುದು ಗಮನಾರ್ಹ ಅಂಶ. ಇಲ್ಲಿ ವಸ್ತ್ರ ಪ್ರಧಾನ ಪಾತ್ರವಹಿಸಿರುವುದರಿಂದ ಆಭರಣಗಳು ಅಷ್ಟಾಗಿ ಗೋಚರಿಸುವುದಿಲ್ಲ. ಈ ಮೇಲಿನ ಎಲ್ಲ ಅಂಶಗಳಿಂದ ಕಂಡುಬರುವ ಸಂಗತಿಯೆಂದರೆ ದಂಡನಾಯಕನ ವೇಷಭೂಷಣ, ಗೌರವ ಹಾಗೂ ಸ್ಥಾನದ ಬಗ್ಗೆ ಸಾಹಿತ್ಯದ ಉಲ್ಲೇಖಗಳು ನೀಡುವ ವಿವರಣೆಯನ್ನು ಈ ಶಿಲ್ಪ ಪುಷ್ಟೀಕರಿಸಲು ಬಹುಮಟ್ಟಿಗೆ ಸಹಾಯಕವಾಗುತ್ತದೆ.

೩.೧.೩. ರಾಯಭಾರಿಗಳು

ರಾಜ್ಯದ ಆಡಳಿತ ನಿರ್ವಹಣೆಯಲ್ಲಿ ರಾಯಭಾರಿಗಳ ಪಾತ್ರ ಪ್ರಮುಖವಾದುದು. ಕೌಟಲ್ಯನು ಅರ್ಥಶಾಸ್ತ್ರದಲ್ಲಿ ರಾಯಭಾರವನ್ನು 'ನಯ' (Diplomacy) ಎಂದು ಕರೆದಿದ್ದಾನೆ. ಅವನು ಹೇಳುವಂತೆ 'ನಯಜ್ಞಃ ಪೃಥಿವೀಂ ಜಯತಿ' ಎಂದರೆ ನಯವನ್ನು ಅರಿತವನು ಲೋಕವನ್ನು ಜಯಿಸುತ್ತಾನೆ.[೨೮] ಈ ರೀತಿಯ ಅಧಿಕಾರಿಗಳನ್ನು ಮುಂದೆ ಧೂತ, ಗೂಢಚಾರ, ರಾಯಭಾರಿ ಮುಂತಾಗಿ ಕರೆಯಲಾಗಿದೆ. ಹಾಗೂ ರಾಯಭಾರಿಯಾಗಿ ಕಾರ್ಯನಿರ್ವಹಿಸಲು ಹಲವು

ಅರ್ಹತೆಗಳನ್ನು ಹೊಂದಿರಬೇಕಾದುದು ಅತ್ಯಾವಶ್ಯಕವಾಗಿತ್ತು. ಆ ಕುರಿತು ಸೂಕ್ತಿ ಸುಧಾರ್ಣವಂನಲ್ಲಿ ಈ ರೀತಿಯಾಗಿ ವಿವರಿಸಿದೆ. ಅದರಂತೆ,

ಚದರುಂ ಭಾವುಕನ್ ಇಂಗಿತಜ್ಞನ್ ಅರಿವುಳ್ಳಂ ದೇಶಭಾಷಾನ್ವಿತಂ
ಪದವಾಕ್ಯಾರ್ಥವಿವಕ್ಷಿತಂ ಬಹುಕಳಾ ಸಂಪನ್ನನ್ ಆಸ್ಥಾನ ಸಮ್ಮದ
ವಾಗ್ವೇತ್ತನ್.[೨೯]

ಅಂದರೆ ವಿವಿಧ ದೇಶ, ಭಾಷೆ, ಲಿಪಿಗಳನ್ನು ಬಲ್ಲವರಾಗಿರಬೇಕು. ಇದರೊಂದಿಗೆ ಯೋಗ್ಯರು, ಸ್ಪಷ್ಟ ಓದು ಮತ್ತು ಬರಹ ತಿಳಿದಿರುವುದು ಅಗತ್ಯವಾಗಿತ್ತು.

ವಿಶಾಲವಾದ ವಿಜಯನಗರ ಸಾಮ್ರಾಜ್ಯ ವಿವಿಧ ರಾಜ್ಯಗಳೊಂದಿಗೆ ರಾಜಕೀಯ, ಆರ್ಥಿಕ ಮತ್ತು ಸಾಮಾಜಿಕ ಸಂಬಂಧಗಳನ್ನು ಹೊಂದಿತ್ತು. ಹಾಗಾಗಿ ರಾಯಭಾರಿಗಳನ್ನು ಸೇತುವೆಯಾಗಿ ನೇಮಿಸಿಕೊಂಡಿದ್ದರು ಎಂಬುದನ್ನು ಅರಿಯಬಹುದು.

ನಂಜುಂಡ ಕವಿಯ ರಾಮನಾಥ ಚರಿತದ ಒಂದು ಪದ್ಯದಲ್ಲಿ ವಿವರಿಸಿರುವಂತೆ ವಿಜಯನಗರ ರಾಜನ ಆಸ್ಥಾನದಲ್ಲಿ ರಾಯಭಾರಿಗಳು ಇದ್ದರು ಎಂಬುದನ್ನು ತಿಳಿಸುತ್ತದೆ. ಅದರಲ್ಲಿ ಒಂದೆಡೆ ಹೇಳುವಂತೆ,

ಬಿಡದೆ ಬಿರುದನೊದಱುವ ಬಲುಭಟ್ಟರಿಂ
ತಡೆಯದೆ ರಾಜವಾರ್ತೆಯನು
ತಡಬಡಿಯದೆ ಪೇಳ್ವ ರಾಯಭಾರಿಗಳಿಂ
ದೊಡನೋಲಗವೆಸೆದತ್ತು.[೩೦]

ಈ ಪದ್ಯವು ರಾಯಭಾರಿಗಳು ವಾರ್ತೆ ಅಥವಾ ಸುದ್ದಿಗಳನ್ನು ಹೊತ್ತುಕೊಂಡು ಬಂದು ರಾಜನಿಗೆ ತಿಳಿಸುತ್ತಿದ್ದರು. ಅಲ್ಲದೆ ಇದು ಅವರ ಕಾರ್ಯಭಾರವೂ ಆಗಿತ್ತು ಎಂಬುದು ಸ್ಪಷ್ಟವಾಗುತ್ತದೆ.

ವಿಜಯನಗರ ಅರಸರು ರಾಯಭಾರಿಗಳನ್ನು ಗೌರವದಿಂದ ಕಾಣುತ್ತಿದ್ದರು. ಹೊರ ರಾಜ್ಯಗಳಿಂದ ವಿಜಯನಗರಕ್ಕೆ ಹಾಗೂ ವಿಜಯನಗರದಿಂದ ಹೊರರಾಜ್ಯಗಳಿಗೆ ರಾಯಭಾರಿ ಗಳನ್ನು ಕಳುಹಿಸುತ್ತಿದ್ದ ವ್ಯವಸ್ಥೆಯಿತ್ತು. ಒಂದನೆ ಬುಕ್ಕರಾಯನು ಕ್ರಿ.ಶ. ೧೩೭೪ರಲ್ಲಿ ತನ್ನ ರಾಯಭಾರ ತಂಡವನ್ನು ಚೀನಾ ದೇಶದ ಮಿಂಗ್ ದೊರೆ ತೈತ್ಸುವಿನ ಆಸ್ಥಾನಕ್ಕೆ ಕಳುಹಿಸಿದುದ್ದು ತಿಳಿದುಬರುತ್ತದೆ.[೩೧] ಪರ್ಶಿಯಾ ದೇಶದ ರಾಜ ಪಾರುಖ್‌ನ ರಾಯಭಾರಿ ಯಾಗಿ, ಅಬ್ದುರ್ ರಜಾಕ್‌ನು ವಿಜಯನಗರಕ್ಕೆ ಎರಡನೆ ದೇವರಾಯನ ಆಳ್ವಿಕೆಯ ಅವಧಿಯಲ್ಲಿ ಆಸ್ಥಾನಕ್ಕೆ ಭೇಟಿ ನೀಡಿದ್ದನು.

ಅಬ್ದುರ್ ರಜಾಕ್‌ನ್ನು ಎರಡನೆಯ ದೇವರಾಯ ತುಂಬಾ ಗೌರವದಿಂದ ಕಂಡನು ಹಾಗೂ ಉಳಿದುಕೊಳ್ಳಲು ಉತ್ತಮ ವ್ಯವಸ್ಥೆಯನ್ನು ಮಾಡಿದ್ದನು. ಸಾಮಾನ್ಯವಾಗಿ ಹಿರಿಯರನ್ನು ಅಂತಸ್ತಿನಲ್ಲಿ ಹಾಗೂ ಸ್ಥಾನದಲ್ಲಿದ್ದವರನ್ನು ಕಾಣಲು ಹೋಗುವಾಗ ಹೂಗುಚ್ಛ ಅಥವಾ ತಮ್ಮ ಸ್ಥಳೀಯ ವಿಶೇಷ ವಸ್ತುಗಳನ್ನು ತೆಗೆದುಕೊಂಡು ಹೋಗಿ ಕೊಡುವುದು ಸಾಮಾನ್ಯ ಮತ್ತು ಅದು ಸಂಪ್ರದಾಯವೂ ಹೌದು. ಹಾಗೆಯೇ ಅಬ್ದುರ್ ರಜಾಕ್‌ನು, "ಎರಡನೆಯ ದೇವರಾಯನನ್ನು ಭೇಟಿ ಮಾಡಿದ್ದ ಸಂದರ್ಭದಲ್ಲಿ ರಾಜನಿಗೆ ಸುಂದರವಾದ ಕುದುರೆಗಳನ್ನು ಬೆಲೆಬಾಳುವ ಡಮಾಸ್ಕ್

ಮತ್ತು ಸ್ಯಾಟೀನ್ ಬಟ್ಟೆಗಳ ಥಾನುಗಳನ್ನು ಅರ್ಪಿಸಿದನು"[೩೨] ಎಂದು ಹೇಳುತ್ತಾನೆ. ಮುಂದುವರೆದು ರಾಜ ಧರಿಸಿದ್ದ ವಸ್ತ್ರವನ್ನು ವಿವರಿಸುತ್ತಾ, "ರಾಜನು ಹಸಿರು ಬಣ್ಣದ ಸ್ಯಾಟೀನ್ ಬಟ್ಟೆಯನ್ನು ಧರಿಸಿದ್ದನು" ಎಂದು ಹೇಳಿದ್ದಾನೆ.[೩೩]

ಅಂದರೆ ಇಲ್ಲಿ ನಮಗೆ ಸ್ಪಷ್ಟವಾಗುವ ವಿಷಯವೆಂದರೆ ವಿಜಯನಗರದ ರಾಜರು ತಾವು ಧರಿಸುತ್ತಿದ್ದ ಉಡುಗೆಗೆ ಪರ್ಶಿಯಾ ದೇಶದಿಂದ ಸ್ಯಾಟೀನ್ ಬಟ್ಟೆಯ ಥಾನುಗಳನ್ನು ತರಿಸಿಕೊಂಡು, ಆ ಥಾನುಗಳನ್ನು ಬಳಸಿ ವಿಜಯನಗರದಲ್ಲಿ ಸಿದ್ದ ಉಡುಪುಗಳನ್ನು ಹೊಲಿಸಿ ಧರಿಸುತ್ತಿದ್ದರು ಎಂಬುದು ಸ್ಪಷ್ಟವಾಗುತ್ತದೆ. ಅಷ್ಟೇ ಅಲ್ಲದೇ ರಜಾಕ್‌ನು ವಿಜಯನಗರದ ಜನಸಾಮಾನ್ಯರು ಎಷ್ಟು ಆಭರಣ ಪ್ರಿಯರಾಗಿದ್ದರು ಎಂಬುದನ್ನು ಸಹ ವಿವರಿಸುತ್ತಾನೆ.

ರಾಯಭಾರ ಪದ್ಧತಿಯನ್ನು ಕೃಷ್ಣದೇವರಾಯನು ಮುಂದುವರಿಸಿದನು. ಕೃಷ್ಣದೇವ ರಾಯನ ಕಾಲದಲ್ಲಿ ವಿಜಯನಗರಕ್ಕೆ ಪೋರ್ಚುಗೀಸ್ ರಾಯಭಾರಿ ಕ್ರಿಸ್ತಾಂವ್-ದ-ಫಿಗ್ಯೈರೆಡೋ ಕ್ರಿ.ಶ.೧೫೨೦ರಲ್ಲಿ ಭೇಟಿ ನೀಡಿದ್ದನು. ಅವನೊಂದಿಗೆ ಪ್ರವಾಸಿ ಪಾಯೇಸ್ ಸಹ ಬಂದಿದ್ದನು. ಪಾಯೇಸ್‌ನು ವಿವರಿಸುವಂತೆ; "ರಾಜನು (ಕೃಷ್ಣದೇವರಾಯನು) ತಮ್ಮ ನಾಯಕನಿಗೆ (ಫಿಗ್ಯೈರೆಡೋಗೆ) ಕಿಂಕಾಪಿನ ಅಂಗಿಯನ್ನು ತಾನು ಧರಿಸಿದ್ದಂತಹ ತಲೆಯುಡುಗೆಯನ್ನು ಕೊಟ್ಟು ಸತ್ಕರಿಸಿ ಬೀಳ್ಕೊಟನು. ಪ್ರತಿಯೊಬ್ಬ ಪೋರ್ಚುಗೀಸನಿಗೂ ಸುಂದರವಾದ ಚಿತ್ರಗಳಿದ್ದ ಮುಗುಟಗಳನ್ನು ಕೊಟ್ಟನು"[೩೪] ಎಂದು ಹೇಳುತ್ತಾ, ಅದನ್ನು ನೀಡಿದ್ದು ಇಲ್ಲಿನ ಪದ್ಧತಿಗಳಿಗನುಗುಣವಾಗಿ ಹಾಗೂ ಸ್ನೇಹ ಮತ್ತು ಪ್ರೀತಿಗಾಗಿ ಎಂಬ ವಾಸ್ತವ ಅಂಶವನ್ನು ಪಾಯೇಸ್ ಬಿಂಬಿಸುತ್ತಾನೆ. ಹೀಗೆ ವಿಜಯನಗರಕ್ಕೆ ಭೇಟಿ ನೀಡಿದ್ದ ಪೋರ್ಚುಗೀಸ್ ರಾಯಭಾರಿಯನ್ನು ರಾಜನು ಸತ್ಕರಿಸಿದ ಪರಿಯಾಗಿದೆ.

ಗೂಢಚಾರರು ಆಡಳಿತದಲ್ಲಿ ಉತ್ತಮ ಪಾತ್ರವನ್ನು ವಹಿಸುತ್ತಿದ್ದರು. ಕೃಷ್ಣದೇವ ರಾಯನು ಆಮುಕ್ತಮಾಲ್ಯದಲ್ಲಿ ಗೂಢಚಾರ ವ್ಯವಸ್ಥೆಯ ಕುರಿತು ಹೀಗೆ ವಿವರಿಸುತ್ತಾನೆ. ಅದರಂತೆ, "ರಾಜನಾದವನು ಸಮರ್ಥರಾದ ಚಾರರನ್ನು ನೇಮಿಸಿಕೊಂಡು ಅವರಿಂದ ಕಾಲಕಾಲಕ್ಕೆ ರಾಜ್ಯದ ಮತ್ತು ಹೊರ ರಾಜ್ಯಗಳ ಸುದ್ದಿಗಳನ್ನು ತಿಳಿದುಕೊಳ್ಳುತ್ತಲೇ ಇರಬೇಕು. ರಾಜನು ಚಾರಚಕ್ಷು; ವಿವೇಕಿಗಳೂ, ಶಕ್ತರೂ ಆದ ಗೂಢಚಾರರೇ ದೊರೆಯ ಕಣ್ಣಗಳಿದ್ದಂತೆ. ಅವರ ಸಹಾಯದಿಂದ ರಾಜನು, ವೈರಿಪಕ್ಷೇಕ್ಷಣ ಸಚಿವ ಮುಖ್ಯ ಸ್ವಪೆಕ್ಷೇಕ್ಷಣವನ್ನು ನಿರಂತರವಾಗಿ ಮಾಡುತ್ತಲೇ ಇರಬೇಕು; ಇಲ್ಲದಿದ್ದರೆ ಸಚಿವರಿಂದ ಮೊದಲುಗೊಂಡು ಸ್ವಪಕ್ಷದವರೇ ದ್ರೋಹ ಬಗೆಯಬಹುದು"[೩೫] ಎಂಬುದಾಗಿ ಆಡಳಿತದಲ್ಲಿ ಗೂಢಚಾರರ ಅಗತ್ಯತೆಯನ್ನು ರಾಯನು ವಿವರಿಸಿರುವನು.

ವಿಜಯನಗರ ಸಾಮ್ರಾಜ್ಯದಲ್ಲಿ ವಿದೇಶಿ ರಾಯಭಾರಿಗಳಷ್ಟೇ ಅಲ್ಲದೆ ನೆರೆಯ ಬಹುಮನಿ ಹಾಗೂ ನಂತರದ ಷಾಹಿಸುಲ್ತಾನರ ರಾಯಭಾರಿಗಳು ಇದ್ದರು. ಬುಸಾತಿನ-ಸಲಾತೀನದಲ್ಲಿ ಹೇಳುವಂತೆ, "ಐದು ಬಾದಶಹರ ಐವರು ರಾಯಭಾರಿಗಳು ರಾಮರಾಜನ ಆಸ್ಥಾನದಲ್ಲಿ ಯಾವಾಗಲೂ ಇರುತ್ತಿದ್ದರು. ಮೊದಲು ರಾಮರಾಜನು ಅವರೊಂದಿಗೆ ಸಖ್ಯವನ್ನಿಟ್ಟುಕೊಂಡಿದ್ದನು. ಗೌರವದಿಂದ ಕಾಣುತ್ತಿದ್ದನು, ಏಕಾಂತದಲ್ಲಿ ಮಾತಾಡುತ್ತಿದ್ದನು ಮತ್ತು ಅವರೊಂದಿಗೆ

ಸಂತೋಷದಿಂದ ಸಂಭಾಷಿಸುತ್ತಿದ್ದನು. ಆ ನಡತೆಯನ್ನು ಒಟ್ಟಾರೆಯಾಗಿ ಬಿಟ್ಟು, ಯಾವಾಗಾದರೊಮ್ಮೆ ರಾಯಭಾರಿಗಳಿಗೆ ಆಸ್ಥಾನದಲ್ಲಿ ಬರಲು ಅವಕಾಶ ಮಾಡಿಕೊಡುತ್ತಿದ್ದನು. ಅವರೊಂದಿಗೆ ಸಿಟ್ಟಿನಿಂದ ಮತ್ತು ದ್ವೇಷದಿಂದ ಮಾತಾನಾಡುತ್ತಿದ್ದನು. ನಿತ್ಯದ ಪರಿಪಾಠವನ್ನು ಬಿಟ್ಟು ಸಾಕಷ್ಟು ಸಮಯ ಅವರು ನಿಲ್ಲುವಂತೆ ಮಾಡಿ ಅನಂತರ ಕುಳಿತುಕೊಳ್ಳಲು ಅನುಮತಿಯನ್ನು ನೀಡುತ್ತಿದ್ದನು. ನಿಯೋಗ ಹೊರಟರೆ ನಿಯೋಗದ ಮುಂದೆ ನಡೆಯಲು ರಾಯಭಾರಿಗಳು ಬಂದರೆ, ಅವರಿಗೆ ಮುಂದಿರಲು ಬೇಗ ಅನುಮತಿ ಯನ್ನು ಕೊಡುತ್ತಿರಲಿಲ್ಲ".[೩೬] ಹೀಗೆ ರಾಮರಾಯನು ಬಹುಮನಿ ರಾಯಭಾರಿಗಳನ್ನು ತಿರಸ್ಕಾರದಿಂದ ನಡೆಸಿಕೊಂಡ ಬಗೆಯಾಗಿತ್ತು. ಮುಂದೆ ಬಹಮನಿ ಮತ್ತು ವಿಜಯನಗರ ದವರ ರಾಜಕೀಯ ಸಂಬಂಧಗಳು ಹದಗೆಡಲು ಇದೂ ಒಂದು ಕಾರಣವಾಗಿತ್ತು ಎಂದರೆ ತಪ್ಪಲ್ಲ.

ಹಂಪಿಯ ಮಹಾನವಮಿದಿಬ್ಬದ ಶಿಲ್ಪವೊಂದರಲ್ಲಿರುವ ಚಿತ್ರಣವನ್ನು ಆಧರಿಸಿ ಇವರು ವಿಜಯನಗರ ಆಸ್ಥಾನದಲ್ಲಿದ್ದ ವಿದೇಶಿ ರಾಯಭಾರಿಗಳು ಎಂಬುದಾಗಿ ಗುರ್ತಿಸಲಾಗಿದೆ (ಚಿತ್ರ–೨). ರಾಜನ ಮುಂದೆ ಇಬ್ಬರು ವಿದೇಶಿ ರಾಯಭಾರಿಗಳು ಕೈಕಟ್ಟಿ ತಲೆಬಾಗಿ ನಿಂತಿದ್ದಾರೆ. ಇವರು ತಲೆಗೆ ಉದ್ದವಾದ ಮುಂಡಾಸನ್ನು ಸುತ್ತಿದ್ದು, ಅದರ ತುದಿಯು ಅವರ ಬೆನ್ನಿನ ಕೆಳಭಾಗದವರೆಗೂ ಇಳಿದಿದೆ. ಅಲ್ಲದೆ ಉದ್ದ ತೋಳಿನ ಹಾಗೂ ಉದ್ದನೆಯ ನಿಲುವಂಗಿಯನ್ನು ಇಬ್ಬರೂ ಧರಿಸಿದ್ದು, ಸಣ್ಣ ಗಡ್ಡವನ್ನು ಬೆಳೆಸಿಕೊಂಡಿರುವುದು ಕಂಡು ಬರುತ್ತದೆ. ಈ ಶಿಲ್ಪವು ಸಾಹಿತ್ಯಾಕರಗಳಿಗೆ ಸಮರ್ಥನೆಯನ್ನು ನೀಡುತ್ತದೆ. ವಿಜಯನಗರಕ್ಕೆ ಸೇನೆಗೆ ಕುದುರೆಗಳನ್ನು ಪರ್ಶಿಯಾ, ಪೋರ್ಚುಗೀಸ್‌ಗಳಿಂದ ತರಿಸಿಕೊಳ್ಳುತ್ತಿದ್ದರು. ಹಂಪಿಯ ವಿಜಯ ವಿಠಲ ದೇವಾಲಯದ ಅಧಿಷ್ಠಾನದ ಪಟ್ಟಿಕೆಯೊಂದರ ಶಿಲ್ಪದಲ್ಲಿ ವಿದೇಶಿ ರಾಯಭಾರಿ ತಾನು ತಂದ ಕುದುರೆಗಳನ್ನು ರಾಜನಿಗೆ ಒಪ್ಪಿಸುತ್ತಿರುವ ಚಿತ್ರಣವಿದೆ. ಈ ಶಿಲ್ಪದಲ್ಲಿ ವಿದೇಶಿ ರಾಯಭಾರಿಯಾಗಿದ್ದ ವ್ಯಕ್ತಿಯು ಉದ್ದ ತೋಳಿನ ಹಾಗೂ ಪಾದಗಳವರೆಗಿನ ಉದ್ದವಾದ ನಿಲುವಂಗಿಯನ್ನು ಧರಿಸಿದ್ದು, ನಿಲುವಂಗಿಗೆ ಹಾಕಿರುವ ಗುಂಡಿಗಳನ್ನು ಸ್ಪಷ್ಟವಾಗಿ ಗಮನಿಸಬಹುದು. ಆತನು ದುಂಡನೆಯ ಟೋಪಿಯನ್ನು ಧರಿಸಿದ್ದಾನೆ. ಮೀಸೆ, ಸಣ್ಣಗಡ್ಡವಿರುವುದು ಸ್ಪಷ್ಟವಾಗಿ ಗಮನಿಸಬಹುದು. ಬಹುತೇಕ ವಿದೇಶಿಯರನ್ನು ಮುಸಲ್ಮಾನ ಎಂಬುದಾಗಿ ಗುರುತಿಸಿದ್ದು, ಅವರು ಮೈ ತುಂಬಾ ವಸ್ತ್ರ ಧರಿಸುತ್ತಿದ್ದುದು ಹಾಗೂ ಶ್ರೀಮಂತ ಉಡುಗೆಯನ್ನು ಧರಿಸುತ್ತಿದ್ದರು ಎಂದು ತಿಳಿದುಬರುತ್ತದೆ.

೩.೧.೪. ತಳವಾರರು

ತಳವಾರನಿಗೆ ಸಂಬಂಧಿಸಿದ ಇತಿಹಾಸವನ್ನು ಪ್ರಾಚೀನ ಕಾಲದಿಂದಲೂ ತಿಳಿಯಬಹುದು. 'ಗ್ರಾಮರಕ್ಷಕ', 'ಗ್ರಾಮದ ಕಾವಲುಗಾರ' ಎಂದು ಸಹ ತಳವಾರನನ್ನು ಉದ್ದೇಶಿಸಿ ಕರೆಯುತ್ತಿದ್ದರು. ಹಾಗಾಗಿ ಇದೊಂದು ನಿರ್ಣಾಯಕ ಹುದ್ದೆಯಾಗಿದ್ದು, ಗ್ರಾಮ, ನಾಡು ಮತ್ತು ನಗರದ ರಕ್ಷಣಾ ಕಾವಾಲುಗಾರನಾಗಿದ್ದನು. ಈ ರಕ್ಷಣಾ ಕೆಲಸದಲ್ಲಿ ತಳವಾರರು ನಿಷ್ಣಾತರಾಗಿದ್ದರು. ಗೌಡನಿಂದ ಹಿಡಿದು ತಳವಾರನವರೆಗೆ ಪ್ರತಿಯೊಂದು ವೃತ್ತಿಯವರು ಹಳ್ಳಿಯ ಸಹಜೀವನದಲ್ಲಿ ಪಾಲ್ಗೊಂಡು ನಿಗದಿಗೊಳಿಸಿದ ನಿರ್ದಿಷ್ಟ ಕರ್ತವ್ಯ ಮತ್ತು ಜವಾಬ್ದಾರಿಗಳನ್ನು ನೇರವೇರಿಸಬೇಕಿತ್ತು. ರಕ್ಷಣಾ

ಕೆಲಸದ ಜೊತೆಗೆ ತಳವಾರ ಊರು ಸಾರುವ, ಡಂಗೂರ ಬಡಿಯುವ ಕೆಲಸವನ್ನು ನಿರ್ವಹಿಸುತ್ತಾನೆ. ಆಯಗಾರ ಪದ್ಧತಿ ಪ್ರಾಚೀನ ಕರ್ನಾಟಕದಲ್ಲಿತ್ತು ಎಂಬುದಕ್ಕೆ ಕ್ರಿ.ಶ. ೧೦೩೫ರ ಶಾಸನ ಆಯದ ಪದ್ಧತಿಯ ಕುರಿತು ತಿಳಿಯಲು ಸಹಾಯಕವಾಗಿದೆ.[೩೭] ವಿಜಯನಗರ ಕಾಲದ ಆಯಗಾರ ಪದ್ಧತಿಯಲ್ಲಿ ತಳವಾರಿಕೆಯೂ ಒಂದು.[೩೮] ಇದು ಪ್ರಮುಖವಾದ ವೃತ್ತಿ ಎಂಬುದನ್ನು ಗಮನಿಸಬಹುದು.

ವಿಜಯನಗರ ಕಾಲದಲ್ಲಿ ತಳವಾರಿಕೆ ವ್ಯಾಪಕವಾಗಿತ್ತು. ಸಾಮ್ರಾಜ್ಯದ ಆಡಳಿತ ವ್ಯವಸ್ಥೆ ರಕ್ಷಣೆಯಲ್ಲಿ ಇವರು ಪ್ರಮುಖ ಪಾತ್ರವಹಿಸಿದ್ದರು. ವಿಜಯನಗರ ಕಾಲದ ಶಾಸನಗಳಲ್ಲಿ ತಳವಾರಿಕೆಯ ಕುರಿತು ಉಲ್ಲೇಖಗಳು ದೊರೆಯುತ್ತವೆ. ಶಿವಮೊಗ್ಗ ಜಿಲ್ಲೆಯ ಕ್ರಿ.ಶ. ೧೪೩೧ರ ಶಾಸನದಲ್ಲಿ "ಏನುಳ್ಳ ಸುಂಕ ತಳವಾರಿಕೆಗೆ ಉಸಲುವ ಅಂಬಲಿ, ವುಡುಗೊರೆ ಗೌಡುಂಬಳಿ, ಸಹವಾಗಿ"[೩೯] ಎಂದು ತಿಳಿದುಬರುತ್ತದೆ. ಕ್ರಿ.ಶ. ೧೫೧೩ರ ಕೃಷ್ಣದೇವರಾಯನ ಕಾಲದ ಶಾಸನದಲ್ಲಿ ಕಡೇರಾಂಪುರ ಗ್ರಾಮದ ಅನಂತಶಯನ ಗುಡಿಯ ಬಂಡೆಯ ಮೇಲೆ ವಿರೂಪಾಕ್ಷ ದೇವರ ಸೇವೆಗಾಗಿ ಕಂನಕಿಯಕಟ್ಟೆ ಎಂಬ ಗ್ರಾಮವನ್ನು ದಾನ ನೀಡಿರುವುದರ ಜೊತೆಗೆ, ಈ ಗ್ರಾಮದ ರೊಕ್ಕ ಆದಾಯ, ಭತ್ತ ಆದಾಯ ತಳವಾರಿಕೆ ಸುಂಕ ಸಾಮ್ಯಜೋಡಿ ಬಿಡಾರ ಕಟ್ಟೆ ರೊಕ್ಕ ಮುಂತಾದ ಆದಾಯವನ್ನು ದಾನ ಬಿಡಲಾಗಿದೆ.[೪೦] ಕೃಷ್ಣದೇವರಾಯನ ಕಾಲದ ಕ್ರಿ.ಶ. ೧೫೧೩ರ ಮತ್ತೊಂದು ಶಾಸನದಲ್ಲಿ "ಶ್ರೀರಾಮಚಂದ್ರದೇವರ ಸಕಲ ಸೇವೆಗಳಿಗೆ ಒಟ್ಟು ಆರು ಗ್ರಾಮಗಳಿಗೆ ಸೇರಿದ ಸಕಲ ಸುವರ್ಣಾದಾಯ, ಭತ್ತಾದಾಯ, ಸ್ತಳಸುಂಕ, ತಳವಾರಿಕೆ ಹಣ, ಭತಜೋಡಿ ಬಿರಾಡ, ನೀರ ಬಿರಾಡ ಮೊದಲಾದ ಉತ್ಪತ್ತಿಗಳನ್ನು ದಾನವಾಗಿ ನೀಡಲಾಗಿದೆ."[೪೧] ಗ್ರಾಮದ ಸುಂಕವನ್ನು ತಳವಾರರು ಸಂಗ್ರಹಿಸಿ ಕೊಡುತ್ತಿದ್ದ ವಿಧಾನ, ಶ್ರೇಷ್ಠತೆ, ಪ್ರಾಮಾಣಿಕತೆಯಿಂದ ಬೊಕ್ಕಸ ತುಂಬುತ್ತಿತ್ತು.

ತೊರವೆ ರಾಮಾಯಣದಲ್ಲಿ ತಳವಾರನು ವಾಸಿಸುವ ಕೇರಿ, ಓಣಿಯನ್ನು 'ಚೋರ ರಂಗದ ಮಾತು ತಳವಾರಿಗೇರಿಯಲ್ಲಿ ಭೂಷಣವೆ'[೪೨] ಎಂದು ಉಲ್ಲೇಖವಿದೆ. ಅಂದರೆ, ಅಂದು ಕಳ್ಳರು ತಳವಾರಕೇರಿಯಲ್ಲಿ ನಿಂತು ಮಾತನಾಡಲಾರರು ಮತ್ತು ಅಲ್ಲಿಗೆ ಬರಲು ಹೆದರುತ್ತಿದ್ದರೆಂದು ತಿಳಿಯಬಹುದು. ಅಲ್ಲದೇ ಆಯಾ ವೃತ್ತಿಯವರು ಪ್ರತ್ಯೇಕ ಕೇರಿ ಅಥವಾ ಬೀದಿಗಳಲ್ಲಿ ವಾಸಿಸುತ್ತಿದ್ದರು ಎಂಬುದನ್ನು ತಿಳಿಸುತ್ತದೆ. ಇದಕ್ಕೆ ಪುಷ್ಠಿಯೆಂಬಂತೆ ಹೊಸಪೇಟೆಯ ಕಮಲಾಪುರದ ಏಳು ಕೇರಿಗಳಲ್ಲಿ ತಳವಾರ ಕೇರಿಯೂ ಒಂದಾಗಿದೆ.[೪೩] (೧. ಹಿರೇಕೇರಿ, ೨. ಚೌಡಿಕೇರಿ (ಚಾವಡಿಕೇರಿ), ೩. ಮನ್ಮಥಕೇರಿ, ೪. ಗೋನಾಳಕೇರಿ, ೫. ತಿಮಲತ್‌ಕೇರಿ, ೬. ಬಂಡೆಕೇರಿ ಮತ್ತು ೭. ತಳವಾರಕೇರಿ)

ಕನಕದಾಸರು ಮೋಹನತರಂಗಿಣಿಯ ಪದ್ಯವೊಂದರಲ್ಲಿ ತಳವಾರರ ವೇಷಭೂಷಣದ ಬಗೆಗೆ ಈ ಮುಂದಿನಂತೆ ವರ್ಣಿಸಿದ್ದಾರೆ.

> ಮೆಟ್ಟಿದ ಕರ್ಪುಗಳ್, ಉಡೆಯ ಬದ್ದುಗೆದಾರ
> ದಟ್ಟಿಯ ಮೇಲೆ ವಂಕುಡಿಯ॥
> ಕಟ್ಟಿದ ಹೆದೆ, ಏರಿಸಿದ ಬಿಲ್ಲೋಲಿನ
> ಗಟ್ಟಿವಾಳರು ತಿರುಗಿದರು.[೪೪]

ತಳವಾರರು ಹೊಳೆವ ಕಠಾರಿ, ಕೈಗತ್ತಿ, ತೋಮರ, ಬಿಲ್ಲು, ಬುಲುದಡಿ, ಪಿಡಿ ಚಕ್ರಗಳೊಂದಿಗೆ ಊರನ್ನು ಕಾಯುತ್ತಿದ್ದರು.[೪೫] ತಳವಾರ ಎಂದು ಕರೆಸಿಕೊಳ್ಳುವ ಮಂದಿ ಬಹುಪಾಲು ನಾಯಕ

ಜನಾಂಗದವರೇ ಆಗಿದ್ದರು ಎಂಬುದನ್ನು ಇತಿಹಾಸದಿಂದ ತಿಳಿದು ಬರುತ್ತದೆ.

ಕೃಷ್ಣದೇವರಾಯನು ಆಮುಕ್ತಮಾಲ್ಯದದಲ್ಲಿ, "ಕೃಷ್ಣದೇವರಾಯನ ಕಾಲದಲ್ಲಿ ರಸ್ತೆಯ ಲ್ಲಿಯೇ ಆಗಲಿ, ಬಹಿರಂಗ ಸ್ಥಳದಲ್ಲಿಯೇ ಆಗಲಿ ಗಲಾಟೆ ಮಾಡುವವರನ್ನು ಕಠಿಣವಾಗಿ ಶಿಕ್ಷಿಸುತ್ತಿದ್ದರು. ಇದರಿಂದ ಜನರು ನಿರ್ಭಯರಾಗಿರುತ್ತಿದ್ದರು. ನಗರದ ತಳವಾರರು ಮತ್ತು ಕಾವಲಿನವರು ಸರಿಯಾಗಿ ಕೆಲಸ ಮಾಡುತ್ತಾರೋ ಅಥವಾ ಇಲ್ಲವೋ ಎಂಬುದನ್ನು ಸ್ವತಃ ರಾಯನೇ ನೋಡಿಕೊಳ್ಳುತ್ತಿದ್ದ. ರಾತ್ರಿಯ ಹೊತ್ತಿನಲ್ಲಿ ರಾಯನು ಪ್ರಚ್ಛನ್ನ ವೇಷದಲ್ಲಿ ಇವರ ಚಲನವಲನಗಳನ್ನು ವೀಕ್ಷಿಸುತ್ತಿದ್ದನು".[೪೬] ರಾಯನೇ ತಳವಾರರ ಪ್ರಾಮಾಣಿಕತೆಯ ಬಗೆಗೆ ಹೀಗೆ ಹೇಳಿದ್ದಾನೆ: "ವಿಜಯನಗರದಲ್ಲಿ ರಾತ್ರಿಯ ಹೊತ್ತಿನಲ್ಲಿ ಕಾವಲು ಕಾಯುತ್ತ ಕಾವಲುಗಾರರು, ಯಾರಾದರೂ ಏನಾದರೂ ಬೀಳಿಸಿಕೊಂಡು ಹೋದರೆ ಅದನ್ನು ತೆಗೆದಿಟ್ಟು ಭದ್ರವಾಗಿ ಅದರ ಮಾಲೀಕರಿಗೆ ಒಪ್ಪಿಸುತ್ತಿದ್ದರು" ಎಂದು ಆಮುಕ್ತಮಾಲ್ಯದಲ್ಲಿ ತಿಳಿಸಿದ್ದಾನೆ.[೪೭]

ಹಂಪಿಯ ಮಹಾನವಮಿ ದಿಬ್ಬದ ಉಬ್ಬು ಶಿಲ್ಪದಲ್ಲಿರುವ ಚಿತ್ರವನ್ನು ತಳವಾರ ಎಂದು ಗುರುತಿಸಿದ್ದು (ಚಿತ್ರ-೩), ಈತ ತನ್ನ ಕೈಯಲ್ಲಿ ಉದ್ದನೆಯ ಕೋಲನ್ನು ಊರಿಕೊಂಡು ನಿಂತಿದ್ದಾನೆ. ಈತ ಮೊಣಕೈವರೆಗೂ ತೋಳಿರುವ ಹಾಗೂ ಬಿಗಿಯಾದ ಅಂಗಿ (ಜಾಕೆಟ್ ಮಾದರಿ)ಯನ್ನು ಧರಿಸಿದ್ದಾನೆ. ಕಟಿಯಿಂದ ಪಾದಗಳವರೆಗೆ ಗೀರು ಗೀರಿನ ಹಾಗೂ ಸಡಿಲವಾಗಿ ಉಟ್ಟ ಧೋತ್ರವನ್ನು ಧರಿಸಿದ್ದಾನೆ. ಉತ್ತರೀಯವನ್ನು ಕಟಿಭಾಗದಲ್ಲಿ ಗಂಟು ಹಾಕಿದ್ದು ಅದರ ಅಂಚುಗಳು ಜೋಲಾಡುತ್ತಿವೆ. ಶಂಖುವಿನಾಕಾರದ ಸಣ್ಣ ಕುಲಾಯಿಯನ್ನು (ಟೋಪಿ) ಧರಿಸಿದ್ದು, ಟೋಪಿಯ ಮೇಲ್ಭಾಗದಲ್ಲಿ ಗಂಟುಹಾಕಿದೆ. ಬಹುಶಃ ಉಣ್ಣೆಯಿಂದ ತಯಾರಿಸಿದ ಕುಲಾಯಿಯಂತಿದೆ. ಇದು ಇಂದಿನ ಮಂಕಿಕ್ಯಾಪ್‌ಗೆ ಹೋಲಿಕೆಯಾಗುತ್ತದೆ. ಆಭರಣಗಳು ಅಸ್ಪಷ್ಟವಾಗಿವೆ.

೩.೧.೫. ಸೈನಿಕರು

ಸೇನಾ ಬಲವು ಆಡಳಿತ ಅಂಗಗಳಲ್ಲಿ ಪ್ರಧಾನ ಪಾತ್ರವಹಿಸುತ್ತಿತ್ತು. ಈ ಸೇನಾ ಬಲದಲ್ಲಿ ಕಾಲ್ದಳ, ಅಶ್ವದಳ, ಗಜದಳಗಳು ಪ್ರಮುಖ ವಿಭಾಗಗಳಾಗಿವೆ.

ಕಾಲ್ದಳ

ಸೈನ್ಯದ ಬಹುಭಾಗವೆಲ್ಲ ಕಾಲ್ದಳವೇ ಆಗಿತ್ತು. ಇದು ಸೇನೆಯ ಮುಖ್ಯಭಾಗವೂ ಹೌದು. ಇವರು ವಾಹನರಹಿತವಾಗಿ ಯುದ್ಧಾಸ್ತ್ರಗಳೊಂದಿಗೆ ನೆಲದ ಮೇಲೆ ನಿಂತು ಹೋರಾಡುತ್ತಿದ್ದ ಯೋಧರ ಪಡೆಯಾಗಿದ್ದರಿಂದ 'ಕಾಲ್ದಳ'ವೆಂದು ಕರೆಯಲಾಗಿದೆ. ಅದರಂತೆ ಆನೆ, ಕುದುರೆ, ಮೇಲೆ ಕುಳಿತು ಹೋರಾಡುವ ಸೈನಿಕರನ್ನು 'ಮೇಲಾಳು'ಗಳೆಂದು ಶಾಸನಗಳು ಹೆಸರಿಸಿವೆ.[೪೮]

ವಿಜಯನಗರ ಸಾಮ್ರಾಜ್ಯದಲ್ಲಿ ಸೈನ್ಯಕ್ಕೆ ಯೋಧರನ್ನು ಆಯ್ಕೆ ಮಾಡಿಕೊಳ್ಳುತ್ತಿದ್ದ ವಿಧಾನವನ್ನು ಕುರಿತು ಬಾರ್ಬೋಸಾ ಈ ರೀತಿಯಾಗಿ ವಿವರಿಸುತ್ತಾನೆ, "ಸೈನ್ಯಕ್ಕೆ ಯೋಧನನ್ನು ಚುನಾಯಿಸಿ ಕೊಳ್ಳುವ ಮುನ್ನ ಅವನನ್ನು ಬೆತ್ತಲೆಯಾಗಿ ನಿಲ್ಲಿಸಿ ಅವನ ಮೈಕಟ್ಟು, ಉದ್ದ, ದಪ್ಪ ಇವುಗಳನ್ನು ನೋಡಿ, ಅವನ ಹೆಸರು, ತಂದೆ ತಾಯಿಗಳ ಹೆಸರು ಇತ್ಯಾದಿ ವಿಚಾರಗಳನ್ನು ತಿಳಿದುಕೊಂಡು

ಬರೆದುಕೊಳ್ಳುತ್ತಾರೆ. ಸಂಬಳದ ಬಟವಾಡೆ ಪುಸ್ತಕದಲ್ಲಿ ಅವನ ಈ ವಿವರಗಳೆಲ್ಲಾ ಇರುತ್ತವೆ. ಒಂದು ಸಲ ಸೈನ್ಯಕ್ಕೆ ಸೇರಿದ ನಂತರ ಬಿಟ್ಟು ಹೋಗುವುದು ಕಷ್ಟ. ತಪ್ಪಿಸಿಕೊಂಡು ಹೋಗಿ ಸಿಕ್ಕಿ ಬಿದ್ದರೆ ಬಹಳ ಕಠಿಣ ಶಿಕ್ಷೆ ಆಗುತ್ತದೆ. ನಾನಾ ಕಡೆಗಳಿಂದ ಬಂದು ಸೈನ್ಯಕ್ಕೆ ಸೇರಿದ ಸರದಾರರು ತಮ್ಮ ತಮ್ಮ ಮತಾನುಸಾರ ನಡೆದುಕೊಳ್ಳುವುದಕ್ಕೆ ಯಾವ ಅಡ್ಡಿಯೂ ಇಲ್ಲ".[೪೯] ಇದರಿಂದ ನಮಗೆ ಸ್ಪಷ್ಟವಾಗುವ ಅಂಶವೆಂದರೆ ಎಲ್ಲ ವರ್ಗದ ಜನರು ರಾಜನ ಸೈನ್ಯದಲ್ಲಿ ಸೇರಿದ್ದರು. ಅವರವರ ಮತಾ ಚರಣೆಗೆ ಅವಕಾಶ ನೀಡಲಾಗಿತ್ತು. ಇದು ಅವರಲ್ಲಿನ ಧಾರ್ಮಿಕ ಸಾಮರಸ್ಯ ಮನೋ ಭಾವನೆಯನ್ನು ತೋರಿಸುತ್ತದೆ. ಸೈನ್ಯಕ್ಕೆ ಯೋಧರ ಆಯ್ಕೆಯ ವಿಧಾನವು ಇಂದಿನ ಮಿಲಿಟರಿಗೆ ಸೇರಲು ನಡೆಸುವ ದೈಹಿಕ ಅರ್ಹತಾ ಪರೀಕ್ಷೆಯಂತಿದೆ.

ನಂಜುಂಡ ಕವಿಯು ರಾಮನಾಥ ಚರಿತದಲ್ಲಿ, ಕಂಪಿಲರಾಯನ ಸೈನ್ಯದಲ್ಲಿದ್ದ ಸೈನಿಕರಲ್ಲಿ ಕನ್ನಡಿಗರು, ತುರುಕರು, ಒಡ್ಡಿಯರು (ಒರಿಸ್ಸಾದವರು) ಗೌಳ, ಗುರ್ಜರ, ತೆಲುಗ, ತಿಗುಳ ಮುಂತಾದ ಪ್ರದೇಶದವರು ಇದ್ದುದ್ದಾಗಿ ಹೇಳುತ್ತಾನೆ.[೫೦] ಹೀಗೆ ಸೈನ್ಯದಲ್ಲಿ ವಿವಿಧ ಪ್ರದೇಶದ, ವಿವಿಧ ಮತಗಳ ಸೈನಿಕರಿದ್ದರೆಂಬುದು ತಿಳಿಯುವುದಲ್ಲದೇ ರಾಜರು ಸೈನಿಕರ ಮತಾಚರಣೆಗೆ ಅಡ್ಡಿಪಡಿಸುತ್ತಿರಲಿಲ್ಲ ಎಂಬುದಾಗಿ ತಿಳಿದುಬರುತ್ತದೆ. ಹಾಗಾಗಿ ವಿಜಯನಗರ ಕಾಲದ ಸೈನಿಕರ ವಸ್ತ್ರ ಮತ್ತು ಆಭರಣಗಳಲ್ಲಿ ಸಹಜವಾಗಿ ವಿಭಿನ್ನತೆ ಇತ್ತು ಎಂಬುದು ಸ್ಪಷ್ಟವಾಗುತ್ತದೆ.

ಸೈನಿಕರ ವಸ್ತ್ರ ಮತ್ತು ಆಭರಣಗಳು

ವಿಜಯನಗರ ಸಾಮ್ರಾಜ್ಯದ ಸೇನೆಯಲ್ಲಿ ವಿಭಿನ್ನ ಮತದ ಯೋಧರನ್ನು ಹಾಗೂ ಪ್ರಾದೇಶಿಕವಾಗಿ ವಿವಿಧ ರಾಜ್ಯಗಳ ಸೈನಿಕರನ್ನು ಆಯ್ಕೆ ಮಾಡಿ ಸೈನ್ಯಕ್ಕೆ ಸೇರಿಸಿಕೊಂಡಿದ್ದರು ಎಂಬಂಶವು ಪ್ರಾದೇಶಿಕ ಮತ್ತು ಮತಕ್ಕನ್ನುಗುಣವಾಗಿ ಅವರು ಧರಿಸುತ್ತಿದ್ದ ವಸ್ತ್ರ ಮತ್ತು ಆಭರಣಗಳಿಂದ ದೃಢಪಡುತ್ತದೆ. ಆಯಾಯ ಪಡೆಗಳ ಗುರುತುಸಿಗುವ ಸಲುವಾಗಿ ಬೇರೆ ಬೇರೆ ವಸ್ತ್ರಗಳನ್ನು ಧರಿಸುತ್ತಿದ್ದರು. ಆ ಕುರಿತು ಸಾಹಿತ್ಯ ಮತ್ತು ಶಿಲ್ಪಗಳಲ್ಲಿ ವಿವರಣೆಗಳಿವೆ. ಫೆರಿಸ್ತಾ ಒಂದೆಡೆ ಹಿಂದೂ ಸೈನಿಕರ ಯುದ್ಧ ಚತುರತೆಯನ್ನು ಕುರಿತು ಹೇಳುತ್ತಾ, "ಕರ್ನಾಟಕದ ಕಾಲಾಳುಗಳು ಬಂಕಾಪುರದ ಮುತ್ತಿಗೆಯಲ್ಲಿ ತಮ್ಮ ಜೀವವನ್ನು ತೃಣವಾಗಿ ಭಾವಿಸಿ, ನಗ್ನರಾಗಿ ತಮ್ಮನ್ನು ಸುಲಭವಾಗಿ ಹಿಡಿಯದಿರಲೆಂದು ಮೈಗೆಲ್ಲಾ ಎಣ್ಣೆಯನ್ನು ಲೇಪಿಸಿಕೊಂಡಿದ್ದರು"[೫೧] ಎಂದು ವರ್ಣಿಸಿದ್ದಾನೆ. ನಿಕಿಟಿನ್ ವಿವರಗಳು ಇದೇ ರೀತಿಯಾಗಿವೆ. ನಿಕಿಟಿನ್ ಹೇಳುವಂತೆ, "ಹಿಂದೂಗಳೆಲ್ಲಾ ಬರಿಗಾಲಿನಲ್ಲಿ ನಡೆಯುತ್ತಾರೆ. ಎಲ್ಲರೂ ಬೆತ್ತಲೆ. ಒಂದು ಕೈಯಲ್ಲಿ ಭರ್ಜಿಯನ್ನೂ, ಮತ್ತೊಂದು ಕೈಯಲ್ಲಿ ಗುರಾಣಿಯನ್ನೂ ಹಿಡಿದಿರುತ್ತಾರೆ. ಕೆಲವು ಸೇವಕರು ನೆಟ್ಟನೆಯ ಬಾಣಗಳನ್ನು ಹಿಡಿದಿರುತ್ತಾರೆ".[೫೨] ಬಹುಶಃ ಸೈನಿಕರು ಶತ್ರುಗಳ ಕೈಗೆ ಸಿಗದಿರುವಂತೆ ಮಾಡಲು ಈ ತಂತ್ರ ಬಳಸಿರಬಹುದಾಗಿದೆ.

ಪಾಯೇಸ್‌ನು ಮಹಾನವಮಿ ಉತ್ಸವದ ಸೇನಾ ಪಥಸಂಚಲನದ ಸಂದರ್ಭದಲ್ಲಿನ ಕಾಲ್ದಳದ ಯೋಧರು ಧರಿಸಿದ್ದ ವಸ್ತ್ರ ಮತ್ತು ಆಭರಣಗಳ ಕುರಿತು ದಾಖಲಿಸಿದ್ದಾನೆ. ಪಾಯೇಸ್ ವಿವರಿಸುವಂತೆ,

"ಕಾಲ್ದಳದ ಬಗ್ಗೆ ಹೇಳಬೇಕೆಂದರೆ ಅದು ಎಲ್ಲಾ ಗುಡ್ಡಗಳಲ್ಲಿ ಮತ್ತು ಕಣಿವೆಗಳಲ್ಲಿ ಕಿಕ್ಕಿರಿದು ನೆರೆದ ರೀತಿಗೆ, ಈ ನೋಟಕ್ಕೆ ಪ್ರಪಂಚದಲ್ಲೇ ಎಣೆಯಿರಲಿಲ್ಲ. ಈ ದಳದ ಕೆಲವರು ಧರಿಸಿದ ಬೆಲೆಯಾದ ಉಡುಪುಗಳು ಅವೆಲ್ಲಿಂದ ಬಂದವು ಮತ್ತು ಅವುಗಳ ತರತರ ವರ್ಣಗಳೆಷ್ಟೆಂಬುದನ್ನು ನಾನು ಹೇಳಲಾರೆ. ಅವರು ಹಿಡಿದಿದ್ದ ಕತ್ತಿ ಗುರಾಣಿಗಳ ಅಲಂಕಾರ ಅದ್ಭುತವಾಗಿತ್ತು. ಕೆಲವು ಗುರಾಣಿಗಳ ಮೇಲೆ ಚಿನ್ನ ಬೆಳ್ಳಿಯ ಹೂಗಳು. ಕೆಲವಕ್ಕೆ ಮೇಲೆ ಸುಂದರವಾದ ಬೆಳ್ಳಿಯ ರೇಶಿಮೆಯ ಕೆಲಸ. ಮತ್ತೆ ಕೆಲವಕ್ಕೆ ವಿವಿಧ ವರ್ಣಗಳ ಲೇಪನ. ಇನ್ನೂ ಕೆಲವಕ್ಕೆ ಕಪ್ಪಾದ ಮೆರುಗು ಗೊಟ್ಟು ಕನ್ನಡಿಯ ಹೊಳಪು ಬರುವಂತೆ ಮಾಡಿರುವ ಕೆಲಸ"[೫೩] ಎಂಬುದಾಗಿ ಕಾಲ್ದಳದವರನ್ನು ಹಾಗೂ ಅವರು ಯುದ್ಧದಲ್ಲಿ ಬಳಸುತ್ತಿದ್ದ ಆಯುಧಗಳ ಅಲಂಕರಣೆಯ ಕುರಿತು ತಿಳಿಸುತ್ತಾನೆ. ಆಯುಧಗಳಿಗೂ ವಿವಿಧ ರೀತಿಯ ವಸ್ತ್ರ ಮತ್ತು ಆಭರಣಗಳನ್ನು ಹಾಗೂ ವಿವಿಧ ಬಣ್ಣಗಳ ಲೇಪನವನ್ನು ಈ ಸೈನಿಕರು ಮಾಡುತ್ತಿದ್ದರು ಎಂಬುದು ತಿಳಿದುಬರುತ್ತದೆ. ಅಲ್ಲದೇ ಆಯುಧಗಳ ಅಲಂಕರಣೆಯ ಮೇಲೆ ಅವರ ಕಾಳಜಿ ಎಷ್ಟಿತೆಂಬುದು ಅರ್ಥವಾಗುತ್ತದೆ. ಬಿಲ್ಲುಗಾರರ ಆಯುಧಗಳ ಅಲಂಕರಣೆಯ ಕುರಿತು ಅದೇ ವಿವರಗಳನ್ನು ನೀಡುತ್ತಾನೆ.

ನ್ಯೂನಿಜ್ ಕೊಡುವ ವಿವರಣೆ ಹೀಗಿದೆ, "ರಾಜನು ತನ್ನ ರಕ್ಷಣಾದಳದ ಒಳ್ಳೊಳ್ಳೆಯ ಆರು ಸಾವಿರ ಕುದುರೆಗಳನ್ನು ಚುನಾಯಿಸಿದನು. ಈ ದಳದವರು ಬಿಲ್ಲುಬಾಣಗಳಿಂದ ಭಲ್ಲೆ ಗುರಾಣಿಗಳಿಂದ ಸಜ್ಜಿತರಾಗಿದ್ದರು. ಎಲ್ಲಾ ಯೋಧರೂ ಸುಸಜ್ಜಿತರಾಗಿದ್ದರು. ಬಿಲ್ಲುಗಾರರೂ ಖಡ್ಗಧಾರಿಗಳೂ ರಕ್ಷಾ ಕವಚ ಧರಿಸಿದ್ದರು. ಗುರಾಣಿಗಳನ್ನು ಹಿಡಿದವರು ಸೊಂಟಕ್ಕೆ ಕತ್ತಿ ಮತ್ತು ಈಟಿಗಳನ್ನು ಸಿಕ್ಕಿಸಿದ್ದರು. ಗುರಾಣಿ ಶರೀರವನ್ನೆಲ್ಲಾ ರಕ್ಷಣೆ ಮಾಡುವಷ್ಟು ದೊಡ್ಡದಾಗಿದ್ದುದ್ದರಿಂದ ರಕ್ಷಾಕವಚದ ಅವಶ್ಯಕತೆ ಇರಲಿಲ್ಲ"[೫೪] ಎಂಬುದಾಗಿ ದಾಖಲಿಸಿದ್ದಾನೆ. ಇದರಿಂದ ಸೈನಿಕರ (ಪದಾತಿ ದಳದ ಯೋಧರ) ಉಡುಗೆ ತೊಡುಗೆಗಳು ಹಾಗೂ ಆಯುಧಗಳ ಪ್ರಮಾಣವು ರಕ್ಷಣಾತ್ಮಕ ಉದ್ದೇಶಕ್ಕಾಗಿಯೇ ತಯಾರಿಸಲಾದ ವಸ್ತ್ರಗಳಾಗಿದ್ದವು ಎಂಬುದಂತೂ ಸ್ಪಷ್ಟ.

ಹಂಪಿಯ ಹಜಾರ ರಾಮಚಂದ್ರ ದೇವಾಲಯದ ಪ್ರಾಕಾರದಲ್ಲಿರುವ ಬಿಲ್ಲು ಬಾಣ ಹಿಡಿದ ಯೋಧರ ಶಿಲ್ಪಪಟ್ಟಿಕೆಯಲ್ಲಿರುವ ಬಿಲ್ಲುಗಾರರು ಎಡಗೈಯಲ್ಲಿ ಬಿಲ್ಲು ಮತ್ತು ಬಲಗೈಯಲ್ಲಿ ಬಾಣ ಹಿಡಿದಿದ್ದು ಒಬ್ಬರ ನಂತರ ಒಬ್ಬರು ಹೆಜ್ಜೆ ಮುಂದೆ ಹಾಕುತ್ತಿರುವಂತಿದೆ. ಈ ಶಿಲ್ಪದಲ್ಲಿರುವ ಬಿಲ್ಲುಗಾರರು ತುರುಬನ್ನು ಹಾಕಿದ್ದು, ವೀರಗಚ್ಚೆಯನ್ನು ಹಾಕಿ ಧೋತ್ರ ವನ್ನು ಮೊಣಕಾಲಿನವರೆಗೆ ಮಾತ್ರ ಧರಿಸಿದ್ದು ಉತ್ತರೀಯವನ್ನು ಧೋತ್ರದ ಮೇಲೆ ಕಟಿ ಭಾಗದಲ್ಲಿ ಗಂಟು ಹಾಕಿದ್ದಾರೆ. ಸಣ್ಣ ವೃತ್ತ ಕುಂಡಲಗಳ ದ್ವಿಸರವನ್ನು ಮತ್ತು ಕಾಲ್ಗಡಗ ಧರಿಸಿದ್ದಾರೆ. ಬಹುತೇಕ ಎಲ್ಲರು ಧರಿಸಿರುವ ವಸ್ತ್ರ ಮತ್ತು ಆಭರಣಗಳು ಒಂದೇ ರೀತಿಯಾವುಗಳಾಗಿವೆ. ಕತ್ತಿವರಸೆಯವರ ಉಡುಗೆ–ತೊಡುಗೆಗಳು ಬಿಲ್ಲುಗಾರರು ಧರಿಸುವ ವಸ್ತ್ರಗಳಂತೆ ಇವೆ. ಆದರೆ ಭರ್ಜಿ ಹಿಡಿದು ಹೋರಾಡುತ್ತಿರುವ ವೀರನು ಛನ್ನವೀರ ಧರಿಸಿದ್ದಾನೆ.

ಆದರೆ ಮಹಾನವಮಿ ದಿಬ್ಬದಲ್ಲಿರುವ ಕತ್ತಿವರಸೆ ಶಿಲ್ಪದಲ್ಲಿ ಕತ್ತಿವರಸೆಗಾರರು ಶಿರಸ್ತ್ರಾಣ ಗಳನ್ನು ಧರಿಸಿರುವುದು ಕಂಡುಬರುತ್ತದೆ. ಇದೇ ಮಾದರಿಯ ಸೈನಿಕ ಶಿಲ್ಪಗಳು ಹಂಪಿಯ ಕೃಷ್ಣ

ದೇವಾಲಯದ ಗೋಪುರ ಭಾಗದಲ್ಲಿ(ಚಿತ್ರ-೪) ಕಂಡು ಬಂದಿದ್ದು, ಸೈನಿಕರು ಶಿರಸ್ತ್ರಾಣ ಧರಿಸಿದ್ದು, ಬಲಗೈಯಲ್ಲಿ ಕತ್ತಿ ಎಡಗೈಯಲ್ಲಿ ಹಿಡಿದಿರುವ ಗುರಾಣಿ ಅವರ ದೇಹವನ್ನು ಮುಚ್ಚಿವೆ. ಇವು ಅವರ ರಕ್ಷಣಾ ಸಾಧನಗಳಂತೆ ಕಂಡುಬರುತ್ತವೆ. ಶ್ರೀಶೈಲ ಮಲ್ಲಿಕಾರ್ಜುನ ದೇವಾಲಯದ ಪ್ರಾಕಾರದಲ್ಲಿರುವ ಕತ್ತಿವರಸೆ ಪಡೆಯಲ್ಲಿ ಗುರಾಣಿಗಳ ಮೇಲೆ ಆರು ದಳಗಳಿರುವ ಪದ್ಮದ ಹೂವಿನ ಅಲಂಕರಣೆಯಿದೆ. ಗುರಾಣಿಗಳ ಅಲಂಕರಣೆಯ ಕುರಿತಾಗಿ ಪಾಯೇಸ್‌ನ ವಿವರಣೆಗಳಿಗೆ ಈ ಶಿಲ್ಪವು ಸಮರ್ಥನೆ ನೀಡುತ್ತದೆ.

ಹಾಗಾಗಿ ವಸ್ತ್ರ ಮತ್ತು ಆಭರಣಗಳನ್ನು ಜನಸಾಮಾನ್ಯರು ಪ್ರಾಣಿ ಪಕ್ಷಿಗಳಿಗೆ ಅಲ್ಲದೇ ಯುದ್ಧೋಪಕರಣಗಳ ಅಲಂಕರಣೆಗೂ ಬಳಸುತ್ತಿದ್ದರು ಎಂಬುದು ವಿಶೇಷ. ಇದು ಅಲಂಕರಣಾ ಶ್ರೀಮಂತಿಕೆಯನ್ನು ಪ್ರತಿಬಿಂಬಿಸುವುದಾಗಿದೆ.

ತಮಿಳುನಾಡಿನ ಶ್ರೀರಂಗಂನ ಶ್ರೀರಂಗನಾಥ ದೇವಾಲಯದ ಉಬ್ಬು ಶಿಲ್ಪವೊಂದರಲ್ಲಿ ಖಡ್ಗ ಹಿಡಿದ ವೀರಯೋಧನ ಚಿತ್ರಣವಿದೆ. ಈ ವೀರನು ಧರಿಸಿರುವ ಆಭರಣಗಳು ತುಂಬಾ ವಿಶೇಷವಾಗಿವೆ. ತಲೆಯಲ್ಲಿ ತುರುಬನ್ನು ಹಾಕಿದ್ದು, ಅದನ್ನು ಎರಡೆಳೆಯ ಮುತ್ತಿನ ಸರದಿಂದ ಬಿಗಿಗೊಳಿಸಿದ್ದಾನೆ. ಚೌಕಳಿಯ ಕರ್ಣಾಭರಣ ಧರಿಸಿದ್ದು, ವೀರ ಸರಪಳಿಯನ್ನು ಕುತ್ತಿಗೆ ಭಾಗದಿಂದ ಕಟಿಭಾಗದವರೆಗೆ (ಛನ್ನವೀರ ಮಾದರಿ) ಧರಿಸಿರುವುದು ವಿಶೇಷ. ಹಸ್ತ ಸರಗಳು, ಕಾಲಿಗೆ ನೂಪುರ, ಕಾಲ್ಗಡಗಗಳನ್ನೂ ಧರಿಸಿದ್ದಾನೆ. ಧೋತ್ರವನ್ನು ವೀರಗಚ್ಚೆ ಹಾಕಿ ಪಾದಗಳವರೆಗೆ ಧರಿಸಿರುವನು. ಧೋತ್ರವು ಅಲಂಕರಣೆಯಿಂದ ಕೂಡಿದ್ದು, ಅದರ ಮೇಲೆ ಮೇಖಲೆಯಿದೆ. ವಸ್ತ್ರ ಮತ್ತು ಆಭರಣಗಳ ಹಿನ್ನೆಲೆಯಲ್ಲಿ ಗಮನಿಸಿದಾಗ ಈ ಯೋಧ ರಾಜಮನೆತನಕ್ಕೆ ಸೇರಿದವನಾಗಿರಬೇಕು, ಹಾಗಾಗಿ ಉತ್ತಮ ರೀತಿಯ ವಸ್ತ್ರ ಮತ್ತು ಆಭರಣಗಳನ್ನು ಚಿತ್ರಿಸಲಾಗಿದೆ.

ಒಟ್ಟಾರೆ ವಿಜಯನಗರ ಕಾಲದ ಸೈನ್ಯದಲ್ಲಿ ಅಪಾರ ಸಂಖ್ಯೆಯ ಕಾಲ್ದಳವಿದ್ದುದ್ದರಿಂದ ಎಲ್ಲಾ ಯೋಧರಿಗೆ ರಕ್ಷಾ ಕವಚಗಳನ್ನು ಒದಗಿಸಲು ಅಸಾಧ್ಯವಾಗುತ್ತಿತ್ತು. ಕಾಲ್ದಳವನ್ನು ಮುನ್ನಡೆಸುವ ಮುಖಂಡನು ಈ ರೀತಿಯ ರಕ್ಷಾ ಕವಚ ಉತ್ತಮ ವಸ್ತ್ರ ಮತ್ತು ಆಭರಣ ಗಳನ್ನು ಧರಿಸಿರುವ ಸಾಧ್ಯತೆಯನ್ನು ತಳ್ಳಿಹಾಕುವಂತಿಲ್ಲ. ಆದರೆ ಉಳಿದ ಯೋಧರು ಸರಳ ಉಡುಗೆ-ತೊಡುಗೆಗಳನ್ನು ಧರಿಸುತ್ತಿದ್ದರು ಎಂಬುದಂತೂ ಸ್ಪಷ್ಟ.

ಅಶ್ವದಳ-ರಾವುತರು

ಕುದುರೆಯ ಸವಾರಿಯಲ್ಲಿ ಪರಿಣತಿ ಹೊಂದಿರುವ ಹಾಗೂ ಸವಾರಿಯೊಂದಿಗೆ ಆಯುಧಗಳನ್ನು ಯುದ್ಧದಲ್ಲಿ ಸರಿಯಾಗಿ ಪ್ರಯೋಗಿಸುವ ನಿಪುಣತೆಯುಳ್ಳ ಯೋಧರನ್ನು 'ರಾಹುತ' ಅಥವಾ 'ರಾವುತ' ಎಂದು ಕರೆಯುತ್ತಾರೆ. ಕುದುರೆಯ ಮೇಲೆ ಕುಳಿತು ಹೋರಾಡುತ್ತಿದ್ದುದ್ದರಿಂದ ಇವರನ್ನು ಮೇಲಾಳುಗಳೆಂದೂ ಕರೆಯಲಾಗುತ್ತಿತ್ತು. ಹಾಗಾಗಿ ಈ ಸಂದರ್ಭದಲ್ಲಿ ರಾವುತರು ಧರಿಸುತ್ತಿದ್ದ ವಸ್ತ್ರ ಮತ್ತು ಆಭರಣಗಳು ರಕ್ಷಣಾ ಸಾಧನ ಗಳಾಗಿಯೇ ಇರುತ್ತಿದ್ದವು ಎಂಬುದಂತೂ ಸ್ಪಷ್ಟ. ವಿಜಯನಗರ ಕಾಲದ ರಾವುತರ ಕುರಿತು ಅನೇಕ ಸಾಹಿತ್ಯ ಕೃತಿಗಳು ಮತ್ತು ವಿದೇಶಿ

ವರದಿಗಳು ಮಾಹಿತಿಯನ್ನು ಒದಗಿಸುತ್ತವೆ.

ನಂಜುಂಡ ಕವಿಯ ರಾಮನಾಥ ಚರಿತದಲ್ಲಿ ಯುದ್ಧಭೂಮಿಯಲ್ಲಿನ ರಾವುತರು ಧರಿಸಿದ್ದ ವಸ್ತ್ರಾಭರಣಗಳನ್ನು ಕುರಿತು ಹಲವು ಪದ್ಯಗಳಲ್ಲಿ ವಿವರಣೆಗಳಿವೆ. ಅದರಂತೆ,

ಸೊಲ್ಲಿವನಾರು ಕೆಳದಿ ಸಮಕಟ್ಟಿನ
ಝಲ್ಲಿಯ ಬಲುರಾವುತನು
ಝಲ್ಲಿಪಿಲ್ಲಿಯನಾಗನಿವನೀಗ ನೋಡೆಳೆ
ಹುಲ್ಲೆಗಣ್ಣ ಬಲೆ ರತ್ನಾಜಿ[೫೫] ಎಂಬುದಾಗಿ ವರ್ಣಿಸಿದೆ.

ಇನ್ನೊಂದು ಪದ್ಯದಲ್ಲಿ,.

ಉತ್ತಮ ವಜ್ರದ ಠೌಳಿ ರನ್ನದ ಜೋಡು
ಮುತ್ತಿನ ಸವಗ ಮಢೆಯಲು
ಕೆತ್ತಿದ ರತ್ನದ ರಾವುತನಂತೆ ಕ
ಣ್ಗೆತ್ತನಾ ಕುವರ ಕೌತುಕವ[೫೬]

ರಾವುತರು ಬಳಸುತ್ತಿದ್ದ ವಜ್ರದ ಶಿರಸ್ತ್ರಾಣ, ಚಿನ್ನದ ಜೋಡು ಮುಂತಾದವುಗಳ ಕುರಿತು ವಿವರಣೆ ನೀಡುತ್ತದೆ. ಕುಮಾರರಾಮನು ರಾಜ ಮನೆತನದವನಾಗಿದ್ದ ಕಾರಣ ಇಂತಹ ಉತ್ತಮ ರಕ್ಷಾಭರಣಗಳನ್ನು ಧರಿಸಿದ್ದನು. ಸೇನೆಯಲ್ಲಿದ್ದ ತುರುಕ ರಾವುತರ ವೇಷಭೂಷಣವನ್ನು ಕುರಿತು ರಾಮನಾಥ ಚರಿತದ ಪದ್ಯವೊಂದರಲ್ಲಿ ಹೀಗೆ ವರ್ಣಿಸಿದೆ.

ಗಡ್ಡವ ಬೆಳೆಯಿಸಿಕೊಂಡು ಮಂಡೆಯೊಳೊಂದು
ದೊಡ್ಡ ಸುತ್ತನು ಸುತ್ತಿಕೊಂಡು
ಗೊಡ್ಡಾವಿನಂತೆ ತಿರುಗುವ ರಾವುತರಿವ
ರಡ್ಡಲಾದಪರೆ ರಾಮನಿಗೆ[೫೭]

ಈ ಪದ್ಯದಲ್ಲಿ ಮುಸ್ಲಿಂ ಸೈನಿಕರು ಧರಿಸುತ್ತಿದ್ದ ರುಮಾಲಿನ ಚಿತ್ರಣ ನೀಡುತ್ತದೆ.

ಕಂಠೀರವ ನರಸರಾಜ ವಿಜಯದಲ್ಲಿ ತುರುಕ ಪಡೆಯ ಕುರಿತು ಈ ರೀತಿಯಾಗಿ ವರ್ಣಿಸಿದೆ,

ಕೂಳ ಪಾಳೆಯದ ಸಂಗಡ ಕುದುರೆಯ ಮೇಲೆ
ಕಾಲ ಕುಪ್ಪಸ ಪಾಪೋಸು
ಜೋಲುವ ರವಿಕೆಯ ಮೊಲೆಕಟ್ಟುಗಳ ಚೆಲ್ವ
ಸೂಳೆಯರೈದಿದರಾಗ[೫೮]

ಈ ಪದ್ಯದಲ್ಲಿ ಮುಸ್ಲಿಂ ರಾವುತರು ಕಾಲಕುಪ್ಪಸ ಎಂದರೆ ಪಾದಚಲ್ಲಣಗಳು (ಪ್ಯಾಂಟ್), ಪಾಪೋಸು ಎಂದರೆ ಚಪ್ಪಲಿ, ಜೋಲುವ ರವಿಕೆಯೆಂದರೆ ಉದ್ದನೆಯ ನಿಲುವಂಗಿಯನ್ನು ಧರಿಸಿದ್ದರು ಎಂಬುದು ಸ್ಪಷ್ಟವಾಗುತ್ತದೆ. ಈ ಮೇಲಿನ ವಿವರಣೆಗಳಿಗೆ ಪುಷ್ಟಿಯಾಗಿ ಹಂಪಿಯ ವಿಠಲ ದೇವಾಲಯದ ಸಿಂಹವ್ಯಾಳಿ ಶಿಲ್ಪಗಳ ಮೇಲಿನ ರಾವುತರ (ವೀರರ) ವಸ್ತ್ರಗಳು ಉತ್ತಮ ನಿದರ್ಶನವಾಗಿವೆ.

ಈ ಮೇಲಿನ ವಿವರಣೆಗಳು ದೇಶಿಯ ಸಾಹಿತ್ಯ ಆಕರಗಳಿಂದ ಲಭ್ಯವಾದರೆ, ವಿಜಯನಗರಕ್ಕೆ ಭೇಟಿ ನೀಡಿದ್ದ ವಿದೇಶಿ ಪ್ರವಾಸಿಗರ ವಿವರಗಳು ಸಹ ರಾವುತರ ವಸ್ತ್ರ ಮತ್ತು ಆಭರಣಗಳ ಮೇಲೆ ಬೆಳಕು ಚೆಲ್ಲುತ್ತವೆ.

ಪಾಯೇಸ್ ಹೇಳುವಂತೆ, "ರಾವುತರು ಚರ್ಮದ ಹಾಗೂ ಕಿಂಕಾಪು ಮತ್ತು ಮಕಮಲ್ಲಿನಿಂದ ತಯಾರಾದ ಲೂದಿಗಳನ್ನು (ಅಂಗಿಗಳನ್ನು) ತೊಟ್ಟಿದ್ದರು. ತಲೆಯಿಂದ ಕುತ್ತಿಗೆ ಯವರೆಗೂ ಬರುವ ಶಿರಸ್ತ್ರಾಣಗಳನ್ನು ಹಾಕಿಕೊಂಡಿದ್ದರು. ಮುಖವನ್ನು ಮುಚ್ಚಿಕೊಳ್ಳು ವುದಕ್ಕೆ ಬೇಕಾದ ರಕ್ಷಣೋಪಾಯ ಸಲಕರಣೆಯನ್ನು ಒದಗಿಸಿಕೊಂಡಿದ್ದರು. ಕುತ್ತಿಗೆಯಲ್ಲಿ ಚಿನ್ನದ ಗಿಲೀಟಿನ, ಇಲ್ಲವೆ ಕನ್ನಡಿಯಂತೆ ಪ್ರಕಾಶಮಾನವಾದ ಉಕ್ಕಿನ ಕೊರಳಾಪುರಗಳನ್ನು ಧರಿಸಿದ್ದರು. ನಡುವಿಗೆ ಗಂಡುಗೊಡಲಿಯನ್ನು ಸಿಕ್ಕಿಸಿ ಕೈಯಲ್ಲಿ ಭಲ್ಲೆ ಭರ್ಜಿಗಳನ್ನು ಹಿಡಿದಿದ್ದರು. ಎಲ್ಲರಿಗೂ ಮಕಮಲ್ಲು ಮತ್ತು ನಸುಗೆಂಪಿನ ಕಿತ್ತನಾರಿನಿಂದ ಮಾಡಿದ ಛತ್ರಿಗಳು"[೫೯] ಎಂಬುದಾಗಿ ವಿವರಿಸುತ್ತಾನೆ. ನ್ಯೂನಿಜ್ ಸಹ ಇದೇ ರೀತಿಯಲ್ಲಿ ರಾವುತರನ್ನು ವರ್ಣಿಸುತ್ತಾನೆ. ಅವನು ವರ್ಣಿಸುವಂತೆ, "ಸವಾರರು ಗಂಡುಡುಪನ್ನು ಧರಿಸಿ ಕೈಯಲ್ಲಿ ಆಯುಧಗಳನ್ನು ಹಿಡಿದು ತಲೆಗೆ ಶಿರಸ್ತ್ರಾಣಗಳನ್ನು ಧರಿಸಿದ್ದರು."[೬೦]

ನ್ಯೂನಿಜ್‌ನು ಅಚ್ಯುತರಾಯನ ಕಾಲದಲ್ಲಿ ವಿಜಯನಗರಕ್ಕೆ ಭೇಟಿ ನೀಡಿದ್ದನು. ಅವನು ಹೇಳುವಂತೆ, "ವಿಜಯನಗರದ ಅರಸರುಗಳಿಗೆ ಕುದುರೆಗಳನ್ನು ಸಾಕುವುದೆಂದರೆ ಬಲು ಆಸೆ. ಯಾವಾಗಲೂ ಇವರ ಲಾಯಗಳಲ್ಲಿ ಎಂಟನೂರು, ಒಂಭೈನೂರು ಕುದುರೆಗಳು, ನಾನೂರು, ಐನೂರು ಆನೆಗಳು ಇರುತ್ತವೆ. ಈಗ ಆಳುವ ಅಚ್ಯುತರಾಯನ ಲಾಯದಲ್ಲಿ ಏಳುನೂರು ಕುದುರೆಗಳು, ನಾನೂರು ಆನೆಗಳೂ ಇವೆ. ಇವುಗಳನ್ನು ಸಾಕಲು ದಿನಕ್ಕೆ ಎರಡು ಸಾವಿರ ಚಿನ್ನದ ಪಾರ್ದಂವ್‌ಗಳು ಖರ್ಚಾಗುತ್ತವೆ"[೬೧] ಎಂದು ವಿವರಿಸುತ್ತಾನೆ. ಮುಂದುವರೆಸಿ, "ರಾಜನ ಬಳಿ ಯಾವಾಗಲೂ ಐವತ್ತು ಸಾವಿರ ಸಂಬಳದ ಸಿಪಾಯಿಗಳಿರುತ್ತಾರೆ. ಇವರಲ್ಲಿ ಅರಮನೆಯ ರಕ್ಷಣಾದಳಕ್ಕೆ ಸೇರಿದ ಆರು ಸಾವಿರ ರಾವುತರಿದ್ದಾರೆ."[೬೨] ಎಂದು ವಿವರಿಸುವಾಗ ರಾಜನ ರಕ್ಷಣಾದಳದಲ್ಲಿದ್ದ ರಾವುತರ ಸಂಖ್ಯೆಯನ್ನು ದಾಖಲಿಸುತ್ತಾನೆ. ಪಾಯೇಸ್ ಮತ್ತು ನ್ಯೂನಿಜ್‌ರು ನೀಡಿರುವ ವರ್ಣನೆಗಳಲ್ಲಿ ಸತ್ಯಾಂಶಗಳಿಲ್ಲದಿಲ್ಲ.

ಬುಸಾತಿನೆ-ಸಲಾತೀನ ಕೃತಿಯಲ್ಲಿ ತಾಳೀಕೋಟೆ ಯುದ್ಧದ ಸೋಲಿನ ನಂತರದ ಯುದ್ಧರಂಗದ ಪರಿಸ್ಥಿತಿಯನ್ನು ಹೀಗೆ ವಿವರಿಸುತ್ತದೆ, "ಮುಸಲ್ಮಾನ ಬಾದಷಹರ ಯಶಸ್ವೀ ಸೈನ್ಯದ ಯೋಧರು ಬಂಗಾರ-ಬೆಳ್ಳಿಯ ಆಭರಣಗಳು, ಮುತ್ತುರತ್ನಗಳು, ಕುದುರೆಗಳು, ತಲವಾರಗಳನ್ನು ಮತ್ತು ತಲವಾರ ಇತ್ಯಾದಿ ಶಸ್ತ್ರಗಳಿಂದ ತಲೆಗೆ ಪೆಟ್ಟು ಬೀಳದಂತೆ ಧರಿಸುವ ಲೋಹದ ಟೊಪ್ಪಿಗೆಗಳನ್ನು ಚಿಲಖತ್ತುಗಳನ್ನು, ಸೇವಕ, ಸೇವಕಿಯರನ್ನು ಮತ್ತೆಷ್ಟೋ ಪದಾರ್ಥಗಳನ್ನು ಹರಣ ಮಾಡಿ ತಮ್ಮ ಉಳಿದ ಆಯುಷ್ಯಪರ್ಯಂತ ಹೊಟ್ಟೆಪಾಡಿಗಾಗಿ ದುಡಿಯುವ ಗರಜು ಇಲ್ಲವೆಂಬಂತೆ ಶ್ರೀಮಂತರಾದರು".[೬೩]

ರಾವುತರು ತಮ್ಮ ರಕ್ಷಣೆಗೆ ಎದೆ ಕವಚ, ಉಕ್ಕಿನ ಕೊರಳಾಪುರ ಮತ್ತು ಲೋಹದ

ಟೊಪ್ಪಿಗೆ (ಶಿರಸ್ತ್ರಾಣ) ಮುಂತಾದವುಗಳನ್ನು ಯುದ್ಧ ಸಂದರ್ಭಗಳಲ್ಲಿ ಧರಿಸಬೇಕಾಗಿದ್ದ ಅತ್ಯವಶ್ಯಕ ರಕ್ಷಣಾ ಸಾಧನಗಳಾಗಿದ್ದವು.

ವಿಜಯನಗರ ಸೈನ್ಯದಲ್ಲಿದ್ದ ಕೆಲವು ಪ್ರಮುಖ ರಾವುತರ ಹೆಸರುಗಳನ್ನು ಶಾಸನಗಳು ಉಲ್ಲೇಖಿಸಿವೆ. ವಿಜಯನಗರ ಕಾಲದಲ್ಲಿ ರಾಜರಿಂದ ರಾವುತರು ಭೂದಾನ ಸ್ವೀಕರಿಸುತ್ತಿದ್ದ ಜೊತೆಗೆ ರಾವುತರು ಸಹ ದಾನ ಧರ್ಮಗಳನ್ನು ಮಾಡಿರುವ ಉಲ್ಲೇಖಗಳನ್ನು ಶಾಸನ ಗಳಿಂದ ತಿಳಿಯಬಹುದು. ಅದರಂತೆ ಕ್ರಿ.ಶ. ೧೪೩೬ರ ಎರಡನೆ ದೇವರಾಯನ ಕಾಲಕ್ಕೆ ಸೇರಿದ ಶಾಸನದಲ್ಲಿ, "ಮುದಗಲ್ಲು (ರಾಯಚೂರು ಜಿಲ್ಲೆ) ಸಿಂಪಿಗೆ ಭೂತನಾಥನ ಮಗ ರಾಹುತ್ತ ವೀರಂಣನು ಮುದಗಲ್ಲು ಧಾಳಿಯಲ್ಲಿ ವೀರತನದಿಂದ ಹೋರಾಡಿ ಬೆಟ್ಟದ ಕೋಟೆಯಲ್ಲಿದ್ದ ಸುಲ್ತಾನನ ಹೊನ್ನ ಕಳಸವನ್ನು ತರುತ್ತಾನೆ. ಆ ಹೊನ್ನ ಕಳಸವನ್ನು ದೇವರಾಯ ಮಹಾರಾಯರ ಬಳಿಗೆ ಕಳುಹಿಸಲಾಗಿ ಅದನ್ನು ನೋಡಿ ಅರಸನು ಮೆಚ್ಚುತ್ತಾನೆ. ಇದಕ್ಕೆ ಸಂತೋಷದಿಂದ ವರಂಣ ನಾಯಕ ಮತ್ತು ಮುದಗಲ್ಲು ಪ್ರಜೆಗಳು ಕೂಡಿಕೊಂಡು ಆ ರಾಹುತ ವೀರಣ್ಣನಿಗೆ ಮೇಟಿಗೊಳಗದ ಭೂಮಿಯನ್ನು ದಾನವಾಗಿ ನೀಡುವರು"[೬೪] ಎಂಬ ಆಂಶವನ್ನು ತಿಳಿಸುತ್ತದೆ.

ಕ್ರಿ.ಶ. ೧೫೨೬ರ ಕಾಲಕ್ಕೆ ಸೇರಿದ ಶ್ರೀಕೃಷ್ಣದೇವರಾಯನ ಈ ಶಾಸನದಲ್ಲಿ, "ಕ್ಷತ್ರಿಯ ರಾದ ವಿಶ್ವನಾಥರ ರಾವುತರ ಮಕ್ಕಳು ರಂಗನಾಥ ರಾವುತರು ಶ್ರೀ ಕಲ್ಲಿನಾಥದೇವರ ಸನ್ನಿಧಿ ಯಲ್ಲಿ ಮಹಾರಾಯರಿಗೆ ಧರ್ಮವಾಗಬೇಕೆಂದು ಬ್ರಾಹ್ಮಣ ಭೋಜನಾದಿಗಳಿಗೆ ಹಾಗೂ ಷಡ್‌ದರ್ಶನ ಮೊದಲಾದವರಿಗೆ ಸತ್ರ ನಡೆಯುವುದಕ್ಕೆ ಜಗಲೂರು ಸೀಮೆಯೊಳಗಣ ನಿಬಗೂರು ಗ್ರಾಮವನ್ನು ದಾನ ನೀಡಿದ್ದಾರೆ".[೬೫]

ಶ್ರೀಕೃಷ್ಣದೇವರಾಯನ ಅಶ್ವದಳದಲ್ಲಿ ಮುರಾರಿ ರಾವುತ ಮತ್ತು ವಿಸಣರಾವುತರು ಸೇವೆ ಸಲ್ಲಿಸುತ್ತಿದ್ದುದು ಚಟ್ನಹಳ್ಳಿ ಶಾಸನದಿಂದ ತಿಳಿದುಬರುತ್ತದೆ.[೬೬] ರಾಯವಾಚಕಮುದಲ್ಲಿ ಮತ್ತು ಶ್ರೀಕೃಷ್ಣ ದೇವರಾಯನ ದಿನಚರಿಯಲ್ಲಿ ಪ್ರಾದೇಶಿಕತೆಯ ಹಿನ್ನೆಲೆಯಲ್ಲಿ, "ಮೊರಸ ರಾವುತರು, ಕಬ್ಬಿಲ ರಾವುತರು, ತುಳುವ ರಾವುತರು ವಿಜಯನಗರದ ಸೇನೆಯಲ್ಲಿದ್ದರು"[೬೭] ಎಂಬುದಾಗಿ ತಿಳಿಸಿದೆ.

ರಾಮನಾಥ ಚರಿತವು ಕಂಪಿಲರಾಯನ ಸೈನ್ಯದಲ್ಲಿದ್ದ ರಾವುತರನ್ನು ಹೀಗೆ ಉಲ್ಲೇಖಿಸುತ್ತದೆ:

ಲಾಳ ರಾವುತರಾರಿಯರಾವುತರು ಕೈ
ಮೇಳದ ಕನ್ನೋಜಿಗಳು
ಗೌಳರಾವುತರು ಗುರ್ಜರ ರಾವುತರು ಬಂದ
ರಾಳುತನದ ಮತ್ಸರದೊಳು[೬೮]

ಎಂದು ಹೆಸರಿಸಿರುವುದು ವಿವಿಧ ಗೌಡ, ಗೂರ್ಜರ ಇನ್ನು ಮುಂತಾದ ಪ್ರದೇಶಗಳಿಂದ ಬಂದ ರಾವುತರು ಸೇನೆಗಳಲ್ಲಿದ್ದರೆಂಬುದನ್ನು ಸಮರ್ಥಿಸುತ್ತದೆ. ಸೇನೆಯಲ್ಲಿದ್ದ ರಾವುತರ ರಕ್ಷಣಾ ಸಾಧನಗಳು ವಸ್ತ್ರ ಮತ್ತು ಆಭರಣಗಳ ಬಳಕೆಯಾಗಿರುವುದನ್ನು ಮೇಲಿನ ಎಲ್ಲಾ ವಿವರಣೆಗಳು ಪುಷ್ಟೀಕರಿಸುತ್ತವೆ.

ಆಂಧ್ರಪ್ರದೇಶದ ಶ್ರೀಶೈಲ ಮಲ್ಲಿಕಾರ್ಜುನ ದೇವಾಲಯದ ಪ್ರಾಕಾರದ ಶಿಲ್ಪದಲ್ಲಿರುವ (ಚಿತ್ರ–೫) ಯುದ್ಧನಿರತ ಕುದುರೆಗಳಿಗೆ ಕವಚಗಳನ್ನು ಹಾಕಿರುವುದರೊಂದಿಗೆ ಅವರ ಮೇಲಿನ ರಾವುತರು ಉದ್ದನೆಯ ಚಲ್ಲಣಗಳು ಮತ್ತು ಉಕ್ಕಿನ ಅಂಗಿಯನ್ನು ಧರಿಸಿರುವುದು ಸ್ಪಷ್ಟವಾಗಿ ಕಂಡುಬರುತ್ತದೆ. ವಿದೇಶಿ ಪ್ರವಾಸಿಗರ ವರದಿಗಳು ಈ ಶಿಲ್ಪದಲ್ಲಿರುವ ರಾವುತನು ಧರಿಸಿರುವ ವಸ್ತ್ರಗಳನ್ನು ಸಾಕ್ಷೀಕರಿಸುತ್ತವೆ. (ಅಶ್ವಗಳಿಗೆ ತೊಡಿಸುತ್ತಿದ್ದ ವಸ್ತ್ರ ಮತ್ತು ಆಭರಣಗಳಿಗೆ ಸಂಬಂಧಿಸಿದಂತೆ 'ಪ್ರಾಣಿಗಳು' ಎಂಬ ಉಪಶೀರ್ಷಿಕೆಯಲ್ಲಿ ವಿವರಿಸಲಾಗಿದೆ.)

ಗಜದಳ–ಮಾವುತರು

ಮಾವುತನನ್ನು 'ಮಾವಟಿಗ' ಎಂದು ಕರೆಯುತ್ತಾರೆ. 'ಮಾವಟಿಕ' ಎಂದರೆ ಆನೆ ನಡೆಸುವವನು ಎಂದರ್ಥ. ಆನೆಯ ಸವಾರಿಯಲ್ಲಿ ಪರಿಣತಿ ಹೊಂದಿರುವ ಹಾಗೂ ಸವಾರಿ ಯೊಂದಿಗೆ ಆಯುಧಗಳನ್ನು ಯುದ್ಧದಲ್ಲಿ ಸಮರ್ಪಕವಾಗಿ ಪ್ರಯೋಗಿಸುವ ನಿಪುಣತೆಯುಳ್ಳ ಯೋಧನನ್ನು ಇಲ್ಲಿ 'ಮಾವುತ' ಎಂಬುದಾಗಿ ಅರ್ಥೈಸಲಾಗಿದೆ.

ಯುದ್ಧ ಸಂದರ್ಭದಲ್ಲಿನ ಮಾವಟಿಗನ ಅಲಂಕರಣೆ ಅಥವಾ ರಕ್ಷಣಾ ಸಾಧನಗಳ ಕುರಿತು ಆಕರಗಳು ತುಂಬಾ ಅಲ್ಪ ಪ್ರಮಾಣದಲ್ಲಿವೆ. ಶ್ರೀಕೃಷ್ಣದೇವರಾಯನ ಕಾಲದ ಕ್ರಿ.ಶ.೧೫೧೫ರ ಅತ್ತಿವಟ್ಟಿ ಗ್ರಾಮ (ಹಿಂದೆ ಹತೋಟಿ)ದ ಶಾಸನವೊಂದರಲ್ಲಿ ಬಾಲಕೃಷ್ಣ ದೇವರ ವಿವಿಧ ಪೂಜಾ ಕಾರ್ಯಗಳಿಗೆ ದಾನ ನೀಡಲಾಗಿದ್ದು ಎಂದು ವಿವರಿಸುತ್ತಾ, "ಯುಗಾದಿಮನಾದಿ ಅಯನ ಗಜಛಾಯಪಥಕ ಗ್ರಹಣ ಸಂಕ್ರಾಂತಿ ಮಾಸೋತ್ಸವ, ಪಕ್ಷಕೋತ್ಸವ... ಹುಲಿಗೆಯ ಮಾಗಣೆಯ ವೊಳಗಣ ಅತ್ತಿವಟ್ಟಿ ಅಂಬಾಗ್ರಾಮವನ್ನು ದಾನ ನೀಡಲಾಗಿದೆ" ಎಂದು ವಿವರಿಸುತ್ತದೆ.[೧೯] ಆನೆಗಳ ನಿರ್ವಹಣೆಗಾಗಿ ಹಾಗೂ ಮಾವುತರ ಜೀವನಕ್ಕೆ ಈ ರೀತಿಯಾಗಿ ದಾನವನ್ನು ನೀಡಿರುವ ಅಪರೂಪದ ಶಾಸನವಾಗಿದೆ.

ಪಾಯೇಸ್ ಯುದ್ಧ ಸಂದರ್ಭದ ಆನೆ ಮತ್ತು ಮಾವುತನು ಧರಿಸುತ್ತಿದ್ದ ವಸ್ತ್ರಗಳ (ಪರಿಕರಗಳು)ನ್ನು ಈ ರೀತಿಯಾಗಿ ವರ್ಣಿಸುತ್ತಾನೆ, "ಆನೆಗಳಿಗೂ ಮಕಮಲ್ಲು ಮುಂತಾದ ಬೆಲೆಯ ಬಟ್ಟೆಗಳನ್ನು ಹೊದಿಸಿ, ಗಂಟೆಗಳ ಸರಗಳನ್ನು ಕಟ್ಟಿದ್ದರು. ಈ ಗಂಟೆಗಳ ನಾದಕ್ಕೆ ಭೂಮಿ ಪ್ರತಿಧ್ವನಿಗೊಡುತ್ತಿತ್ತು. ಅವುಗಳ ಮುಖದ ಮೇಲೆ ನಾನಾ ತರದ ಚಿತ್ರಗಳನ್ನು ಅಲಂಕಾರ ಮಾಡಿದ್ದರು. ಅಂಬಾರಿಯಲ್ಲಿ ಭಲ್ಲೆ ಭರ್ಜಿಗಳಿಂದ ಸಜ್ಜಿತರಾದ ಯೋಧರು ದಾಳಿಗಾಗಿ ಹೊರಟಂತೆ ಕುಳಿತ್ತಿದ್ದರು."[೨೦] ಇದು ಪಾಯೇಸ್ ಕೊಡುವ ವರ್ಣನೆಯಾಗಿದೆ. ನ್ಯೂನಿಜ್ ವಿವರಿಸುವಂತೆ, "ಆನೆಗಳಿಗೆ ಕೌದಿಗಳನ್ನು ಹೊದಿಸಿ ಅಂಬಾರಿ ಬಿಗಿದಿದ್ದರು. ಈ ಅಂಬಾರಿಗಳಲ್ಲಿ ನಾಲ್ಕು ಕಡೆಯೂ ನಾಲ್ಕು ಯೋಧರು ಕುಳಿತು ಯುದ್ದ ಮಾಡ ಬಹುದಾಗಿತ್ತು. ಆನೆಗಳ ಕೊಂಬುಗಳಿಗೆ ಚುಚ್ಚುಗತ್ತಿಗಳನ್ನು ಸಿಕ್ಕಿಸಿದ್ದರು"[೨೧] ಎಂಬುದಾಗಿ ಆನೆಗಳಿಗೆ ತೊಡಿಸುತ್ತಿದ್ದ ಕೌದಿ ಮುಂತಾದ ವಸ್ತ್ರಾಭರಣಗಳ ಬಗ್ಗೆ ತಿಳಿದುಬರುತ್ತದೆ.

ಮಾವಟಿಗರು ಆನೆಗಳನ್ನು ಪಳಗಿಸಿ ಯುದ್ಧಪಡೆಗಾಗಿ ಸಿದ್ದಗೊಳಿಸುತ್ತಿದ್ದರು. ವಿಜಯ

ನಗರದ ಮಹಾನವಮಿ ಉತ್ಸವ, ಯುದ್ಧ ಸಂದರ್ಭಗಳಲ್ಲಿ ಗಜಪಡೆ ಪ್ರಮುಖ ಪಾತ್ರ ವಹಿಸುತ್ತಿತ್ತು. ರಾವುತರಂತೆ ಮಾವುತರು ಗಜಗಳನ್ನು ಮುನ್ನಡೆಸುವಲ್ಲಿ ಮುಖ್ಯ ಪಾತ್ರವಹಿಸುತ್ತಿದ್ದರು. ಆ ಹಿನ್ನೆಲೆಯಲ್ಲಿ ನೋಡಿದಾಗ ಮಾವುತ ಸಹಜವಾಗಿ ಉತ್ತಮ ರೀತಿಯ ವಸ್ತ್ರಗಳನ್ನು ಉತ್ಸವದ ಸಮಯದಲ್ಲಿ ಧರಿಸುತ್ತಿದ್ದನು ಮತ್ತು ಯುದ್ಧ ಸಂದರ್ಭದಲ್ಲಿ ಯೋಧನಂತೆ ರಕ್ಷಣಾ ಪರಿಕರಗಳನ್ನು ಧರಿಸುತ್ತಿದ್ದನು ಎಂದೇ ತಿಳಿಯಬೇಕಾಗುತ್ತದೆ. ಆನೆಗಳ ಅಲಂಕರಣೆಗೆ ಸಂಬಂಧಿಸಿದಂತೆ ಪ್ರಾಣಿಗಳು ಎಂಬ ಉಪಶೀರ್ಷಿಕೆಯಲ್ಲಿ ವಿವರಿಸಲಾಗಿದೆ.

ಸಿಂಹವ್ಯಾಳಿ ಮೇಲಿನ ವೀರರ ಶಿಲ್ಪಗಳು

ವಿಜಯನಗರ ಕಾಲದಲ್ಲಿ ಸಿಂಹವ್ಯಾಳಿ ಶಿಲ್ಪಗಳು ಬಹುತೇಕ ಎಲ್ಲಾ ದೇವಾಲಯಗಳಲ್ಲಿ ಸಿಗುತ್ತವೆ. ಹಂಪಿಯ ವಿಜಯ ವಿಠಲ ದೇವಾಲಯದ ಕಲ್ಯಾಣ ಮಂಟಪದ ಪ್ರವೇಶ ದ್ವಾರದಲ್ಲಿ ಸಿಂಹಾರೋಹಿಗಳ ಶಿಲ್ಪಗಳಿವೆ. ಈ ಶಿಲ್ಪಗಳಲ್ಲಿರುವ ವೀರರ ಚಿತ್ರವನ್ನು ಸೂಕ್ಷ್ಮವಾಗಿ ಗಮನಿಸಿದರೆ ಅಂದಿನವರ ವೇಷ ಭೂಷಣಗಳು ಕಣ್ಣಿಗೆ ಕಟ್ಟಿದಂತೆ ಕಾಣುತ್ತವೆ.

ಸಿಂಹವ್ಯಾಳಿ ಶಿಲ್ಪದಲ್ಲಿರುವ ವೀರನು ಉದ್ದ ತೋಳಿನ ಗುಂಡಿಗಳಿಂದ (ಬಟನ್ಸ್) ಕೂಡಿದ ಅಂಗಿಯನ್ನು (ಜಾಕೆಟ್‌ನಂತಹ ಅಂಗಿ), ಉದ್ದವಾದ ಪಾದಚಲ್ಲಣ (ಪ್ಯಾಂಟ್)ಗಳನ್ನು ಧರಿಸಿದ್ದಾನೆ. ಕುಲಾಯಿ ಧರಿಸಿದ್ದಾನೆ. ಮತ್ತೊಂದು ಶಿಲ್ಪದಲ್ಲಿರುವ ವೀರನು ಕಾಲು ಚೀಲ ಧರಿಸದೇ ಮೊನಚಾದ ಪಾದರಕ್ಷೆ (ಶ್ಯೂ) ಧರಿಸಿದ್ದಾನೆ. ಇನ್ನೊಂದು ಶಿಲ್ಪದಲ್ಲಿರುವ ವೀರನು, ಉದ್ದ ಕುಲಾಯಿ, ಕರ್ಣಾಭರಣ, ಉದ್ದವಾದ ಪ್ಯಾಂಟ್ ಮತ್ತು ಪೂರ್ಣ ತೋಳಿನ ಅಂಗಿಗಳೊಂದಿಗೆ ಪಾದಚಲ್ಲಣ (ಪ್ಯಾಂಟ್)ಗಳಿಗೆ ನಡುಪಟ್ಟಿ(ಬೆಲ್ಟ್)ಯನ್ನು ಬಳಸಿರುವುದು ವಿಶೇಷವಾಗಿದೆ. ಮಗದೊಂದು ಶಿಲ್ಪದಲ್ಲಿರುವ ಯೋಧ (ಚಿತ್ರ–೬) ಧರಿಸಿರುವ ವಸ್ತ್ರವು ವಿಶೇಷತೆಯಿಂದ ಕೂಡಿದೆ. ಕಟಿಯ ಭಾಗದವರೆಗೆ ಉದ್ದ ತೋಳಿನ ಅಂಗಿಯನ್ನು, ಪಾದ ಚಲ್ಲಣಗಳು (ಪ್ಯಾಂಟ್) ಮತ್ತು ಅದರ ಮೇಲೆ ತೊಡೆಚಲ್ಲಣವನ್ನು (ನಿಕ್ಕರ್) ಧರಿಸಿದ್ದು, ಬಿಲ್ಲು ಬಾಣ ಹಿಡಿದಿದ್ದಾನೆ. ಮತ್ತೊಂದು ಶಿಲ್ಪದಲ್ಲಿ ಚೂಪಾದ ತುದಿಯನ್ನು ಹೊಂದಿದ ಪಾದರಕ್ಷೆಗಳನ್ನು ಧರಿಸಿದ್ದಾನೆ. ಆದರೆ ಕಾಲು ಚೀಲಗಳನ್ನು (ಸಾಕ್ಸ್) ಧರಿಸಿಲ್ಲ. ಮತ್ತೊಂದು ಶಿಲ್ಪದಲ್ಲಿರುವ ಯೋಧನು (ಚಿತ್ರ–೭) ಉದ್ದ ತೋಳಿನ ತೆರೆದ ಅಂಗಿ (ಓಪನ್ ಕೋಟ್) ಮತ್ತು ಎದೆಯ ಮಧ್ಯಭಾಗದಲ್ಲಿ ವಜ್ರಾಕಾರದ ಪದಕವನ್ನು ಧರಿಸಿದ್ದಾನೆ. ಉದ್ದವಾದ ಕೊಳಗಾ ಕಾರದ ಕಿರೀಟ, ದಪ್ಪವಾದ ಕಡಗ, ಬಲಕಾಲಿನ ಹೆಬ್ಬೆರಳು ಮತ್ತು ಎರಡನೆಯ ಬೆರಳಿಗೆ ಉಂಗುರ (ವೀರಪೆಂಡೆಯ ಇರಬಹುದು), ಬಲಗೈ ಹೆಬ್ಬೆರಳು ಮತ್ತು ಎರಡನೆಯ ಬೆರಳಿಗೆ ಉಂಗುರಗಳನ್ನು ಧರಿಸಿದ್ದು, ಇಂಗ್ಲಿಷ್ ವರ್ಣಮಾಲೆಯ U ಅಕ್ಷರದಂತೆ ನಾಮ ಧರಿಸಿದ್ದಾನೆ. ಇದರಿಂದ ಈ ಯೋಧ ವೈಷ್ಣವ ಪಂಥದ ಅನುಯಾಯಿ ಎಂಬುದು ಸ್ಪಷ್ಟವಾಗುತ್ತದೆ. ಇನ್ನೊಂದು ಶಿಲ್ಪದಲ್ಲಿ ಕತ್ತಿ ಹಿಡಿದಿರುವ ವೀರ ತನ್ನ ಎಡಗಾಲಿನ ಹೆಬ್ಬೆರಳಿಗೆ ವೀರ ಪೆಂಡೇಯ ಧರಿಸಿದ್ದಾನೆ. ಮತ್ತೊಂದು ಶಿಲ್ಪದಲ್ಲಿ ಕತ್ತಿ ಹಿಡಿದಿರುವ ಯೋಧ U ಆಕಾರದ ಬಿಗಿಯಾದ ಜಾಕೆಟ್ ಧರಿಸಿದ್ದಾನೆ. ಇದು ರಕ್ಷಾ ಕವಚವಾಗಿದೆ. ಮತ್ತೊಬ್ಬ ಯೋಧ ತಲೆಗೆ ದೊಡ್ಡ ರುಮಾಲುಸುತ್ತಿದ್ದಾನೆ. ಇನ್ನೊಬ್ಬ ಸೈನಿಕ ಧರಿಸಿರುವ ಕೊರಳಸರದಲ್ಲಿ ಹುಲಿ ಉಗುರನ್ನು ಪದಕ ಭಾಗದಲ್ಲಿ ಹಾಕಿ ಧರಿಸಿದ್ದಾನೆ.

ಹಂಪಿಯ ವಿರೂಪಾಕ್ಷ ದೇವಾಲಯದ ಮಂಟಪದಲ್ಲಿರುವ ಸಿಂಹವ್ಯಾಳಿ ಶಿಲ್ಪದ ಮೇಲಿರುವ ಯೋಧ ಉದ್ದ ಕಿರೀಟ, ಧೋತ್ರವನ್ನು ಕಚ್ಚೆಹಾಕಿ ಪಾದಗಳವರೆಗೆ ಧರಿಸಿದ್ದು, ಯಜ್ಞೋಪವೀತ, ಕಟಿಬಂಧ ಮುಂತಾದ ಆಭರಣಗಳನ್ನು ಧರಿಸಿದ್ದಾನೆ.

ಒಟ್ಟಾರೆ ಈ ಸಿಂಹವ್ಯಾಳಿ ಶಿಲ್ಪಗಳಲ್ಲಿನ ಯೋಧರು ವಿಭಿನ್ನ ಅಳತೆ, ಮಾದರಿಯ ವಸ್ತ್ರವನ್ನು ಮತ್ತು ಆಭರಣಗಳನ್ನು ಧರಿಸುತ್ತಿದ್ದರು. ಅಲ್ಲದೆ ದಪ್ಪ ಮೀಸೆ, ಸೇನೆಗೆ ಬೇಕಾದ ದೃಢಕಾಯ ಮತ್ತು ಗಾಂಭೀರ್ಯತೆಯಿದೆ. ಈ ಮೇಲಿನ ಎಲ್ಲ ಅಂಶಗಳನ್ನು ಸೂಕ್ಷ್ಮವಾಗಿ ಗಮನಿಸಿದಾಗ ಸೈನ್ಯಕ್ಕೆ ಯೋಧರನ್ನು ಆಯ್ಕೆ ಮಾಡಿಕೊಳ್ಳುವಾಗ ದೈಹಿಕ ಪರೀಕ್ಷೆಯನ್ನು ನಡೆಸುತ್ತಿದ್ದರು. ಸೈನಿಕರಿಗೆ ಅವರವರ ಮತ ಮತ್ತು ಸಂಪ್ರದಾಯವನ್ನು ಅನುಸರಿಸಲು ವಿಜಯನಗರ ಕಾಲದ ಸೇನೆಯಲ್ಲಿ ಅವಕಾಶವಿತ್ತು ಎಂಬ ಬಾರ್ಬೋಸನು ನೀಡುವ ವಿವರಣೆಗಳಿಗೆ ಈ ಶಿಲ್ಪಗಳಲ್ಲಿನ ಯೋಧರ ಚಿತ್ರಣಗಳು ಸಮರ್ಥನೆಯನ್ನು ನೀಡುತ್ತವೆ.

ಯುದ್ಧರಂಗದಲ್ಲಿ ವಸ್ತ್ರ ಮತ್ತು ಆಭರಣಗಳ ಪಾತ್ರ

"ಆಡಳಿತದ ಸಪ್ತಾಂಗಗಳಲ್ಲಿ ಕೋಶ, ರಾಷ್ಟ್ರ, ದುರ್ಗ, ಬಲ, ಅಮಾತ್ಯ, ಸುಹೃತ್ತು ಎಂಬ ಅಂಗ ಗಳನ್ನು ರಾಜ ತಿಳಿದಿರಬೇಕು. ಇವಲ್ಲದೇ ವಾಹನ, ರಾಜ್ಯ, ಸತಿ, ವಸ್ತ್ರ, ಆಭರಣ, ಕರ್ಪೂರ, ತಾಂಬೂಲ ಎಂಬ ಉಚಿತ ಸಪ್ತಾಂಗಗಳನ್ನೂ ತಿಳಿದಿರಬೇಕು"[೭] ಎಂಬುದಾಗಿ ಶ್ರೀಕೃಷ್ಣದೇವರಾಯನ ದಿನಚರಿಯಲ್ಲಿ ಉಲ್ಲೇಖಿಸಿದೆ.

ಸಾಮ್ರಾಜ್ಯದ ಕೋಶಾಗಾರದಲ್ಲಿ ವಸ್ತ್ರ ಮತ್ತು ಆಭರಣಗಳು ಪ್ರಮುಖ ಪಾತ್ರ ವಹಿಸುತ್ತಿದ್ದವು. ಈಗಾಗಲೇ ಚರ್ಚಿಸಿರುವಂತೆ ದೇವಾಲಯಗಳಿಗೆ ದಾನ ನೀಡುವಾಗ, ವಿದೇಶಿ ರಾಯಭಾರಿಗಳಿಗೆ ಉಡುಗೊರೆಗಳನ್ನು ಕೊಡುವಾಗ ಅಮೂಲ್ಯವಾದ ವಸ್ತ್ರ ಮತ್ತು ಆಭರಣಗಳನ್ನು ನೀಡಿದ್ದನ್ನು ತಿಳಿದಿದ್ದೇವೆ. ಅಬ್ದುರ್ ರಜಾಕ್ ಎರಡನೇ ದೇವರಾಯನ ಕಾಲದಲ್ಲಿ ವಿಜಯನಗರಕ್ಕೆ ಭೇಟಿ ನೀಡಿದ್ದ, ಅವನು ವಿಜಯನಗರ ರಾಜ್ಯವನ್ನು ವರ್ಣಿಸುತ್ತಾ, "ರಾಜನ ಅರಮನೆಯ ನೆಲಮಾಳಿಗೆಯಲ್ಲಿ ಚಿನ್ನದ ಗಟ್ಟಿಗಳನ್ನು ರಾಶಿ ಹಾಕಿದ್ದಾರೆ"[೭೩] ಎಂದು ದಾಖಲಿಸಿದ್ದಾನೆ.

ಬಾರ್ಬೋಸನು ವಿವರಿಸುವಂತೆ, "ರಾಜ್ಯದ ಶ್ರೀಮಂತ ಸರದಾರರು ತಪ್ಪು ಮಾಡಿದ್ದರೆ ಅವರಿಗೆ ದಂಡಿಸುತ್ತಿದ್ದನು. ಅವರು ತಪ್ಪು ಒಪ್ಪಿಕೊಳ್ಳದಿದ್ದರೆ ಅರಮನೆಗೆ ಕರೆಯಿಸಿ ಬೆತ್ತಲೆಯಾಗಿ ನೆಲದ ಮೇಲೆ ಮಲಗಿಸಿ ಹೊಡೆಸುತ್ತಾರೆ. ಅನಂತರ ರಾಜನು ಅರಮನೆಯ ತನ್ನ ಖಾಸಾ ವಸ್ತ್ರ ಶಾಲೆಯಿಂದ ಬೆಲೆಯಾದ ಉಡುಪುಗಳನ್ನು ತರಿಸಿ, ಅವರಿಗೆ ಉಡಿಸಿ, ಪಲ್ಲಕ್ಕಿಗಳಲ್ಲಿ ಕುಳ್ಳಿರಿಸಿ, ವಾದ್ಯಸಮೇತ ಅರಮನೆಯಿಂದ ಕಳುಹಿಸುತ್ತಾನೆ"[೭೪] ಎಂದು ವಿವರಿಸುತ್ತಾನೆ.

ಅಬ್ದುರ್ ರಜಾಕ್ ಮತ್ತು ಬಾರ್ಬೋಸರ ಈ ವಿವರಣೆಗಳು ರಾಜ್ಯದ ಕೋಶಗಾರದಲ್ಲಿ ವಸ್ತ್ರ ಮತ್ತು ಆಭರಣಗಳ ಪ್ರತ್ಯೇಕ ಶಾಖೆಗಳಿದ್ದು, ಅವು ಆಡಳಿತದಲ್ಲಿ ಪ್ರಧಾನ ಪಾತ್ರವನ್ನು ವಹಿಸಿದ್ದವು. ರಾಜನು ವಸ್ತ್ರ ಮತ್ತು ಆಭರಣಗಳ ಪ್ರಿಯ ಎಂಬುದಷ್ಟೇ ಅಲ್ಲದೇ, ರಾಜ್ಯಕ್ಕೆ ತಪ್ಪು ಎಸಗಿದವರನ್ನು ಶಿಕ್ಷಿಸಿ ಗೌರವಿಸಲು, ಅತಿಥಿಗಳ ಸನ್ಮಾನಕ್ಕೆ ಅಷ್ಟೇ ಅಲ್ಲದೆ ಯುದ್ಧರಂಗ ದಲ್ಲಿ

ಸೈನಿಕರನ್ನು ಪ್ರೇರೇಪಿಸಲು ಹಾಗೂ ಅವರು ಹೆಚ್ಚು ಕಿಚ್ಚು ಮತ್ತು ಉತ್ಸಾಹದಿಂದ ಹೋರಾಡಲು ವಸ್ತ್ರ ಮತ್ತು ಆಭರಣಗಳನ್ನು ಭೇದೋಪಾಯ ಸಾಧನಗಳಾಗಿ ಬಳಸಿದ ಉದಾಹರಣೆಗಳನ್ನು ವಿಜಯನಗರದಲ್ಲಿನ ಯುದ್ಧಗಳ ವಿವರಣೆಗಳಲ್ಲಿ ಕಾಣಬಹುದಾಗಿದೆ.

ಕೃಷ್ಣದೇವರಾಯನು ಕಳಿಂಗ ದಂಡಯಾತ್ರೆಯನ್ನು ಕೈಗೊಂಡು, ಹಲವು ರಾಜ್ಯಗಳನ್ನು ಗೆದ್ದನು. ಅನಂತರ ಒರಿಸ್ಸಾದ ಗಜಪತಿಯ ಮೇಲೆ ಯುದ್ಧ ಮಾಡಲು ಹೋಗಿ ಊರ ಹೊರಗೆ ಸೈನ್ಯದೊಂದಿಗೆ ಬಿಡಾರ ಹೂಡಿದ್ದನು. ಕೃಷ್ಣದೇವರಾಯನು ದಂಡಯಾತ್ರೆಗೆ ಬಂದಿರುವ ಕುರಿತಂತೆ ಗಜಪತಿಯ ಆಸ್ಥಾನದಲ್ಲಿ ನಡೆದ ಮಾತುಕತೆಯ ವೇಳೆ 'ಷೋಡಷ ಪಾತ್ರರು' (ಇವರು ಗಜಪತಿಯ ಸಿಂಹಾಸನಕ್ಕೆ ಭುಜಬಲ ಪರಾಕ್ರಮಿಗಳು) ಗಜಪತಿಗೆ ಕರ್ನಾಟಕದ ಅರಸನನ್ನು ಗೆದ್ದುಕೊಟ್ಟೇ ತೀರುತ್ತೇವೆಂದು ಮಾಡಿದ ಪ್ರತಿಜ್ಞೆ, ಅವನ ಚತುರಂಗ ಬಲದ ವಿವರಣೆ ಇವೆಲ್ಲವುಗಳನ್ನು ತಿಳಿದುಕೊಂಡ ಕೃಷ್ಣದೇವರಾಯನು ಗಜಪತಿಯ ಮೇಲಿನ ಗೆಲುವು ಅಸಾಧ್ಯವೆಂದು ತಿಳಿದು ಅಪ್ಪಾಜಿಯೊಂದಿಗೆ ಆಪ್ತ ಸಮಾಲೋಚನೆ ಮಾಡುತ್ತಾನೆ. ಆಗ ತಿಮ್ಮರಸ "ಸಂಧಿವಿಗ್ರಹ ಮೊದಲಾದುದರಿಂದ। ಸಾಧ್ಯವಲ್ಲದಂಥ ಶತ್ರುವು ಮೃತ್ಯುವಿನ ಹಾಗೆ ಬರುತ್ತಯಿರಲಾಗಿ। ದಾನದಿಂದ ವಶವ ಮಾಡಬೇಕು। ಭೂಮಿಯಲ್ಲಿ ದಾನಕ್ಕೆ ವಶವಾಗದಂಥ ಶತ್ರುಗಳು ಯಾರೂಯಿಲ್ಲವೆಂದು। ಶತ್ರುಗಳ ಮಿತ್ರರ ಮಾಡುವದು। ಮಿತ್ರರ ಭೃತ್ಯರ ಮಾಡುವುದ।ಯೀ ಸಮಯದಲ್ಲಿ ಭೇದೋಪಾಯದಿಂದ ಜಯಿಸುವ ಯತ್ನವ ಕಾಣಬೇಕು। ಅದಕ್ಕೆ ಅನರ್ಘ್ಯವಾದ ಭೂಷಣಗಳನೆಲ್ಲವನ್ನು ವೆಚ್ಚವ ಮಾಡಿ। ಹಾನಿ ಬಾರದ ಹಾಗೆ ನಡೆಸಿಕೊಳ್ಳಬೇಕೆಂಬುದಕ್ಕೆ ರಾಯರವರು ಸಪ್ತೋಪಾಯದಿಂದ ಜಯಿಸುವ ಸಾಕುಯೆಂದು। ಅಪ್ಪಾಜಿಯ ಕೂಡೆ ಅಪ್ಪಣೆಯ ಕೊಟ್ಟನು ಕೃಷ್ಣದೇವರಾಯನು।".[೨೫] ಮುಂದುವರೆಸಿ, "ನಾಳೆ ಉದಯಕ್ಕೆ ಜಗಳಕ್ಕೆ ಬಂದ ಹಾಗೆ ಕರೆದುಕೊಂಡು ಬಂದು ಗಜಪತಿಯವರನ್ನು ಹಿಡಿದು ಕೊಟ್ಟೇವುಯೆಂದು ನೀವು ಬರೆದು ಕಳುಹಿಸಿದುದು ಸರಿಯಷ್ಟೆ ಅದಕ್ಕೆ ರಾಯರು ಧರಿಸುವಂಥಾ ಬೆಣ್ಣೆಯ ಮುದ್ದೆ ಕಂಠಮಾಲೆ। ನವರತ್ನದ ಗಿಳಿತಾಳಿ। ತುಂಬಿಯ ತಾಳಿ। ವೈಢೂರ್ಯ ತಾಳಿ। ವಜ್ರದ ಸರಪಣಿ। ಪಚ್ಚೆಯ ಕಡಗ। ಹುರುಮುಂಜಿಯ ಮುತ್ತಿನ ಪಚ್ಚೆಯ ಸರ। ಇಂದ್ರನೀಲದ ಮಕುಟ। ವಜ್ರದ ಉಡುದಾರ। ಕೆಂಪುಗಳ ಜವದಾಡೆ। ಮುತ್ತಿನ ಕಾಲುಪೆಂಡೆಯ। ವಜ್ರಗಳ ಬಾಹುಪುರಿ। ದೊಡ್ಡ ಮುತ್ತುಗಳ ಅಡ್ಡಗತ್ತಿ। ನವರತ್ನದ ಹರಿಗೆ। ನವರತ್ನದ ಸಿಂಹಲಲಾಟ। ಮುತ್ತುಗಳ ಮೊಗರಂಬ। ಹೀ ಹದಿನಾರು ಆಭರಣಗಳನ್ನು, ೬೪ ಲಕ್ಷ ಗಟ್ಟಿ ನಗದನ್ನು ೧೬ ಪ್ರತ್ಯೇಕ ಪೆಟ್ಟಿಗೆಗಳಲ್ಲಿ ತುಂಬಿ ನಿಯೋಗಿಗಳೊಂದಿಗೆ ಕಳುಹಿಸುತ್ತಿದ್ದೇವೆ. ಪ್ರತಿಯಾಗಿ ನಮಗೆ ಬೇಕಾದ ಅನುಕೂಲ ಮಾಡಿ ಎಂಬುದಾಗಿ ೧೬ ಮಹಾಮಾತ್ರರಿಗೆ ಪ್ರತ್ಯೇಕ ಪತ್ರವನ್ನು ಬರೆದು ಕಳುಹಿಸಿದರು. ಈ ಪತ್ರಗಳು ಗಜಪತಿಯ ಕೈಗೆ ದೊರೆತು, ಷೋಡಷಪಾತ್ರರು ತನಗೆ ಮೋಸ ಮಾಡುತ್ತಿದ್ದಾರೆ ಎಂದು ಭಾವಿಸಿ ಷೋಡಷಪಾತ್ರರನ್ನು ಕರೆಸಿ ಅರಮನೆಯ ಬೊಕ್ಕಸದ ಮನೆಯೊಳಗೆಯಿರಿಸಿ ಬೀಗ ಹಾಕಿಸಿದನು".[೨೬] ಹಾಗಾಗಿ ಷೋಡಷಪಾತ್ರರನ್ನು ನಂಬದಂತೆ ಮಾಡಿ ಬಲಗುಂದಿಸಿದರು. ಈ ವಿಷಯ ತಿಳಿದ ಕೃಷ್ಣದೇವರಾಯನು ಏಕಾಂಗಿಯಾದ ಗಜಪತಿಯನ್ನು ಸೋಲಿಸಿದನು. ನಂತರ ಗಜಪತಿಯೊಂದಿಗೆ ರಾಜಕೀಯ ಹೊಂದಾಣಿಕೆ ಮಾಡಿಕೊಂಡು ಅವನ

ಮಗಳಾದ ಜಗನ್ಮೋಹಿನಿಯನ್ನು ವಿವಾಹವಾಗಿ ಹಿಂದಿರುಗಿದನು. ಇದೇ ಮಾಹಿತಿ ರಾಯವಾಚಕಮುದಲ್ಲಿ[೭೭] ಹಾಗೂ ಶ್ರೀಕೊಮಾರದೇವರ ಕ್ಷೇತ್ರದ ಕೈಫಿಯತ್ತಿನಲ್ಲಿ[೭೮] ಪ್ರಸ್ತಾಪವಾಗಿದ್ದು, ಶ್ರೀಕೃಷ್ಣದೇವರಾಯನ ದಿನಚರಿಯ ವಿಷಯಕ್ಕೆ ಪುಷ್ಠೀ ನೀಡುತ್ತದೆ. ಹಾಗಾಗಿ ಇದು ಕೃಷ್ಣದೇವರಾಯನು ಒರಿಸ್ಸಾದ ಗಜಪತಿಯನ್ನು ಗೆಲ್ಲಲು ಅಪ್ಪಾಜಿ ಹೂಡಿದ ಕುತಂತ್ರ, ಈ ಕುತಂತ್ರಕ್ಕೆ ಆಭರಣಗಳನ್ನು ಸಾಧನಗಳಾಗಿ ಮಾಡಿಕೊಂಡು ಶತ್ರುಗಳ ಬಲ ಕುಗ್ಗಿಸಿ, ವಿಜಯ ಸಾಧನೆಯನ್ನು ಗಳಿಸುವಲ್ಲಿ ಆಭರಣಗಳು ಪ್ರಮುಖ ಪಾತ್ರವಹಿಸಿದ್ದವು.

ರಾಮರಾಜನ ಬಖೈರುವಿನಲ್ಲಿ, "ರಾಮರಾಯನು ರಕ್ಕಸಗಿ-ತಂಗಡಗಿ ಯುದ್ಧಕ್ಕೆ ಹೊರಡುವ ಮುನ್ನ ಸೇನಾ ನಾಯಕರನ್ನು ಕರೆಯಿಸಿ, ಅವರಿಗೆ ವೀಳೆಯ ಬಹುಮಾನಗಳಾಗಿ ನೂತನವಾದ ರತ್ನಖಚಿತವಾದ ಕಡಗ, ಕಂಠಮಾಲೆ, ಕುಂಡಲ, ಕಿರೀಟ, ಕೌಸ್ತುಭ, ಹಾರಗಳು, ಕಲ್ಕಿ-ತುರಾಯಿಗಳು, ಅಂಗುಲ್ಯಾದಿ ಆಭರಣಗಳನ್ನು ದತ್ತಾಮಾಡಿ ಹಾಗೆ ನೂತನವಾದಂಥಾ ಅಚೋದ್ಯವಸ್ತ್ರಗಳನ್ನು ಕೊಟ್ಟು, ಬಹುಮಾನವನ್ನು ಮಾಡಿಸಿ ಅವರಿಗೆ ಯುದ್ಧ ಚೆನ್ನಾಗಿ ಮಾಡಿ ಎಂದು ಆಜ್ಞಾಪಿಸಿದನು".[೭೯] ರಾಮರಾಯನು ತಾಳೀಕೋಟೆ ಯುದ್ಧಕ್ಕೆ ಹೊರಡುವ ಮೊದಲು ಸೇನಾ ನಾಯಕರಿಗೆ ವಸ್ತ್ರ ಆಭರಣಗಳನ್ನು ನೀಡಿ ಪ್ರೇರೇಪಿಸಿದರೆ, ತಾಳಿಕೋಟೆ ಯುದ್ಧರಂಗದಲ್ಲಿ ಇದೇ ರೀತಿ ಸೈನಿಕರನ್ನು ಪ್ರೇರೇಪಿಸಿದನು.

ಈ ಕುರಿತು ಬುಸಾತಿನೆ-ಸಲಾತೀನದಲ್ಲಿ ದಾಖಲಿಸಿರುವಂತೆ, "ರಾಮರಾಯ ಮುಸಲ್ಮಾನ ಸೈನ್ಯದ ಪ್ರತಾಪವನ್ನು ನೋಡಿ, ಇವರ ಕೈಯಿಂದ ಏನಾದೀತು? ಎಂದು ತಿಳಿದವನು ಈಗ 'ವಿಪರೀತವಾಗಿ ಕಾಣುತ್ತಿದೆ' ಎಂದು ಭಾವಿಸಿ ಎಚ್ಚೆತ್ತುಕೊಂಡನು. ತನ್ನ ಸೇನಾ ಬಿಡಾರದ ಎದುರಿಗೆ ಒಂದು ಮಂಟಪವನ್ನು ಕಟ್ಟಿಸಿ, ಮಂಟಪವನ್ನು ರತ್ನ ಮುತ್ತು ಗಳಿಂದ ರತ್ನಗಂಬಳಿಗಳಿಂದ ಅಲಂಕರಿಸಿ, ಅದರಲ್ಲಿ ರತ್ನಖಚಿತ ಸಿಂಹಾಸನದ ಮೇಲೆ ಕುಳಿತ ರಾಮರಾಯ ತನ್ನ ಎಡ ಬಲದಲ್ಲಿ ರೂಪಾಯಿಗಳ ಹಾಗೂ ಮುತ್ತುರತ್ನಗಳ ರಾಶಿಯನ್ನು ಹಾಕಲು ಆಜ್ಞಾಪಿಸಿದನು. ಅದರಂತೆ ಎರಡು ರಾಶಿಗಳನ್ನು ಹಾಕಿದರು. ಜೊತೆಗೆ ರತ್ನ ಖಚಿತ ತಟ್ಟೆಗಳಲ್ಲಿ ಮುತ್ತು ರತ್ನಗಳನ್ನು, ವಸ್ತ್ರಗಳನ್ನು ತುಂಬಿಟ್ಟರು. ಶೂರ ಸೈನಿಕರಿಗೆ ಬಹುಮಾನ ಕೊಡಲು ನಿರ್ಧರಿಸಿದನು. ಯಾರು ಶೂರತನದಿಂದ ಕಾದಿ ನನ್ನ ಹತ್ತಿರ ಬರುವರೋ, ಅವರಿಗೆ ಈ ಮುತ್ತು ರತ್ನಗಳನ್ನು ತುಂಬಿದ ತಟ್ಟೆಯನ್ನು ಕೊಡುವೆನು, ಅವರ ಅಂತಸ್ತು ಹಾಗೂ ಪದಾಧಿಕಾರಗಳನ್ನು ಎತ್ತರಿಸುವೆನು" ಎಂದು ಬಹಿರಂಗವಾಗಿ ಘೋಷಿಸಿ ಆ ತರದ ಆಜ್ಞೆಯನ್ನು ಮಾಡಿದನು. ಅದನ್ನು ಕೇಳಿದ ರಾಮರಾಜನ ಸವಾರರು-"ಸೈನಿಕರು ಸಂತೋಷಪಟ್ಟು ಸ್ವಾಮಿ ಸೇವೆಗಾಗಿ ಯುದ್ಧದಲ್ಲಿ ಪ್ರಾಣಾರ್ಪಣ ಮಾಡಲು ಮತ್ತು ತಮ್ಮ ಜೀವಗಳ ಕುರಿತು ಉದಾರವಾಗಿ ರಣಭೂಮಿಯಲ್ಲಿ ಇನ್ನಷ್ಟು ಕೆಚ್ಚಿನಿಂದ ಕಾದಿದರು"[೮೦] ಎಂಬುದಾಗಿ ವಿವರಿಸುತ್ತದೆ.

ಹೀಗೆ ವಿಜಯನಗರದ ರಾಜರು ಯುದ್ಧರಂಗದಲ್ಲಿ ಸೇನಾನಾಯಕರು, ಸೈನಿಕರು ವೀರಾವೇಶದಿಂದ ಹೋರಾಡುವಂತೆ ಪ್ರೇರೇಪಿಸಲು ವಸ್ತ್ರ ಮತ್ತು ಆಭರಣಗಳನ್ನು ಬಳಸುತ್ತಿದ್ದರು. ಅಲ್ಲಿ ಇವು ಬಹುಮಾನ ಸಾಧನಗಳು ಸಹ ಆಗಿದ್ದವು.

೩.೨. ವೃತ್ತಿನಿರತರು

೩.೨.೧. ಪುರೋಹಿತರು

ಪ್ರಾಚೀನ ಕಾಲದಿಂದ ಜನಸಾಮಾನ್ಯರು ಹಲವಾರು ವೃತ್ತಿಗಳನ್ನು ತಮ್ಮ ಜೀವನೋಪಾಯಕ್ಕಾಗಿ ಮಾಡಿಕೊಂಡು ಬಂದಿದ್ದಾರೆ. ಅದು ಹಾಗೆಯೇ ವಂಶಪಾರಂಪರ್ಯ ವೃತ್ತಿ ಗಳಾಗಿ ಮುಂದುವರಿದು ಕೊಂಡು ಬಂದಿದೆ. ಹಲವಾರು ವೃತ್ತಿಗಳಲ್ಲಿ ಪುರೋಹಿತ ವೃತ್ತಿಯೂ ಒಂದಾಗಿದೆ. ಅಲ್ಲದೆ ರಾಜಮಹಾರಾಜರ ಕಾಲದಿಂದಲೂ ಮನ್ನಣೆಯನ್ನು, ಅಶ್ರಯವನ್ನು ಹೊಂದಿದಂತಹ ವೃತ್ತಿ ಇದಾಗಿದೆ. ಹಾಗಾಗಿ ಈ ವೃತ್ತಿಯನ್ನು ಪ್ರಾಚೀನ ಕಾಲದಿಂದ ಬ್ರಾಹ್ಮಣ ವರ್ಗದವರು ನಿರ್ವಹಿಸಿಕೊಂಡು ಬಂದಿದ್ದಾರೆ. ಇವರು ದೇವಾಲಯಗಳಲ್ಲಿ ಮೂಲಮೂರ್ತಿಯ ಪೂಜೆ, ಜೊತೆಗೆ ರಾಜರಿಗೆ ಹಲವು ಸಂದರ್ಭಗಳಲ್ಲಿ ಸಲಹೆ ಸೂಚನೆಗಳನ್ನು ನೀಡುತ್ತಾ ಬಂದಿದ್ದಾರೆ. ವಿಜಯನಗರ ಸಾಮ್ರಾಜ್ಯದಲ್ಲಿಯೂ ಈ ವೃತ್ತಿ ನಿರತರು ಇದ್ದರು ಎಂಬ ಬಗೆಗೆ ಕನಕದಾಸರ ಕಾವ್ಯವು ಬೆಳಕು ಚೆಲ್ಲುತ್ತದೆ.

ಕನಕದಾಸರು ಬ್ರಾಹ್ಮಣರ ಬೀದಿಯ ಸೊಬಗನ್ನು ಹೀಗೆ ಬಣ್ಣಿಸಿದ್ದಾರೆ: "ಅಲ್ಲಲ್ಲಿಯೇ ಇರುವ ಚಂದ್ರಕಾಂತ ಸೋಪಾನದ ಪುಷ್ಕರಣಿಗಳೊಳಗೆ, ನಾನಾ ದೇಶದ ನಾನಾ ಭಾಷೆಯ ಪಂಡಿತರು ಬಂದು ಅನುಷ್ಠಾನ ಮಾಡುತ್ತಿರುವುದನ್ನು ಏನು ಬಣ್ಣಿಸಲಿ? ಅವರೆಲ್ಲರೂ 'ಹಚ್ಚಡ' (ಸೆಲ್ಲೆಯ), 'ಚಿಂದಿಕುಪ್ಪಸ' (ಅಂಗಿ)ಗಳನ್ನು ಕಳೆದು ದೂರದಲ್ಲಿರಿಸಿ, ಸ್ವಚ್ಚವಾದ 'ಬೈರ್ವಾಸ'ದೊಂದಿಗೆ 'ಕೃಷ್ಣಾ', 'ಗೋವಿಂದ', ಶ್ರೀ ವತ್ಸಲಾಂಛನಾ, ಶರಣುಶರಣು ಎಂದು ತಣ್ಣೀರಲ್ಲಿ ಮುಳಗಿ ಮಿಂದರು. ಬಳಿಕ ಅಲಸದೆ ಪೊರಮಟ್ಟು ಕೆಲವರು ಪಟ್ಟಾವಳಿ ಧೋತ್ರ-ಬಹಿರ್ವಾಸಗಳನ್ನು, ಇನ್ನು ಕೆಲವರು ತಳಿರುಗಾವಿಯನ್ನು ಉಟ್ಟು, ಎಲ್ಲರು ಜಪದ ಮಂಟಪದಲ್ಲಿ ಸಂದಣಿಸಿ ಕುಳಿತರು".[೮೧]

ಬ್ರಾಹ್ಮಣರು ಹಣೆಯಲ್ಲಿ ಧರಿಸುತ್ತಿದ್ದ ಮತೀಯ ಲಾಂಛನದ ವರ್ಣನೆ ಮೋಹನ ತರಂಗಿಣಿಯಲ್ಲಿ ಹೀಗೆ ವರ್ಣಿತವಾಗಿದೆ, "ಘನಪಟ್ಟೆ ನಾಮದೆ, ತಿರುಚೂರ್ಣ ಗೋಪಿ ಚಂದನ, ಪಂಚ ಮುದ್ರೆಗಳೊಡನೆ ಮನಗೊಂಬ ಭಸಿದ ಗಂಧಾಕ್ಷತೆ ಭಾಳಲಾಂಛನ ವಿತ್ತುದವನೀಸುರರು".[೮೨] ಇದಕ್ಕೆ ಪೂರಕವಾದ ವಿವರಣೆಯನ್ನು ವಿದೇಶಿ ಪ್ರವಾಸಿಯಾದ ಬಾರ್ಬೋಸ ನೀಡುತ್ತಾನೆ. ಅವನು ವಿವರಿಸುವಂತೆ, "ಬ್ರಾಹ್ಮಣರು ಸ್ನಾನ ಮಾಡಿದ ಮೇಲೆ ತಲೆ, ಹಣೆ ಮತ್ತು ಎದೆಗೆ ಬೂದಿ (ವಿಭೂತಿ) ಬಳಿದುಕೊಳ್ಳುತ್ತಾರೆ".[೮೩] ಅವನು ಮುಂದು ವರೆಸುತ್ತಾ, "ಬ್ರಾಹ್ಮಣರೆಂಬ ಗುರುತಿಗಾಗಿ ಮೂರು ಎಳೆಯ ಜನಿವಾರ ಧರಿಸುತ್ತಾರೆ".[೮೪]

ಶ್ರೀ ಕೃಷ್ಣದೇವರಾಯನು ಆಮುಕ್ತಮಾಲ್ಯದಲ್ಲಿ ವಿಜಯನಗರ ಕಾಲದಲ್ಲಿ "ಶಾನು ಭೋಗನ ವೇಷ, ಭಾಗವತನ ವೇಷ, ದಾಸಯ್ಯನ ವೇಷ, ಮೇದರನ ವೇಷ, ಹೊಲೆಯರ ವೇಷ ಹೀಗೆ ಆಯಾ ವರ್ಗದವರ ವೇಷ ಬೇರೆ ಬೇರೆಯಾಗಿಯೇ ಇರುತ್ತಿತ್ತು. ಆಯಾ ವೃತ್ತಿಯವರನ್ನು ಆಯಾ ವೇಷದಿಂದಲೇ ಕಂಡುಹಿಡಿಯಬಹುದಾಗಿತ್ತು"[೮೫]ಎಂದು ವರ್ಣಿಸಿದ್ದಾನೆ.

ಸಾಹಿತ್ಯಕ ಆಕರಗಳಲ್ಲದೇ ಶಾಸನಗಳಲ್ಲೂ ಈ ಕುರಿತ ಉಲ್ಲೇಖಗಳಿವೆ. ಶಾಸನಗಳಲ್ಲಿ

ಬ್ರಾಹ್ಮಣರಿಗೆ ಗ್ರಾಮಗಳನ್ನು ದಾನ ನೀಡಿದ ಹಲವಾರು ವಿವರಗಳು ಲಭ್ಯವಾಗುತ್ತವೆ. ಆದರೆ ಪ್ರೌಢದೇವರಾಯನ ಶಾಸನಗಳಲ್ಲಿ, ಅರ್ಚಕನಿಗೆ ಅಥವಾ ಸ್ಥಾನಿಕನಿಗೆ ಆಭರಣಗಳನ್ನು ದಾನ ನೀಡಿರುವ ಅಪರೂಪದ ಉಲ್ಲೇಖ ಸಿಗುತ್ತದೆ. ತಮಿಳುನಾಡಿನ ಶ್ರೀರಂಗಂ ದೇವಾಯಲಯದ ಶಾಸನವೊಂದರಲ್ಲಿ, "ದೇವರಾಯ ಮಹಾರಾಯರು ತಿರುಚಿನಾಪಳ್ಳಿ ಅಧಿಕಾರಿ ಚೌಡಪ್ಪನಿಗೆ ಹೇಳಿ ಅವನಿಂದ ಶ್ರೀರಂಗನಾಥ ದೇವರ ಸ್ಥಾನಿಕನಾದ ಉತ್ತಮನಂಬಿಗೆ ಆತನ ಸೇವೆಯನ್ನು ಮೆಚ್ಚಿ ಕಡಗ, ಕಂಠಮಾಲೆಯನ್ನು ಕೊಟ್ಟು, ಆತನ ಮನೆಗಾಗಿ ಚಿನ್ನದ ಕಳಸವನ್ನು ನೀಡಿ ದೇವರ ಪೂಜೆಯನ್ನು ಚೆನ್ನಾಗಿ ಮಾಡಿಕೊಂಡಿರಲು ಸೂಚಿಸುತ್ತಾನೆ."[೮೬] ಇದು ಸ್ಥಾನಿಕನಾದ ಉತ್ತಮನಂಬಿಯ ಸೇವೆಗೆ ಮೆಚ್ಚಿ ಆಭರಣ ದಾನ ನೀಡಿದ್ದನ್ನು ತಿಳಿಸುವ ವಿಶೇಷ ಶಾಸನವಾಗಿದೆ.

ಆಮುಕ್ತಮಾಲ್ಯದಲ್ಲಿ ಶ್ರೀಕೃಷ್ಣದೇವರಾಯನು ವಿವರಿಸಿರುವಂತೆ ವ್ಯಕ್ತಿಗಳ ವೇಷ ಭೂಷಣದಿಂದಲೇ ಆಯಾವೃತ್ತಿಯವರನ್ನು ಗುರುತಿಸಬಹುದು ಎಂಬ ಅಂಶಕ್ಕೆ ತಮಿಳು ನಾಡಿನ ಶ್ರೀರಂಗಂನ ಶ್ರೀರಂಗನಾಥ ದೇವಾಲಯದಲ್ಲಿರುವ ಸ್ತಂಭವೊಂದರ ಮೇಲಿನ ಶಿಲ್ಪವು (ಚಿತ್ರ–೮) ಪುಷ್ಠೀಕರಿಸುತ್ತದೆ. ಈ ಶಿಲ್ಪದಲ್ಲಿರುವ ವ್ಯಕ್ತಿಯು ದೇವಾಲಯದ ಸೇವಾ ಕಾರ್ಯದಲ್ಲಿ ನಿರತನಾಗಿದ್ದಂತೆ ಕಂಡುಬರುತ್ತದೆ. ಈತ ಧರಿಸಿರುವ ಧೋತ್ರ ಕಟಿಯಿಂದ ಮೊಣಕಾಲಿನವರೆಗೆ ಇದೆ. ಉತ್ತರೀಯವನು ಧೋತ್ರದ ಮೇಲೆ ಗಂಟು ಹಾಕಿದ್ದಾನೆ. ದೇಹದ ಮೇಲ್ಭಾಗದಲ್ಲಿ ಯಾವುದೇ ವಸ್ತ್ರವಿಲ್ಲ. ಯಜ್ಞೋಪವೀತ ಧರಿಸಿದ್ದು, ಅಗಲವಾದ ತನ್ನ ಕರ್ಣಗಳಿಗೆ ತೂಗಾಡುವಂತಹ ದೊಡ್ಡ ಕುಂಡಲಗಳನ್ನು ಧರಿಸಿದ್ದಾನೆ. ಉಳಿದಂತೆ ಆಭರಣಗಳು ಅಸ್ಪಷ್ಟ. ತನ್ನ ತಲೆಯ ಮೇಲೆ ಪಾತ್ರೆಯನ್ನು ಹಿಡಿದಿದ್ದು, ಅದು ದೇವರಿಗೆ ನೈವೇದ್ಯ ಅರ್ಪಿಸಲು ತೆಗೆದುಕೊಂಡು ಹೋಗುತ್ತಿರುವ ಪ್ರಸಾದವಾಗಿರುವ ಸಾಧ್ಯತೆಯಿದೆ. ಈ ಎಲ್ಲಾ ಅಂಶಗಳಿಂದ ಈತ ದೇವತಾ ಕಾರ್ಯಗಳಲ್ಲಿ ತೊಡಗಿರುವ ಬ್ರಾಹ್ಮಣನಾಗಿರುವಂತಿದೆ.

೩.೨.೨. ವೈದ್ಯರು

ಮಾನವನಿಗೆ ಆರೋಗ್ಯವೇ ಭಾಗ್ಯ. 'ರೋಗ ಮನುಷ್ಯನಿಗೆ ಬಾರದೆ ಮರಕ್ಕೆ ಬರುವುದೇ' ಎಂಬ ನಾಣ್ಣುಡಿಯಿದೆ. ಹಾಗಾಗಿ ಜೀವವಿರುವ ಮಾನವ, ಪ್ರಾಣಿ ಎಲ್ಲರಿಗೂ ಒಂದಲ್ಲ ಒಂದು ಕಾರಣಕ್ಕೆ ರೋಗ–ರುಜಿನ ಬರುವುದು ಸಾಮಾನ್ಯ. ಇವುಗಳನ್ನು ವಾಸಿ ಮಾಡಲು ವೈದ್ಯಕೀಯ ವೃತ್ತಿಯನ್ನು ಮಾಡುತ್ತಿರುವ ವೈದ್ಯರು ಇರುವುದು ಸಹಜ. ಈ ವೈದ್ಯಕೀಯ ವೃತ್ತಿಯನ್ನು ನಾವು ಪ್ರಾಚೀನ ಕಾಲದಿಂದಲೂ ಮಾಡುತ್ತಾ ಬಂದಿರುವ ನುರಿತ ವೈದ್ಯರಾದ ಶುಶ್ರೂತ, ಚರಕ ಮುಂತಾದವರ ಕುರಿತು ಉಲ್ಲೇಖಗಳನ್ನು ಕಾಣುತ್ತೇವೆ.

ಅಂತೆಯೇ ವಿಜಯನಗರ ಕಾಲದ ಸಾಹಿತ್ಯ ಆಕರಗಳಲ್ಲಿ ವೈದ್ಯರ ಬಗೆಗೆ ಹಲವಾರು ಉಲ್ಲೇಖಗಳಿವೆ. 'ವೈದ್ಯ ರಾಜವಲ್ಲಭಂ' ಪ್ರಬಂಧವನ್ನು ಬರೆದ ಲಕ್ಷ್ಮಣ ಪಂಡಿತನು ಎರಡನೆಯ ಬುಕ್ಕರಾಯನ ಆಸ್ಥಾನದಲ್ಲಿ ರಾಜವೈದ್ಯನಾಗಿದ್ದನು.[೮೭] ವೈದ್ಯರು ಸಮರ ಸೈನಿಕರ ಜೊತೆಯಲ್ಲಿ ಇರುತ್ತಿದ್ದರು ಎಂಬ ವಿಷಯ ಮಹಾಭಾರತದಿಂದ ತಿಳಿದುಬರುತ್ತದೆ.[೮೮] ಕೌಟಲ್ಯನ ಅರ್ಥಶಾಸ್ತ್ರವು ಸೇನೆಯಲ್ಲಿ ಗಾಯಗೊಂಡವರಿಗೆ ಕೊಡಬೇಕಾದ ವೈದ್ಯಕೀಯ ಚಿಕಿತ್ಸೆಯನ್ನು ತಿಳಿಸುತ್ತದೆ.[೮೯]

ಕೇವಲ ಜನಸಾಮಾನ್ಯರಿಗೆ ಚಿಕಿತ್ಸೆ ನೀಡುವ ವೈದ್ಯರು ಮಾತ್ರವಲ್ಲದೇ ಹಸ್ತಿವೈದ್ಯರು, ತುರುಗ ವೈದ್ಯರು ಇದ್ದರು ಎಂಬುದು ತಿಳಿಯುತ್ತದೆ.[೯] ಇವು ಅಂದಿನ ಪಶುವೈದ್ಯಕೀಯ ಪದ್ಧತಿಯನ್ನು ನೆನಪಿಸುತ್ತವೆ. ಯುದ್ಧಗಳಲ್ಲಿ ಗಾಯಾಳುಗಳಿಗೆ ಅಷ್ಟೇ ಅಲ್ಲದೆ ಅದರಲ್ಲಿ ಭಾಗವಹಿಸಿದ್ದ ಪ್ರಾಣಿಗಳಿಗೂ ಸಹ ಚಿಕಿತ್ಸೆಯನ್ನು ಮಾಡುತ್ತಿದ್ದರು.

ವಿಜಯನಗರ ಕಾಲದಲ್ಲಿ ವೈದ್ಯರು ಇದ್ದ ಬಗೆಗೆ ಶಾಸನಗಳಲ್ಲಿಯೂ ಮಾಹಿತಿ ಲಭಿಸುತ್ತದೆ. ಕ್ರಿ.ಶ.೧೪೪೫ರ ಗೋವಿನಹಳ್ಳಿ (ಹಾಸನ ಜಿಲ್ಲೆ)ಯ ತಾಮ್ರಶಾಸನದ ಪ್ರಕಾರ, "ಎರಡನೆ ದೇವರಾಯ ಮಹಾರಾಯನಿಗೆ ಹೃದಯ ಸಂಬಂಧಿ ರೋಗವಿತ್ತೆಂಬ ವಿಷಯ ತಿಳಿಸುತ್ತದೆ. ಈ ಹೃದಯ ರೋಗವನ್ನು ವಾಸಿಮಾಡಲು ನಾಗನಾಥಾರ್ಯಸೂರಿ (ನಾಗಭಟ್ಟ) ಎಂಬ ವೈದ್ಯನು ವಿವಿಧ ಶಾಂತಿ ಪೂಜೆಗಳನ್ನು ಮಾಡಿ, ಪುರಾಣಾದಿಗಳನ್ನು ಪರಿಶೀಲಿಸಿ ಕಾಶಿ ಮೊದಲಾದ ತೀರ್ಥಕ್ಷೇತ್ರ ಗಳನ್ನು ಯಾತ್ರೆ ಮಾಡಿ, ಲಕ್ಷ ಸ್ನಾನಗಳನ್ನು ಪೂರೈಸಿ, ಅನೇಕ ಬ್ರಾಹ್ಮಣರಿಗೆ ಭೋಜನ ಮತ್ತು ದಾನಗಳನ್ನು ನೀಡಿ, ಎಲ್ಲ ತೀರ್ಥಗಳಲ್ಲೂ ನಿಯಮಾನುಸಾರ ಭಕ್ತಿಯಿಂದ ಆಚರಣೆಗಳನ್ನು ನಡೆಸಿ, ಹಿಂತಿರುಗುತ್ತಾನೆ. ಹಿಂತಿರುಗಿ ಬಂದು ಅರಸರ ಹೃದಯ ರೋಗಕ್ಕೆ ಅನೇಕ ವಿದ್ವಾಂಸರ ಸೂಚನೆಯಂತೆ ಮತ್ತು ಪಾರಂಪರಿಕ ಶಾಸ್ತ್ರದಂತೆ ಚಿಕಿತ್ಸೆಯನ್ನು ನೀಡುತ್ತಾನೆ. ಈ ಚಿಕಿತ್ಸೆಯಿಂದ ಗುಣಮುಖನಾದ ಅರಸನು ಸಂತೋಷದಿಂದ ಚಂದ್ರಮೌಳೇಶ್ವರನ ಸನ್ನಿಧಿಯಲ್ಲಿ ನಾಗಭಟ್ಟನಿಗೆ ಗೋವನಹಳ್ಳಿ ಮತ್ತು ಬೊಮ್ಮನಹಳ್ಳಿ ಗ್ರಾಮಗಳನ್ನು ದೇವರಾಯಪುರವೆಂದು ಮರುನಾಮಕರಣ ಮಾಡಿ ಸರ್ವಮಾನ್ಯವಾಗಿ ದಾನ ನೀಡಿದ್ದಾನೆ"[೧೦] ಎಂಬುದಾಗಿ ತಿಳಿಸುತ್ತದೆ. ಈ ಶಾಸನದಲ್ಲಿ ರೋಗ ಗುಣಪಡಿಸುವ ವಿವರಗಳು ಲಭ್ಯವಿಲ್ಲ. ಆದರೆ ನಾಗಭಟ್ಟನು ಹೃದಯ ತಜ್ಞ ವೈದ್ಯ ಎಂಬುದು ಸ್ಪಷ್ಟವಾಗುತ್ತದೆ.

ಬಸವಪುರಾಣದಲ್ಲಿ ವೈದ್ಯರು ನೀಡುತ್ತಿದ್ದ ಚಿಕಿತ್ಸಾ ವಿಧಾನವನ್ನು ಕುರಿತು,
ದಿಟ್ಟ ಪಾರ್ವಂ ಕಾಸಿ ತೆಗೆವುತ ಪೊಟ್ಟಣವನೆಂಗೈಯ್ಯೊಳೊಯ್ಯನೆ
ಮುಟ್ಟಿ ಮುಟ್ಟಿ ಶರೀರದೊಳು ನಸು ಶೇಖಮಂ ಮಾಡಿ ಅಟ್ಟವಾತದ ತೈಲಮಂ
ತಾಂಬೊಟ್ಟಿಡಿಸಿ ಲೇಪಿಸುತ ಪಥ್ಯಂಗೊಟ್ಟಿದಕೆ ತಕ್ಕನಿತು ಜೋಪಾಸನವನಾಚರಿಸಿ[೧೧] ಎಂದಿದೆ.

ಸನತ್ಕುಮಾರ ಚರಿತೆಯಲ್ಲಿ ಚಿಕಿತ್ಸೆಗೆಂದು ಬಂದ ವೈದ್ಯರ ಚಿತ್ರವೊಂದು ಹೀಗಿದೆ:

ಶಿರದಿ ಚೆಂದಿ ಕುಲಾಯಿ ಕರ್ಣದೊ
ಳಿರುವ ಕುಂಡಲ ಬೆರಳ ಮುದ್ರಿಕೆ
ಕೊರಳ ಪದಕ ಶರೀರ ತುಂಬಿದ ಪೈಠಣೆಯ ಹೊದೆದ
ಕರಮೆಸೆವ ಚಿತ್ರಾಂಬರದೊಳನು
ಚರರ ಕೈಯೊಳಗೌಷಧಂಗಳ
ಭರಣಿಗಳ ಪುಸ್ತಕವಿಡಿಸಿ ಕೊಂಡೆಯ್ದಿದರು ಧರೆಗೆ[೧೨]

ಕಂಠೀರವ ನರಸರಾಜ ವಿಜಯದಲ್ಲಿ ವೈದ್ಯರ ಕುರಿತು ಹೀಗೆ ವರ್ಣಿಸಿದೆ:

ಮಿರುಪ ಕಕ್ಷದ ಚೀಲ ನೊಸಲೊಳು
ಪರಿಮಳ ಗಂಧಾಕ್ಷತೆಯ
ಸಿರಿವಂತರಿವರಾರೆ ನೆರೆಜಾಣ ವೈದ್ಯರು
ಸರಸಿಜಾಯತ ಪುತನೇತ್ರೆ[೧೩]

ಈ ಮೇಲಿನ ಪದ್ಯಗಳ ವಿವರಣೆಗಳಿಂದ ವೈದ್ಯರು ಧರಿಸುತ್ತಿದ್ದ ಸಣ್ಣ ಕುಲಾಯಿ, ಪೂರ್ಣ ಪ್ರಮಾಣದ ಅಂಗಿ, ಚಿಕಿತ್ಸೆಗೆಂದು ತಂದ ಸ್ವೆತಸ್ಕೋಪ್(Stethoscope), ಔಷಧಿಗಳ ಟಿಪ್ಪಣಿಯನ್ನು ಬರೆದುಕೊಡಲು ತಂದಿದ್ದ ಪುಸ್ತಕ ಮುಂತಾದ ವೈದ್ಯಕೀಯ ಪರಿಕರಗಳನ್ನು ಇಟ್ಟಿದ್ದ ಚೀಲ ಹಾಗೂ ವೈದ್ಯರು ರೋಗಿಯನ್ನು ಮುಟ್ಟಿ ಮುಟ್ಟಿ ಪರೀಕ್ಷಿಸುತ್ತಿದ್ದ ಕ್ರಮ ಮುಂತಾದ ವಿವರಗಳ ವೈದ್ಯರ ಹಾಗೂ ಅವರ ಚಿಕಿತ್ಸಾ ವಿಧಾನದ ಚಿತ್ರಣವನ್ನು ಪೂರ್ಣ ಪ್ರಮಾಣದಲ್ಲಿ ಒದಗಿಸುತ್ತದೆ.

೩.೨.೩. ಪಶುಪಾಲಕರು

ಪ್ರಾಚೀನ ಕಾಲದಿಂದಲು ಭಾರತ ಕೃಷಿ ಪ್ರಧಾನ ದೇಶವಾಗಿದೆ. ಕೃಷಿಯ ಜೊತೆಗೆ ಪಶುಪಾಲನೆ ಒಟ್ಟೊಟ್ಟಿಗೆ ಬಂದಿರುವುದನ್ನು ಕಾಣಬಹುದು. ವಿಜಯನಗರ ಕಾಲದ ಸ್ಮಾರಕಗಳಲ್ಲಿ ಕೃಷಿಕ ಮತ್ತು ಪಶುಪಾಲಕರ ಶಿಲ್ಪಗಳು ಯಥೇಚ್ಚವಾಗಿ ಕಂಡುಬರುತ್ತವೆ.

ದನಗಾಹಿಗಳು

ಆಂಧ್ರಪ್ರದೇಶದ ಶ್ರೀಶೈಲ ಮಲ್ಲಿಕಾರ್ಜುನ ದೇವಾಲಯದ ಪ್ರಾಕಾರದಲ್ಲಿರುವ ಒಂದು ದನಗಾಹಿ ಶಿಲ್ಪ (ಚಿತ್ರ-೯) ಸುಂದರವಾಗಿದೆ. ಈ ಶಿಲ್ಪದಲ್ಲಿ ಒಬ್ಬ ವ್ಯಕ್ತಿ ತನ್ನ ಕೈಯಲ್ಲಿ ಎರಡು ಹಸುಗಳ ಹಗ್ಗವನ್ನು ಹಿಡಿದಿದ್ದು, ಓಡಿಸಿಕೊಂಡು ಹೋಗುತ್ತಾ ಇದ್ದಾನೆ. ಹಗ್ಗದ ಕೊನೆಯ ತುದಿಯಿಂದ ಅವುಗಳನ್ನು ಬೇಗ ಮುಂದೆ ಹೋಗಲು ಪ್ರೇರೆಪಿಸುವಂತಿದೆ. ಈ ದನಗಾಹಿ ಅರ್ಧೋರುಕವನ್ನು ಕಟಿಯಿಂದ ಮೊಣಕಾಲಿನವರೆಗೆ ಕಚ್ಚೆಹಾಕಿ ಧರಿಸಿದ್ದು, ಉತ್ತರೀಯವನ್ನು ಕಟಿಯ ಮೇಲೆ ಕಟ್ಟಿದ್ದಾನೆ. ದೇಹದ ಮೇಲ್ಭಾಗದಲ್ಲಿ ಯಾವುದೇ ವಸ್ತ್ರ ಧರಿಸಿಲ್ಲ. ಕೈ ಕಡಗಗಳು ಹಾಗೂ ಕುಂಡಲಗಳನ್ನು ಧರಿಸಿದ್ದಾನೆ. ಮುಡಿಯನ್ನು ಹಿಂದೆ ಗಂಟು ಹಾಕಿರುವುದು (ಹಣೆಗಂಟು) ಕಂಡುಬರುತ್ತದೆ. ಎರಡು ದನಗಳ ಬೆನ್ನ ಮೇಲೆ ವಸ್ತ್ರವನ್ನು ಹೊದಿಸಲಾಗಿದೆ. ಅಲ್ಲದೆ ಒಂದು ಹಸುವಿಗೆ ಗೆಜ್ಜೆಸರ ಹಾಕಿರುವುದನ್ನು ಕಾಣಬಹುದು. ಈ ಚಿತ್ರಣವನ್ನು ಗಮನಿಸಿದಾಗ ಕೃಷಿಕ ಈ ದನಗಳನ್ನು ಯಾವುದಾದರೂ ದನಗಳ ಜಾತ್ರೆಗೆ ಕರೆದೊಯ್ಯುತ್ತಿರುವಂತೆ ಭಾಸವಾಗುತ್ತದೆ. ಪ್ರಾಚೀನ ಕಾಲದಿಂದ ಇಲ್ಲಿಯವರೆಗೆ ರಥೋತ್ಸವ ಮುಂತಾದ ಧಾರ್ಮಿಕ ಉತ್ಸವಗಳ ಅಂಗವಾಗಿ ದನದ ಜಾತ್ರೆ ನಡೆಸುವುದನ್ನ ನಾವು ಗಮನಿಸಿದ್ದೇವೆ. ಕಾರಹುಣ್ಣಿಮೆಯ ದಿನ ಎತ್ತುಗಳ ಪಂದ್ಯ ನಡೆಯುತ್ತಿದ್ದ ವಿಷಯವನ್ನು ಶಾಸನಗಳಲ್ಲಿ ಪ್ರಸ್ತಾಪಿಸಲಾಗಿದೆ. ಡಾ. ಎಂ. ಚಿದಾನಂದಮೂರ್ತಿಯವರು ಈ ಕುರಿತು, "ಶಾಸನಗಳಲ್ಲಿ ಹೇಳಿರುವ ಮೂರು ಹಬ್ಬಗಳಲ್ಲಿ ಕಾರ ಹುಣ್ಣಿಮೆಯೂ ಒಂದು. ಈ ಹಬ್ಬದ ಸಂಜೆ ಊರ ಹೊರಗೆ ದೊಡ್ಡ ಬೆಂಕಿಯನ್ನು ಹತ್ತಿಸಿ ಅದರ ಮೇಲೆ ದನಗಳನ್ನು ಹಾಯಿಸುತ್ತಾರೆ"[೫] ಎಂದಿದ್ದಾರೆ.

ಕುರಿಗಾಹಿಗಳು

ಪಶುಪಾಲನೆಯಲ್ಲಿ ಕುರಿಗಾಹಿಗಳು ಪ್ರಮುಖ ಪಾತ್ರವನ್ನು ವಹಿಸಿದ್ದಾರೆ. ವಿಜಯನಗರ ಕಾಲದಲ್ಲಿ ಸ್ಮಾರಕಗಳಲ್ಲಿ ದೊರೆತಿರುವ ಹಲವಾರು ಗೊರಗುದಾರಿ ಶಿಲ್ಪಗಳಲ್ಲಿರುವ ವ್ಯಕ್ತಿಯನ್ನು ಕುರುಬ ಎಂದು ಗುರುತಿಸಿದ್ದಾರೆ.

ಶ್ರೀಶೈಲ ಮಲ್ಲಿಕಾರ್ಜುನ ದೇವಾಲಯದ ಪ್ರಾಕಾರದ ಮೇಲಿರುವ ಒಂದು ಶಿಲ್ಪದಲ್ಲಿ (ಚಿತ್ರ-೧೦) ಒಬ್ಬ ವ್ಯಕ್ತಿ ನಿಂತಿದ್ದು, ಆತ ತನ್ನ ಕುರಿ ಶಿವಲಿಂಗದ ಬಳಿ ಇರುವುದನ್ನು ಗಮನಿಸುತ್ತಿರುವ ಚಿತ್ರಣವಿದೆ. ಈ ವ್ಯಕ್ತಿ ಕುರಿಕಾಯುವವನೆ ಆಗಿದ್ದು, ತನ್ನ ಕುರಿ ಮುಂದೆ ಮುಂದೆ ಬಂದು ಶಿವಲಿಂಗದ ಬಳಿ ನಿಂತಿದ್ದು, ಅದನ್ನು ಹುಡುಕಿಕೊಂಡು ಬಂದ ಆತ ಕುರಿ ಮತ್ತು ಶಿವಲಿಂಗವನ್ನು ವೀಕ್ಷಿಸುತ್ತಿರುವನು. ಆ ವ್ಯಕ್ತಿಯು ಹಣೆಗಂಟನ್ನು ಹಾಕಿದ್ದಾನೆ. ಅಧೋರ್ರುಕವನ್ನು ಕಟಿಯಿಂದ ಮೊಣಕಾಲಿನವರೆಗೆ ಕಚ್ಚೆಹಾಕಿ ಧರಿಸಿದ್ದಾನೆ. ಉತ್ತರೀಯವನ್ನು ಕಟಿಯ ಮೇಲೆ ಗಂಟು ಹಾಕಿರುವುದನ್ನು ಗಮನಿಸಬಹುದು. ಅಲ್ಲದೇ ಕೈಕಡಗ, ಕಂಠೀಹಾರ ಹಾಗೂ ಕರ್ಣಕುಂಡ ಗಳನ್ನು ಧರಿಸಿದ್ದಾನೆ. ಅವು ಸಾದಾ ವಿನ್ಯಾಸದಿಂದ ಕೂಡಿವೆ. ಇದರೊಂದಿಗೆ ಆ ವ್ಯಕ್ತಿ ತನ್ನ ಆಹಾರದ ಚೀಲವನ್ನು ಎಡಗೈ ಮೊಣಕೈನ ಮೇಲೆ ಹಾಕಿಕೊಂಡಿದ್ದಾನೆ. ಕುರಿಗಾಹಿ ತಾನಷ್ಟೇ ಆಭರಣಗಳನ್ನು ಧರಿಸಿಲ್ಲ. ತಾನು ಸಾಕಿದ್ದ ಕುರಿಯ ಕೊರಳಿಗೆ ದಾರದಿಂದ ಗಂಟೆಯನ್ನು ಸೇರಿಸಿ ಕಟ್ಟಿದ್ದಾನೆ. ಆಭರಣ ಪ್ರಿಯನಾದ ಮಾನವ ತನ್ನ ಸಾಕು ಪ್ರಾಣಿಗಳಿಗೆ ಆಭರಣಗಳನ್ನು ತೊಡಿಸಿ ಸಂತೋಷಪಡುತ್ತಿದ್ದ. ಈ ಶಿಲ್ಪವು ಕುರಿಗಾಹಿಯ ಸ್ಪಷ್ಟ ಚಿತ್ರಣವನ್ನು ಕಟ್ಟಿಕೊಡುತ್ತದೆ.

ದನಗಾಹಿ ಮತ್ತು ಕುರಿಗಾಹಿಗಳು ಧೋತ್ರವನ್ನು ಅಧೋರ್ರುಕದಲ್ಲಿ ಮಂಡಿಯ ಮೇಲ್ಭಾಗದವರೆಗೆ ಕಚ್ಚೆ ಹಾಕಿ ಧರಿಸಿದ್ದಾರೆ. ಉತ್ತರೀಯವನ್ನು ಕಟಿಭಾಗದಲ್ಲಿ ಧೋತ್ರದ ಮೇಲೆ ಕಟ್ಟಿದ್ದಾರೆ. ತಮ್ಮ ನಿತ್ಯ ಕೆಲಸಗಳಿಗೆ ಹಾಗೂ ಚಲನವಲನಗಳಿಗೆ ತೊಡಕಾಗದಂತೆ ಈ ರೀತಿಯ ವಸ್ತ್ರವನ್ನು ಧರಿಸುತ್ತಿರುವುದು ಇಂದಿಗೂ ಕಂಡು ಬರುತ್ತದೆ. ಹಾಗಾಗಿ ಮಿತ ಪ್ರಮಾಣದ ವಸ್ತ್ರವನ್ನು ಇವರು ಧರಿಸುತ್ತಿದ್ದರು ಎಂಬುದು ಸ್ಪಷ್ಟ.

ಗೊರಗುದಾರಿ ಪಶುಪಾಲಕರು

ಪಶುಪಾಲಕ ಸಮುದಾಯ ಮಳೆ ಹಾಗೂ ಬಿಸಿಲಿನಿಂದ ರಕ್ಷಣೆ ಪಡೆಯಲು ಗೋಟೆ ಅಥವಾ ಗೊರಗನ್ನು ತಮ್ಮ ತಲೆಯ ಮೇಲೆ ಹೊದ್ದುಕೊಂಡು ಕೈಯಲ್ಲಿ ಕೋಲನ್ನು ಹಿಡಿದ ಭಂಗಿಯಲ್ಲಿರುವ ಶಿಲ್ಪಗಳು ನಮಗೆ ವಿಜಯನಗರ ಕಾಲದ ಸ್ಮಾರಕಗಳಲ್ಲಿ ಬಹಳಷ್ಟು ಕಂಡುಬರುತ್ತವೆ. ಈ ಶಿಲ್ಪಗಳಲ್ಲಿರುವ ವ್ಯಕ್ತಿಯನ್ನು ಕುರುಬ ಸಮುದಾಯವೆಂದು ಗುರುತಿಸಿ ದ್ದಾರೆ. ಆದರೆ ಪಶುಪಾಲಕ ಸಮುದಾಯದವರು ಹವಾಮಾನದ ರಕ್ಷಣೆಗಾಗಿಯೇ ಗೊರಗನ್ನು ಧರಿಸುತ್ತಿದ್ದರಿಂದ ಅವರನ್ನು 'ಗೊರಗುಧಾರಿ ಪಶುಪಾಲರು' ಎಂಬುದಾಗಿ ಕರೆಯುವುದು ಸೂಕ್ತ.

ಶ್ರೀಶೈಲ ಮಲ್ಲಿಕಾರ್ಜುನ ದೇವಾಲಯದ ಪ್ರಾಕಾರದಲ್ಲಿರುವ ಶಿಲ್ಪ ಪಟ್ಟಿಕೆಯಲ್ಲಿ ಗೊರಗನ್ನು ಹೊದ್ದಿರುವ ವ್ಯಕ್ತಿಯು ತನ್ನ ಮುಂದೆ ಇರುವ ಮತ್ತೊಬ್ಬ ವ್ಯಕ್ತಿಯನ್ನು ಏನೋ ಕೇಳುತ್ತಿರುವಂತಿದ್ದು, ಆತ ಮುಂದೇ ಕೈಯನ್ನು ಮಾಡಿ ತೋರಿಸುತ್ತಿದ್ದಾನೆ. ಈ ಚಿತ್ರದಲ್ಲಿರುವ ಗೊರಗನ್ನು ಹೊದ್ದಿರುವ ವ್ಯಕ್ತಿಯು ಅಧೋರ್ರುಕವನ್ನು ಮೊಣಕಾಲಿನವರೆಗೆ ಧರಿಸಿದ್ದು, ಉತ್ತರೀಯವನ್ನು ಕಟಿಯ ಮೇಲೆ ಕಟ್ಟಿದ್ದು, ಗೊರಗನ್ನು ತಲೆಯ ಭಾಗದಿಂದ ತೊಡೆಯಭಾಗದವರೆಗೆ ಧರಿಸಿದ್ದಾನೆ. ಅಲ್ಲದೇ ಕರ್ಣಕುಂಡಲ, ಕೈಕಡಗ ಮತ್ತು ಕಾಲ್‌ಕಡಗ ಗಳನ್ನು ಧರಿಸಿರುವುದು ಕಂಡುಬರುತ್ತದೆ. ಅವು ಸಾದಾ ವಿನ್ಯಾಸವನ್ನು ಹೊಂದಿವೆ. ಆತನ ಕೈಯಲ್ಲಿ ಆಹಾರದ ಚೀಲವನ್ನು ಹಿಡಿದಿದ್ದಾನೆ.

ಹಂಪಿಯ ಪಟ್ಟಾಭಿರಾಮ ದೇವಾಲಯದ ಕಲ್ಯಾಣಮಂಟಪದಲ್ಲಿರುವ ಗೊರಗುದಾರಿ ಶಿಲ್ಪದಲ್ಲಿ ಗೊರಗನ್ನು ತಲೆಯಿಂದ ಪಾದಗಳವರೆಗೆ ಹೊದ್ದಿರುವುದು ಕಂಡು ಬರುತ್ತದೆ. ಈ ಶಿಲ್ಪದಲ್ಲಿ ಇತರೆ ವಸ್ತ್ರಗಳು ಕಾಣುವುದಿಲ್ಲ. ಆಭರಣಗಳಲ್ಲಿ ಕೈಕಡಗ ಮತ್ತು ಸಣ್ಣ ಕುಂಡಲ ಗಳನ್ನು ಧರಿಸಿರುವುದು ಮಾತ್ರ ಕಾಣಬಹುದು. ಈತ ತನ್ನ ಎರಡೂ ಕೈಯಲ್ಲಿ ಕೋಲನ್ನು ಊರಿ ಗಲ್ಲವನ್ನು ಕೋಲಿನ ಮೇಲೆ ಊರಿ ಆಸರೆಯನ್ನು ಪಡೆದಿದ್ದಾನೆ.

ಹಂಪಿಯ ಅಚ್ಯುತರಾಯ ದೇವಾಲಯದಲ್ಲಿರುವ ಗೊರಗುದಾರಿ ಶಿಲ್ಪವು (ಚಿತ್ರ-೧೧) ವಿಶೇಷವಾಗಿದೆ. ಈ ಶಿಲ್ಪದಲ್ಲಿರುವ ಗೊರಗುದಾರಿಯು ಮುಸ್ಲಿಂ ಅಥವಾ ವಿದೇಶಿ ಪ್ರವಾಸಿ ಯಾಗಿರುವ ಸಾಧ್ಯತೆ ತಳ್ಳಿ ಹಾಕುವಂತಿಲ್ಲ. ಈ ವ್ಯಕ್ತಿ ಗಡ್ಡದಾರಿಯಾಗಿದ್ದು, ಉದ್ದ ತೋಳಿನ ನಿಲುವಂಗಿ ಮತ್ತು ಪಾದಚಲ್ಲಣ ಹಾಗೂ ಸಣ್ಣ ಕುಂಡಲಗಳನ್ನು ಧರಿಸಿದ್ದಾನೆ. ಮಳೆ ಅಥವಾ ಬಿಸಿಲಿನಿಂದ ರಕ್ಷಣೆ ಪಡೆಯಲು ಗೊರಗು ಧರಿಸಿರುವುದು ಈ ಚಿತ್ರದಿಂದ ಸ್ಪಷ್ಟವಾಗುತ್ತದೆ.

ತಮಿಳುನಾಡಿನ ಶ್ರೀರಂಗಂ ದೇವಾಲಯದ ಕಲ್ಯಾಣಮಂಟಪದಲ್ಲಿರುವ ಗೊರಗುದಾರಿ ಶಿಲ್ಪದ ವಿಶೇಷತೆಯೆಂದರೆ, ಗೊರಗಿನ ಮೇಲೆ ಮತ್ತು ಕೆಳಭಾಗದಲ್ಲಿ ಗಂಟು ಹಾಕಿ ಪಾದಗಳವರೆಗೆ ಧರಿಸಿರುವುದು. ಅದೇ ದೇವಾಲಯದ ಮತ್ತೊಂದು ಶಿಲ್ಪದಲ್ಲಿ ಗೊರಗನ್ನು ಮಡಿಸಿ ದ್ವಿಪದಿಯಲ್ಲಿ ತಲೆಯ ಮೇಲೆ ಹೊದೆದುಕೊಂಡಿದ್ದು, ತಲೆಯ ಮೇಲೆ ಗೊರಗು ಉಬ್ಬಿದಂತೆ ಎತ್ತರವಾಗಿ ಕಾಣುತ್ತದೆ. ಈ ಶಿಲ್ಪದಲ್ಲಿರುವ ಗೊರಗನ್ನು ತುದಿಯಲ್ಲಿ ಗಂಟು ಹಾಕಿ ಧರಿಸಿದ್ದಾನೆ.

ಒಟ್ಟಾರೆ ಗೊರಗುದಾರಿ ಶಿಲ್ಪಗಳಲ್ಲಿ ಗೋಟೆಯನ್ನು ಬಹುಶಃ ಗೋಣಿ ಚೀಲದಿಂದ ಮಾಡಿದ್ದಾಗಿರುವ ಸಾಧ್ಯತೆಯಿದೆ. ಅಲ್ಲದೇ ವಿಭಿನ್ನ ಮಾದರಿಯಲ್ಲಿ ಹಾಗೂ ವಿಭಿನ್ನ ಅಳತೆಯ ಗೊರಗುಗಳನ್ನು ಧರಿಸಿರುವುದು ಕಂಡುಬರುತ್ತದೆ. ಇದರೊಂದಿಗೆ ಗೊರಗಿನ ಅಂಚುಗಳನ್ನು ಸ್ಪಷ್ಟವಾಗಿ ಗಮನಿಸಬಹುದು. ಬೇಸಿಗೆ ಕಾಲ, ಮಳೆಗಾಲ ಮತ್ತು ಚಳಿಗಾಲಕ್ಕೆ ತಕ್ಕಂತೆ ಗೊರಗಿನ ಉದ್ದವನ್ನು ಹೆಚ್ಚು ಮತ್ತು ಕಡಿಮೆ ಮಾಡಿಕೊಂಡು ಧರಿಸುತ್ತಿದ್ದರು ಎಂಬುದು ಸ್ಪಷ್ಟವಾಗುತ್ತದೆ.

ಕೃಷಿಗೆ ಸಂಬಂಧಿಸಿದ ಇತರೆ ಶಿಲ್ಪಗಳು

ಕೃಷಿಯಲ್ಲಿ ಹಲವು ವಿಧದ ಬೆಳೆಗಳನ್ನು ಬೆಳೆಯುವುದು ಸಾಮಾನ್ಯ. ಅವುಗಳಲ್ಲಿ ಹಣ್ಣುಗಳ ಪಾತ್ರ ಬಹುಮುಖ್ಯ. ಹಣ್ಣುಗಳಲ್ಲಿ ಹಲಸಿನ ಹಣ್ಣು ವಾಸನೆಯಿಂದ ಪ್ರಖ್ಯಾತ. ಹಲಸಿನ ಹಣ್ಣಿಗೆ ಸಂಬಂಧಿಸಿದ ಗಾದೆಯೊಂದು ಹೀಗಿದೆ, 'ಹಸಿದು ಹಲಸು, ಉಂಡು ಮಾವು'. ಈ ಗಾದೆಯ ಅರ್ಥ ಹೊಟ್ಟೆ ಹಸಿದಾಗ ಹಲಸಿನ ಹಣ್ಣನ್ನು, ಊಟವಾದ ಮೇಲೆ ಮಾವಿನ ಹಣ್ಣನ್ನು ತಿನ್ನಬೇಕು. ಈ ಹಿನ್ನೆಲೆಯಲ್ಲಿ ಹಲಸಿನ ಹಣ್ಣು ಕೃಷಿಗೆ ಸಂಬಂಧಿಸಿದ ಬೆಳೆಯಾಗಿದೆ ಸ್ಪಷ್ಟ. ಹಣ್ಣುಗಳನ್ನು ಕೃಷಿಕರು ವಿಭಿನ್ನ ಶೈಲಿಯಲ್ಲಿ ಒಯ್ಯುತ್ತಿರುವುದು ಶಿಲ್ಪಗಳಲ್ಲಿ ಕಂಡುಬರುತ್ತದೆ. ಅಂತೆಯೇ ಹಂಪಿ ಮತ್ತು ಶ್ರೀಶೈಲದ ಸ್ಮಾರಕಗಳಲ್ಲಿ ಹಲಸಿನ ಕಾಯಿಯನ್ನು ಕೈಯಲ್ಲಿ ಹಿಡಿದಿರುವ, ತಲೆಯ ಮೇಲೆ ಹೊತ್ತುಕೊಂಡು ಹೋಗುತ್ತಿರುವ ಶಿಲ್ಪಗಳು ಹಲವಾರು ಸಿಗುತ್ತವೆ.

ಹಂಪಿಯ ಅಚ್ಯುತರಾಯ ದೇವಾಲಯದಲ್ಲಿರುವ ಶಿಲ್ಪವೊಂದರಲ್ಲಿ (ಚಿತ್ರ-೧೨) ವ್ಯಕ್ತಿಯೊಬ್ಬ

ತನ್ನ ಎಡಗೈಯಲ್ಲಿ ಹಲಸಿನ ಹಣ್ಣನ್ನು ಬಲಗೈಯಲ್ಲಿ ಕತ್ತಿಯನ್ನು ಹಿಡಿದಿದ್ದಾನೆ. ಚದುರಿದ ಜಟೆಯನ್ನು ಹೊಂದಿರುವ ಈತ ಮಧ್ಯೆ ಹರಳಿಂದ ಕೂಡಿರುವ ವೃತ್ತ ಕುಂಡಲವನ್ನು ಧರಿಸಿದ್ದಾನೆ. ಸಾದಾ ವಿನ್ಯಾಸವಿರುವ ಎರಡೆಳೆಯ ಸರ, ಬಾಹುಬಂಧಿ ಹಾಗೂ ಕಾಲ್ಕಡಗಗಳನ್ನು ಧರಿಸಿದ್ದಾನೆ. ಧೋತ್ರವನ್ನು ಅರ್ಧೋರುಕದಲ್ಲಿ ಧರಿಸಿದ್ದು, ಅದರ ಮೇಲೆ ನಡುಪಟ್ಟಿಯನ್ನು ಬಿಗಿಯಾಗಿ ಕಟ್ಟಿದ್ದಾನೆ. ಅದರ ಅಂಚುಗಳನ್ನು ಚಿತ್ರದಲ್ಲಿ ಕಾಣಬಹುದು. ಉತ್ತರೀಯವನ್ನು ಎರಡೂ ಹೆಗಲ ಮೇಲೆ ಎದೆಯ ಮುಂದೆ ಬರುವಂತೆ ಧರಿಸಿದ್ದು, ಅದರ ಅಂಚುಗಳು ಎದೆಯ ಮೇಲಿನಿಂದ ಕಟಿಯ ಹಿಂದಿನ ಭಾಗದಲ್ಲಿ ಹಾರಾಡುತ್ತಿರುವುದನ್ನು ಗಮನಿಸಬಹುದು.

ಶ್ರೀಶೈಲದ ಮಲ್ಲಿಕಾರ್ಜುನ ದೇವಾಲಯದ ಪ್ರಾಕಾರದಲ್ಲಿರುವ ಶಿಲ್ಪದಲ್ಲಿ ಕೃಷಿಕ ಹಲಸಿನ ಹಣ್ಣನ್ನು ತಲೆಯ ಮೇಲೆ ಹೊತ್ತುಕೊಂಡಿದ್ದು, ಹಣ್ಣಿನ ತುದಿಯ ತೊಟ್ಟವನ್ನು ತನ್ನ ಎಡಗೈಯಲ್ಲಿ ಹಿಡಿದಿದ್ದಾನೆ. ಈ ಶಿಲ್ಪದಲ್ಲಿ ಅರ್ಧೋರುಕ ಧರಿಸಿದ್ದು, ದೇಹದ ಮೇಲ್ಭಾಗ ಬೆತ್ತಲೆಯಿಂದ ಇದೆ. ಹಣೆಗಂಟು ಹಾಕಿದ್ದು, ವೃತ್ತಕುಂಡಲ ಒಂದೆಳೆಯ ಸರ ಮತ್ತು ಸಾದಾ ಕಂಕಣಗಳನ್ನು ಧರಿಸಿರುವುದನ್ನು ಕಾಣಬಹುದು.

ಒಟ್ಟಾರೆ ಎಲ್ಲಾ ಪಶುಪಾಲಕ ಶಿಲ್ಪಗಳಲ್ಲಿ ಅರ್ಧೋರುಕದಲ್ಲಿ ಧೋತ್ರವನ್ನು, ಉತ್ತರೀಯವನ್ನು ಧೋತ್ರದ ಮೇಲೆ ಧರಿಸಿರುವುದು ಸಾಮಾನ್ಯ ಅಂಶವಾಗಿದೆ. ಅಲ್ಲದೇ ದೇಹದ ಮೇಲ್ಭಾಗ ಬೆತ್ತಲಾಗಿದ್ದು, ಸರಳವಾಗಿದೆ.

೩.೨.೪. ಬೇಟೆಗಾರರು

ಬೇಟೆಯನ್ನು ಸಾಮಾನ್ಯರಿಂದ ಹಿಡಿದು ರಾಜರವರೆಗೆ ಎಲ್ಲರೂ ವಿವಿಧ ಉದ್ದೇಶಗಳ ಹಿನ್ನೆಲೆಯಲ್ಲಿ ಆಡುವುದನ್ನು ಮಹಾಕಾವ್ಯಗಳ ಕಾಲದಿಂದಲೂ ತಿಳಿದಿದ್ದೇವೆ. ರಾಮಾಯಾಣದಲ್ಲಿ ದಶರಥ ಮಹಾರಾಜ ವಿನೋದಕ್ಕಾಗಿ ಬೇಟೆ ಆಡಿದರೆ, ಸಾಮಾನ್ಯರು ತಮ್ಮ ಆಹಾರಕ್ಕಾಗಿ ಬೇಟೆ ಆಡುವುದನ್ನು ವೃತ್ತಿಯಾಗಿಸಿಕೊಂಡಿದ್ದಾರೆ. ವಿಜಯನಗರ ಕಾಲದ ಶಿಲ್ಪಗಳಲ್ಲಿ ಹಾಗೂ ಸಾಹಿತ್ಯಾಧಾರಗಳಲ್ಲಿಯೂ ಬೇಟೆಯ ಬಗೆಗೆ ಮಾಹಿತಿ ದೊರೆಯುತ್ತವೆ. ವಿಜಯನಗರ ಸಾಮ್ರಾಜ್ಯದ ಸ್ಥಾಪನೆಯ ಹಿಂದೆ ಒಂದು ಬೇಟೆಯ ಪ್ರಸಂಗವಿದೆ ಎಂಬುದು ಗಮನಾರ್ಹ. ವಿಜಯನಗರ ಕಾಲದ ರಾಜರು ಕಟ್ಟಿಸಿದ ಕೋಟೆಯ ಬಾಗಿಲಿಗೆ ಬೇಟೆಕಾರರ ಹೆಬ್ಬಾಗಿಲು ಎಂಬುದಾಗಿ ಹೆಸರಿಟ್ಟಿರುವುದನ್ನು ಗಮನಿಸಿದರೆ ವಿಜಯನಗರದ ಅರಸರು ಹಾಗೂ ಇಲ್ಲಿನ ಜನಸಾಮಾನ್ಯರು ಬೇಟೆಯ ಬಗೆಗೆ ಹೊಂದಿದ್ದ ಉತ್ಸಾಹ ಹಾಗೂ ಪಾಲ್ಗೊಳ್ಳುವಿಕೆ ಮತ್ತು ಅವರು ಬೇಟೆಗೆ ನೀಡಿದ್ದ ಪ್ರೋತ್ಸಾಹದ ಬಗೆಗೆ ತಿಳಿಯುತ್ತದೆ. ವಿಜಯನಗರದಲ್ಲಿ ದಸರ ಹಬ್ಬ ಸಂದರ್ಭದಲ್ಲಿ ನಗರದಲ್ಲಿ ಏರ್ಪಸಿದ್ದ ಇತರೆ ಹಬ್ಬ ಆಚರಣೆಗಳ ಸಂದರ್ಭದಲ್ಲಿ, ಬೇಟೆಗಾಗಿ ರಾಜನೊಡನೆ ಹೋಗುತ್ತಿದ್ದ ಬೇಟೆಗಾರರು, ತಾವು ಬೇಟೆಯಾಡಿದ ನಂತರ ನಗರವನ್ನು ಈ ಬಾಗಿಲಿನ ಮೂಲಕವೇ ಪ್ರವೇಶ ಮಾಡುತ್ತಿದ್ದುದ್ದಾಗಿ ತಿಳಿದುಬರುತ್ತದೆ.[೬] ಬೇಟೆಯಲ್ಲಿ ಹಲವು ವಿಧಗಳಿದ್ದು, ಗಜಬೇಟೆ, ಹುಲಿಬೇಟೆ, ಜಿಂಕೆಬೇಟೆ, ಹಂದಿಬೇಟೆ ಮುಖ್ಯವಾಗಿವೆ.

ಗಜಬೇಟೆ

ವಿಜಯನಗರದ ಪ್ರಸಿದ್ಧ ರಾಜರಲ್ಲಿ ಒಬ್ಬರಾದ ಎರಡನೇ ದೇವರಾಯನಿಗೆ 'ಗಜಬೇಂಟೆಕಾರ' ಎಂಬ ಬಿರುದಿತ್ತು. ಈ ಬಿರುದು ವಿಜಯನಗರ ಕಾಲದಲ್ಲಿ ಗಜಗಳನ್ನು ಪಳಗಿಸುವ ಹಾಗೂ ಬೇಟೆಯಾಡುವ ಕಲೆ ತಿಳಿದಿತ್ತು ಎಂಬ ಅಂಶವನ್ನು ದೃಢಪಡಿಸುತ್ತದೆ. ಕ್ರಿ.ಶ. ೧೪೩೪ರ ೨ನೇ ದೇವರಾಯನ ಶಾಸನ ತಿಳಿಸುವಂತೆ, "ದೇವರಾಯ ಮಹಾರಾಯರು ಬೇಟೆಯಾಡುವ ಸಲುವಾಗಿ ಮಾಚನಹಳ್ಳಿಗೆ (ಚಿತ್ರದುರ್ಗ ಜಿಲ್ಲೆ) ಬಂದಾಗ ಸಮೀಪದ ಜಟಂಗ ರಾಮಯದೇವರ ದರ್ಶನ ಪಡೆದು ಆ ದೇವರಿಗೆ ರಾಯದುರ್ಗಕ್ಕೆ ಸಲುವ ಅಮೃತಪಾಡಿ ಕಟ್ಟಳೆಯ ಇಪ್ಪತ್ತು ವರಹದ ಆದಾಯವಿರುವ ಗ್ರಾಮ ಮತ್ತು ಹಾನೆಯ ನಾಡಿನ ಸಂಗೇಬೋವನ ಕಾಲುವೆಯ ಕೋರು ಸುವರ್ಣಾದಾಯ, ಆ ಕಾಲುವೆಯ ಚತುಸೀಮೆಗೆ ಸಲುವ ನಿಧಿನಿಕ್ಷೇಪ ಮೊದಲಾದ ಸರ್ವೋತ್ಪತ್ತಿಗಳನ್ನು ಬಿಡಲು ತನ್ನ ಅಧಿಕಾರಿಗಳಿಗೆ ತಿಳಿಸಿದ್ದನು"[೭] ಎಂಬುದಾಗಿ ತಿಳಿಸುತ್ತದೆ. ಈ ಶಾಸನದಿಂದ ಸ್ಪಷ್ಟವಾಗುವ ಅಂಶವೆಂದರೆ ರಾಜ ವಿಹಾರ ಹಾಗೂ ಬೇಟೆಗಾಗಿ ಸಾಮ್ರಾಜ್ಯದಾದ್ಯಂತ ಸಂಚರಿಸುತ್ತಿದ್ದು, ಆ ಸಂದರ್ಭದಲ್ಲಿ ಪುಣ್ಯಕ್ಷೇತ್ರಗಳ ದರ್ಶನ ಪಡೆದು, ದಾನ ನೀಡುತ್ತಿದ್ದುದು ಗಮನಾರ್ಹ ಸಂಗತಿ. ಇದಕ್ಕೆ ಪುಷ್ಠಿ ಎಂಬಂತೆ ಹಂಪಿಯ ಮಹಾನವಮಿ ದಿಬ್ಬದಲ್ಲಿ ಗಜಬೇಟೆ, ಗಜವನ್ನು ಪಳಗಿಸುತ್ತಿರುವ ಶಿಲ್ಪ ಪಟ್ಟಿಕೆಗಳು ದೊರೆಯುತ್ತದೆ.

ಹಂಪಿಯ ಮಹಾನವಮಿ ದಿಬ್ಬದಲ್ಲಿರುವ ಶಿಲ್ಪದಲ್ಲಿ ಆನೆಯನ್ನು ಪಳಗಿಸುತ್ತಿರುವ ಚಿತ್ರಣವಿದೆ (ಚಿತ್ರ–೧೩). ಆನೆಯ ಹಿಂದೆ ಒಬ್ಬ ವ್ಯಕ್ತಿ ತನ್ನ ಕೈಯಲ್ಲಿ ದೊಡ್ಡದಾದ ಅಂಕುಶ ವನ್ನು ಹಿಡಿದಿದ್ದು, ಆನೆಯನ್ನು ತನ್ನ ಹತೋಟಿಗೆ ತರುವ ಪ್ರಯತ್ನ ಮಾಡುತ್ತಿದ್ದಾನೆ. ಈತ ಹಣೆಗಂಟನ್ನು ಹಾಕಿದ್ದು, ಅರ್ಧೋರುಕವನ್ನು ಮೊಣಕಾಲಿನವರೆಗೆ ಕಚ್ಚೆಹಾಕಿ ಧರಿಸಿದ್ದಾನೆ. ದೇಹದ ಮೇಲ್ಭಾಗ ಬೆತ್ತಲೆಯಿದೆ. ಕರ್ಣಕುಂಡಲ ಮತ್ತು ಕಂಠೀಹಾರ ಬಿಟ್ಟು ಉಳಿದ ಆಭರಣಗಳು ಅಸ್ಪಷ್ಟವಾಗಿವೆ. ಆನೆಗೆ ಗೆಜ್ಜೆಸರ ಹಾಕಿದ್ದು, ಅದರ ಬೆನ್ನು, ಕುಂಭಸ್ಥಳಗಳಿಗೆ ಹಗ್ಗವನ್ನು ಹಾಕಿ ಬಿಗಿಯಾಗಿ ಗಂಟು ಹಾಕಿರುವುದು ಗಮನಿಸಬಹುದು. ಇದು ಆನೆಯನ್ನು ಪಳಗಿಸುವ ಚಿತ್ರಣವನ್ನು ನೀಡುತ್ತದೆ.

ಜಿಂಕೆ ಬೇಟೆ

ಹಂಪಿಯ ಮಹಾನವಮಿದಿಬ್ಬ, ಹಜಾರರಾಮಚಂದ್ರ ದೇವಾಲಯ, ವಿಠಲ ದೇವಾಲಯಗಳ ಶಿಲ್ಪಪಟ್ಟಿಕೆಗಳಲ್ಲಿ ಜಿಂಕೆ ಬೇಟೆಯ ಚಿತ್ರಣ ದೊರೆಯುತ್ತದೆ. ಈ ಶಿಲ್ಪಗಳಿರುವ ಬೇಟೆಗಾರರು ಅರ್ಧೋರುಕವನ್ನು ಮೊಣಕಾಲಿನವರೆಗೂ ಧರಿಸಿದ್ದಾರೆ. ಧೋತಿಯ ಮೇಲೆ ಉತ್ತರೀಯವನ್ನು ಬಿಗಿದು ಕಟ್ಟಿರುತ್ತಾರೆ ಮತ್ತು ಹಣೆಗಂಟನ್ನು ಕಟ್ಟಿರುತ್ತಾರೆ. ಕಾಲ್ಗಡಗ ಮತ್ತು ಕುಂಡಲಗಳನ್ನು ಮಾತ್ರ ಧರಿಸಿದ್ದಾರೆ.

ಈ ಮೇಲೆ ತಿಳಿಸಿದ ಸ್ಮಾರಕಗಳಲ್ಲಿ ಚಂಚುಲಕ್ಷ್ಮಿ ಶಿಲ್ಪದಲ್ಲಿ ಬೇಟೆಗಾರ ಉದ್ದನೆಯ ಬಿಲ್ಲನ್ನು ಹಿಡಿದು ನಿಂತಿದ್ದು ಅವನ ಕಾಲಿಗೆ ಸಿಕ್ಕಿರುವ ಮುಳ್ಳನ್ನು ಸ್ತ್ರೀಯೊಬ್ಬಳು ತೆಗೆಯುತ್ತಿರುವಂತೆ ಇದೆ (ಚಿತ್ರ–೧೪). ವಿಠಲ ದೇವಾಲಯದ ಚಂಚುಲಕ್ಷ್ಮಿ ಶಿಲ್ಪದಲ್ಲಿರುವ ಇಬ್ಬರೂ ಕಾಡಿನಲ್ಲಿ ದೊರೆಯುವ ಪರ್ಣಗಳಿಂದ ತಮ್ಮ ತಲೆ ಹಾಗೂ ಕಟಿಭಾಗವನ್ನು ಅಲಂಕರಿಸಿಕೊಂಡಿರುವುದು ವಿಶೇಷವಾಗಿದೆ.

ಈ ಚಂಚುಲಕ್ಷ್ಮಿ ಶಿಲ್ಪಗಳನ್ನು ಬೇಟೆಗಾರ ಶಿಲ್ಪಗಳೆಂದೇ ಗುರುತಿಸಿದ್ದು, ಅವರು ಧರಿಸಿರುವ ವಸ್ತ್ರಗಳು ಪರ್ಣಗಳಿಂದ ಕೂಡಿವೆ. ಈ ಪರ್ಣಗಳಿಂದ ಕೂಡಿದ ವಸ್ತ್ರದಲ್ಲಿಯೂ ವಿಭಿನ್ನತೆ ಇದೆ. ಕೆಲ ಶಿಲ್ಪಗಳಲ್ಲಿ ಕಟಿಯ ಮುಂಭಾಗದಲ್ಲಿ ಮೂರು ಪರ್ಣಗಳಿಂದ ಕೂಡಿದ್ದ ವಸ್ತ್ರವನ್ನು ಧರಿಸಿದ್ದಾರೆ. ಇನ್ನು ಕೆಲ ಶಿಲ್ಪಗಳಲ್ಲಿ ಐದರಿಂದ ಆರು ಪರ್ಣಗಳಿಂದ ಕೂಡಿಸಿದ ವಸ್ತ್ರವನ್ನು ಧರಿಸಿರುವುದು ಕಂಡು ಬರುತ್ತದೆ. ಹಾಗಾಗಿ ವಿಭಿನ್ನ ಶೈಲಿಯ ಪರ್ಣಗಳನ್ನು ವಸ್ತ್ರಗಳಾಗಿ ಧರಿಸಿದ್ದರು. ಪರ್ಣಗಳ ಸಂಖ್ಯೆಯಲ್ಲಿಯೂ ಏಕತೆಯನ್ನು ಕಾಣಲು ಸಾಧ್ಯವಿಲ್ಲ. ಬೇಟೆಗಾರರು ಸ್ಥಳೀಯವಾಗಿ ಲಭ್ಯ ವಿದ್ದ ಪರ್ಣಗಳನ್ನು ಬಳಸಿ, ಮಿತವಾದ ವಸ್ತ್ರ ಮತ್ತು ಆಭರಣಗಳನ್ನು ಧರಿಸುತ್ತಿದ್ದರು.

೩.೨.೫. ಕ್ರೀಡೆ ಮತ್ತು ವಿನೋದಾವಳಿ

ಮಲ್ಲಯುದ್ಧನಿರತರು

ಮಾನವನು ತನ್ನ ಬಿಡುವಿನ ವೇಳೆಯನ್ನು ಕ್ರೀಡೆ ಮತ್ತು ವಿನೋದಾವಳಿಗಳಲ್ಲಿ ಕಳೆಯುತ್ತಾನೆ. ಕ್ರೀಡೆಯನ್ನು ಸಹ ಒಂದು ವೃತ್ತಿಯಾಗಿ ಅನುಸರಿಸಿರುವುದು ಪ್ರಾಚೀನ ಕಾಲದಿಂದಲೂ ನಮಗೆ ತಿಳಿದಿರುವ ಅಂಶ. ಕ್ರೀಡಾಸಕ್ತರು ತಮ್ಮ ದೈಹಿಕ ಕಸರತ್ತಿನ ಮೂಲಕ ಒಬ್ಬ ಉತ್ತಮ ಪಟುವಾಗಿ ಮುಂದೆ ಬರಲು ಕಾರಣ ಅದನ್ನು ಒಂದು ವೃತ್ತಿಯಾಗಿ ಸ್ವೀಕರಿಸಿದಾಗ ಮಾತ್ರ. ಹಲವಾರು ಕ್ರೀಡೆಗಳಲ್ಲಿ ಮಲ್ಲಯುದ್ಧ ಸಹ ಒಂದಾಗಿದೆ. ಇದು ಇಬ್ಬರು ವ್ಯಕ್ತಿಗಳು ದೈಹಿಕವಾಗಿ ಪೈಪೋಟಿ ಬಿದ್ದು ಒಬ್ಬರನ್ನೊಬ್ಬರು ಮಣಿಸುವ ಕ್ರೀಡೆ. ಕ್ರೀಡೆಗಳನ್ನು ಹಬ್ಬ-ಹರಿದಿನ, ಜಾತ್ರೆ-ಉತ್ಸವಗಳಲ್ಲಿ ಮನರಂಜನೆಗಾಗಿ ವ್ಯವಸ್ಥೆಗೊಳಿಸುವುದು ಸಾಮಾನ್ಯ. ಇಂತಹ ಕ್ರೀಡೆಗಳು ಅಂದು ರಾಜಾಶ್ರಯವನ್ನು ಸಹ ಪಡೆದಿದ್ದವು. ಮಲ್ಲ ಯುದ್ಧಕ್ಕೆ ಸಂಬಂಧಿಸಿದಂತೆ ಸಾಹಿತ್ಯಾಕರಗಳಲ್ಲಿ ಹಲವು ಉಲ್ಲೇಖಗಳು ಲಭಿಸುತ್ತವೆ. ಅದರಂತೆ ಜನ್ನನ ಅಜಿತನಾಥ ಪುರಾಣದಲ್ಲಿ ಮಲ್ಲರನ್ನು "ಜಟ್ಟಿಗಳ, ಗೋವಲರು ಮತ್ತು ಜಗಜಟ್ಟಿಗಳು" ಎಂದು ಉಲ್ಲೇಖಿಸಿದೆ.[೮೮] ಮಲ್ಲರನ್ನು ಜಟ್ಟಿಗಳು ಜಗಜಟ್ಟಿಗಳು, ಪೈಲ್ವಾನರು, ಕುಸ್ತಿಪಟುಗಳು ಇತ್ಯಾದಿ ಹೆಸರುಗಳಿಂದ ಕರೆಯುತ್ತಿದ್ದರು. ವಿಜಯನಗರ ಕಾಲದಲ್ಲಿ ಕೆಲ ರಾಜರು ಸ್ವತಃ ತಾವೇ ಕುಸ್ತಿಪಟುಗಳಾಗಿ ಕಸರತ್ತು ಮಾಡುವುದರೊಂದಿಗೆ ಇತರ ಜಟ್ಟಿಗಳನ್ನು ಪೋಷಿಸಿ ರಾಜಾಶ್ರಯ ನೀಡಿದ್ದರು.

ಕೃಷ್ಣದೇವರಾಯ ಜಟ್ಟಿಗಳೊಂದಿಗೆ ನಿತ್ಯವೂ ಕುಸ್ತಿ ಮಾಡುತ್ತಿದ್ದ ಎಂಬುದನ್ನು ಪಾಯೇಸ್ ದಾಖಲಿಸಿದ್ದಾನೆ. ಪಾಯೇಸ್ ವಿವರಿಸುವಂತೆ, "ಕೃಷ್ಣದೇವರಾಯ ನಿತ್ಯವೂ ಬೆಳಕು ಹರಿಯುವ ಮುನ್ನ ಒಂದಿಷ್ಟು ಎಳ್ಳೆಣ್ಣೆಯನ್ನು ಕುಡಿದು ಮೈಗೂ ತಿಕ್ಕಿಕೊಳ್ಳುತ್ತಾನೆ. ಬಟ್ಟೆ ಬರೆಗಳನ್ನು ತೆಗೆದು ಬರೀ ಚಡ್ಡಿ ಹಾಕಿಕೊಂಡು, ಬಹಳ ತೂಕದ ಮಣ್ಣಿನ ಗುಂಡುಗಳನ್ನು ಕೈಯಲ್ಲಿ ಎತ್ತಿ ಆಡಿಸಿ ಕಸರತ್ತು ಮಾಡುತ್ತಾನೆ. ಕತ್ತಿವರಸೆ ಮಾಡುತ್ತಾನೆ. ತನ್ನ ಜಟ್ಟಿಗಳಲ್ಲಿ ಒಬ್ಬನೊಡನೆ ಕುಸ್ತಿ ಮಾಡುತ್ತಾನೆ".[೮೯] ಈ ವಿವರಗಳಿಂದ ರಾಜ ದಿನನಿತ್ಯ ಜಟ್ಟಿಗಳೊಂದಿಗೆ ಕಸರತ್ತು ಮಾಡುವುದು ಹಾಗೂ ಆ ಸಮಯದಲ್ಲಿ ಅವನು ಹಾಕಿದ್ದ ವಸ್ತ್ರವು ತಿಳಿಯುತ್ತದೆ.

ಪಾಯೇಸ್ ಮುಂದುವರೆಸಿ, ಕೃಷ್ಣದೇವರಾಯನ ಕಾಲದಲ್ಲಿ ಜಟ್ಟಿಗಳಿಗೆ ಎಂತಹ ಗೌರವ

ಸ್ಥಾನವಿತ್ತು ಎಂಬುದನ್ನು ವಿವರಿಸಿದ್ದಾನೆ. "ರಾಜನು ಅರಮನೆಗೆ ಬಂದು ಸಿಂಹಾಸನವನ್ನು ಅಲಂಕರಿಸುತ್ತಾನೆ, ಆಗ ಎಲ್ಲರೂ ಬಗ್ಗಿ ನಮಸ್ಕರಿಸುತ್ತಾರೆ. ಜಟ್ಟಿಗಳು ಮಾತ್ರ ನೆಲದ ಮೇಲೆ ಕುಳಿತುಕೊಳ್ಳುತ್ತಾರೆ. ಇವರು ವಿನಃ ಬೇರೆ ಯಾರೂ ಕುಳಿತುಕೊಳ್ಳುವಂತಿಲ್ಲ. ಈ ಜಟ್ಟಿಗಳು, ದೇವದಾಸಿಯರು ರಾಜನ ಸಮ್ಮುಖದಲ್ಲಿ ವೀಳೆಯ ಅಗಿಯಬಹುದು. ಇವರನ್ನು ಬಿಟ್ಟರೆ ಬೇರೆಯವರು ವೀಳೆಯ ಅಗಿಯುವಂತಿಲ್ಲ"[೧೦೦] ಎಂಬುದಾಗಿ ತಿಳಿಸುತ್ತಾನೆ. ಜಟ್ಟಿಗಳಿಗೆ ರಾಜರು ಉನ್ನತ ಸ್ಥಾನವನ್ನು ನೀಡಿದ್ದರು ಎಂಬುದು ಇದರಿಂದ ಅರ್ಥವಾಗುತ್ತದೆ.

ಶ್ರೀಕೃಷ್ಣದೇವರಾಯನ ದಿನಚರಿಯಲ್ಲಿ, "ಸೀಮೆಯಪ್ಪಂಥ ಜಟ್ಟಿಗರು ಮಾಡುವ ಸಾಮಿನ ಗರಡಿಗಳ ನೋಡಿರುವೆವು"[೧೦೧] ಎಂಬುದಾಗಿ ಉಲ್ಲೇಖಿಸುತ್ತದೆ. ಇದಕ್ಕೆ ಪೂರಕವಾಗಿ ರಾಮನಾಥ ಚರಿತದಲ್ಲಿಯೂ ಗರಡಿಮನೆಗಳು ಮತ್ತು ತರಬೇತಿ ನೀಡುವ ಕ್ರಮವನ್ನು ಹೇಳಿದೆ.

ಮಲ್ಲಯುದ್ಧವನ್ನು ಪುರುಷರಷ್ಟೇ ಅಲ್ಲದೇ ಸ್ತ್ರೀಯರೂ ಮಾಡುತ್ತಿದ್ದರು. ಆ ಕುರಿತು ಪಾಯೇಸ್ ಹೀಗೆ ವಿವರಿಸುತ್ತಾನೆ. ಅವನು ವಿವರಿಸುವಂತೆ, "ರಾಣಿಯರ ಅಂತಃಪುರದಲ್ಲಿ ಹನ್ನೆರಡು ಸಾವಿರ ಸ್ತ್ರೀಯರಿದ್ದಾರೆ. ಅವರೆಲ್ಲ ವಿವಿಧ ಕೆಲಸಗಳನ್ನು ಅಲ್ಲಿ ಮಾಡುತ್ತಾರೆ. ಅವರಲ್ಲಿ ಮಲ್ಲಯುದ್ಧ ಮಾಡುವ ಸ್ತ್ರೀಯರು ಕೆಲವರಿದ್ದಾರೆ"[೧೦೨] ಎಂಬುದಾಗಿ ದಾಖಲಿಸಿದ್ದಾನೆ.

ಶ್ರೀಕೃಷ್ಣದೇವರಾಯನ ಆಮುಕ್ತಮಾಲ್ಯದಲ್ಲಿ ಮಲ್ಲಯುದ್ಧ ಕುರಿತು ಹೀಗೆ ತಿಳಿಸುತ್ತದೆ, "ವಿಜಯನಗರ ಕಾಲದಲ್ಲಿ ಜನರಿಗೆ ಮಲ್ಲಯುದ್ಧಗಳಲ್ಲಿ, ಕುಸ್ತಿಗಳಲ್ಲಿ ಹೆಚ್ಚಾಗಿ ಆಸಕ್ತಿ ಇರುತ್ತಿದ್ದವು"[೧೦೩] ಮುಂದುವರೆಸಿ, "ನವರಾತ್ರಿಯಲ್ಲಿ ವೇಶ್ಯೆಯರ ಕುಸ್ತಿ ಸಹ ನಡೆಯುತ್ತಿದ್ದವು"[೧೦೪] ಎಂಬುದಾಗಿ ವಿವರಿಸುತ್ತದೆ.

ವಿಜಯನಗರ ಕಾಲದಲ್ಲಿ ಮಹಿಳಾ ಕುಸ್ತಿ ಪಟ್ಟುಗಳು ಇದ್ದರು ಎಂಬುದಕ್ಕೆ ಮಹಾ ನವಮಿದಿಬ್ಬದಲ್ಲಿರುವ ಒಂದು ಶಿಲ್ಪ ಸಾಕ್ಷಿಯಾಗಿದೆ. ಅಲ್ಲದೇ ಶಿವಮೊಗ್ಗ ಜಿಲ್ಲೆಯ ಶಿಕಾರಿಪುರದ ಕ್ರಿ.ಶ. ೧೪೪೬ರ ಶಾಸನವೊಂದು ಕುಸ್ತಿಕಾಳಗಕ್ಕೆ ಮತ್ತೊಂದು ಆಧಾರವನ್ನು ಒದಗಿಸುತ್ತದೆ. ಇಲ್ಲಿಯ ಶಾಸನದಲ್ಲಿ ನಾಗನಗೌಡನ ಮಗ ಮಾದಿಗೌಡನು ಕುಸ್ತಿಯಾಡುತ್ತಿರುವಾಗ ಮರಣ ಹೊಂದಿ ಸ್ವರ್ಗ ಸೇರಿದನು. ಆತನ ಮಗಳು ಹರಿಯಕ್ಕ ತನ್ನ ತಂದೆಯನ್ನು ಕೊಂದ ಕುಸ್ತಿಪಟುವಿನೊಂದಿಗೆ ತಾನು ಕಾದು ಸ್ವರ್ಗ ಸೇರಿದಳು ಎಂಬ ಮಾಹಿತಿಯನ್ನು ನೀಡುವ ವೀರಗಲ್ಲಿನ ಶಾಸನವನ್ನು ಆಕೆಯ ಚಿಕ್ಕಪ್ಪ ಚೆನ್ನ ನಿಲ್ಲಿಸಿದ್ದಾನೆ. ವೀರಗಲ್ಲಿನ ಮೇಲಿನ ಭಾಗದಲ್ಲಿ ಒಬ್ಬ ಕುಸ್ತಿಪಟು ನಿಂತಿದ್ದಾನೆ. ಅವನ ಎದುರಿಗೆ ನಿಂತಿರುವ ಹರಿಯಕ್ಕ ಎಡಗೈಯಲ್ಲಿ ಅವರ ಜುಟ್ಟು ಹಿಡಿದಿದ್ದಾಳೆ. ಇದು ಹರಿಯಕ್ಕ ಒಬ್ಬ ಪ್ರಸಿದ್ಧ ಜಟ್ಟಿಯಾಗಿದ್ದಳು ಎಂದು ತಿಳಿಸುತ್ತದೆ.೧೦೫ ವಿಜಯನಗರ ಕಾಲದ ಮಹಿಳೆಯರು ಕುಸ್ತಿಯನ್ನು ತಿಳಿದಿದ್ದರು ಎಂಬ ಅಂಶವನ್ನು ಸಾಹಿತ್ಯಾಕರಗಳೊಂದಿಗೆ ಶಾಸನಗಳು ಬೆಂಬಲಿಸುತ್ತವೆ. ಮಲ್ಲಯುದ್ಧದಲ್ಲಿ ಸ್ತ್ರೀ ಪುರುಷರಿಬ್ಬರೂ ಸಮಾನರಾಗಿ ಆಸಕ್ತಿ ಹೊಂದಿದ್ದರು ಎಂಬುದನ್ನು ಈ ಮೇಲಿನ ದಾಖಲೆಗಳು ದೃಢಪಡಿಸುತ್ತವೆ.

ಕಂಠೀರವ ನರಸರಾಜ ವಿಜಯದ ಪದ್ಯವೊಂದರಲ್ಲಿ ಜಟ್ಟಿಗಳನ್ನು ಕುರಿತು ಹೀಗೆ ವರ್ಣಿಸಿದೆ:

ಅದರಂತೆ,

ಕರಕಮಲದೆ ವಜ್ರಮುಷ್ಠಿ ಮಸ್ತಕದೊಳು
ಮೆರೆವ ಕುಂಕಮರಜದಿಂದ
ಕೊರಳ ಪೂಮಾಲೆ ಕಸ್ತೂರಿಲೇಪನದ ಮಲ್ಲ
ರುರುವಣಿಸಿದ ರಾಹವಕೆ[೧೦೬]

ಈ ಪದ್ಯದಲ್ಲಿ ಜಟ್ಟಿಗಳು ಮಲ್ಲಯುದ್ಧದಲ್ಲಿ ಭಾಗವಹಿಸುವ ಸಮಯದಲ್ಲಿ ತಮ್ಮ ಹಣೆಯ ಮೇಲೆ ಕುಂಕುಮ ತಿಲಕವಿಟ್ಟು, ಕೊರಳೊಳಗೆ ಹೂಮಾಲೆ ಹಾಕಿಕೊಂಡು ಕಸ್ತೂರಿ ಲೇಪನವನ್ನು ಹಚ್ಚಿಕೊಂಡು ಕಾಳಗಕ್ಕೆ ಇಳಿಯುವರು ಎಂಬ ವಾಸ್ತವ ಚಿತ್ರಣವಿದೆ.

ಇದಕ್ಕೆ ಪೂರಕವಾಗಿ ಭರತೇಶ ವೈಭವದಲ್ಲಿ ಮಲ್ಲರ ವೇಷಭೂಷಣಗಳ, ಕುರಿತು ಹೀಗೆ ವರ್ಣಿಸಿದೆ.

ಚಲ್ಲಣ ಹೊನ್ನುಡ್ಡಿಯಾಣ ಮೇಲ್ಬಗುಹಿನ ಕುಲ್ಲಾಯಿ
ಕುಂಕಾಮತಿಲಕಾಗೆಲ್ಲದಿ ಪಿಡಿದ ತಾವಡಗೊಲ್ಲಳಿಂದ ಮಲ್ಲರೆದ್ದರು
ಸಾಧನೆಗೆ ಮುಗಿದುಟ್ಟಕಾಸೆ ಚಿಮ್ಮುರಿಬಿಟ್ಟ ಜಡೆ ಪಾದ
ಸಿರಿವಿಟ್ಟ ಸಾದಿನಬೊಟ್ಟು ಕರದಲಿ ಸಾಣಖಂಡೆಯವೊಪ್ಪೆ
ಕೆಲರು ಸಿಂಗರಿಸಿ ಸಾಧನೆಗೆದ್ದರವರು[೧೦೭]

ಈ ಪದ್ಯದಲ್ಲಿ ಮಲ್ಲಯುದ್ಧದಲ್ಲಿ ಭಾಗವಹಿಸುವ ಮೊದಲು ಚಲ್ಲಣ, ಕುಲಾಯಿ, ಚಿನ್ನದ ಉಡಿದಾರವನ್ನು, ಕುಂಕುಮ ತಿಲಕ ಮುಂತಾದವುಗಳಿಂದ ಅಲಂಕೃತಗೊಂಡಿದ್ದನ್ನು ತಿಳಿಸುತ್ತದೆ. ಅಲ್ಲದೇ ಮಲ್ಲಯುದ್ಧದಲ್ಲಿ ಗೆದ್ದ ನಂತರ ಅವರ ವೇಷಭೂಷಣಗಳನ್ನು, ವಿಜಯಿಯಾದ ಮಲ್ಲರಿಗೆ ಬಹುಮಾನವಾಗಿ ಕಾಸೆಯನ್ನು(ಧೋತ್ರ), ಸಾಧನೆಯ ತಿಲಕವನ್ನು ನೀಡಿ ಸಿಂಗರಿಸುತ್ತಿದ್ದರು ಎಂಬುದನ್ನು ತಿಳಿಸುತ್ತದೆ. ಒಟ್ಟಾರೆ ಭರತೇಶವೈಭವದ ಈ ಪದ್ಯದಿಂದ ಮಲ್ಲಯುದ್ಧ ಸಂದರ್ಭ ಮತ್ತು ಸಾಧನೆಗೈದ ಸಂದರ್ಭ, ಈ ಎರಡರ ನಡುವಿನ ವಸ್ತ್ರ ಮತ್ತು ಆಭರಣ ಅಲಂಕರಣೆಯ ವ್ಯತ್ಯಾಸಗಳನ್ನು ತಿಳಿಯುವಲ್ಲಿ ಸಹಾಯಕವಾಗಿದೆ.

ಮಹಾನವಮಿ ಉತ್ಸವದ ಸಂದರ್ಭದಲ್ಲಿ ಏರ್ಪಡಿಸಿದ್ದ ಕುಸ್ತಿಯಾಟದ ಕುರಿತು ನ್ಯೂನಿಜ್, "ಈ ಉತ್ಸವದಲ್ಲಿ ಒಂದು ಸಾವಿರ ಕುಸ್ತಿಯಾಳುಗಳನ್ನು ಹೊಂದಿರುವವರು. ಅವರು ರಾಜನ ಮುಂದೆ ಕುಸ್ತಿ ಆಡುತ್ತಾರೆ. ಆದರೆ ನಮ್ಮ ಶೈಲಿಯಲ್ಲಲ್ಲ. ಏಕೆಂದರೆ, ಅವರು ಹೊಡೆಯಲೋಸುಗ ತಮ್ಮ ಕೈಯಲ್ಲಿ ಚೂಪುತುದಿಯುಳ್ಳ ಚಿಕ್ಕ ಚಕ್ರಗಳಿಂದ ಒಬ್ಬರಿನ್ನೊಬ್ಬರನ್ನು ಹೊಡೆಯುತ್ತಾರೆ ಮತ್ತು ಘಾಸಿಗೊಳಿಸುತ್ತಾರೆ ಮತ್ತು ಎಲ್ಲಕ್ಕೂ ಹೆಚ್ಚು ಘಾಸಿಗೊಂಡವನು ರಾಜನ ಬಳಿ ಹೋಗಿ ರಾಜನು ಈ ಕುಸ್ತಿಯಾಳುಗಳಿಗೆ ಕೊಡುವಂತಹ ರೇಷ್ಮೆ ಬಟ್ಟೆಯ ರೂಪದಲ್ಲಿನ ಬಹುಮಾನವನ್ನು ಪಡೆಯುತ್ತಾನೆ. ಅವರ ಮೇಲೊಬ್ಬ ದಳವಾಯಿ ಇರುವನು ಮತ್ತು ಅವನು ರಾಜ್ಯದಲ್ಲಿ ಬೇರೆ ಯಾವ ಸೇವೆಯನ್ನು ಮಾಡುವುದಿಲ್ಲ".[೧೦೮]

ನ್ಯೂನಿಜ್‌ನ ವಿವರಣೆಯಿಂದ ವಿಜಯನಗರದಲ್ಲಿ ವೃತ್ತಿನಿರತ ಕುಸ್ತಿಪಟುಗಳಿದ್ದು, ಅವರು

ಉತ್ಸವ ಸಂದರ್ಭದಲ್ಲಿ ಕುಸ್ತಿ ಆಟ ಆಡುತ್ತಿದ್ದುದು ತಿಳಿಯುತ್ತದೆ. ಇಲ್ಲಿ ಸೋತ ವ್ಯಕ್ತಿಯನ್ನು ಸಹ ರಾಜ ರೇಷ್ಮೆಯ ವಸ್ತ್ರಗಳನ್ನು ಬಹುಮಾನವಾಗಿ ನೀಡಿ ಸತ್ಕರಿಸುತ್ತಿದ್ದ ಎಂಬುದು ಪ್ರಮುಖವಾಗಿ ಕಂಡುಬರುತ್ತದೆ.

ಬುಲಾತಿನೆ-ಸಲಾತೀನದಲ್ಲಿಯೂ ಕುಸ್ತಿ ಆಟದಲ್ಲಿ ಕುಸ್ತಿಪಟುಗಳು ಧರಿಸಿದ್ದ ವಸ್ತ್ರ ಮತ್ತು ಆಭರಣಗಳನ್ನು ತಿಳಿಸುತ್ತದೆ. ಅದರಲ್ಲಿ ತಿಳಿಸುವಂತೆ, "ಇರಾಣದಿಂದ ಹಿಂದೂಸ್ತಾನಕ್ಕೆ ಶ್ರೇಷ್ಠ ಕುಸ್ತಿಪಟು ವಾಗಿದ್ದ ಪೈಲ್ವಾನನು ಬಂದಿದ್ದನು. ಬೀದರದ ಬಾದಶಹನು, ಯೂಸುಫ್ ಬೇಗ್ ಎಂಬ ಕುಸ್ತಿಪಟುವನ್ನು ಇರಾಣದ ಪೈಲ್ವಾನನ್ನೊಂದಿಗೆ ಕುಸ್ತಿ ಆಡಲು ಆದೇಶಿದನು. ಕುಸ್ತಿಯ ದಿನಾಂಕ ನಿಗದಿಯಾಗಿತ್ತು. ಯೂಸುಫ್ ಬೇಗನು ತಮ್ಮ ಪೈಲ್ವಾನರ ರೀತಿಯಂತೆ ಪೈಲವಾನೀ ಚಡ್ಡಿಯನ್ನು ಧರಿಸಿದ್ದನು. ಟೊಂಕಪಟ್ಟಿಯನ್ನು ಗಟ್ಟಿಮುಟ್ಟಾಗಿ ಕಟ್ಟಿದ್ದನು. ಕಸ್ತೂರಿ, ಚಂದನ, ಬುಕ್ಕೆಗಳನ್ನು ಮೈಗೆಲ್ಲ ತೊಡೆದುಕೊಂಡಿದ್ದನು. 'ಶಾಲಜೋಡಿ' ಹಾರದಂಥಾದ್ದನ್ನು ಕೊರಳಲ್ಲಿ ಹಾಕಿಕೊಂಡಿದ್ದನು. ಇರಾಣದ ಪೈಲ್ವಾನನೂ ಕೂಡ ಇರಾಣೀ ಪೈಲವಾನರ ರೀತಿಯಂತೆ ನೂಲಿನ ಚಡ್ಡಿಯನ್ನು ಧರಿಸಿದ್ದನು. ಗಂಧ ಹಾಗೂ ಸುಗಂಧ ದ್ರವ್ಯಗಳನ್ನು ಶರೀರಕ್ಕೆ ಹಚ್ಚಿಕೊಂಡು ಪೈಲ್ವಾನನ ಧಿಮಾಕಿನಲ್ಲಿಯೇ ಬಂದನು. ಅಂತಿಮವಾಗಿ ಪಂದ್ಯದಲ್ಲಿ ಗೆದ್ದ ಯೂಸುಫ್ ಬೇಗನನ್ನೂ ಸುಲ್ತಾನ ಮಹಮದ್ ಬಾದಶಹನು ಮುಂದೆ ಮುಂದೆ ಕರೆದು ತನ್ನ ಮೈಮೇಲಿದ್ದ ಅಂಗವಸ್ತ್ರವನ್ನೇ ಬಹುಮಾನವಾಗಿ ಕೊಟ್ಟು ಆತನಿಗೆ ಅನೇಕ ಕಾಣಿಕೆಗಳನ್ನು ಬಹುಮಾನವಾಗಿ ಕೊಟ್ಟು ಸತ್ಕರಿಸಿದನು. ಸುತ್ತಲಿದ್ದ ಅಧಿಕಾರಿ-ವರ್ಗದವರು, ಖಾಸಗಿ ಜನರು, ಪ್ರತಿಯೊಬ್ಬರೂ ತಂತಮ್ಮ ಯೋಗ್ಯತೆಗನು ಸಾರವಾಗಿ ವಸ್ತ್ರಗಳನ್ನು, ಬಹುಮಾನಗಳನ್ನು, ಹಣವನ್ನು ಇತ್ಯಾದಿಗಳನ್ನು ಯೂಸುಫ್‌ನಿಗೆ ನೀಡಿದರು. ಯೂಸುಫ್‌ನ ಎದುರಿಗೆ ಆಕಾಶದೆತ್ತರದ ರಾಶಿಯೇ ಬಿದ್ದಿತು"[೧೮] ಎಂಬುದಾಗಿ ತಿಳಿಸುತ್ತದೆ. ಇದರಿಂದ ಉತ್ತಮ ಕುಸ್ತಿಪಟುವಿಗೆ ರಾಜನೊಂದಿಗೆ ಅಲ್ಲಿ ನೆರೆದಿದ್ದ ಜನಸಾಮಾನ್ಯರೂ ಬಹುಮಾನಗಳನ್ನು ನೀಡಿದ್ದನು ತಿಳಿಸುತ್ತದೆ.

ಪುರಂದರದಾಸರ ಕೀರ್ತನೆಯೊಂದರಲ್ಲಿ, "ಪಲ್ಲಕ್ಕಿ ಹೊರುವುದು ಹೊಟ್ಟೆಗಾಗಿ, ದೊಡ್ಡ ಮಲ್ಲರೊಡನಾಡುವುದು ಹೊಟ್ಟೆಗಾಗಿ" ಎಂಬ ಈ ಸಾಲುಗಳು ಜಟ್ಟಿ ಅಥವಾ ಮಲ್ಲರು ವೃತ್ತಿ ನಿರತರು ಎಂಬುದನ್ನು ಸ್ಪಷ್ಟಪಡಿಸುತ್ತದೆ.

ಜಟ್ಟಿಗರ ದೈಹಿಕ ಕಸರತ್ತು ಹೆಚ್ಚಾಗಿರುವ ಕಾರಣ ಕ್ರೀಡಾ ಸಂದರ್ಭದಲ್ಲಿ ಬಿಗಿಯಾದ ಚಡ್ಡಿಯನ್ನು ಬಿಟ್ಟು ಉಳಿದ ಯಾವುದೇ ವಸ್ತ್ರ ಮತ್ತು ಆಭರಣಗಳನ್ನು ಧರಿಸಿರುವುದಿಲ್ಲ. ಅದಕ್ಕೆ ಪುಷ್ಟೀಕರಿಸುವಂತೆ ಹಜಾರರಾಮ ದೇವಾಲಯ, ಮಹಾನವಮಿ ದಿಬ್ಬದಲ್ಲಿರುವ ಮಲ್ಲಯುದ್ಧ ನಿರತ ಶಿಲ್ಪಗಳು (ಚಿತ್ರ-೧೫) ಸಾಕ್ಷೀಕರಿಸುತ್ತವೆ. ಹೀಗೆ ವಿಜಯನಗರ ಕಾಲದ ಸ್ಮಾರಕಗಳಲ್ಲಿ ಹಲವಾರು ಮಲ್ಲಯುದ್ಧದಲ್ಲಿ ನಿರತರಾದವರ ಶಿಲ್ಪಗಳು ದೊರೆಯುತ್ತವೆ.

ಈ ಎಲ್ಲಾ ವಿವರಣೆಗಳಿಂದ ರಾಜ ಅಥವಾ ವೃತ್ತಿನಿರತ ಪೈಲ್ವಾನರು ಕುಸ್ತಿಯಾಡುವಾಗ ತೊಡೆಚಲ್ಲಣ ಮತ್ತು ಉಡಿದಾರವನ್ನು ಮಾತ್ರ ಬಳಸುತ್ತಿದ್ದರು ಹಾಗೂ ಗೆದ್ದ ಕುಸ್ತಿಪಟುವಿಗೆ ಬಹುಮಾನವಾಗಿ ಧೋತ್ರ, ಅಂಗವಸ್ತ್ರಗಳನ್ನು ನೀಡಿ ಸತ್ಕರಿಸುತ್ತಿದ್ದರು ಎಂಬುದು ಸ್ಪಷ್ಟ ಸಂಗತಿಯಾಗಿದೆ.

ಹಾಸ್ಯಗಾರರು

ಹಲವಾರು ವೃತ್ತಿಗಳಲ್ಲಿ ಹಾಸ್ಯವೂ ಒಂದು ವೃತ್ತಿಯಾಗಿದೆ. ಕನಕದಾಸರು ಹೇಳುವಂತೆ, 'ಉದರ ನಿಮಿತಂ ಬಹುಕೃತ ವೇಷಂ', ಎಂಬಂತೆ ಹಾಸ್ಯಗಾರನು ತನ್ನ ಬುದ್ಧಿವಂತಿಕೆಯಿಂದ ತಾನೂ ನಗುತ್ತ, ನೆರೆದಿರುವ ಜನರನ್ನು ನಗಿಸುತ್ತಿರುತ್ತಾನೆ. ಅದರ ಸಲುವಾಗಿ ಅವರು ವಿಭಿನ್ನ ವೇಷಭೂಷಣಗಳನ್ನು ಧರಿಸಿಕೊಂಡಿರುತ್ತಾರೆ. ದೇವರ ಉತ್ಸವಮೂರ್ತಿ ಮೆರವಣಿಗೆ, ರಾಜ ಪಲ್ಲಕ್ಕಿಯಲ್ಲಿ ಕುಳಿತು ಮೆರವಣಿಗೆ ಹೋಗುವ ಸಂದರ್ಭಗಳಲ್ಲಿ ರಾಜನ ಮುಂದೆ ಹಲವಾರು ವಾದ್ಯಗಾರರು, ರಾಜನ ಲಾಂಛನಗಳು, ನರ್ತಕಿಯರು ಮುಂತಾದ ವಂಧಿವಾಗದರ ಪರಿವಾರದೊಂದಿಗೆ ಹಾಸ್ಯಗಾರರು, ನಾನಾ ವಿಧಧ ಆಟಗಾರರು ತಮ್ಮ ಕಲೆಗಳನ್ನು ಪ್ರದರ್ಶನ ಮಾಡುತ್ತಾ ಸಾಗುತ್ತಿರುತ್ತಾರೆ. ಅವರಲ್ಲಿ ಹಾಸ್ಯಗಾರರು ಪ್ರಮುಖರು. ಬಾರ್ಬೋಸ ಈ ಕುರಿತು ಹೀಗೆ ದಾಖಲಿಸಿದ್ದಾನೆ, "ರಾಜನು ಮೆರವಣಿಗೆ ಹೋಗುವಾಗ, ರಾಜನ ಮುಂದೆ ಹಾಸ್ಯಗಾರರು ಹಾಗೂ ನಾನಾ ವಿಧಧ ಆಟಗಾರರು ಹೋಗುತ್ತಾರೆ. ಅವರ ಆಟಪಾಟಗಳನ್ನು ನೋಡಿ ರಾಜ ಸಂತೋಷಪಡುತ್ತಾನೆ. ಆಗಾಗ್ಗೆ ನಿಂತು ನೋಡಿ ತನಗೆ ಮೆಚ್ಚಿಗೆಯಾದವರನ್ನು ಹೊಗಳುತ್ತಾನೆ"[೧೧೦] ಎಂದಿದ್ದಾನೆ.

ಹಂಪಿ ಮತ್ತು ಲೇಪಾಕ್ಷಿ ಸ್ಮಾರಕ ಶಿಲ್ಪಗಳಲ್ಲಿ ಹಲವಾರು ಹಾಸ್ಯಗಾರರ ಉಬ್ಬುಶಿಲ್ಪ ಗಳನ್ನು ಕಾಣಬಹುದು. ಹಂಪಿಯ ವಿಠಲ ದೇವಾಲಯದಲ್ಲಿರುವ ಒಂದು ಉಬ್ಬು ಶಿಲ್ಪವು (ಚಿತ್ರ-೧೬) ಹಾಸ್ಯಗಾರನ ವೇಷಭೂಷಣವನ್ನು ತಿಳಿಯಲು ಸಹಾಯಕ. ಈ ಶಿಲ್ಪದಲ್ಲಿರುವ ವ್ಯಕ್ತಿಯು ತುರುಬನ್ನು ಕಟ್ಟಿದ್ದು, ತುರುಬಿಗೆ ಕಟ್ಟಿರುವ ದಾರ (ಟೇಪ್ ರೀತಿಯದು)ದ ತುದಿಯು ಎಡಭುಜದಿಂದ ಹಾದು ಬಲಭುಜದವರೆಗೆ ಬಂದಿದೆ. ಛನ್ನವೀರದ ರೀತಿಯಲ್ಲಿ ಮಣಿಸರ ಧರಿಸಿದ್ದಾನೆ.(ಮಾರ್ಕ್). ತೋಳು ಮತ್ತು ಮುಂಗೈಗೆ ದಪ್ಪ ಮಣಿಗಳ ಕಡಗಗಳನ್ನು ಧರಿಸಿದ್ದು, ಮುಂಗೈಯನ್ನು ಹಿಂದೆ ತಿರುಗಿಸಿದ್ದಾನೆ. ಹಾಗೆಯೇ ಎರಡು ಮೊಣಕಾಲಗಳನ್ನು ಸಂಧಿಸಿದ್ದಂತಿದ್ದು, ಪಾದಗಳನ್ನು ಸಹ ಹೊರಮುಖವಾಗಿ ವಿಭಿನ್ನ ರೀತಿಯಲ್ಲಿ ತಿರುಗಿಸಿದ್ದಾನೆ. ವಸ್ತ್ರದ ವಿಶೇಷತೆಯೆಂದರೆ ಉದ್ದ ಗೀರಿನ ನಿರಿಗೆಯಿಟ್ಟು ಹೊಲಿದ ಎರಡು ಹಂತಗಳಲ್ಲಿರುವ (ಫ್ರಾಕ್ ಮಾದರಿ) ತುಂಡುಡುಗೆಯನ್ನು ಕಟಿಯಿಂದ ತೊಡೆಗಳವರೆಗೆ ಧರಿಸಿದ್ದಾನೆ. ಅದೇ ದೇವಾಲಯದ ಮತ್ತೊಂದು ಶಿಲ್ಪದಲ್ಲಿನ (ಚಿತ್ರ-೧೭) ಹಾಸ್ಯಗಾರನು ಉದ್ದಗೀರಿನ ತೊಡೆಚಲ್ಲಣ ಧರಿಸಿದ್ದು, ಉತ್ತರೀಯವು ಕತ್ತಿನ ಹಿಂಭಾಗದಲ್ಲಿ ಬಳಸಿ ಭುಜಗಳ ಮುಂಭಾಗದಲ್ಲಿ ಇಳಿಬಿದ್ದಿದೆ. ಇವನು ಧರಿಸಿರುವ ಕುಲಾಯಿ ತುಂಬಾ ವಿಶೇಷತೆಯಿಂದ ಹಾಗೂ ವಿಭಿನ್ನತೆಯಿಂದ ಕೂಡಿದೆ. ಕುಲಾಯಿಯ ಮಧ್ಯಭಾಗದಲ್ಲಿ ದಾರದಿಂದ ಕಟ್ಟಿದ್ದು, ಅದರ ತುದಿಯಭಾಗ ಶಂಖುವಿನಂತೆ ತಿರುಗಿದ್ದು ಕೆಳಮುಖವಾಗಿ ಭಾಗಿದೆ. ಆಭರಣಗಳಿಗೆ ಸಂಬಂಧಿಸಿದಂತೆ ಕಂಠೀಹಾರ ಛನ್ನವೀರವನ್ನು ಇದರೊಂದಿಗೆ ಎರಡೆಳೆಯ ಮುತ್ತಿನ ತೋಳ್ಬಂಧಿ, ಎರಡೆಳೆಯ ಮುಂಗೈ ಕಡಗ ಹಾಗೂ ಒಂದೆಳೆಯ ಕಾಲ್ಗಡಗ ಧರಿಸಿದ್ದಾನೆ. ವಿಭಿನ್ನ ಶೈಲಿಯಲ್ಲಿ ನಿಂತಿದ್ದಾನೆ.

ಲೇಪಾಕ್ಷಿಯ ವೀರಭದ್ರ ದೇವಾಲಯದ ದ್ವಾರಬಂಧದ ಪಟ್ಟಿಕೆಯಲ್ಲಿರುವ ಹಾಸ್ಯಗಾರ

ಶಿಲ್ಪದಲ್ಲಿ ಚಲ್ಲಣಗಳನ್ನು ತೊಡೆಯವರೆಗೆ ಧರಿಸಿದ್ದು, ಅದರ ಮೇಲೆ ನಿರಿಗೆಗಳಿಂದ ಹೊಲಿದ ತುಂಡು ಲಂಗದ ರೀತಿಯ ಉಡುಪನ್ನು ಧರಿಸಿದ್ದಾನೆ. ಶ್ರೀ ಶೈಲ ಮಲ್ಲಿಕಾರ್ಜುನ ದೇವಾಲಯದಲ್ಲಿ ಅದೇ ರೀತಿಯ ತುಂಡು ಲಂಗದಂತಹ ವಸ್ತ್ರ ಧರಿಸಿದ್ದು, ಅದರ ಮೇಲೆ ಕಮರಬಂಧ (ನಡುಪಟ್ಟಿ) ಧರಿಸಿದ್ದಾನೆ.

ದೊಂಬರಾಟಗಾರರು

ದೊಂಬರಾಟವು ಜನಪದ ಆಟಗಳಲ್ಲಿ ಒಂದಾಗಿದೆ. ಇದು ಮನರಂಜನೆಗಾಗಿಯೇ ಹುಟ್ಟಿಕೊಂಡರೂ ಒಂದು ಪ್ರದರ್ಶನಾತ್ಮಕ ಆಟವಾಗಿ, ಅದು ಜೀವನೋಪಾಯ ವೃತ್ತಿಯಾಗಿದೆ. ದೊಂಬರು ಮೂಲತಃ ಅಲೆಮಾರಿ ಸಮುದಾಯದವರಾಗಿದ್ದು, ದೈಹಿಕ ಕಸರತ್ತಿನ ಮೂಲಕ ತುಂಬಾ ಕಷ್ಟಕರ ಕಸರತ್ತು ಗಳನ್ನು ತೋರಿಸಿ ಜನರ ಮನ್ನಣೆಗೆ ಪಾತ್ರರಾಗುತ್ತಾರೆ. ಈ ಆಟಕ್ಕೆ ಪ್ರತ್ಯೇಕ ರಂಗಸಜ್ಜಿಕೆಯ ಅವಶ್ಯಕತೆ ಇರುವುದಿಲ್ಲ. ವಿಜಯನಗರ ಪೂರ್ವದ ಆನೆಗೊಂದಿ ಹಾಗೂ ಕಂಪಿಲರಾಯನ ಚರಿತ್ರೆಯಲ್ಲಿ ಇವರ ಪಾತ್ರ ಮಹತ್ವದ್ದಾಗಿ ಕಂಡುಬರುತ್ತದೆ.[೧೧೧] ಕಂಪಿಲರಾಯನ ಪತ್ನಿ ರತ್ನಾಜಿಯು ದೊಂಬರ ಸಮುದಾಯದವಳೆಂಬ ಪ್ರತೀತಿಯಿದೆ.[೧೧೨] ದೊಂಬರಾಟದಲ್ಲಿ ಸ್ತ್ರೀಯರು ಪ್ರಮುಖ ಪಾತ್ರ ವಹಿಸುತ್ತಾರೆ ಎಂಬುದನ್ನು ಕೃದಾಭಿರಾಮಂ ಕೃತಿಯು ಹೀಗೆ ವಿವರಣೆಯನ್ನು ನೀಡುತ್ತದೆ, "ಒಬ್ಬ ಯುವತಿಯು ಹಿಂದಕ್ಕೆ ಭಾಗಿ ಒಂದು ನೀರಿನ ತೊಟ್ಟಿಯ ಕೆಳಗೆ ಇಡಲಾಗಿದ್ದ ಮೂಗಿ ನಾಭರಣವನ್ನು ಎತ್ತಿಕೊಂಡ, ತಕ್ಷಣವೇ ಅದನ್ನು ಮೂಗಿಗೆ ಧರಿಸಿದಳು..."[೧೧೩]

ವಿಜಯನಗರ ಕಾಲದಲ್ಲಿ ದೊಂಬರಾಟವು ಪ್ರಮುಖವಾದ ಜನಪದ ಆಟವಾಗಿತ್ತು. ಸಾಮಾನ್ಯ ದಿನಗಳಲ್ಲಿ ಅಷ್ಟೇ ಅಲ್ಲದೇ ಹಬ್ಬಹರಿದಿನಗಳಲ್ಲಿ ದೊಂಬರು ತಮ್ಮ ಕಲೆಯ ಪ್ರದರ್ಶನವನ್ನು ನೀಡುತ್ತಿದ್ದರು. ಮಹಾನವಮಿ ಹಬ್ಬದ ಸಂದರ್ಭದಲ್ಲಿ ವಿವಿಧ ಕಲೆಗಳ ಪ್ರದರ್ಶನದೊಂದಿಗೆ ದೊಂಬರಾಟವು ಉತ್ತಮ ಮನರಂಜನೆಯನ್ನು ನೀಡುತ್ತಿದ್ದ ಕಲೆಯಾಗಿತ್ತು. ಈ ಕುರಿತು ಹಲವು ಶಿಲ್ಪಗಳನ್ನು ಮಹಾನವಮಿದಿಬ್ಬದಲ್ಲಿ ಕಾಣಬಹುದು. ಕ್ರಿ.ಶ. ೧೫೩೨ರಲ್ಲಿ ದೊಂಬರು ಒಂದು ಒಪ್ಪಂದಕ್ಕೆ ಬಂದರು, ಅದೆಂದರೆ ಇನ್ನು ಮುಂದೆ ಹಳ್ಳಿಗಳಲ್ಲಿ ತಮ್ಮ ಕಲೆ ಪ್ರದರ್ಶನ ಮಾಡುವುದಿಲ್ಲ ಎಂಬುದಾಗಿತ್ತು. ಅಲ್ಲದೇ ದೊಂಬರ ಮೇಲೆ ಸಹ ವಿಜಯನಗರ ಕಾಲದಲ್ಲಿ ತೆರಿಗೆ ವಿಧಿಸುತ್ತಿದ್ದರು. ಅದನ್ನು 'ದೊಂಬರಿಯ ಪೊನ್ನು'[೧೧೪] ಎನ್ನುತ್ತಿದ್ದರು. ಇದರಿಂದ ದೊಂಬರಾಟದವರ ಆರ್ಥಿಕ ಮಟ್ಟ ಹಾಗೂ ವಿಜಯನಗರ ಸಾಮ್ರಾಜ್ಯದಲ್ಲಿ ಯಾರು ತೆರಿಗೆಯಿಂದ ಮುಕ್ತರಾಗಿಲ್ಲ ಎಂಬುದು ತಿಳಿಯುತ್ತದೆ.

ದೊಂಬರಾಟಕ್ಕೆ ಸಂಬಂಧಿಸಿದಂತಹ ಹಲವಾರು ಶಿಲ್ಪಗಳು ವಿಜಯನಗರದ ದೇವಾಲಯಗಳ ಭಿತ್ತಿಗಳ ಮೇಲೆ ಮತ್ತು ಮಹಾನವಮಿ ದಿಬ್ಬದ ಶಿಲ್ಪಪಟ್ಟಿಕೆಗಳಲ್ಲಿ ಕಂಡು ಬರುತ್ತವೆ. ಹಂಪಿಯ ವಿಠಲ ದೇವಾಲಯದ ಕಲ್ಯಾಣ ಮಂಟಪದ ಶಿಲ್ಪವೊಂದರಲ್ಲಿರುವ ದೊಂಬರಾಟ ನಿರತರು ಎರಡೂ ಕಾಲನ್ನು ಮೇಲೆತ್ತಿ ಜೋಡಿಸಿ, ಎಡಗೈಯನ್ನು ನೆಲದ ಮೇಲೂರಿ, ಬಲಗೈಯಲ್ಲಿ ಸಣ್ಣ ವಾದ್ಯ ಹಿಡಿದು ಊದುತ್ತಿರುವಂತೆ ಇದೆ. ಆತನ ಜಟೆಯೂ ಹರಡಿದ್ದು, ಸಾದಾ ವಿನ್ಯಾಸದ

ಒಂದೆಳೆಯ ತೋಳ್ಬಂಧಿ ಮತ್ತು ಮುಂಗೈ ಕಡಗಗಳನ್ನು ಧರಿಸಿದ್ದಾನೆ.

ಹಂಪಿಯ ಮಹಾನವಮಿ ದಿಬ್ಬದ ಶಿಲ್ಪ ಪಟ್ಟಿಕೆಯಲ್ಲಿ(ಚಿತ್ರ-೧೮) ರಾಣಿಯ ಮುಂದೆ ದೊಂಬರಾಟದವಳು ತನ್ನ ತಲೆಯ ಮೇಲೆ ಹಿಂದಿನಿಂದ ಎರಡೂ ಕಾಲುಗಳನ್ನು ಜೋಡಿಸಿ ನಮಸ್ಕರಿಸುತ್ತಿದ್ದಾಳೆ. ತನ್ನ ಎರಡು ಕೈಗಳನ್ನು ನೆಲದ ಮೇಲೆ ಊರಿದ್ದಾಳೆ. ಇವಳು ಉದ್ದವಾದ ಪಾದಚಲ್ಲಣಗಳನ್ನು ಧರಿಸಿರುವುದು ಸ್ಪಷ್ಟವಾಗಿ ಕಾಣಬಹುದು. ಆಭರಣಗಳಲ್ಲಿ ಅಗಲವಾದ ವೃತ್ತಕುಂಡಲಗಳನ್ನು ಧರಿಸಿದ್ದಾಳೆ. ಹಂಪಿಯ ಮಾಧವ ದೇವಾಲಯದ ದೊಂಬರಾಟ ಶಿಲ್ಪದಲ್ಲಿ ತೊಡೆಚೆಲ್ಲಣಗಳನ್ನು ಧರಿಸಿರುವುದು ಕಂಡುಬರುತ್ತದೆ.

ಒಟ್ಟಾರೆ ದೊಂಬರಾಟ ನಿರತ ಸ್ತ್ರೀ ಮತ್ತು ಪುರುಷರು ತಮ್ಮ ಕಲೆಯ ಪ್ರದರ್ಶನಕ್ಕೆ ಅಡ್ಡಿಯಾಗದಂತೆ ಹಾಗೂ ಮಾನ ರಕ್ಷಣೆಗಾಗಿ ತೊಡೆಚಲ್ಲಣ ಮತ್ತು ಪಾದಚಲ್ಲಣಗಳನ್ನು ಧರಿಸುತ್ತಿದ್ದರು ಎಂಬುದು ಶಿಲ್ಪಗಳಿಂದ ಸ್ಪಷ್ಟವಾಗುತ್ತದೆ. ಅಲ್ಲದೆ ರಾಜ ಮನ್ನಣೆಯನ್ನು ಪಡೆದಿದ್ದ ಆಟ ಇದಾಗಿತ್ತು ಎಂಬುದು ತಿಳಿದುಬರುತ್ತದೆ.

ಕೋತಿ ಆಡಿಸುವವನು

ಜೀವನೋಪಾಯಕ್ಕೆ ಒಂದು ವೃತ್ತಿ ಅವಶ್ಯಕ. ಹಾಗಾಗಿ ಪ್ರಾಣಿಗಳನ್ನು ಪಳಗಿಸಿ ಅವುಗಳಿಗೆ ಹಲವು ವಿದ್ಯೆಯನ್ನು ಹೇಳಿಕೊಟ್ಟು ಆ ಮೂಲಕ ಜನಸಾಮಾನ್ಯರಿಗೆ ಮನರಂಜನೆ ಯನ್ನುಂಟು ಮಾಡಿ ತಾವೂ ಜೀವನ ಸಾಗಿಸುತ್ತಾರೆ. ಅವುಗಳಲ್ಲಿ ಕೋತಿ ಆಡಿಸುವುದು ಒಂದು ವೃತ್ತಿಯಾಗಿದೆ. ಅಥನೇಷಿಯಸ್ ನಿಕಿಟಿನ್ ಕೋತಿಗಳ ಕುರಿತು ಹೀಗೆ ವಿವರಿಸುತ್ತಾನೆ. "ಕೋತಿಗಳು ಕಾಡಿನಲ್ಲಿರುತ್ತವೆ. ಕೋತಿಗಳಿಗೂ ಮುಖಂಡನೊಬ್ಬನಿರುತ್ತಾನೆ. ಅವನನ್ನು ಸಶಸ್ತ್ರ ಕಾವಲುಗಾರರು ಹಿಂಬಾಲಿಸುತ್ತಾರೆ. ಯಾರಾದರೂ ಕೋತಿಯೊಂದನ್ನು ಹಿಡಿದರೆ ಆ ಮುಖಂಡನಿಗೆ ದೂರು ಕೊಡುತ್ತಾರೆ. ಕೋತಿಗಳು ತಮ್ಮದೇ ಆದ ಭಾಷೆಯನ್ನಾಡುತ್ತವೆ. ಇವಕ್ಕೆ ಅನೇಕ ಮಕ್ಕಳಾಗುತ್ತವೆ. ಹುಟ್ಟಿದ ಮಗು ತಂದೆಯಂತೆ ಅಥವಾ ತಾಯಿಯಂತೆ ಇಲ್ಲದಿದ್ದರೆ ಅದನ್ನು ದಾರಿಯಲ್ಲಿ ಬಿಸಾಡುತ್ತವೆ. ಹೀಗೆ ಬಿಸಾಡಿದ ಮಕ್ಕಳನ್ನು ಹಿಂದೂಗಳು ಎತ್ತಿಕೊಂಡು ಹೋಗಿ ಸಾಕಿ ಅವುಗಳಿಗೆ ನಾನಾ ತರಹ ಆಟಪಾಟಗಳನ್ನೋ ಅಥವಾ ಕುಣಿತವನ್ನೋ ಕಲಿಸುತ್ತಾರೆ".[೧೧೫] ಎಂದು ವಿವರಿಸುವನು. ಇದರಿಂದ ನಮಗೆ ಹಲವು ಅಂಶಗಳು ಸ್ಪಷ್ಟವಾಗುತ್ತವೆ. ಕೋತಿಗಳನ್ನು ಕಾಯಲು ಮುಖಂಡನೊಬ್ಬನಿರುತ್ತಾನೆ ಎಂದರೆ ಕೋತಿಗಳ ಸಮೂಹ ಎಷ್ಟು ದೊಡ್ಡದಾಗಿತ್ತು ಎಂಬುದು ಸ್ಪಷ್ಟವಾಗುತ್ತದೆ. ಅಲ್ಲದೇ ಕಾಡು ಪ್ರಾಣಿಗಳಿಗೆ ರಾಜರು ರಕ್ಷಣೆಯನ್ನು ಒದಗಿಸಿದ್ದರು ಎಂಬುದು ಮತ್ತೊಂದು ಗಮನಾರ್ಹ ಅಂಶ. ಇದರೊಂದಿಗೆ ಇನ್ನೊಂದು ಅಂಶ ಕೋತಿ ಆಡಿಸುವ ವೃತ್ತಿಯವರು ಇರುತ್ತಿದ್ದರು ಎಂಬುದು ತಿಳಿದುಬರುತ್ತದೆ. ಈ ಮೇಲಿನ ವಿವರಣೆಗಳಿಗೆ ಸಮರ್ಥನೆಯನ್ನು ಶಿಲ್ಪಗಳಲ್ಲಿ ಕಾಣಬಹುದಾಗಿದೆ.

ಹಂಪಿಯ ಹಜಾರರಾಮ ದೇವಾಲಯದ ಶಿಲ್ಪವೊಂದರಲ್ಲಿ(ಚಿತ್ರ-೧೯) ಕೋತಿ ಆಡಿಸುತ್ತಿರುವ ವ್ಯಕ್ತಿಯ ಚಿತ್ರಣವಿದೆ. ಈ ಶಿಲ್ಪದಲ್ಲಿ ಕೋತಿ ಆಡಿಸುತ್ತಿರುವ ವ್ಯಕ್ತಿ ತನ್ನ ಎಡ ಕೈಯಲ್ಲಿ ಕೋತಿಯನ್ನು ಕಟ್ಟಿರುವ ಹಗ್ಗವನ್ನು ಹಿಡಿದಿದ್ದಾನೆ. ಆತ ಉದ್ದ ತೋಳಿನ ಕಟಿಯವರೆಗಿನ

ಅಂಗಿಯನ್ನು ಮತ್ತು ಅರ್ಧೋರುಕ ಧೋತ್ರವನ್ನು, ಸಣ್ಣದಾದ ಟೋಪಿ ಯನ್ನು ಧರಿಸಿದ್ದಾನೆ. ಸಣ್ಣದಾದ ಕರ್ಣಕುಂಡಲಗಳು ಮತ್ತು ಅಗಲವಾದ ಪದಕವಿರುವ ಹಾರ ಧರಿಸಿದ್ದಾನೆ.

ಹಾವಾಡಿಗರು

ಆದಿಮ ಕಾಲದಿಂದಲೂ ಮಾನವ ಹಾಗೂ ಪ್ರಾಣಿಗಳ ನಡುವಿನ ಸಂಬಂಧ ಆತನ ಬದುಕಿನಷ್ಟೆ ಪುರಾತನವಾದುದು. ಹಲವಾರು ಪ್ರಾಣಿಗಳನ್ನು ಜೀವನೋಪಾಯಕ್ಕಾಗಿ ಪಳಗಿಸಿದ ಮಾನವ ವಿಷಜಂತುವಾದ ಹಾವನ್ನು ಹಿಡಿದು ಪಳಗಿಸಿ ಆಟವಾಡಿಸುತ್ತಾನೆ. ನೋಡುಗರಿಗೆ ಮನರಂಜನೆಯಾಗಿಯೂ, ತನಗೆ ವೃತ್ತಿಯಾಗಿಯೂ ಅನುಸರಿಸಿಕೊಂಡು ಬಂದಿದ್ದಾನೆ. ಮಹಾನವಮಿ ಹಬ್ಬದ ಸಂದರ್ಭದಲ್ಲಿ ಹಲವಾರು ಕಲೆಗಳ ಪ್ರದರ್ಶನಗಳನ್ನು ಏರ್ಪಡಿಸ ಲಾಗುತ್ತಿತ್ತು.[೧೧೬] ಹಾವಾಡಿಗನು ತೆಳುವಾದ 'ಕಸ್ತೂರಿ ತಿಲಕ'ವನ್ನು ತನ್ನ ಹಣೆಯ ಮೇಲೆ ಹೊಂದಿದ್ದನು. ತನ್ನ ದೇಹದಸುತ್ತ ಜನಿವಾರದಂತೆ ಒಂದು ದೊಡ್ಡ ಹಾವನ್ನು ಸುತ್ತಿಕೊಂಡಿದ್ದನು. ಅವನ ಕಾಲಂದಿಗೆಗಳು ಕಣಿಕಣಿ ಸದ್ದನ್ನು ಮಾಡುತ್ತಿದ್ದವು[೧೧೭] ಎಂಬುದಾಗಿ ತಿಳಿದುಬರುತ್ತದೆ.

ಹಂಪಿಯ ದೇವಾಲಯಗಳಲ್ಲಿ ಹಾವಾಡಿಗರ ಶಿಲ್ಪಗಳನ್ನು ಕಾಣಬಹುದಾಗಿದೆ. ಹಂಪಿಯ ಅಚ್ಯುತರಾಯ ದೇವಾಲಯದ ಸಾಲುಮಂಟಪದ ಒಂದು ಶಿಲ್ಪದಲ್ಲಿ ಹಾವಾಡಿಗ ಎಡಗೈಯಲ್ಲಿ ಹಾವನ್ನು ಹಿಡಿದಿದ್ದು, ತುಂಡು ಉಡುಗೆಯನ್ನು ಧರಿಸಿದ್ದಾನೆ. ಎರಡೆಳೆಯ ಸರ, ದಪ್ಪದಾದ ತೋಳ್ಬಂದಿ, ಮುಂಗೈ ಕಡಗ ಮತ್ತು ಕಾಲ್ಕಡಗ ಧರಿಸಿದ್ದಾನೆ. ಅದೇ ರೀತಿಯಲ್ಲಿ ಚಿತ್ರದುರ್ಗ ಜಿಲ್ಲೆಯ ಹಿರಿಯೂರಿನ ತೇರುಮಲ್ಲೇಶ್ವರ ದೇವಾಲಯದಲ್ಲಿರುವ ಶಿಲ್ಪವೊಂದರಲ್ಲಿ ಹಾವಾಡಿಗ ಪುಂಗಿಯನ್ನು ಊದುತ್ತಿದ್ದಾನೆ. ಪುಂಗಿಯ ನಾದಕ್ಕೆ ಹಾವು ಹೆಡೆಬಿಚ್ಚಿ ಆಡುತ್ತಿದೆ. ಹಾವಾಡಿಗ ಧರಿಸಿರುವ ವಸ್ತ್ರಗಳು ಅಸ್ಪಷ್ಟವಾಗಿವೆ. ಆಭರಣಗಳು ಮೇಲೆ ತಿಳಿಸಿರುವ ಹಾವಾಡಿಗ ಶಿಲ್ಪದಲ್ಲಿ ಇದ್ದಂತೆಯೇ ಇವೆ.

೩.೨.೬. ಮಾಲೆಗಾರರು ಅಥವಾ ಹೂ ಮಾರುವವರು

ಹೂವು ವಿವಿಧ ಪ್ರಸಾದನ ಅಥವಾ ಅಲಂಕಾರಿಕ ಸಾಮಗ್ರಿಗಳಲ್ಲಿ ಪ್ರಧಾನ ಪಾತ್ರವಹಿ ಸುತ್ತದೆ. ದೇವರಿಂದ ಹಿಡಿದು ಮಾನವ, ಪ್ರಾಣಿ, ಗೃಹ, ವೇದಿಕೆ ಮುಂತಾದ ಎಲ್ಲಾ ಪೂಜಾ ಕಾರ್ಯ ಮತ್ತು ಅಲಂಕರಣೆಗಳಲ್ಲಿ ಹೂ ಅತ್ಯಾವಶ್ಯಕ ಸಾಮಾಗ್ರಿಯಾಗಿ ಬಳಸಲ್ಪಡುತ್ತದೆ. ಹೂವನ್ನು ಕಿತ್ತು ಮಾಲೆಕಟ್ಟಿ ಮಾರುವವರು ಬೇರೆ ಬೇರೆಯಾಗಿರಬಹುದು ಅಥವಾ ಒಂದೇ ಅಗಿರುವ ಸಾಧ್ಯತೆಯೂ ಇರುತ್ತದೆ. ಹೂ ಮಾರುವವರನ್ನು ಮಾಲೆಗಾರರು ಎಂದು ಕರೆಯುವುದು ವಾಡಿಕೆ. ಇವರ ಕುರಿತು ಕ್ರಿ.ಶ. ೫೭೮ಲಕ್ಕೆ ಸೇರಿದ ಬಾದಾಮಿ ಶಾಸನವೊಂದರಲ್ಲಿ ಮಂಗಳೇಶನು ಗವಿ ದೇವಾಲಯಕ್ಕೆ (ಕಲ್ಮನೆ) ನೀಡಿದ, ದೇವರಿಗಾಗಿ ಹೂ ಕೊಯ್ಯುವ ಮಾಲೆಗಾರರಿಗೆ ಅರ್ಧವಿಸದಿ ತೆರಿಗೆಯನ್ನು ಬಿಟ್ಟ ಉಲ್ಲೇಖ ಸಿಗುತ್ತದೆ.[೧೧೮] ಸಗರನಾಡಿನ ಕುಳಗೇರಿ ಮುದನೂರು ಶಾಸನದಲ್ಲಿ "ಹೂ ಮಾರುವವರು ದೇವಾಲಯಕ್ಕಾಗಿ ಹೂವಿನ ತೋಟವನ್ನು ದಾನವಾಗಿ ಬಿಟ್ಟಿರುವ"[೧೧೯] ಉಲ್ಲೇಖವಿದೆ. ಹೂ ಮಾರುವ ವೃತ್ತಿಯು ಪ್ರಾಚೀನ ಕಾಲದಿಂದ ಮಾನ್ಯತೆ ಪಡೆದಿತ್ತು ಎಂಬುದಕ್ಕೆ

ಈ ಶಾಸನ ಪುಷ್ಠಿ ನೀಡುತ್ತದೆ. ಹೂ ಮಾರುವವರು ಆರ್ಥಿಕವಾಗಿ ಶ್ರೀಮಂತರಿದ್ದು, ಅವರದೇ ಆದ ಸಂಘಗಳನ್ನು ಕಟ್ಟಿಕೊಂಡಿ ದ್ದರು. ಮಾಲೆಗಾರನಲ್ವತ್ತೊಕ್ಕಲು ಎಂಬ ಹೂಗಾರರ ಸಂಘದಲ್ಲಿ ನಲವತ್ತು ಜನ ಸದಸ್ಯರು ಇದ್ದರು ಎಂಬುದನ್ನು ಸೂಚಿಸುತ್ತದೆ.[೧೨೦]

ಕನಕದಾಸರು ಮೋಹನತರಂಗಿಣಿಯಲ್ಲಿ, "ವಿಜಯನಗರದ ರಾಜಧಾನಿಯ ಸೋಮ ಸೂರಿಯ ವೀಧಿಯಲ್ಲಿ ಇತರ ಅಂಗಡಿಗಳೊಂದಿಗೆ ಪುಷ್ಪದಂಗಡಿಗಳು ಇದ್ದವು" ಎಂದು ಹೇಳಿದ್ದಾರೆ. ಅಲ್ಲದೇ ಆ ಅಂಗಡಿಗಳಲ್ಲಿ ಬಗೆ ಬಗೆಯ ಹೂಗಳನ್ನು ಮಾರುತ್ತಿದ್ದರು ಎಂಬುದನ್ನು ಉಲ್ಲೇಖಿಸಿ ಅಲ್ಲಿಯ ವಿವಿಧ ಹೂಗಳನ್ನು ಹೀಗೆ ಹೆಸರಿಸಿದ್ದಾರೆ.

ಸುರಗಿ ಸೇವಂತಿಗೆ ಕುಂದ ಮಂದಾರ ಪಾ
ದರಿ ಕಂಚಿ ಕಣಿಗಿಲೆ ದವನ
ಬಿರಿದ ಕೆಂಜಾಜಿಯೆಂಬುವ, ಪುಷ್ಪದಂಗಡಿ
ಪರುಠವಿಸಿರ್ದುದೇನೆಂಬೆ[೧೨೧]

ರಾಮನಾಥ ಚರಿತೆಯಲ್ಲಿ,

ಮೊಲ್ಲೆ ಮರುಗ ಸುರಹೊನ್ನೆ ಸಂಪಿಗೆ ಜಾದಿ
ಮಲ್ಲಿಗೆ ಮುಡಿವಾಳಗಳನು
ನಿಲ್ಲದೆ ಮಾಱುವ ಮಾಲೆಗಾರ್ತಿಯರಾಗ
ಗಳಲ್ಲಿ ಕಣ್ಗೆಸೆದರಾ ನೃಪನ[೧೨೨]

ಮೋಹನತರಂಗಿಣಿ ಮತ್ತು ರಾಮನಾಥ ಚರಿತೆಗಳಿಂದ ಅಂದು ಬಳಕೆಯಲ್ಲಿದ್ದ ವಿವಿಧ ಹೂಗಳ ಹೆಸರುಗಳನ್ನು ಹಾಗೂ ಹೂವಿನ ಅಂಗಡಿಗಳನ್ನು ತಿಳಿಯಲು ಸಹಾಯಕವಾಗಿದೆ.

ಹೂ ಮಾರುವವರಲ್ಲಿ ಪುರುಷರಷ್ಟೇ ಸಮಾನ ಕೆಲಸವನ್ನು ಸ್ತ್ರೀಯರು ಮಾಡುತ್ತಾರೆ. ಹೂ ಮಾರುವ ಸ್ತ್ರೀಯರನ್ನು ಹೂವಾಡಗಿತ್ತಿಯರು, ಪುಷ್ಪವಾವಿಕೆಯರು,[೧೨೩] ಮಾಲೆಗಾರ್ತಿಯರು[೧೨೪] ಎಂಬುದಾಗಿ ಕರೆಯಲಾಗುತ್ತದೆ. ಕೃಷ್ಣದೇವರಾಯನ ಆಮುಕ್ತಮಾಲ್ಯದಲ್ಲಿ ಹೂವಾಡಗಿತ್ತಿಯರ ವೇಷಭೂಷಣವನ್ನು ಈ ರೀತಿ ವರ್ಣಿಸಿದೆ: "ಈ ಹೂವಿನ ಹುಡುಗಿಯರು ಕುಂಕುಮ ಬಣ್ಣದ ಥಳಥಳ ಹೊಳೆಯುವ ಅಂಚಿನ ಸೀರೆಗಳನ್ನು ಬೆರಳಿಗಿಟ್ಟು ದಂತದ ಉಂಗುರ ಚಂದ್ರನಂತೆ ಹೊಳೆಯಲು ಸುತ್ತಲೂ ಹರಡಿದ ಹೂಗಳ ನಕ್ಷತ್ರಗಳಂತೆ ಕಾಣಿಸುತ್ತ ಸಂಧ್ಯಾದೇವಿಯಂತೆ ತೋರುತ್ತಾರೆ. ತನ್ನ ಪಕ್ಕದವಳೊಂದಿಗೆ ವ್ಯಾಪಾರ ಮಾಡುತ್ತಿರುವ ಪುರುಷರ ಮಾತುಗಳನ್ನು ಕಿವಿಯ ಮೇಲೆ ಹಾಕಿಕೊಳ್ಳುತ್ತಾ ಬಿಗಿಯಾದ ತಮ್ಮ ರವಿಕೆಗಳ ಗಂಟನ್ನು ಇನ್ನಷ್ಟು ಬಿಗಿಗೊಳಿಸಿ ಅವರಲ್ಲಿ ಬಯಕೆ ಹುಟ್ಟುವಂತೆ ಮಾಡುತ್ತಾರೆ".[೧೨೫] ಈ ವರ್ಣನೆಯಿಂದ ಹೂವಾಡಗಿತ್ತಿಯರು ಗಂಟು ಕುಪ್ಪಸವನ್ನು ಧರಿಸುತ್ತಿದ್ದರು ಎಂಬುದು ಸ್ಪಷ್ಟ ವಾಗುತ್ತದೆ.

ವಿಜಯನಗರಕ್ಕೆ ಭೇಟಿ ನೀಡಿದ್ದ ವಿದೇಶಿ ಪ್ರವಾಸಿ ಅಬ್ದುರ್ ರಜಾಕ್‌ನು ಗುಲಾಬಿ ಹೂಗಳ ಕುರಿತು ಹೀಗೆ ವಿವರಿಸಿದ್ದಾನೆ: "ರಾಜನ ಅರಮನೆಯ ಹೆಬ್ಬಾಗಿಲು ಎದುರಿಗೆ ಅಂಗಡಿ ಬೀದಿಗಳು

ಇವೆ. ಅಲ್ಲಿ ವ್ಯಾಪಾರಿಗಳು ತಮ್ಮ ಅಂಗಡಿಗಳ ಮುಂದೆ ಎತ್ತರವಾದ ವೇದಿಕೆಗಳನ್ನು ರಚಿಸಿಕೊಂಡಿದ್ದು, ಗುಲಾಬಿ ಹೂಗಳನ್ನು ಮಾರಲಿಕ್ಕೆ ರಾಶಿ ಹಾಕಿಕೊಂಡಿ ರುವವರು. ಇಲ್ಲಿನ ಜನ ಗುಲಾಬಿ ಹೂವುಗಳನ್ನು ಬಿಟ್ಟು ಬದುಕಲಾರರು. ಹೊಟ್ಟೆಗೆ ಅನ್ನ ನೀರುಗಳೆಷ್ಟು ಅವಶ್ಯಕವೋ, ಅವಕ್ಕಿಂತ ಹೆಚ್ಚು ಅವಶ್ಯಕವು ಗುಲಾಬಿ ಹೂಗಳು"[೧೨೬] ಎಂದಿದ್ದಾನೆ. ವಿಜಯನಗರ ಕಾಲದ ಮುಖ್ಯ ಬೀದಿಗಳಲ್ಲಿ ಹೂವಿನ ವ್ಯಾಪಾರವನ್ನು ಪ್ರತ್ಯೇಕ ಅಂಗಡಿಗಳಲ್ಲಿ, ಬೇರೆ ಬೇರೆ ರೀತಿಯ ಹೂವುಗಳನ್ನು ಮಾರುತ್ತಿದ್ದರು ಎಂಬುದನ್ನು ಗಮನಿಸಿದಾಗ ಇಲ್ಲಿನ ಜನರಿಗೆ ಹೂವಿನ ಮೇಲೆ ಆಸಕ್ತಿ ಎಷ್ಟಿತ್ತು ಎಂಬುದು ಅರ್ಥವಾಗುತ್ತದೆ.

೩.೨.೭. ವ್ಯಾಪಾರಿಗಳು

ವ್ಯಾಪಾರ ಮತ್ತು ವ್ಯವಹಾರ ಮಾನವನ ಆರ್ಥಿಕ ಜೀವನದಲ್ಲಿ ಮಾನ್ಯತೆಯನ್ನು ಪಡೆದ ಅಂಶಗಳಾಗಿವೆ. ಈ ವ್ಯಾಪಾರವನ್ನು ಮಾಡುವ ವೃತ್ತಿಯವರನ್ನು ವ್ಯಾಪಾರಿಗಳು ಎಂದು ಕರೆಯುತ್ತೇವೆ. ಇವರು ಸರಕು ಮತ್ತು ಸರಂಜಾಮುಗಳನ್ನು ಉತ್ಪಾದನಾ ಸ್ಥಳದಿಂದ ತಂದು ಮಾರುವರು. ಪ್ರಾಚೀನ ಕಾಲದಿಂದಲೂ ಆರ್ಥಿಕ ಜೀವನದಲ್ಲಿ ವ್ಯಾಪಾರ ಒಂದು ಪ್ರಮುಖ ವೃತ್ತಿಯಾಗಿ ಬೆಳೆದುಬಂದಿದೆ. ಇದು ವಿಜಯನಗರ ಕಾಲದ ಹೊತ್ತಿಗೆ ದೊಡ್ಡ ಪ್ರಮಾಣದಲ್ಲಿ ಇದರ ಛಾಪನ್ನು ಪಸರಿಸಿದೆ. ವಿಜಯನಗರ ಕಾಲಕ್ಕೆ ಭೇಟಿ ನೀಡಿದಷ್ಟು ವಿದೇಶಿಯರು ಬೇರಾವ ಸಾಮ್ರಾಜ್ಯಕ್ಕೆ ಭೇಟಿ ನೀಡಿಲ್ಲ ಎಂಬುದನ್ನು ತಿಳಿದಿದ್ದೇವೆ. ಈ ವಿದೇಶಿಯರಲ್ಲಿ ಪ್ರವಾಸಿಗರು, ರಾಯಭಾರಿಗಳು ಅಲ್ಲದೇ ವ್ಯಾಪಾರಿ ವರ್ತಕರು ಇದ್ದ ರೆಂಬುದು ಗಮನಾರ್ಹ ಸಂಗತಿ. ಇದರಿಂದ ವಿಜಯನಗರ ಕಾಲದ ಆರ್ಥಿಕ ಪರಿಸ್ಥಿತಿಯಲ್ಲಿ ದೇಶೀಯ ಮತ್ತು ವಿದೇಶಿ ವ್ಯಾಪಾರದ ಪ್ರಾಮುಖ್ಯತೆ ಎಷ್ಟಿತ್ತು ಎಂಬುದು ಅರ್ಥವಾಗುತ್ತದೆ. ಹಾಗಾಗಿ ವ್ಯಾಪಾರಿಗಳ ಕುರಿತು ತಿಳಿಯಲು ಸಾಹಿತ್ಯಾಕರಗಳೊಂದಿಗೆ ಶಿಲ್ಪಗಳು ಸಹ ಪ್ರಮುಖ ಆಕರಗಳಾಗಿವೆ.

ದೇಶೀಯ ವ್ಯಾಪಾರ

ವಿಜಯನಗರ ಕಾಲದ ವ್ಯಾಪಾರಿಗಳನ್ನು ದೇಶೀಯ ಮತ್ತು ವಿದೇಶೀಯ ವ್ಯಾಪಾರಿ ವರ್ತಕರು ಎಂದು ವಿಭಾಗಿಸಿಕೊಳ್ಳಲಾಗಿದೆ. ಸಾಹಿತ್ಯಾಕರಗಳನ್ನು ನಮಗೆ ದೇಶೀಯ ವ್ಯಾಪಾರಿ ಅಂಗಡಿಗಳ ಕುರಿತು ಬಹಳಷ್ಟು ಉಲ್ಲೇಖಗಳು ಲಭ್ಯವಾಗುತ್ತವೆ. ಆದರೆ ಆ ವ್ಯಾಪಾರಿಗಳು ಧರಿಸುತ್ತಿದ್ದ ವಸ್ತ್ರ ಮತ್ತು ಆಭರಣಗಳ ಕುರಿತು ಮಾಹಿತಿಯು ಅಪೂರ್ಣವಾಗಿವೆ. ಹಾಗಾಗಿ ವಿಜಯನಗರ ಕಾಲದ ದೇಶೀಯ ವ್ಯಾಪಾರಕ್ಕೆ ಸಂಬಂಧಿಸಿದಂತೆ ಲಭ್ಯವಿರುವ ಆಕರಗಳ ಹಿನ್ನೆಲೆಯಲ್ಲಿ ಯಾವ ಸರಕುಗಳ ವ್ಯಾಪಾರ ನಡೆಯುತ್ತಿತ್ತು ಎಂಬುದನ್ನು ತಿಳಿಯಲು ಪ್ರಯತ್ನಿಸಲಾಗಿದೆ.

ಮೋಹನತರಂಗಿಣಿಯಲ್ಲಿ ಈ ರೀತಿ ವಿವರಿಸಿದೆ,

ಸೋಮಸೂರಿಯವೀಧಿ ವೀಧಿಯಿಕ್ಕೆಲದಲ್ಲಿ
ಹೇಮನಿರ್ಮಿತ ಸೌಧದೋಳಿ
ರಮಣೀಯತೆವೆತ್ತ ಕಳಸದಂಗಡಿಯಿರ್ದು
ವಾ ಮಾಹಾ ದ್ವಾರಕಾಪುರದೆ[೧೨೭]

ಇನ್ನೊಂದು ಪದ್ಯದಲ್ಲಿ ಹೀಗೆ ಹೇಳಿದೆ,

ಕಂಚುಗಾರರು ಕೈದುಗಾರರು ಹೊಳೆವ ಹೊಂ
ಮಂಚಗಾರರು ಶಿಲ್ಪಗರು
ಸಂಚುಗಾರರು ಸದ್ವಿದ್ಯಾಧಿಕರಾದ
ಪಂಚಾಳರಿರ್ದರಿಕ್ಕೆಲದಿ[೧೮]

ಸನತ್ಕುಮಾರ ಚರಿತೆಯಲ್ಲಿ ವಿವಿಧ ಅಂಗಡಿ ವ್ಯಾಪಾರಿ ಮಳಿಗೆಗಳ ಕುರಿತು ಬಣ್ಣಿಸಿದೆ,

ಒರೆದು ಬಣ್ಣವ ತೂಗಿ ಬೆಲೆಗಳ
ನೊರದು ಮಿಸುನಿಯ ಘಟ್ಟಿಯೊಟ್ಟಲ
ಮೆರೆಯೊಳಿರುತಿಹ ಚಿನ್ನವರದರ ಹೊನ್ನಗುಪ್ಪಿಗಳ
ಸುರಿದುಕೊಂಡಿಹ ನಾಣ್ಯಗಾರರ
ತರತರದೊಳಿಹ ಕಂಚುಗಾರರ
ಬರೆವ ಚಿತ್ರಗರಂಗಡಿಗಳನು ನೋಡುತೆಯಿತಂದ[೧೯]

ಇನ್ನೊಂದು ಪದ್ಯದಲ್ಲಿ,

ಮುತ್ತು ಹವಳದ ಕುಚ್ಚು ವಜ್ರದ
ಮೊತ್ತ ನೀಲದ ಗುಪ್ಪೆ ಮಾಣಿಕ
ದಿತ್ತರದ ರಾಶಿಗಳ ಗೋಮೇಧಿಕದ ವೈಢೂರ್ಯ
ಉತ್ತಮದರತ್ನಗಳ ಪಸರದ
ಬಿತ್ತರದೊಳೆಸೆವಂಗಡಿಗಳನು
ಚಿತ್ತಜೋಪಮಭೂಪ ನೋಡುತ ನಡೆದನೊಲವಿಂದ[೨೦]

ವಿಜಯನಗರದ ರಸ್ತೆಗಳ ಇಕ್ಕೆಲಗಳಲ್ಲಿ ಮುತ್ತುರತ್ನ ಮುಂತಾದ ಆಭರಣಗಳ ವ್ಯಾಪಾರ ನಡೆಯುತ್ತಿತ್ತು ಎಂದು ವಿದೇಶಿಪ್ರವಾಸಿ ಅಬ್ದುರ್ ರಜಾಕ್‌ನ ವರದಿಯ ಉಲ್ಲೇಖಕ್ಕೆ ಕನಕದಾಸರ ಮೋಹನತರಂಗಿಣಿ ಮತ್ತು ತೆರಕಣಾಂಬಿಬೊಮ್ಮರಸ ಸನತ್ಕುಮಾರ ಚರಿತೆಯ ಈ ಪದ್ಯಗಳು ಪುಷ್ಠಿ ನೀಡುತ್ತವೆ. ಅಲ್ಲದೇ ಕಂಚುಗಾರರ, ನಾಣ್ಯಗಾರರ ಮತ್ತು ಬಟ್ಟೆಗಳಿಗೆ ಚಿತ್ರವನ್ನು ಒತ್ತುವಂತಹ ಪ್ರತ್ಯೇಕ ಅಂಗಡಿ ಮಳಿಗೆಗಳ ಕುರಿತು ವಿವರಣೆಯನ್ನು ನೀಡುತ್ತದೆ.

ಬಳೆ ವ್ಯಾಪಾರಿ ಅಂಗಡಿಗಳ ಕುರಿತು ಮೋಹನತರಂಗಿಣಿಯಲ್ಲಿ ಈ ರೀತಿಯಾಗಿ ಬಣ್ಣಿಸಿದೆ,

ಕಳೆವೆತ್ತ ವಾರನಾರಿಯರ ಕನ್ನಿಕೆಯರ
ಮೊಳೆಮೊಲೆಗಳ ನೋಡಿ ನಗುತ
ಎಳವೆರತಿಶಿಳ ಚಿಟುಕೊತ್ತಿ ಕೈದೊಡಿಸುವ
ಬಳೆಗಾರರಿರ್ದರಿಕ್ಕೆಲದಿ[೨೧]

ಜವಳಿ(ಬಟ್ಟೆ)ಮಳಿಗೆಗಳ ಕುರಿತು ಕಂಠೀರವನರಸರಾಜ ವಿಜಯದಲ್ಲಿ ಹೀಗೆ ವರ್ಣಿಸಿದೆ,

ಹಳದಿ ಪೊಪ್ಪಳಿ ಚಂದ್ರಗಾವಿ ಬೊಂಬೆಯ ಬಣ್ಣ
ಸುಲಿಪಲ್ಲು ಹೊನ್ನ ತಗಡಿನ
ಬೆಳುವಟ್ಟೆ ನಾನಾವರ್ಣದ ಜವಳಿಯ
ಮಳಿಗೆಗಳೆಸೆದುವರ್ತಿಯಲ್ಲಿ[೨೨]

ಹೀಗೆ ವಿವಿಧ ವರ್ಣದ ವಸ್ತ್ರದ ಪ್ರತ್ಯೇಕ ಮಳಿಗೆಗಳ ಕುರಿತು ವಿವರಿಸುತ್ತದೆ.

ಜವಳಿ ವ್ಯಾಪಾರಕ್ಕೆ ಸಂಬಂಧಿಸಿದಂತೆ ಪ್ರೌಢದೇವರಾಯನ ಕ್ರಿ.ಶ.೧೪೩೦ರ ಶಾಸನವು ಉಲ್ಲೇಖಿಸುತ್ತದೆ. ಅದರಂತೆ ಬಾರಕೂರು ಪಟ್ಟಣದ ಮೂಡುಗೇರಿ ಮತ್ತು ಚೌಳೀಕೇರಿ ವ್ಯಾಪಾರಿಗಳ ನಡುವೆ ವ್ಯವಹಾರದ ವಿಷಯವಾಗಿ ಘರ್ಷಣೆಯಾದಾಗ, ಉಳಿದ ಎಲ್ಲ ಸರಕು ಗಳನ್ನು ಎರಡೂ ಕೇರಿಯವರು ಸಮವಾಗಿ ವ್ಯಾಪಾರ ಮಾಡಬೇಕೆಂದು, ಮೂಡುಕೇರಿ ಯವರು ಮಾತ್ರ ನೂಲಿನ ಸೀರೆಯನ್ನು ಮಾರಾಟ ಮಾಡಬೇಕೆಂದು ಕಟ್ಟಳೆಯನ್ನು ವಿಧಿಸುತ್ತದೆ.[೧೩೩] ಹಾಗಾಗಿ ಬಟ್ಟೆ ವ್ಯಾಪಾರ ತುಂಬಾ ಪ್ರಮುಖ ವೃತ್ತಿಯಾಗಿತ್ತೆಂಬುದಕ್ಕೆ ಈ ಶಾಸನದಲ್ಲಿನ ವಿವರವು ಪುಷ್ಠಿ ನೀಡುತ್ತದೆ.

ಮೋಹನತರಂಗಿಣಿಯಲ್ಲಿ ಕುದುರೆ ವ್ಯಾಪಾರ ಮಾಡುವವರ ಕುರಿತು ಹೀಗೆ ಹೇಳಲಾಗಿದೆ,

ತೋಟ ಕಾಡಾರೆಂಬ ಕರ್ಬುಗರ್ದೆಗಳೆಡೆ
ಯಾಟದ ವ್ಯವಹಾರಿ ಜನರು
ಘೋಟಕ ರಥಹಸ್ತಿ ಪದಚರಾದಿಗಳ ಮೊ
ರೂಟದಂಗಡಿಗಳೊಪ್ಪಿದುವು[೧೩೪]

ವಿಜಯನಗರದ ಅರಸರು ಸೈನ್ಯಕ್ಕೆ ಪೋರ್ಚುಗೀಸ್ ಮುಂತಾದ ವಿದೇಶಗಳಿಂದ ಉತ್ತಮ ತಳಿಯ ಕುದುರೆಗಳನ್ನು ತರಿಸಿಕೊಳ್ಳುತ್ತಿದ್ದರು. ಹಾಗಾಗಿ ವ್ಯಾಪಾರದಲ್ಲಿ ಕುದುರೆ ವ್ಯಾಪಾರ ಪ್ರಮುಖ ಪಾತ್ರ ವಹಿಸಿತ್ತು ಎಂಬುದಕ್ಕೆ ಮೋಹನತರಂಗಿಣಿಯ ಈ ಪದ್ಯ ಪುಷ್ಠಿ ನೀಡುತ್ತದೆ. ಇದರಿಂದ ಕುದುರೆ ವ್ಯಾಪಾರಕ್ಕೆ ಪ್ರತ್ಯೇಕ ಅಂಗಡಿಗಳು ಇರುತ್ತಿದ್ದವು ಎಂಬುದು ತಿಳಿಯುತ್ತದೆ. ಅಲ್ಲದೆ ಆನೆಯಲಾಯದಂತೆ ಕುದುರೆಗಳಿಗೆ ಪ್ರತ್ಯೇಕ ನಿಲಯಗಳಿದ್ದವು (ಕುದುರೆಲಾಯ) ಎಂಬುದಕ್ಕೆ ವಿರೂಪಾಕ್ಷ ಪಂಡಿತನ ಚೆನ್ನಬಸವ ಪುರಾಣದ ಪದ್ಯವೊಂದು ಈ ಕುರಿತಂತೆ ತಿಳಿಯಲು ಸಹಾಯಕವಾಗಿದೆ. ಅದರಂತೆ,

ಹೆಳೆವ ನವರತ್ನದಾಳ್ವೇರಿಗಳ ಕೇರಿಗಳ
ಚಲಿಪ ಕನಕಧ್ವಜ ಪಟಾಳಿಗಳ ಕೇಳಿಗಳ
ಒಳಿದ ಸೊದೆಗಳ ಸೌಧೂಜಿಗಳ ವಾಜಿಗಳ ತರತರದ ನಿಲಯಗಳ
ಸಲೆ ಪೋಪ ಬರ್ಪ ಬಲ್ಮನ್ನೆಯರ ಕನ್ನೆಯರ
ಸುಳಿಸುಳಿದು ಕಣ್ಣೊಪ್ಪುವಂದಣದ ಗೊಂದಣದ
ಕಳಕಳದ ವಾದ್ಯಾರವದಬ್ಬರವ ನಿಬ್ಬರದಲಾಪುರಂ ರಂಜಿಸಿದುದು॥[೧೩೫]

ಎಂಬುದಾಗಿ ಅಶ್ವನಿಲಯಗಳ ಕುರಿತು ವಿವರಿಸುತ್ತದೆ.

ವಿವಿಧ ಹೂವಿನ ಅಂಗಡಿಗಳು ಹಾಗೂ ಹೂ ಮಾರುವವರ ಕುರಿತು ಹಾಗೂ ಅವರ ವಸ್ತ್ರ ಮತ್ತು ಆಭರಣಗಳ ಬಗೆಗೆ ಈಗಾಗಲೇ ವಿವರಿಸಲಾಗಿದೆ. (ಮಾಲೆಗಾರರು ಎಂಬ ಉಪ ಶೀರ್ಷಿಕೆಯಲ್ಲಿ ವಿವರಿಸಲಾಗಿದೆ.)

ಬಾರ್ಬೋಸ ವ್ಯಾಪಾರಿಗಳ ವೇಷಭೂಷಣ, ಶ್ರೀಮಂತಿಕೆ ಕುರಿತು ಹೀಗೆ ವಿವರಿಸಿ ದ್ದಾನೆ, "ಮಲಬಾರಿನ ರಾಜ್ಯಗಳಲ್ಲಿ ಪರಸ್ಥಳದಿಂದ ಬಂದ ಬೇರೆ ಜನರು ಇದ್ದಾರೆ. ಅವರಲ್ಲಿ ಪ್ರಮುಖರು ಕೋರಮಂಡಲ ತೀರದಿಂದ ಬಂದ ಚೇಟಿಗಳು, ಇವರಲ್ಲಿ ಬಹುಮಂದಿ ವರ್ತಕರು ಮತ್ತು ಷರಾಫರು. ವಜ್ರವೈಢೂರ್ಯ, ಮುತ್ತು, ಹವಳ, ಚಿನ್ನ, ಬೆಳ್ಳಿ ಮುಂತಾದ ಬೆಲೆಯಾದ ವಸ್ತುಗಳನ್ನು ವ್ಯಾಪಾರ ಮಾಡುತ್ತಾರೆ. ಇವರು ತಮಗೆ ಮೀಸಲಾದ ಬೀದಿಗಳಲ್ಲಿ ದೊಡ್ಡದಾದ ಮನೆಗಳನ್ನು ಕಟ್ಟಿಕೊಂಡು ಶುಚಿಯಾಗಿ ಬಾಳುತ್ತಾರೆ. ಅವರದೇ ದೇವಸ್ಥಾನಗಳು ಮತ್ತು ದೇವರುಗಳು ಇವೆ. ಸೊಂಟದಿಂದ ಮೇಲಕ್ಕೆ ಬಟ್ಟೆಯೇ ಇಲ್ಲ. ಸೊಂಟದಿಂದ ಕೆಳಕ್ಕೆ ಗಜಗಟ್ಲೆ ಬಟ್ಟೆಯನ್ನು ಸುತ್ತಿಕೊಳ್ಳುತ್ತಾರೆ. ತಮ್ಮ ಉದ್ದದ ಜುಟ್ಟನ್ನು ನೆತ್ತಿಯ ಮೇಲೆ ಗಂಟುಹಾಕಿ ಸುತ್ತಿದ ಪೇಟದಲ್ಲಿ ಅಡಗಿಸುತ್ತಾರೆ. ಮುಖ ಕ್ಷೌರಮಾಡಿಸಿಕೊಂಡು ಎದೆ, ಹಣೆ ಮತ್ತು ಭುಜದ ಮೇಲೆ ಗಂಧ ಕೇಸರಿ ಹಾಗೂ ಬೂದಿ(ವಿಭೂತಿ)ಯನ್ನು ಹಚ್ಚಿಕೊಳ್ಳುತ್ತಾರೆ. ಮೊಟ್ಟೆ ಹಿಡಿಸುವಷ್ಟು ದೊಡ್ಡದಾಗಿ ಕಿವಿಗಳನ್ನು ತೂತುಮಾಡಿ ವಜ್ರವೈಢೂರ್ಯ ಖಚಿತವಾದ ಚಿನ್ನದ ಆಭರಣಗಳನ್ನು ಧರಿಸುತ್ತಾರೆ. ಕೈ ಬೆರಳುಗಳಿಗೆ ಉಂಗುರಗಳನ್ನು, ಸೊಂಟಕ್ಕೆ ಚಿನ್ನ ಬೆಳ್ಳಿಯ ಉಡಿದಾರ ಮುಂತಾದ ಆಭರಣಗಳನ್ನು ಧರಿಸುತ್ತಾರೆ. ತೂಕ ಮಾಡುವ ತೂಕದ ಬಟ್ಟುಗಳನ್ನು, ತ್ರಾಸು ಹಣ ಮತ್ತು ಒಡವೆಗಳನ್ನು ಇಟ್ಟಿರುವ ಚೀಲ ಯಾವಾಗಲೂ ಇವರೊಡನೆ ಇರುತ್ತದೆ. ಹತ್ತು ವರ್ಷ ವಯಸ್ಸಾದ ಕೂಡಲೇ ಇವರ ಮಕ್ಕಳೂ ಇದೇ ರೀತಿ ಚೀಲ ಹಿಡಿದು ಚಿಕ್ಕದಾಗಿ ಷರಾಫ ಕೆಲಸ ಮಾಡುತ್ತಾರೆ"[೧೩೬] ಎಂಬುದಾಗಿ ವ್ಯಾಪಾರಿಗಳ ವಸ್ತ್ರ ಮತ್ತು ಆಭರಣಗಳ ಕುರಿತು ವರ್ಣಿಸಿದ್ದಾರೆ.

ಮೇಲಿನ ವಿವರಗಳಿಂದ ವಿಜಯನಗರ ಕಾಲದಲ್ಲಿ ವೃತ್ತಿನಿರತ ವ್ಯಾಪಾರಿ ವರ್ಗವಿತ್ತು ಎಂಬುದಾಗಿ ತಿಳಿಯುತ್ತದೆ. ಈ ವ್ಯಾಪಾರಿಗಳು ಎಷ್ಟು ಶ್ರೀಮಂತರಿದ್ದರೆಂದರೆ ಅವರ ಸಂಪತ್ತು ಕುಬೇರನಿಗೂ ಸಹ ಸಾಲ ಕೊಡುವಷ್ಟು ಇತ್ತು ಎಂದು ಕನಕದಾಸರು ಮೋಹನತರಂಗಿಣಿ ಯಲ್ಲಿ ವಿವರಿಸುವರು. ವ್ಯಾಪಾರಿಗಳು ತಮ್ಮ ಸಂಘಗಳನ್ನು ಸ್ಥಾಪಿಸಿಕೊಂಡಿದ್ದು, ಒಂದೆಡೆ ಸೇರಿ, ಶಿಸ್ತಿನ ನಿಯಮ, ಸದಸ್ಯರ ನಡುವೆ ಅಹಿತಕರ ಸ್ಪರ್ಧೆಯನ್ನು ತಪ್ಪಿಸುವುದು, ಅವರ ಹಿತಾಸಕ್ತಿ ಕಾಪಾಡುವುದನ್ನು ಈ ಸಂಘಗಳ ಮೂಲಕ ಮಾಡುತ್ತಿದ್ದರು. ವಿಜಯನಗರ ಅರಸರ ಕಾಲದಲ್ಲಿ ಬಾರಕೂರು ಬಹಳ ಪ್ರಸಿದ್ಧವಾದ ರಾಜ್ಯವಾಗಿದ್ದು ಅಲ್ಲಿನ ವ್ಯಾಪಾರಿಗಳು ಇಡೀ ರಾಜ್ಯದಲ್ಲಿ ಹೆಸರಾಗಿದ್ದರು ಮತ್ತು ಪ್ರಭಾವಶಾಲಿಗಳಾಗಿದ್ದರು. ಅಲ್ಲದೇ ಎರಡನೇ ದೇವರಾಯನ ಕಾಲದಲ್ಲಿ ಬಾರಕೂರು ಬಹುದೊಡ್ಡ ವ್ಯಾಪಾರಿ ಕೇಂದ್ರವಾಗಿತ್ತು. ಕ್ರಿ.ಶ.೧೪೩೦ರ ಶಾಸನವು ಬಾರಕೂರು ಹತ್ತುಕೇರಿಯ ಬಳಗದ ಚೌಳಿಕೇರಿ ಮತ್ತು ಮೂಡ ಕೇರಿಯ ವ್ಯಾಪಾರಿಗಳ ನಡುವೆ ವ್ಯವಹಾರದ ವಿಷಯವಾಗಿ ಮನಸ್ತಾಪವಾಗಿ ಅದನ್ನು ಇತ್ಯರ್ಥಮಾಡಿದ ವಿವರವನ್ನು ಉಲ್ಲೇಖಿಸುತ್ತದೆ.[೧೩೭] ಪಟ್ಟಣಸ್ವಾಮಿಗಳು, ಹಂಜಮಾನರು, ಸೆಟ್ಟಿಗಾರರು, ನಖರರು, ಚೇಟಿಗಳು ಮುಂತಾದ ವ್ಯಾಪಾರಿ ವರ್ತಕರು ಇದ್ದರು ಎಂಬುದು ಶಾಸನಗಳಿಂದ ತಿಳಿದುಬರುತ್ತದೆ.

ವಿದೇಶೀ ವ್ಯಾಪಾರಿಗಳು

ವಿಜಯನಗರವನ್ನು 'ಚತುಸ್ಸಮುದ್ರಾದೀಶ ಸಾಮ್ರಾಜ್ಯ'ವೆಂದು ಶಾಸನಗಳಲ್ಲಿ ಉಲ್ಲೇಖಿ

ಸಿವೆ. ವಿಜಯ ನಗರದ ರಾಜರಾದ ಒಂದನೇ ಹರಿಹರನಿಗೆ 'ಪೂರ್ವ ಪಶ್ಚಿಮ ದಕ್ಷಿಣ ಸಮುದ್ರಾಧಿಪತಿ'[೧೩೮] ಎಂದೂ, ಒಂದನೇ ಬುಕ್ಕರಾಯ, ಎರಡನೇ ದೇವರಾಯ ಮತ್ತು ಶ್ರೀ ಕೃಷ್ಣದೇವರಾಯರು 'ಚತುಸಮುದ್ರಾಧಿಪತಿ', ಚತುಸಮುದ್ರಾಧೀಶ್ವರ'[೧೩೯] ಎಂಬ ಬಿರುದುಗಳನ್ನು ಹೊಂದಿದ್ದರು. ಈ ಬಿರುದುಗಳು ವಿಜಯನಗರ ಕಾಲದ ರಾಜರು ಸಾಗರೋತ್ತರ ವ್ಯಾಪಾರ ಮಾಡುತ್ತಿದ್ದರು ಎಂಬುದಕ್ಕೆ ಪುಷ್ಠಿ ನೀಡುತ್ತದೆ. ಅಬ್ದುರ್ ರಜಾಕ್ ವಿಜಯನಗರ ಸಾಮ್ರಾಜ್ಯಕ್ಕೆ ಸೇರಿದ ಬಂದರುಗಳ ಸಂಖ್ಯೆಯನ್ನು ಹೇಳುತ್ತಾನೆ. ಅವನು "ಈ ದೇಶದಲ್ಲಿ ಮುನ್ನೂರು ಬಂದರುಗಳಿವೆ"[೧೪೦] ಎಂದು ತಿಳಿಸುತ್ತಾನೆ. ಈ ಅಂಶವು ವಿಜಯನಗರದ ವಿದೇಶೀ ವ್ಯಾಪಾರ ಸಂಬಂಧವನ್ನು ತಿಳಿಯುವಲ್ಲಿ ಸಹಕರಿಯಾಗುತ್ತದೆ.

ವಿಜಯನಗರ ಅರಸರು ವಿದೇಶಗಳಾದ ಶ್ರೀಲಂಕಾ, ಪೆಗು, ಬರ್ಮಾ, ಓರ್ಮುಜ್, ಅರೇಬಿಯಾ, ಪೋರ್ಚುಗಲ್, ಚೀನಾ, ಅಲೆಗ್ಸಾಂಡ್ರಿಯಾ ಮುಂತಾದ ರಾಷ್ಟ್ರಗಳೊಂದಿಗೆ ವ್ಯಾಪಾರ ಸಂಪರ್ಕ ಹೊಂದಿದ್ದರು. ವಿಜಯನಗರಕ್ಕೆ ಭೇಟಿ ನೀಡಿದ್ದ ನಿಕೊಲೊ–ದೆ–ಕೊಂತಿ ವೆನಿಸ್ ವರ್ತಕನಾಗಿದ್ದ.[೧೪೧]

ಪಾಯೇಸ್‌ನು ವಿಜಯನಗರವು ಪ್ರಪಂಚದ ಇತರೆ ದೇಶಗಳೊಂದಿಗೆ ವ್ಯಾಪಾರ ಸಂಪರ್ಕವನ್ನು ಹೊಂದಿತ್ತು ಎಂದು ಹೇಳುತ್ತಾನೆ. ಅವನು ತಿಳಿಸುವಂತೆ, "ವಿಜಯನಗರ ಪಟ್ಟಣವು ಪ್ರಪಂಚದ ವ್ಯಾಪಾರಿಗಳು ಒಂದೆಡೆ ಸಂಧಿಸುವ ಕೇಂದ್ರವಾಗಿದೆ"[೧೪೨] ಎಂಬುದಾಗಿ ತಿಳಿಸುತ್ತಾನೆ. ಇವನ ವಿವರಣೆಯು ವಿಜಯನಗರ ವ್ಯಾಪಾರ ಸಂಪರ್ಕದ ಮೇಲೆ ಪ್ರಭಾವ ಬೀರುತ್ತದೆ.

ವಿಜಯನಗರದ ರಾಜರು ವಿದೇಶಗಳಿಂದ ಇತರ ವಸ್ತುಗಳೊಂದಿಗೆ ವಸ್ತ್ರ ಮತ್ತು ಆಭರಣಗಳು, ಕುದುರೆಗಳು ಮತ್ತು ಆನೆಗಳನ್ನು ತರಿಸಿಕೊಳ್ಳುತ್ತಿದ್ದರು. ಅದರಂತೆ ಪರ್ಶಿಯಾ ದಿಂದ ಡಮಾಸ್ಕ್ ಮತ್ತು ಸ್ಯಾಟೀನ್ ಬಟ್ಟೆ, ಚೀನಾ ಮತ್ತು ಅಲೆಗ್ಸಾಂಡ್ರಿಯಾದಿಂದ ರೇಷ್ಮೆ ಮತ್ತು ಕೆಂಪು ಬಟ್ಟೆ, ಅರೇಬಿಯಾ, ಓರ್ಮುಜ್ ಮತ್ತು ಕಾಯಿಲ್‌ಗಳಿಂದ ಮುತ್ತು, ಪೆಗು ಮತ್ತು ಸಿಲೋನ್‌ಗಳಿಂದ ವಜ್ರವೈಢೂರ್ಯಗಳು ವಿಜಯನಗರಕ್ಕೆ ರಫ್ತಾಗುತ್ತಿದ್ದವು. ಅರೇಬಿಯಾದಿಂದ ತಂದ ಸಣ್ಣ ಮುತ್ತುಗಳನ್ನು ಕಂಡರೆ ವಿಜಯನಗರದ ರಾಜರಿಗೆ ಬಲು ಪ್ರಿಯಾವಾಗಿತ್ತು[೧೪೩] ಎಂದಿದ್ದಾರೆ. ಹೊರ ದೇಶಗಳಿಂದ ವಿಜಯನಗರಕ್ಕೆ ಆಮದಾಗುತ್ತಿದ್ದ ವಸ್ತ್ರ ಮತ್ತು ಆಭರಣಗಳನ್ನು ಹಂಪಿಯ ಕೃಷ್ಣಬಜಾರಿನಲ್ಲಿ ಮಾರಾಟ ಮಾಡುತ್ತಿದ್ದರು ಎಂಬುದಾಗಿ ಬಾರ್ಬೋಸ ತಿಳಿಸಿದ್ದಾನೆ.[೧೪೪] ವಿಜಯನಗರ ಅರಸರು ಕುದುರೆಗಳನ್ನು ಪರ್ಶಿಯಾ, ಅರೇಬಿಯಾ, ಪೋರ್ಚುಗಲ್‌ಗಳಿಂದ[೧೪೫], ಆನೆಗಳನ್ನು ಪೆಗು ಮತ್ತು ಶ್ರೀಲಂಕಾ ದೇಶಗಳಿಂದ[೧೪೬] ತರಿಸಿಕೊಳ್ಳುತ್ತಿದ್ದರು.

ವಿದೇಶಿಯ ವರ್ತಕರನ್ನು ನಾನಾ ದೇಶಿಯರೆಂದು ಕರೆಯುತ್ತಿದ್ದರು. ಬಾರ್ಬೋಸ ವಿವರಿಸುವಂತೆ, "ಅರಬ್ಬರು, ಪರ್ಶಿಯನ್ನರು, ಸಿಲೋನ್(ಶ್ರೀಲಂಕಾ) ಮಹಾದ್ವೀಪದಲ್ಲಿ ಇದ್ದಾರೆ. ಈ ದ್ವೀಪದಲ್ಲಿರುವ ಮೂರರು(ಮುಸ್ಲಿಂರು) ಭಾರಿ ವರ್ತಕರು. ಇವರು ಬಹು ಸುಖಲೋಲುಪ್ತರು, ದಷ್ಟಪುಷ್ಟವಾಗಿ ಬೆಳೆದ ಶರೀರದವರು; ದೊಡ್ಡ ಹೊಟ್ಟೆಯವರು, ಸೊಂಟದ ಕೆಳಕ್ಕೆ ಹತ್ತಿ ಮತ್ತು

ರೇಷ್ಮೆಯ ಉಡುಪುಗಳನ್ನು ಧರಿಸುತ್ತಾರೆ. ತಲೆಗೆ ಟೋಪಿ ಹಾಕುತ್ತಾರೆ. ಕಿವಿಗಳನ್ನು ಚುಚ್ಚಿಸಿಕೊಂಡು ದಪ್ಪದಪ್ಪದ ಚಿನ್ನದ ಆಭರಣಗಳನ್ನು ಧರಿಸುತ್ತಾರೆ. ಈ ಒಡವೆಗಳು ಎಷ್ಟು ಭಾರವಾಗಿವೆಯೆಂದರೆ ಇವು ಜೋತು ಭುಜಗಳನ್ನು ಮುಟ್ಟುತ್ತವೆ. ಕೈಗೆ ವಜ್ರದ ಉಂಗುರಗಳನ್ನು ಸೊಂಟಕ್ಕೆ ಹರಳು ಹದ್ದಿದ ನಡುಪಟ್ಟಿಯನ್ನು ಧರಿಸುತ್ತಾರೆ"[೧೪೭] ಎಂಬುದಾಗಿ ಮೂರರನ್ನು ಕುರಿತು ವಿವರಿಸುತ್ತಾನೆ.

ಬಾರ್ಬೋಸ ಹೇಳುವಂತೆ, "ಮಲಬಾರ್ ನಾಡಿನಲ್ಲಿರುವ ಮೂರರನ್ನು ಮಾಪಿಳ್ಳೆ ಎಂದು ಕರೆಯುತ್ತಾರೆ. ಇವರು ತಲೆಯ ಮೇಲೆ ದುಂಡಾದ ಚಿಕ್ಕ ಟೋಪಿಯನ್ನಿಟ್ಟು, ಉದ್ದ ವಾದ ಗಡ್ಡ ಬೆಳೆಸುತ್ತಾರೆ. ಇವರು ಅಲ್ಲಿಯ ಜನಸಂಖ್ಯೆಯಲ್ಲಿ ಐದನೇ ಒಂದು ಭಾಗ ಇದ್ದಾರೆಂದು ಹೇಳಬಹುದು. ಸಮುದ್ರ ತೀರದ ವ್ಯಾಪಾರವೆಲ್ಲ ಹೆಚ್ಚು ಕಡಿಮೆ ಇವರ ಕೈಯಲ್ಲಿದೆ".[೧೪೮]

ಕಂಠೀರವನರಸರಾಜ ವಿಜಯದಲ್ಲಿ ಕುದುರೆ ಮತ್ತು ಆನೆಗಳನ್ನು ವ್ಯಾಪಾರಿಗಳು ವಿದೇಶಗಳಿಂದ ತಂದು ರಾಜನಿಗೆ ಒಪ್ಪಿಸುತ್ತಿದ್ದ ಬಗೆಯನ್ನು ವರ್ಣಿಸಿದೆ. ಆ ಕುರಿತು ಈ ಮುಂದಿನ ಪದ್ಯ ತಿಳಿಸುತ್ತದೆ.

ಚರಣಕ್ಕೆ ನಮಿಸಿ ಸಂತೋಷದೆ ಸೆಳೆತಂದ
ಕರಿತುರಗಳನೊಪ್ಪಿಸಲು
ಬಿರುದಿನ ಕಾಲ ಪೆಂಡೆಯ ಕಂಠಮಾಲೆಯ
ಕರೆದಿತ್ತುಮಿಗೆ ಮನ್ನಿಸಿದ[೧೪೯]

ಎಂಬುದಾಗಿ ವಿದೇಶಗಳಿಂದ ಕುದುರೆ ಆನೆಗಳನ್ನು ತಂದು ರಾಜರಿಗೆ ಒಪ್ಪಿಸಿ ರಾಜರಿಂದ ಸತ್ಕರಿಸಲ್ಪಟ್ಟು, ಆಭರಣಗಳನ್ನು ಬಹುಮಾನವಾಗಿ ಪಡೆಯುತ್ತಿದ್ದರು ಎಂಬುದನ್ನು ಈ ಪದ್ಯವು ಅರ್ಥೈಸುತ್ತದೆ. ಹಂಪಿಯ ವಿಠಲ ದೇವಾಲಯದ ಅಧಿಷ್ಠಾನದಲ್ಲಿರುವ ಉಬ್ಬು ಶಿಲ್ಪ ಪಟ್ಟಿಕೆಯಲ್ಲಿ ಕುದುರೆ ವ್ಯಾಪಾರಿಗಳು ರಾಜನಿಗೆ ಕುದುರೆಗಳನ್ನು ತಂದು ಒಪ್ಪಿಸಿ ಕಾಣಿಕೆ ಪಡೆಯುತ್ತಿರುವ ಶಿಲ್ಪವು ಮೇಲಿನ ಪದ್ಯದ ವಿವರಣೆಗೆ ಸಮರ್ಥನೆಯನ್ನು ನೀಡುವಂತಿದೆ.

ಹಂಪಿಯ ವಿಠಲ ದೇವಾಲಯದ ಅಧಿಷ್ಠಾನದ ಪಟ್ಟಿಕೆಯಲ್ಲಿರುವ ಉಬ್ಬು ಶಿಲ್ಪದಲ್ಲಿ (ಚಿತ್ರ-೨೦) ಕುದುರೆ ವ್ಯಾಪಾರಿಗಳು ಕುದುರೆಗಳನ್ನು ಕರೆತರುತ್ತಿರುವ ಚಿತ್ರವಿದ್ದು ಅವರ ಮುಂದೆ ಅರಬ್ ವ್ಯಾಪಾರಿ ನಿಂತಿದ್ದಾನೆ. ಇವನು ವ್ಯಾಪಾರಿ ಮುಖಂಡನಿರಬೇಕು. ಈ ಅರಬ್ ವ್ಯಾಪಾರಿ ಉದ್ದ ತೋಳಿನ ಪಾದಗಳವರೆಗಿನ ನಿಲುವಂಗಿಯನ್ನು (ಕೋಟ್ ಮಾದರಿ) ಧರಿಸಿದ್ದು, ನಿಲುವಂಗಿಯು ಕತ್ತಿನ ಸುತ್ತ (ಕತ್ತುಪಟ್ಟಿಯಿಲ್ಲದ ಕ್ಲೋಜ್‌ನೆಕ್‌ಕೊಟ್) ಆವರಿಸಿದೆ. ನಿಲುವಂಗಿಗೆ ಗುಂಡಿ (ಬಟನ್ಸ್)ಗಳಿರುವುದು ಸ್ಪಷ್ಟವಾಗಿ ಕಂಡುಬರುತ್ತದೆ. ತಲೆಗೆ ದುಂಡಾದ ಸಣ್ಣ ಟೋಪಿಯನ್ನು ಧರಿಸಿದ್ದಾನೆ. ಮೀಸೆಯಿದ್ದು, ಗಡ್ಡವು ಗಲ್ಲದ ಭಾಗದಲ್ಲಿ ಮಾತ್ರ ಬೆಳೆಸಿದ್ದಾನೆ. ಈ ವಸ್ತ್ರ ಧಾರಣೆಯು ಮುಸ್ಲಿಂ ಉಡಿಗೆಯನ್ನು ಪ್ರತಿಬಿಂಬಿಸುವಂತಿದೆ. ಈ ಅರಬ್ ವ್ಯಾಪಾರಿಯ ಹಿಂದೆ ಕುದುರೆಗಳನ್ನು ಹಿಡಿದು ತರುತ್ತಿದ್ದವರ ವಸ್ತ್ರ ವೈವಿಧ್ಯತೆಯಿಂದ ಕೂಡಿದೆ. ಇವರು ಉದ್ದ ತೋಳಿನ ನಿಲುವಂಗಿಯನ್ನು ಮೊಣಕಾಲಿನವರೆಗೆ ಧರಿಸಿದ್ದು, ನಿಲುವಂಗಿಗೆ ಗುಂಡಿಗಳು ಇವೆ. ಅಲ್ಲದೇ ಪಾದಗಳವರೆಗೆ ಉದ್ದವಾದ ಚಲ್ಲಣಗಳನ್ನು (ಪ್ಯಾಂಟ್) ಧರಿಸಿದ್ದಾರೆ. ಇವರು ಧರಿಸಿರುವ ಕುಲಾಯಿ ವಿಭಿನ್ನವಾಗಿವೆ. ಮೊದಲು

ಕುದುರೆ ಹಿಡಿಯುವ ವ್ಯಕ್ತಿ ರುಮಾಲು ರೀತಿಯಲ್ಲಿ ವಸ್ತ್ರವನ್ನು ತಲೆಗೆ ಸುತ್ತಿದ್ದರೆ, ಅವನ ಹಿಂದೆ ನಿಂತಿರುವ ವ್ಯಕ್ತಿ ಚೌಕಾಕಾರದ ಟೋಪಿ ಧರಿಸಿದ್ದಾನೆ. ನಡುಪಟ್ಟಿ(ಬೆಲ್ಟ್) ಕಟ್ಟಿದ್ದಾನೆ.

ರಾಮನಾಥ ಚರಿತದಲ್ಲಿ ತುರುಕರ ವೇಷಭೂಷಣವನ್ನು ಕುರಿತು ಹೀಗೆ ವರ್ಣಿಸಿದೆ;

ಗಡ್ಡವ ಬೆಳೆಯಿಸಿಕೊಂಡು ಮಂಡೆಯೊಳೊಂದು
ದೊಡ್ಡಸುತ್ತನು ಸುತ್ತಿಕೊಂಡು
ಗೊಡ್ಡಾವಿನಂತೆ ತಿರುಗುವ ರಾವುತರಿವ
ರಡ್ಡಲಾದಪರೆ ರಾಮನಿಗೆ[೧೫೦]

ಹಂಪಿಯ ಮಹಾನವಮಿ ದಿಬ್ಬದ ಮತ್ತೊಂದು ಶಿಲ್ಪಪಟ್ಟಿಕೆಯಲ್ಲಿ (ಚಿತ್ರ-೨೧) ವಿದೇಶಿ ವ್ಯಾಪಾರಿ ತನ್ನ ಎರಡೂ ಕಡೆಗೆ ಕುದುರೆಗಳ ಜೀನನ್ನು (ಕುದುರೆಗಳಿಗೆ ಕಟ್ಟಿರುವ ಹಗ್ಗ) ಹಿಡಿದಿದ್ದಾನೆ. ಈ ಶಿಲ್ಪದಲ್ಲಿರುವ ವ್ಯಕ್ತಿಯನ್ನು ವಿದೇಶಿ ವ್ಯಾಪಾರಿ ಎಂದು ಗುರ್ತಿಸಲಾಗಿದೆ. ಈತ ಉದ್ದ ತೋಳಿನ ಹಾಗೂ ಪಾದಗಳವರೆಗೆ ಇರುವ ನಿಲುವಂಗಿಯನ್ನು ಧರಿಸಿದ್ದು, ಸೊಂಟಪಟ್ಟಿ(ಬೆಲ್ಟ್) ಕಟ್ಟಿರುವುದು ಕಂಡುಬರುತ್ತದೆ. ತಲೆಗೆ ದುಂಡಾದ ಕುಲಾಯಿ (ಟೋಪಿಯನ್ನು) ಧರಿಸಿದ್ದು, ಕುಲಾಯಿಯ ಬಲಭಾಗದಲ್ಲಿ ಎರಡು ಸಣ್ಣ ಗೊಂಡೆಗಳು ಇಳಿಬಿದ್ದಿರು ವುದನ್ನು ಗಮನಿಸಬಹುದಾಗಿದೆ. ಅದೇ ಸ್ಮಾರಕದ ಮತ್ತೊಂದು ಶಿಲ್ಪಪಟ್ಟಿಕೆಯಲ್ಲಿ (ಚಿತ್ರ-೨೨) ವಿದೇಶಿ ವ್ಯಾಪಾರಿಗಳು ರಾಜನಿಂದ ಬಹುಮಾನ ಸ್ವೀಕರಿಸುತ್ತಿರುವ ಚಿತ್ರಣವಿದೆ.

ಹಂಪಿಯ ಹಜಾರಾಮ ದೇವಾಲಯ ಭಿತ್ತಿಯಲ್ಲಿರುವ ಈ ಮೇಲಿನ ಶಿಲ್ಪಪಟ್ಟಿಕೆಯಲ್ಲಿ (ಚಿತ್ರ-೨೨ಎ) ವಿದೇಶಿ ವ್ಯಾಪಾರಿಗಳು ವಿಜಯನಗರ ಆಸ್ಥಾನಕ್ಕೆ ಕುದುರೆಗಳನ್ನು ತಂದು ರಾಜನಿಗೆ ಒಪ್ಪಿಸುತ್ತಿರುವ ಚಿತ್ರಣವಿದೆ. ಈ ವಿದೇಶಿ ವ್ಯಾಪಾರಿಗಳು ಉದ್ದ ತೋಳಿನ ಹಾಗೂ ಪಾದಗಳವರೆಗೆ ಇರುವ ನಿಲುವಂಗಿಯನ್ನು ಧರಿಸಿದ್ದಾನೆ. ಕುಲಾಯಿಯನ್ನು ಧರಿಸಿದ್ದು, ಕುಲಾಯಿ ತುದಿಯು ಬೆನ್ನಿನ ಹಿಂಭಾಗದಲ್ಲಿ ಇಳಿಬಿದ್ದಿದೆ. ಗಡ್ಡವನ್ನು ಬೆಳೆಸಿಕೊಂಡಿರುವುದು ಕಾಣಬಹುದು. ರಾಜನ ಮುಂದೆ ವಿನಯದಿಂದ ಕೈ ಕಟ್ಟಿ ತಲೆಬಾಗಿ ನಿಂತಿದ್ದಾನೆ.

ಹಂಪಿಯ ವಿಠಲ ದೇವಾಲಯದ ಸಂಗೀತ ಮಂಟಪದ ಅಧಿಷ್ಠಾನದಲ್ಲಿರುವ ಶಿಲ್ಪ ಪಟ್ಟಿಕೆಯಲ್ಲಿ (ಚಿತ್ರ-೨೩) ರಾಜನಿಗೆ ವಿದೇಶಿ ವ್ಯಾಪಾರಿ ಆನೆಯನ್ನು ತಂದು ಒಪ್ಪಿಸುತ್ತಿರುವ ಚಿತ್ರಣವಿದೆ. ರಾಜನ ಮುಂದೆ ವಿದೇಶಿ ವ್ಯಾಪಾರಿಯು ತನ್ನ ಎರಡೂ ಕೈಗಳನ್ನು ಮುಂದೆ ಕಟ್ಟಿಕೊಂಡು ತಲೆಬಾಗಿ ವಿನಯದಿಂದ ನಿಂತಿದ್ದು, ತನ್ನ ಹಿಂದೆಯಿರುವ ಆನೆಯನ್ನು ರಾಜ ನಿಗೆ ಒಪ್ಪಿಸುತ್ತಾ ಇದ್ದಾನೆ. ರಾಜ ಪ್ರತಿಯಾಗಿ ತನ್ನ ಎಡಗೈಯಲ್ಲಿ ಕಂಠಮಾಲೆಯನ್ನು ಹಿಡಿದಿದ್ದು ಅದನ್ನು ಆ ವ್ಯಾಪಾರಿಗೆ ಕೊಡುತ್ತಿರುವಂತಿದೆ. ಬಹುಶಃ ಇದು ರಾಜ ಧರಿಸಿದ್ದ ಕಂಠಾಭರಣವಾಗಿರುವ ಸಾಧ್ಯತೆಯಿದ್ದು, ಕಂಠೀರವನರಸರಾಜ ವಿಜಯದ ಪದ್ಯದ ಸಾಲುಗಳ ವಿವರಣೆಗೆ ಈ ಶಿಲ್ಪವು ಪುಷ್ಠಿ ನೀಡುತ್ತದೆ.

ರಾಜನ ಎಡಗೈಯಲ್ಲಿ ಹಿಡಿದಿರುವ ಕಂಠಾಭರಣವನ್ನು ಸೂಕ್ಷ್ಮವಾಗಿ ಗಮನಿಸಿದಾಗ ಕಂಠಾಭರಣದ ಪದಕವು ರಾಜನ ಅಂಗೈಯಿಂದ ಕೆಳಗೆ ಇಳಿದಿದ್ದು, ಪದಕವನ್ನು ಜೋಡಿ ಸಿರುವ

ಎರಡು ಬದಿಯ ಎಳೆಗಳನ್ನು ಅಂಗೈ ಮೇಲೆ ಸ್ಪಷ್ಟವಾಗಿ ಗುರುತಿಸಬಹುದಾಗಿದೆ. ಇಲ್ಲಿ ವಿದೇಶಿ ವ್ಯಾಪಾರಿ ಉದ್ದ ತೋಳಿನ ನಿಲುವಂಗಿಯನ್ನು ಪಾದಗಳ ಮೇಲಿನವರೆಗೆ ಧರಿಸಿದ್ದು, ಉತ್ತರೀಯವನ್ನು ಕಟಿಭಾಗದಲ್ಲಿ ಗಂಟುಹಾಕಿ ಕಟ್ಟಿದ್ದಾನೆ. ಈ ರೀತಿಯಲ್ಲಿ ಅಧಿಕಾರದ ದೊಡ್ಡ ಹುದ್ದೆಯಲ್ಲಿರುವವರ ಹಾಗೂ ಗಣ್ಯ ವ್ಯಕ್ತಿಗಳ ಮುಂದೆ ನಿಂತು ಮಾತನಾಡುವಾಗ ಉತ್ತರೀಯವನ್ನು ಕಟಿಭಾಗದಲ್ಲಿ ಕಟ್ಟಿ ಗೌರವ ಸೂಚಿಸುವ ಪರಿಯನ್ನು ಸೂಚಿಸುತ್ತದೆ. ಇದರೊಂದಿಗೆ ದುಂಡಾದ ಸಣ್ಣ ಕುಲಾಯಿಯನ್ನು ಧರಿಸಿದ್ದಾನೆ.

ಈ ಶಿಲ್ಪಗಳನ್ನು ಮತ್ತು ವಿವರಗಳನ್ನು ಗಮನಿಸಿ ಅವಲೋಕಿಸಿದಾಗ ವಿದೇಶಿಯರು ಧರಿಸಿರುವ ವಸ್ತ್ರವು ವಿಭಿನ್ನತೆಯಿಂದ ಕೂಡಿತ್ತು. ಅವರು ಒಂದೇ ಮಾದರಿಯ ವಸ್ತ್ರಗಳನ್ನು ಧರಿಸಿಲ್ಲ ಎಂಬುದು ಸ್ಪಷ್ಟವಾಗುತ್ತದೆ. ವಿಜಯನಗರ ಕಾಲದಲ್ಲಿ ವ್ಯಾಪಾರಿಗಳು ರಾಜ್ಯದ ಆರ್ಥಿಕ ಪ್ರಗತಿಗೆ ಉತ್ತಮ ಕೊಡುಗೆಗಳನ್ನು ನೀಡಿದ್ದಾರೆ ಎಂಬುದನ್ನು ತಿಳಿಯಬಹುದಾಗಿದೆ. ಅಲ್ಲದೇ ಅವರ ವಸ್ತ್ರವು ರಾಜನ ವಸ್ತ್ರದ ಮೇಲೆ ಪ್ರಭಾವ ಬೀರಿರುವ ಸಾಧ್ಯತೆಯನ್ನು ಅಲ್ಲ ಗಳೆಯುವಂತಿಲ್ಲ.

೩.೨.೮. ವಾದ್ಯಗಾರರು(ವಾದ್ಯನುಡಿಸುವವರು)

ಪ್ರಾಚೀನ ಕಾಲದಿಂದಲೂ ದಕ್ಷಿಣ ಭಾರತವು ಕಲೆಗಳ ತವರೂರು. ಅರವತ್ತಾನ್ಲ್ಕು ಕಲೆಗಳಲ್ಲಿ ಗೀತ, ವಾದ್ಯಗಳು ಪ್ರಮುಖವಾದವುಗಳಾಗಿವೆ.[೧೫೧] ಸಂಗೀತ ಮತ್ತು ನೃತ್ಯಗಳು ಮಾನವನ ಭಾವನೆಗಳ ಅಭಿವ್ಯಕ್ತಿ ಹಾಗೂ ಮನೋಧರ್ಮದ ಅವಿಭಾಜ್ಯ ಅಂಗಗಳಾಗಿದ್ದು, ಸಾಂಸ್ಕೃತಿಕ ಜೀವನದಲ್ಲಿ ಹಾಸುಹೊಕ್ಕಾಗಿವೆ. ಉತ್ತರ ಪ್ರದೇಶದ ಜೋಗಿಮಾರನ ಗುಹೆಯಲ್ಲಿ ಪತ್ತೆಯಾದ ಶಾಸನದಿಂದ ಸಂಗೀತ ಮತ್ತು ನೃತ್ಯಗಳ ಪರಂಪರೆ ಕ್ರಿ.ಪೂ. ೩ನೇ ಶತಮಾನದಿಂದಲೂ ಬೆಳೆದುಕೊಂಡು ಬಂದಿದ್ದನ್ನು ತಿಳಿಸುತ್ತದೆ.[೧೫೨] ಹಲ್ಮಿಡಿ ಶಾಸನದಲ್ಲಿ ಕಾಕುತ್ಸವರ್ಮನ ವೈಭವವನ್ನು ವರ್ಣಿಸುತ್ತಾ ಅವನ ರಾಜ್ಯದ ಮನೆಗಳು ಸಂಗೀತದ ಧ್ವನಿ ಯಿಂದ ತುಂಬಿಹೋಗಿದ್ದವು ಎಂದು ಹೇಳಿದೆ.[೧೫೩]

ರಾಜರು ಸ್ವತಃ ತಾವೇ ಕಲಾವಿದರಾಗಿದ್ದು, ಕಲೆಗಳಿಗೆ, ಕಲಾಕಾರರಿಗೆ ಪ್ರೋತ್ಸಾಹ ನೀಡಿ, ಪೋಷಿಸಿಕೊಂಡು ಬಂದಿರುವುದು ತಿಳಿದುಬಂದಿರುವ ಅಂಶವಾಗಿವೆ. ವಿಜಯನಗರ ಕಾಲದಲ್ಲಿ ಒಂದನೆ ದೇವರಾಯ, ಕೃಷ್ಣದೇವರಾಯ, ಅಚ್ಯುತರಾಯರು ಸಂಗೀತಕ್ಕೆ ಪ್ರೋತ್ಸಾಹ ನೀಡಿದ್ದರು ಎಂಬುದಕ್ಕೆ ಉತ್ತಮ ನಿದರ್ಶನಗಳಿವೆ.

ಆ ಕುರಿತು ಒಂದನೆ ದೇವರಾಯನು ಸಂಗೀತ ಕ್ಷೇತ್ರದಲ್ಲಿ ಪರಿಣಿತಿ ಹೊಂದಿದ್ದನು ಎಂಬುದಕ್ಕೆ ದೇವರಾಯನಿಗಿದ್ದ 'ಸಂಗೀತ ವಿದ್ಯಾಸಾಗರ'[೧೫೪] ಎಂಬ ಬಿರುದು ಸಾಕ್ಷೀಕರಿಸುತ್ತದೆ. ಅಲ್ಲದೇ ಶ್ರೀ ಕೃಷ್ಣದೇವರಾಯನು 'ಸಂಗೀತ ಸಾಹಿತ್ಯ ಸಮರಾಂಗಣ ಸಾರ್ವಭೌಮ'[೧೫೫] ಎಂಬ ಬಿರುದು ಹೊಂದಿದ್ದು, ಸಂಗೀತ, ಸಾಹಿತ್ಯ ಕ್ಷೇತ್ರಗಳಲ್ಲಿ ಸ್ವತಃ ರಾಜ ಪರಿಣಿತನಾಗಿದ್ದನು ಎಂಬುದಾಗಿ ತಿಳಿಸುತ್ತದೆ. ರಾಜರಷ್ಟೇ ಅಲ್ಲದೇ ಸೈನಾಧಿಪತಿಗಳು ಸಂಗೀತ ಕ್ಷೇತ್ರದಲ್ಲಿ ಆಸಕ್ತಿ ಹೊಂದಿದ್ದರು. ಎರಡನೆ ದೇವರಾಯನ ಸೈನ್ಯಾಧಿಪತಿಯಾದ ಚಾಮ ರಾಜನಿಗೆ 'ಸಂಗೀತಲೋಲ'[೧೫೬] ಎಂಬ ಬಿರುದಿತ್ತು. ಇದರ ಅರ್ಥ ಸಂಗೀತವನ್ನು ಆಸ್ವಾದಿಸುವವನು, ಸಂಗೀತದಲ್ಲಿ ಆಸಕ್ತಿಯುಳ್ಳವನು ಎಂಬುದಾಗಿದೆ.

ಹಂಪಿಯ ವಿಠಲ ದೇವಾಲಯದ ಸಂಗೀತ ಮಂಟಪದಲ್ಲಿನ ಕಲ್ಲುಗಳು ಸಂಗೀತ ಸ್ವರವನ್ನು ನುಡಿಸುವುದು ವಿಜಯನಗರ ಅರಸರ ಕಲಾರಾಧನೆಯನ್ನು ತಿಳಿಯಲು ಅತ್ಯುತ್ತಮ ಸ್ಮಾರಕ ಆಕರವಾಗಿದೆ. ಅಂತೆಯೇ ಅಳಿಯ ರಾಮರಾಯ ಉತ್ತಮ ವೀಣಾವಾದಕನಾಗಿದ್ದನು.[೧೫೭] ಈ ಕಾಲದಲ್ಲಿ ವ್ಯಾಸರಾಯರು, ಶ್ರೀಪಾದರಾಯರು, ಪುರಂದರದಾಸರು ಮುಂತಾದವರು ಉತ್ತಮ ಸಂಗೀತಗಾರರಾಗಿದ್ದರು. ಅಲ್ಲದೆ ಪುರಂದರದಾಸರನ್ನು 'ಕರ್ನಾಟಕ ಸಂಗೀತ ಪಿತಾಮಹ' ಎಂದು ಕರೆದು ಗೌರವಿಸಿರುವುದೇ ಸಂಗೀತದ ತವರು ವಿಜಯನಗರ ಸಾಮ್ರಾಜ್ಯ, ಅದರಲ್ಲಿ ಕರ್ನಾಟಕ ಆಗಿತ್ತು ಎಂಬುದು ಗಮನಾರ್ಹ ಅಂಶವಾಗಿದೆ.

ಬಾರ್ಬೋಸಾ ವಿಜಯನಗರವನ್ನು ಮತ್ತು ಇಲ್ಲಿನ ಕಲೆಯನ್ನು ಕುರಿತು ಹೀಗೆ ಹೇಳಿದ್ದಾನೆ, "ವಿಜಯನಗರ ಸಾಮ್ರಾಜ್ಯವು ದಕ್ಷಿಣ ಭಾರತದ ಸಂಸ್ಕೃತಿಯ ರೂಪಕ."[೧೫೮] ನಿಕೊಲೊ-ದೆ-ಕೊಂತಿಯು ಸಂಗೀತವು ಹೇಗೆ ಸಾಮಾಜಿಕ ಕಾರ್ಯಗಳೊಂದಿಗೆ ಸಂಬಂಧವನ್ನು ಹೊಂದಿತ್ತು ಎಂಬುದನ್ನು ದಾಖಲಿಸಿದ್ದಾನೆ. ಅವನು ಹೇಳುವ ಪ್ರಕಾರ "ಅವರ ವಿವಾಹ ಸಂದರ್ಭಗಳಲ್ಲಿ ಕೊಳಲು ಮತ್ತು ತುತ್ತೂರಿ(ಕಹಳೆ)ಗಳನ್ನು ನುಡಿಸುತ್ತಾರೆ. ಎಲ್ಲ ಸಂಗೀತದ ಸಾಧನಗಳು ನಮ್ಮ ದೇಶದಲ್ಲಿದ್ದಂತೆ ಇವೆ"[೧೫೯] ಎಂದು ತಿಳಿಸುತ್ತಾನೆ.

ಮಾನವನ ಜೀವನದಲ್ಲಿ ಕಲೆಗೆ ಸ್ಥೂಲವಾಗಿ ಮೂರು ಸ್ಥಾನಗಳುಂಟು. ಅವು ಅನುಕ್ರಮವಾಗಿ ಮನೆ, ಸಭೆ ಮತ್ತು ಬೀದಿ ಈ ಮೂರು ಸನ್ನಿವೇಶಗಳಿಗೆ ತಕ್ಕಂತೆ ವಾದ್ಯ ಗಳನ್ನು ತಯಾರಿಸುತ್ತಿದ್ದರು.[೧೬೦] ಸಂಗೀತದಲ್ಲಿ ವಾದ್ಯಗಳು ಪ್ರಮುಖ ಪಾತ್ರವಹಿಸುತ್ತವೆ. ಹಾಗಾಗಿ ಇವುಗಳನ್ನು ಸಂಗೀತದ ಸಾಧನಗಳೆಂದೇ ಕರೆಯುತ್ತೇವೆ. ಅವು ದಂಡಿಗೆ, ಸ್ವರ ಮಂಡಲ, ಕಿನ್ನರಿ, ವೇಣು, ಶಂಖ, ಶೃಂಗ, ಮೃದಂಗ, ಡಮರು, ಘಂಟೆ, ಕಂಸಾಳೆ, ತಾಳ ಇನ್ನೂ ಮುಂತಾದವು ಸಂಗೀತದ ಸಾಧನಗಳಾಗಿವೆ. ಅವುಗಳನ್ನು ಸಂಗೀತದ ವಾದ್ಯಗಳು ಎಂದೂ ಕರೆಯಲ್ಪಟ್ಟಿವೆ.

ಕೃಷ್ಣದೇವರಾಯನ ಆಮುಕ್ತಮಾಲ್ಯದಲ್ಲಿ ಉರುಮೆ, ಮುಖವೀಣೆ, ಡೋಲು, ಭೇರಿ, ಢಕ್ಕೆ, ಶಂಖ, ತಾಳ, ಸುಶೀರ, ಗಣ ಮುಂತಾದ ವಾದ್ಯಗಳ ಪ್ರಸ್ತಾಪವಿದೆ.[೧೬೧]

ವಿಜಯನಗರ ಅರಸರರಾಜ ಸಭೆಗಳು ಸಾಹಿತ್ಯ, ಸಂಗೀತ, ನೃತ್ಯ ಕಲಾವಿದರಿಂದ ವಿಜೃಂಭಿಸುತ್ತಿದ್ದವು ಎಂಬುದಕ್ಕೆ, ಸ್ಮಾರಕಗಳು ಹಾಗೂ ಸಮಕಾಲೀನ ಸಾಹಿತ್ಯದ ಕೃತಿಗಳ ವೈಭವದ ವರ್ಣನೆಗಳೇ ಸಾಕ್ಷಿ. ರಾಜರ ಒಡ್ಡೋಲಗವು ನಟ್ಟುವರು, ಮದ್ದಳಿಗರು, ತಾಳ ಧಾರಿಗಳು, ಗೀತವಾದ್ಯ ವಿದ್ಯಾಧಿಕ ಪಡೆಯಿಂದ ವಿರಾಜಿಸುತ್ತಿತ್ತು ಎಂಬುದಾಗಿ ಕನಕದಾಸರು ಮೋಹನ ತರಂಗಿಣಿಯಲ್ಲಿ ಬಾಣಾಸುರನ ಆಸ್ಥಾನ ವೈಭವನ್ನು ವರ್ಣಿಸುವ ಸಂದರ್ಭದಲ್ಲಿ ಉಲ್ಲೇಖಿಸಿದ್ದಾರೆ.[೧೬೨]

ದೇವರಿಗೆ ಗುರುಗಳಿಗೆ, ರಾಜರಿಗೆ ಮಹಿಮಾನ್ವಿತ ಘನತೆವೆತ್ತ ವ್ಯಕ್ತಿಗಳಿಗೆ ಗೌರವ ಸಂಕೇತವಾಗಿ ವಾದ್ಯಗಳನ್ನು ನುಡಿಸಿ ಅವರನ್ನು ವಾದ್ಯಗೋಷ್ಠಿಯೊಂದಿಗೆ ಸ್ವಾಗತಿಸುವುದು ಒಂದು ಸಭ್ಯ ಸಂಪ್ರದಾಯವಾಗಿ ಬಹಳ ಹಿಂದಿನಿಂದಲೂ ನಮ್ಮ ಸಂಸ್ಕೃತಿಯಲ್ಲಿ ಬೆಳೆದು ಬಂದಿದೆ. ಇದರೊಂದಿಗೆ ಹಬ್ಬ, ವಿನೋದ, ಉತ್ಸವ ಸತಿಹೋಗುವ ಸಂದರ್ಭ, ಯುದ್ಧ ಘೋಷಣೆಯ ಸಂದರ್ಭಗಳಲ್ಲಿ ಸಂಗೀತ ಮತ್ತು ವಾದ್ಯಗಳನ್ನು ಹಾಡುತ್ತಾ ನುಡಿಸುತ್ತಿದ್ದರು. ಸಂಗೀತ ಮತ್ತು ವಾದ್ಯ ಒಂದೇ

ಮುಖದ ಎರಡು ನಾಣ್ಯಗಳಿದ್ದಂತೆ. ಸಂಗೀತ ಮತ್ತು ವಾದ್ಯ ನುಡಿಸುವುದು ಹವ್ಯಾಸಿ ಕಲಾವಿದರಿಂದ ಪ್ರಾರಂಭವಾಗಿ ಜೀವನದ ವೃತ್ತಿಗಳಾಗಿ ಮಾರ್ಪಾಡಾಗಿವೆ.

ವಿಜಯನಗರ ಕಾಲದಲ್ಲಿ ವೃತ್ತಿನಿರತ ವಾದ್ಯಗಾರರು ಇದ್ದರು ಎಂಬುದನ್ನು ಶಾಸನ, ಸಾಹಿತ್ಯ ಹಾಗೂ ಸ್ಮಾರಕಗಳ ಆಕರಗಳಿಂದ ಸ್ಪಷ್ಟವಾಗಿ ತಿಳಿಯಬಹುದು. ಬುಕ್ಕರಾಯನ ಕಾಲದ ಕ್ರಿ.ಶ. ೧೩೬೮ರ ಬೆಂಗಳೂರು ಜಿಲ್ಲೆಯ ಮಾಗಡಿ ತಾಲ್ಲೂಕು ಕಲ್ಯಾಗ್ರಾಮದ ಶಾಸನವು, "ಶ್ರೀವೈಷ್ಣವ ಮತ್ತು ಜೈನರಿಬ್ಬರು ಪಂಚವಾದ್ಯಗಳನ್ನು ಅಂದರೆ ಕಳಸ, ಜಾಗಟೆ, ಜಾಗಲಾ ಮುಂತಾದವುಗಳನ್ನು ನುಡಿಸುತ್ತಿದ್ದ ವಾದ್ಯಗಾರರನ್ನು ಎರಡು ಧರ್ಮದವರು ನೇಮಕ ಮಾಡಿಕೊಂಡು ದಾನಕೊಟ್ಟ ಬಗ್ಗೆ ವಿವರಗಳನ್ನು ಕೊಡುತ್ತವೆ."[೧೬೩] ಉತ್ತರ ಕನ್ನಡ ಜಿಲ್ಲೆಯ ಭಟ್ಕಳ ತಾಲ್ಲೂಕು ಮಾವಳ್ಳಿಯ ಶಾಸನ ಎರಡನೆ ದೇವರಾಯನ ಕಾಲಕ್ಕೆ ಸೇರಿದ್ದು, ಅದರಲ್ಲಿ "ಅಲ್ಲಿನ ವಿಶೇಷ ಸೇವೆಗಳಲ್ಲಿ ಸಂಗೀತ ವಾದ್ಯಗಳಾದ ಡೋಲು, ಜಾಗಟೆ ಮತ್ತು ಶಂಖಗಳ ಮುಂತಾದ ವಾದ್ಯಗಳನ್ನು ಉಲ್ಲೇಖಿಸಿದೆ."[೧೬೪]

ಕ್ರಿ.ಶ. ೧೪೩೧ರ ಬೆಂಗಳೂರು ತಾಲ್ಲೂಕು ಕೊಡಿಗೆಹಳ್ಳಿಯ ಶಾಸನವು ದಾನದ ವಿವರದಲ್ಲಿ, "ಪಾತ್ರದ ಜನ, ನಟುವಜನ, ಮದ್ದಳೆಗಾರರು, ಸಿತಾರನಜನ, ಉಪಾಂಗದಜನ, ಕಂಸಾಳೆಜನ: ಹೀಗೆ ಒಟ್ಟು ಏಳು ಜನರಿಗೆ ಎರಡು ಹೊತ್ತು ಅಂಗರಂಗಭೋಗವನ್ನು ನಡೆಸಲು ದೇವಸಮುದ್ರ ಕೆರೆಯ ಕೆಳಗಿನ ಗದ್ದೆಯನ್ನು ದಾನ ನೀಡಲಾಗಿದೆ"[೧೬೫] ಎಂದು ತಿಳಿಸುತ್ತದೆ.

ಚಿಕ್ಕಮಗಳೂರು ಜಿಲ್ಲೆಯ ಮೂಡಿಗೆರೆ ತಾಲ್ಲೂಕು ಕುರುವಂಮಗಿ ಗ್ರಾಮದ ಕ್ರಿ.ಶ. ೧೫೪೯ರ ಸದಾಶಿವರಾಯನ ಕಾಲದ ಶಾಸನವು, "ಆ ಗ್ರಾಮದ ರಾಮೇಶ್ವರ ದೇವ ಸ್ಥಾನದಲ್ಲಿ ಅನೇಕ ವಿಧವಾದ ಹಬ್ಬಗಳ ಆಚರಣೆಯಲ್ಲಿ ಹಾಗೂ ವಿಶೇಷ ಹಬ್ಬಗಳಾದ ಶಿವರಾತ್ರಿಯಲ್ಲಿ, ಕರಾಡೆ, ಕಹಳೆ ಮತ್ತು ಜಾನಪದ ಸಂಗೀತದ ಕಂಸಾಳೆ ಬಾರಿಸುವವರಿಗೆ ದತ್ತಿಗಳನ್ನು ಕೊಟ್ಟ ಬಗೆಗೆ ವಿವರ ನೀಡುತ್ತದೆ."[೧೬೬]

ಶಾಸನಗಳಲ್ಲಿ ಕಳಸ, ಜಾಗಟೆ, ಕಹಳೆ, ಕಂಸಾಳೆ, ಶಂಕ, ಡೋಲು, ಮದ್ದಲೆ ಮುಂತಾದ ವಾದ್ಯಗಳ ಉಲ್ಲೇಖಗಳು ಲಭ್ಯವಾಗುತ್ತವೆ. ಅಲ್ಲದೇ ಈ ವಾದ್ಯಗಳನ್ನು ನುಡಿಸುವ ವೃತ್ತಿನಿರತರಿಗೆ ದಾನಕೊಟ್ಟ ವಿವರಣೆ ಲಭ್ಯವಾಗಿದ್ದು, ಅವರು ರಾಜರಿಂದ ಪೋಷಣೆಗೆ ಒಳಗಾಗಿದ್ದರು ಎಂಬುದು ಸ್ಪಷ್ಟವಾಗುತ್ತದೆ.

ಶಾಸನಗಳಂತೆ ಸಾಹಿತ್ಯಾಧಾರಗಳಲ್ಲೂ ವಾದ್ಯಗಳ ಕುರಿತು ವಿವರಣೆಗಳು ಲಭ್ಯ ವಾಗುತ್ತವೆ. ಚಾಮರಸನ ಪ್ರಭುಲಿಂಗಲೀಲೆಯಲ್ಲಿ ಮಾಯಾದೇವಿ ಮಧುಕೇಶ್ವರನನ್ನು ಪೂಜಿಸುತ್ತಿದ್ದ ಸಂದರ್ಭದಲ್ಲಿ ಯಾವ ಯಾವ ವಾದ್ಯಗಳನ್ನು ನುಡಿಸುತ್ತಿದ್ದಳು ಎಂಬುದರ ಬಗೆಗೆ ತಿಳಿಸಿದೆ. ಅದರಂತೆ

ಹಿಡಿದು ಬಾಜಿಸೆ ಘಂಟೆ ಶಂಖದ
ಗಡಣ ಜಾಗಟೆ ಜಗಳೆ ಮದ್ದಳೆ
ಜಡಿವ ಕಹಳೆ ಮೃದಂಗವಾವುಜ ಭೇಜಿ ಕಂಸಾಳ
ನುಡಿವ ಗಂಭೀರ ಧ್ವನಿಯಲತಿ
ಸಡಗರಸಿದುದು ನಗರ ಮಾಯಾ
ಮಡದಿ ಮಾಡುವ ದೇವ ಪೂಜೆಯ ರಭಸರಚನೆಯಲಿ[೧೬೭]

ಹೀಗೆ ಘಂಟೆ, ಶಂಖ, ಜಾಗಟೆ, ಮದ್ದಳೆ, ಕಹಳೆ, ಭೇರಿ ಮೃದಂಗ, ಕಂಸಾಳೆ ವಾದ್ಯಗಳನ್ನು ದೇವರ ಪೂಜಾ ಸಮಯದಲ್ಲಿ ನುಡಿಸುತ್ತಿದ್ದರು ಎಂಬುದು ತಿಳಿದುಬರುತ್ತದೆ.

ಕನಕದಾಸರು ಮೋಹನತರಂಗಿಣಿಯಲ್ಲಿ, ಸೋಮಸೂರಿ ವೀಧಿಯಲ್ಲಿ,

ತಾಳ ಮದ್ದಳೆವಾವುಜ ಶ್ರುತಿ ಮುಖವೀಣೆ
ಸಾಳಂಗ ಶುದ್ದಗಾನೆಯರ
ಮೇಳ ನಟ್ಟುವ ನಾನಾ ವಿದ್ಯೆಗಳ ಗಟ್ಟ
ವಾಳರ ಮನೆಗಳೊಪ್ಪಿದವು[೧೬೮]

ಎಂಬುದಾಗಿ ವಿವಿಧ ವಾದ್ಯಾಗಾರರ ಮನೆಗಳು ಇದ್ದವೆಂಬುದನ್ನು ಉಲ್ಲೇಖಿಸುತ್ತದೆ.

ವಿದೇಶಿ ಪ್ರವಾಸಿಯಾದ ಪಾಯೇಸ್‌ನು ಮಹಾನವಮಿಯ ಉತ್ಸವದ ಸಂದರ್ಭವನ್ನು ವಿವರಿಸುತ್ತಾ, "ರಾಜನ ಮುಂದೆ ನಾನಾ ಕಲೆಗಳ ಪ್ರದರ್ಶನಗಳನ್ನು ತೋರ್ಪಡಿಸುತ್ತಿದ್ದರು, ಅವರಲ್ಲಿ ಓಲಗ, ಮೌರಿ, ಡೋಲು, ತಾಳ, ಮದ್ದಳೆಗಳನ್ನು ಬಾರಿಸುತ್ತಾ ಅನೇಕ ಸ್ತ್ರೀಯರು ತಮ್ಮ ಕಲೆಯನ್ನು ಪ್ರದರ್ಶಿಸುತ್ತಾರೆ."[೧೬೯] ಹಾಗೇ ಮುಂದುವರೆಸಿ ಪಾಯೇಸ್, "ರಾಣಿಯರ ಅರಮನೆಯ ಅಂತಃಪುರದಲ್ಲಿ ಹನ್ನೆರಡು ಸಾವಿರ ಸ್ತ್ರೀಯರಿದ್ದಾರೆ ಅವರಲ್ಲಿ ತುತ್ತೂರಿ, ಕಹಳೆ, ಕೊಂಬುಗಳನ್ನೂದುವ ಕೆಲಸವನ್ನು ಮಾಡುವ ಸ್ತ್ರೀಯರೂ ಇದ್ದಾರೆ."[೧೭೦] ಎಂದು ವಿವರಿಸಿದ್ದಾನೆ. ನ್ಯೂನಿಜ್ ರಾಯಚೂರು ಯುದ್ಧದ ಬಗೆಗೆ ವಿವರಿಸುತ್ತಾ, "ನಗಾರಿ, ಡಂಕ, ಡೊಳ್ಳು, ಹರೆ ಮುಂತಾದ ವಾದ್ಯಗಳನ್ನು ತಿಳಿಸುತ್ತಾ ಇವುಗಳನೆಲ್ಲಾ ಉಪಯೋಗಿಸಿ ರಣಭೇರಿಯನ್ನು ಬಾರಿಸಿದಾಗ ಆಕಾಶವೆ ಕಳಚಿಬಿದ್ದಂತೆ ಶಬ್ದವಾಗುತ್ತಿತ್ತು"[೧೭೧] ಎಂದು ವರ್ಣಿಸಿದ್ದಾನೆ.

ಈ ಮೇಲಿನ ಶಾಸನ, ಸಾಹಿತ್ಯ ಮತ್ತು ವಿದೇಶಿ ಪ್ರವಾಸಿಗರ ವರದಿಗಳಿಂದ ವಾದ್ಯಗಳ ಹೆಸರು, ವಾದ್ಯ ನುಡಿಸುವ ವೃತ್ತಿ ನಿರತರು ಇದ್ದ ಬಗ್ಗೆ, ಅವರು ವಾಸಿಸುತ್ತಿದ್ದ ಮನೆಗಳು ಹಾಗೂ ರಾಜರಿಂದ ಪಡೆದ ದಾನದತ್ತಿ ಅಲ್ಲದೇ, ವಾದ್ಯಗಳನ್ನು ಬಳಸುತ್ತಿದ್ದ ಸಂದರ್ಭಗಳನ್ನು ಕುರಿತು ತಿಳಿಯಲು ಸಹಾಯಕವಾಗಿವೆ. ಇವುಗಳೊಂದಿಗೆ ಸ್ಮಾರಕಗಳಲ್ಲಿ ಲಭ್ಯವಿರುವ ಶಿಲ್ಪ ಗಳಿಂದ ವಾದ್ಯಗಾರರ ವಸ್ತ್ರ ಮತ್ತು ಆಭರಣಗಳ ಕುರಿತ ಮಾಹಿತಿಯನ್ನು ಮುಂದಿನ ಅಧ್ಯಯನಕ್ಕೆ ಒಳಪಡಿಸಲಾಗಿದೆ. ವಿಜಯನಗರ ಕಾಲದ ವಾದ್ಯಗಾರರಾದ ಮದ್ದಳೆವಾದಕರು, ಡೋಲುವಾದಕರು, ತಾಳವಾದಕರು, ಕೊಳಲುವಾದಕರು, ಶಂಖವಾದಕ, ಡಪ್ಪುವಾದಕ, ಕಂಜರಿವಾದಕ, ಕಹಳೆವಾದಕರ ಕುರಿತು ಅವರ ವಸ್ತ್ರ ಮತ್ತು ಆಭರಣಗಳ ಕುರಿತ ಅಧ್ಯಯನದಲ್ಲಿ ಮುಂದೆ ವಿವರಿಸಲಾಗಿದೆ.

ಮದ್ದಳೆವಾದಕರು

ಮದ್ದಳೆಯನ್ನು ಸಾಮಾನ್ಯವಾಗಿ ದೇವಾಲಯಗಳ ಪೂಜೆ, ಭಜನೆ ಮತ್ತು ಸಂಗೀತ ಸಮಾರಂಭಗಳಲ್ಲಿ ಬಳಸುತ್ತಾರೆ. ಹಾಗಾಗಿ ತಾಳ, ಮದ್ದಳೆಗಳು ದೇವರ ಆರಾಧನೆ, ಪೂಜೆ, ಉತ್ಸವಗಳಲ್ಲಿ ಬಳಕೆ ಆಗುತ್ತಿದ್ದ ಒಂದು ವಾದ್ಯವಾಗಿದ್ದು, ಇದು ಅಬ್ಬರದ ನಾದ ಮೂಡಿಸುತ್ತದೆ.

ಕನಕದಾಸರ ಮೋಹನತರಂಗಿಣಿಯಲ್ಲಿ ಮದ್ದಳೆಯ ಕುರಿತು ಹೀಗೆ ವರ್ಣಿಸಿದೆ

ಭೂರಿಭೂರುಹ ಶಿಖರಿಯನಡರಿತು ಹಕ್ಕಿ
ವಾರಿಜ ಮುಗಿದುವಲ್ಲಲ್ಲಿ
ಭೇರಿ ಮದ್ದಳೆ ಸಂಕು ನಗರಿ ಹೆಗ್ಗಾಳೆಗಳ್
ಚೀರಿದುವಖಿಲ ದೇಗುಲದಿ[೧೭೨]

ಚಾಮರಸನ ಪ್ರಭುಲಿಂಗಲೀಲೆಯಲ್ಲಿ ಮದ್ದಳೆಗಾರನ ವೇಷಭೂಷಣವನ್ನು ಹೀಗೆ ಬಣ್ಣಿಸುತ್ತದೆ.

ಹೂಸಿದಂತಿರೆ ತೊಡೆಹೆ ತುಪ್ಪುಳು
ಮೀಸೆ ಮಿಂಚಿರಲುಟ್ಟ ಪಟ್ಟೆಯ
ಕಾಸೆ ತೋಱುವ ಕನಕದುಡಿನೇವಳ ವಿರಾಜಿಸಲು
ಲೇಸೆನಿಪ ಹದಿನಾಱು ಹಡಿನೆಂ
ಟೈಸು ವರುಷದ ಹರಿಯವೆಂಬ ವಿ
ಳಾಸವೇಷವನಲ್ಲಮಪ್ರಭುಲಿಂಗ ನಟಿಸಿದನು[೧೭೩]

ಈ ಮೇಲಿನ ಸಾಲುಗಳು ಮದ್ದಳೆವಾದಕ ಧರಿಸಿದ್ದ ರೇಷ್ಮೆಯ ಕಾಸೆಕಟ್ಟಿದ ಧೋತ್ರ, ಚಿನ್ನದ ನೇವಳವನ್ನು ಹಾಗೂ ಅವನ ಮೀಸೆ ಮತ್ತು ವಯಸ್ಸನ್ನು ವಿವರಿಸುತ್ತವೆ.

ಅದೇ ಕಾವ್ಯದ ಇನ್ನೊಂದು ಪದ್ಯದಲ್ಲಿ ಈ ಮುಂದಿನಂತೆ ವರ್ಣಿಸಿದೆ.

ತುಱುಬು ಚಿಮ್ಮುರಿ ಚಿಂದಿ ಕಾಸೆಯ
ಸೆಱಗು ನಸುಹೊದೆದೊಲ್ಲಿ ಮಿಂಚುವ
ಮಿಱುಪ ಸುಲಿಪಲ್ಲಿಸಿಯ ಸೆಳ್ಳುಗುರುಲಿವ ಹೊಂದೊಡರು
ಉಱುವ ಗಂಧದ ಲೇಪ ಬೆನ್ನೊಳು
ಮೆಱೆವ ಮದ್ದಳೆಸಹಿತ ಬಂದೀ
ತೆಱನನಲ್ಲಮ ನಟಿಸಿ ನಿಂದನು ವಿಕೃತ ವೇಷದಲ್ಲಿ[೧೭೪]

ಈ ಪದ್ಯದಲ್ಲಿ ಮದ್ದಳೆವಾದಕ ತುರುಬನ್ನು ಹಾಕಿ ಅರ್ಧೋರುಕವನ್ನು ಕಾಸೆಕಟ್ಟಿ ಧರಿಸಿ, ಗಂಧ ಹಚ್ಚಿಕೊಂಡು ಮದ್ದಳೆಯನ್ನು ಬಾರಿಸುತ್ತಿರುವ ಚಿತ್ರಣ ನೀಡುತ್ತದೆ.

ಚಾಮರಸನ ಮತ್ತೊಂದು ಪದ್ಯದಲ್ಲಿ ಈ ಮುಂದಿನಂತೆ ಬಣ್ಣಿಸಿದೆ,

ಎಡದ ಕಿವಿಯಲಿ ಮೆರೆವ ರತ್ನದ
ಕುಡುಕು ತಾಯಿತ ಮಣಿಯ ಸರ ಹೆ
ದ್ದೊಡರ ಸರಪಳಿಗಳ ನೇಲುವ ಬಾವುಲಿಯ ಬೊಂಬೆ
ಮುಡಿಯ ಹೂಸರ ಚುಕ್ಕೆಬೊಟ್ಟಿನ
ಬಿಡಗುಸಹಿತವೆ ಧೂರ್ತವೇಷದ
ತೊಡಹವನು ತೊಟ್ಟಲ್ಲಮಪ್ರಭು ಬಂದು ನಿಂದಿರ್ದ[೧೭೫]

ಈ ಮೇಲಿನ ಸಾಲುಗಳಿಂದ ಮದ್ದಳೆವಾದಕವಾಗಿ ಅಲ್ಲಮಪ್ರಭು ಅಂದರೆ ಶಿವನೇ ಮಾರುವೇಷದಲ್ಲಿ ಬಂದಿದ್ದ ಎಂಬುದಾಗಿ ತಿಳಿಸುತ್ತಾನೆ. ಇಲ್ಲಿ ಮದ್ದಳೆವಾದಕ ಹಾಕಿಕೊಂಡಿದ್ದ ಆಭರಣಗಳಾದ ರತ್ನದ ಕುಡುಕು, ತಾಯಿತ, ಮಣಿಯಸರ, ಬಾವುಲಿ ಮುಂತಾದವುಗಳ ಚಿತ್ರಣ ನೀಡುತ್ತದೆ.

ಚಾಮರಸನು ಮದ್ದಳೆವಾದಕ ಹೇಗೆ ಮದ್ದಳೆಯನ್ನು ಬಾರಿಸುವನು ಎಂದು ಪ್ರಭು ಲಿಂಗಲೀಲೆಯಲ್ಲಿ ಈ ರೀತಿ ವರ್ಣಿಸಿರುವನು. ಅದರಂತೆ,

ನಿಂದು ನಾನಾಪರಿಯ ವಹಣಿಗ
ಳಿಂದ ತಾಳ ಸಮೇಳ ಸದ್ಗತಿ
ಹಿಂದಲುಗ್ಘಡಣೆಯ ಗಡಾವಣೆಯಿಂದಲಲ್ಲಮನು
ಅಂದು ಮಧುಕೇಶ್ವರ ಬಾಗಿಲ
ಮುಂದೆ ಬಾರಿಸುತಿರ್ದನೈ ಹಲ
ವಂದದಲಿ ಮದ್ದಳೆಯ ಕೇಳುವರೆಲ್ಲ ಬೆಜಗಾಗೆ[೧೬]

ಈ ಮೇಲಿನ ಪದ್ಯದಲ್ಲಿ ಮದ್ದಳೆಯವಾದಕನ ಅಬ್ಬರಕ್ಕೆ ಅಲ್ಲಿದ್ದವರೆಲ್ಲಾ ಬೆರಗಾಗಿ ನಿಂತರು ಎಂದು ತಿಳಿಸುತ್ತದೆ.

ಚಾಮರಸನ ಪ್ರಭುಲಿಂಗಲೀಲೆಯ ಮದ್ದಳೆವಾದಕನಿಗೆ ಸಂಬಂಧಿಸಿದ ಪದ್ಯಗಳ ವಿವರಗಳಿಗೆ ಲೇಪಾಕ್ಷಿ ವೀರಭದ್ರ ದೇವಾಲಯದ ಮಹಾಮಂಟಪದ ಸ್ತಂಭಶಿಲ್ಪದಲ್ಲಿರುವ (ಚಿತ್ರ-೨೫) ಮದ್ದಳೆವಾದಕ ಶಿಲ್ಪದ ಚಿತ್ರಣ ಇಂಬು ನೀಡುತ್ತದೆ ಇಲ್ಲಿ ಶಿವನು ಮದ್ದಳೆವಾದಕನಾಗಿ, ಜಟಾಧಾರಿಯಾಗಿ ತುರುಬನ್ನು ಕಟ್ಟಿದ್ದು, ತುರುಬಿನ ಮೇಲೆ ಸರ್ಪವು ಸುತ್ತಿಕೊಂಡಿದೆ. ನಾಗಕುಂಡಲವನ್ನು ಒಳಗೊಂಡಂತೆ ರುದ್ರಾಕ್ಷಿ ಸರ, ತೋಳ್ಬಂಧಿ, ಹಸ್ತಸರ ಹಾಗೂ ಕೈನ ಎಲ್ಲ ಬೆರಳುಗಳಿಗೆ ಉಂಗುರಗಳಿವೆ. ಶಿವನನ್ನು ಮದ್ದಳೆವಾದಕನಾಗಿ ಚಿತ್ರಿಸಿರುವುದರಿಂದ ಶಿಲ್ಪಿಯು ಈ ಶಿಲ್ಪಕ್ಕೆ ಶ್ರೀಮಂತ ಅಲಂಕರಣೆಯನ್ನು ಮಾಡಿದ್ದಾನೆ ಎಂದೆನಿಸುತ್ತದೆ.

ಹಂಪಿಯ ವಿರೂಪಾಕ್ಷ ದೇವಾಲಯದಲ್ಲಿನ ನವರಂಗದ ಉತ್ತರ ದ್ವಾರದ ಶಿಲ್ಪಪಟ್ಟಿಕೆಯಲ್ಲಿ ಮದ್ದಳೆ, ತಾಳವಾದಕರ ಹಾಗೂ ನೃತ್ಯ ಮಾಡುತ್ತಿರುವ ಸ್ತ್ರೀ ಶಿಲ್ಪಗಳ ಚಿತ್ರಣವಿದೆ (ಚಿತ್ರ-೨೪). ಅದರಲ್ಲಿ ಮದ್ದಳೆ ಬಾರಿಸುತ್ತಿರುವ ವ್ಯಕ್ತಿ ತಲೆಯ ತುರುಬನ್ನು ಎಡಭಾಗಕ್ಕೆ ಕಟ್ಟಿದ್ದು, ಕುಂಡಲಗಳನ್ನು ಧರಿಸಿದ್ದಾನೆ. ಕಾಸೆ ಹಾಕಿ ಉಟ್ಟ ಧೋತ್ರ ಅರ್ಧೋರುಕವಾಗಿದ್ದು, ವಲ್ಲಿಯನ್ನು ನಡುಭಾಗದಲ್ಲಿ ಧೋತ್ರದ ಮೇಲೆ ಗಂಟು ಹಾಕಿದ್ದಾನೆ. ಧೋತ್ರದ ಅಂಚುಗಳು ಪಾದಭಾಗದವರೆಗೂ ಎರಡು ಕಾಲುಗಳ ಮಧ್ಯೆ ಇಳಿಬಿದ್ದಿರುವುದು ಕಂಡುಬರುತ್ತದೆ. ಚಾಮರಸನು ವರ್ಣಿಸಿರುವ ಮದ್ದಳೆವಾದಕನ ವಸ್ತ್ರ ಮತ್ತು ಆಭರಣಗಳಿಗೆ ಈ ಶಿಲ್ಪವು ಪುಷ್ಠಿ ನೀಡುವಂತಿದೆ. ಅದೇ ದೇವಾಲಯದ ಮತ್ತೊಂದು ಶಿಲ್ಪದಲ್ಲಿ ಮದ್ದಳೆವಾದಕ ಉದ್ದ ತೋಳಿನ ನಿಲುವಂಗಿಯನ್ನು ಧರಿಸಿದ್ದಾನೆ. ಉದ್ದನೆಯ ಕುಲಾಯಿ, ಕಾಸೆ ಕಟ್ಟಿದ ಅರ್ಧೋರುಕವನ್ನು ಕಂಡುಬರುತ್ತದೆ. ಅಲ್ಲದೆ ದಪ್ಪ ಕಾಲ್ಕಡಗ ಮತ್ತು ಕರ್ಣಕುಂಡಲಗಳನ್ನು ಕಾಣಬಹುದು.

ಲೇಪಾಕ್ಷಿಯ ವೀರಭದ್ರ ದೇವಾಲಯದ ದ್ವಾರಬಂಧದಲ್ಲಿರುವ ಶಿಲ್ಪಪಟ್ಟಿಕೆಯಲ್ಲಿರುವ ಮದ್ದಳೆವಾದಕ ಶಿಲ್ಪವು ಶ್ರೀಮಂತವಾಗಿ ಅಲಂಕರಣೆಗೊಂಡಿದೆ. ಈ ಶಿಲ್ಪದಲ್ಲಿ ಮದ್ದಳೆವಾದಕನು ತುರುಬನ್ನು ತಲೆ ಮೇಲೆ ಎತ್ತರವಾಗಿ ಗಂಟು ಹಾಕಿದ್ದು, ಕೊರಳಲ್ಲಿ ಒಂದೆಳೆ ಮಣಿಯ ಸರ ಧರಿಸಿದ್ದು, ಪಾದಗಳವರೆಗೆ ಕಾಸೆ ಹಾಕಿದ ಪೂರ್ಣೋರುಕ ಧೋತ್ರ, ಧೋತ್ರದ ಕುಚ್ಚುಗಳು ಇಳಿಬಿದ್ದಿರುವುದು ಕಾಣಬಹುದು. ಈ ಶಿಲ್ಪದ ಮದ್ದಳೆವಾದಕನು ದೇವಾಲಯ ಪೂಜಾಕಾರ್ಯಗಳಲ್ಲಿ ಮದ್ದಳೆ ನುಡಿಸಲು ನೇಮಕ ಗೊಂಡಿರುವಂತಿದ್ದು, ಅವನ ಉಡುಪು ಮತ್ತು ಆಭರಣ ವಿಶೇಷವಾಗಿವೆ.

ಶ್ರೀಶೈಲ ಮಲ್ಲಿಕಾರ್ಜುನ ದೇವಾಲಯದ ಪ್ರಾಕಾರದ ಶಿಲ್ಪಪಟ್ಟಿಕೆಯಲ್ಲಿ ಮದ್ದಳೆವಾದಕ ಅರ್ಧೋರುಕವನ್ನು ಮೊಣಕಾಲಿನವರೆಗೆ ಧರಿಸಿದ್ದು, ಮುಂಗೈ ಕಡಗಗಳು, ಮಣಿಸರ ಹಾಗೂ ಮದ್ದಳೆಯನ್ನು ತನ್ನ ನಡುಪಟ್ಟಿಗೆ ಭದ್ರವಾಗಿ ಸೇರಿಸಿಕೊಂಡಿರುವ ದೃಶ್ಯ ಹಾಗೂ ಮದ್ದಳೆಯನ್ನು ಕಟ್ಟಿಕೊಳ್ಳುವ ಪಟ್ಟಿಯು ಸರಪಳಿಯಂತಿದ್ದು, ಎಡಭುಜದಿಂದ ಬಲ ಸೊಂಟದ ಭಾಗದವರೆಗೆ ಯಜ್ಞೋಪವೀತದ ಮಾದರಿಯಲ್ಲಿ ಹಾಕಿಕೊಂಡಿರುವುದು ಸ್ಪಷ್ಟವಾಗಿ ಕಂಡು ಬರುತ್ತದೆ. ಚಾಮರಸನ ಮದ್ದಳೆವಾದಕನ ವಿವರಣೆಯ ಪದ್ಯ ಈ ಶಿಲ್ಪಕ್ಕೆ ವಿವರಣೆ ಹಾಗೂ ಸಮರ್ಥನೆಯನ್ನು ನೀಡುತ್ತದೆ. ಒಟ್ಟಾರೆ ಮದ್ದಳೆವಾದಕನು ಎತ್ತರದ ತುರುಬು, ಅರ್ಧೋರುಕ ಅಥವಾ ಪೂರ್ಣೋರುಕ ಧೋತ್ರವನ್ನು ಧರಿಸುತ್ತಿದ್ದು, ಒಂದೇ ಅಳತೆಯ ವಸ್ತ್ರವನ್ನು ಧರಿಸುತ್ತಿರಲಿಲ್ಲ ಎಂಬುದು ಇದರಿಂದ ತಿಳಿಯುತ್ತದೆ. ದೇವಾಲಯ ಪೂಜಾ ಕಾರ್ಯಗಳ ಸಂದರ್ಭದಲ್ಲಿ ಮದ್ದಳೆವಾದಕರು ಪೂರ್ಣೋರುಕ ಧೋತ್ರ ಧರಿಸುತ್ತಿದ್ದರು ಎಂದು ಸ್ಪಷ್ಟ ವಾಗಿ ತಿಳಿಯಬಹುದಾಗಿದೆ.

ಡೋಲುವಾದಕರು

ಡೋಲು ಒಂದು ಬಗೆಯ ಚರ್ಮವಾದ್ಯ. ವಿವಾಹ ಸಂದರ್ಭ, ದೇವಾಲಯ ಪೂಜಾ ಕಾರ್ಯಗಳಲ್ಲಿ ಅಗತ್ಯವಾಗಿ ಬಳಸುವ ಮಂಗಳವಾದ್ಯಗಳಲ್ಲಿ ಒಂದಾಗಿದೆ. ನ್ಯೂನಿಜ್ ಡೋಲಿನ ಬಳಕೆಯ ಸಂದರ್ಭವನ್ನು ಉಲ್ಲೇಖಿಸುತ್ತಾನೆ. ಅವನು ಹೇಳುವಂತೆ, "ಡೋಲು ಯುದ್ಧ ಸಮಯದಲ್ಲಿ ರಣಭೇರಿಯನ್ನು ಬಾರಿಸುವ ಸಂದರ್ಭದಲ್ಲಿಯೂ ಬಳಸುತ್ತಾರೆ".[೧೭೭] ಎರಡನೆ ದೇವರಾಯನ ಶಾಸನವೊಂದರಲ್ಲಿ ಇತರ ವಾದ್ಯಗಾರರೊಂದಿಗೆ ಡೋಲು ಬಾರಿಸುವವರಿಗೆ ದಾನನೀಡಿರುವ ವಿವರಗಳನ್ನು ಈಗಾಗಲೇ ಗಮನಿಸಿದ್ದೇವೆ.[೧೭೮] ಡೋಲು ವಾದಕರ ವಸ್ತ್ರ ಮತ್ತು ಆಭರಣಗಳನ್ನು ತಿಳಿಯಲು ಸ್ಮಾರಕ ಶಿಲ್ಪಗಳು ಪ್ರಮುಖ ಆಕರಗಳಾಗಿವೆ.

ಶ್ರೀಶೈಲ ಮಲ್ಲಿಕಾರ್ಜುನ ದೇವಾಲಯದ ಪ್ರಾಕಾರದಲ್ಲಿರುವ ಶಿಲ್ಪಪಟ್ಟಿಕೆಯೊಂದರಲ್ಲಿ ಡೋಲು ಬಾರಿಸುತ್ತಿರುವವರ ತಂಡವಿದೆ (ಚಿತ್ರ–೨೬). ಇವರು ಯಾವುದೋ ಉತ್ಸವ ಅಥವಾ ಹಬ್ಬದ ಸಂದರ್ಭದಲ್ಲಿ ಪಥ ಸಂಚಲನದಂತೆ ಮುಂದೆ ಸಾಗುತ್ತಿರುವುದನ್ನು ಗಮನಿಸಿದರೆ ಇವರು ವೃತ್ತಿನಿರತವಾದಕರು ಎಂಬುದು ಸ್ಪಷ್ಟವಾಗುತ್ತದೆ. ತಮ್ಮ ನಡುಭಾಗದಲ್ಲಿ ಡೋಲನ್ನು ಬಿಗಿಯಾಗಿ ಕಟ್ಟಿಕೊಂಡು ಯಜ್ಞೋಪವೀತದ ಮಾದರಿಯಲ್ಲಿ ಹೆಗಲಿಗೆ ಡೋಲು ಕಟ್ಟಿರುವ ಪಟ್ಟಿಯನ್ನು ಹಾಕಿಕೊಂಡಿದ್ದಾರೆ. ಬಲಗೈಯಲ್ಲಿ ಸಣ್ಣ ಕೋಲನ್ನೊಂದನ್ನು ಹಿಡಿ ದಿದ್ದು, ಮತ್ತೊಂದು ಕೈಯಲ್ಲಿ ಡೋಲನ್ನು ಬಾರಿಸುತ್ತಿರುವ ದೃಶ್ಯವಿದೆ. ಕಾಸೆಹಾಕಿ ಉಟ್ಟ ಧೋತ್ರ ಮೊಣಕಾಲಿನವರೆಗೂ (ಅರ್ಧೋರುಕ) ಇದ್ದು, ಅವುಗಳ ನಿರಿಗೆಗಳೂ ಸ್ಪಷ್ಟವಾಗಿ ಕಂಡುಬರುತ್ತದೆ. ಅಲ್ಲದೇ ಎರಡು ತೊಡೆಗಳ ಮಧ್ಯೆ ನಿರಿಗೆಗಳು ಕುಚ್ಚುಗಳು ಇಳಿ ಬಿದ್ದಿರುವುದನ್ನು ಕಾಣಬಹುದು. ದೇಹದ ಮೇಲ್ಭಾಗಕ್ಕೆ ಯಾವುದೇ ವಸ್ತ್ರಗಳನ್ನು ಧರಿಸಿಲ್ಲ. ತಲೆ ತುರುಬು ಕಟ್ಟಿದ್ದು, ಎಡಗಿವಿ ಮಾತ್ರ ಕಾಣುವಂತಿದ್ದು ಅದರಲ್ಲಿ ಕುಂಡಲಗಳನ್ನು ಮತ್ತು ಕಂಠಾಭರಣ ಧರಿಸಿದ್ದಾರೆ. ಅದೇ ಪಟ್ಟಿಕೆಯ ಮತ್ತೊಂದು ಶಿಲ್ಪದಲ್ಲಿ ಕಂಠಪಟ್ಟಿಯಲ್ಲಿ ತಾಯತ ಕಟ್ಟಿರುವುದು ಕಂಡುಬರುತ್ತದೆ. ಉಳಿದಂತೆ ಆಭರಣಗಳಲ್ಲಿ ವಿಶೇಷತೆಯಿಲ್ಲ.

ತಾಳವಾದಕರು

ತಾಳವಾದ್ಯಗಳ ಮತ್ತೊಂದು ಹೆಸರು ಘನವಾದ್ಯಗಳೆಂದು ಇವು ಲೋಹದಿಂದ(ಕಂಚು) ಮಾಡಲ್ಪಟ್ಟ ವಾಗಿವೆ. ತಾಳವಾದ್ಯಗಳು ಸಾಮಾನ್ಯವಾಗಿ ಸಂಗೀತ ಮೇಳಗಳಲ್ಲಿ ನೃತ್ಯಾಭಿನಯ ಸಂದರ್ಭಗಳಲ್ಲಿ ಬಳಕೆಯಾಗುವ ಸಮೂಹವಾದ್ಯವಾಗಿದೆ. ಕನಕದಾಸರ ಮೋಹನತರಂಗಿಣಿ[೧೭೯] ಮತ್ತು ಚಾಮರಸನ ಪ್ರಭುಲಿಂಗಲೀಲೆಯಲ್ಲಿ[೧೮೦] ತಾಳವಾದ್ಯದ ಬಗೆಗೆ ಉಲ್ಲೇಖಿಸಿರುವುದನ್ನು ಈಗಾಗಲೇ ತಿಳಿದಿದ್ದೇವೆ. ವಿದೇಶಿ ಪ್ರವಾಸಿ ಪಾಯೇಸ್‌ನು ದಾಖಲಿಸಿದಂತೆ, ಮಹಾನವಮಿ ಉತ್ಸವದ ಸಂದರ್ಭದಲ್ಲಿ ರಾಜನ ಮುಂದೆ ಅನೇಕ ಕಲಾ ಪ್ರದರ್ಶನಗಳನ್ನು ಪ್ರದರ್ಶಿಸುತ್ತಾರೆ. ಅವುಗಳಲ್ಲಿ ಓಲಗ, ಮೌರಿ, ಡೋಲು, ತಾಳ, ಮದ್ದಳೆಗಳನ್ನು ಬಾರಿಸುತ್ತ ಅನೇಕ ಸ್ತ್ರೀಯರು ತಮ್ಮ ಕಲೆ ಪ್ರದರ್ಶಿಸುತ್ತಿದ್ದರು[೧೮೧] ಎಂದು ವಿವರಿಸಿದ್ದಾನೆ. ತಾಳವಾದನವು ಸಾಮಾನ್ಯವಾಗಿ ಸಮೂಹವಾದನಗಳಲ್ಲಿ ಒಂದೆಂದು ಹೇಳಬಹುದಾಗಿದೆ. ತಾಳವಾದಕರ ವಸ್ತ್ರ ಮತ್ತು ಆಭರಣದ ಕುರಿತು ತಿಳಿಯಲು ಶಿಲ್ಪಗಳು ಸಹಾಯಕವಾಗಿವೆ.

ಹಂಪಿಯ ವಿರೂಪಾಕ್ಷ ದೇವಾಲಯದ ನವರಂಗದ ಉತ್ತರ ದ್ವಾರದ ಎಡಭಾಗದ ಗೋಡೆಯ ಮೇಲಿನ ಪಟ್ಟಿಕೆಯಲ್ಲಿ ಮದ್ದಳೆ, ತಾಳವನ್ನು ನುಡಿಸುತ್ತಿರುವ ಹಾಗೂ ನೃತ್ಯ ಮಾಡುತ್ತಿರುವ ಮೂರು ಉಬ್ಬು ಶಿಲ್ಪಗಳು ಒಂದೇ ಪಟ್ಟಿಕೆಯಲ್ಲಿವೆ. ಅದೇ ದೇವಾಲಯದ ಇನ್ನೊಂದು ಶಿಲ್ಪದಲ್ಲಿ (ಚಿತ್ರ-೨೭) ತಾಳವಾದಕ ತನ್ನ ಎರಡು ಕೈಗಳಲ್ಲಿ ಬಟ್ಟಲು ತಾಳವನ್ನು ಹಿಡಿದಿದ್ದು, ತಾಳಗಳಿಗೆ ಸೇರಿಸಿರುವ ದಾರದ ಗೊಂಚಲು ಗೆಜ್ಜೆಗಳಿಂದ ಕೂಡಿದ್ದು, ಗೆಜ್ಜೆಗಳಿಂದ ಕೂಡಿದ ಕುಚ್ಚುಗಳು ವಿವಿಧ ಹಂತಗಳಲ್ಲಿವೆ. ಅವು ಒಂದರ ಕೆಳಗೆ ಒಂದು ಇಳಿಬಿದ್ದಿವೆ. ತಲೆಯ ತುರುಬನ್ನು ಹಾಕಿದ್ದು, ಉದ್ದ ತೋಳಿನ ಮೊಣಕಾಲಿನವರೆಗೆ ಇರುವ ನಿಲುವಂಗಿ (ಕೋಟ್ ಮಾದರಿಯಲ್ಲಿ) ಧರಿಸಿದ್ದಾನೆ. ನಿಲುವಂಗಿಯು ಗುಂಡಿಗಳಿಂದ ಕೂಡಿದೆ. ಉದ್ದವಾದ ಚಲ್ಲಣ (ಪ್ಯಾಂಟ್)ಗಳನ್ನು ಪಾದಗಳವರೆಗೆ ಧರಿಸಿದ್ದಾನೆ. ನಿಲುವಂಗಿ ನೋಡಲು ಸುಂದರವಾಗಿದೆ. ಇದರೊಂದಿಗೆ ಕರ್ಣಕುಂಡಲಗಳನ್ನು ಧರಿಸಿರುವುದು ಕಂಡುಬರುತ್ತದೆ.

ಲೇಪಾಕ್ಷಿಯ ದ್ವಾರಬಂಧದ ಶಿಲ್ಪಪಟ್ಟಿಕೆಯಲ್ಲಿ ಮೃದಂಗವಾದಕನೊಂದಿಗೆ ತಾಳ ವಾದಕ ನಿಂತಿದ್ದು, ಆತನು ಧರಿಸಿರುವ ಕುಲಾಯಿ ರಾಜನು ಧರಿಸುತ್ತಿದ್ದ ಕುಲಾಯಿಗಿಂತ ಉದ್ದ ಕಡಿಮೆಯಿದ್ದು, ಅದೇ ಮಾದರಿಯಲ್ಲಿದೆ. ರಿಂಗ್ ಮಾದರಿಯ ಕುಂಡಲಗಳನ್ನು ಹಾಗೂ ಮೊಣಕಾಲಿನವರೆಗೆ ಕಾಸೆ ಕಟ್ಟಿದ ಧೋತ್ರವನ್ನು ಧರಿಸಿದ್ದು, ಧೋತ್ರದ ನಡುಭಾಗ ದಲ್ಲಿ ಉತ್ತರೀಯ ಗಂಟುಹಾಕಿರುವುದನ್ನು ಗಮನಿಸಬಹುದಾಗಿದೆ. ಶ್ರೀಶೈಲ ಮಲ್ಲಿಕಾರ್ಜುನ ದೇವಾಲಯದ ಪ್ರಾಕಾರದ ಶಿಲ್ಪ ಪಟ್ಟಿಕೆಯೊಂದರಲ್ಲಿ ನೃತ್ಯಗಾರ್ತಿ ಯರೊಂದಿಗೆ ತಾಳ ಮತ್ತು ಕೊಳಲುವಾದಕರ ಶಿಲ್ಪಗಳಿವೆ. ಈ ತಾಳವಾದಕನ ಕೈಯಲ್ಲಿರುವ ತಾಳಗಳನ್ನು ದಾರಕ್ಕೆ ಸೇರಿಸಿದ್ದು ದಾರದ ಕೆಳತುದಿಯಲ್ಲಿ ಗಂಟುಹಾಕಿರುವುದನ್ನು ಗಮನಿಸಬಹುದಾಗಿದೆ. ಈ ತಾಳವಾದಕ ತುರುಬು ಕಟ್ಟಿದ್ದು, ಅಧೋರುಕದಲ್ಲಿ ಧೋತ್ರ ಧರಿಸಿದ್ದು, ಅದರ ಮೇಲೆ ಉತ್ತರೀಯ ಕಟ್ಟಿದ್ದಾನೆ. ಆಭರಣಗಳಲ್ಲಿ ಮುತ್ತುಗಳಿರುವ ಸಣ್ಣ ವೃತ್ತಕುಂಡಲ, ಮೂರೆಳೆಯ ಮುತ್ತಿನ ಸರ, ಎರಡೆಳೆಯ ಮುಂಗೈ ಕಡಗಗಳನ್ನು ಧರಿಸಿರುವನು.

ಒಟ್ಟಾರೆ ತಾಳವಾದಕರ ವಸ್ತ್ರ ಮತ್ತು ಆಭರಣದ ಧಾರಣೆಯಲ್ಲಿ ಒಂದೇ ರೀತಿಯಾಗಿಲ್ಲವೆಂಬುದು ಸ್ಪಷ್ಟವಾಗುತ್ತದೆ. ಹಂಪಿಯ ವಿರೂಪಾಕ್ಷ ದೇವಾಲಯದ ತಾಳವಾದಕನ ವಸ್ತ್ರವು ನಿಲುವಂಗಿ ಮತ್ತು ಪ್ಯಾಂಟ್(ಪಾದ ಚಲ್ಲಣಗಳು) ರಾಜನ ವಸ್ತ್ರದ ಮಾದರಿಯನ್ನು ನೆನಪಿಸುತ್ತವೆ.

ಕೊಳಲುವಾದಕರು

ಕೊಳಲು ಒಂದು ಬಗೆಯ ಗಾಳಿವಾದ್ಯವಾಗಿದ್ದು, ಬಿದಿರಿನಿಂದ ತಯಾರಿಸಿದ ವಾದ್ಯ. ಕೊಳಲು ಸಂಗೀತ ಸಾಧನಗಳಲ್ಲಿ ಮುಖ್ಯ ಪಾತ್ರವಹಿಸುತ್ತದೆ. ಹಾಗೂ ಅದರ ನಾದ ಕೇಳಲು ಇಂಪಾಗಿರುತ್ತದೆ. ಚಂದ್ರಕವಿಯು 'ವಿರುಪಾಕ್ಷಸ್ಥಾನ ವರ್ಣನಂ' ಕೃತಿಯಲ್ಲಿ ಕೊಳಲುವಾದಕನ ಕುರಿತು ಹೀಗೆ ವರ್ಣಿಸಿದೆ: "ರಾಗಗಳನ್ನು ಸ್ವಸ್ಥಾನ ಚತುಷ್ಪಯದಿಂ ನೆಲೆಗೊಳಿಸಿ, ವಾದಿ ಸಂವಾದಿ ಅನುವಾದಿ ವಿವಾದಿ ಎಂಬ ಸ್ವರಂಗಳ ಸುಳುಹಿನಿಂ ಬಜಾ ತೆರಳಿಕೆ ತಡವರಿಸದಂತೆ, ಲವಣಿಯಲುಳಿ ಉಳಿಯದಂತೆ, ತಾನದ ಹರವು ಹೀನವಾಗದಂತೆ, ರಾಗದ ರಂಗು ಹಿಂಗದಂತೆ, ರೂಪದ ರೇಖೆ ಕೆಡದಂತೆ ಮೇಳದ ಮೈಸಿರಿ ಮೇರೆದಪ್ಪದಂತೆ ಕೇಳ್ವರ ಕಿವಿಯಂ, ಜಕ್ಕುಲಿಸುವಂತೆ ಬಿನ್ನಣದಿಂ ಬಾಜಿಸುತಿರ್ದಂ..."[೧೮೨] ಎಂಬುದಾಗಿ ಕೊಳಲು ಊದುವಾಗ ರಾಗಗಳನ್ನು ಒಂದಕ್ಕೊಂದು ಜೋಡಿಸಿ ಅರ್ಥ ಕೆಡದಂತೆ, ಕೇಳುಗರಿಗೆ ಮೈನವಿ ರೇಳಿಸುವಂತೆ ಸ್ವರಗಾನ ಹೊರಹೊಮ್ಮಿಸುವನು ಎಂದು ವಿವರಿಸಿದೆ. ಹಾಗೆಯೇ ನಿಕೊಲೊ-ದೆ-ಕಾಂತಿಯು ಸಾಮಾಜಿಕ ಸಂದರ್ಭಗಳಲ್ಲಿ ಕೊಳಲುವಾದನದ ಕುರಿತು ದಾಖಲಿ ಸಿದ್ದಾನೆ.[೧೮೩]

ಹಂಪಿಯ ಹಜಾರ ರಾಮಚಂದ್ರ ದೇವಾಲಯದಲ್ಲಿನ ಉಬ್ಬು ಶಿಲ್ಪದಲ್ಲಿ ಕೊಳಲು ವಾದಕನು ಕೊಳಲನ್ನು ನುಡಿಸುತ್ತಿರುವನು. ಅವನ ಜಟೆಯು ಚದುರಿದ್ದು, ಮದ್ಯಮಣಿ ಯಿರುವ ವೃತ್ತಕುಂಡಲ, ಎರಡೆಳೆಯ ಬಾಹುಬಂಧಿ ಮತ್ತು ಮುಂಗೈ ಕಡಗಗಳು ಸಾದಾ ವಿನ್ಯಾಸದಲ್ಲಿವೆ. ಸಾದಾ ಕಾಲ್ಕಡಗ ಧರಿಸಿದ್ದಾನೆ. ಅಧೋರ್ರುಕವನ್ನು ಧರಿಸಿದ್ದು, ಉತ್ತರೀಯವನ್ನು ಧೋತ್ರದ ಮೇಲೆ ಗಂಟು ಹಾಕಿದ್ದಾನೆ. ಮೇಖಲೆಯನ್ನು ಧರಿಸಿರುವುದು ಗಮನಿಸಬಹುದು. ಶ್ರೀಶೈಲ ಮಲ್ಲಿಕಾರ್ಜುನ ದೇವಾಲಯದ ಪ್ರಾಕಾರದಲ್ಲಿರುವ ಶಿಲ್ಪಪಟ್ಟಿಕೆಯೊಂದರಲ್ಲಿ (ಚಿತ್ರ-೨೮) ಕೊಳಲು, ತಾಳವಾದನಗಳೊಂದಿಗೆ ನೃತ್ಯ ಮಾಡುತ್ತಿರುವ ಸ್ತ್ರೀಯ ಚಿತ್ರಣವಿದೆ. ಈ ಶಿಲ್ಪದಲ್ಲಿರುವ ಕೊಳಲುವಾದಕನು ತುರುಬನ್ನು ಹಾಕಿ ಅದಕ್ಕೆ ಒಂದು ದಾರವನ್ನು ಬಿಗಿಯಾಗಿ ಕಟ್ಟಿದಂತಿದೆ. ಒಂದು ಮಣಿಯಿರುವ ರಿಂಗ್ ಮಾದರಿಯ ಕರ್ಣ ಕುಂಡಲ ಧರಿಸಿದ್ದಾನೆ. ಮುತ್ತಿನ ಎರಡೆಳೆಯ ಸರ, ಮುಂಗೈಗೆ ಸಾದಾ ಕಡಗಗಳನ್ನು ಧರಿಸಿದ್ದಾನೆ. ಕಾಸೆಕಟ್ಟಿದ ಧೋತ್ರ(ಅಧೋರ್ರುಕ) ಮೊಣಕಾಲಿನವರೆಗೆ ಧರಿಸಿದ್ದು, ಅದರ ಕುಚ್ಚುಗಳು ಮುಂದೆ ತೂಗಾಡುತ್ತಿವೆ. ಅಲ್ಲದೆ, ಧೋತ್ರದ ಮೇಲೆ ದ್ವಿಪದಿಯಲ್ಲಿ ಸೊಂಟ ಪಟ್ಟಿಯನ್ನು ಕಟ್ಟಿದ್ದಾನೆ. ಈ ಶಿಲ್ಪದ ಆಭರಣದ ವಿಶೇಷತೆ ರಿಂಗ್ ಮಾದರಿಯ ಕುಂಡಲವಾಗಿದೆ.

ಏಕತಾರಿ ನುಡಿಸುವವರು

ಇದು ಒಂದು ತಂತಿವಾದ್ಯವಾಗಿದೆ. ಲೇಪಾಕ್ಷಿಯ ದ್ವಾರಬಂಧದ ಶಿಲ್ಪಪಟ್ಟಿಕೆ ಯೊಂದರಲ್ಲಿ ಏಕತಾರಿ ನುಡಿಸುತ್ತಿರುವ ವಾದ್ಯಾಗಾರನ ಉಬ್ಬುಶಿಲ್ಪವಿದೆ. ಈ ಶಿಲ್ಪದಲ್ಲಿ ವಾದಕ ಧರಿಸಿರುವ ವಸ್ತ್ರಗಳು ಉದ್ದತೋಳಿನ ನಿಲುವಂಗಿಯನ್ನು, ಪಾದಗಳವರೆಗೆ ಚಲ್ಲಣಗಳನ್ನು (ಪ್ಯಾಂಟ್) ಧರಿಸಿದ್ದಾನೆ. ಕಟಿಭಾಗದಲ್ಲಿ ಉತ್ತರೀಯವನ್ನು ಗಂಟುಹಾಕಿ ಕಟ್ಟಿಕೊಂಡಿರುವುದು ಸ್ಪಷ್ಟವಾಗಿ ಕಂಡುಬರುತ್ತದೆ. ಅಲ್ಲದೇ ತುರುಬನ್ನು ತಲೆಯ ಮೇಲ್ಭಾಗದಲ್ಲಿ ಎತ್ತರವಾಗಿರುವಂತೆ ಗಂಟು ಹಾಕಿದ್ದು, ನೇತಾಡುವ ಕುಂಡಲಗಳನ್ನು ಎಡಗಿವಿಗೆ ಧರಿಸಿರುವುದು ಕಂಡು ಬರುತ್ತದೆ. ಉಳಿದಂತೆ ಆಭರಣಗಳು ಅಸ್ಪಷ್ಟ. ಈ ವಾದಕನ ವಸ್ತ್ರಧಾರಣೆಯು ದಂಡನಾಯಕನ ವಸ್ತ್ರಗಳನ್ನು ಪ್ರತಿಬಿಂಬಿಸುವಂತಿದೆ. ವಾದ್ಯಾಗಾರರು ರಾಜಾಶ್ರಯವನ್ನು ಪಡೆದಿದ್ದರು ಎಂಬುದಕ್ಕೆ ಈ ಶಿಲ್ಪದಲ್ಲಿನ ವಸ್ತ್ರಧಾರಣೆಯ ವಿಧಾನ ನಿದರ್ಶನವಾಗಿದೆ. ಏಕತಾರಿ ಯನ್ನು ಸ್ತ್ರೀಪುರುಷರಿಬ್ಬರೂ ನುಡಿಸುತ್ತಿದ್ದರು. ಸ್ತ್ರೀಯರಿಗೆ ಸಂಬಂಧಿಸಿದ ಉಪ ಶೀರ್ಷಿಕೆಯಲ್ಲಿ ಏಕತಾರಿ ನುಡಿಸುತ್ತಿರುವ ಸ್ತ್ರೀಯರ ವಸ್ತ್ರ ಮತ್ತು ಆಭರಣಗಳ ಕುರಿತು ಚರ್ಚಿಸಲಾಗಿದೆ.

ನಾದಸ್ವರವಾದಕರು

ನಾದಸ್ವರವನ್ನು ನಾಗಸ್ವರ, ಓಲಗ, ಮೇಳ ಮುಂತಾದ ಹೆಸರುಗಳಿಂದ ಕರೆಯುತ್ತಾರೆ. ಇದೊಂದು ಮಂಗಳವಾದ್ಯವಾಗಿದ್ದು, ದೇವಾಲಯ ಪೂಜಾಕಾರ್ಯ, ಉತ್ಸವ, ವಿವಾಹ ಮುಂತಾದ ಸಾಮಾಜಿಕ ಸಂದರ್ಭಗಳಲ್ಲಿ ನಾದಸ್ವರ, ಡೋಲು ಒಟ್ಟೊಟ್ಟಿಗೆ ನುಡಿಸುವ ವಾದ್ಯಗಳಾಗಿವೆ.

ರಾಮನಾಥ ಚರಿತೆಯಲ್ಲಿ ಓಲಗ ಶಾಲೆಯ ಉಲ್ಲೇಖವನ್ನು ಕಾಣಬಹುದಾಗಿದೆ. ಅದರಲ್ಲಿ ಉಲ್ಲೇಖಿಸುವಂತೆ ರತ್ನಾಜಿಯು ಮಾನಸಿಕವಾಗಿ ಬಳಲಿದ್ದು, ಬೇಸರ ಕಳೆಯಲು ನಾಟಕಶಾಲೆ, ವಿನೋದ ಶಾಲೆಗಳಿಗೆ ಹೋಗುತ್ತಾಳೆ ಎಂದು ವಿವರಿಸುತ್ತದೆ. ಅದರಂತೆ,

ಲೀಲೆ ಮನಸಿನೊಳಗಿಲ್ಲದವಳು ಚಿತ್ರ
ಶಾಲೆ ನಾಟಕಶಾಲೆಗಳೊಳು
ಓಲಗಶಾಲೆ ವಿನೋದ ಶಾಲೆಗಳೊಳು
ಲೋಲಲೋಚನೆ ತೊಳಲಿದಳು[೧೮೪] ಎಂಬುದಾಗಿ ತಿಳಿಸುತ್ತದೆ.

ಅದೇ ಕಾವ್ಯದ ಇನ್ನೊಂದು ಪದ್ಯದಲ್ಲಿ ನಾದಸ್ವರವನ್ನು ಉಲ್ಲೇಖಿಸಲಾಗಿದೆ.

ಗಗ್ಗಱವಿಜೆ ಗಿಡಿಬಿಡಿ ತೂಳುವಜೆ ಚೆನ್ನ
ಬೊಗ್ಗಿನ ಹಜೆ ಜಿನಗಹಳೆ
ಹೆಗ್ಗಾಳೆ ಬುರುಗು ಮದ್ದಳೆ ನಾಗಸರಗಳ
ಮೊಗ್ಗರವು ಹತ್ತು ಹತ್ತು[೧೮೫]

ಎಂಬುದಾಗಿ ವಿವಿಧ ವಾದ್ಯಗಳೊಂದಿಗೆ ನಾಗಸ್ವರವನ್ನು ಉಲ್ಲೇಖಿಸುತ್ತದೆ.

ಪಾಯೇಸ್‌ನು ಮಹಾನವಮಿ ಉತ್ಸವದ ಸಂದರ್ಭದಲ್ಲಿ ರಾಜನ ಮುಂದೆ ತಮ್ಮ ತಮ್ಮ ಕಲೆಗಳ ಪ್ರದರ್ಶನವನ್ನು ಮಾಡುತ್ತಿದ್ದ ಬಗೆಯನ್ನು ವಿವರಿಸುತ್ತ, "ಓಲಗ, ಮೌರಿ, ಡೋಲು,

ತಾಳಮದ್ದಳೆ ಬಾರಿಸುತ್ತಾ ಅನೇಕ ಸ್ತ್ರೀಯರು ತಮ್ಮ ಕಲೆಗಳನ್ನು ಪ್ರದರ್ಶಿಸು ತ್ತಾರೆ"[೧೮] ಎಂದು ದಾಖಲಿಸಿದ್ದಾನೆ. ಪಾಯೇಸ್ ವಿವರಣೆಯಿಂದ ನಾಗಸ್ವರವನ್ನು ಸ್ತ್ರೀ-ಪುರುಷರಿಬ್ಬರೂ ನುಡಿಸುತ್ತಿದ್ದರು ಎಂಬುದನ್ನು ತಿಳಿಯಬಹುದಾಗಿದೆ. ಹಂಪಿಯ ಮಹಾ ನವಮಿ ದಿಬ್ಬದ ವಾದ್ಯಗಾರರ ಪಟ್ಟಿಕೆ (ಚಿತ್ರ-೨೯) ಇದಕ್ಕೆ ಪುಷ್ಠೀ ನೀಡುತ್ತದೆ. ಶಿಲ್ಪಗಳಲ್ಲಿ ದೊರೆತಿರುವ ವಿವರಗಳಿಂದ ನಾಗಸ್ವರವಾದಕರ ವಸ್ತ್ರ ಮತ್ತು ಆಭರಣಗಳ ಕುರಿತು ಸಹ ತಿಳಿಯಬಹುದಾಗಿದೆ. ಹಂಪಿಯ ಹಜಾರ ರಾಮ ದೇವಾಲಯದ ಕಲ್ಯಾಣ ಮಂಟಪದಲ್ಲಿರುವ ನಾಗಸ್ವರವಾದಕ ಶಿಲ್ಪದಲ್ಲಿ ವಾದಕನು ಅರ್ಧೋರುಕ ಧರಿಸಿದ್ದಾನೆ.

ಲೇಪಾಕ್ಷಿಯ ವೀರಭದ್ರ ದೇವಾಲಯದ ದ್ವಾರಬಂಧದ ಶಿಲ್ಪಪಟ್ಟಿಕೆಯೊಂದರಲ್ಲಿ (ಚಿತ್ರ-೩೦) ನಾಗಸ್ವರ ನುಡಿಸುತ್ತಿರುವ ಮತ್ತು ಏಕತಾರಿ ನುಡಿಸುತ್ತಿರುವ ಇಬ್ಬರು ವಾದ್ಯಗಾರರ ಉಬ್ಬು ಶಿಲ್ಪಗಳಿವೆ. ಆ ಶಿಲ್ಪದಲ್ಲಿರುವ ನಾಗಸ್ವರವಾದಕನು ಪಾದಗಳವರೆಗೆ(ಪೂರ್ಣೋರುಕ) ಧೋತ್ರಗಳನ್ನು ಧರಿಸಿದ್ದಾನೆ. ಅಲ್ಲದೆ ನಡುಪಟ್ಟಿ (ಬೆಲ್ಟ್ ರೀತಿ) ಕಟ್ಟಿರುವುದು ಕಂಡುಬರುತ್ತದೆ. ದೇಹದ ಮೇಲ್ಭಾಗ ಬೆತ್ತಲೆಯಾಗಿದೆ. ಕೊಳಗಾಕಾರದ ಉದ್ದ ಕುಲಾಯಿ ಧರಿಸಿದ್ದು, ದಂಡ ನಾಯಕ ಶಿಲ್ಪ ಧರಿಸಿದ್ದ ಕುಲಾಯಿಯ ಮಾದರಿಯಲ್ಲಿರುವುದು ವಿಶೇಷವಾಗಿದೆ. ಆಭರಣಗಳಲ್ಲಿ ವಿಶೇಷವೆಂದರೆ ಹರಳಿನ ಚೌಕುಳಿಯನ್ನು ಬಲಗಿವಿಗೆ ಧರಿಸಿರುವುದನ್ನು ಕಾಣ ಬಹುದು. ಉಳಿದಂತೆ ಆಭರಣಗಳು ಸಾಧಾರಣವಾಗಿವೆ.

ಶ್ರೀಶೈಲ ಮಲ್ಲಿಕಾರ್ಜುನ ದೇವಾಲಯದ ಪ್ರಾಕಾರದಲ್ಲಿರುವ ಶಿಲ್ಪಪಟ್ಟಿಕೆಗಳಲ್ಲಿ(ಚಿತ್ರ-೨೬) ಡೋಲು ಬಾರಿಸುವವರ ತಂಡದ ಹಿಂದೆ ನಾಗಸ್ವರವಾದಕರ ತಂಡ ಸಾಲಾಗಿ ಸಾಗುತ್ತಿರುವ ಚಿತ್ರಣವಿದೆ. ಈಗಾಗಲೇ ತಿಳಿದಂತೆ ಉತ್ಸವ, ಮಂಗಳ ಕಾರ್ಯಗಳಲ್ಲಿ ಡೋಲು ಮತ್ತು ನಾಗಸ್ವರ ಜೊತೆ ಜೊತೆಗೆ ಬಳಸಲ್ಪಡುವ ವಾದ್ಯಗಳಾಗಿವೆ. ಈ ಶಿಲ್ಪಪಟ್ಟಿಕೆಯಲ್ಲಿ ನಾಲ್ಕು ಜನ ನಾಗಸ್ವರ ವಾದಕರಿದ್ದು, ಅವರೆಲ್ಲರು ಧರಿಸಿರುವ ವಸ್ತ್ರ ಒಂದೇ ರೀತಿಯದಾಗಿದೆ. ತಲೆಯ ತುರುಬನ್ನು ಹಾಕಿದ್ದು, ಕರ್ಣಾಭರಣವು ಒಬ್ಬ ನಾಗಸ್ವರವಾದಕನದು ವೃತ್ತಾಕುಂಡಲವಾದರೆ, ಉಳಿದ ಮೂರು ವ್ಯಕ್ತಿಗಳು ತೂಗಾಡುವ ಕರ್ಣಾಭರಣ ಧರಿಸಿದ್ದಾರೆ. ಎರಡೂ ಕೈಯಿಂದ ನಾಗಸ್ವರವನ್ನು ಹಿಡಿದಿರುವ ಕಾರಣ ಕರ್ಣಾಭರಣಗಳು ಅಸ್ಪಷ್ಟ. ಅಲ್ಲದೇ ಉಳಿದ ಆಭರಣಗಳು ಅಸ್ಪಷ್ಟ. ದೇಹದ ಮೇಲ್ಭಾಗ ಬೆತ್ತಲೆಯಾಗಿದ್ದು, ಮೊಣಕಾಲಿನವರೆಗೆ ಅರ್ಧೋರುಕವನ್ನು ಕಚ್ಚೆಹಾಕಿ ಧರಿಸಿದ್ದು, ಧೋತ್ರದ ಮೇಲೆ ಸೊಂಟಭಾಗದಲ್ಲಿ ಉತ್ತರೀಯವನ್ನು ಗಂಟು ಕಟ್ಟಿರುವುದು ಕಂಡುಬರುತ್ತದೆ.

ಈ ಶಿಲ್ಪದ ಪಟ್ಟಿಯಲ್ಲಿರುವ ನಾಗಸ್ವರವಾದಕರು ಧರಿಸಿರುವ ವಸ್ತ್ರ ಉತ್ಸವ ಅಥವಾ ಪಥಸಂಚಲನ ಸಮಯದ ಸಮವಸ್ತ್ರವಾಗಿತ್ತು ಎಂಬುದು ಸ್ಪಷ್ಟವಾಗುತ್ತದೆ. ಅದೇ ದೇವಾಲಯದ ಮತ್ತೊಂದು ಶಿಲ್ಪಪಟ್ಟಿಕೆಯಲ್ಲಿರುವ ನಾಗಸ್ವರವಾದಕನು ಅರ್ಧೋರುಕ ಧರಿಸಿದ್ದು, ತೂಗಾಡುವ ಕರ್ಣಾಭರಣ, ಎರಡೆಳೆಯ ಬಾಹುಬಂಧಿ, ಒಂದೆಳೆಯ ಮುಂಗೈ ಮತ್ತು ಕಾಲ್ಗಡಗ ಧರಿಸಿರುವುದು ಕಂಡುಬರುತ್ತದೆ.

ಈ ಶಿಲ್ಪಗಳಿಂದ ಒಟ್ಟಾರೆಯಾಗಿ ನಾದಸ್ವರವಾದಕರು ದೇವಾಲಯ ಪೂಜಾ ಕಾರ್ಯ ದಲ್ಲಿ ಧೋತ್ರವನ್ನು ಪೂರ್ಣೋರುಕದಲ್ಲಿ ಧರಿಸಿ, ಉತ್ಸವ ಮುಂತಾದ ಪಥಸಂಚಲನದ ಸಂದರ್ಭದಲ್ಲಿ

ಅಧೋರ್ಋರುಕವನ್ನು ಧರಿಸುತ್ತಿದ್ದರು. ಇದು ಬಹುಶಃ ತಮ್ಮ ಚಲನವಲನಗಳಿಗೆ ವಸ್ತ್ರವು ಅಡ್ಡಿಯಾಗದೇ ಇರಲಿ ಎಂಬ ಉದ್ದೇಶವಿರಬಹುದು. ಈ ರೀತಿಯ ಸಮವಸ್ತ್ರವನ್ನು ವಾದ್ಯಗಾರರಿಗೆ ಪಥ ಸಂಚಲನದಲ್ಲಿ ನಿಗದಿಮಾಡಿದ್ದಿರುವ ಸಾಧ್ಯತೆಯಿದೆ.

ಕಿನ್ನರಿವಾದಕರು

ತಂತಿ ವಾದ್ಯಗಳಲ್ಲಿ ಕಿನ್ನರಿವಾದ್ಯವು ಒಂದಾಗಿದೆ. ಇದೊಂದು ಜನಪದ ವಾದ್ಯ ಎಂಬುದನ್ನು ಅವರ ವಸ್ತ್ರಧಾರಣೆಯಿಂದ ತಿಳಿಯಬಹುದು. ಹಂಪಿಯ ವಿಠಲದೇವಾಲಯದ ಉಬ್ಬುಶಿಲ್ಪ ವೊಂದರಲ್ಲಿ ಕಿನ್ನರಿ ನುಡಿಸುತ್ತಿರುವ ಶಿಲ್ಪವಿದೆ. ಅದರಲ್ಲಿ ಕಿನ್ನರಿಯನ್ನು ಎರಡು ಕೈಗಳಿಂದ ತನ್ನ ತಲೆಯ ಮೇಲೆ ಎತ್ತಿ ಹಿಡಿದಿದ್ದಾನೆ. ಅವನ ಜಟೆಯು ಚದುರಿದೆ. ಕೌಪೀನವನ್ನು ಧರಿಸಿದ್ದು ಅದನ್ನು ಉಡಿದಾರದಿಂದ ಭದ್ರಗೊಳಿಸಿದ್ದಾನೆ. ಮುಂಗೈ ಮತ್ತು ಬಾಹುಗಳಿಗೆ ಸರಳ ವಿನ್ಯಾಸದ ಕಡಗಗಳನ್ನು ಧರಿಸಿದ್ದಾನೆ. ವಿರೂಪಾಕ್ಷ ದೇವಾಲಯದ ಸಾಲು ಮಂಟಪದಲ್ಲಿರುವ ಕಿನ್ನರಿವಾದಕ ಶಿಲ್ಪದಲ್ಲಿ (ಚಿತ್ರ–೩೧) ಕೌಪೀನವನ್ನು ಧರಿಸಿದ್ದು, ಅದನ್ನು ಉಡಿದಾರಕ್ಕೆ ಸೇರಿಸಲಾಗಿದೆ. ದೇಹದ ಮೇಲ್ಭಾಗದ ವಸ್ತ್ರವು ವಿಶೇಷವಾಗಿದ್ದು, ಅದು ಭುಜಭಾಗದಿಂದ ಸ್ತನಭಾಗದವರೆಗೆ ಚೌಕಾಕಾರವಾಗಿದ್ದು, ಒಂದು ವಸ್ತ್ರವನ್ನು ಮಾತ್ರ ಧರಿಸಿರುವುದು ಕಂಡುಬರುತ್ತದೆ. ಬಹುಶಃ ಇದು ಉತ್ತರೀಯವನ್ನು ಅಗಲವಾಗಿ ಮಡಿಚಿ ಹಾಕಿಕೊಂಡಿದ್ದು, ಅಲ್ಲದೇ ಉತ್ತರೀಯದ ಅಂಚುಗಳು ಬೆನ್ನಹಿಂದೆ ತೋಳುಗಳ ಕೆಳಗೆ ಹಾರಾಡುತ್ತಿರುವುದನ್ನು ಕಾಣಬಹುದು.

ಹಂಪಿಯ ವಿಠಲ ದೇವಾಲಯದ ಸಭಾಮಂಟಪದಲ್ಲಿನ ಮತ್ತೊಂದು ಕಿನ್ನರಿವಾದಕ ಶಿಲ್ಪದಲ್ಲಿ ಲಂಗೋಟಿ ಧರಿಸಿದ್ದು, ಉತ್ತರೀಯವನ್ನು ತನ್ನ ಭುಜವನ್ನು ಸುತ್ತಿ ಕತ್ತಿನ ಮುಂಭಾಗ ಬರುವಂತೆ ಧರಿಸಿದ್ದಾನೆ. ವೃತ್ತಕುಂಡಲ ಸಹ ಧರಿಸಿದ್ದಾನೆ.

ಈ ಮೇಲಿನ ವಿವರಣೆಗಳಿಂದ ಕಿನ್ನರಿವಾದಕ ಕೌಪೀನ ಮತ್ತು ಉತ್ತರೀಯವನ್ನು ತನ್ನ ಉಡುಗೆಯಾಗಿ ಬಳಸಿರುವುದು ಸ್ಪಷ್ಟವಾಗುತ್ತದೆ. ಅಬ್ದುರ್ ರಜಾಕ್‌ನು ವಿಜಯನಗರ ಸಾಮ್ರಾಜ್ಯದ ಬೇರೆ ಬೇರೆ ಭಾಗಗಳಲ್ಲಿ ಸಂಬಂಧಪಟ್ಟ ಜನಜೀವನವನ್ನು ಹೇಳುವಾಗ, ಅವರು ಧರಿಸುತ್ತಿದ್ದ ವಿವಿಧ ವಸ್ತ್ರಗಳ ಕುರಿತು ಹೇಳುತ್ತಾನೆ. ಅದರಲ್ಲಿ ಲಂಗೋಟಿಯೂ ಒಂದು. ಅಬ್ದುರ್ ರಜಾಕ್‌ನು ಕಲ್ಲಿಕೋಟೆಯ ಜನರು ಅವರ ವಸ್ತ್ರದ ವಿಚಾರವನ್ನು ಪ್ರಸ್ತಾಪಿಸುವನು. ಅವನು ಹೇಳುವಂತೆ, "ನಾನೆಂದು ಊಹಿಸದಿದ್ದಂತಹ ಜನಗಳನ್ನು ಕಂಡೆ, ಈ ದೇಶದ ಬೆತ್ತಲೆ ಕರಿಯರನ್ನು ಕಂಡೆ, ಇವರು ಲಂಗ್‌ಕೋಟ (ಲಂಗೋಟಿ) ಎಂಬ ಒಂದು ಚೂರು ಬಟ್ಟೆಯನ್ನು ಬಿಟ್ಟು ಮತ್ತೆ ಯಾವ ಉಡುಪನ್ನು ಧರಿಸುವುದಿಲ್ಲ. ಇದು ಹೊಕ್ಕಳದಿಂದ ಹಿಡಿದು ಮಂಡಿಯವರಗೆ ನೇತಾಡುತ್ತಿರುತ್ತದೆ".[೧೮೭] ಎಂಬುದಾಗಿ ಕೌಪೀನ ಉಡುವ ಕ್ರಮವನ್ನು ತಿಳಿಸುತ್ತಾನೆ. ಅವನ ಹೇಳಿಕೆಗೆ ಪುಷ್ಠಿಯಾಗಿ ಲಂಗೋಟಿಯ ಬಗೆಗೆ ಪುರಂದಾರದಾಸರ 'ಲಂಗೋಟಿ ಬಹುಪೊಳ್ಳೇದಣ್ಣ' ಎಂಬ ಕೀರ್ತನೆ ವಿಶಿಷ್ಟವಾಗಿದ್ದು, ಅನೇಕ ವಿಷಯಗಳ ಮೇಲೆ ಬೆಳಕು ಚೆಲ್ಲಲು ಸಹಾಯಕವಾಗಿದೆ. ದಾಸರು ಹೇಳುವಂತೆ, "ಲಂಗೋಟಿ ಬಲುಪೊಳ್ಳೆದಣ್ಣ, ಭೈರಾಗಿಗಳ ಭಾಗ್ಯವಣ್ಣ, ಕಡುಕಳ್ಳರಿಗೆ ಗಂಡ,

ಮಡಿಧೋತ್ರಗಳ ಮಿಂಡ, ನಡುಗುವ ಸಮಯಕ್ಕೆ ಮಡಿಗೆ ಒದಗುವಂಥ ಜಿತಮತ ಸಂನ್ಯಾಸಿಗಳಿಗಿದೆ ಕೌಪೀನ ವೃತವುಳ್ಳ, ಬ್ರಹ್ಮಚಾರಿಗೆ ಮುಖ್ಯವು".[೧೮೮] "ದುಡ್ಡು ಮುಟ್ಟದಂತೆ ದೊರಕುವ ವಸ್ತ್ರವು, ದೊಡ್ಡ ಅರಣ್ಯಾದಿ ಭಯವಿಲ್ಲವು ಹೆಡ್ಡಾರೆಂಬುವರೇನೋ, ಲಂಗೋಟಿ ಜನರನ್ನು ದೊಡ್ಡವರೆಂದು ವಂದಿಸುವರು ಯತಿಗಳ ಮೋಕ್ಷ ಮಾರ್ಗಕೆ ಕಲ್ಪವೃಕ್ಷವೀ ಲಂಗೋಟಿ, ಭಿಕ್ಷಗಾರರಿಗೆಲ್ಲ ಅನುಕೂಲವು, ಮಡಿವಾಳರಿಗೆ ಶತ್ರು ಮಠದಯ್ಯಗಳ ಮಿತ್ರ, ಪೊಡವಿಯೊಳ್ ಯಾಚಕರಿಗೆ ನೆರವು, ತತ್‌ಕ್ಷಣದೊಳಗೆ ಕಾರ್ಯಗಳ ತೂಗಿಸಿ ಮಾನರಕ್ಷಣೆಗೆ ಬಹು ರಮ್ಯವಾಗಿರುವಂಥ..."[೧೮೯] ಹೀಗೆ ಲಂಗೋಟಿ ಕುರಿತು ದಾಸರು ವಿವರವಾದ ಮಾಹಿತಿಯನ್ನು ನೀಡುತ್ತಾರೆ. ಅಲ್ಲದೇ ಅದು ತನ್ನದೇ ಆದ ಮಹತ್ವವನ್ನು ಇಂದಿಗೂ ಉಳಿಸಿಕೊಂಡು ಬಂದಿರುವುದು ಗಮನಾರ್ಹ. ಮೂರ್ತಿ ಚಿಕ್ಕದಾದರೂ ಇದರ ಕೀರ್ತಿ ದೊಡ್ಡದು ಎಂದು ದಾಸರ ಪದಗಳಿಂದ ತಿಳಿಯಬಹುದಾಗಿದೆ.

ತಬಲವಾದಕರು

ವಾದ್ಯಗಳಲ್ಲಿ ತಬಲವು ಪ್ರಮುಖವಾಗಿದ್ದು, ತಬಲದ ಕುರಿತು ಸಾಹಿತ್ಯಾಕಾರಗಳಲ್ಲಿ ಮಾಹಿತಿ ಲಭ್ಯತೆಯ ಕೊರತೆಯಿದ್ದು, ಶಿಲ್ಪಗಳಿಂದ ಈ ಕುರಿತು ವಿವರಗಳನ್ನು ತಿಳಿಯಲು ಸಹಾಯಕವಾಗಿವೆ. ಲೇಪಾಕ್ಷಿಯ ವೀರಭದ್ರ ದೇವಾಲಯದ ದ್ವಾರಬಂಧದ ಶಿಲ್ಪಪಟ್ಟಿಕೆ ಯೊಂದರಲ್ಲಿ (ಚಿತ್ರ-೩೨) ತಬಲ ನುಡಿಸುತ್ತಿರುವ ಸ್ತ್ರೀಯ ಉಬ್ಬು ಶಿಲ್ಪವಿದೆ. ಈ ಶಿಲ್ಪದಲ್ಲಿ ಸ್ತ್ರೀಯು ಪದ್ಮಾಸನದಲ್ಲಿ ಕುಳಿತಿದ್ದು, ತನ್ನ ಎರಡೂ ಬದಿಗಳಲ್ಲಿ ತಬಲಗಳನ್ನು ಇಟ್ಟುಕೊಂಡು ನುಡಿಸುತ್ತಿದ್ದಾಳೆ. ಆಕೆ ತುರುಬನ್ನು ಕಟ್ಟಿದ್ದು, ಪಾದಗಳವರೆಗೆ ಸೀರೆಯನ್ನು ಕಚ್ಚೆಹಾಕಿ ಧರಿಸಿದ್ದಾಳೆ. ದೇಹದ ಮೇಲ್ಭಾಗ ಬೆತ್ತಲೆಯಾಗಿದೆ. ಕಾಲ್ಕಡಗಗಳು ಸರಳ ಆಗಿವೆ. ಸೀರೆಯ ಮೇಲೆ ಐದು ಎಳೆಯ ಮೇಖಲೆಯನ್ನು ಧರಿಸಿದ್ದು, ಉಳಿದಂತೆ ಆಭರಣಗಳು ಅಸ್ಪಷ್ಟವಾಗಿವೆ.

ಶಂಖವಾದಕರು

ಶಂಖವು ಗಾಳಿವಾದ್ಯಗಳಲ್ಲಿ ಒಂದು. ದೇವತಾಕಾರ್ಯ ಹಾಗೂ ಯುದ್ಧರಂಗದಲ್ಲಿ ಇದನ್ನು ಬಳಸಿರುವುದನ್ನು ಈಗಾಗಲೇ ಸಾಹಿತ್ಯ ಹಾಗೂ ಶಾಸನಗಳಿಂದ ತಿಳಿದಿದ್ದೇವೆ. ರಾಮನಾಥ ಚರಿತದಲ್ಲಿ ಶಂಖವನ್ನು ಹೇಗೆ ಊದುವರೆಂಬುದರ ವರ್ಣನೆ ಹೀಗಿದೆ,

ಒತ್ತಿ ಊದುವ ಚಿನಗಾಳೆ ಬುರುಗು ಚಿನ್ನ
ತಿತ್ತಿರಿ ಶಂಖವಾಸಗಳ
ಮೊತ್ತದ ನಾದ ಕೇಳ್ವರ ಕವಿವಾಗಿಲ
ಕೆತ್ತವದೇನ ಬಣ್ಣಿಪೆನು[೧೯೦]

ಎಂಬುದಾಗಿ ಶಂಖವನ್ನು ಊದುವ ವಿಧಾನವನ್ನು ತಿಳಿಸುತ್ತದೆ.

ವಿವಾಹ ಸಂದರ್ಭದಲ್ಲಿ ಬಳಸುತ್ತಿದ್ದ ವಾದ್ಯಗಳಲ್ಲಿ ಶಂಖವೂ ಒಂದಾಗಿತ್ತು ಎಂಬು ದನ್ನು ಶಿವತತ್ತ್ವಚಿಂತಾಮಣಿಯು, ಗಿರಿಜಾಕಲ್ಯಾಣದ ಸಂದರ್ಭದಲ್ಲಿ ಉಲ್ಲೇಖಿಸುತ್ತದೆ. ಅಂತೆಯೇ ಮಂಗಳಕಾರ್ಯಗಳಲ್ಲಿ ಶಂಖವಾದ್ಯವು ಒಂದಾಗಿ ಬಳಕೆಯಲ್ಲಿತ್ತು ಎಂಬುದನ್ನು ತಿಳಿಸುತ್ತದೆ. ಈ ಕಾವ್ಯದಲ್ಲಿ ಶಂಖದ ಕುರಿತು,

ಸುರಗುರುವಿನಾಯತ ಮುಹೂರ್ತದೊಳ್ ಪಿಡಿದಿರ್ದ
ತೆರೆಸರಿವ ಸಮಯದೊಳು ದೇವವಾದ್ಯಗಳುಲಿಯೆ
ಕರಡೆ ಮದ್ದಳೆ ಭೇರಿ ಕಹಳೆ ಕೌಸಳವೇಣು ಶಂಖರವದೋಱುತಿರಲು
ಹರನು ಜೀರಿಗೆ ಬೆಲ್ಲದಿಂದದ್ರಿಜೆಯನಿಡಲು
ಮರಳಿ ಪಾರ್ವತಿ ಜೀರಿಗೆಯ ಬೆಲ್ಲದಿಂ ಶಿವನ
ನಿರದಿಡಲು ಕೊಂಡಾಡಿ ದನಿಮಾಡಲರಿವವರ ಚರಣಾಂಬುಜಕ್ಕೆ ಶರಣ".[೧೯೧]

ಎಂದು ತಿಳಿಸುತ್ತದೆ. ಇದರಿಂದ ಶಂಖವಾದ್ಯ ಒಂದು ದೇವವಾದ್ಯವಾಗಿತ್ತು ಎಂಬುದು ಸ್ಪಷ್ಟವಾಗುತ್ತದೆ.

ಹಂಪಿಯ ಹಜಾರರಾಮ ದೇವಾಲಯದ ನವರಂಗದಲ್ಲಿರುವ ಶಂಖವಾದಕ ಶಿಲ್ಪದಲ್ಲಿ ಶಂಖವಾದಕನ ಜಟೆಯು ಚದುರಿದ್ದು, ಮುತ್ತಿನ ವೃತ್ತಕುಂಡಲ, ಮುತ್ತಿನಸರ, ಭುಜಕೀರ್ತಿ, ಬಾಹುಬಂಧ, ಮುತ್ತಿನಿಂದ ಮಾಡಿದಾಗಿವೆ. ಇವುಗಳೊಂದಿಗೆ ಯಜ್ಞೋಪವೀತ, ಕಡಗ ಮತ್ತು ಪಾದಸರ (ನೂಪುರ)ಗಳನ್ನು ಧರಿಸಿದ್ದಾನೆ. ತನ್ನ ಎರಡೂ ಕೈಗಳಲ್ಲಿ ಶಂಖವನ್ನು ಹಿಡಿದು ಕುಳಿತು ಊದುತ್ತಿರುವುದನ್ನು ಗಮನಿಸಬಹುದು. ವಸ್ತ್ರಗಳು ಅಸ್ಪಷ್ಟವಾಗಿವೆ. ಹಂಪಿಯ ವಿಠಲ ದೇವಾಲಯದ ಹಿಂದಿನ ಮಂಟಪದಲ್ಲಿರುವ ಉಬ್ಬು ಶಿಲ್ಪದಲ್ಲಿ (ಚಿತ್ರ-೩೩) ಶಂಖವಾದಕನ ಜಟೆ ಚದುರಿದ್ದು, ಸಾದಾವೃತ್ತ ಕುಂಡಲ, ಭುಜಕೀತಿಯು ಎರಡೆಳೆಯ ಸರದಿಂದ ಕೂಡಿದ್ದು, ಎರಡೆಳೆಯ ತೋಳ್ಬಂದಿ ಮತ್ತು ಮುಂಗೈ ಕಡಗಗಳು ಹಾಗೂ ಎರಡೆಳೆಯ ಸರ ಧರಿಸಿದ್ದಾನೆ. ಯಜ್ಞೋಪವೀತ, ಛನ್ನವೀರ ಧರಿಸಿದ್ದು, ಮೂರೆಳೆಯ ಮೇಖಲೆ ಧರಿಸಿದ್ದಾನೆ. ಮೊಣಕಾಲಿನವರೆಗೂ ಕಚ್ಚೆಹಾಕಿದ ಅಧೋರ್ರುಕವನ್ನು ಧರಿಸಿದ್ದಾನೆ. ಧೋತ್ರದ ಮೇಲೆ ಉತ್ತರೀಯ ಕಟ್ಟಿರುವುದು ಸ್ಪಷ್ಟವಾಗಿ ಕಂಡುಬರುತ್ತದೆ. ಅನಂತಶಯನ ಗುಡಿಯಲ್ಲಿರುವ ಶಂಖವಾದಕ ಶಿಲ್ಪದಲ್ಲಿ ತುರುಬನ್ನು ಎತ್ತರವಾಗಿ ತಲೆ ಮೇಲೆ ಕಟ್ಟಿದ್ದು, ತುರುಬಿಗೆ ದಾರವನ್ನು ಕಟ್ಟಿದ್ದಾನೆ. ವೃತ್ತಾಕಾರದ ಸಾದಾ(ರಿಂಗ್) ಕುಂಡಲ, ಹಣೆಗೆ ತಿಲಕ ಇಟ್ಟಿದ್ದಾನೆ. ಶಂಖದ ಮೇಲ್ಭಾಗಕ್ಕೆ ಹಿಡಿಕೆಯನ್ನು ಹಾಕಿರುವುದನ್ನು ಕಾಣಬಹುದು.

ಕಹಳೆವಾದಕರು

ಗಾಳಿ ವಾದ್ಯಗಳಲ್ಲಿ ಕಹಳೆಯು ಒಂದಾಗಿದೆ. ಕಹಳೆಯು ದೇವಾಲಯ ಉತ್ಸವ, ಗಣ್ಯವ್ಯಕ್ತಿಗಳ ಆಗಮನದ ಗೌರವಾರ್ಥ ಹಾಗೂ ಯುದ್ಧರಂಗದಲ್ಲಿ ರಣಕಹಳೆಯಾಗಿ ವಿವಿಧ ಸಂದರ್ಭಗಳಲ್ಲಿ ಬಳಕೆಯಾಗುವ ವಾದ್ಯವಾಗಿದೆ. ಈ ಹಿಂದೆ ಕಹಳೆಯ ಕುರಿತು ಹಿಂದಿನ ವಾದ್ಯಗಾರರ ಅಧ್ಯಯನದಲ್ಲಿ ಉಲ್ಲೇಖಿಸಿದೆ.

ಚಂದ್ರಶೇಖರ ಕವಿಯು ಕಹಳೆವಾದಕನನ್ನು ಕುರಿತು ಈ ರೀತಿಯಾಗಿ ವರ್ಣಿಸುತ್ತಾರೆ. ಅವರು ವರ್ಣಿಸಿರುವಂತೆ.

ಮತ್ತಮಾ ವಿರೂಪಾಕ್ಷನೋಲಗಲದಲ್ಲಿ ಕಹಳೆಗಾರರ
ಚೀನಾಂಬರದ ಚೀಲದೊಳಗೆ ಬೈಚಿಟ್ಟಿರ್ದ ಕಹಳೆಯ
ಜೋಡಮಣೆಯಂ ತೆಗೆದುಕೊಂಡು ಕನಕದ ಕುಸುಮಾ
ಕಾರದ ಕುಡುಗಂಟಿಕೆಯನೆಡಗೈಯೊಳ್ ಪಿಡಿದು ಮೇಳ
ಕಾರರ ಕಟ್ಟಳೆಯಂ ಕೇಳಿ ತಕ್ಕಂತೆ ಮಿಕ್ಕ ಕಂಡಿಕೆಗಳಂ
ಜೋಡಿಸಿ ಮುಖಗಂಟಿಕೆಯಂ ಮುರಿದು ಬಲಿದು
ಬಾಯ್ದೆರೆಗೆ ಸಾರ್ಚಿ ಸಾರ್ಚಿ ಬಾಜಿಸಿ ನೋಡಿ ಟಿಪಿಯ
ನೆತ್ತಿ ಶ್ರುತಿಯಂಕೂಡಿ ತನ್ನ ಕೊರಳಿನಲ್ಲಿ ಬಿನ್ನಣಮಂ
ತೋರಿಸಿ ಮೇಳದ ಹೆಚ್ಚು ಕುಂದುಗಳಂ ಹುದುಗಿಸಿ
ಗಾಯಕರ ಗಾನಕ್ಕೆ ಕೈವಲಮಾಗಿ ಪಲತೆರದ ವಾದನಂ
ಗಳನಳಪಡಿಸಿ ಬಾಜಿಸುತ್ತಿರ್ದನಂತುಮಲ್ಲದೆಯುಂ[೧೯೨]

ಈ ಮೇಲಿನ ಪದ್ಯದಲ್ಲಿ ಕಹಳೆಯ ಭಾಗಗಳನ್ನು ಚೀಲದಿಂದ ತೆಗೆದು ಜೋಡಿಸಿ, ನಂತರ ಊದಲು ತಯಾರಿ ನಡೆಸುತ್ತಿದ್ದರು ಎಂಬುದಾಗಿ ತಿಳಿದುಬರುತ್ತದೆ.

ರಾಮನಾಥ ಚರಿತೆಯಲ್ಲಿ,
ತಿತ್ತಿರಿ ಚೀನಗಹಳೆ ಕೊಂಬುಗಳ ದನಿ
ಯೊತ್ತರಿಸಲು ದೆಸೆಗಳನು
ಮುತ್ತಿಗೆಯನು ಮಾಡಿದರು ಮೃಗಂಗಳ
ಮೊತ್ತವನಲ್ಲಿ ಬಿಯ್ಯದರು[೧೯೩]

ಈ ಪದ್ಯದಲ್ಲಿ ಕಹಳೆಗೆ ಚಿನ್ನದ ಹಿಡಿಕೆ ಅಥವಾ ಚಿನ್ನದ ಬಣ್ಣದ ಲೇಪನ ಮಾಡಿರುವುದನ್ನು ನಂಜುಂಡ ಕವಿಯು ವರ್ಣಿಸುತ್ತಾನೆ.

'ಮಧುರಾ ವಿಜಯಂ'ನಲ್ಲಿ ಕಹಳೆಯನ್ನು ಯುದ್ಧ ಸಂದರ್ಭದಲ್ಲಿ ಬಳಸುತ್ತಿದ್ದ ಬಗೆಯನ್ನು ಹೀಗೆ ವರ್ಣಿಸಲಾಗಿದೆ.

ಕುದುರೆಗಳು ಕೆನೆಯುತ್ತ ಗಜಯೂಥ ಬೃಂಹಿಸುತ
ತಿತ್ತಿರಿರಿಯುವ ಕಹಳೆ ಕೊಂಬುಗಳ ಮೇಳ
ಎಡಬಿಡದೆ ಬೋರ್ಗರೆದು ಮಾಡುತಿರುವಾ ಶಬ್ದ
ದಿಂದಾಯ್ತು ಬಹುದೊಡ್ಡ ಕೋಲಾಹಲ[೧೯೪]

ಕಹಳೆ ಕೊಂಬುಗಳ ಭೋರ್ಗರೆಯುವ ಶಬ್ದಕ್ಕೆ ಕುದುರೆ, ಆನೆಗಳು ಬೆದರುತ್ತಿದ್ದವು ಎಂಬುದಾಗಿ ತಿಳಿಸುತ್ತಾನೆ.

ಸಾಹಿತ್ಯಾಧಾರಗಳ ಜೊತೆಗೆ ವಿಜಯನಗರ ಕಾಲದ ಶಾಸನಗಳಲ್ಲಿ ಕಹಳೆವಾದಕರಿಗೆ ಮಾನ್ಯತೆ ನೀಡಿರುವುದನ್ನು ದಾಖಲಿಸಲಾಗಿದೆ. ಕ್ರಿ.ಶ.೧೫೪೯ರ ಸದಾಶಿವರಾಯನ ಕಾಲಕ್ಕೆ ಸೇರಿದ ಶಾಸನದಲ್ಲಿ ಕರಾಡೆ, ಕಹಳೆ ಮುಂತಾದ ವಾದ್ಯಗಳಿಗೆ ದತ್ತಿಗಳನ್ನು ಹಬ್ಬ ಆಚರಣೆಯ ಸಂದರ್ಭದಲ್ಲಿ ಬಿಟ್ಟಿರುವ ಬಗೆಗೆ ವಿವರಿಸುತ್ತದೆ.[೧೯೫]

ಹಂಪಿಯ ಅಚ್ಯುತರಾಯ ದೇವಾಲಯದ ಮಂಟದಲ್ಲಿ ಕಹಳೆವಾದಕನ ಶಿಲ್ಪವಿದ್ದು (ಚಿತ್ರ–೩೪), ಆ ಶಿಲ್ಪದಲ್ಲಿ ಕಹಳೆವಾದಕನ ಜಟೆಯು ಚದುರಿದ್ದು, ಸಾದಾ ವೃತ್ತಕುಂಡಲ, ಎರಡೆಳೆಯ ಸರ, ತೋಳ್ಬಂಧಿ, ಭುಜಕೀರ್ತಿ, ಎರಡೆಳೆಯ ಮುಂಗೈ ಕಡಗಗಳನ್ನು ಧರಿಸಿದ್ದಾನೆ. ಅಧೋರ್ರುಕವನ್ನು ಕಚ್ಚೆಹಾಕಿ ಧರಿಸಿದ್ದು, ಧೋತ್ರದ ಮೇಲೆ ಉತ್ತರೀಯವನ್ನು ಕಟ್ಟಿದ್ದಾನೆ.

ತಮಟೆವಾದಕರು

ತಮಟೆಯು ಚರ್ಮ ವಾದ್ಯವಾಗಿದ್ದು, ಇದನ್ನು ಗ್ರಾಮಗಳಲ್ಲಿ ಯಾವುದಾದರು ಘೋಷಿತ ವಿಷಯ ಸಾರಲು (ಡಂಗೂರಸಾರಲು) ಬಳಸುತ್ತಾರೆ. ಅಲ್ಲದೇ ಯುದ್ಧರಂಗದಲ್ಲಿ ಬಳಸುವ ವಾದ್ಯಗಳಲ್ಲಿ ಒಂದಾಗಿದೆ.

ರಾಮನಾಥ ಚರಿತೆಯ ಪದ್ಯವೊಂದರಲ್ಲಿ ತಮಟೆಯು ರಣವಾದ್ಯಗಳಲ್ಲಿ ಒಂದಾಗಿತ್ತು ಎಂಬುದನ್ನು ಉಲ್ಲೇಖಿಸಿದೆ. ತಮಟೆಯನ್ನು ಇಲ್ಲಿ ತಂಬಟ ಎಂಬುದಾಗಿ ಬಳಸಲಾಗಿದೆ.

ಒಱಲೆ ಕಹಳೆ ಸೂಳೈಸೆ ತಂಬಟ ಲಗ್ಗೆ
ವಜೆ ಮೊಳಗಲು ಢಕ್ಕೆಯುಲಿಯೆ
ನಜೆಗಲಿ ರಾಮನಾ ನೇವಿಯ ಬಲವನಂ
ದುರುಬಿ ಹೊಕ್ಕನು ಬಲಸಹಿತ[೧೯೬]

ಅದೇ ಕಾವ್ಯದ ಇನ್ನೊಂದು ಪದ್ಯದಲ್ಲಿ,

ನುಡಿವ ಡಿಂಡಿಮ ಢಕ್ಕೆ ಢಮರು ಜರ್ಝರ ವಾಸ
ಪೊಡೆವ ತಂಬಟ ತೂಳುವಜೆಯ
ಗಡಣದೊಳಗೆ ಬಂದು ಪೊಕ್ಕನು ದುರ್ಗವ
ಸಡಗರದಿಂ ರಾಯಕುಮಾರ[೧೯೭]

ಇದರಿಂದ ತಮಟೆಯು ರಣವಾದ್ಯಗಳಲ್ಲಿ ಒಂದಾಗಿತ್ತು ಎಂಬುದು ಸ್ಪಷ್ಟವಾಗುತ್ತದೆ.

ರಾಮನಾಥ ಚರಿತ ಕಾವ್ಯಕ್ಕೆ ಪೂರಕವಾಗಿ ಕಂಠೀರವನರಸರಾಜ ವಿಜಯಂನಲ್ಲಿಯೂ ತಮಟೆಯನ್ನು ರಣವಾದ್ಯವೆಂಬುದಾಗಿ ತಿಳಿಸುತ್ತದೆ. ಅದರಂತೆ

ಕೊಂಬು ಕಹಳೆ ರಾಯಭೇರಿ ತಂಬಟೆ ಹರೆ
ಚಂಬಕಂ ಮವುರಿ ತುತ್ತೂ
ಮುಂಬರಿದೆಸೆವ ನಾನಾವಾದ್ಯಗಳಾ
ಡಂಬರದೊಳಗೈ ತಂದ[೧೯೮]

ಈ ಮೇಲಿನ ಪದ್ಯದಲ್ಲಿ ವಿವಿಧ ವಾದ್ಯಗಳ ಜೊತೆಗೆ ತಮಟೆಯನ್ನು ಹೆಸರಿಸಿದ್ದು, ತಮಟೆಯನ್ನು 'ತಂಬಟೆ' ಎಂಬುದಾಗಿ ಸಾಹಿತ್ಯ ಕೃತಿಗಳಲ್ಲಿ ಬಳಸಲಾಗಿದೆ. ತಮಟೆವಾದಕರ ವಸ್ತ್ರ ಮತ್ತು ಆಭರಣಗಳು ಕುರಿತು ಮಾಹಿತಿಯ ಲಭ್ಯವಾಗಿಲ್ಲ.

ಢಕ್ಕೆವಾದಕರು

ಢಕ್ಕೆಯು ದೇವಾಲಯ, ರಣರಂಗದಲ್ಲಿ ಬಳಸಲ್ಪಡುವ ಒಂದು ವಾದ್ಯ ಎಂಬುದಾಗಿ ಈಗಾಗಲೇ ತಿಳಿದಿದ್ದೇವೆ. ಅಚ್ಯುತರಾಯ ದೇವಾಲಯದ ಸಾಲು ಮಂಟಪದಲ್ಲಿ ಢಕ್ಕೆ ವಾದಕನ

ಶಿಲ್ಪವಿದೆ(ಚಿತ್ರ–೩೫). ಈ ಶಿಲ್ಪದಲ್ಲಿ ವಾದಕನು ಉದ್ದ ತೋಳಿನ ಅಂಗಿಯನ್ನು ಧರಿಸಿದ್ದು, ಅರ್ಧೋರ್ಣರುಕದಲ್ಲಿ ಧೋತ್ರ ಧರಿಸಿದ್ದಾನೆ. ತಲೆಗೆ ವಸ್ತ್ರವನ್ನು ಬಳಸಿ ರುಮಾಲು ಕಟ್ಟಿದ್ದು, ರುಮಾಲಿನ ತುದಿಯು ಉದ್ದವಾಗಿದ್ದು ದೇಹದ ಮುಂಭಾದಲ್ಲಿ ಅಂಗೈವರೆಗೆ ಇಳಿಬಿಟ್ಟಿದೆ. ಈತನು ಧರಿಸಿರುವ ಕಾಲ್ಗಡಗ ದಪ್ಪವಾಗಿದ್ದು, ಉಳಿದಂತೆ ಆಭರಣಗಳು ಅಸ್ಪಷ್ಟವಾಗಿ ಕಾಣುತ್ತವೆ.

ಡಪ್ಪುವಾದಕರು

ಡಪ್ಪು ವಾದ್ಯವು ಒಂದು ಬಗೆಯ ಚರ್ಮವಾದ್ಯವಾಗಿದೆ. ಡಪ್ಪನ್ನು ಹೊಟ್ಟೆಯ ಮೇಲೆ ಇಟ್ಟುಕೊಂಡು ನುಡಿಸುವರು (ಬಾರಿಸುವರು), ವಿಠಲ ದೇವಾಲಯದ ಕಲ್ಯಾಣ ಮಂಟಪದಲ್ಲಿರುವ ಡಪ್ಪುವಾದಕನ ಶಿಲ್ಪದಲ್ಲಿ ವಾದಕನು ಸಾದಾ ವೃತ್ತಕುಂಡಲ ಧರಿಸಿದ್ದಾನೆ. ಎರಡೆಳೆಯ ಉದ್ದದ ಸರ, ಮೂರಳೆಯ ತೋಳ್ಬಂಧಿ ಮತ್ತು ಬಲಗೈ ಕಡಗ, ಹಸ್ತಸರ ಧರಿಸಿದ್ದಾನೆ. ಹಂಪಿಯ ಅನಂತಶಯನ ದೇವಾಲಯದಲ್ಲಿರುವ ಮಹಾಮಂಟಪದಲ್ಲಿ, ಪಟ್ಟಾಭಿರಾಮ ದೇವಾಲಯದಲ್ಲಿ ಹಲವಾರು ಡಪ್ಪುವಾದಕ ಶಿಲ್ಪಗಳು ದೊರೆತ್ತಿದ್ದು, ಇವರ ವಸ್ತ್ರ ಮತ್ತು ಆಭರಣಗಳು ತುಂಬಾ ಸಾಮಾನ್ಯ ಮಾದರಿ ಮತ್ತು ವಿನ್ಯಾಸದಲ್ಲಿವೆ.

ಕಂಜರಿವಾದಕರು

ಕಂಜರಿಯು ಒಂದು ಬಗೆಯ ಚರ್ಮವಾದ್ಯವಾಗಿದೆ. ಇದನ್ನು ಬಲ ಮತ್ತು ಎಡ ಭುಜದ ಮೇಲೆ ಇಟ್ಟುಕೊಂಡು ನುಡಿಸುವರು(ಬಾರಿಸುವರು) ಸಾಹಿತ್ಯಾಕರಗಳಲ್ಲಿ ಕಂಜರಿ ವಾದಕರ ಕುರಿತು ವಿವರಣೆಗಳು ಅಷ್ಟಾಗಿ ದೊರೆಯುವುದಿಲ್ಲ. ಆದರೆ ಉಬ್ಬು ಶಿಲ್ಪಗಳಲ್ಲಿ ಕಂಜರಿ ವಾದ್ಯದ ಕುರಿತು ಮಾಹಿತಿ ಲಭ್ಯವಾಗಿರುತ್ತದೆ. ಹಾಗಾಗಿ ಶಿಲ್ಪಗಳ ಆಧಾರದಿಂದಲೇ ಕಂಜರಿವಾದಕರ ವಸ್ತ್ರ ಮತ್ತು ಆಭರಣಗಳ ಕುರಿತು ಅಧ್ಯಯನವನ್ನು ಮಾಡಲಾಗಿದೆ. ಪಟ್ಟಾಭಿರಾಮ ದೇವಾಲಯ, ವಿಠಲ ದೇವಾಲಯ, ವಿರುಪಾಕ್ಷ ದೇವಾಲಯ ಮತ್ತು ಹಜಾರರಾಮ ದೇವಾಲಯಗಳ ಶಿಲ್ಪಗಳಲ್ಲಿ ಈ ಬಗೆಯ ವಾದ್ಯಗಾರರ ಕುರಿತ ಶಿಲ್ಪಗಳಿವೆ.

ಹಂಪಿಯ ವಿರೂಪಾಕ್ಷ ದೇವಾಲಯದ ಸಾಲು ಮಂಟಪದಲ್ಲಿರುವ ಕಂಜರಿವಾದಕ ಶಿಲ್ಪದಲ್ಲಿನ ಕಂಜರಿವಾದಕನ ವಸ್ತ್ರ ಎಲೆಯಾಕಾರದಲ್ಲಿದೆ. ಕಟಿಯಿಂದ ತೊಡೆಯವರೆಗೆ ಎಲೆಗಳ ಮಾದರಿಯ ವಸ್ತ್ರವನ್ನು ಧರಿಸಿದ್ದು, ಕಟಿಯ ಮುಂಭಾಗದಲ್ಲಿ ಆರು ಎಲೆಗಳಿರುವುದನ್ನು ಗುರ್ತಿಸ ಬಹುದಾಗಿದೆ. ಕುಲಾಯಿಯನ್ನು ಧರಿಸಿದ್ದು, ಕುಲಾಯಿಯ ಗೊಂಡೆ ಭುಜದವರೆಗೆ ಇಳಿದಿದೆ. ರಿಂಗ್ ಮಾದರಿಯ ವೃತ್ತಕುಂಡಲ, ಎಲೆಯಾಕಾರದ ಅಗಲವಾದ ಪದಕವಿರುವ ಕಂಠಾಭರಣವು ಎಲೆಗಳಿಂದಲೇ ರಚನೆಯಾದಂತಿದೆ. ಈ ಶಿಲ್ಪದ ವಿಶೇಷ ಕಾಡಿನಲ್ಲಿ ದೊರೆಯುವ ಎಲೆಗಳನ್ನು ವಸ್ತ್ರ ಮತ್ತು ಆಭರಣಗಳಿಗೆ ಬಳಸಿರುವುದು. ವಿಠಲ ದೇವಾಲಯದ ಸಭಾಮಂಟಪದಲ್ಲಿರುವ ಕಂಜರಿವಾದಕ ಶಿಲ್ಪದಲ್ಲಿ ಬೇಟೆಗಾರರ ವಸ್ತ್ರದ ಮಾದರಿಯಲ್ಲಿ ಮೂರು ಎಲೆಗಳನ್ನು ಕಟಿಯಿಂದ ತೊಡೆಯವರೆಗೂ ಧರಿಸಿದ್ದು, ಎಲೆಗಳು ಉಡಿದಾರದಿಂದ ಬಿಗಿಗೊಳಿಸಲಾಗಿದೆ. ಉದ್ದ ಜಡೆಯನ್ನು ಹಾಕಿದ್ದು, ತಲೆಗೆ ಬುಗುಟು ಮಾದರಿಯ ಟೋಪಿ (ಮಂಕಿ ಕ್ಯಾಪ್) ಧರಿಸಿದ್ದಾನೆ. ಕಾಲ್ಕಡಗ ಸಾದಾ ಮಾದರಿಯಲ್ಲಿದೆ.

ಹಂಪಿಯ ವಿಠಲ ದೇವಾಲಯದ ಮತ್ತೊಂದು ಕಂಜರಿವಾದಕ ಶಿಲ್ಪದಲ್ಲಿ (ಚಿತ್ರ–೩೬) ಶಂಖಾಕಾರದ (ಕೋನ್‌ಮಾದರಿ) ಟೋಪಿ (ಕುಲಾಯಿ) ಧರಿಸಿದ್ದಾನೆ. ವಸ್ತ್ರದ ವಿನ್ಯಾಸ ವಿಶೇಷವಾಗಿದ್ದು, ಅದು ಎಲೆಯ ಮಾದರಿಯಲ್ಲಿದೆ. ಒಟ್ಟು ಆರು ಎಲೆಗಳನ್ನು ಜೋಡಿಸಿದ್ದು, ಅದರ ಕೆಳಗಿನ ಅಂಚುಗಳಿಗೆ ಮುತ್ತುಗಳನ್ನು ಜೋಡಿಸಿದಂತೆಯಿದ್ದು, ಕುಸುರಿ ಕೆಲಸದಿಂದ ಕೂಡಿದ ಈ ಎಲೆಯಾಕಾರದ ವಸ್ತ್ರವನ್ನು ತೊಡೆಯ ಭಾಗದವರೆಗೆ ಧರಿಸಿದ್ದಾನೆ. ವಿಠಲ ದೇವಾಲಯದ ಮತ್ತೊಂದು ಶಿಲ್ಪದಲ್ಲಿರುವ ಕಂಜರಿವಾದಕರು, ಎತ್ತರದ ಕುಲಾಯಿ ಧರಿಸಿದ್ದು, ವಸ್ತ್ರಕ್ಕೆ ಬಳಸಿರುವ ಎಲೆಗಳು ಗೀರುಗೀರಿನಿಂದ ಕೂಡಿವೆ.

ಈ ಮೇಲಿನ ವಿವರಗಳಿಂದ ಕಂಜರಿವಾದಕನ ಆಭರಣಗಳು ಬೇಟೆಗಾರರ ವಸ್ತ್ರ ಮತ್ತು ಆಭರಣಗಳನ್ನು ಪ್ರತಿಬಿಂಬಿಸುವಂತಿದೆ. ಹಾಗಾಗಿ ಬುಡಕಟ್ಟು ಹಿನ್ನೆಲೆಯಿಂದ ಬಂದ ವಾದ್ಯಗಾರರು ಇವರಾಗಿದ್ದಾರೆ ಎಂಬುದನ್ನು ಸ್ಪಷ್ಟವಾಗಿ ಗುರ್ತಿಸಬಹುದಾಗಿದೆ. ಒಟ್ಟಾರೆ ವಾದ್ಯಾಗಾರರ ವಸ್ತ್ರ ಮತ್ತು ಆಭರಣಗಳ ಧಾರಣೆಯು, ಸ್ಥಳ, ಸಂದರ್ಭಗಳ ಹಿನ್ನೆಲೆಯಲ್ಲಿ, ಅವುಗಳ ಧಾರಣೆಯ ಪ್ರಮಾಣದಲ್ಲಿ ವಸ್ತ್ರಕ್ಕೆ ಬಳಸಿರುವ ಕಚ್ಚಾವಸ್ತು (ಮಟಿರಿಯಲ್)ವಿನಲ್ಲಿ ವ್ಯತ್ಯಾಸವಿರುವುದು ಸ್ಪಷ್ಟ.

೩.೩. ಸ್ತ್ರೀಯರು

ಅಲಂಕಾರ ಪ್ರಿಯತೆ ಮಾನವನ ಹುಟ್ಟುಗುಣ. ಆದರೆ ಸ್ತ್ರೀ–ಪುರುಷರಲ್ಲಿ ಯಾರು ಹೆಚ್ಚು ಅಲಂಕಾರಕ್ಕೆ ಪ್ರಾಧಾನ್ಯತೆಯನ್ನು ನೀಡುವರು ಎಂಬ ಪ್ರಶ್ನೆ ಬಂದಾಗ ಬಲವಾದ ಹಾಗೂ ಒಪ್ಪಿತವಾದ ಉತ್ತರವಾಗಿರುವುದು ಸ್ತ್ರೀಯರು ಎಂದೇ. ಹಾಗಾಗಿ ಸ್ತ್ರೀಯರು ತಮ್ಮ ಅಲಂಕರಣೆಗೆ ಬಳಸುವ ಹಲವು ಸಾಧನಗಳಲ್ಲಿ ವಸ್ತ್ರ ಮತ್ತು ಆಭರಣಗಳು ಪ್ರಧಾನ ಪಾತ್ರ ವಹಿಸುತ್ತವೆ. ಪುರುಷರು ಧರಿಸುವ ವಸ್ತ್ರಗಳು ಅವರ ಸಾಮಾಜಿಕ ವರ್ಗ ಅಥವಾ ಅಂತಸ್ತನ್ನು ಪ್ರದರ್ಶಿಸಿದರೆ, ಸ್ತ್ರೀಯರು ಧರಿಸುವ ವಸ್ತ್ರ ಅವರ ಗೌರವಗಳೊಂದಿಗೆ ಚೆಲುವು, ಲಾವಣ್ಯಗಳ ವರ್ಧನೆ ಹಾಗೂ ಪ್ರದರ್ಶನದ ಸಾಧನಗಳಾಗಿಯೂ ಪರಿಣಮಿಸಿವೆ. ವಿಜಯನಗರ ಕಾಲದಲ್ಲಿ ಸ್ತ್ರೀ–ಪುರುಷರಿಬ್ಬರೂ ಆಭರಣ ಪ್ರಿಯರಾಗಿದ್ದರು ಎಂಬ ವಿಷಯ ವನ್ನು ತಿಳಿದಿದ್ದೇವೆ. ಸ್ತ್ರೀಯರು ಧರಿಸುತ್ತಿದ್ದ ವಸ್ತ್ರ ಮತ್ತು ಆಭರಣಗಳು ಪುರುಷರಿಗಿಂತ ವಿಭಿನ್ನವಾಗಿದ್ದವು. ಹಾಗಾಗಿ ಈ ಅಧ್ಯಾಯದ ಉಪಶೀರ್ಷಿಕೆಯಾದ 'ಸ್ತ್ರೀಯರು' ಎಂಬ ವಿಷಯದ ಅಡಿಯಲ್ಲಿ ಮಹಿಳೆಯರಿಗೆ ಸಂಬಂಧಿಸಿದಂತಹ ವಸ್ತ್ರ ಮತ್ತು ಆಭರಣಗಳ ಕುರಿತು ಚರ್ಚಿಸಲಾಗಿದೆ.

೩.೩.೧. ರಾಣಿಯರು

ಸ್ತ್ರೀಯರು ವಸ್ತ್ರ ಮತ್ತು ಆಭರಣ ಪ್ರಿಯರು ಎಂಬುದು ನಿಜ ಸಂಗತಿ. ಸಾಮಾನ್ಯ ವರ್ಗದ ಮಹಿಳೆಯಿಂದ ಹಿಡಿದು ರಾಜಮನೆತನದ ಮಹಿಳೆಯರವರೆಗೆ ಎಲ್ಲರೂ ವಸ್ತ್ರ ಮತ್ತು ಆಭರಣ ಪ್ರಿಯರೆ. ಸಾಮಾಜಿಕ, ಧಾರ್ಮಿಕ ಮತ್ತು ಆರ್ಥಿಕ ಅಂತಸ್ತಿಗೆ ಅನುಗುಣವಾಗಿ ವಸ್ತ್ರ ಮತ್ತು ಆಭರಣಗಳ ಧಾರಣೆಯೂ ಬದಲಾಗುವ ಅಂಶಗಳಾಗಿವೆ.

ರಾಜಧಾನಿಯಲ್ಲಿದ್ದ ಆಡಳಿತ ವರ್ಗದ ಮಹಿಳೆಯರು ಸಾಮಾನ್ಯವಾಗಿ ಧರಿಸುತ್ತಿದ್ದ

ವಸ್ತ್ರವೆಂದರೆ 'ಪಾವಡ', 'ಪೈಟ' ಮತ್ತು 'ರವಿಕೆ' (ಕುಪ್ಪಸ). ಇವು ಮೂರು ಮಹಿಳೆಯರು ಮೂಲಭೂತವಾಗಿ ಧರಿಸುತ್ತಿದ್ದ ವಸ್ತ್ರವಾಗಿದ್ದವು.[೧೯೯] ಮೇಲ್ವರ್ಗದ ಮಹಿಳೆಯರಲ್ಲಿ ಸಾಮಾನ್ಯ ವಾಗಿ ಕೇಸರಿ ಬಣ್ಣದ 'ಪಾವಡ' (ಪೆಟಿಕೋಟ್ ಅಥವಾ ಲಂಗ) ಮತ್ತು ತುಂಬ ತೆಳುವಾದ ಮಸ್ಲಿನ್ 'ಪೈಟ' (ಮೇಲ್ ಹೊದಿಕೆ) ಅಥವಾ ದುಪ್ಪಟ್ಟ ತುಂಬಾ ಜನಪ್ರಿಯವಾದ ವಸ್ತ್ರಗಳಾ ಗಿದ್ದವು[೨೦೦]. ರಾಣಿಯರು ಹಾಗೂ ರಾಣಿಯವಾಸದವರು ಹೆಚ್ಚೂ ಕಡಿಮೇ ಇದೇ ರೀತಿಯ ವಸ್ತ್ರವನ್ನು ಧರಿಸುತ್ತಿದ್ದರು. ಇವು ಸಾಮಾನ್ಯ ಮಹಿಳೆ ಉಡುವ ಸೀರೆಗಿಂತ ಭಿನ್ನವಾಗಿದೆ.

ಅಧೋವಸ್ತ್ರವು ಸ್ತ್ರೀ-ಪುರುಷರಿಬ್ಬರಿಗೂ ಪ್ರಧಾನ ಉಡುಪಾಗಿತ್ತು. ಕಟಿಯ ಸುತ್ತ ಬಟ್ಟೆಯೊಂದನ್ನು ಸುತ್ತಿ, ಅದರ ನಿರಿಗೆಗಳು ಕಾಲುಗಳ ನಡುವೆ ನೇತಾಡುವಂತೆ ಉಡ ಲಾಗುತ್ತಿತ್ತು. ಇದನ್ನು ಮೇಖಲೆಯೆಂಬ ಆಭರಣವು ವಸ್ತ್ರವನ್ನು ಭದ್ರಪಡಿಸುತ್ತಿತ್ತು. ಪ್ರಾಚೀನ ಕಾಲದಿಂದಲೂ ವಿವಿಧ ರೀತಿಯಲ್ಲಿ ಸೀರೆಯನ್ನು ಉಡುವ ಕ್ರಮವನ್ನು ಗಮನಿಸುತ್ತಾ ಬಂದಿದ್ದೇವೆ.

ಬಾದಾಮಿ ಚಾಲುಕ್ಯರ ಕಾಲದಲ್ಲಿ ಮುಖ್ಯವಾಗಿ ಗಮನಿಸಬೇಕಾದ ಅಂಶವೆಂದರೆ ಶ್ರೀಮಂತ ಸ್ತ್ರೀಯರಲ್ಲಿ ಇಲ್ಲವೇ ರಾಣಿಯರಲ್ಲಿ ಸೀರೆಯನ್ನುಡುವಾಗ ಸೀರೆಯ ನಿರಿಗೆಗಳು ಸೊಂಟದ ಮಧ್ಯದಿಂದ ಇಲ್ಲವೇ ಬದಿಯಲ್ಲಿ ಇಳಿಬಿದ್ದಿರುವಂತೆ ಚಿತ್ರಿತವಾಗಿವೆ. ಮಧ್ಯದ ನಿರಿಗೆಗಳನ್ನು ಕಾಲುಗಳ ನಡುವೆ ಹಿಂದಕ್ಕೆ ಒಯ್ದು ಕಟಿಭಾಗದಲ್ಲಿ ಸೇರಿಸಿ ಹಾಕುತ್ತಿದ್ದುದು ಗಮನಾರ್ಹ ಅಂಶ.[೨೦೧]

ಹೊಯ್ಸಳರ ಕಾಲದಲ್ಲಿ ರಾಣಿಯರು ಕಡಿಮೆ ಉದ್ದವಿರುವ ಅಧೋವಸ್ತ್ರವನ್ನು ಧರಿಸು ತ್ತಿದ್ದರು. ಆದರೆ ದೇಹದ ಮೇಲ್ಭಾಗ ಬೆತ್ತಲೆಯಿರುತ್ತಿತ್ತು.[೨೦೨] ಬಾಣನ ಹರ್ಷ ಚರಿತೆಯಲ್ಲಿ ಉಲ್ಲೇಖಿಸಿರುವಂತೆ ಮೇಲ್ವರ್ಗದ ಮಹಿಳೆಯರು ಶ್ವೇತ ಬಣ್ಣದ ಅಧೋವಸ್ತ್ರವನ್ನು ಧರಿಸು ತ್ತಾರೆ ಎಂದು ಉಲ್ಲೇಖಿಸಿದ್ದಾನೆ.[೨೦೩]

ವಿಜಯನಗರದ ರಾಜರು ತುಂಬ ಬೆಲೆಬಾಳುವ ವಸ್ತ್ರ ಮತ್ತು ಆಭರಣಗಳನ್ನು ಧರಿಸುತ್ತಿದ್ದರು. ಬಾರ್ಬೋಸನ ಪ್ರಕಾರ, "ರಾಜಮನೆತನ ಸ್ತ್ರೀಯರು ಹಾಗೂ ರಾಣಿಯರು ಶ್ವೇತವರ್ಣದ ತೆಳುವಾದ ಹತ್ತಿ ಬಟ್ಟೆಯನ್ನು ಅಥವಾ ಕಡುಬಣ್ಣದ ರೇಷ್ಮೆ ವಸ್ತ್ರವನ್ನು ಧರಿಸುತ್ತಿದ್ದರು. ಅದು ಐದು ಯಾರ್ಡ್ ಉದ್ದವಿದ್ದು, ಅದರ ಮೊದಲ ಒಂದು ಭಾಗವನ್ನು ಹೊಕ್ಕುಳ ಬಳಿ ಸಿಕ್ಕಿಸಿ, ಮತ್ತೊಂದು ಭಾಗದಿಂದ ಸ್ತನಗಳ ಮೇಲೆ ಹಾದು ಎಡ ಭುಜದ ಕೆಳಗೆ ಇರುತ್ತಿತ್ತು. ಇದರಿಂದ ಒಂದು ಭುಜ ಮತ್ತು ತೋಳು ಸುತ್ತುವರಿದಿರಲಿಲ್ಲ"[೨೦೪] ಎಂದು ವಿವರಿಸಿರುವನು.

ಪಿಟ್ರೋಡೆಲ್ಲಾವೆಲ್ಲಾ ಹೇಳುವಂತೆ, "ಸ್ತ್ರೀಯರು ಚಿತ್ರಗಳಿಂದಾದ ರೇಷ್ಮೆಯ ವಸ್ತ್ರವನ್ನು ತಮ್ಮ ಪಾದಗಳವರೆಗೆ ನಿರಿಗೆ ಹಿಡಿವ ಧರಿಸುತ್ತಿದ್ದರು. ಆದರೆ ದೇಹದ ಮೇಲ್ಭಾಗ ಬೆತ್ತಲೆ ಯಿರುತ್ತಿತ್ತು ಅಥವಾ ಶ್ರೇಷ್ಠಮಟ್ಟದ ಲೆನಿನ್ ವಸ್ತ್ರವನ್ನು ತಮ್ಮ ಭುಜಗಳ ಮೇಲೆ ಮೇಲು ಹೊದಿಕೆ(ದುಪ್ಪಟ)ಯನ್ನು ಹೊದೆಯುತ್ತಿದ್ದರು".[೨೦೫] ಸಾಮಾನ್ಯವಾಗಿ ಮಹಿಳೆಯರು ಎರಡು ರೀತಿಯ ವಸ್ತ್ರಗಳನ್ನು ಧರಿಸುತ್ತಿದ್ದರು. ಒಂದು ಸಣ್ಣ ಪ್ರಮಾಣದ ಮೇಲು ಹೊದಿಕೆ, ಮತ್ತೊಂದು ಉದ್ದವಾದ ವಸ್ತ್ರದಿಂದ ಸೊಂಟದ ಕೆಳಭಾಗವನ್ನು ಪೂರ್ಣಪ್ರಮಾಣದಲ್ಲಿ ಸುತ್ತುವರಿದಿರುತ್ತಿತ್ತು.

ಆಮುಕ್ತಮಾಲ್ಯದಲ್ಲಿಯೂ ಎರಡು ರೀತಿಯ ವಸ್ತ್ರವನ್ನು ಸ್ತ್ರೀಯರು ಧರಿಸುತ್ತಿದ್ದರು ಎಂಬ ಬಗ್ಗೆ ಉಲ್ಲೇಖವಿದೆ. ಒಂದು 'ಪಾವಡ' ಮತ್ತೊಂದು 'ಪೈಟಾ'[೨೦೬] ಪಾಯೇಸ್ ಉಲ್ಲೇಖಿಸುವಂತೆ, "ರಾಣಿಯರು ತುಂಬಾ ಬೆಲೆಬಾಳುವ ರೇಷ್ಮೆ ವಸ್ತ್ರವನ್ನು ಧರಿಸುತ್ತಾರೆ. ಅಲ್ಲದೇ ಅವರ ಪರಿವಾರದವರು ಸಹ ರಾಣಿಯರಂತೆಯೇ ಅಲಂಕೃತಗೊಂಡಿರುತ್ತಾರೆ".[೨೦೭]

ಮಹಿಳೆಯರು ಕೆಲ ಸಂದರ್ಭಗಳಲ್ಲಿ ಮಾತ್ರ ಪಾದರಕ್ಷೆಗಳನ್ನು ಧರಿಸುತ್ತಿದ್ದರು. ನಿಕೊಲೊ-ದೆ-ಕೊಂತಿ ಈ ಪದ್ಧತಿಯ ಬಗ್ಗೆ ಹೇಳುತ್ತಾ, "ಮಹಿಳೆಯರು ಕೆಲ ಸ್ಥಳಗಳಲ್ಲಿ ಮಾತ್ರ ಶೂ ಅಥವಾ ಪಾದರಕ್ಷೆಗಳನ್ನು ಹಾಕುತ್ತಿದ್ದರು. ಅವು ಚಿನ್ನ ಮತ್ತು ರೇಷ್ಮೆಯಿಂದ ಅಲಂಕೃತಗೊಂಡಿದ್ದವು"[೨೦೮] ಎಂದು ಉಲ್ಲೇಖಿಸುತ್ತಾನೆ.

ಚೆನ್ನಬಸವಪುರಾಣದಲ್ಲಿ ಗಿರಿಜಾಕಲ್ಯಾಣದ ಸಂದರ್ಭದಲ್ಲಿ ಗಿರಿಜೆಯು ಧರಿಸಿದ್ದ ಆಭರಣಗಳ ಕುರಿತು ಹೀಗೆ ವರ್ಣಿಸುತ್ತದೆ. ಅದರಂತೆ,

ಲಲಿತ ಜೊಳೆಯ ರನ್ನದೋಲೆ ಮುತ್ತಿನ ಬೊಟ್ಟು
ಪೊಳೆವ ಮೂಗುತಿ ಕಂಠಮಾಲೆ ಭುಜಕೀರ್ತಿ ಸರ
ಪಳಿ ತೋಳಬಳೆ ಹಸ್ತ ಕಡೆಗೆ ಮಾಣುಕ್ಯದುಂಗುರ ರಂಜಿಪೊಡ್ಯಾಣಮುಂ।
ಉಲಿವ ಘಂಟೆಗಳ ಕಟಿಸೂತ್ರ ನೂಪುರ ಕಾಲ
ಲುಳಿ ಕಡೆಯ ಬೆರಳಮುದ್ರಿಕೆ ಕಂಕಣಂಗಳು
ಲಲನೆಯರ್ ಗಿರಿರಾಜಸುತೆಗೆ ಸಿಂಗರಿಸಲತಿವಿಭವದಿಂ ರಂಜಿಸಿದರು॥[೨೦೯]

ಈ ರೀತಿಯಾಗಿ ರಾಣಿ ಅಥವಾ ರಾಜ ಮನೆತನದ ಸ್ತ್ರೀಯರು ಬೆಲೆಬಾಳುವ ಆಭರಣಗಳನ್ನು ಧರಿಸುತ್ತಿದ್ದರು ಎಂಬುದಾಗಿ ತಿಳಿಯಬಹುದು.

ಅದಕ್ಕೆ ಪೂರಕವಾಗಿ ರಾಮನಾಥ ಚರಿತದಲ್ಲಿ ವಸ್ತ್ರದ ಕುರಿತು ಹೀಗೆ ವರ್ಣಿಸಿದೆ.

ತೋರದುರಿಬು ನಿರ್ಮಿವಿಡಿದುಟ್ಟ ದುಗುಲದ
ಸೀರೆ ಪೆರ್ಮಾಲೆಗಳೆಡೆಯೊಳು
ಸೇರಿದ ಸಿರಿಗಂಪಿನಣು ಮೆರ್‍ಯಿಲಾ
ನಾರಿ ಸಿಂಗರಿಸಿ ಮೆರೆದಿವಳು[೨೧೦]

ಎಂಬುದಾಗಿ ಸ್ತ್ರೀಯರ ಸೀರೆಯನ್ನು ನಿರಿಗೆಯಿಡಿದು ಉಡುತ್ತಿದ್ದ ಬಗೆಯನ್ನು ವರ್ಣಿಸಿದೆ. ಸನತ್ಕುಮಾರ ಚರಿತೆಯಲ್ಲಿ ಸ್ತ್ರೀಯರ ವಸ್ತ್ರ ಮತ್ತು ಅಭರಣವನ್ನು ಕುರಿತು ಪದ್ಯವೊಂದು ಹೀಗೆ ವರ್ಣಿಸಿದೆ.

ಗುರು ಜಘನಯುಗ ಪೆಚ್ಚೆ ಬೆಳೆವು
ತ್ತಿರಲು ಕಂಡಲರೆಂಬ ರತ್ನದ
ಸರವೆಯಿಂ ಬಲುಬಿಗಿದು ಬಂಧಿಸಿದಂತೆ ಕಾಂಚನದ
ಗಿರಿಯೆರಡನೊಂದಾಗಿ ಚಿನ್ನದ
ಸರಪಣಿಯೊಳಬ್ಬಜನ ಕಟ್ಟಿದ
ಪರಿಯೊಳವರ ನಿತಂಬಗಳ ಮೇಖಲೆ ವಿರಾಜಿಸಿತು[೨೧೧]

ಎಂದು ವರ್ಣಿಸಿದೆ. ಹೀಗೆ ಹಲವಾರು ವಿವರಣೆಗಳು ವಸ್ತ್ರ ಮತ್ತು ಆಭರಣಗಳ ಕುರಿತ ಸಾಹಿತ್ಯದಲ್ಲಿನ ಉಲ್ಲೇಖಗಳಲ್ಲಿ ಸಿಗುತ್ತವೆ.

ಆಭರಣಗಳ ಕುರಿತಂತೆ ಪಾಯೇಸ್, "ಮಹಾನವಮಿ ಹಬ್ಬದ ಸಂದರ್ಭದಲ್ಲಿ ಮಹಿಳೆಯರು ತುಂಬಾ ಬೆಲೆಬಾಳುವ ಹಾರಗಳನ್ನು, ಅವು ವಜ್ರ, ರೂಬಿ, ಮುತ್ತುಗಳಿಂದ ತಯಾರಿಸಿದವುಗಳಾಗಿದ್ದು, ತೋಳ್ಬಂದಿ, ಕಟಿಭಾಗದಿಂದ ತೊಡೆಯವರೆಗೆ ವಿವಿಧ ಎಳೆಗಳಿಂದ ಕೂಡಿದ ಚಿನ್ನ ಹಾಗೂ ಬೆಲೆಬಾಳುವ ಹರಳುಗಳಿಂದ ತಯಾರಿಸಿದ ಕಟಿಬಂಧವನ್ನು ಒಂದರೊಳಗೆ ಒಂದರಂತೆ ತೂಗುಬಿಟ್ಟಿರುವಂತೆ ಧರಿಸಿದ್ದರು. ಅಲ್ಲದೇ ಇತರ ಹಲವಾರು ಆಭರಣಗಳನ್ನು ಧರಿಸಿದ್ದು, ಮುತ್ತಿನಿಂದ ತಯಾರಿಸಲಾದ ಕಾಲಂದಿಗೆ ಧರಿಸುತ್ತಿದ್ದನ್ನು ಉಲ್ಲೇಖಿಸುತ್ತಾನೆ".[೨೧೨]

ಶ್ರೀಮಂತ ಮನೆತನದ ಸ್ತ್ರೀಯರು ಏಳು ಜೊತೆ ಆಭರಣಗಳನ್ನು ಹೊಂದುವುದು ಆಗಿನ ಸಂಪ್ರದಾಯವಾಗಿತ್ತು. ಇವುಗಳನ್ನು ಅವರು ವಾರದ ಪ್ರತೀ ದಿವಸವೂ ಕೂಡ ತೊಡುತ್ತಿದ್ದರು.[೨೧೩]

ನ್ಯೂನಿಜ್ ವಿಜಯನಗರಕ್ಕೆ ಭೇಟಿ ನೀಡಿ ಮಹಾನವಮಿ ದಿಬ್ಬದ ಮುಕ್ತಾಯದ ಕಾರ್ಯಕ್ರಮದಲ್ಲಿ ಭಾಗವಹಿಸಿದ್ದನು. ಅದರಲ್ಲಿ ಅರಸಿಯರು ಧರಿಸಿದ್ದ ವಸ್ತ್ರ ಮತ್ತು ಆಭರಣಗಳ ಬಗ್ಗೆ ಸ್ವತಃ ಕಂಡಿದ್ದು, ಆ ಕುರಿತು ಅವನು ಈ ರೀತಿಯಾಗಿ ವರ್ಣಿಸುತ್ತಾನೆ. "ಆರತಿಯ ತಟ್ಟೆಗಳನ್ನು ಹಿಡಿದು ಅಂತಃಪುರ ಸುಮಂಗಳಿಯರು ಅಂಗಳಕ್ಕೆ ಬರುವ ಮುನ್ನ ಚಾಟಿಯನ್ನು ಹೆಗಲಿಗೇರಿಸಿಕೊಂಡು ದಂಡಧಾರಣೀ ದೌವಾಲಿಕೆಯರು, ಅರ್ಧಪುರುಷರು, ಸಂಗೀತ ವಾದ್ಯಗಾರ್ತಿಯರು ರಜತದೊಡವೆತೊಟ್ಟು ಹೊರಯಾಳುಗಳು, ಅಂಗಳಕ್ಕೆ ಬರುತ್ತಿದ್ದರು. ಆಗ ಅತ್ಯಂತ ಸುಂದರಿಯರಾದ ಮೂವತ್ತಾರು ಅರಸಿಯರು ಬಂಗಾರದ ಕಳಸಗಳನ್ನು ಕೈಯಲ್ಲಿ ಹಿಡಿದು, ಮಣಭಾರದ ಒಡವೆಗಳ ಒತ್ತಡಕ್ಕೆ ಮಣಿದು ಭಾಗಿ, ಅಡಿ ಮುಂದಿಡಲಾರದೆ ತಮ್ಮ ಸಖಿಯರೊಡಗೂಡಿ ಮೆಲ್ಲ ಮೆಲ್ಲಗೆ ನಡೆದು ಬರುತ್ತಿದ್ದುದನ್ನು ನೋಡಿದ್ದ ಎಂಬುದಾಗಿ ತಿಳಿಸುತ್ತಾನೆ.

ನ್ಯೂನಿಜ್ ಮುಂದುವರಿಸುತ್ತಾ, "ಇದರಲ್ಲಿ ಪಾಲ್ಗೊಂಡಿದ್ದ ಸುಮಾರು ೧೬ ರಿಂದ ೨೦ ವರ್ಷಗಳ ೬೦ ಅರಸಿಯರನ್ನು ಅವನು ಎಣಿಕೆ ಮಾಡಿದ್ದ, ಅಲ್ಲದೇ ಅವರು ತೊಟ್ಟ ರೇಷ್ಮೆಯ ಪೀತಾಂಬರ, ಸುವರ್ಣದ ಮುಡಿ ಹೂ, ರತ್ನ, ಪಚ್ಚೆ, ಮಾಣಿಕ್ಯ, ವಜ್ರಗಳ ಕಂಠಾಭರಣ, ಮುತ್ತಿನೆಳೆಗಳ ಸರ ಬೃಹತ್ ಗಾತ್ರದ ಭುಜಕೀರ್ತಿ, ಮುಂಗೈಯನ್ನೆಲ್ಲ ಮುಚ್ಚಿದ್ದ ಕಂಕಣಗಳು, ವಜ್ರದೊಂಕಿ, ಮಣಿಮಯ ಸುವರ್ಣ ಮೇಖಲೆಯಿಂದ ಜೋಲಾಡುತ್ತಾ ನಡುತೊಡೆ ತಟ್ಟುತ್ತಿದ್ದ ಮಣಿಗುಚ್ಚ, ಸಾಲುಮುತ್ತಿನ ನೂಪುರ – ಹೀಗೆ ಅಡಿಯಿಂದ ಮುಡಿಯವರೆಗೂ ಅವರನ್ನು ಅಲಂಕರಿಸಿದ್ದ ಆಭರಣಗಳ ಪಟ್ಟಿಯನ್ನು ಮಾಡಿ ನಮ್ಮ ಮುಂದಿಟ್ಟಿರುವನು". ಹಾಗೆಯೇ ಮುಂದುವರೆಸುತ್ತಾ "ಇವರು ತೊಟ್ಟ ಒಡವೆಗಳ ಬೆಲೆ ಯನ್ನು ಕಟ್ಟುವವರ್ಯಾರು? ಎಂಬ ಪ್ರಶ್ನೆ ಕೇಳಿಕೊಂಡ. ತೊಟ್ಟ ರತ್ನಾಭರಣಗಳ ಭಾರದಿಂದ ಕುಸಿದಿದ್ದ ಅರಸಿಯರಿಗೆ ಭುಜಕೊಟ್ಟು ಆಧಾರಸ್ತಂಭದಂತೆ ಅವರ ಸಖಿಯಂದಿರು ನಿಂತಿದ್ದರು"[೨೧೪] ಎಂದು ವರ್ಣಿಸುತ್ತಾನೆ. ನ್ಯೂನಿಜ್‌ನ ವಿವರಣೆಯಿಂದ ರಾಜ ಮನೆತನದ ಸ್ತ್ರೀಯರ ವಸ್ತ್ರ ಮತ್ತು ಆಭರಣದ ವಿಧಗಳು, ಅಲಂಕರಣೆ, ಸಂದರ್ಭ, ಶ್ರೀಮಂತಿಕೆ, ಆಸಕ್ತಿ, ಅಭಿವ್ಯಕ್ತಿಗಳ ಉದ್ದೇಶಗಳು ಅರ್ಥವಾಗುತ್ತವೆ.

ಹಂಪಿಯ ವಿಠಲ ದೇವಾಲಯದ ಸಮೀಪದಲ್ಲಿ ಕಂಡುಬರುವ ತುಲಾಭಾರದ ನಿಲುಗಂಬದ ತಳಭಾಗದಲ್ಲಿರುವ ಉಬ್ಬುಶಿಲ್ಪದಲ್ಲಿ ಕೃಷ್ಣದೇವರಾಯ ಮತ್ತು ಆತನ ಇಬ್ಬರು ಹೆಂಡತಿಯರು ಎಂದು ಗುರ್ತಿಸಿದ್ದಾರೆ. ರಾಣಿಯರಿಬ್ಬರೂ ಅಂಜಲಿಹಸ್ತದಲ್ಲಿ ನಿಂತಿದ್ದು ತಲೆಗೂದಲು ತುರುಬು ಹಾಕಿದೆ. ಕಿವಿಗೆ ವೃತ್ತಾಕಾರದ ಓಲೆ, ಮೂರೆಳೆಯ ಸರ, ಎರಡೆಳೆಯ ಬಾಹುಬಂಧಿ ಮತ್ತು ಮುಂಗೈ ಬಳೆಗಳನ್ನು ಧರಿಸಿರುವುದು ಕಂಡುಬರುತ್ತದೆ. ಅಲ್ಲದೆ ಅಲಂಕೃತ ಸೀರೆಯನ್ನು ನಾಭಿಯ ಭಾಗದಿಂದ ಪಾದಗಳವರೆಗೆ ಧರಿಸಿದ್ದಾರೆ. ಕಟಿಭಾಗದಲ್ಲಿ ಮೇಖಲೆಯನ್ನು ಧರಿಸಿರುವುದು ಕಾಣಬಹುದು. ಆದರೆ ದೇಹದ ಮೇಲ್ಭಾಗದಲ್ಲಿ ವಸ್ತ್ರ ಸ್ಪಷ್ಟವಾಗಿ ಗೋಚರಿಸುವುದಿಲ್ಲ.

ಹಂಪಿಯ ಮಹಾನವಮಿದಿಬ್ಬದ ಎಡಭಾಗದ ಕೆಳಪಟ್ಟಿಯ ಒಂದರ ಶಿಲ್ಪದಲ್ಲಿ ರಾಣಿ ಮಲ್ಲಯುದ್ಧವನ್ನು ವೀಕ್ಷಿಸುತ್ತಿರುವ ದೃಶ್ಯವಿದೆ. ರಾಣಿ ಎತ್ತರದ ಆಸನದಲ್ಲಿ ಕಾಲ ಮೇಲೆ ಕಾಲು ಹಾಕಿ ಕುಳಿತಿದ್ದಾಳೆ. ರಾಣಿಯ ಹಿಂದೆ ಸೇವಕಿ ಛತ್ರವನ್ನು ಹಿಡಿದಿದ್ದಾಳೆ. ರಾಣಿಯ ಮುಂದಿರುವ ಸ್ತ್ರೀ ಮಲ್ಲಯುದ್ದ ಮುನ್ನಡಿಸುವಳಿದಂತಿದೆ. ರಾಣಿಯು ತಲೆಗೂದಲನ್ನು ತುರುಬು ಹಾಕಿದ್ದು, ಅದಕ್ಕೆ ಒಂದು ವಸ್ತ್ರ ಸುತ್ತಿದ್ದಂತಿದೆ. ಕಂಠೀಹಾರ ಮತ್ತು ಮೂರೆಳೆಯಸರ ಧರಿಸಿದ್ದಾಳೆ. ಯಜ್ಞೋಪವೀತ, ನೂಪುರ ಸಹ ಧರಿಸಿದ್ದಾಳೆ. ವಸ್ತ್ರಕ್ಕೆ ಸಂಬಂಧಿಸಿದಂತೆ ಕಟಿಯಿಂದ ಪಾದಗಳವರೆಗೆ ಕಚ್ಚೆ ಹಾಕಿ ಸೀರೆ ಧರಿಸಿದ್ದು, ದೇಹದ ಮೇಲ್ಭಾಗ ಬೆತ್ತಲೆಯಿದೆ.

ಕೃಷ್ಣದೇವರಾಯನ ರಾಣಿಯಾದ ತಿರುಮಲಾದೇವಿ ಮತ್ತು ಚಿನ್ನದೇವಿಯರು ತಿರುಪತಿಗೆ ಹೋಗಿ ವೆಂಕಟೇಶ್ವರ ಸ್ವಾಮಿಯ ದರ್ಶನ ಮಾಡಿದ್ದರು. ೧೫೧೩ರ ಫೆಬ್ರವರಿ ೧೦ರಂದು ನವರತ್ನ ಖಚಿತವಾದ ಕಿರೀಟ, ಪದಕ ಮತ್ತು ಮೂರೆಳೆಯ ಮುತ್ತಿನ ಸರವನ್ನು ದೇವರಿಗೆ ಸಮರ್ಪಿಸಿದ್ದರು.[೨೧೫] ಮೂರೆಳೆ ಮುತ್ತಿನ ಸರದಲ್ಲಿ ಬಳಸಿದ್ದ ನವರತ್ನಗಳಾದ ಚಿನ್ನ, ಕೆಂಪುಕಲ್ಲು, ಪಚ್ಚೆ, ರತೀ, ವಜ್ರ, ಮಾಣಿಕ್ಯ, ನೀಲಾ, ವೈಢೂರ್ಯ, ಗೋಮೇಧಿಕಾ ಮತ್ತು ಮುತ್ತುಗಳ ಸಂಖ್ಯೆಯನ್ನು ಸಹ ತಿಳಿಯಬಹುದಾಗಿದೆ. ಈ ಮೂರಳೆಯ ಮುತ್ತಿನ ಸರದ ಒಟ್ಟು ತೂಕ ೯೧.೩ ಎಂದಿದೆ. ೧೫೧೪ರಲ್ಲಿ ಮತ್ತೊಮ್ಮೆ ತಿರುಪತಿಗೆ ಭೇಟಿ ನೀಡಿದಾಗ ಚಿನ್ನದೇವಿಯು ಮುತ್ತು, ರತ್ನ, ವಜ್ರಗಳಿಂದ ಕೂಡಿದ ಕಂಠಮಾಲೆಯನ್ನು ಸಮರ್ಪಿಸಿದ್ದಳು.[೨೧೬]

ಇದರಿಂದ ಗಮನಿಸಬಹುದಾದ ಅಂಶವೆಂದರೆ ರಾಣಿಯರು ತಾವು ಧರಿಸುತ್ತಿದ್ದ ಆಭರಣಗಳ ಮಾದರಿಯಂತಹ ಆಭರಣಗಳನ್ನು ದೇವರಿಗೆ ದಾನವಾಗಿ ನೀಡಿರುವ ಸಾಧ್ಯತೆಯಿದೆ. ಈ ಮಾದರಿಯ ಬೆಲೆಬಾಳುವ ಆಭರಣಗಳನ್ನು ರಾಣಿಯರು ಧರಿಸುತ್ತಿದ್ದರು ಎಂಬುದಕ್ಕೆ ಶಾಸನಗಳು ಸಹ ಪ್ರಮುಖ ಆಕರಗಳಾಗುತ್ತವೆ.

ತಿರುಪತಿಯ ದೇವಾಲಯದಲ್ಲಿ ಕೃಷ್ಣದೇವರಾಯ ಮತ್ತು ಆತನ ಪತ್ನಿಯರು ಅಂಜಲಿ ಹಸ್ತದಲ್ಲಿ ನಿಂತಿರುವ ಕಂಚಿನ ವಿಗ್ರಹಗಳಿವೆ. ಅಂತಹುದೇ ಮಾದರಿಯ ವಿಗ್ರಹಗಳನ್ನು ಕಮಲಾಪುರದ ವಸ್ತುಸಂಗ್ರಹಾಲಯದಲ್ಲಿ ಪ್ಲಾಸ್ಟರ್ ಆಫ್ ಪ್ಯಾರಿಸ್‌ನಿಂದ ತಯಾರಿಸಿ ನಿಲ್ಲಿಸಿದ್ದಾರೆ. ಆ ವಿಗ್ರಹಗಳ ಮೇಲೆ ಚೆನ್ನಾದೇವಿ ಮತ್ತು ತಿರುಮಲಾದೇವಿ ಎಂಬ ಬರಹವಿದೆ.

ಈ ಶಿಲ್ಪದಲ್ಲಿರುವ ತಿರುಮಲಾದೇವಿ ಕೃಷ್ಣದೇವರಾಯನ ಎಡ ಭಾಗದಲ್ಲಿ ನಿಂತಿದ್ದಾಳೆ. ನಾಭಿಯ ಭಾಗದಿಂದ ಪಾದಗಳವರೆಗೆ ನೀರಿಗೆ ಹಿಡಿದ ಸೀರೆಯನ್ನು ಧರಿಸಿದ್ದಾಳೆ. ಪಾದಗಳ ಮುಂಭಾಗದಲ್ಲಿ ಬೀಸಣಿಗೆಯಂತೆ ನಿರಿಗೆಗಳು ಹರಡಿಕೊಂಡಿದ್ದು, ಈ ವಸ್ತ್ರವು ಸಣ್ಣ ಸಣ್ಣ ಹೂಗಳಿಂದ ಅಲಂಕೃತಗೊಂಡಿದೆ. ದೇಹದ ಮೇಲ್ಭಾಗಕ್ಕೆ ಒಂದು ತೆಳುವಾದ ದುಪ್ಪಟವನ್ನು ಹೊದ್ದು ಕೊಂಡಿರುವುದು ಕಂಡುಬರುತ್ತದೆ. ಅದು ಸ್ತನಗಳ ಅರ್ಧಭಾಗವನ್ನು ಮಾತ್ರ ಮುಚ್ಚಿದ್ದು ರಾಣಿ ತನ್ನ ಎರಡು ಕೈ ಹೆಬ್ಬೆರಳುಗಳ ಮಧ್ಯೆ ದುಪ್ಪಟವನ್ನು ಹಿಡಿದುಕೊಂಡು ನಿಂತಿರುವ ಶೈಲಿ ವಿಶೇಷವಾಗಿದೆ. ರಾಣಿ ಬೈತಲೆ ಬೊಟ್ಟು ಧರಿಸಿದ್ದು, ಬೈತಲೆಯ ಎರಡು ಬದಿಗೆ ಹೇರ್‌ಪಿನ್ ಧರಿಸಿದ್ದಾಳೆ. ಕಿವಿಯಾಭರಣ ಒಂಭತ್ತು ಹರಳುಗಳಿಂದ ಕೂಡಿದ್ದು, ವೃತ್ತಾಕಾರದ ಓಲೆಯನ್ನು ಧರಿಸಿದ್ದಾಳೆ, ಕಂಠಾಭರಣಗಳಲ್ಲಿ ಪದಕವಿರುವ ಕಂಠೀಹಾರ, ಮಧ್ಯಮಣಿಪದಕವಿರುವ ಎರಡೆಳೆಯ ಸರ, ಮತ್ತೊಂದು ಸರವನ್ನು ಧರಿಸಿದ್ದಾಳೆ. ಒಟ್ಟು ಒಂದು ಕಂಠೀಹಾರ ಮತ್ತು ಮೂರೆಳೆಯ ಸರಗಳನ್ನು ಧರಿಸಿದ್ದಾಳೆ. ಇದರೊಂದಿಗೆ ಅಗಲವಾಗಿರುವ ಯಜ್ಞೋಪವೀತವನ್ನು ಎಡಭುಜದಿಂದ ಧರಿಸಿದ್ದು, ಅದು ಕೊಂಡಿಯಿಂದ ಕೂಡಿದೆ. ಎಡಭುಜದ ಬಳಿ ಕೊಂಡಿಯನ್ನು ಗಮನಿಸಬಹುದು. ಪದಕಮಣಿಯಿಂದ ಕೂಡಿದ ಮೂರೆಳೆಯ ತೋಳ್ಬಂದಿ ಧರಿಸಿದ್ದು, ಮುಂಗೈಗೆ ಬಿಡಿಬಿಡಿಯಾದ ಮೂರು ಕಡಗಗಳನ್ನು ಧರಿಸಿದ್ದಾಳೆ. ಅಲ್ಲದೇ ಎರಡು ಕೈಗಳ ಎಲ್ಲಾ ಬೆರಳುಗಳಿಗೆ ಉಂಗುರಗಳನ್ನು ಧರಿಸಿದ್ದಾಳೆ. ರಾಣಿಯ ದುಪ್ಪಟ ಅತ್ಯಂತ ತೆಳುವಾಗಿದ್ದ ಕಾರಣದಿಂದ ದೇಹದ ಮೇಲ್ಭಾಗದ ಆಭರಣಗಳ ಸೂಕ್ಷ್ಮ ಅಧ್ಯಯನ ಸಾಧ್ಯ. ಮೇಖಲೆಯನ್ನು ಸೀರೆಯ ಮೇಲೆ ಧರಿಸಿದ್ದು, ೫ ಎಳೆಗಳಿಂದ ಕೂಡಿದೆ. ಒಂದರ ಕೆಳಗೆ ಒಂದರಂತೆ ತೂಗುಬಿದ್ದಿದೆ. ಇದು ಸಣ್ಣ ಮುತ್ತು, ಗೆಜ್ಜೆಗಳಿಂದ ಕೂಡಿದೆ. ಸೀರೆಯ ನಿರಿಗೆಗಳು ಪಾದಗಳ ಮೇಲಿರುವುದರಿಂದ ನೂಪುರ ಕಾಣಲು ಅಸಾಧ್ಯ. ಪಾದದ ಹೆಬ್ಬೆರಳಿನ ಎರಡನೇ ಬೆರಳಿಗೆ ಕಾಲುಂಗುರ ಧರಿಸಿರುವುದು ಕಂಡುಬರುತ್ತದೆ.

ಚಿನ್ನಾದೇವಿಯು ಧರಿಸಿರುವ ಸೀರೆಯು ತಿರುಮಲಾದೇವಿ ಶಿಲ್ಪದಲ್ಲಿರುವಂತೆಯೇ ಇದೆ. ಆದರೆ ದುಪ್ಪಟ ಹೊದೆದಿರುವ ಶೈಲಿ ಸಾಮಾನ್ಯವಾಗಿದೆ. ಆಭರಣಗಳು ಶಿರ ಮತ್ತು ಕಿವಿಯಾಭರಣಗಳು ತಿರುಮಾಲಾದೇವಿ ಶಿಲ್ಪದಲ್ಲಿದ್ದ ಮಾದರಿಯಲ್ಲಿವೆ. ಆದರೆ ಕಂಠೀಹಾರ ಗಳಲ್ಲಿ ವಿಶೇಷತೆಯಿದೆ. ನಾಲ್ಕನೆ ಎಳೆಯ ಸರಕ್ಕೆ ಹಾಕಿರುವ ಪದಕ ಮಾವಿನಕಾಯಿಯ ವಿನ್ಯಾಸವಿರುವುದು ವಿಶೇಷ, ಉಳಿದಂತೆ ವಸ್ತ್ರ ಮತ್ತು ಆಭರಣಗಳು ಇಬ್ಬರದು ಒಂದೇ ಮಾದರಿ ಮತ್ತು ವಿನ್ಯಾಸದಲ್ಲಿವೆ.

ಒಟ್ಟಾರೆ ವಿಜಯನಗರದ ರಾಣಿಯರು ಧರಿಸುತ್ತಿದ್ದ ವಸ್ತ್ರ ಮತ್ತು ಆಭರಣಗಳು ತುಂಬಾ ಉತ್ತಮ ಗುಣಮಟ್ಟದಿಂದ ಕೂಡಿದ್ದು, ಬೆಲೆಬಾಳುವವು ಆಗಿದ್ದವು. ರೇಷ್ಮೆ ಮತ್ತು ಪೀತಾಂಬರದ ವಸ್ತ್ರಗಳನ್ನು ಧರಿಸುತ್ತಿದ್ದರು. ರಾಣಿಯರು ಕಟಿಭಾಗದಿಂದ ಪಾದಗಳವರೆಗೆ ಸೀರೆಯನ್ನು ನಿರಿಗೆ ಹಿಡಿದು ಧರಿಸುತ್ತಿದ್ದರು. ಆದರೆ ದೇಹದ ಮೇಲ್ಭಾಗಕ್ಕೆ ಸೀರೆಯ ಸೆರಗಾಗಲಿ, ಕುಚಬಂಧವಾಗಲಿ ಅಥವಾ ರವಿಕೆಯನ್ನಾಗಲಿ ಧರಿಸಿರುವ ಉಲ್ಲೇಖ ಕಂಡು ಬರುವುದಿಲ್ಲ. ಆದರೆ ತೆಳುವಾದ ಉನ್ನತ ಗುಣಮಟ್ಟದ ದುಪ್ಪಟವನ್ನು ಧರಿಸುತ್ತಿದ್ದರು. ಆಭರಣಗಳಲ್ಲಿ ಮುಖ್ಯವಾಗಿ ಹೇರ್‌ಪಿನ್

ವಿಶೇಷವಾಗಿದೆ. ಉಳಿದಂತೆ ನ್ಯೂನಿಜ್‌ನ ವಿವರಣೆ ಹಾಗೂ ಸಾಹಿತ್ಯ ಮತ್ತು ಶಾಸನದ ಉಲ್ಲೇಖಗಳು ರಾಣಿಯರ ವಸ್ತ್ರ ಮತ್ತು ಆಭರಣದ ಬಗೆಗಿನ ವಿವರಣೆಗೆ ಪುಷ್ಠಿ ನೀಡುತ್ತವೆ. ಹಾಗಾಗಿ ರಾಣಿಯರು ಮುತ್ತು, ರತ್ನ, ಪಚ್ಚೆ ಮುಂತಾದ ನವರತ್ನದಾಭರಣಗಳನ್ನು ಧರಿಸುತ್ತಿದ್ದು, ತಮ್ಮ ವಸ್ತ್ರಗಳಿಗೂ ಸಹ ಬೆಲೆಬಾಳುವ ಮುತ್ತುಗಳನ್ನು ಹಾಕಿಸಿ ಹೊಲೆದು ವಸ್ತ್ರವನ್ನು ಧರಿಸುತ್ತಿದ್ದರು. ಇದು ವಿಜಯನಗರದ ರಾಣಿಯರು ಬೆಲೆಬಾಳುವ ವಸ್ತ್ರ ಮತ್ತು ಆಭರಣಗಳನ್ನು ಧರಿಸುತ್ತಿದ್ದರು ಎಂಬುದನ್ನು ದೃಢಪಡಿಸುತ್ತದೆ.

೩.೩.೨. ಸೇವಕಿಯರು

ರಾಣಿಯರ ಸೇವೆಯನ್ನು ಮಾಡಲು ಸೇವಕಿಯರನ್ನು ನೇಮಿಸಿಕೊಳ್ಳುತ್ತಿದ್ದರು. ಪಾಯೇಸ್ ವಿವರಿಸುವಂತೆ, "ಇಲ್ಲಿನ ಪ್ರತಿಯೊಬ್ಬ ರಾಣಿಯು ತನ್ನದೇ ಪ್ರತ್ಯೇಕ ಅರಮನೆ ಯನ್ನು ಹೊಂದಿರುವಳು. ಅವಳ ಜೊತೆಗೆ ಚೆನ್ನಾಗಿ ಅಲಂಕೃತವಾದ ಅರವತ್ತು ಪರಿಚಾರಿಕೆ ಯರಿವರು ಎಂದೂ, ಈ ಪರಿಚಾರಿಕೆಯರೊಂದಿಗೆ ಹನ್ನೆರಡು ಸಾವಿರ ಸ್ತ್ರೀಯರಿದ್ದಾರೆಂದು ಹೇಳಲಾಗುತ್ತದೆ. ಇವರು ಹಲವಾರು ಕೆಲಸಗಳನ್ನು ಮಾಡುವ, ಕತ್ತಿ-ಗುರಾಣಿ ಹಿಡಿಯುವ ಸ್ತ್ರೀಯರಿದ್ದಾರೆ, ಕುಸ್ತಿ ಆಡುವವರಿದ್ದಾರೆ, ಕಹಳೆ ಉದುವವರಿದ್ದಾರೆ ಹಾಗೂ ಅನೇಕ ವಾದ್ಯ ಗಳನ್ನು ನುಡಿಸುವವರಿದ್ದಾರೆ"[೨೧೭] ಎಂದು ವಿವರಿಸುವನು.

ಮಹಾನವಮಿದಿಬ್ಬದ ಎಡಭಾಗದ ಕೆಳಪಟ್ಟಿಕೆಯ ಮೇಲಿರುವ ಶಿಲ್ಪಪಟ್ಟಿಕೆಯಲ್ಲಿ (ಚಿತ್ರ-೧೫) ರಾಣಿಯು ಎತ್ತರವಾದ ಆಸನದ ಮೇಲೆ ಕುಳಿತು ಮಲ್ಲಯುದ್ಧವನ್ನು ವೀಕ್ಷಿಸುತ್ತಿದ್ದಾಳೆ. ಅವಳ ಹಿಂದೆ ಸೇವಕಿ ನಿಂತಿದ್ದು, ಛತ್ರಿಯನ್ನು ರಾಣಿಗೆ ಹಿಡಿದಿದ್ದಾಳೆ. ರಾಣಿಯಂತೆಯೇ ಈಕೆಯ ಕುಂಡಲ ಮತ್ತು ತುರುಬು ಹಾಗೂ ತುರುಬಿಗೆ ದಾರವನ್ನು ಕಟ್ಟಿದ್ದಾಳೆ. ತೋಳ್ಬಂಧಿ ಮತ್ತು ಮುಂಗೈ ಬಳೆ ಸಾದಾಯಿದ್ದು, ಒಂದೆಳೆಯಿಂದ ಕೂಡಿದೆ. ಸೀರೆಯನ್ನು ನಾಭಿಯಿಂದ ಪಾದಗಳವರೆಗೆ ಧರಿಸಿದ್ದಾಳೆ.

ಶ್ರೀಶೈಲ ಮಲ್ಲಿಕಾರ್ಜುನ ದೇವಾಲಯದ ಹೊರ ಪ್ರಾಕಾರದಲ್ಲಿರುವ ಶಿಲ್ಪಪಟ್ಟಿಕೆ ಯೊಂದರಲ್ಲಿ ರಾಣಿಯು ಎತ್ತರದ ಆಸನದ ಮೇಲೆ ಕುಳಿತ್ತಿದ್ದಾಳೆ. ಅವಳ ಮುಂದೆ ಸೇವಕಿಯು ಬೀಸಣಿಗೆಯನ್ನು ಬಲಗೈಯಲ್ಲಿ ಹಿಡಿದು ಬೀಸುತ್ತಿರುವ ಚಿತ್ರಣವಿದೆ. ಈ ಸೇವಕಿಯ ಕೂದಲು ತುರುಬನ್ನು ಕಟ್ಟಿದ್ದು ದೊಡ್ಡ ಗಾತ್ರದ ವೃತ್ತಾಕಾರದ ಓಲೆ ಧರಿಸಿದ್ದು, ಕಂಠೀಹಾರ, ಎರಡೆಳೆಯ ತೋಳ್ಬಂಧಿ ಮತ್ತು ಮುಂಗೈಗೆ ಕಡಗಗಳನ್ನು ಧರಿಸಿದ್ದಾಳೆ. ಇವು ಮುತ್ತಿನಿಂದ ಮಾಡಿದ್ದಾಗಿವೆ. ಅಲ್ಲದೇ ಸೀರೆಯ ಮೇಲೆ ಮೂರೆಳೆಯ ಮೇಖಲೆಯನ್ನು ಧರಿಸಿದ್ದು ಅದರಲ್ಲಿ ಮುತ್ತುಗಳ ಗೊಂಡೆಗಳು ಕೆಳಗೆ ನೇತಾಡುತಿರುವಂತಿವೆ. ಸೀರೆಯನ್ನು ನಿರಿಗೆ ಹಿಡಿದು ಉಟ್ಟಿದ್ದು, ಬಲಸೆರಗು ಹಾಕಿದ್ದಾಳೆ. ರಾಣಿಯ ಸೇವೆಯನ್ನು ಮಾಡುತ್ತಿರುವ ಈ ಸೇವಕಿಯ ವಸ್ತ್ರ ಮತ್ತು ಆಭರಣಗಳು ಬಹುತೇಕ ರಾಣಿ ಧರಿಸಿರುವ ವಸ್ತ್ರ ಮತ್ತು ಆಭರಣಗಳಂತೆಯೇ ಇವೆ. ಇವು ರಾಣಿಯರ ಸೇವಕಿಯರು ಸಹ ರಾಣಿಯರಂತೆಯೇ ಅಲಂಕರಿಸಿಕೊಳ್ಳುತ್ತಿದ್ದರು. ಅಲ್ಲದೆ ಶ್ರೀಮಂತ ರಾಗಿದ್ದರು ಎಂಬುದು ಸ್ಪಷ್ಟವಾಗುತ್ತದೆ.

೩.೩.೩. ಚಾಮರಧಾರಣಿಯರು

ಚಾಮರವನ್ನು ಹಿಡಿದಿರುವ ಸ್ತ್ರೀ ಶಿಲ್ಪಗಳು ವಿಜಯನಗರ ಕಾಲದ ಸ್ಮಾರಕಗಳಲ್ಲಿ ಯಥೇಚ್ಚವಾಗಿ ಸಿಗುತ್ತವೆ. ಹಾಗಾಗಿ ಇವರನ್ನು ಚಾಮರಧಾರಣಿಯರು ಎಂದು ಕರೆಯುವುದು ವಾಡಿಕೆ. ಈ ಚಾಮರ ಧಾರಣಿಯರು ಸಾಮಾನ್ಯವಾಗಿ ರಾಜರು, ರಾಣಿಯರು ಮತ್ತು ರಾಜಪರಿವಾರದವರ ಹಿಂದೆ ನಿಂತು ಚಾಮರವನ್ನು ಬೀಸುತ್ತಾ ಸೇವೆ ಸಲ್ಲಿಸುತ್ತಿರುತ್ತಾರೆ. ಕೆಲವೊಮ್ಮೆ ಚಾಮರವನ್ನು ತಮ್ಮ ಎಡ ಅಥವಾ ಬಲ ಭುಜದ ಮೇಲೆ ಅಡ್ಡವಾಗಿ ಮತ್ತು ಉದ್ದವಾಗಿ ಹಿಡಿದಿರುವ ಶಿಲ್ಪಗಳು ಬಹುತೇಕ ಸಿಗುತ್ತವೆ.

'ರಾಜ ಚಿನ್ಹೆಗಳಲ್ಲಿ ಚಾಮರವು ಒಂದು'. ಶಿವಮೊಗ್ಗದಲ್ಲಿ ಸಿಕ್ಕಿರುವ ಕ್ರಿ.ಶ. ೧೦೮೫ರ ಕಾಲಕ್ಕೆ ಸೇರಿದ ಶಾಸನವೊಂದರಲ್ಲಿ ಗುಡಿ, ಚಾಮರ ಮುಂತಾದವುಗಳು ರಾಜ ಚಿನ್ಹೆಗಳಾಗಿತ್ತು ಎಂಬುದನ್ನು ಉಲ್ಲೇಖಿಸಿದೆ.[೨೧೮] ಅಲ್ಲದೇ ಧಾರ್ಮಿಕ ಮತ್ತು ದೇವತಾ ಕಾರ್ಯಗಳಲ್ಲಿ ಸಹ ಚಾಮರವನ್ನು ಮುಖ್ಯ ಸೇವೆಯಾಗಿ ಬಳಸುತ್ತಾರೆ. ರಾಜರು ದೇವರಿಗೆ ಅರ್ಪಿಸುವ ದಾನ ಮತ್ತು ಕಾಣಿಕೆಗಳಲ್ಲಿ ಆಭರಣ, ಭೂಮಿ ಇವುಗಳೊಂದಿಗೆ ಚಾಮರಗಳನ್ನು ಅರ್ಪಿಸುತ್ತಿದ್ದ ಉದಾಹರಣೆಗಳು ನಮಗೆ ಶಾಸನಗಳಲ್ಲಿ ಲಭ್ಯವಿವೆ. ಕ್ರಿ.ಶ. ೧೫೨೧ರಲ್ಲಿ ಕೃಷ್ಣದೇವರಾಯನು ತಿರುಪತಿಯ ತಿಮ್ಮಪ್ಪನಿಗೆ ನವರತ್ನ ಖಚಿತವಾದ ಪೀತಾಂಬರ, ಎರಡು ಚಾಮರಗಳು ಸೇರಿ ದಂತೆ ಇತರ ಆಭರಣಗಳನ್ನು ದಾನವಾಗಿ ನೀಡಿದ್ದಾನೆ.[೨೧೯] ಹಾಗಾಗಿ ಚಾಮರವು ದೇವರಿಗೆ ಹಾಗೂ ರಾಜನಿಗೆ ಅಗತ್ಯವಾಗಿ ಸಲ್ಲಿಸುತ್ತಿದ್ದ ಸೇವಾ ಪರಿಕರಗಳಾಗಿದ್ದವು. ಅಂತೆಯೇ ಈ ಸೇವೆಯನ್ನು ಮಾಡಲು ರಾಜರು ಸ್ತ್ರೀಯರನ್ನು ನೇಮಿಸಿಕೊಳ್ಳುತ್ತಿದ್ದರು. ಹಾಗಾಗಿ ಇವರು ರಾಜರ ಆಸ್ಥಾನದಲ್ಲಿ ಹಾಗೂ ರಾಜರು ಹೊರ ಹೋದಲ್ಲಿ ರಾಜರೊಂದಿಗೆ ಹೋಗಿ ಚಾಮರಸೇವೆಯನ್ನು ಸಲ್ಲಿಸುತ್ತಿದ್ದರು. ಹಾಗಾಗಿ ಇವರು ಅರಮನೆಯಲ್ಲಿ ಪ್ರಮುಖ ಪಾತ್ರವನ್ನು ವಹಿಸುತ್ತಿದ್ದರು ಎಂಬುದನ್ನು ತಿಳಿಸುತ್ತದೆ. ಬಹುಶಃ ಈ ಹಿನ್ನೆಲೆಯಲ್ಲಿ ಈ ಚಾಮರಧಾರಣಿಯರು ಉತ್ತಮ ರೀತಿಯ ಹಾಗೂ ಬೆಲೆಬಾಳುವ ವಸ್ತ್ರ ಮತ್ತು ಆಭರಣಗಳನ್ನು ಧರಿಸುತ್ತಿದ್ದರು ಎಂಬುದು ಗಮನಾರ್ಹ ಅಂಶ.

ಈ ಚಾಮರವನ್ನು 'ಯಾಕ್'(ಚಮರೀಮೃಗ) ಎಂಬ ಪ್ರಾಣಿಯ ಬಾಲದ ಕೂದಲಿನಿಂದ ತಯಾರಿಸಿದ್ದು, ಅದಕ್ಕೆ ಬೆಳ್ಳಿ ಅಥವಾ ಬಂಗಾರದ ಹಿಡಿಕೆಯನ್ನು ಸೇರಿಸಿರುತ್ತಾರೆ.

ಅನಂತಶಯನ ದೇವಾಲಯದಲ್ಲಿನ ಮಹಾಮಂಟಪದಲ್ಲಿರುವ ಚಾಮರಧಾರಿಣಿಯ ಈ ಶಿಲ್ಪದಲ್ಲಿ (ಚಿತ್ರ-೩೭), ಚಾಮರಧಾರಿಣಿಯು ಚಾಮರವನ್ನು ಬಲಗೈಯಲ್ಲಿ ಹಿಡಿದು ಬಲಭುಜದ ಮೇಲೆ ಉದ್ದವಾಗಿ ಬರುವಂತೆ ಹಿಡಿದಿದ್ದಾಳೆ. ಈ ಶಿಲ್ಪದಲ್ಲಿರುವ ಚಾಮರಧಾರಣಿಯ ವಿಶೇಷತೆಯೆಂದರೆ ಆಭರಣದಲ್ಲಿರುವ ಪದಕವು ಎಲೆಯಾಕಾರದಲ್ಲಿದೆ. ಉಳಿದಂತೆ ಆಭರಣಗಳು ವಿಶೇಷವಾಗಿಲ್ಲ. ವಸ್ತ್ರಗಳಲ್ಲಿ ಸೀರೆಯನ್ನು ನಿರಿಗೆ ಹಿಡಿದು ಕಟಿಭಾಗದಿಂದ ಪಾದಗಳವರೆಗೆ ಉಟ್ಟಿದ್ದಾಳೆ. ಸೆರಗು ಎಡಸ್ತನದ ಮೇಲಿನಿಂದ ಎಡಭುಜವನ್ನು ಹಾದು, ಬೆನ್ನಿನ ಹಿಂದಿನಿಂದ ಬಳಸಿ ಬಲತೋಳಿನ ಮೇಲೆ ಹಾದು ತೋಳಿನ ಕೆಳಗೆ ಕಟಿ ಭಾಗದಲ್ಲಿ ಸೆರಗಿನ ಕೊನೆಯಭಾಗ ಹಾರಾಡುತ್ತಿದೆ.

ಒಂದು ರೀತಿಯಲ್ಲಿ ಸೀರೆಯ ಸೆರಗನ್ನು ವಯ್ಯಾರವಾಗಿ ಹಿಡಿದಿರುವ ಶೈಲಿ ವಿಶೇಷವಾಗಿದೆ. ಸೀರೆಯು ಸಣ್ಣ ಸಣ್ಣ ಹೂವಿನ ಚಿತ್ತಾರ (ಡಿಜೈನ್)ಗಳಿಂದ ಕೂಡಿದೆ.

ಹಂಪಿಯ ರಂಗದೇವಾಲಯದಲ್ಲಿರುವ ಚಾಮರಧಾರಣಿಯ ಶಿಲ್ಪವೊಂದರಲ್ಲಿ ಆಕೆ ತುರುಬನ್ನು ಹಾಕಿದ್ದು ಸಾದಾ ವೃತ್ತಕುಂಡಲ (ರಿಂಗ್) ಧರಿಸಿದ್ದಾಳೆ. ಗುಂಡಿನಸರ (ಮೋಹನ ಮಾಲೆ), ಸಾದಾ ಒಂದೆಳೆಯ ತೋಳ್ಬಂಧಿ, ಕೈಕಡಗ ಧರಿಸಿದ್ದು, ಚಾಮರವನ್ನು ತನ್ನ ಎಡಗೈಯಲ್ಲಿ ಹಿಡಿದು, ಎಡಭುಜದ ಮೇಲೆ ಬರುವಂತೆ ಹಿಡಿದಿದ್ದಾಳೆ. ಸಾದಾ ವಿನ್ಯಾಸದಿಂದ ಕೂಡಿದ ಮೂರೆಳೆಯ ಸೊಂಟಪಟ್ಟಿಯನ್ನು ಧರಿಸಿದ್ದಾಳೆ. ವಸ್ತ್ರಕ್ಕೆ ಸಂಬಂಧಿಸಿದಂತೆ ದೇಹದ ಮೇಲ್ಭಾಗಕ್ಕೆ ವಸ್ತ್ರವನ್ನು ಧರಿಸಿಲ್ಲ. ನಿರಿಗೆ ಹಿಡಿದು ಸೀರೆಯನ್ನು ಕಟಿಯಿಂದ ಪಾದಗಳವರೆಗೆ ಧರಿಸಿರುವುದು ಕಂಡುಬರುತ್ತದೆ.

ಹಂಪಿಯ ಅಚ್ಯುತದೇವರಾಯ ದೇವಾಲಯದಲ್ಲಿನ ಅಮ್ಮನವರ ಗುಡಿಯ ಮಹಾ ಮಂಟಪದಲ್ಲಿರುವ ಚಾಮರಧಾರಿಣಿಯು ಮೂರೆಳೆಯ ಕಂಠೀಹಾರ, ಎರಡೆಳೆಯ ತೋಳ್ಬಂದಿ ಹಾಗೂ ಒಂದೆಳೆಯ ಕೈಕಡಗ ಧರಿಸಿದ್ದಾಳೆ. ಕರ್ಣಕುಂಡಲ ವೃತ್ತಾಕಾರವಾಗಿದ್ದು, ಎರಡು ಸುತ್ತಿನಿಂದ ಕೂಡಿದೆ. ಅಲ್ಲದೇ ಸಾದಾ ಕಾಲ್ಗಡಗ ಧರಿಸಿದ್ದಾಳೆ. ಈ ಶಿಲ್ಪ ವಸ್ತ್ರದ ವಿಶೇಷತೆಯೆಂದರೆ ಸೀರೆಯನ್ನು ನಿರಿಗೆ ಹಿಡಿದು ಸೊಂಟಭಾಗದಿಂದ ಧರಿಸಿದ್ದು, ಸೀರೆಯ ನಿರಿಗೆಗಳು ಸ್ಪಷ್ಟವಾಗಿ ಕಾಣುತ್ತವೆ. ಅಲ್ಲದೇ ನಿರಿಗೆಗಳು ಪಾದದ ಮುಂಭಾಗ ಇಳಿಬಿದ್ದಿದೆ ಸೀರೆಯ- ಸೆರಗು ಎಡಸ್ತನದ ಮೇಲೆ ಹಾದು ಎಡಭುಜದ ಹಿಂದೆ ಹಾದು ಹೋಗಿದೆ.

ಹಂಪಿಯ ರಾಮಚಂದ್ರ ದೇವಾಲಯದ ಹೊರ ಭಾಗದಲ್ಲಿರುವ ಮತ್ತೊಂದು ಚಾಮರಧಾರಿಣಿ ಶಿಲ್ಪದ (ಚಿತ್ರ-೩೮) ವಸ್ತ್ರ ಮತ್ತು ಆಭರಣ ತುಂಬಾ ವಿಶೇಷವಾಗಿದೆ. ಈ ಶಿಲ್ಪದಲ್ಲಿ ತಲೆಗೂದಲನ್ನು ಬಾಚಿ ಬಿಗಿಯಾಗಿ ತುರುಬು ಹಾಕಿದ್ದು, ಹಣೆಗೆ ತಿಲಕವನ್ನು ಇಂಗ್ಲಿಷ್ ಭಾಷೆಯ ವರ್ಣಮಾಲೆಯ U ಆಕಾರದಲ್ಲಿ ಇಟ್ಟಿದ್ದು, ಕಿವಿಗೆ ಅಗಲವಾದ ಎರಡೆಳೆಯ ವೃತ್ತಕುಂಡಲ ಧರಿಸಿದ್ದು, ಮೇಲ್ಗಿವಿಗೆ ಕೊಪ್ಪು ಅಂದರೆ ಬುಗುಡಿಯನ್ನು ಧರಿಸಿರುವುದನ್ನು ಕಾಣಬಹುದು. ಕಂಠೀಹಾರ ಪದಕವು ಮೂತ್ತಿನ ಸರದಂತಿದ್ದು, ಅದರಿಂದ ಗೊಂಡೆಗಳು ಸ್ತನಗಳ ಮಧ್ಯಭಾಗದವರೆಗೆ ಇಳಿಬಿದ್ದಿರುವುದು ವಿಶೇಷವಾಗಿದೆ. ಭುಜಕೀರ್ತಿ ಹಾಗೂ ತೋಳ್ಬಂಧಿಗಳು ಮಧ್ಯದಲ್ಲಿ ಮುತ್ತಿನಿಂದ ಮಾಡಿದ್ದು, ಅದರ ಎರಡೂ ಕಡೆ ಸಾದಾ ಬಳೆಗಳಿಂದ ಕೂಡಿದೆ. ಛನ್ನವೀರವನ್ನು ಮತ್ತು ನೂಪುರವನ್ನು ಧರಿಸಿದ್ದಾಳೆ. ಹಾಗೆಯೇ ವಸ್ತ್ರಕ್ಕೆ ಸಂಬಂಧಿಸಿದಂತೆ ಸೀರೆಯನ್ನು ನಿರಿಗೆ ಹಿಡಿದು ಕಟಿಭಾಗದಿಂದ ಪಾದಗಳವರೆಗೆ ಉಟ್ಟಿದ್ದು, ಅದು ಚೌಕಳಿ ವಿನ್ಯಾಸದಿಂದ ಕೂಡಿದೆ. ಸೀರೆಯ (ಲಂಗದ) ಮೇಲೆ ಕಟಿಭಾಗದಲ್ಲಿ ಒಂದು ದುಪ್ಪಟದಿಂದ ಸುತ್ತಿ ಕಟಿಯ ಹಿಂಭಾಗದಲ್ಲಿ ಗಂಟು ಹಾಕಿದ್ದು ಅದು ಕಟಿಯ ಬಲ ಮತ್ತು ಎಡಭಾಗದಿಂದ ಪಾದಗಳವರೆಗೆ ಹಾರಾಡುತ್ತಾ ಇಳಿ ಬಿದ್ದಿರುವುದನ್ನು ಗಮನಿಸ ಬಹುದು. ಚಾಮರವನ್ನು ಬಲಭುಜದ ಮೇಲಿಂದ ಎಡಭುಜದ ಕಡೆಗೆ ಬರುವಂತೆ ಹಿಡಿದಿದ್ದಾಳೆ. ಈ ಶಿಲ್ಪದಲ್ಲಿರುವ ಚಾಮರಧಾರಿಣಿಯು ರಾಜಮನೆತನದ ಸ್ತ್ರೀಯರು ಮಾಡಿ ಕೊಳ್ಳುವ ಅಲಂಕರಣೆ ಮತ್ತು ಶ್ರೀಮಂತಿಕೆಯನ್ನು ಪ್ರತಿಬಿಂಬಿಸುತ್ತದೆಯಲ್ಲದೇ ಈಕೆಯು ವೈಷ್ಣವ ಮತ ಅನುಯಾಯಿ ಎಂಬುದು ಸ್ಪಷ್ಟವಾಗುತ್ತದೆ.

ಅದೇ ದೇವಾಲಯದಲ್ಲಿರುವ ಮತ್ತೊಂದು ಈ ಮೇಲಿನ ಶಿಲ್ಪದಲ್ಲಿ ಚಾಮರ ಧಾರಿಣಿಯು ಚಾಮರವನ್ನು ಬಲಗೈಯಲ್ಲಿ ಹಿಡಿದಿದ್ದು, ಅದು ಬಲಭುಜದಿಂದ ಎಡಭುಜದ ಕಡೆಗೆ ಬರುವಂತೆ ಹಿಡಿದಿದ್ದಾಳೆ. ತುರುಬನ್ನು ತಲೆ ಎಡಭಾಗಕ್ಕೆ ಗಂಟು ಹಾಕಿದ್ದು, ಮುತ್ತಿನ ಬೈತಲೆಬೊಟ್ಟು ಹಣೆಯ ಮೇಲ್ಭಾಗದಿಂದ ಎರಡೂ ಕರ್ಣಗಳಿಗೆ ಸೇರಿಸಲಾಗಿದೆ. ಈ ರೀತಿಯ ಆಭರಣವನ್ನು ಅಲ್ಲಸಾನಿ ಪೆದ್ದಣನ ಮನುಚರಿತ್ರೆಯಲ್ಲಿ 'ಸುಸಕಮು' ಎಂದು ಉಲ್ಲೇಖಿಸಿದ್ದಾನೆ.[೨೨೦] ಈ ಬೈತಲೆಬೊಟ್ಟನ್ನು ತೆಲುಗಿನಲ್ಲಿ ಪಾಪಡಿಬೊಟ್ಟು ಎಂದು ಕರೆಯಲ್ಪಡುತ್ತದೆ. ಹಣೆಗೆ ತಿಲಕವನ್ನು ನಾಮದಂತೆ ಇಂಗ್ಲಿಷ್ ವರ್ಣಮಾಲೆಯ U ಆಕಾರದಲ್ಲಿ ಧರಿಸಿದ್ದಾಳೆ. ಕಿವಿಗೆ ಎರಡೆಳೆ ದೊಡ್ಡ ವೃತ್ತಕುಂಡಲ, ಕಿವಿಯ ಮೇಲ್ಭಾಗಕ್ಕೆ ಕೊಪ್ಪುವನ್ನು ಧರಿಸಿದ್ದಾಳೆ. ಮುತ್ತಿನ ಕಂಠೀಸರದೊಂದಿಗೆ ಮೂರೆಳೆಯ ಮುತ್ತಿನ ಹಾರವು ಪದಕದಿಂದ ಕೂಡಿದ್ದು, ಅದು ಸ್ತನಗಳ ಮಧ್ಯಭಾಗದಲ್ಲಿ ತೂಗು ಬಿದ್ದಿರುವಂತೆ ಧರಿಸಿದ್ದಾಳೆ. ಭುಜಕೀರ್ತಿ ಧರಿಸಿದ್ದು, ಬಲಗೈಗೆ ಮೂರಳೆಯ ಸಾದ ತೋಳ್ಬಂಧಿ ಹಾಗೂ ಮೂರೆಳೆಯ ಕೈಕಡಗವನ್ನು ಧರಿಸಿದ್ದಾಳೆ. ಆದರೆ ಎಡಗೈಗೆ ಎರಡೆಳೆಯ ತೋಳ್ಬಂದಿ ಮತ್ತು ಮುಂಗೈ ಬಳೆಗಳನ್ನು ಧರಿಸಿರುವುದು ಕಂಡು ಬರುತ್ತದೆ. ಅಂದರೆ ಒಂದೊಂದು ಕೈಗೆ ಒಂದೊಂದು ರೀತಿಯ ಆಭರಣವನ್ನು ಧರಿಸಿರುವುದು ವಿಶೇಷವಾಗಿದೆ. ಇದರೊಂದಿಗೆ ಕಾಲ್ಗಡಗವನ್ನು ಕಾಣಬಹುದು. ವಸ್ತ್ರಗಳಲ್ಲಿ ವಿಶೇಷತೆಯೇನೂ ಇಲ್ಲ.

ಹಂಪಿಯ ರಾಮಚಂದ್ರ ದೇವಾಲಯದಲ್ಲಿರುವ ಮತ್ತೊಂದು ಚಾಮರಧಾರಿಣಿ ಶಿಲ್ಪದಲ್ಲಿ (ಚಿತ್ರ-೩೯) ತಲೆ ಮತ್ತು ಕಿವಿಯ ಆಭರಣಗಳು ಹಾಗೂ ನಾಮ (ತಿಲಕ) ಹಿಂದಿನ ಶಿಲ್ಪಗಳಲ್ಲಿ ಇದ್ದಂತೆಯೇ ಇವೆ. ಈ ಕಂಠೀಹಾರವು ಗೆಜ್ಜೆಗಳಿಂದ ಕೂಡಿದ ಅಗಲವಾದ ಪಟ್ಟಿಕೆಯಂತಿದ್ದು, ವಿಶೇಷವಾಗಿದೆ. ಅದು 'ಜಿಗ್‌ಜಾಗ್' ವಿನ್ಯಾಸದಿಂದ ಕೂಡಿದ್ದು ಗೆಜ್ಜೆಗಳನ್ನು ಮೇಲೆ ಕೆಳಗೆ ಬರುವಂತೆ ಪೋಣಿಸಿ ತಯಾರಿಸಲಾಗಿದೆ. ಈ ಕಂಠೀಹಾರದ ಜೊತೆಗೆ ಮತ್ತೊಂದು ಪದಕವಿರುವ ಹಾರವನ್ನು ಧರಿಸಿದ್ದು, ಆ ಪದಕದ ಮಧ್ಯದಲ್ಲಿ 'ಎಲೆ' ಆಕಾರದಿಂದ ಕೂಡಿದ್ದು, ಅದರ ಸುತ್ತ ಮತ್ತೆ ತೆಳುವಾದ ಎರಡೆಳೆಯ ಎಲೆಯ ವಿನ್ಯಾಸವಿದೆ. ಈ ರೀತಿಯ ಪದಕವು ಚಾಮರಧಾರಣಿಯು ಧರಿಸಿರುವ ಪದಕ ಸರದ ವಿಶೇಷತೆಯಲ್ಲಿ ಒಂದಾಗಿದೆ. ಇದರೊಂದಿಗೆ ಎರಡೆಳೆಯ ತೋಳ್ಬಂಧಿ, ಐದೆಳೆಯ ಮುಂಗೈ ಬಳೆಗಳನ್ನು ಧರಿಸಿದ್ದಾಳೆ. ಜೊತೆಗೆ ಯಜ್ಞೋಪವೀತ, ಎರಡೆಳೆಯ ಕಟಿಬಂಧ ಧರಿಸಿದ್ದು, ಮಧ್ಯ ಭಾಗದಲ್ಲಿ ಅದು ಕಮಲದಹೂವಿನ ಆಕಾರವಿದೆ. ಇದರೊಂದಿಗೆ ಐದಳೆಯ ಮೇಖಲೆಯನ್ನು ಸೊಂಟಭಾಗದಲ್ಲಿ ಧರಿಸಿದ್ದಾಳೆ. ನೂಪುರವನ್ನು ಸಹ ಕಾಣಬಹುದು. ವಸ್ತ್ರಕ್ಕೆ ಸಂಬಂಧಿಸಿ ದಂತೆ ಸೀರೆ ಸಿರಿಗೆ ಹಿಡಿದು ಧರಿಸಿದ್ದು, ಅದರ ಮೇಲೆ ಕಟಿಭಾಗದಲ್ಲಿ ದುಪ್ಪಟವನ್ನು ಗಂಟು ಹಾಕಿ ಕಟ್ಟಿದ್ದು, ಅದು ಬಲ ಮತ್ತು ಎಡ ನಿತಂಬಗಳಲ್ಲಿ ಹಾರಾಡುತ್ತಿರುವ ದೃಶ್ಯವನ್ನು ಕಾಣಬಹುದು. ಎರಡು ಅಥವಾ ಮೂರಕ್ಕಿಂತ ಹೆಚ್ಚು ಮುಂಗೈ ಬಳೆಗಳನ್ನು ಧರಿಸಿರುವ ವಿಶೇಷ ಶಿಲ್ಪವಿದಾಗಿದೆ.

ಒಟ್ಟಾರೆ ಚಾಮರಧಾರಣಿಯರ ವಸ್ತ್ರ ಮತ್ತು ಆಭರಣಗಳಲ್ಲಿ ಏಕರೂಪತೆಯನ್ನು ಕಾಣಲು ಸಾಧ್ಯವಿಲ್ಲ. ವಿಭಿನ್ನ ವಿನ್ಯಾಸ, ಮಾದರಿ ಸಂಖ್ಯೆಯ ಮತ್ತು ಅಳತೆಯ ವಸ್ತ್ರ ಮತ್ತು ಆಭರಣಗಳನ್ನು ಅವರ ಆಸಕ್ತಿ ಮತ್ತು ಅಂತಸ್ತುಗಳಿಗನುಗುಣವಾಗಿ ಧರಿಸಿರುವುದನ್ನು ಕಾಣ ಬಹುದಾಗಿದೆ. ಅಲ್ಲದೇ

ಅವರ ತಿಲಕದ ಅಲಂಕರಣೆ ವೈಷ್ಣವ ಧರ್ಮವನ್ನು ಎತ್ತಿ ತೋರಿಸುತ್ತದೆ.

೩.೩.೪. ನೃತ್ಯಗಾರ್ತಿಯರು

ಪ್ರಕೃತಿಯಲ್ಲಿರುವ ಲಯಬದ್ಧವಾದ ವ್ಯವಸ್ಥೆಗೆ ಮಾನವನು ತೋರಿಸಿದ ದೈಹಿಕ ಪ್ರತಿಕ್ರಿಯೆಯೇ ನರ್ತನಕ್ಕೆ ಮೂಲ. ನೃತ್ಯ ಮಾನವನಿಂದ ವಿಕಾಸಗೊಂಡ ಬಹು ಪುರಾತನ ಕಲೆ. ಸಂಗೀತದಂತೆಯೇ ನಾಟ್ಯವನ್ನು ರಾಜರಿಂದ ಹಿಡಿದು ಜನಸಾಮಾನ್ಯರವರೆಗೆ ಎಲ್ಲರೂ ಇಷ್ಟಪಡುವ ಕಲೆಯಾಗಿತ್ತು. ಹಾಗಾಗಿ ಈ ಕಲೆಗೆ ಜನಮನ್ನಣೆ ಮತ್ತು ರಾಜಾಶ್ರಯವು ಲಭಿಸಿತ್ತು. ಸಿಂಧೂ ನಾಗರೀಕತೆಯ ಅವಶೇಷಗಳಲ್ಲಿ ದೊರೆತಿರುವ ನೃತ್ಯಭಂಗಿಯ ಸ್ತ್ರೀ ಪ್ರತಿಮೆಯಿಂದ ನೃತ್ಯದ ಪ್ರಾಚೀನತೆ ತಿಳಿಯುತ್ತದೆ. ಅಲ್ಲದೇ ಆ ಪ್ರತಿಮೆಯಲ್ಲಿರುವ ಸ್ತ್ರೀಯು ಎಡಗೈಯನ್ನು ತನ್ನ ಸೊಂಟದ ಮೇಲೆ ಇಟ್ಟುಕೊಂಡಿದ್ದು, ಎಡಗೈಗೆ ಬಾಹುಭಾಗದಿಂದ ಮಣಿಕಟ್ಟಿನವರೆಗೆ ಬಳೆಗಳನ್ನು ತೊಟ್ಟಿರುವುದು ಗಮನಿಸಬಹುದು. ಅಲ್ಲದೆ ಬಲಗೈಗೆ ಬಾಹುಬಂಧಿ ಮತ್ತು ಮುಂಗೈಗೆ ಎರಡೆಳೆಯ ಕಂಕಣ ಧರಿಸಿರುವುದನ್ನು ಗಮನಿಸಬಹುದು. ಇದರೊಂದಿಗೆ ಪದಕವಿರುವ ಕಂಠೀಹಾರ ಧರಿಸಿದ್ದಾಳೆ. ನಾಗರಿಕತೆಯ ಕಾಲದಲ್ಲಿ ನೃತ್ಯಗಾರ್ತಿಯರು ಒಂದೊಂದು ತೋಳಿಗೆ ಒಂದೊಂದು ಮಾದರಿಯ ಹಾಗೂ ವಿಭಿನ್ನ ಸಂಖ್ಯೆಯ ಆಭರಣಗಳನ್ನು ಧರಿಸಿದ್ದರು ಎಂಬುದು ಗಮನಾರ್ಹ.

ದಕ್ಷಿಣ ಭಾರತದ ಬಹುತೇಕ ಎಲ್ಲಾ ರಾಜಮನೆತನದವರು ನೃತ್ಯಕ್ಕೆ ಪ್ರಾಮುಖ್ಯತೆಯನ್ನು ನೀಡಿರುವುದನ್ನು ಸಾಹಿತ್ಯ ಕೃತಿಗಳೊಂದಿಗೆ ಶಾಸನಗಳು ಸಹ ದೃಢಪಡಿಸುತ್ತವೆ. ಚೋಳರ ಒಂದನೆ ರಾಜರಾಜ ಚೋಳ ನೃತ್ಯಗಾರ್ತಿಯರಿಗೆ ತುಂಬಾ ಪ್ರಾಮುಖ್ಯತೆ ನೀಡಿದ್ದನು. ಕರ್ನಾಟಕದಲ್ಲಿ ನಾಟಕ ಶಾಲೆಯ ನಿರ್ಮಾಣದ ಮೊದಲ ಪ್ರಮಾಣವು ಧಾರವಾಡದ ಹತ್ತಿರದ 'ಮುಗುದ' ಗ್ರಾಮದ ೧೧ನೇ ಶತಮಾನದ ಶಿಲಾ ಶಾಸನದಲ್ಲಿ ಸಿಗುತ್ತದೆ. "ಶ್ರೀಮನ್ಮಹಾಸಾಮಂತಂ ಮಾರ್ತಾಂಡಯ್ಯಂ ಮಾಡಿಸಿದ ಬಸದಿಯಂ ಪಡಿಸಲಿಸಿ ನಾಟಕ ಶಾಲೆಯಂ ಮಾಡಿಸಿ ತನ್ನ ಕೀರ್ತಿ ಶಿಳಾಸ್ತಂಭಮಂ ಆಚಂದ್ರಾರ್ಕತಾರಂಬರಂ ನಿಲಿಸಿದ"[೨೨೧] ಎಂದು ತಿಳಿಸುತ್ತದೆ.

ಚಾಲುಕ್ಯರ ರಾಜ ಉದಯಾದಿತ್ಯನು ಕ್ರಿ.ಶ. ೧೦೭೪ರಲ್ಲಿ ತನ್ನ ಪಟ್ಟದ ರಾಣಿಯ ಆಜ್ಞೆಯ ಮೇರೆಗೆ ಕನ್ನಡಿಗಳನ್ನು ಕೊಳ್ಳಲು ನೃತ್ಯಗಾರ್ತಿಯರಿಗೆ ಹಣವನ್ನು ದಾನವಾಗಿ ನೀಡಿದ್ದನು.[೨೨೨] ಇದರಿಂದ ಕನ್ನಡಿಗಳು ಅಲಂಕರಣೆ ಸಾಧನಗಳಲ್ಲಿ ಎಷ್ಟು ಮಹತ್ವದ ಪಾತ್ರ ವಹಿಸುತ್ತವೆ ಎಂಬುದನ್ನು ತಿಳಿಯಬಹುದು ನೃತ್ಯ ಕಲೆಗೆ ರಾಜಾಶ್ರಯ ಸಿಕ್ಕಿತ್ತು ಎಂಬುದನ್ನು ತಿಳಿಯಬಹುದು.

ವಿಜಯನಗರ ಕಾಲದಲ್ಲಿ ನೃತ್ಯ ತುಂಬಾ ಪ್ರಾಮುಖ್ಯ ಪಡೆದ ಕಲೆಯಾಗಿತ್ತು. ನೃತ್ಯವನ್ನು ಸಾಮಾನ್ಯವಾಗಿ ಎಲ್ಲಾ ಹಬ್ಬ, ಉತ್ಸವಗಳ ಸಮಯದಲ್ಲಿ ಮಾಡುತ್ತಿದ್ದರು. ನೃತ್ಯವನ್ನು ಅಭಿನಯಿಸುತ್ತಿದ್ದವರು ದೇವದಾಸಿಯರು ಮತ್ತು ರಾಜನ ಆಸ್ಥಾನದ ನರ್ತಕಿಯರು. ಅಲ್ಲದೇ ರಾಜಮನೆತನದವರು ಸಹ ನೃತ್ಯ ಕಲಿತ್ತಿದ್ದರು. ಬುಕ್ಕರಾಯನ ಕಾಲದಲ್ಲಿ ಹರಿಯಣ್ಣನ ತಮ್ಮ ಜಕ್ಕಣನು ರಾಮಚಂದ್ರ ದೇವರಿಗೆ ದಾನವನ್ನು ನೀಡುವ ಮೂಲಕ ಆ ದಾನವನ್ನು ನೃತ್ಯಗಾರ್ತಿಯರಿಗೆ ಮತ್ತು ಬ್ರಾಹ್ಮಣರಿಗೆ ಬೆಂಬಲ ನೀಡಲು ಬಳಸಬೇಕೆಂದು ತಿಳಿಸಿದ್ದಾನೆ.[೨೨೩]

ಕ್ರಿ.ಶ.೧೫೪೩ರ ಶಾಸನವು "ಸದಾಶಿವರಾಯನು ರಾಜ್ಯಭಾರ ಮಾಡುತ್ತಿದ್ದಾಗ ಶ್ರೀ ವಿಠಲ ದೇವರ ಅಮೃತಪಾಡಿಗೆ ಹಾಗೂ ಮಧ್ಯ ಏಕಾದಶಿ, ದ್ವಾದಶಿ ಪುಣ್ಯಕಾಲಗಳ ನೈವೇದ್ಯಕ್ಕೆ ತಿರುಮಲತಾತಾಚಾರ್ಯನ ಮಗ ತಿರುಮೇಗಳಾಚಾರ್ಯನು ತನಗೆ ಸದಾಶಿವ ರಾಯನಿಂದ ದಾನವಾಗಿ ಬಂದ ತೆಕ್ಕಲಕೋಟೆ ಸೀಮೆಯೊಳಗಣ ನಿಟ್ಟೂರು, ಆನೆಯ ಗೊಂದಿಯ ಅಡವಿಗೆಜಿಯೊಳಗೆ ಎರಡು ಖಂಡುಗ ಗದ್ದೆ ಮತ್ತು ಲಿಂಗರಸನ ತೆಂಗಿನ ತೋಟ ಇಷ್ಟನ್ನು ಸಮರ್ಪಿಸಿದನು. ದೇವರ ನೈವೇದ್ಯದ ಪ್ರಸಾದವು ಗುಡಿಯ ಸ್ಥಾನಿಕರು ಮುಂತಾದವರಿಂದ ದೇಮಯ, ಸರಸಯ, ವೀರಪ, ಚಿಕವೀರಪ ಮತ್ತು ಪುರುಷೋತ್ತಮರಿಗೆ ೫ ಪಾಲ, ನಟುವರಂಗನ ಪಾಲು ೧, ಸೇನಬೋವ ಕೋನಪನ ಪಾಲು ೧, ಅನಂತಾಯಭಾರವರಿಗೆ ಪಾಲು ೧, ಸ್ವಯಂ ಪಾಕಿಗಳ ಪಾಲು ೧, ಗಳಿಯಾರ ಹಳಿಊರ ಪಾಲು ೧, ಭಂಡಾರಾದವರಿಗೆ ೪ ತಿರುವೆಂಗಳಾಚಾರ್ಯರಿಗೆ ಪಾಲು ೧ನ್ನು ನೀಡಬೇಕೆಂದು ವಿಧಿಸಿರುತ್ತಾರೆ"[೨೨೪] ಹೀಗೆ ದೇವಾಲಯಗಳಿಗೆ ಸಲ್ಲುತ್ತಿದ್ದ ದಾನಗಳಲ್ಲಿನ ಪ್ರಸಾದ ಸೇವೆಯಲ್ಲಿ ನಾಟ್ಯದವರಿಗೆ ಒಂದು ಪಾಲನ್ನು ಕೊಡಬೇಕು ಎಂಬುದಾಗಿ ಈ ಶಾಸನ ತಿಳಿಸಿದೆ. ದೇವಾಲಯ ಸೇವಾಕರ್ತರಲ್ಲಿ ನರ್ತಕರ ಪಾತ್ರ ತಿಳಿಯುವಲ್ಲಿ ಈ ಶಾಸನ ಮಹತ್ವದ್ದಾಗಿದೆ. ಹಾಗೆಯೇ ಕ್ರಿ.ಶ. ೧೫೫೫ರ ಸದಾಶಿವರಾಯನ ಕಾಲದ ಮತ್ತೊಂದು ಶಾಸನವು ರಂಗಪೂಜೆಯ ಉಲ್ಲೇಖವನ್ನು ಮಾಡಿದೆ.[೨೨೫]

ರತ್ನಾಕರವರ್ಣಿಯ ಭರತೇಶವೈಭವದಲ್ಲಿ, "ಭರತಚಕ್ರ ಎಂಬ ರಾಜನು ಸಂಗೀತ, ನೃತ್ಯವನ್ನು ಕಲಿತಿದ್ದನು ಎಂದು ಹೇಳಿ, ಮುಂದುವರೆಸುತ್ತಾ ನೃತ್ಯ ಹೇಗೆ ಪ್ರಾರಂಭಮಾಡುತ್ತಾರೆ ಎಂದರೆ ವೇದಿಕೆಯಲ್ಲಿ ಮೊದಲು ಸಂಗೀತ ವಾದ್ಯಗಳನ್ನು ನುಡಿಸಲು ಪ್ರಾರಂಭಿಸಿದಾಗ ನರ್ತಕಿಯರು ರಂಗವನ್ನು ಅಥವಾ ವೇದಿಕೆಯನ್ನು ಪ್ರವೇಶಿಸಿ, ಆಕೆ ತನ್ನ ಕೈಯಲ್ಲಿ ಹೂಗಳನ್ನು ತಂದು ಅಲ್ಲಿರುವ ರಾಜ ಮತ್ತು ರಾಜ ಮುಖಂಡರುಗಳ ಕಾಲಿಗೆ ಅರ್ಪಿಸುವ ಮೂಲಕ ಗೌರವವನ್ನು ಸೂಚಿಸುತ್ತಾಳೆ, ನಂತರ ನೃತ್ಯ ಮುಂದುವರೆಯುತ್ತದೆ. ಸಾಮಾನ್ಯವಾಗಿ ನೃತ್ಯವನ್ನು ಸಂಜೆಯ ವೇಳೆ ಏರ್ಪಡಿಸುತ್ತಾರೆ. ಅದು ತಡರಾತ್ರಿಯವರೆಗೂ ಮುಂದುವರೆಯುತ್ತದೆ"[೨೨೬] ಎಂದು ಉಲ್ಲೇಖಿಸಿದ್ದಾನೆ.

ರತ್ನಾಕರವರ್ಣಿ ಮತ್ತು ಇತರ ಸಮಕಾಲೀನ ಕವಿಗಳ ಬರಹಗಳು ನರ್ತಕಿಯರ ವಸ್ತ್ರಾಲಂಕಾರದ ಬಗ್ಗೆ ಸಾಕಷ್ಟು ಬೆಳಕು ಚೆಲ್ಲುತ್ತದೆ. ರತ್ನಾಕರವರ್ಣಿಯು ನೃತ್ಯಗಾರ್ತಿಯ ಆಭರಣ ಅಲಂಕರಣೆಯ ಬಗ್ಗೆ ಉಪಯುಕ್ತ ಮಾಹಿತಿ ನೀಡುತ್ತಾನೆ;

ಮುತ್ತಿನ ಬೊಟ್ಟು ಮುತ್ತಿನ ಸರ ತುರುಬಿನ
ಮುತ್ತಿನ ಬಲೆ ಮುತ್ತಿನ ಓಲೆ, ತೊಟ್ಟ ಮೂಗುತಿಯಿಂದ
ಮೊಗಗಳಿದ್ದವು ತಾರೆ!
ಮುತ್ತಿನ ಬಾಹು ಚಂದ್ರರಂತೆ!![೨೨೭]

ಈ ಸಾಲುಗಳಿಂದ ಆಗಿನ ಕಾಲದ ನೃತ್ಯಗಾರ್ತಿಯರು ತಮ್ಮ ಆಭರಣಗಳನ್ನು ಹೆಚ್ಚಾಗಿ ಮುತ್ತಿನಿಂದ ಮಾಡಿಸಿ ತೊಡುತ್ತಿದ್ದರು ಎಂಬುದನ್ನು ತಿಳಿಸುತ್ತದೆ. ಆಭರಣ ತಯಾರಿಕೆಯಲ್ಲಿ

ಬೆಲೆಬಾಳುವ ಮುತ್ತುಗಳು ಪ್ರಮುಖ ಪಾತ್ರವನ್ನು ವಹಿಸಿವೆ. ಸೋಮೇಶ್ವರನು, "ಸಿಂಹಳದಲ್ಲಿ ಮತ್ತು ಹಿಂದೂ ಸಮುದ್ರದಲ್ಲಿ ಉತ್ತಮ ಗುಣಮಟ್ಟದ ಮುತ್ತುಗಳು ಸಿಗುತ್ತವೆ ಎಂದು ಉಲ್ಲೇಖಿಸಿದ್ದಾನೆ".[೨೨೮]

ನೃತ್ಯ ಮಾಡುವಾಗ ಭಾರವಾದ ಆಭರಣಗಳನ್ನು ಧರಿಸಿದರೆ ಚಲನ ವಲನಗಳಿಗೆ ಮತ್ತು ಭಾವಭಂಗಿಗಳ ಪ್ರದರ್ಶನಕ್ಕೆ ಅಡ್ಡಿಯಾಗುತ್ತದೆ ಎಂಬ ಕಾರಣಕ್ಕೆ ಹಗುರವಾದ ಆಭರಣಗಳನ್ನು ಬಳಸಬೇಕು ಎಂದು ನಾಟ್ಯಶಾಸ್ತ್ರ ಉಲ್ಲೇಖಿಸುತ್ತದೆ.[೨೨೯] ಬಹುಶಃ ಆ ಹಿನ್ನೆಲೆಯಲ್ಲಿ ಮುತ್ತಿನ ಮಣಿಗಳ ಬಳಕೆಯ ಉಲ್ಲೇಖಗಳು ಬಹುತೇಕ ನಮಗೆ ಲಭಿಸುತ್ತವೆ.

ಚಂದ್ರಶೇಖರ ಕವಿ ಕೊಡುವ ನಾಟ್ಯ ಸುಂದರಿಯ ಅಲಂಕಾರ ಈ ರೀತಿ ಇದೆ; ಇನ್ನೇನು ನಾಟ್ಯ ಪ್ರಾರಂಭವಾಗಬೇಕಾಗಿದೆ, "ಆಗ ಪಟ್ಟಾವಳಿಯ ಜವನಿಕೆಯೊಳಗೆ ಸಮ ಕಟ್ಟಿನ ರನ್ನದೊಡುವಿನ, ಮುತ್ತಿನ ಮೊಲೆಗಟ್ಟಿನ, ಪೊಂಬಟ್ಟೆಯ ಚಲ್ಲಣದ ನಿರೆಗೆಜ್ಜೆ ಗಟ್ಟಿದಧೋರ್ರುಕದ ಮಿರುಗುವ ಪೊನ್ನುಡೆ ನೂಲಿನ ಕಿರುಗೆಜ್ಜೆಯ ನಟನಾಟ್ಯಕ್ಕೆ ಸಿದ್ಧಳಾಗಿ ನಿಂತಿದ್ದಾಳೆ".[೨೩೦] ಮೇಲಿನ ವಿವರಗಳಿಂದ ರೇಷ್ಮೆ ವಸ್ತ್ರದ ಪಾದಚಲ್ಲಣ (ಸೀರೆ), ಕುಂಚಕ, ಇವು ಪ್ರಧಾನ ವಸ್ತ್ರಗಳಾದರೆ, ಮುತ್ತಿನ ಮೊಲೆಗಟ್ಟು, ಮುತ್ತಿನ ಬೊಟ್ಟು, ಮುತ್ತಿನ ಸರ, ತುರುಬಿನ ಮುತ್ತಿನ ಜಡೆ, ಮುತ್ತಿನೋಲೆ[೨೩೧] ಇವು ಇತರ ಅಲಂಕಾರಿಕ ಸಾಧನಗಳನ್ನು ನರ್ತಕಿಯರು ಬಳಸುತ್ತಿದ್ದರು ಎಂಬುದು ಗಮನಾರ್ಹ ಸಂಗತಿ.

ಗೋವಿಂದವೈದ್ಯನ ಕಂಠೀರವನರಸರಾಜವಿಜಯದಲ್ಲಿ ನೃತ್ಯಗಾರ್ತಿಯರ ಆಭರಣದ ಬಗೆಗೆ ಹೀಗೆ ಉಲ್ಲೇಖಿಸುತ್ತಾನೆ:

ಪೊಳೆವ ಮುತ್ತಿನ ಮೊಲೆಕಟ್ಟು ಸುವರ್ಣದೋಲ್
ತಳತಳಿಪ ಪೀತಾಂಬರದ
ಉಲಿವ ಮೃಂದಗ ಪಾಠಕರ ಗಾಯನದಿಂದ
ಲಲನೆಯರನುವಾದರಾಗ[೨೩೨]

ನಂಜುಂಡ ಕವಿಯ ರಾಮನಾಥ ಚರಿತದಲ್ಲಿ ಮುತ್ತಿನ ಆಭರಣಗಳ ಉಲ್ಲೇಖ ಹೀಗಿದೆ:

ಮುತ್ತಿನ ಮೊಲೆಕಟ್ಟು ಮುತ್ತಿನ ಸತ್ತಿಗೆ
ಮುತ್ತಿನ ಹೆಗ್ಗಾಳೆ ಮುತ್ತು
ಕತ್ತಿಸಿದುತ್ತಮ ರನ್ನವಲ್ಲಕ್ಕಿಯ
ನಿತ್ತನವಳಿಗ ಸುರೇಂದ್ರ[೨೩೩]

ಎಂಬುದಾಗಿ ಮುತ್ತಿನ ಆಭರಣಗಳ ಚಿತ್ರಣ ನೀಡುತ್ತದೆ.

ಈ ಮೇಲೆ ಉಲ್ಲೇಖಿಸಿದ ಸಾಹಿತ್ಯ ಕೃತಿಗಳ ವಿವರಣೆಗಳಷ್ಟೇ ಅಲ್ಲದೇ ವಿಜಯನಗರಕ್ಕೆ ಭೇಟಿ ನೀಡಿದ್ದ ವಿದೇಶಿ ಪ್ರವಾಸಿಗರ ವಿವರಣೆಗಳು ಮತ್ತು ವರದಿಗಳು ವಿಜಯನಗರ ನೃತ್ಯಗಾರ್ತಿಯರ ಬಗೆಗೆ, ಅವರ ಸಿರಿಸಂಪತ್ತಿನ ವಸ್ತ್ರ ಮತ್ತು ಅಭರಣಗಳ ಬಗೆಗೆ ಸಾಕಷ್ಟು ಬೆಳಕು ಚೆಲ್ಲುತ್ತವೆ ಅಲ್ಲದೇ ಸಾಹಿತ್ಯದುಲ್ಲೇಖಗಳಿಗೆ ಪುಷ್ಟಿ ನೀಡುತ್ತವೆ.

ಅಬ್ದುರ್ ರಜಾಕ್ ವಿವರಿಸಿರುವಂತೆ, "ವಿಜಯನಗರದ ನೃತ್ಯಗಾರ್ತಿಯರು ಶ್ರೀಮಂತರಾಗಿದ್ದು, ಅವರು ಸುಂದರವಾಗಿದ್ದು, ಯೌವನ ವಯಸ್ಸಿನವರಾಗಿದ್ದು, ಬೆಲೆಬಾಳುವ ಮುತ್ತು ರತ್ನಗಳಿಂದ ಕೂಡಿದ ಆಭರಣ ಹಾಗೂ ದುಬಾರಿಯಾದ ವಸ್ತ್ರವನ್ನು ಧರಿಸುತ್ತಿದ್ದರು"[೨೩೪] ಎಂಬುದಾಗಿ ತಿಳಿಸುತ್ತಾನೆ. ದೇವರಿಗೆ ಸಲ್ಲಿಸುವ ಸೇವೆಗಳಲ್ಲಿ ಅಂಗಭೋಗ ಮತ್ತು ರಂಗಭೋಗ ಪ್ರಮುಖವಾದವುಗಳು. ರಂಗಭೋಗ ಸೇವಾ ಕ್ರಮದಲ್ಲಿ ದೇವರಿಗೆ ನೃತ್ಯ ಸೇವೆಯನ್ನು ಪೂಜೆಯ ಸಮಯದಲ್ಲಿ ದೇವದಾಸಿಯರು ನೃತ್ಯದ ಮೂಲಕ ಸಲ್ಲಿಸುವ ಸೇವೆಯಾಗಿದ್ದು, ಹಿಂದಿನಿಂದಲೂ ನಡೆದುಕೊಂಡು ಬಂದ ಪದ್ಧತಿಯಾಗಿದೆ.

ಪಾಯೇಸ್‌ನು ವಿಜಯನಗರ ಜನಜೀವನವನ್ನು ಕಣ್ಣಾರೆ ಕಂಡಿದ್ದು ಆ ವಿವರಗಳನ್ನು ತನ್ನ ವರದಿಗಳಲ್ಲಿ ದಾಖಲಿಸಿದ್ದಾನೆ. ಆತನು ವಿಜಯನಗರದಲ್ಲಿನ ದೇವಾಲಯಗಳನ್ನು ಕುರಿತು ಹೇಳುವಾಗ ದೇವಸ್ಥಾನಕ್ಕೆ ಸೇರಿದ ದೇವದಾಸಿಯರು ದೇವರ ಮುಂದೆ ನೃತ್ಯ ಮಾಡುತ್ತಾರೆ ಎಂದು ಹೇಳಿದ್ದಾನೆ.[೨೩೫] ನೃತ್ಯ ಶಾಲೆಯ ಉಲ್ಲೇಖವನ್ನು ಮಾಡುತ್ತಾನೆ. ಅದರ ವರ್ಣನೆಯು ಈ ರೀತಿ ಇದೆ: "...ನೃತ್ಯ ಶಾಲೆಯಲ್ಲಿ ಕಲ್ಲಿನಲ್ಲಿ ಕಡೆದ ಕಂಬಗಳು, ಎಲ್ಲ ಕಂಬಗಳ ಮೇಲೂ ನರ್ತಕಿಯರ ಚಿತ್ರ ಕೆತ್ತಿದ್ದಾರೆ. ಒಂದೊಂದು ಚಿತ್ರವೂ ಒಂದೊಂದು ನೃತ್ಯ ಭಂಗಿಯನ್ನು ತೋರಿಸುತ್ತದೆ. ನರ್ತನ ಮಾಡುವವರು ಈ ಚಿತ್ರಗಳನ್ನು ನೋಡಿಕೊಂಡು ನರ್ತನ ಮಾಡಬಹುದು. ಮತ್ತೊಂದು ಕೊನೆಯಲ್ಲಿ ರಾಜನು ಕುಳಿತುಕೊಳ್ಳುವ ಕಡೆ ಹನ್ನೆರಡು ವರ್ಷದ ಹುಡುಗಿ ನಾಟ್ಯ ಮಾಡುವ ಭಂಗಿಯಲ್ಲಿ ಒಂದು ಚಿನ್ನದ ವಿಗ್ರಹವನ್ನು ಮಾಡಿ ನಿಲ್ಲಿಸಿದ್ದಾರೆ.[೨೩೬] ಹೀಗೆ ಶಿಲ್ಪಗಳಲ್ಲಿ ಚಿತ್ರಗಳ ಕೆತ್ತನೆಯ ಉದ್ದೇಶವು ನೃತ್ಯಗಾರ್ತಿಯು ಆಕಸ್ಮಿಕವಾಗಿ ಒಂದು ವೇಳೆ ಪ್ರದರ್ಶನದ ಭಂಗಿ ಮರೆತರೆ ಶಿಲ್ಪಗಳಲ್ಲಿನ ಭಂಗಿ ನೋಡಿ ನೃತ್ಯವನ್ನು ಮುಂದುವರೆಸಬಹುದು ಎಂಬುದಾಗಿರಬೇಕು. ನಾಟ್ಯಶಾಲೆಗೆ ಸಂಬಂಧಿಸಿದಂತೆ ಪಾಯೇಸ್‌ನ ಉಲ್ಲೇಖಕ್ಕೆ ಪುಷ್ಠಿ ಎಂಬಂತೆ ರತ್ನಾಕರವರ್ಣಿಯ ಭರತೇಶ ವೈಭವದಲ್ಲಿ ಹಾಗೂ ಶಾಸನಗಳಲ್ಲಿ ಉಲ್ಲೇಖ ಸಿಗುತ್ತವೆ. ಸಾರ್ವಜನಿಕ ನೃತ್ಯ ಪ್ರದರ್ಶನಗಳಷ್ಟೆ ಅಲ್ಲದೆ ಅರಮನೆಗಳಲ್ಲಿ ಆಗಾಗ್ಗೆ ನೃತ್ಯ ಮುಂತಾದ ಕಲಾಪ್ರದರ್ಶನಗಳಿಗೆ ಕಲಾ ಶಾಲೆಗಳಿದ್ದವು. ಹಾಗೆಯೇ ದೇವಾಲಯಗಳಲ್ಲಿ ರಂಗಮಂಟಪಗಳನ್ನು ಪ್ರತ್ಯೇಕವಾಗಿ ಕಟ್ಟಿಸುತ್ತಿದ್ದರು. ಕೃಷ್ಣದೇವರಾಯನು ಹಂಪಿಯ ವಿರೂಪಾಕ್ಷ ದೇವಾಲಯದಲ್ಲಿ ರಂಗಮಂಟಪವನ್ನು ಕಟ್ಟಿಸಿರುವುದು ಇದಕ್ಕೆ ನಿದರ್ಶನವಾಗಿದೆ.

ಪಾಯೇಸ್‌ನು ನೃತ್ಯಗಾರ್ತಿಯರ ಬಗೆಗೆ ಹೀಗೆ ವರ್ಣಿಸುತ್ತಾನೆ, "ರಾಜ ಬಂದು ಸಿಂಹಾಸನದ ಮೇಲೆ ಕುಳಿತು ಕೊಂಡ ಅನಂತರ ಸ್ತ್ರೀಯರಿಂದ ನರ್ತನ ಪ್ರಾರಂಭ ವಾಗುತ್ತದೆ. ಈ ನರ್ತಕಿಯರು ಧರಿಸಿರುವ ಆಭರಣಗಳ ಐಸಿರಿಯನ್ನು ಯಾರು ತಾನೇ ವರ್ಣಿಸಲು ಸಾಧ್ಯ! ವಜ್ರ-ವೈಢೂರ್ಯಗಳ, ಮುತ್ತು ಮಾಣಿಕ್ಯಗಳ ಕೊರಳಪಟ್ಟಿ, ತೋಳ್ಬಂದಿ, ನಡುಪಟ್ಟಿ, ಕಾಲ್ಗಡಗ ಇವುಗಳನ್ನು ನೋಡಿ ಇವರಿಗಿಷ್ಟೊಂದು ಐಶ್ವರ್ಯ ಎಲ್ಲಿಂದ ಬಂದಿತು ಎಂದು ಆಶ್ಚರ್ಯವಾಗುತ್ತದೆ. ಇವರಲ್ಲಿ ಕೆಲವರಿಗೆ ಆಸ್ತಿಪಾಸ್ತಿ ಇವೆ; ಪಲ್ಲಕ್ಕಿಗಳಿವೆ; ಅನೇಕ ದಾಸಿಯರೂ ಇದ್ದಾರೆ!"[೨೩೭] ಹೀಗೆ ಪಾಯೇಸ್ ನವರಾತ್ರಿ ಉತ್ಸವದ ಸಮಯದಲ್ಲಿ ನೃತ್ಯಗಾರ್ತಿಯರ ಐಸಿರಿಯನ್ನು ವರ್ಣಿಸುತ್ತಾನೆ.

ನೃತ್ಯಗಾರ್ತಿಯರು ನಗರದ ಉತ್ತಮ ಬೀದಿಗಳಲ್ಲಿ ಅತ್ಯುತ್ತಮ ಮನೆಗಳಲ್ಲಿ ವಾಸಿಸುತ್ತಿದ್ದರು. ಅವರಿಗೆ ಸೇನಾನಿಗಳ ಮಡದಿಯರಿಗೆ ಸಲ್ಲುವ ಮರ್ಯಾದೆ ಸಲ್ಲುತ್ತಿತ್ತು ಎಂದು ಪಾಯೇಸ್ ವಿವರಿಸಿದ್ದಾನೆ.

ನೃತ್ಯಗಾರ್ತಿಯರು ದೇವಾಲಯದಲ್ಲಿ ದೇವರ ಮುಂದೆ ಅಥವಾ ಹಬ್ಬಗಳಲ್ಲಿ ನೃತ್ಯ ಪ್ರದರ್ಶನ ಮಾಡುತ್ತಿದ್ದರು. ಶನಿವಾರದ ದಿನ ವಿಶೇಷವಾಗಿ ನೃತ್ಯ ಮಾಡುತ್ತಿದ್ದರು.[೨೩೮] ಬಹುಶಃ ಶನಿವಾರ ವಾರದ ಕಡೆಯ ಹಾಗೂ ಬಿಡುವಿನ ದಿನವಾಗಿದ್ದರಿಂದ ಜನಸಾಮಾನ್ಯರು ಅಲ್ಲಿ ಹೆಚ್ಚಾಗಿ ಸೇರುತ್ತಿದ್ದರು ಹಾಗೂ ನೃತ್ಯ ವೀಕ್ಷಣೆ ಮಾಡಲು ಅನುಕೂಲವಾಗುತ್ತಿತ್ತೆಂದು ಶನಿವಾರದಂದು ನೃತ್ಯ ಪ್ರದರ್ಶನ ಹೆಚ್ಚಾಗಿ ಏರ್ಪಡಿಸುತ್ತಿದ್ದರಬಹುದು.

ಕೃಷ್ಣದೇವರಾಯನು ಹಜಾರರಾಮಸ್ವಾಮಿ ದೇವಾಲಯದ ದೇವರ ಸೇವೆಗಾಗಿ ಒಂದು ಉತ್ಸವವನ್ನು ಆಚರಿಸಿದ್ದನು. ಆಸ್ಥಾನ ಕವಿಯಿಂದ ರಚಿಸಲ್ಪಟ್ಟ 'ಪಾರಿಜಾತಾಪಹರಣಂ' ಕವಿತೆಯನ್ನಾಧರಿಸಿದ ಒಂದು ನೃತ್ಯ ಪ್ರದರ್ಶನವನ್ನು ಏರ್ಪಡಿಸಲಾಗಿತ್ತು. ದುರ್ಗಾವತಿ ಎಂಬ ವಾರಾಂಗನೆಯು ಸತ್ಯಭಾಮಳ ಪಾತ್ರವನ್ನು ನಿರ್ವಹಿಸಿದ್ದಳು. ಕೃಷ್ಣದೇವರಾಯನು ಅವಳ ಅಭಿನಯಕ್ಕೆ ಮೆಚ್ಚಿ ಬಹಳ ದುಬಾರಿಯಾದ ವಜ್ರಗಳಿಂದ ಅಲಂಕರಿಸಿದ ಚಿನ್ನದ ಸೊಂಟಪಟ್ಟಿಯನ್ನು ಕೊಡುಗೆಯಾಗಿ ನೀಡಿದನು[೨೩೯] ಎಂಬುದಾಗಿ ತಿಳಿಯುತ್ತದೆ. ರಾಜ, ನರ್ತಕಿಯರ ಪ್ರದರ್ಶನವನ್ನು ಮೆಚ್ಚಿ ಅವರನ್ನು ಸನ್ಮಾನಿಸಿದ ಉದಾಹರಣೆಯಾಗಿದೆ.

ರತ್ನಾಕರವರ್ಣಿಯ ಒಂದು ವರ್ಣನೆಯಲ್ಲಿ, ನರ್ತಕಿಯ ಕೆಳಗಿನ ಕಾಲನ್ನು ಹಸಿರು ಪೋಷಕಿನಿಂದ ಮುಚ್ಚಲಾಗಿತ್ತು. ಹಳದಿಯ ಕಾಸೆ ಮತ್ತು ಚಲ್ಲಣವು ರತ್ನಖಚಿತವಾಗಿದ್ದವು. ಅವಳು ಧರಿಸಿದ್ದ ಕುಚವಸ್ತ್ರ ಮುತ್ತಿನಿಂದ ಅಲಂಕೃತವಾಗಿತ್ತು[೨೪೦] ಎಂದು ವರ್ಣಿಸುತ್ತಾನೆ. ನೃತ್ಯಗಾರ್ತಿಯರ ವಸ್ತ್ರಗಳು ತುಂಬಾ ಬೆಲೆ ಬಾಳುವವಾಗಿದ್ದವು ಮತ್ತು ಕುಸುರಿ ಕಲೆಯಿಂದ ಸಿದ್ಧವಾಗಿದ್ದವು. ವಿಜಯನಗರ ಕಾಲದಲ್ಲಿ ಅಂದರೆ ಸುಮಾರು ಐದುನೂರು ವರ್ಷಗಳ ಹಿಂದೆ ನರ್ತಕಿಯರು ಧರಿಸುತ್ತಿದ್ದ ಸಿದ್ಧ ಉಡುಪನ್ನು ನಾವು ಶಿಲ್ಪಗಳಲ್ಲಿ ನೋಡುತ್ತೇವೆ. ಅದೇ ಮಾದರಿಯ ಉಡುಪುಗಳನ್ನು ಇಂದಿನ ನರ್ತಕಿಯರು ಧರಿಸುತ್ತಿರುವುದು ಕಂಡು ಬರುತ್ತದೆ. ವಿಜಯನಗರದ ನರ್ತಕಿಯರ ವಸ್ತ್ರ ಮತ್ತು ಆಭರಣಗಳಲ್ಲಿ ಏಕಸಾಮ್ಯತೆಯನ್ನು ಕಾಣಲು ಸಾಧ್ಯವಿಲ್ಲ. ಕೆಲವು ಶಿಲ್ಪಗಳಲ್ಲಿ ನರ್ತಕಿಯರು ಉದ್ದವಾದ ಕಾಲ ಚಲ್ಲಣಗಳನ್ನು ಧರಿಸಿದ್ದು, ಅವು ಪಾದಗಳವರೆಗೆ ಇವೆ. ಅಲ್ಲದೇ ಬಿಗಿಯಾದ ಉಡುಪಾಗಿದ್ದು, ಅದರ ಮೇಲೆ ತುಂಡು ಲಂಗವನ್ನು ನಿರಿಗೆಗಳಿಂದ ಕೂಡಿಸಿ ಸಿದ್ಧಪಡಿಸಲಾಗಿದ್ದು, ಕಟಿಯಿಂದ ಮೊಣಕಾಲಿನ ಮೇಲಿನ ಭಾಗದವರೆಗೆ ಧರಿಸಿದ್ದಾರೆ. ಇಂತಹ ಶಿಲ್ಪವನ್ನು ಲೇಪಾಕ್ಷಿಯ ವೀರಭದ್ರ ದೇವಾಲಯದ ಅಧಿಷ್ಠಾನದಲ್ಲಿ ಕಾಣಬಹುದು.

ಆಂಧ್ರಪ್ರದೇಶದ ಲೇಪಾಕ್ಷಿಯ ವೀರಭದ್ರ ದೇವಾಲಯಲ್ಲಿನ ಶಿಲ್ಪದಲ್ಲಿನ ನೃತ್ಯ ಗಾರ್ತಿಯು ತನ್ನ ಎಡಭುಜದ ಮೇಲೆ ಸಣ್ಣ ಕುಂಭವನ್ನು ಹಿಡಿದಿದ್ದಾಳೆ. ವೃತ್ತ ಕುಂಡಲ, ಭುಜಕೀರ್ತಿ, ಬಾಹುಬಂಧಿ ಧರಿಸಿರುವುದು ಕಂಡು ಬರುತ್ತದೆ. ಆದರೆ ಈ ಶಿಲ್ಪದಲ್ಲಿ ವಸ್ತ್ರವು ವಿಶೇಷತೆಯಿಂದ

ಕೂಡಿದೆ. ಕುಚಬಂಧ ಧರಿಸಿದ್ದು, ಸೊಂಟದಿಂದ ಪಾದಗಳವರೆಗೆ ಬಿಗಿಯಾದ ಉದ್ದವಾದ ಚಲ್ಲಣಗಳನ್ನು ಧರಿಸಿದ್ದು, ಅದರ ಮೇಲೆ ಸೊಂಟ ಭಾಗದಲ್ಲಿ ಮೂರು ಹಂತಗಳಲ್ಲಿ ನಿರಿಗೆ ಹಿಡಿದು ಸಿದ್ದಪಡಿಸಲಾದ ತುಂಡು ಲಂಗವನ್ನು ಧರಿಸಿದ್ದಾಳೆ. ಪ್ರತಿಹಂತದಲ್ಲಿಯು ಜರಿಯ ಅಂಚನ್ನು ಕಾಣಬಹುದು. ಇದು ನೃತ್ಯಭಂಗಿಯ ಪ್ರದರ್ಶನಕ್ಕೆ ಅನುಕೂಲವಾಗುವಂತಹ ಉಡುಪಾಗಿದೆ.

ಅದೇ ದೇವಾಲಯದ ಮುಖಮಂಟಪದಲ್ಲಿರುವ ಪದ್ಮಿನಿ ಜಾತಿಯ ಸ್ತ್ರೀ ಎಂದು ಕರೆಯಲ್ಪಟ್ಟಿರುವ ನೃತ್ಯಭಂಗಿಯ ಶಿಲ್ಪವು (ಚಿತ್ರ–೪೦) ವಿಶೇಷವಾಗಿದೆ. ನೃತ್ಯಗಾರ್ತಿಯು ಸರ್ವಾಭರಣ ಭೂಷಿತೆಯಾಗಿದ್ದಾಳೆ. ಧರಿಸಿರುವ ವಸ್ತ್ರದಲ್ಲಿ ಕುಸುರಿ ಕೆಲಸದ ಸ್ಪಷ್ಟ ಚಿತ್ರಣ ದೊರೆಯುತ್ತದೆ. ಮುತ್ತುಗಳನ್ನು ಸೇರಿಸಿ ಹೊಲಿದ ಪೈಜಾಮದ ರೀತಿಯ ಉದ್ದ ಚಲ್ಲಣಗಳನ್ನು ಧರಿಸಿದ್ದು, ಅದರ ಮೇಲೆ ಕಟಿ ಭಾಗದಿಂದ ಮೊಣಕಾಲಿನ ಮೇಲಿನ ಭಾಗದವರೆಗೆ ತುಂಡು ಲಂಗವನ್ನು ಅತ್ಯಂತ ಬೆಲೆಬಾಳುವ ಚಿನ್ನದ ಜರಿಯಿಂದ ಹಾಗೂ ಮುತ್ತು ರತ್ನಗಳಿಂದ ಕೂಡಿಸಿ ತಯಾರಿಸಲಾಗಿದ್ದು, ಲಂಗವು ಮುತ್ತುಗಳಿಂದ ಕೂಡಿದ್ದು, ಮೊಣಕಾಲಿನ ಮೇಲೆ ಅಗಲವಾಗಿ ಹರಡಿದೆ. ಲಂಗದ ನಿರಿಗೆಗಳು ತುಂಬಾ ಸ್ಪಷ್ಟವಾಗಿ, ಸುಂದರವಾಗಿ ಕಂಡುಬರುತ್ತವೆ. ಕುಚಬಂಧ ವಿಶೇಷವಾಗಿದ್ದು, ಮುತ್ತಿನಿಂದ ಮಾಡಿದೆ. ಆಭರಣಗಳಿಗೆ ಸಂಬಂಧಿಸಿದಂತೆ ಪದಕವಿರುವ ಬೈತಲೆ ಬೊಟ್ಟು ಅಥವಾ ಲಲಾಟವನ್ನು, ತುರುಬನ್ನು ಎಡಭಾಗಕ್ಕೆ ಹಾಕಿದ್ದು, ತುರುಬಿಗೆ ಮುತ್ತಿನಬಲೆಯನ್ನು ಸುತ್ತಿರುವುದು ಕಂಡುಬರುತ್ತದೆ. ಎರಡೆಳೆಯ ಸಾದಾ ವೃತ್ತಕುಂಡಲ ಹಾಗೂ ಮೇಲ್ಗಿವಿಗೆ ಕೊಪ್ಪು ಧರಿಸಿದ್ದಾಳೆ. ಭಾವಭಂಗಿಯ ಶಿಲ್ಪವಾದ್ದರಿಂದ ಹುಬ್ಬುಗಳ ಚಲನೆಯನ್ನು ಶಿಲ್ಪದಲ್ಲಿ ಅಚ್ಚು ಕಟ್ಟಾಗಿ ಮೂಡಿಸಿದ್ದಾರೆ. ಹಣೆಗೆ ತಿಲಕವನ್ನು ಧರಿಸಿದ್ದಾಳೆ. ಮೂರೆಳೆಯ ಮುತ್ತಿನ ಕಂಠಿಕೆ, ಮೂರೆಳೆಯ ಕಂಠೀಹಾರ ಪದಕದಿಂದ ಕೂಡಿದ್ದು, ಸ್ತನಹಾರವನ್ನು ಸಹ ಧರಿಸಿದ್ದಾಳೆ. ಮುತ್ತಿನ ಮೇಖಲೆ ಧರಿಸಿದ್ದು, ಪದಕವಿರುವ ಭುಜಹಾರ ಅಥವಾ ಸ್ಕಂದಮಾಲೆಯನ್ನು ತೊಡೆಯ ಭಾಗದವರೆಗೆ ಧರಿಸಿದ್ದಾಳೆ. ಭುಜಕೀರ್ತಿ ಎರಡೆಳೆಯ ಬಾಹುಬಂಧಿ, ಮುಂಗೈಗೆ ೬ ಬಳೆಗಳನ್ನು ಧರಿಸಿದ್ದಾಳೆ. ಅಲ್ಲದೇ ಪ್ರತಿ ಬೆರಳಿಗೂ ಉಂಗುರಗಳನ್ನು ಧರಿಸಿರುವುದು ಗಮನಾರ್ಹ. ಇದರೊಂದಿಗೆ ಕಾಲ್ಗಡಗ ಮತ್ತು ಸಡಿಲವಾದ ಸಾದಾ ವಿನ್ಯಾಸದ ಪಾದಸರ ಧರಿಸಿದ್ದಾಳೆ. ಇಲ್ಲಿ ಬಹುತೇಕ ಎಲ್ಲಾ ಆಭರಣ ಮತ್ತು ವಸ್ತ್ರಗಳಿಗೆ ಮುತ್ತಿನಿಂದ ಅಲಂಕರಣೆಯನ್ನು ಮಾಡಲಾಗಿದೆ. ಈ ನೃತ್ಯ ಶಿಲ್ಪವು ಅತ್ಯಂತ ಶ್ರೀಮಂತ ಶಿಲ್ಪವಾಗಿದ್ದು, ರತ್ನಾಕರ ವರ್ಣಿಯ 'ಭರತೇಶವೈಭವ'ದಲ್ಲಿ ಹಾಗೂ ಗೋವಿಂದವೈದ್ಯನ 'ಕಂಠೀರವನರಸರಾಜ ವಿಜಯ'ದಲ್ಲಿ ಉಲ್ಲೇಖಿಸಿರುವ ನೃತ್ಯಗಾರ್ತಿಯರ ವಸ್ತ್ರ ಮತ್ತು ಆಭರಣಗಳ ವಿವರಗಳಿಗೆ ಈ ಶಿಲ್ಪವು ಸಮರ್ಥನೆಯನ್ನು ನೀಡುತ್ತದೆ. ಅಲ್ಲದೇ ಪಾಯೇಸ್‌ನು ನೃತ್ಯಗಾರ್ತಿಯರು ಧರಿಸಿದ ಆಭರಣಗಳ ಐಶ್ವರ್ಯದ ವಿವರಣೆಗೆ ಈ ಶಿಲ್ಪ ನಿದರ್ಶನವಾಗಿದೆ. ಹಾಗಾಗಿ ವಿಜಯನಗರದ ಕೆಲ ನೃತ್ಯಗಾರ್ತಿಯರು ಸಿರಿವಂತರಾಗಿದ್ದರು ಎಂಬ ಅಂಶ ನಂಬಲರ್ಹವಾಗಿದೆ. ಲೇಪಾಕ್ಷಿಯ ದೇವಾಲಯದಲ್ಲಿ ದೊರೆತಿರುವ ಮತ್ತೊಂದು ನೃತ್ಯಗಾರ್ತಿ ಶಿಲ್ಪದಲ್ಲಿ ಆಭರಣಗಳು ಬಹುತೇಕ ಮುತ್ತಿನಿಂದ ಮಾಡಲ್ಪಟ್ಟಿರುವುದು ಸ್ಪಷ್ಟವಾಗಿ ಗೋಚರಿಸುತ್ತದೆ.

ಹಂಪಿಯ ಹಜಾರ ರಾಮಚಂದ್ರ ದೇವಾಲಯದ ಪೂರ್ವ ಭಾಗದ ಜಗತಿಯ ಮೇಲಿರುವ ನರ್ತಕಿಯ ಶಿಲ್ಪವೊಂದರಲ್ಲಿ (ಚಿತ್ರ-೪೧) ವೈಜಯಂತಿ ಮಾಲೆಯು ಎಡಭಾಗ ದಿಂದ ಬಲ ತೊಡೆಯ ಮೇಲೆ ಹಾದು ಹೋಗಿರುವುದನ್ನು ಗಮನಿಸಬಹುದು. ಈ ಶಿಲ್ಪದಲ್ಲಿರುವ ನೃತ್ಯಗಾರ್ತಿಯು ಸೀರೆಯನ್ನು ಕಟಿ ಭಾಗದಿಂದ ಪಾದಗಳವರೆಗೆ ಕಚ್ಚೆಹಾಕಿ ಧರಿಸಿದ್ದಾಳೆ. ಬೈತಲೆ ಬೊಟ್ಟನ್ನು ಧರಿಸಿದ್ದು, ಹಣೆಗೆ ಕುಂಕುಮ ಮತ್ತು ದಪ್ಪ ವೃತ್ತಾಕಾರದ ಓಲೆ ಧರಿಸಿದ್ದಾಳೆ. ಉಳಿದಂತೆ ಆಭರಣಗಳ ವಿಶೇಷತೆ ಅಷ್ಟಾಗಿಲ್ಲ.

ಹಂಪಿಯ ವಿಠಲ ದೇವಾಲಯದ ಭಜನಮಂದಿರದ ಅಧಿಷ್ಠಾನದಲ್ಲಿರುವ ಒಂದು ಶಿಲಾಪಟ್ಟಿಕೆಯಲ್ಲಿ (ಚಿತ್ರ-೪೨) ರಾಜ ನೃತ್ಯ ವೀಕ್ಷಿಸುತ್ತಿರುವಂತೆ ನರ್ತಕಿಯ ಹಿಂದೆ ಸಂಗೀತವಾದಕರು ಸಂಗೀತ ನುಡಿಸುತ್ತಿರುವಂತೆ ಚಿತ್ರಿಸಲಾಗಿದೆ. ಈ ಶಿಲ್ಪದಲ್ಲಿ ಸಹ ನರ್ತಕಿಯು ಲೇಪಾಕ್ಷಿ ಶಿಲ್ಪದಲ್ಲಿ ರುವಂತೆ ಪೈಜಾಮದಂತಹ ಪಾದಚಲ್ಲಣಗಳನ್ನು ಧರಿಸಿ ರುವುದು ಹಾಗೂ ಪಾದ ಚಲ್ಲಣಗಳ ಮೇಲೆ ತೊಡೆಯ ಭಾಗದವರೆಗೆ ಸಡಿಲವಾಗಿ, ನಿರಿಗೆ ಹಿಡಿದು ಹೊಲಿದು ಸಿದ್ದಗೊಳಿಸಿದ ತುಂಡುಲಂಗವನ್ನು ಧರಿಸಿದ್ದಾಳೆ. ಹಾಗಾಗಿ ಇದು ನೃತ್ಯಾಭಿನಯಗಳಿಗೆ ಅನುಕೂಲವಾಗುವಂತೆ ತಯಾರಿಸಿದ ವಸ್ತ್ರ ಎಂಬುದು ಗಮನಾರ್ಹ.

ಒಟ್ಟಾರೆಯಾಗಿ ವಿಜಯನಗರ ಕಾಲದ ನರ್ತಕಿಯರ ವಸ್ತ್ರ ಮತ್ತು ಆಭರಣಗಳಲ್ಲಿ ಒಂದೇ ರೀತಿಯ ಧಾರಣೆಯ ಕ್ರಮವನ್ನು ಕಾಣಲು ಸಾಧ್ಯವಿಲ್ಲ. ಅಲ್ಲದೇ ಕೆಲವು ನರ್ತಕಿಯರು ಶ್ರೀಮಂತ ರಾಗಿದ್ದರು ಎಂಬ ಪಾಯೇಸ್‌ನ ವಿವರಣೆಯನ್ನು ಶಿಲ್ಪಗಳು ಪುಷ್ಟೀಕರಿಸುತ್ತವೆ. ಇವರು ಬಹುತೇಕವಾಗಿ ಅಲಂಕರಣೆಗೆ ಮುತ್ತುಗಳನ್ನು ಬಳಸುತ್ತಿದ್ದರು ಎಂಬುದು ಗಮನಾರ್ಹ ಸಂಗತಿ. ಅಲ್ಲದೇ ನರ್ತಕಿಯರು ಸಿದ್ದಗೊಳಿಸಿದ ವಸ್ತ್ರಗಳನ್ನು ಧರಿಸುತ್ತಿದ್ದರು ಎಂಬುದು ಸ್ಪಷ್ಟವಾಗುತ್ತದೆ. ತಮ್ಮ ಭಾವಭಂಗಿಗಳ ಅಭಿನಯಕ್ಕೆ ಈ ರೀತಿಯ ವಸ್ತ್ರಗಳು ಅನುಕೂಲವಾಗುತ್ತಿದ್ದವು. ಇಂದಿಗೂ ಈ ರೀತಿಯ ವಸ್ತ್ರಗಳನ್ನು ನರ್ತಕಿಯರು ಧರಿಸುತ್ತಿ ರುವುದನ್ನು ಗಮನಿಸಬಹುದಾಗಿದೆ. ಹಾಗಾಗಿ ನೃತ್ಯವು ವಿಜಯನಗರ ಕಾಲದ ಸಾಂಸ್ಕೃತಿಕ ಅಂಶಗಳಲ್ಲಿ ಮಹತ್ವದ ಪಾತ್ರವನ್ನು ವಹಿಸಿದೆ.

೩.೩.೫. ಕೋಲಾಟಗಾರ್ತಿಯರು

ಮಾನವ ತನ್ನ ಬಿಡುವಿನ ವೇಳೆಯನ್ನು ಕಳೆಯಲು ಹಾಗೂ ಮನಸ್ಸನ್ನು ಉಲ್ಲಾಸಗೊಳಿಸಲು ಅನೇಕ ಹವ್ಯಾಸಗಳನ್ನು ಬೆಳೆಸಿಕೊಂಡಿದ್ದಾನೆ. ಹೀಗೆ ಮನೋರಂಜನೆಯನ್ನು ತಾನೂ ಅನುಭವಿಸುತ್ತಾ ಇತರರಿಗೂ ನೀಡುತ್ತಾನೆ. ಹೀಗೆ ಬೆಳೆಸಿಕೊಂಡ ಮನೋರಂಜನೆಯ ಸಾಧನಗಳಲ್ಲಿ ಕ್ರೀಡೆ ಮತ್ತು ವಿನೋದಾವಳಿಗಳು ಮಾನವನ ಸಾಮಾಜಿಕ ಬದುಕಿನ ಹಾಗೂ ಸಾಂಸ್ಕೃತಿಕ ಜೀವನದ ಪ್ರಮುಖ ಅಂಶಗಳಾಗಿವೆ. ಪ್ರದರ್ಶನಾತ್ಮಕ ಕಲೆಗಳಲ್ಲಿ ಕೋಲಾಟವು ಒಂದಾಗಿದೆ. ಕೋಲಾಟವು ಜನಪದ ಹಿನ್ನೆಲೆಯಲ್ಲಿ ಬೆಳೆದು ಬಂದ ಆಟವಾಗಿದೆ. ಜಾತ್ರೆ, ಉತ್ಸವ, ರಥೋತ್ಸವ, ಹಬ್ಬ-ಹರಿದಿನಗಳು ಸುಗ್ಗಿ ಮುಂತಾದ ಸಂದರ್ಭಗಳಲ್ಲಿ ಕೋಲಾಟ ಆಡುತ್ತಾರೆ. ಹಾಗೆಯೇ ಅರಮನೆಗಳಲ್ಲಿ, ವಿವಾಹ, ಪಟ್ಟಾಭಿಷೇಕ, ಮುಂತಾದ ಸಂದರ್ಭಗಳಲ್ಲಿ ಕೆಲವು ವಿಶೇಷ ಮನರಂಜನ ಪ್ರದರ್ಶನಗಳು ನಡೆಯುತ್ತವೆ. ಅವುಗಳಲ್ಲಿ ಕೋಲಾಟವೂ ಒಂದಾಗಿದೆ.

ಕೋಲಾಟದಲ್ಲಿ ಬಹುತೇಕ ಸ್ತ್ರೀಯರು ಭಾಗವಹಿಸುತ್ತಾರೆ. ಸಣ್ಣ ಕೋಲುಗಳೆರಡನ್ನು ತಮ್ಮ ಎರಡು ಕೈಗಳಲ್ಲಿ ಹಿಡಿದು ಹಾಡು ಹೇಳಿಕೊಂಡು ಆಡುವ ಆಟ ಕೋಲಾಟವಾಗಿದೆ. ಈ ಕೋಲುಗಳಿಗೆ ಬಣ್ಣವನ್ನು ಹಚ್ಚಿ ಸಿಂಗರಿಸಿರುತ್ತಾರೆ. ಕೋಲಾಟ ಆಡುವಾಗ ಕೋಲಾಟಗಾರರು ವೃತ್ತಾಕಾರವಾಗಿ ಮತ್ತು ಹಿಮ್ಮುಖ ವೃತ್ತಾಕಾರವಾಗಿ ಹೆಜ್ಜೆ ಹಾಕುತ್ತಾ ಒಬ್ಬರ ಕೋಲಿಗೆ ಇನ್ನೊಬ್ಬರ ಕೋಲನ್ನು ಹೊಡೆದು ಆಟವಾಡುತ್ತಾರೆ.

ವಿಜಯನಗರಕ್ಕೆ ಭೇಟಿ ನೀಡಿದ್ದ ನಿಕೊಲೊ-ದೆ-ಕೊಂತಿಯು ಕೋಲಾಟದ ಕುರಿತು ದಾಖಲಿಸಿದ್ದಾನೆ. ಅವನು "ಹಾಡನ್ನು ಹಾಡುತ್ತಾ ವೃತ್ತಾಕಾರವಾಗಿ ಪ್ರತಿಯೊಬ್ಬರು ಎರಡು ಕೋಲುಗಳನ್ನು ಹಿಡಿದು ಆಟವಾಡುತ್ತಾರೆ"[೨೪೧] ಎಂದು ವಿವರಿಸುತ್ತಾನೆ.

ಪಿಯಟ್ರೊ ಡೆಲ್ಲಾವೆಲ್ಲಾ ಕೆಳದಿಯ ಇಕ್ಕೇರಿಗೆ ಭೇಟಿ ನೀಡಿದ್ದನು. ಅವನು ಅಲ್ಲಿ ಕೋಲಾಟವನ್ನು ಕಣ್ಣಾರೆ ಕಂಡಿದ್ದನ್ನು ಹೀಗೆ ವಿವರಿಸುತ್ತಾನೆ, "ಕೋಲಾಟದಲ್ಲಿ ನಿರತರಾದ ಎಲ್ಲರೂ ಬಣ್ಣ ಹಚ್ಚಿದ ಎರಡು ಕೋಲುಗಳನ್ನು ಹಿಡಿದಿದ್ದು, ಅವರಲ್ಲಿ ನಿಪುಣರಾದವರು ಹಾಡನ್ನು ಹಾಡುತ್ತಾರೆ. ಉಳಿದವರು ಸುಮಾರು ಏಳು ಎಂಟು ಬಾರಿ ಕೋಲೆ! ಕೋಲೆ! ಕೋಲೆ! ಎಂಬುದಾಗಿ ಹಾಡುತ್ತಾ ಬೀದಿಗಳಲ್ಲಿ ಹಾಡುತ್ತಾ, ಆಡುತ್ತಾ ಚಲಿಸುತ್ತಾರೆ"[೨೪೨] ಎಂದು ವಿವರಿಸುತ್ತಾನೆ.

ಕಂಠೀರವನರಸರಾಜ ವಿಜಯದ ಪದ್ಯವೊಂದರಲ್ಲಿ ಕೋಲಾಟಗಾರರ ವಸ್ತ್ರ ಮತ್ತು ಆಭರಣಗಳ ಕುರಿತು ಹೀಗೆ ವರ್ಣಿಸಿದ್ದಾರೆ. ಅದರಂತೆ

ಬಿಗಿದುಟ್ಟ ಸಾಲಿಯ ನಿರಿಮೊಲೆಕಟ್ಟಿನ
ಝುಗಝುಗಿಸುವ ಭೂಷಣದ
ಒಗುಮಿಗೆ ಹರುಷದೆ ಸೊಗಸುಗಾತಿಯರಾಗ
ನಗುತ ಕೋಲಾಟಕ್ಕೈದಿದರು[೨೪೩]

ಇನ್ನೊಂದು ಪದ್ಯದಲ್ಲಿ

ಮರೆಯಲೊಡ್ಯಾಣದ ಪೊಂಗೆಜ್ಜೆಗಳ ದನಿ
ವರರತ್ನಮೆರೆದ ಕೋಲುಗಳ
ಕರದೊಳು ಪಿಡಿದು ಮುಂಭಾಗದ ಪಾಡುತ
ಪಿಡಿದು ಸಂಭ್ರಮವ ಬೀರಿದರು[೨೪೪]

ಅದೇ ಕಾವ್ಯದ ಮತ್ತೊಂದು ಪದ್ಯದಲ್ಲಿ

ಬಗಸೆಗಣ್ಣಳ ಡಾಳ ಬೀರುತ ಮುದದೆ ಕೋ
ಲುಗಳನು ಪೊಯ್ಯುಬ್ಬರಕೆ
ಮಿಗೆ ಮೇಲುದು ಜಾರೆ ಪೊಂಗೊಡ ಮೊಲೆಗಳು
ಸೊಗಸ ಬೀರಿದವು ನೋಳ್ಪರಿಗೆ[೨೪೫]

ಹೀಗೆ ಕೋಲಾಟವಾಡುತ್ತಿರುವಾಗ ಕೋಲಾಟ ನಿರತ ಸ್ತ್ರೀಯ ಸೀರೆಯ ಸೆರಗು ಜಾರಿ ನೋಡುಗರಿಗೆ ಆನಂದವುಂಟು ಮಾಡಿತ್ತು ಎಂಬ ನೈಜ ಚಿತ್ರಣ ನೀಡುತ್ತದೆ.

ಪೊಳೆವ ಮುತ್ತಿನ ಮೊಲೆಕಟ್ಟು ಸುವರ್ಣದೋಲ್
ತಳತಳಿಪ ಪೀತಾಂಬರದ
ಉಳಿವ ಮೃಂದಗ ಪಾಠಕರ ಗಾಯನದಿಂದ
ಲಲನೆಯರನುವಾದರಾಗ[೨೪೬]

ಈ ರೀತಿಯಾಗಿ ಕೋಲಾಟನಿರತ ಸ್ತ್ರೀಯರು ವಿವಿಧ ವಸ್ತ್ರ ಮತ್ತು ಆಭರಣಗಳಿಂದ ಅಲಂಕೃತರಾಗಿ ಹಾಗೂ ತಮ್ಮ ಕೋಲುಗಳಿಗೆ ಬಣ್ಣ ಹಚ್ಚಿಕೊಂಡು ಸಂತಸದಿಂದ ಸಾಮೂಹಿಕವಾಗಿ ಆಟ ಆಡುತ್ತಿದ್ದರು.

ಹಂಪಿಯ ಹಜಾರರಾಮಚಂದ್ರ, ವಿಠಲದೇವಾಲಯ, ಮಹಾನವಮಿ ದಿಬ್ಬ, ಶ್ರೀಶೈಲ ಮಲ್ಲಿಕಾರ್ಜುನ ದೇವಾಲಯದ ಶಿಲ್ಪಗಳಲ್ಲಿ ಹಲವಾರು ಕೋಲಾಟದ ಶಿಲ್ಪಗಳು ಕಂಡು ಬರುತ್ತವೆ.

ಹಂಪಿಯ ವಿಠಲ ದೇವಾಲಯದಲ್ಲಿನ ಅಧಿಷ್ಠಾನದಲ್ಲಿರುವ ಕೋಲಾಟ ನಿರತ ಸ್ತ್ರೀಯರ ಶಿಲ್ಪಪಟ್ಟಿಕೆಯಲ್ಲಿ (ಚಿತ್ರ–೪೩) ಎರಡು ಕೈಗಳಲ್ಲಿ ಕೋಲನ್ನು ಹಿಡಿದಿದ್ದು ತಮ್ಮ ಅಕ್ಕಪಕ್ಕ ನಿಂತಿರುವ ಸ್ತ್ರೀಯ ರೊಂದಿಗೆ ಕೋಲಾಟ ಆಡುತ್ತಿದ್ದಾರೆ. ಉದ್ದವಾದ ಚಲ್ಲಣಗಳನ್ನು ಪಾದಗಳವರೆಗೆ ಧರಿಸಿದ್ದು, ಅದರ ಮೇಲೆ ಮೊಣಕಾಲಿನವರೆಗೂ ನಿರಿಗೆ ಹಿಡಿದು ಹೊಲಿದಿರುವ ತುಂಡುಲಂಗ (ಫ್ರಾಕ್ ಮಾದರಿ)ವನ್ನು ಧರಿಸಿದ್ದಾರೆ. ಆಭರಣಗಳಲ್ಲಿ ಬೈತಲೆ ಬೊಟ್ಟು, ಎರಡೆಳೆಯ ತೋಳ್ಬಂಧಿ, ಕೈಕಡಗ ಮತ್ತು ಕಾಲ್ಕಡಗ ಧರಿಸಿದ್ದಾಳೆ.

ಅದೇ ದೇವಾಲಯದ ಭಜನ ಮಂದಿರದ ಅಧಿಷ್ಠಾನದಲ್ಲಿರುವ ಶಿಲ್ಪಪಟ್ಟಿಕೆಯಲ್ಲಿ ಒಬ್ಬರು ಒಂದೊಂದು ರೀತಿಯ ವಸ್ತ್ರ ಧರಿಸಿದ್ದಾರೆ. ಒಬ್ಬ ಕೋಲಾಟಗಾರ್ತಿ ಉದ್ದ ಚಲ್ಲಣಗಳನ್ನು ಪಾದಗಳವರೆಗೆ ಧರಿಸಿದ್ದು, ಅದರ ಮೇಲೆ ಒತ್ತೊತ್ತಾಗಿ ನಿರಿಗೆ ಹಿಡಿದು ಹೊಲಿದ ತುಂಡು ಲಂಗವನ್ನು ಧರಿಸಿದ್ದಾಳೆ. ಮತ್ತೊಬ್ಬ ಸ್ತ್ರೀಯು ಸೀರೆಯನ್ನು ಕಚ್ಚೆಹಾಕಿ ಉಟ್ಟಿದ್ದು, ಸೀರೆಯ ಸೆರಗು ಎಡಭುಜದ ಮೇಲೆ ಹಾದು ಹೋಗಿದೆ. ಈ ಶಿಲ್ಪದಲ್ಲಿ ಮೂರೆಳೆಯ ಮೇಖಲೆಯನ್ನು ಗಮನಿಸಬಹುದು.

ಲೇಪಾಕ್ಷಿಯ ವೀರಭದ್ರ ದೇವಾಲಯದ ದ್ವಾರಬಂಧದಲ್ಲಿರುವ ಶಿಲ್ಪಪಟ್ಟಿಕೆಯೊಂದರಲ್ಲಿ ಕೋಲಾಟ ನಿರತ ಶಿಲ್ಪಗಳಿವೆ. ಈ ಶಿಲ್ಪದಲ್ಲಿ ಇಬ್ಬರು ಕೋಲಾಟ ಆಡುತ್ತಿದ್ದು, ತುರುಬನ್ನು ಹಾಕಿದ್ದು, ತುರುಬಿಗೆ ಹೂವನ್ನು ಸುತ್ತಿದ್ದಾರೆ. ವೃತ್ತಕುಂಡಲ ಧರಿಸಿದ್ದು, ದ್ವಿಸರ, ಸ್ತನಹಾರ, ಎರಡೆಳೆಯ ತೋಳ್ಬಂಧಿ ಮತ್ತು ಮುಂಗೈ ಕಡಗಗಳನ್ನು ಧರಿಸಿದ್ದಾಳೆ. ದಪ್ಪವಾದ ಕಾಲ್ಕಡಗ ಧರಿಸಿದ್ದಾಳೆ. ಕಚ್ಚೆಹಾಕಿದ ಸೀರೆಯನ್ನು ಪಾದಗಳವರೆಗೆ ಧರಿಸಿದ್ದು, ಸೀರೆಯ ಮೇಲೆ ಎರಡೆಳೆಯ ಕಾಂಚೀಧಾಮ ಧರಿಸಿದ್ದಾರೆ.

ಶ್ರೀಶೈಲ ಮಲ್ಲಿಕಾರ್ಜುನ ದೇವಾಲಯದ ಪ್ರಾಕಾರದಲ್ಲಿರುವ ಕೋಲಾಟ ಶಿಲ್ಪಗಳಲ್ಲಿ ವಿಶೇಷತೆ ಯಿದೆ. ಈ ಶಿಲ್ಪದಲ್ಲಿನ ಸ್ತ್ರೀಯರು ಉದ್ದ ಜಡೆಯನ್ನು ಹೆಣೆದಿದ್ದು, ಜಡೆಯ ತುದಿಗೆ ರಿಬ್ಬನ್ ಹಾಕಿದ್ದಾರೆ. ತಲೆಗೆ ಬೈತಲೆ ಬೊಟ್ಟು ಧರಿಸಿದ್ದಾರೆ. ದೊಡ್ಡದಾದ ಮುತ್ತಿನ ವೃತ್ತ ಕುಂಡಲ ಧರಿಸಿದ್ದಾಳೆ, ಮುತ್ತಿನ ಸರಗಳಲ್ಲಿ ಇರುವ ಪದಕವು ಸಣ್ಣ ಮುತ್ತಿನ ಸರದಂತೆ ಇದೆ. ಭುಜಕೀರ್ತಿ, ಬಾಹುಬಂಧಿ

ಮತ್ತು ಮುಂಗೈ ಕಡಗಗಳು ಮುತ್ತಿನಿಂದ ಮಾಡಿದವುಗಳಾಗಿವೆ. ಸೀರೆಯನ್ನು ಕಚ್ಚೆಹಾಕಿ ಮೊಣಕಾಲಿನವರೆಗೂ ಧರಿಸಿದ್ದಾರೆ. ಮೂರೆಳೆಯ ಮುತ್ತಿನ ಮೇಖಲೆಯು ಸೀರೆಯನ್ನು ಬಿಗಿಗೊಳಿಸಿದಂತಿದೆ.

ಒಟ್ಟಾರೆ ಕೋಲಾಟ ನಿರತ ಸ್ತ್ರೀಯರು ಧರಿಸಿರುವ ವಸ್ತ್ರಗಳು ಒಂದೇ ರೀತಿಯಾಗಿಲ್ಲ ಪಾದಗಳವರೆಗೆ ಕಚ್ಚೆಹಾಕಿ ಧರಿಸಿದ ಸೀರೆ, ಮೊಣಕಾಲಿನವರೆಗೆ ಹಾಗೂ ಪಾದಗಳವರೆಗೆ ಚಲ್ಲಣಗಳನ್ನು(ಪ್ಯಾಂಟ್) ಹಾಕಿ, ಅದರ ಮೇಲೆ ತುಂಡು ಲಂಗವನ್ನು ಧರಿಸಿದ್ದಾರೆ. ಈ ತುಂಡು ಲಂಗವು ಕೊರವಂಜಿಯ ವಸ್ತ್ರವನ್ನು ಹೋಲುತ್ತದೆ. ಕೋಲಾಟಗಾರ್ತಿಯರು ಕೋಲಾಟ ಆಟವಾಡುವಾಗ ತಮ್ಮ ಚಲನವಲನಗಳಿಗೆ ತೊಂದರೆ ಯಾಗದಂತೆ ಈ ರೀತಿಯ ವಸ್ತ್ರಗಳನ್ನು ಧರಿಸುತ್ತಿದ್ದರು ಎಂಬುದು ಗಮನಾರ್ಹವಾಗಿದೆ. ಅಲ್ಲದೆ ತುರುಬನ್ನು ಗಂಟು ಹಾಕಿದ್ದು, ಕೇಶಾಲಂಕಾರ ಮಾಡಿಕೊಂಡಿದ್ದಾರೆ.

ಕೋಲಾಟದಲ್ಲಿ ಪರಿಣಿತರಾದ ಸ್ತ್ರೀಯರು ತಮ್ಮ ಕಾಲ ಬೆರಳಿನ ತುದಿಯಿಂದ ತಮ್ಮ ತುರುಬಿನ ಗಂಟನ್ನು ತಾಕಿಸುವಷ್ಟು ಪ್ರವೀಣರಾಗಿದ್ದರು(ಚಿತ್ರ-೪೪) ಎಂಬುದನ್ನು ಗಮನಿಸಬಹುದು. ಅದು ಅವರು ಆಟದಲ್ಲಿ ತಮ್ಮನ್ನು ಸಂಪೂರ್ಣವಾಗಿ ತೊಡಗಿಸಿ ಕೊಂಡಿದ್ದನ್ನು ಹಾಗೂ ಪರಿಣಿತಿಯನ್ನು ತೋರ್ಪಡಿಸುತ್ತದೆ.

೩.೩.೬. ಓಕುಳಿಯಾಟದಲ್ಲಿನಿರತ ಸ್ತ್ರೀಯರು

ವಿಜಯನಗರ ಕಾಲದ ಸಾಮ್ರಾಜ್ಯವು ಉತ್ಸವ ಮತ್ತು ಸಮಾರಂಭಗಳ ವೈಭವದ ಯುಗವೆಂದರೆ ತಪ್ಪಲ್ಲ. ವಿಜಯನಗರ ಸಾಮ್ರಾಜ್ಯ ರಾಜರು ಮತ್ತು ಜನ ಸಾಮಾನ್ಯರು ಕೇವಲ ಯುದ್ಧಗಳು, ಸಾಮ್ರಾಜ್ಯ ವಿಸ್ತರಣೆ, ವ್ಯಾಪಾರ, ದೇವಾಲಯ ಸ್ಥಾಪನೆಗಳಲ್ಲಿ ಅಷ್ಟೇ ತೊಡಗಿಸಿಕೊಳ್ಳದೇ ಸಾಂಸ್ಕೃತಿಕವಾಗಿ ಹಾಗೂ ಧಾರ್ಮಿಕ ಮನರಂಜನಾತ್ಮಕ ಕಾರ್ಯಗಳಲ್ಲಿ ತೊಡಗಿಸಿಕೊಂಡಿದ್ದರು. ರಾಜರಿಂದ ಹಿಡಿದು ಸಾಮಾನ್ಯ ವರ್ಗದ ಜನರು ವಿವಿಧ ಹಬ್ಬ, ಉತ್ಸವ, ಜಾತ್ರೆಗಳಿಂದ ಕಾರ್ಯ ಕ್ರಮಗಳಲ್ಲಿ ತೊಡಗಿಕೊಂಡು ಮನರಂಜನೆಯನ್ನು ಪಡೆಯುತ್ತಿದ್ದರು. ಈ ಕಾಲದಲ್ಲಿ ಯುಗಾದಿ, ದೀಪಾವಳಿ, ಮಹಾನವಮಿ ಮುಂತಾದ ಹಬ್ಬಗಳಲ್ಲಿ ಓಕಳಿಯ ಹಬ್ಬವು ಒಂದು ಪ್ರಮುಖ ಸ್ಥಾನವನ್ನು ಪಡೆದಿತ್ತು ಎಂಬುದು ಗಮನಾರ್ಹ ಅಂಶವಾಗಿದೆ.

'ಓಕುಳಿ' ಎಂದರೆ ಉತ್ಸವ ಸಂದರ್ಭಗಳಲ್ಲಿ ಒಬ್ಬರ ಮೇಲೊಬ್ಬರು ಎರಚುವ ಬಣ್ಣದ ನೀರು ಎಂದರ್ಥ. ನೀರಿಗೆ ಹಳದಿ(ಅರಿಶಿನ), ಕೆಂಪು ಬಣ್ಣಗಳನ್ನು ಸೇರಿಸಿ ಓಕುಳಿ ನೀರನ್ನು ತಯಾರಿಸಿರುತ್ತಾರೆ. ಅಲ್ಲದೇ ಕೆಲವೊಮ್ಮೆ ಇದಕ್ಕೆ ಸುಣ್ಣವನ್ನು ಸೇರಿಸುತ್ತಾರೆ. ದೇವಾಲಯದ ಉತ್ಸವವು ಹಲವಾರು ದಿನಗಳ ಕಾಲ ಜರುಗುತ್ತದೆ. ಅದರಲ್ಲಿ ದೇವರ ಕಲ್ಯಾಣೋತ್ಸವ ನಂತರದ ದಿನಗಳಲ್ಲಿ ಒಂದು ದಿನವನ್ನು ವಸಂತೋತ್ಸವ ವೆಂದು ಆಚರಿಸುತ್ತಾರೆ. ಹಾಗೆಯೇ ಜನಸಾಮಾನ್ಯರ ವಿವಾಹದ ಮರುದಿನ ಓಕುಳಿ ಯಾಟವನ್ನು ಮೊದಲು ನವ ದಂಪತಿಗಳು ಆಡುತ್ತಾರೆ. ಅನಂತರ ಅಲ್ಲಿ ನೆರೆದಿರುವ ಸಂಬಂಧಿಕರೆಲ್ಲಾ ಅದರಲ್ಲಿ ಪಾಲ್ಗೊಳ್ಳುತ್ತಾರೆ. ಓಕುಳಿ ಆಟದಲ್ಲಿ ಸಣ್ಣವರು, ದೊಡ್ಡವರು ಎಂಬ ಬೇಧಭಾವವಿಲ್ಲದೆ ಪಾಲ್ಗೊಂಡು ಸಂತೋಷವನ್ನು ಹಂಚಿಕೊಳ್ಳುವ ಪ್ರಮುಖ ಸಂದರ್ಭವದು.

ಅಂತೆಯೇ ಹಬ್ಬಗಳಲ್ಲಿ ಹೋಳಿಹಬ್ಬದಂದು ಓಕುಳಿಯ ನೀರನ್ನು ಒಬ್ಬರ ಮೇಲೊಬ್ಬರು ಎರಚಿಕೊಂಡು ಸಂತೋಷಪಡುವ ಹಬ್ಬವಾಗಿದೆ. ಹೀಗೆ ವಿವಿಧ ಸಾಮಾಜಿಕ ಮತ್ತು ಧಾರ್ಮಿಕ ಸಮಾರಂಭಗಳಲ್ಲಿ ಓಕುಳಿಯ ನೀರನ್ನು ಎರಚಿಕೊಂಡು ಸಂಭ್ರಮಿಸುವ ಈ ಸಂದರ್ಭದ ಕುರಿತು ವಿಜಯನಗರ ಕಾಲದ ಸಾಹಿತ್ಯ, ವಿದೇಶಿ ಬರವಣಿಗೆ ಹಾಗೂ ಹಂಪಿಯ ಹಜಾರ ರಾಮಚಂದ್ರ ದೇವಾಲಯ, ಮಹಾನವಮಿದಿಬ್ಬ, ವಿಠಲ ದೇವಾಲಯ ಗಳಲ್ಲಿನ ಶಿಲ್ಪಗಳು ಪ್ರಮುಖ ಆಕರಗಳಾಗಿವೆ.

ಕನಕದಾಸರು ಮೋಹನತರಂಗಿಣಿಯಲ್ಲಿ ಓಕುಳಿಯಾಟದ ಕುರಿತು ಹೀಗೆ ವರ್ಣಿಸಿದ್ದಾರೆ;

ಬಂದುಗೆವಾಯವಾಯ ಭಾಮಿನಿ ಕೇಳು ಹೊಸಹೊನ್ನ
ಬಿಂದಿಗೆ ದುಂಬಿಯೋಕುಳಿಯ
ಇಂದಿಗೆ ಸುಖಸಿದ್ಧಿಸಿತೆಂದು ಕೃಷ್ಣನೊ
ಳೊಂದಿ ತಕ್ಕೈಸಿ ಚಲ್ಲಿದರು[೨೪೭]

ರಾಮನಾಥ ಚರಿತದಲ್ಲಿ ವರ್ಣಿಸಿರುವಂತೆ:

ಒಬ್ಬರೊಬ್ಬರನೊಬ್ಬರೊಬ್ಬರಾಳಿಸುತ ಮ
ತ್ತೊಬ್ಬರೊಬ್ಬರ ಮೊಗದೊಳಗೆ
ಒಬ್ಬರೊಬ್ಬರು ನೀರ ಚೆಲ್ಲುತಾಡಿದರು
ದುಬ್ಬಿನಿಂ ನೀರಾಟವನು[೨೪೮]

ಇದೇ ಕಾವ್ಯದ ಮತ್ತೊಂದು ಪದ್ಯದಲ್ಲಿ ಓಕುಳಿಯಾಟದ ಬಣ್ಣನೆ ಈ ರೀತಿಯಾಗಿದೆ.

ಮೊಗೆದು ಮೊಗೆದು ನೀರ ಮೊಗಕೆ ಚೆಲ್ಲುವ ಮಟ
ನೆಗೆವ ತಡಂಗಾಲ್ವೊಯ್ವ
ಅಗುಳುವೇಳುವ ತೇಲುವಿಸುವ ಬಗೆ ಮಿಗೆ
ಸೊಗಯಿಸಿತಂದವರೊಳಗೆ[೨೪೯]

ಸನತ್ಕುಮಾರ ಚರಿತದಲ್ಲಿ ಓಕುಳಿ ನೀರು ಚೆಲ್ಲಿಕೊಳ್ಳುವಾಗ ತಾವು ಧರಿಸಿದ್ದ ವಸ್ತ್ರಗಳನ್ನು ಹೇಗೆ ಸಡಿಲಿಸುತ್ತಾರೆ ಎಂದು ವರ್ಣಿಸಿದೆ. ಅದರಂತೆ;

ಉಟ್ಟ ನಿರಿಗಳನೋಸರಿಸಿ ಸಲೆ
ತೊಟ್ಟ ರವಕೆಯ ಬಿಗಿದು ಕೊರಳೊಳು
ಕಟ್ಟಿದನುಪಮಹಾರಗಳ ತೆಗೆದಖಿಳ ತೋಡವುಗಳ
ಮುಟ್ಟಿ ಕೀಲ್ಗಳನವುಕಿ ಕಿಂಗಳ
ವಟ್ಟ ತಾವರೆಗೊಳನ ಪೊಕ್ಕರು
ಬಟ್ಟಗಂಗಳ ಭಾವೆಯರು ಪೊನ್ನಂಡೆಗಳ ಪಿಡಿದು[೨೫೦]

ಇದೇ ಕಾವ್ಯದ ಮತ್ತೊಂದು ಪದ್ಯದಲ್ಲಿ ಓಕುಳಿ ಕುರಿತು

ನಗುತ ನಳಿನಾಕ್ಷಿಯರು ಪೊನ್ನಂ
ಡೆಗಳೊಳಗೆ ತಿಳಿಗೊಳದ ನೀರನು
ಮೊಗೆಮೊಗೆದು ನಡು ಬಳುಕೆ ಕುಚಯುಗ್ಮಗಳು ಕುಣಿದಾಡೆ
ಮಿಗೆಯೊಲೆಯೆ ತನುಲತೆ ಸರಾಗದಿ
ಹೊರರೊಗುವ ಪೊಂಬಣ್ಣದೊಡಲಿನ
ಮೃಗಮದಾಮೋದೆಯರು ನೀರಾಡಿದರು ತಮತಮಗೆ[೨೫೧] ಎಂದು ಹೇಳಲಾಗಿದೆ.

ವಿರೂಪಾಕ್ಷನ ವಸಂತೋತ್ಸವದ ಆಚರಣೆಯಲ್ಲಿ ಒಂದು ಮುಖ್ಯ ಘಟ್ಟ ಓಕುಳಿ ಎರೆಚಾಟ. ಈ ಕುರಿತು ವಿಜಯನಗರಕ್ಕೆ ಭೇಟಿ ನೀಡಿದ್ದ ವಿದೇಶಿ ಪ್ರವಾಸಿ ನಿಕೊಲೊ–ದೆ–ಕೊಂತಿ ಈ ರೀತಿ ವಿವರಿಸಿದ್ದಾನೆ. "ವರ್ಷದಲ್ಲಿ ಮೂರು ದೊಡ್ಡ ಹಬ್ಬಗಳನ್ನು ಆಚರಿಸುತ್ತಾರೆ (ಯುಗಾದಿ, ದೀಪಾವಳಿ, ನವರಾತ್ರಿ). ಇವಲ್ಲದೆ ಮೂರು ದಿನಗಳ ಹಬ್ಬ ಮತ್ತೊಂದಿದೆ (ಹೋಳಿಹಬ್ಬ). ಈ ಹಬ್ಬದಲ್ಲಿ ಎಲ್ಲರ ಮೇಲೂ, ರಾಜರಾಣಿಯರನ್ನೂ ಬಿಡದೆ, ಓಕುಳಿ ನೀರನ್ನು ಎರಚುತ್ತಾರೆ. ಈ ಓಕುಳಿ ನೀರನ್ನು ಈ ಉದ್ದೇಶಕ್ಕಾಗಿಯೇ ದಾರಿಯ ಪಕ್ಕದಲ್ಲಿ ಇಟ್ಟಿರುತ್ತಾರೆ. ಓಕುಳಿ ಎರಚಿದರೂ ಎಲ್ಲರೂ ನಗುತ್ತಲೇ ಇರುತ್ತಾರೆ"[೨೫೨] ಎಂದು ವಿವರಿಸುತ್ತಾನೆ. ಇದರಿಂದ ಸ್ಪಷ್ಟವಾಗುವ ಒಂದು ಅಂಶವೆಂದರೆ ಓಕುಳಿಯಾಟ ಮನರಂಜನೆಯನ್ನು ಉಂಟುಮಾಡುವುದಲ್ಲದೆ ಅಂತಸ್ತು, ಶ್ರೀಮಂತಿಕೆಯ ಗಡಿಯನ್ನು ದಾಟಿ ಎಲ್ಲರೂ ಭಾಗವಹಿಸುವ ಒಂದು ಹಬ್ಬವಾಗಿತ್ತು ಎಂದರೆ ತಪ್ಪಾಗಲಾರದು.

ಇನ್ನು ವಿವಾಹ ಸಂದರ್ಭದಲ್ಲಿ ಓಕುಳಿಯಾಟದ ಕುರಿತು ಹಲವು ಉಲ್ಲೇಖಗಳು ಸಿಗುತ್ತವೆ. ಚೆನ್ನಬಸವ ಪುರಾಣದ ಗಿರಿಜಾಕಲ್ಯಾಣದ ಸನ್ನಿವೇಶದಲ್ಲಿ ಓಕುಳಿಯಾಟದ ವರ್ಣನೆಯನ್ನು ಕವಿ ಈ ಮುಂದಿನಂತೆ ವರ್ಣಿಸಿದ್ದಾನೆ. ಅದರಂತೆ;

ಮರಳಿ ಸುರಪಂ ನಗುತ್ತೂರ್ವಸಿಯ ಮೇಲೆ ಕ
ತ್ತುರಿಯ ಮಲಯಜದ ಕುಂಕುಮಧಾರೆಗಳನೊತ್ತು
ತಿರೆ ಪಡೆದುದಾಕೆಯಂಗಂ ನೀಲಮಾಣಿಕ್ಯ ಮೌಕ್ತಿಕದ ಹಾರಂಗಳಂ।
ಪೊರೆಯೊಳದನೀಕ್ಷಿಪ ಶಚೀಮನಂ ಪಡೆದುದಾ
ಸ್ಮರರಾಜನೆಚ್ಚ ಕನ್ನೈದಿಲೆಯ ಕೆಂಪುದಾ
ವರೆಯ ಮಲ್ಲಿಗೆಯಗಳ ಸರಳ ಬಾಯ್ದೊರೆಗಳಂತಿಹು ವಿಚಿತ್ರಮೆನಲು[೨೫೩]

ಎಂಬುದಾಗಿ ವಿವರಿಸಿದೆ.

ವಾದಿರಾಜರ ಶ್ರೀ ಕೃಷ್ಣ ಬಾಲಲೀಲೆಯಲ್ಲಿ ವಿವರಿಸಿದಂತೆ, ಶ್ರೀಕೃಷ್ಣ–ರುಕ್ಮಿಣಿಯರ ವಿವಾಹದ ನಂತರ ಮಥುರಾ ಪಟ್ಟಣಕ್ಕೆ ಬಂದಾಗ ತಾಯಿ ದೇವಕಿ ಆರತಿ ಬೆಳಗುತ್ತಾಳೆ. ಅನಂತರ ಓಕುಳಿಯಾಟದ ಸಂದರ್ಭದಲ್ಲಿನ ಸನ್ನಿವೇಶವನ್ನು ವಾದಿರಾಜರು ಈ ರೀತಿ ವರ್ಣಿಸುತ್ತಾರೆ.

ಕೃಷ್ಣನು ಅರಮನೆ ಒಳಗೆ ಕರ್ಪೂರದೋಕುಳಿಯನಾಡೆ
ಪಟ್ಟಾವಳಿ ಉಡುಗೆ ಬಲರಾಮ ಕೊಟ್ಟನು
ರಂಗನಾ ಅರಮನೆ ಒಳಗೆ ಗಂಧದೋಕುಳಿಯನಾಡೆ
ಬಂದ ಬೀಗರಿಗೆ ಉಡುಗರೆಯ ಕೊಟ್ಟನು[೨೫೪]

ವಿವಾಹದ ಮರುದಿನ ಓಕುಳಿಯಾಟವಾಡಿದ ನಂತರ ನವದಂಪತಿಗಳಿಗೆ ಹೊಸ ವಸ್ತ್ರಗಳನ್ನು ಕೊಡುವ ಪದ್ಧತಿಯು ಈಗಲೂ ಆಚರಣೆಯಲ್ಲಿದೆ. ಇದರ ನೈಜ ಚಿತ್ರಣವನ್ನು ವಾದಿರಾಜರು ಸೊಗಸಾಗಿ ವರ್ಣಿಸಿದ್ದಾರೆ. ಈ ಕುರಿತು ಸನತ್ಕುಮಾರ ಚರಿತೆಯ ಒಂದು ಪದ್ಯವು ಸಮರ್ಥನೆಯನ್ನು ನೀಡುತ್ತದೆ.

ಕೊಳದೊಳಗೆ ನೀರಾಡಿ ಸತಿಯರು
ತಳೆದು ನೂತನವಸ್ತ್ರ ಭೂಷಣ
ಗಳನು ಬಳಿಕ ಬಲೆಯರು ದೆಸೆದೆಸೆಗಳೊಳು ತಿರುಗಾಡಿ
ಅಲರ್ದ ಮಲ್ಲಿಗೆ ಮೊಲ್ಲೆ ಪಾದರಿ
ಲಲಿತ ಸಂಪಗೆಯಾದಿ ಪುಷ್ಪಂ
ಗಳನು ಪೊಸಜವ್ವನೆಯರೆಲ್ಲರು ತಿಳಿದರಲ್ಲಲ್ಲಿ.[೨೫೫]

ಹೀಗೆ ವಿಜಯನಗರ ಕಾಲದಲ್ಲಿ ಆಚರಣೆಯಲ್ಲಿದ್ದ ಓಕುಳಿಯಾಟವನ್ನು ಸಾಹಿತ್ಯಾಧಾರಗಳೊಂದಿಗೆ ಶಿಲ್ಪಗಳು (ಚಿತ್ರ–೪೫) ಸಹ ಸಾಕ್ಷೀಕರಿಸುತ್ತವೆ. ಮೇಲಿನ ಈ ಶಿಲ್ಪಗಳು ಓಕಳಿಯಾಟಕ್ಕೆ ಉತ್ತಮ ನಿದರ್ಶನವಾಗಿವೆ. ಒಟ್ಟಾರೆಯಾಗಿ ಓಕುಳಿ ಆಟವು ವಿವಿಧ ಧಾರ್ಮಿಕ, ಸಾಮಾಜಿಕ ಸಂದರ್ಭಗಳಲ್ಲಿ ಆಚರಿಸುತ್ತಿದ್ದ ಒಂದು ಹಬ್ಬದಂತಿತ್ತು. ಅಲ್ಲದೆ ಸಾಮಾಜಿಕವಾಗಿ ರಾಜರಿಂದ ಹಿಡಿದು ಜನಸಾಮಾನ್ಯರವರೆಗೆ ಇದರಲ್ಲಿ ಪಾಲ್ಗೊಂಡು ಆಚರಿಸುವ ಒಂದು ಸಾಮೂಹಿಕ ಹಬ್ಬವಾಗಿತ್ತು.

೩.೩.೭. ಗೋಪಿಕಾ ಸ್ತ್ರೀಯರು (ಗೋಪಿಕಾ ವಸ್ತ್ರಾಪಹರಣ)

ಗೋಪಿಕಾ ಸ್ತ್ರೀಯರು ನಂದಗೋಪ ಶ್ರೀಕೃಷ್ಣ ತಮ್ಮ ಗಂಡನಾಗಬೇಕೆನುತ ಕಾತ್ಯಾಯಿನಿ ದೇವಿ (ಗೌರಿದೇವಿ) ವ್ರತವನ್ನು ಮಾಡುತ್ತಿದ್ದರು. ವ್ರತದ ಕೊನೆಯ ದಿನ ಗೋಪಿಕಾ ಸ್ತ್ರೀಯರು ನದಿಯಲ್ಲಿ ಸ್ನಾನ ಮಾಡುತ್ತಿದ್ದಾಗ ಶ್ರೀಕೃಷ್ಣ ಅವರು ಬಚ್ಚಿಟ್ಟಿದ್ದ ಸೀರೆಗಳನ್ನು ಗಂಟು ಕಟ್ಟಿ ಮರದ ಮೇಲೆ ಇಟ್ಟಿದ್ದನು. ಗೋಪಿಕೆಯರು ತಮ್ಮ ಸೀರೆಗಳನ್ನು ಕರುಣಿಸೆಂದು ಕೃಷ್ಣನನ್ನು ಕೇಳಿಕೊಂಡರು. ಇಲ್ಲಿ ನಮಗೆ ಸೀರೆಗಳ ವಿಧಗಳು, ಅವುಗಳ ವಿನ್ಯಾಸ ಹಾಗೂ ಅವುಗಳ ತಯಾರಾಗುತ್ತಿದ್ದ ಸ್ಥಳದ ಬಗೆಗೆ ಪರಿಚಯವಾಗುತ್ತದೆ. ಆ ಕಾರಣದಿಂದ ಗೋಪಿಕಾವಸ್ತ್ರಾಪಹರಣ ಈ ವಿಷಯವನ್ನು ಇಲ್ಲಿ ಅಧ್ಯಯನಕ್ಕೆ ಒಳಪಡಿಸಿದೆ.

ವಾದಿರಾಜರ ಶ್ರೀಕೃಷ್ಣ ಬಾಲಲೀಲೆಯಲ್ಲಿ ವಿವರಿಸಿರುವಂತೆ ಗೋಪಿಕಾ ಸ್ತ್ರೀಯರು ತಮ್ಮ ಸೀರೆಗಳನ್ನು ಹಿಂತಿರುಗಿಸು ಎಂದು ಕೇಳುವಾಗ ಶ್ರೀಕೃಷ್ಣ ಗೋಪಿಕೆಯರಿಗೆ ಈ ರೀತಿಯಾಗಿ ಪ್ರತಿಕ್ರಿಯಿಸುತ್ತಾನೆ. ಅದರಂತೆ,

ಪಟ್ಟಾವಳಿ ಸೀರೆಗಳು ಉಂಟು ನಿಮ್ಮ ಮನೆಗಳಲ್ಲಿ
ಮಿತ್ರೆಯರು ಹೋಗಿ ಉಟ್ಟುಕೊಳ್ಳಿರೆಂದನು[೨೫೬]
ಮಿತ್ರೆಯರೆಲ್ಲರು ಮುತ್ತುಕದಲೆಯನುಟ್ಟು
ಕೃಷ್ಣನ ಕೂಡೆ ಸೀರೆ ಕೇಳುತ್ತಿದ್ದರು[೨೫೭]
ತಾವರೆಯ ಎಲೆಗಳಿಂದ ಭಾಮಿನಿಯರು ಉಟ್ಟುಕೊಂಡು
ವಾರಿಜಾಕ್ಷನ ಕೂಡೆ ಸೀರೆ ಕೇಳುತ್ತಿದ್ದರು[೨೫೮]

ಇಲ್ಲಿ ಗೋಪಿಕೆಯರು ತಮ್ಮ ಮಾನ ಮುಚ್ಚಿಕೊಳ್ಳಲು ಮುತ್ತುಕದೆಲೆ ಮತ್ತು ತಾವರೆಯ ಎಲೆಗಳನ್ನು ಬಳಸಿದ್ದಾರೆ. ಬೇಟೆಗಾರ್ತಿಯರ ವಸ್ತ್ರಗಳು ಎಲೆಯಾಕಾರದವಾಗಿದ್ದು, ಬುಡಕಟ್ಟು ಸಂಸ್ಕೃತಿಯವರು ಮಾನ ರಕ್ಷಣೆಗೆ ತಮ್ಮ ಸುತ್ತಮುತ್ತ ಲಭ್ಯವಿದ್ದ ಎಲೆಗಳನ್ನು ವಸ್ತ್ರಗಳಾಗಿ ಬಳಸುತ್ತಿದ್ದರು

ಎಂಬುದನ್ನು ತಿಳಿದಿದ್ದೇವೆ. ಆದರೆ ಇಲ್ಲಿ ಗೋಪಿಕೆಯರು ಸ್ಥಳೀಯವಾಗಿ ಲಭ್ಯವಿದ್ದ ಎಲೆಗಳನ್ನು ಬಳಸಿ ತಮ್ಮ ಮಾನ ರಕ್ಷಣೆ ಮಾಡಿಕೊಂಡಿದ್ದ ಅಂಶ ತುಂಬಾ ಮಹತ್ವವಾದುದು.

ಶ್ರೀಕೃಷ್ಣ ಅಂತಿಮವಾಗಿ ಮಿತ್ರೆಯರಿಗೆ ಸೀರೆಯನ್ನು ವಾಪಸ್ಸು ಕೊಡುತ್ತಿರುವ ಪ್ರಸಂಗದಲ್ಲಿ ಸೀರೆಯ ವಿಧಗಳು, ಅವುಗಳ ವಿನ್ಯಾಸವನ್ನು ತಿಳಿಯಬಹುದಾಗಿದೆ.

ರಂಗನಂಗ ನೋಡಿ ನಗುತ ಒಂದೊಂದೆ ಸೀರೆಗಳು
ಅಂಗನೆಯರ ಮುಖವ ನೋಡಿ ಕೊಡುತಲಿದ್ದನು[೨೫೯]
ಪಟ್ಟೆಸೀರೆ ನಿಮ್ಮದೇ ಪೈಟ್ನಿಸೀರೆ ನಿಮ್ಮದೇನು
ಪಪ್ಪಳಿಸೀರೆ ಇದ್ಯಾರದೆನುತ ಕೇಳಿದ[೨೬೦]
ಶಾಲಿಸೀರೆ ನಿಮ್ಮದೇ ಸಣ್ಣ ಸೀರೆ ನಿಮ್ಮದೇ
ಗೋವಳನು ಸೀರೆ ಯಾರದೆನುತಲಿದ್ದನು[೨೬೧]
ದೇವಗಿರಪಟ್ಟೆ ಸೀರೆಯಾಳಿ ಮೊದಲಾದ ಸೀರೆ
ಚಿನ್ನದ ಕಂಬಿಯ ಸೀರೆ ಸೆರಗು ಬರೆದಿದೆ[೨೬೨]

ವಾದಿರಾಜರ ಕೃತಿಯಲ್ಲಿ ಉಲ್ಲೇಖವಾಗಿರುವ ಪಪ್ಪಳಿಸೀರೆಯ ಮಾದರಿಯನ್ನು ಲೇಪಾಕ್ಷಿಯ ವೀರಭದ್ರ ದೇವಾಲಯದಲ್ಲಿನ ವರ್ಣಚಿತ್ರಗಳಲ್ಲಿ ಕಾಣಬಹುದಾಗಿದೆ. ಇಲ್ಲಿ ದೇವಗಿರಿಪಟ್ಟೆ ಸೀರೆ ಎಂದರೆ ರೇಷ್ಮೆಯ ಸೀರೆಯಾಗಿದ್ದು ಅದರ ಅಂಚುಗಳು ಹಾಗೂ ಸೆರಗಿನ ಭಾಗ ಚಿನ್ನದ ಎಳೆಗಳಿಂದ ತಯಾರಿಸಿದ ಸೀರೆಯಾಗಿದೆ ಎಂಬುದನ್ನು ವಿವರಿ ಸುತ್ತದೆ. ಅಲ್ಲದೆ ದೇವಗಿರಿಯು ರೇಷ್ಮೆ ವಸ್ತ್ರ ಅಥವಾ ಸೀರೆ ತಯಾರಿಕಾ ಕೇಂದ್ರವಾಗಿತ್ತು ಎಂಬುದನ್ನು ತಿಳಿಯಬಹುದಾಗಿದೆ.

ಹಂಪಿಯ ಅನಂತಶಯನ ದೇವಾಲಯ, ವಿಠಲದೇವಾಲಯ, ಹಜಾರ ರಾಮಚಂದ್ರ ದೇವಾಲಯ ಮುಂತಾದ ದೇವಾಲಯಗಳಲ್ಲಿ ಗೋಪಿಕಾ ವಸ್ತ್ರಾಪಹರಣ ಶಿಲ್ಪಗಳಿವೆ. ವಿಠಲ ದೇವಾಲಯದ ಶಿಲ್ಪವೊಂದರಲ್ಲಿ(ಚಿತ್ರ-೪೬) ಒಂದು ಮರದ ಮೇಲೆ ಕೃಷ್ಣ ವಸ್ತ್ರಗಳ ಗಂಟನ್ನು ಇಟ್ಟುಕೊಂಡು ಕುಳಿತಿರುವುದು, ಮರದ ಕೆಳಗೆ ಗೋಪಿಕಾ ಸ್ತ್ರೀಯರು ತಮ್ಮ ವಸ್ತ್ರಕ್ಕಾಗಿ ಬೇಡುತ್ತಿರುವ ದೃಶ್ಯವಿದೆ. ಇಲ್ಲಿರುವ ಗೋಪಿಕಾ ಸ್ತ್ರೀಯರು ಧರಿಸಿರುವ ಆಭರಣಗಳನ್ನು ಮಾತ್ರ ತಿಳಿಯಲು ಸಾಧ್ಯವಾಗುತ್ತದೆ. ವಿಠಲ ದೇವಾಲಯದ ಸಭಾಮಂಟಪ ದಲ್ಲಿರುವ ಗೋಪಿಕಾ ವಸ್ತ್ರಾಪಹರನ ಶಿಲ್ಪದಲ್ಲಿ ಗೋಪಿಕೆಯರು ಮೂರೆಳೆಯ ಕಂಕಣ ಧರಿಸಿದ್ದಾರೆ. ಅಲ್ಲದೇ ವೈಜಯಂತಿ ಮಾಲೆಯನ್ನು ಸಹ ಧರಿಸಿದ್ದಾರೆ.

೩.೩.೮. ದೀಪಾರತಿ ಹಿಡಿದಿರುವ ಸ್ತ್ರೀ

ಪೂಜಾ ಕಾರ್ಯಗಳಲ್ಲಿ ಮತ್ತು ಶುಭ ಸಮಾರಂಭಗಳಲ್ಲಿ ದೀಪ ಬೆಳಗುವ ಸಂಪ್ರದಾಯ ಅನಾದಿ ಕಾಲದಿಂದಲೂ ಬೆಳೆದು ಬಂದಿದೆ. ದೀಪಾರತಿ ಬೆಳಗುವ ಕೆಲಸವನ್ನು ಸಾಮಾನ್ಯವಾಗಿ ಮಹಿಳೆಯರು ಮಾಡುತ್ತಾರೆ.

ಸನತ್ಕುಮಾರ ಚರಿತೆಯ ಪದ್ಯವೊಂದರಲ್ಲಿ ಆರತಿಯನ್ನು ಹಿಡಿದಿರುವ ಸ್ತ್ರೀಯರ ವಸ್ತ್ರ ಮತ್ತು ಆಭರಣದ ಕುರಿತು ಈ ರೀತಿ ವರ್ಣಿಸುತ್ತದೆ.

ನಡೆಯ ನಟಣೆಯೊಳಂಚೆವಿಂಡಿನ
ಗಡಣಕುಳೆ ಬಿರಿದಕ್ಕುವಂದದಿ
ಮಡದಿಯರ ಚರಣದಲಿ ನೂಪುರ ಹೊನ್ನ ಗೆಜ್ಜೆಗಳ
ತೊಡಚಿ ಪರಿಪರಿಯಾರತಿಗಳನು
ಪಿಡಿದು ಪಾಡುನೆಲೆತ್ತಿದರು ಪೆ
ಣ್ಬಡೆಯ ಲಾವಣ್ಯವನು ಬಣ್ಣಿಪನಾವ ಯುಕ್ತಿಯಲಿ[೨೬೩]

ಎಂಬುದಾಗಿ ವಿವಿಧ ರೀತಿಯ ಆರತಿಗಳನ್ನು ಹಿಡಿದಿರುವ ಸ್ತ್ರೀಯರು ಚಿನ್ನದ ಗೆಜ್ಜೆ, ನೂಪುರ ತೊಟ್ಟು ಹಾಡುತ್ತಾ ಆರತಿ ಬೆಳಗುತ್ತಿದ್ದರು.

ವಾದಿರಾಜರ ಶ್ರೀ ಬಾಲಕೃಷ್ಣ ಲೀಲೆ ಎಂಬ ಕೃತಿಯಲ್ಲಿ ಮಥುರಾ ಪಟ್ಟಣಕ್ಕೆ ಮದುವೆಯ ನಂತರ ಬಂದ ಕೃಷ್ಣ ರುಕ್ಮಿಣಿಯರಿಗೆ ತಾಯಿ ದೇವಕಿ ಆರತಿ ಬೆಳಗಿದ ಉಲ್ಲೇಖ ಕಾಣಬಹುದು.[೨೬೪]

ಬಾರ್ಬೋಸ ಹೇಳುವಂತೆ, "ಹೊಸದಾಗಿ ರಾಜನು ಸಿಂಹಾಸನವನ್ನೇರುವಾಗ, ದೇವರ ದರ್ಶನ ಮಾಡಲು ಮೆರವಣಿಗೆ ಹೊರಡುತ್ತದೆ. ಪ್ರತಿಯೊಬ್ಬ ಹೆಂಗಸು ಅಗಲವಾದ ಹಿತ್ತಾಳೆಯ ತಟ್ಟೆಯಲ್ಲಿ ಅನ್ನವನ್ನು ತುಂಬಿಕೊಂಡು ಅದರ ಮೇಲೆ ಆರತಿಯನ್ನಿಟ್ಟು ಹೂವಿನಿಂದ ಅಲಂಕರಿಸಿರುತ್ತಾಳೆ"[೨೬೫] ಎಂಬುದಾಗಿ ವಿವರಿಸುತ್ತಾನೆ.

ನ್ಯೂನಿಜ್ ಉಲ್ಲೇಖಿಸುವಂತೆ, "ಮಹಾನಮಿಯ ಹಬ್ಬದ ಮುಕ್ತಾಯ ಕ್ರಮದ ಕುರಿತು ಹೇಳುತ್ತಾ, ಪ್ರತಿದಿನ ಸಂಜೆಯ ಮನರಂಜನಾ ಕಲಾಪವು ಅರಸಿಯರ ಆರತಿ ಕಾರ್ಯಕ್ರಮ ದೊಂದಿಗೆ ಮುಕ್ತಾಯಗೊಳ್ಳುತ್ತಿತ್ತು".[೨೬೬] ಹೀಗೆ ಆರತಿ ತಟ್ಟೆಗಳನ್ನು ಹಿಡಿದು ಅಂತಃಪುರದ ಸುಮಂಗಳೆಯರು ಅಂಗಳಕ್ಕೆ ಬರುತ್ತಿದ್ದರು ಎಂದು ವರ್ಣಿಸಿದ್ದಾನೆ. ಅವರು ಸರ್ವಾಲಂಕೃತ ರಾಗಿದ್ದರು ಎಂದು ಹೇಳುತ್ತಾನೆ. ದೇವರಿಗೆ ಬೆಳಗುವ ಆರತಿಯ ತಟ್ಟೆಯಲ್ಲಿ ದೀಪವನ್ನು ಇಟ್ಟು ಬೆಳಗುತ್ತಾರೆ ಎಂಬುದು ಗಮನಿಸಬೇಕಾದ ಅಂಶವಾಗಿದೆ.

ಇದಕ್ಕೆ ಪೂರಕವಾಗಿ ಶಿಲ್ಪಗಳಲ್ಲಿ ಸಹ ವಿವರಗಳು ದೊರೆಯುತ್ತವೆ. ವಿಜಯನಗರ ಕಾಲದ ಸ್ಮಾರಕಗಳಲ್ಲಿ ದೀಪವನ್ನು ಹಿಡಿದಿರುವ ಶಿಲ್ಪಗಳನ್ನು ಕಾಣಲು ಸಾಧ್ಯವಿದೆ.

ಹಂಪಿಯ ಹಜಾರರಾಮ ದೇವಾಲಯದ ನವರಂಗ ಪ್ರವೇಶ ದ್ವಾರದ ಗೋಡೆಯ ಎಡಭಾಗದ ಮೇಲೆ ಕಳಸ ಹಿಡಿದಿರುವ ಸ್ತ್ರೀ ಹಾಗೂ ಬಲಗೋಡೆಯ ಮೇಲೆ ದೀಪ ಹಿಡಿದಿರುವ ಸ್ತ್ರೀಯೂ ನಿಂತಿರುವ ಶಿಲ್ಪಗಳಿವೆ(ಚಿತ್ರ-೪೭). ಈ ಶಿಲ್ಪದಲ್ಲಿರುವ ಮಹಿಳೆ ತನ್ನ ಎರಡು ಕೈಗಳಲ್ಲಿ ದೀಪಾರತಿಯ ತಟ್ಟೆಯನ್ನು ಹಿಡಿದಿದ್ದಾಳೆ. ತುರುಬನ್ನು ತಲೆಯ ಹಿಂಭಾಗ ಕ್ಕೆ ಹಾಕಿದ್ದು, ವೃತ್ತಾಕಾರದ ಕುಂಡಲ, ಕಂಠೀಹಾರ ಮತ್ತು ಮೂರೆಳೆಯ ಮುತ್ತಿನ ಸರ ಧರಿಸಿದ್ದಾಳೆ. ತೋಳ್ಬಂಧಿ ಮತ್ತು ಮುಂಗೈ ಕಡಗಗಳು ಸಾದಾ ವಿನ್ಯಾಸವಿದ್ದು, ಎರಡೆಳೆಯಿಂದ ಕೂಡಿವೆ. ಅಲ್ಲದೇ ಮೂರೆಳೆಯ ಮೇಖಲೆಯನ್ನು ಧರಿಸಿದ್ದು, ಸಾದಾ ವಿನ್ಯಾಸವಿದೆ. ದಪ್ಪದಾದ ಕಾಲ್ಗಡಗವನ್ನು ಧರಿಸಿದ್ದಾಳೆ. ಆಕೆ ಸೀರೆಯನ್ನು ಕಚ್ಚೆಹಾಕಿ ಉಟ್ಟಿದ್ದು, ನಾಭಿಯಿಂದ ಕಾಲ್ಗಡಗದ ಮೇಲ್ಭಾಗದವರೆಗೆ ಉಟ್ಟಿದ್ದಾಳೆ.

ಸೀರೆಯ ಸೆರಗನ್ನು ಹಿಂಭಾಗದಿಂದ ಬಲ ತೋಳಿನ ಮುಂಭಾಗಕ್ಕೆ ಹಾಕಿ, ವಿಭಿನ್ನ ಶೈಲಿಯಲ್ಲಿ ಸೀರೆಯ ಸೆರಗನ್ನು ಅಲಂಕೃತಗೊಳಿಸಿ ಧರಿಸಿದ್ದಾಳೆ.

ಚಿತ್ರದುರ್ಗ ಜಿಲ್ಲೆಯ ಹಿರಿಯೂರಿನ ತೇರುಮಲ್ಲೇಶ್ವರ ದೇವಾಲಯದಲ್ಲಿರುವ ದೀಪ ಹಿಡಿದಿರುವ ಮಹಿಳೆಯರ ಎರಡು ಶಿಲ್ಪಗಳನ್ನು ಕಾಣಬಹುದು. ಕಿವಿಗೆ ವೃತ್ತಾಕಾರದ ಓಲೆ ಹಾಗೂ ಕಿವಿಯ ಮೇಲ್ಭಾಗಕ್ಕೆ ಬುಗುಡಿ ಧರಿಸಿದ್ದಾಳೆ. ಭುಜಕೀರ್ತಿ, ಬೈತಲೆ ಬೊಟ್ಟು ಅಗಲವಾದ ತೋಳ್ಬಂಧಿ ಮತ್ತು ಮುಂಗೈ ಕಡಗಗಳನ್ನು ಧರಿಸಿದ್ದಾಳೆ. ಈ ಶಿಲ್ಪದಲ್ಲಿರುವ ಮಹಿಳೆ ಸೀರೆಯನ್ನು ಕಚ್ಚೆ ಹಾಕಿ ಉಟ್ಟಿದ್ದು ಸೀರೆಯ ಸೆರಗು ಎಡಭುಜದ ಮೇಲೆ ಹಾದು ಹೋಗಿದೆ.

೩.೩.೯. ಕಳಸ ಹಿಡಿದಿರುವ ಮಹಿಳೆ

ದೇವತಾ ಕಾರ್ಯಗಳಲ್ಲಿ ಮತ್ತು ಶುಭ ಸಮಾರಂಭಗಳಲ್ಲಿ ದೀಪ ಮತ್ತು ಕಳಸವನ್ನು ಎತ್ತಿಕೊಂಡಿರುವುದು ಸಂಪ್ರದಾಯಗತವಾಗಿ ಬಂದಿದೆ. ಈ ಕುರಿತು ಸನತ್ಕುಮಾರಚರಿತೆಯ ಪದ್ಯವೊಂದರಲ್ಲಿ ಕಳಸದ ಕುರಿತು ಹೀಗೆ ವರ್ಣಿಸಿದೆ. ಅದರಂತೆ,

ಸಕಲ ರತ್ನೋತ್ಕರದ ಕಾಂತಿಯೊ
ಳಖಿಲದಿಕ್ತಟಗಳನು ಬೆಳಗುವ
ಮಕರಣತೋರಣ ಪೊಂದಳಿಗೆ ದೋರಣಗಳೊಗ್ಗಿನಲಿ
ಸುಕರ ಹೇಮದ ಕಳಶ ಝುಲಿಯ
ನಿಕರದಿಂ ದಿವ್ಯಾಂಬರದಿ ಕಾ
ತುಕವ ಬೀರೆದವಾ ಪುರದ ಕುಸಕತಳು ಕಂಗಳಿಗೆ[೨೬೭]

ಎಂಬುದಾಗಿ ಚಿನ್ನದ ಕಳಸದ ಉಲ್ಲೇಖವನ್ನು ನೀಡುತ್ತದೆ.

ನ್ಯೂನಿಜ್ ತನ್ನ ವರದಿಯಲ್ಲಿ ಮಹಾನವಮಿ ಹಬ್ಬದ ಮುಕ್ತಾಯ ಸಮಾರಂಭದ ಕುರಿತು ಹೇಳುವಾಗ "ಆರತಿ ತಟ್ಟೆಗಳನ್ನು ಹಿಡಿದ ಅಂತಃಪುರದ ಸುಮಂಗಳಿಯರು ಅಂಗಳಕ್ಕೆ ಬರುವ ಮುನ್ನ ಚಾಟಿಯನ್ನು ಹೆಗಲಿಗೇರಿಸಿಕೊಂಡ ದಂಡಧಾರಿಣೀ, ದೌವಾಲಿಕೆ ಯರು, ಅರ್ಧಪುರುಷರು ಸಂಗೀತ ವಾದ್ಯಾಗಾರ್ತಿಯರು ರಜತದೊಡವೆ ತೊಟ್ಟು ಹೊರೆಯಳುಗಳು ಅಂಗಳಕ್ಕೆ ಬರುತ್ತಿದ್ದರು. ಆಗ ಅತ್ಯಂತ ಸುಂದರಿಯರಾದ ಮೂವತ್ತಾರು ಅರಸಿಯರು ಬಂಗಾರದ ಕಳಸಗಳನ್ನು ಕೈಯಲ್ಲಿ ಹಿಡಿದು ಮಣಭಾರದ ಒಡವೆಗಳ ಒತ್ತಡಕ್ಕೆ ಮಣಿದು ಬಾಗಿ, ಅಡಿ ಮುಂದಿಡಲಾರದೆ ತಮ್ಮ ಸಖಿಯರೊಡಗೂಡಿ ಮೆಲ್ಲಮೆಲ್ಲಗೆ ನಡೆದು ಬರುತ್ತಿದ್ದುದ್ದನ್ನು ನ್ಯೂನಿಜ್ ನೋಡಿದ್ದ."[೨೬೮]

ಕ್ರಿ.ಶ. ೧೧೯೯ರ ಕಾಲಕ್ಕೆ ಸೇರಿದ ವಿರೂಪಾಕ್ಷ ದೇವಾಲಯದ ಆವರಣದಲ್ಲಿರುವ ಶಾಸನದಲ್ಲಿ ಚೌಡನೆಂಬುವವನು ಪಂಪಾದೇವಿಗೆ ಚಿನ್ನದ ಕಲಶಗಳನ್ನು, ಮುಂತಾದ ಪರಿಕರಗಳನ್ನು ದಾನವಾಗಿ ನೀಡಿರುವ ಉಲ್ಲೇಖವಿದೆ.[೨೬೯] ಹೀಗೆ ಶುಭಸಮಾರಂಭಗಳಲ್ಲಿ ಶುಭ ಸೂಚಕಗಳಾಗಿ ಕಳಸ, ಆರತಿ ಇವು ಕಡ್ಡಾಯವಾಗಿ ಬಳಸುತ್ತಿದ್ದುದ್ದನ್ನು ತಿಳಿಯಬಹುದು. ಈ ಕುರಿತು ಶಿಲ್ಪಗಳಲ್ಲಿಯು ಕಾಣಬಹುದಾಗಿದೆ.

ಹಜಾರ ರಾಮ ದೇವಾಲಯದ ನವರಂಗದ ಪ್ರವೇಶದ್ವಾರದ ಎಡಗೋಡೆಯ ಮೇಲೆ ಕಳಸ ಹಿಡಿದಿರುವ ಮಹಿಳೆಯ ಶಿಲ್ಪವನ್ನು (ಚಿತ್ರ-೪೮) ಕಾಣಬಹುದು. ಇದರಲ್ಲಿರುವ ಮಹಿಳೆ ತುರುಬು ಬಲಭಾಗಕ್ಕೆ ಗಂಟುಹಾಕಿದ್ದು ತುರುಬಿಗೆ ಹೂವಿನ ದಂಡೆಯನ್ನು ಮುಡಿದಿರುವುದು ಕಂಡುಬರುತ್ತದೆ. ದೊಡ್ಡದಾದ ವೃತ್ತಾಕಾರದ ಓಲೆ ಧರಿಸಿದ್ದು, ಕಂಠೀಹಾರದೊಂದಿಗೆ ನಾಲ್ಕೆಳೆಯ ಮುತ್ತಿನ ಸರವನ್ನು ಧರಿಸಿದ್ದಾಳೆ. ತೋಳ್ಬಂಧಿ ಎರಡೆಳೆಯಿಂದ ಕೂಡಿದ್ದು ಸಾದಾ ವಿನ್ಯಾಸವಿದೆ. ಮುಂಗೈ ಬಳೆಗಳು ಮುತ್ತಿನಿಂದ ತಯಾರಿಸಲಾದ ಎರಡೆಳೆಯ ಕಡಗಗಳಾಗಿವೆ. ಅಲ್ಲದೇ ವೈಜಯಂತಿ ಮಾಲೆಯಲ್ಲಿ ಎಡಭುಜದಿಂದ ಮೊಣಕಾಲಿನವರೆಗೂ ಧರಿಸಿದ್ದಾಳೆ. ದಪ್ಪವಾದ ಕಾಲ್ಗಡವನ್ನು ಸಹ ಇಲ್ಲಿ ಕಾಣಬಹುದು. ಸೀರೆಯನ್ನು ನಿರಿಗೆ ಹಿಡಿದು ಕಚ್ಚೆ ಹಾಕಿ ಉಟ್ಟಿದ್ದು, ಎಡಭುಜದ ಮೇಲೆ ಸೆರಗು ಹಾಕಿದ್ದಾಳೆ.

ಹಂಪಿಯ ವಿರೂಪಾಕ್ಷ ದೇವಾಲಯದ ನವರಂಗದ ಎಡಗೋಡೆಯ ಮೇಲಿರುವ ಶಿಲ್ಪದಲ್ಲಿ ಸ್ತ್ರೀಯು ತನ್ನ ಎರಡು ಕೈಗಳಿಂದ ಕಳಸ ಹಿಡಿದಿದ್ದು ಕಿವಿಗೆ ವೃತ್ತಾಕಾರದ ಕುಂಡಲ ಧರಿಸಿದ್ದಾಳೆ. ಸೀರೆಯನ್ನು ನಿರಿಗೆ ಹಿಡಿದು ಸಡಿಲವಾಗಿ ಧರಿಸಿದ್ದು, ಸೆರಗಿನ ಭಾಗ ಸ್ಪಷ್ಟವಾಗಿ ಕಾಣುವುದಿಲ್ಲ. ಉಳಿದಂತೆ ಆಭರಣಗಳು ಸಾಮಾನ್ಯವಾಗಿವೆ.

೩.೩.೧೦. ಕೊರವಂಜಿ

ಕೊರವಂಜಿ ಎಂಬುದು ಒಂದು ವೃತ್ತಿಯಾಗಿತ್ತು. ಕೊರವಂಜಿ ಸ್ತ್ರೀಯು ಸ್ಥಳದಿಂದ ಸ್ಥಳಕ್ಕೆ ಸಂಚರಿಸುತ್ತಾ ಶಾಸ್ತ್ರವನ್ನು ಹೇಳುತ್ತಾ ಹಣವನ್ನು ಸಂಪಾದಿಸುತ್ತಿದ್ದಳು. ಕೊರವಂಜಿ ಭವಿಷ್ಯ ಹೇಳುವುದರ ಕುರಿತು ಕನಕದಾಸರು ಈ ರೀತಿಯಾಗಿ ವಿವರಿಸಿದ್ದಾರೆ. ಅದರಂತೆ,

ಕಣಿಯ ಹೇಳಲು ಬಂದೆ ನಾರಾಯಣನಲ್ಲದೆ ಇಲ್ಲವೆಂದು ಮಿಕ್ಕ
ಬಣಗು ದೈವದ ಗೊಡವೆ ಬೇಡ ನರಕ ತಪ್ಪದು[೨೦]

ಕಣಿ ಹೇಳುವವಳು ನಾರಾಯಣನನ್ನು ಸ್ತುತಿಸುತ್ತಾ ಬರುತ್ತಾಳೆ ಎಂಬುದಾಗಿ ತಿಳಿಸುತ್ತದೆ.

ಇಂತಹ ಕೊರವಂಜಿ ಶಿಲ್ಪಗಳು ವಿಜಯನಗರ ಕಾಲದ ಸ್ಮಾರಕಗಳಲ್ಲಿ ಹಲವಾರು ಸಿಗುತ್ತವೆ. ಹಂಪಿಯ ಅಚ್ಯುತದೇವರಾಯ ದೇವಾಲಯದ ಕಲ್ಯಾಣ ಮಂಟಪದಲ್ಲಿರುವ ಶಿಲ್ಪದಲ್ಲಿ ಕೊರವಂಜಿ ಸ್ತ್ರೀಯು ತುರುಬನ್ನು ಕಟ್ಟಿದ್ದು ಕರ್ಣಕ್ಕೆ ವೃತ್ತಕುಂಡಲ, ಬೈತಲೆಬೊಟ್ಟು ಧರಿಸಿದ್ದಾಳೆ. ಅಲ್ಲದೇ ಎರಡೆಳೆಯ ಕಂಠೀಹಾರ, ಎರಡೆಳೆಯ ತೋಳಬಂಧಿ, ಕಂಕಣಗಳನ್ನು ಮತ್ತು ನೂಪುರವನ್ನು ಧರಿಸಿದ್ದಾಳೆ. ಅವೆಲ್ಲಾ ಸಾದಾ ವಿನ್ಯಾಸದಲ್ಲಿವೆ. ಈಕೆ ವಸ್ತ್ರ ಕಟಿಯಿಂದ ಪಾದದವರೆಗೆ ಉದ್ದ ಚಲ್ಲಣವಾಗಿದ್ದು, ಅದರ ಮೇಲೆ ತುಂಡು ಲಂಗವನ್ನು (ಫ್ರಾಕ್) ಧರಿಸಿದ್ದಾಳೆ. ಈ ಫ್ರಾಕ್ ಮೂರು ಹಂತಗಳಲ್ಲಿ ಸಣ್ಣ ಸಣ್ಣ ನಿರಿಗೆಗಳನ್ನು ಇಟ್ಟು ಹೊಲಿದಿರುವುದಾಗಿದೆ. ಕಟಿಭಾಗದಿಂದ ಮೊಣಕಾಲಿವರೆಗೂ ಇದ್ದು ಸಡಿಲವಾಗಿ ಹರಡಿಕೊಂಡಿದೆ. ಚಲನವಲನಗಳಿಗೆ ಅನುಕೂಲ ವಾಗಿರುವಂತೆ ವಸ್ತ್ರವನ್ನು ಹೊಲಿದು ಸಿದ್ದಪಡಿಸಲಾಗಿದೆ. ಅಲ್ಲದೆ ತನ್ನ ಎಡ ಮೊಣಕೈಯಿಂದ ಬುಟ್ಟಿಯೊಂದನ್ನು ಹಿಡಿದಿದ್ದು, ಬಲಗೈ ಬೆರಳುಗಳ ಮೇಲೆ ವೃತ್ತಾಕಾರದ ಬಳೆಯೊಂದನ್ನು ಹಿಡಿದಿದ್ದಾಳೆ. ಆದರೆ ದೇಹದ ಮೇಲ್ಭಾಗಕ್ಕೆ ಯಾವುದೇ ವಸ್ತ್ರ ಹಾಕಿರುವುದು ಕಂಡುಬರುವುದಿಲ್ಲ..

೩.೩.೧೧. ಬೇಟೆಗಾರ್ತಿಯರು

ಬೇಟೆಯು ಸ್ತ್ರೀ ಪುರುಷರಿಬ್ಬರು ಅನುಸರಿಸಿಕೊಂಡು ಬಂದ ವೃತ್ತಿಯಾಗಿತ್ತು. ರಾಜರಷ್ಟೇ ಅಲ್ಲದೇ ರಾಣಿಯರು ಸಹ ವಿನೋದಕ್ಕಾಗಿ ಬೇಟೆಯಾಡಲು ಹೋಗುತ್ತಿದ್ದರು. ಶ್ರೀಶೈಲದಲ್ಲಿನ ಮಲ್ಲಿಕಾರ್ಜುನ ದೇವಾಲಯದ ಪ್ರಾಕಾರದ ಶಿಲ್ಪಪಟ್ಟಿಕೆಯಲ್ಲಿ ರಾಜಮನೆತನದ ಸ್ತ್ರೀಯರು ಬೇಟೆಯಾಡುತ್ತಿರುವ ಚಿತ್ರಣ ಸಿಗುತ್ತದೆ. ಈ ಶಿಲ್ಪದಲ್ಲಿ ನಾಲ್ವರು ಸ್ತ್ರೀಯರು ನಿಂತಿದ್ದು, ಮೊದಲು ನಿಂತಿರುವ ಸ್ತ್ರೀ ರಾಣಿಯಂತಿದ್ದು ಬಿಲ್ಲನ್ನು ಹಿಡಿದು ತನ್ನ ಹಿಂದೆ ನಿಂತಿರುವ ಸೇವಕಿಯರೊಂದಿಗೆ ಬೇಟೆಯಲ್ಲಿ ನಿರತಳಾಗಿದ್ದಾಳೆ. ಸೇವಕಿಯರು ರಾಣಿಗೆ ಬಾಣಗಳನ್ನು ಒದಗಿಸುತ್ತಾ ಸಹಾಯ ಮಾಡುತ್ತಿದ್ದಾರೆ.

ಬೇಟೆಗೆ ಒಳಗಾಗಿರುವ ಪ್ರಾಣಿ ಸಮೂಹದಲ್ಲಿ ಜಿಂಕೆ, ಹಂದಿ, ಹುಲಿ, ನವಿಲು ಇನ್ನೂ ಮುಂತಾದ ಪ್ರಾಣಿಪಕ್ಷಿಗಳ ಸಮೂಹವಿದೆ. ಕೆಳಗೆ ಮೂವರು ಪುರುಷರು ನಿಂತಿದ್ದು ಹುಲಿಯನ್ನು ಪಳಗಿಸುತ್ತಿದ್ದಾರೆ. ಈ ಶಿಲ್ಪ ಪಟ್ಟಿಕೆಯಲ್ಲಿರುವ ರಾಣಿಯು ಸೀರೆಯನ್ನು ಪಾದ ಗಳವರೆಗೆ ಧರಿಸಿದ್ದು, ಹಣೆಗಂಟು ಹಾಕಿದ್ದಾಳೆ. ಅಲ್ಲದೆ ವೈಜಯಂತಿ ಮಾಲೆ ಧರಿಸಿದ್ದಾಳೆ. ಸೊಂಟಪಟ್ಟಿ, ಕಂಠೀಹಾರ, ತೋಳಬಂಧಿ, ಮುಂಗೈ ಕಡಗಗಳು ಹಾಗೂ ಕರ್ಣಕುಂಡಲ ಗಳನ್ನು ಧರಿಸಿದ್ದಾಳೆ. ಹಾಗೂ ಹಿಂದೆ ನಿಂತಿರುವ ಸೇವಕಿಯರು ಸಹ ಪಾದಗಳವರೆಗೆ ಸೀರೆ ಧರಿಸಿದ್ದು, ದೊಡ್ಡದಾದ ವೃತ್ತಕುಂಡಲಗಳನ್ನು ಧರಿಸಿರುವುದು ಸ್ಪಷ್ಟವಾಗಿ ಕಂಡುಬರುತ್ತದೆ.

ಅದೇ ದೇವಾಲಯದ ಮತ್ತೊಂದು ಶಿಲ್ಪಪಟ್ಟಿಕೆಯಲ್ಲಿ ಚಂಚುಲಕ್ಷ್ಮಿ ಶಿಲ್ಪವಿದ್ದು, ಅದರಲ್ಲಿ ಎಲೆಗಳನ್ನು ಜೋಡಿಸಿದಂತಿರುವ ವಸ್ತ್ರವನ್ನು ಧರಿಸಿದ್ದು, ಉದ್ದನೆಯ ಜಡೆಯನ್ನು ಹಾಕಿದ್ದಾಳೆ. ಈ ಎಲೆಗಳ ಅಂಚುಗಳು ವಿನ್ಯಾಸದಿಂದ ಕೂಡಿವೆ. ಜ್ಯೋತ್ಸ್ನಾ ಕಾಮತ್‌ರು ಬೇಟೆಗಾರ್ತಿಯರ ವೇಷಭೂಷಣಗಳನ್ನು ಹೀಗೆ ವರ್ಣಿಸಿದ್ದಾರೆ. ಪರ್ಣಗಳಿಂದ ರಚಿತವಾದ ಕಿರೀಟವು ತಲೆಯಲ್ಲಿ ಅಲಂಕರಿಸಿದರೆ, ಕಾಡಿನ ಹೂಗಳನ್ನು ಕಿವಿಗೆ ಸಿಕ್ಕಿಸಿಕೊಂಡಿದ್ದಾಳೆ. ಪರ್ಣಗಳನ್ನು ಜೋಡಿಸಿದ ಉಡುಗೆ ನಡುವನ್ನು ಮುಚ್ಚಿದೆ. ಉಳಿದ ಆಭರಣಗಳು ಕಾಡಿನ ಸಾಮಾಗ್ರಿಯವೇ ಇರಲು ಸಾಕು! ಬಲಗೈಯಲ್ಲಿ ಬಾಣ, ಎಡಗೈಯಲ್ಲಿ ತನಗಿಂತ ದೀರ್ಘ ವಾದ ಬಿಲ್ಲನ್ನು ಎತ್ತಿ ಹಿಡಿದಿದ್ದಾಳೆ.[೨೮೧]

ನಂಜುಂಡ ಕವಿಯ ರಾಮನಾಥ ಚರಿತೆಯಲ್ಲಿ ಬೇಟೆಯ ಸಂಧಿಯಲ್ಲಿ ಬೇಟೆಗಾರ್ತಿಯರ ಚಿತ್ರಣವನ್ನು ಕುರಿತು ಮುಂದಿನ ಪದ್ಯ ಹೀಗೆ ವರ್ಣಿಸುತ್ತದೆ.

> ತೊಡೆ ಚಲ್ಲಣ ಮೊಲೆಕಟ್ಟು ಪೆಣೆದ ಜೆಡೆ
> ನಡುವಿನ ಕಲ್ಲಿ ಕಯ್ಯೊಳಗೆ
> ಪಿಡಿದ ಸುರಗಿ ಮೆರತೆಯಲು ವನಚರಿಯರು
> ನಡೆದಿರಿನಿಯರ ಬೆಂಬಿಡದೆ[೨೮೨]

ರಾಮನಾಥ ಚರಿತವು ಬೇಟೆಗಾರ್ತಿಯರು ತೊಡೆಚಲ್ಲಣ, ಮೊಲೆಕಟ್ಟುಗಳನ್ನು ಧರಿಸುತ್ತಿದ್ದ ವಸ್ತ್ರಗಳಾಗಿ ಧರಿಸುತ್ತಿದ್ದರು ಎಂಬುದಾಗಿ ತಿಳಿಸುತ್ತದೆ.

ಹಂಪಿಯ ಮಹಾನವಮಿ ದಿಬ್ಬದಲ್ಲಿರುವ ಒಂದು ಶಿಲ್ಪಪಟ್ಟಿಕೆಯಲ್ಲಿ ಹಂದಿಯನ್ನು ಬೇಟೆಯಾಡುತ್ತಿರುವ ಬೇಟೆಗಾರ್ತಿಯ ಶಿಲ್ಪವಿದ್ದು, ಆಕೆ ಪರ್ಣಗಳನ್ನು ಜೋಡಿಸಿ ನಡುವಿಗೆ ಕಟ್ಟಿದ್ದಾಳೆ. ಆ ಎಲೆಗಳನ್ನು ಜೋಡಿಸಿರುವ ದಾರವು ಸಹ ಸ್ಪಷ್ಟವಾಗಿ ಕಂಡು ಬರುತ್ತದೆ. ಉದ್ದವಾದ ಜಡೆಯನ್ನು ಹಾಕಿದ್ದು, ಮೂರೆಳೆಯ ಸರವನ್ನು ಧರಿಸಿದ್ದಾಳೆ. ಅದೇ ಸ್ಮಾರಕದ ಮತ್ತೊಂದು ಬೇಟೆಗಾರ್ತಿಯ ಶಿಲ್ಪದಲ್ಲಿನ (ಚಿತ್ರ-೪೯) ವಿಶೇಷವೆಂದರೆ ಉದ್ದವಾದ ಬಿಲ್ಲನ್ನು ಬಲಗೈಯಲ್ಲಿ ಹಿಡಿದಿದ್ದು, ತನ್ನ ಎಡಗೈಯಿಂದ ಕಾಲಿನ ಮುಳ್ಳನ್ನು ತಾನೇ ತೆಗೆದುಕೊಳ್ಳುತ್ತಿದ್ದಾಳೆ. ಇದರಲ್ಲಿನ ಆಭರಣಗಳ ವಿಶೇಷವೆಂದರೆ ಮೂರೆಳೆಯ ಕಂಠಿಕೆ, ಸ್ತನಹಾರ, ತೋಳ್‌ಬಂಧಿ ಮತ್ತು ಮುಂಗೈ ಕಡಗಗಳು. ಜೊತೆಗೆ ಹಣೆಗಂಟು ಹಾಕಿದ್ದಾಳೆ. ಈ ಶಿಲ್ಪವು ಬೇಟೆಗಾರ್ತಿಯರ ವಿಶೇಷ ವಸ್ತ್ರ ಮತ್ತು ಆಭರಣಗಳನ್ನು ತಿಳಿಸುತ್ತದೆ.

ಈ ಮೇಲೆ ವಿವರಿಸಿದ ಬೇಟೆಗಾರ್ತಿಯ ವಸ್ತ್ರವು ಎಲೆಗಳಿಂದ ಕೂಡಿದ್ದು, ದೇಹದ ಮುಂಭಾಗದ ಎರಡು ತೊಡೆಗಳ ಮೇಲೆ ಒಂದೊಂದು ಎಲೆ ಮತ್ತು ಗುಪ್ತಾಂಗದ ಮೇಲೆ ಒಂದು ಎಲೆ ಕಾಣುತ್ತದೆ. ಒಟ್ಟು ಮೂರು ಎಲೆಗಳು ಮಾತ್ರ ಕಂಡುಬರುತ್ತವೆ. ಆದರೆ ಇದಕ್ಕೆ ವಿಭಿನ್ನ ಎಂಬಂತೆ ಶ್ರೀಶೈಲ ಮಲ್ಲಿಕಾರ್ಜುನ ದೇವಾಲಯದ ಪ್ರಾಕಾರದ ಜಿಂಕೆ ಬೇಟೆಯ ಶಿಲ್ಪದಲ್ಲಿ ಬೇಟೆಗಾರ್ತಿಯು ಧರಿಸಿರುವ ಎಲೆಗಳು ಒತ್ತೊತ್ತಾಗಿದ್ದು, ಒಂದಕ್ಕೊಂದು ಮಧ್ಯ ಸಂದುಗಳು ಕಾಣದಂತೆ ಜೋಡಿಸಿದೆ. ತುಂಡು ಲಂಗವನ್ನು ನಿರಿಗೆಗಳಿಟ್ಟು ಹೊಲಿದಂತೆ ಭಾಸವಾಗುತ್ತದೆ. ಮುಂದೆ ಒಟ್ಟು ಐದು ಎಲೆಗಳು ಕಂಡುಬರುತ್ತವೆ. ಉಳಿದಂತೆ ಉದ್ದ ಜಡೆ, ದೊಡ್ಡ ವೃತ್ತ ಕುಂಡಲ ಧರಿಸಿದ್ದಾಳೆ. ಈ ಮೇಲಿನ ವಿವರಣೆಗಳಿಂದ ಬೇಟೆಗಾರ್ತಿಯರು ಎಲೆಗಳಿಂದ ಕೂಡಿದ ತುಂಡು ಉಡುಗೆಯನ್ನು ಧರಿಸಿರುವುದು ಗಮನಾರ್ಹ. ಇಲ್ಲಿ ವೃತ್ತಿನಿರತ ಬೇಟೆಗಾರರ ವೇಷ ಭೂಷಣ ಹಾಗೂ ರಾಜಮನೆತನದವರ ಹವ್ಯಾಸಿ ಬೇಟೆಗಾರಿಕೆಯ ನಡುವಿನ ವ್ಯತ್ಯಾಸವನ್ನು ಸ್ಪಷ್ಟವಾಗಿ ಗಮನಿಸಬಹುದು.

೩.೩.೧೨. ಗೊಲ್ಲತಿಯರು

ಕೃಷಿ ಮತ್ತು ಪಶುಪಾಲನಾ ವೃತ್ತಿ ಪ್ರಾಚೀನ ಕಾಲದಿಂದಲೂ ನಮ್ಮ ಪ್ರಧಾನ ಕಸುಬಾಗಿವೆ. ಹಾಗಾಗಿ ಪಶುಪಾಲಕ ಮನೆತನದವರು ಹಾಲನ್ನು ಕರೆದು ಮೊಸರನ್ನು ಮಾಡಿ ಕಡೆದು ಬೆಣ್ಣೆ ತೆಗೆದು ತುಪ್ಪವನ್ನು ತಯಾರಿಸುತ್ತಾರೆ.

ಪುರಂದರದಾಸರು ಚಿತ್ರಿಸಿದ 'ಬಾಲಕೃಷ್ಣ' ಎಂಬ ಕೃತಿಯಲ್ಲಿ ಗೋವಳತಿಯೊಬ್ಬಳು ಹಾಲು ಮಾರಲೆಂದು ಹರಿವಿ ಹೊತ್ತು ಕೇರಿಯಲ್ಲಿ ಬಂದಾಗ ಕೃಷ್ಣನು ಅವಳನ್ನು ಕಂಡು ಮಾತನಾಡುತ್ತಾನೆ. ಈ ಕೆಳಗಿನ ಪದ್ಯದ ಸಾಲುಗಳು ಗೊಲ್ಲತಿಯ ವಸ್ತ್ರ ಮತ್ತು ಆಭರಣದ ಕುರಿತು ಸ್ಪಷ್ಟ ಚಿತ್ರಣ ನೀಡುತ್ತದೆ.

> ಚಂದ್ರಗಾವಿಯನುಟ್ಟು ದುಂಡುಮುತ್ತನೆ ಕಟ್ಟಿ
> ಪೆಂಡೆಯರುಳಿಯ ನಿಟ್ಟು।
> ಕೆಂದಾವಿನ ಹಾಲ ಹಾರವಿಯ ಹೊತ್ತುಕೊಂಡು
> ಬಂದಾಳು ಬೀದಿಗಾಕೆ॥[೨೩]

ಇದರಿಂದ ಸಾಮಾನ್ಯ ಸ್ತ್ರೀಯರು, ಪಶುಪಾಲಕ ವೃತ್ತಿಯ ಸ್ತ್ರೀಯರು ಧರಿಸುವ ವಸ್ತ್ರ ಮತ್ತು ಆಭರಣಗಳು ಸಾಮಾನ್ಯವಾಗಿದ್ದವು ಎಂಬುದು ಅರ್ಥವಾಗುತ್ತದೆ. ಅಲ್ಲದೇ ವೃತ್ತಿ ಸೂಚಕವಾಗಿ ಕಾಣಬರುತ್ತವೆ.

ವಿಜಯನಗರ ಕಾಲದಲ್ಲಿನ ಸ್ಮಾರಕಗಳಲ್ಲಿ ಹಲವಾರು ಪಶುಪಾಲಕ ಶಿಲ್ಪಗಳು ದೊರೆಯುತ್ತವೆ. ಅವುಗಳಲ್ಲಿ ಗೊಲ್ಲತಿಯ ಶಿಲ್ಪ ಸಹ ಪ್ರಮುಖವಾಗಿದೆ.

ಹಂಪಿಯ ವಿಠಲ ದೇವಾಲಯದ ಸಭಾಮಂಟಪದ ಶಿಲ್ಪದಲ್ಲಿರುವ(ಚಿತ್ರ-೫೦) ಮಹಿಳೆಯನ್ನು ಗೊಲ್ಲತಿ ಎಂದು ಗುರ್ತಿಸಲಾಗಿದ್ದು, ಅವಳು ಮೊಸರನ್ನು ಕಡೆಯುತ್ತಿರುವ ಕಾರ್ಯದಲ್ಲಿ ನಿರತಳಾಗಿದ್ದಾಳೆ. ಮುಂದೆ ಕುಳಿತಿರುವ ಆಕೆಯ ಮಗು ತುರುಬು ಕಟ್ಟಿದ್ದು ಬೆಣ್ಣೆಯನ್ನು ತಿನ್ನುತ್ತಿದೆ. ಈ ಶಿಲ್ಪದಲ್ಲಿ ತಾಯಿಯು ಸಾದಾ ವಿನ್ಯಾಸದ ಚಕ್ರಾಕಾರದ ಓಲೆ ಧರಿಸಿದ್ದಾಳೆ. ಸಣ್ಣ ಪದಕವಿರುವ ಎರಡೆಳೆಯ ಕಂಠೀಹಾರ, ಮೂರೆಳೆಯ ಮುಂಗೈ ಕಡಗ ಗಳು ಸಾದಾ ವಿನ್ಯಾಸವಿದೆ. ಸೀರೆಯನ್ನು ಕಟಿಭಾಗದಿಂದ ಪಾದಗಳವರೆಗೆ ನಿರಿಗೆ ಹಿಡಿದು ಸಡಿಲವಾಗಿ ಧರಿಸಿದ್ದಾಳೆ. ಕಟಿಯ ಮೇಲೆ ಮತ್ತೊಂದು ವಸ್ತ್ರದಿಂದ ನಡುಕಟ್ಟು ಸುತ್ತಿರುವಂತಿದೆ. ಬಹುಶಃ ಕೆಲಸಮಾಡಲು ಅನುಕೂಲವಾಗುವಂತೆ ಹೀಗೆ ಸುತ್ತಿಕೊಂಡಿರುವಂತಿದೆ. ಆದರೆ ದೇಹದ ಮೇಲ್ಭಾಗದಲ್ಲಿ ವಸ್ತ್ರ ಕಂಡು ಬರುವುದಿಲ್ಲ. ಮಗುವು ನೇತಾಡುವ ಕುಂಡಲಗಳನ್ನು ಹಾಗೂ ಎರಡೆಳೆಯ ತೋಳ್ಬಂದಿ ಮತ್ತು ಮುಂಗೈ ಕಡಗಗಳನ್ನು ಧರಿಸಿರುವುದು ಕಂಡುಬರುತ್ತದೆ.

ಅದೇ ದೇವಾಲಯದ ಮತ್ತೊಂದು ಶಿಲ್ಪದಲ್ಲಿ ಗೊಲ್ಲತಿ ಉದ್ದವಾದ ಜಡೆಯನ್ನು ಹಾಕಿ, ಜಡೆಯ ಮಧ್ಯದಲ್ಲಿ ಜಾರು ಗಂಟು ಹಾಕಿದ್ದಾಳೆ. ಆಕೆ ಸೀರೆಯನ್ನು ನಿರಿಗೆ ಹಿಡಿದಿದ್ದು, ಸೆರಗು ಎಡಭುಜದ ಹಿಂದೆ ಹಾದು ಹೋಗಿದೆ. ಉಳಿದಂತೆ ವಸ್ತ್ರ ಮತ್ತು ಆಭರಣಗಳಲ್ಲಿ ವಿಶೇಷತೆಯಿಲ್ಲ.

೩.೩.೧೩. ದರ್ಪಣ ಸುಂದರಿ

ಅಲಂಕಾರ ಮಾಡಿಕೊಳ್ಳಲು ದರ್ಪಣ ಅತ್ಯಂತ ಅವಶ್ಯಕ ಸಾಧನಗಳಲ್ಲಿ ಒಂದಾಗಿದೆ. ಅಲಂಕೃತಗೊಂಡ ತಾನು ಹೇಗೆ ಕಾಣುತ್ತೇನೆ ಹಾಗೂ ಸರಿಯಾಗಿದೆಯೇ ಎಂದು ಪರೀಕ್ಷಿಸಲು ದರ್ಪಣ ಬಳಸುವುದು ಸಾಮಾನ್ಯ. ದರ್ಪಣವನ್ನು ಹಿಡಿದಿರುವ ಸ್ತ್ರೀ ಶಿಲ್ಪಗಳು ವಿಜಯನಗರ ಕಾಲದ ಸ್ಮಾರಕಗಳಲ್ಲಿ ಹಲವಾರು ಲಭ್ಯವಿವೆ.

ಹಂಪಿಯ ರಂಗ ದೇವಾಲಯ (ಮಾಧವ ದೇವಾಲಯ)ದ ತೆರೆದ ಮಂಟಪದ ಸ್ತಂಭದ ಮೇಲಿನ ಶಿಲ್ಪದಲ್ಲಿರುವ ದರ್ಪಣ ಸುಂದರಿ ಆಸೀನಭಂಗಿಯಲ್ಲಿ ಕುಳಿತಿದ್ದು, ಬಲಗಾಲನ್ನು ಕೆಳಗೆ ಇಳಿಬಿಟ್ಟಿದ್ದಾಳೆ. ತನ್ನ ಎಡಗೈಯಲ್ಲಿ ದರ್ಪಣ ಹಿಡಿದಿದ್ದು, ಬಲಗೈ ಬೆರಳಿನಿಂದ ತಲೆಯ ಮೇಲೆ ಹಾದು ಹಣೆಗೆ ತಿಲಕವಿಡುತ್ತಿರುವ ದೃಶ್ಯವಿದೆ. ಇವಳು ಅಗಲವಾದ ಕಂಠೀಹಾರ, ತೋಳ್ಬಂದಿ, ಮುಂಗೈಯಲ್ಲಿ ಕಟಕ ವಲಯವು ಎರಡೆಳೆಯಿಂದ ಕೂಡಿದ್ದು, ಸರಳ ವಿನ್ಯಾಸದಿಂದ ಹೊಂದಿದೆ. ಸೀರೆಯನ್ನು ನಾಭಿಯ ಭಾಗದಿಂದ ಪಾದಗಳವರೆಗೆ ಧರಿಸಿರುವುದು ಸ್ಪಷ್ಟವಾಗಿ ಕಾಣುತ್ತದೆ. ಸೀರೆಯ ಸೆರಗು ಎಡಭುಜದ ಮೇಲಿರುವುದನ್ನು ಕಾಣಬಹುದು.

ಹಂಪಿಯ ಅಚ್ಯುತರಾಯ ದೇವಾಲಯದಲ್ಲಿರುವ ದರ್ಪಣ ಸುಂದರಿ ಬಲಗೈಯಲ್ಲಿ ದರ್ಪಣ ಹಿಡಿದಿದ್ದು, ಎಡಗೈಯನ್ನು ತಲೆಯ ಮೇಲೆ ತಂದು ಹಣೆಯ ಮೇಲೆ ಕುಂಕುಮ ಇಡುತ್ತಿದ್ದಾಳೆ. ಅವಳು ವೃತ್ತಕುಂಡಲ, ಮೂರೆಳೆಯ ಸರ ಮತ್ತು ಎರಡೆಳೆಯ ಕೈಕಡಗ ಧರಿಸಿದ್ದಾಳೆ. ಕುಚಬಂಧವನ್ನು ಕಟಿಯಿಂದ ಪಾದದವರೆಗೆ ಹಾಗೂ ಸೀರೆಯನ್ನು ಧರಿಸಿರುವಳು.

ಹೀಗೆ ವಿಭಿನ್ನ ಶೈಲಿಯಲ್ಲಿ ನಿಂತು, ತಮ್ಮ ಅಲಂಕಾರಣೆಯನ್ನು ನೋಡಿಕೊಳ್ಳುವ ದರ್ಪಣ ಸುಂದರಿಯರ ಶಿಲ್ಪಗಳು ಆ ಕಾಲದಲ್ಲಿ ಸ್ತ್ರೀಯರು ಧರಿಸುತ್ತಿದ್ದ ವಸ್ತ್ರ ಮತ್ತು ಅಲಂಕಾರಗಳ ಬಗ್ಗೆ ಬೆಳಕು ಚೆಲ್ಲುತ್ತವೆ.

೩.೩.೧೪. ತಾಯಿ ಮತ್ತು ಮಗು

ತಾಯಿಯು ತನ್ನ ಮಗುವನ್ನು ಸೊಂಟದ ಮೇಲೆ ಎತ್ತಿಕೊಂಡು ನಿಂತಿರುವ ಚಿತ್ರಣ ಸಹಜವಾಗಿ ಕೌಟುಂಬಿಕ ಜೀವನವನ್ನು ಸೂಚಿಸುತ್ತದೆ. ತಾಯಂದಿರು ತಮ್ಮ ಮಕ್ಕಳಿಗೆ ತಮ್ಮ ಶಕ್ತಿಗೆ ಅನುಸಾರವಾಗಿ ಒಳ್ಳೆಯ ವಸ್ತ್ರ ಮತ್ತು ಅಭರಣಗಳನ್ನು ತೊಡಿಸಿ ಸಂತೋಷ ಪಡುತ್ತಿದ್ದರು. ಈ ಕುರಿತಾಗಿ ಹಲವು ಸಾಹಿತ್ಯಾಕರಗಳಲ್ಲಿ ಮತ್ತು ಶಿಲ್ಪಗಳಲ್ಲಿ ವಿವರಗಳಿವೆ.

ಪುರಂದರದಾಸರು ಬಾಲಕೃಷ್ಣನು ಧರಿಸಿದ ವಸ್ತ್ರ ಮತ್ತು ಆಭರಣಗಳನ್ನು ಈ ರೀತಿಯಾಗಿ ವಿವರಿಸಿದ್ದಾರೆ.

ಉಡುಗೆ ಪೀತಾಂಬರ ನಡುವಿಗೆ ಉಡದಾರ।
ಕಡಗ-ಕಂಕಣವಿಟ್ಟವನರಮಯ್ಯ॥[೨೭೪]

ಎಂಬುದಾಗಿ ಶ್ರೀಕೃಷ್ಣ ಮಗುವಿದ್ದಾಗ ಅವನು ಧರಿಸುತ್ತಿದ್ದ ವಸ್ತ್ರ ಮತ್ತು ಆಭರಣದ ಬಗ್ಗೆ ಈ ಮೇಲಿನಂತೆ ಹಾಡಿ ಹೊಗಳಿದ್ದಾರೆ. ಪೋಷಕರು ತಮ್ಮ ಅಂತಸ್ತಿಗೆ ತಕ್ಕಂತೆ ಮಕ್ಕಳಿಗೆ ವಸ್ತ್ರ ಮತ್ತು ಆಭರಣಗಳನ್ನು ಹಾಕಿ ಸಂತೋಷಪಡುತ್ತಿದ್ದರು ಎಂಬುದನ್ನು ತಿಳಿಸುತ್ತದೆ.

ವಾದಿರಾಜರು ಶ್ರೀಕೃಷ್ಣನ ಬಾಲಲೀಲೆಯಲ್ಲಿ, ಶ್ರೀಕೃಷ್ಣ ಧರಿಸುತ್ತಿದ್ದ ಆಭರಣದ ಕುರಿತು ಹೀಗೆ ಹೇಳುತ್ತಾರೆ.

ಉಡಿಗೆ ಗಂಟೆ ಕಿರುಗೆಜ್ಜೆ ಜಡಿವ ಕಾಂಚಿದಾಮ
ಬಡನಡುವಿಗಿಟ್ಟರು ಮೃಡನ ಪ್ರಿಯೆಗೆ[೨೭೫]

ಮಕ್ಕಳಿಗೆ ತೊಡಿಸುತ್ತಿದ್ದ ವಸ್ತ್ರ ಮತ್ತು ಆಭರಣದ ಬಗ್ಗೆ ವಾದಿರಾಜರ ಈ ಪದ್ಯವು ಬೆಳಕು ಚೆಲ್ಲುತ್ತದೆ.

ವಿದೇಶಿ ಪ್ರವಾಸಿಗ ನಿಕೊಲೊ-ದೆ-ಕೊಂತಿ ಉಲ್ಲೇಖಿಸಿರುವಂತೆ, "ಸಾಮಾನ್ಯ ಮಹಿಳೆಯರು ಲೆನಿನ್ ಬಟ್ಟೆಯನ್ನು ಕಟಿಭಾಗದಿಂದ ಪಾದದವರೆಗೆ ಧರಿಸುತ್ತಾರೆ"[೨೭೬] ಎಂದು ಹೇಳಿದ್ದಾನೆ. ಇವರು ಉದ್ದವಾದ ಸೀರೆ ರವಿಕೆಯನ್ನು ಧರಿಸುತ್ತಿದ್ದರು. ದುಡಿಯುವ ವರ್ಗದ ಮಹಿಳೆಯರು ಚೌಕಳಿ ಮತ್ತು ಇತರ ವಿನ್ಯಾಸಗಳಿಂದ ಕೂಡಿದ ಅಚ್ಚು ಹಾಕಿದ ಗಾಢ ಬಣ್ಣದ ಸೀರೆಯನ್ನು

ಉಡುತ್ತಿದ್ದರು. ಬೋಯ ಮನೆತನದ ಮಹಿಳೆಯರ ವಸ್ತ್ರವು ತುಂಬಾ ಸರಳ ಬಿಳಿಬಣ್ಣದಿಂದ ಕೂಡಿದ್ದು ಉತ್ತಮ ಗುಣಮಟ್ಟದ್ದಾಗಿದ್ದವು.[೨೭೭] ಹಾಗಾಗಿ ಸಾಮಾನ್ಯ ವರ್ಗದ ಮಹಿಳೆಯರ ಉಡುಪು ಮತ್ತು ಆಭರಣ ಸಹಜವಾಗಿ ಸಾಧಾರಣವಾಗಿತ್ತು.

ತಾಯಿ ಮತ್ತು ಮಗುವಿನ ಶಿಲ್ಪಗಳು ವಿಜಯನಗರ ಕಾಲದ ಸ್ಮಾರಕಗಳಲ್ಲಿ ಹೆಚ್ಚಾಗಿ ದೊರೆಯುತ್ತವೆ. ಹಂಪಿಯ ಹಜಾರರಾಮ ದೇವಾಲಯದ ಆವರಣದಲ್ಲಿರುವ ಶಿಲ್ಪದಲ್ಲಿ ತಾಯಿಯು ತನ್ನ ಮಗುವನ್ನು ಎಡ ಭಾಗದ ಸೊಂಟದಲ್ಲಿ ಎತ್ತಿಕೊಂಡಿದ್ದು, ಎಡಗೈಯಿಂದ ಮಗುವಿನ ಕಾಲನ್ನು ಹಿಡಿದಿದ್ದಾಳೆ. ಈ ಶಿಲ್ಪದಲ್ಲಿ ತಾಯಿಯು ತಲೆ ಕೂದಲನ್ನು ಬಿಗಿಯಾಗಿ ಬಾಚಿ ತುರುಬು ಕಟ್ಟಿದ್ದಾಳೆ. ತಾಯಿ ಮತ್ತು ಮಗುವಿನ ಕಿವಿಯ ಆಭರಣ ಒಂದೇ ಮಾದರಿಯದಾಗಿದ್ದು, ಭುಜಗಳ ಮೇಲ್ಭಾಗದವರೆಗೂ ನೇತಾಡುವಂತಿದೆ. ಈ ಮಹಿಳೆ ಧರಿಸಿರುವ ಎರಡೆಳೆಯ ಮುತ್ತಿನ ಸರ ಸ್ತನಗಳ ಮಧ್ಯದವರೆಗೂ ಇಳಿ ಬಿದ್ದಿದೆ. ಕೈಗಳಿಗೆ ಸರಳವಾದ ತೋಳ್ಬಂದಿ ಮತ್ತು ಕೈ ಕಡಗ ಧರಿಸಿದ್ದಾಳೆ. ಸೀರೆಯನ್ನು ನಿರಿಗೆ ಹಿಡಿದು ಧರಿಸಿದ್ದು, ದೇಹದ ಮೇಲ್ಭಾಗಕ್ಕೆ ಧರಿಸಿರುವ ವಸ್ತ್ರ ಅಸ್ಪಷ್ಟವಾಗಿದೆ.

ಮಹಾನವಮಿದಿಬ್ಬದ ಮುಂದಿನ ವೇದಿಕೆಯ ಅಧಿಷ್ಠಾನದಲ್ಲಿರುವ ಶಿಲ್ಪದಲ್ಲಿ ತಾಯಿ ತನ್ನ ಮಗು ವನ್ನು ಬಲಕಂಕುಳಲ್ಲಿ ಎತ್ತಿಕೊಂಡಿದ್ದಾಳೆ. ಈ ಶಿಲ್ಪದಲ್ಲಿ ತಾಯಿ ವೃತ್ತಾಕಾರದ ಕರ್ಣಕುಂಡಲ, ಎರಡೆಳೆಯ ಸರ, ಎರಡೆಳೆಯ ತೋಳ್ಬಂದಿಯನ್ನು ಮತ್ತು ಮುಂಗೈ ಸರಗಳನ್ನು ಧರಿಸಿದ್ದು, ಅದು ಸರಳವಾಗಿದೆ. ಅಲ್ಲದೇ ಕಾಲ್ಗಡಗ ಸಹ ಇದೆ. ಸೀರೆಯನ್ನು ನಾಭಿಯಿಂದ ಕೆಳಗೆ ನಿರಿಗೆ ಹಿಡಿದು ಉಟ್ಟಿದ್ದು, ಅದರ ಸೆರಗು ಎಡಭುಜದ ಸ್ತನಗಳ ಮೇಲೆ ಹಾದುಹೋಗಿದೆ. ಮಗುವಿನ ಕೂದಲು ಇಳಿಬಿಟ್ಟಿದ್ದು, ಅದು ಅಮ್ಮನನ್ನು ಬಿಗಿದಿಡಿದಿದೆ. ಎರಡೆಳೆಯ ಸರ, ಕಾಲ್ಗಡಗ, ಅಧೋವಸ್ತ್ರವನ್ನು ಕಟಿಯಿಂದ ಪಾದಗಳವರೆಗೆ ಧರಿಸಿದೆ.

ಹಂಪಿಯ ವಿಠಲ ದೇವಾಲಯದಲ್ಲಿರುವ ಈ ತಾಯಿ ಮಗುವಿನ ಶಿಲ್ಪದಲ್ಲಿನ(ಚಿತ್ರ-೫೧) ವಿಶೇಷತೆಯೆಂದರೆ ತಾಯಿ ಸೀರೆಯನ್ನು ಕಚ್ಚೆಹಾಕಿ ಧರಿಸಿದ್ದು, ಪಾದಗಳವರೆಗೆ ಇದೆ. ಕುಚಬಂಧವನ್ನು ಧರಿಸಿರುವುದು ಈ ಶಿಲ್ಪದ ವಿಶೇಷ. ಮಗುವಿನ ವಸ್ತ್ರ ಅಸ್ಪಷ್ಟವಾಗಿದ್ದು, ಆದರ ತಲೆಯ ಕೂದಲನ್ನು ಕೃಷ್ಣ ಕೊಂಡಿಯಂತೆ ಹಾಕಿದ್ದು, ತೋಳ್ಬಂದಿ ಮತ್ತು ಕಾಲ್ಗಡಗವನ್ನು ಹೊಂದಿದೆ.

ಶ್ರೀಶೈಲ ಮಲ್ಲಿಕಾರ್ಜುನ ದೇವಾಲಯದ ಪ್ರಾಕಾರದಲ್ಲಿರುವ ಶಿಲ್ಪದಲ್ಲಿ ತಾಯಿ ಮತ್ತು ತನ್ನ ಇಬ್ಬರು ಮಕ್ಕಳೊಂದಿಗಿದ್ದಾಳೆ. ಆಕೆಯು ಸಣ್ಣ ಮಗುವನ್ನು ತನ್ನ ಬಲ ಕಂಕುಳಲ್ಲಿ ಎತ್ತಿಕೊಂಡಿದ್ದು, ಎಡಗೈಯಲ್ಲಿ ಮತ್ತೊಂದು ಮಗುವನ್ನು ಎತ್ತಿ ಹಿಡಿದು ಕೊಂಡಿದ್ದಾಳೆ. ತಾಯಿಯು ವೃತ್ತಕುಂಡಲ ಮತ್ತು ಎರಡೆಳೆಯ ಸರ ಧರಿಸಿದ್ದಾಳೆ. ವಸ್ತ್ರ ಸಾಮಾನ್ಯವಾಗಿದ್ದು, ದೇಹದ ಮೇಲ್ಭಾಗ ಬೆತ್ತಲೆಯಾಗಿದೆ. ಈ ಶಿಲ್ಪದಲ್ಲಿನ ಮಕ್ಕಳು ತೂಗಾಡುವ ಕರ್ಣ ಕುಂಡಲಗಳನ್ನು ಧರಿಸಿದ್ದು, ಉಡಿದಾರವನ್ನು ಗೆಜ್ಜೆಗಳಿಂದ ಮಾಡಿದೆ. ಕಂಕುಳಲ್ಲಿ ಎತ್ತಿ ಕೊಂಡಿರುವ ಮಗುವಿಗೆ ಹಾಕಿರುವ ಚಲ್ಲಣ ತೊಡೆಯ ಭಾಗದವರೆಗೆ ಮಾತ್ರ ಇದೆ.

ಈ ಮೇಲಿನ ಶಿಲ್ಪಗಳಿಂದ ಅಂದಿನ ಕಾಲದ ಸಾಮಾಜಿಕ ಮತ್ತು ಕೌಟುಂಬಿಕ ಚಿತ್ರಣವನ್ನು ಅರ್ಥಮಾಡಿಕೊಳ್ಳಬಹುದಾಗಿದೆ. ಅಲ್ಲದೇ ಮಕ್ಕಳಿಗೆ ತೊಡಿಸುತ್ತಿದ್ದ ಆಭರಣಗಳಾದ ಕಾಲಗೆಜ್ಜೆ, ಉಡಿದಾರ, ಕೇಶವಿನ್ಯಾಸದಲ್ಲಿ ಕೃಷ್ಣಕೊಂಡಿ ಹಾಗೂ ತೊಡೆಚಲ್ಲಣ ವಸ್ತ್ರಗಳನ್ನು ತಿಳಿಯಲು ಸಹಾಯಕವಾಗಿವೆ.

೩.೩.೧೫. ಏಕತಾರಿ ನುಡಿಸುತ್ತಿರುವ ಸ್ತ್ರೀ

ಏಕತಾರಿಯು ಸ್ತ್ರೀ–ಪುರುಷರಿಬ್ಬರು ನುಡಿಸುತ್ತಿದ್ದ ವಾದ್ಯವಾಗಿತ್ತು. ಹಂಪಿಯ ವಿರೂಪಾಕ್ಷ ದೇವಾಲಯದ ಸ್ತಂಭದ ಮೇಲಿರುವ ಏಕತಾರಿ ನುಡಿಸುತ್ತಿರುವ ಶಿಲ್ಪದಲ್ಲಿ(ಚಿತ್ರ–೫೨) ಸ್ತ್ರೀಯು ಕಟಿಯಿಂದ ಪಾದಗಳವರೆಗೆ ಸೀರೆಯನ್ನು ನಿರಿಗೆ ಹಿಡಿದು ಧರಿಸಿದ್ದು, ಪಾದದ ಮಧ್ಯಭಾಗದಲ್ಲಿ ಸೀರೆಯ ಎಂಟು ನಿರಿಗೆಗಳು ಕಂಡುಬರುತ್ತದೆ. ಎರಡೆಳೆಯ ಕಂಠಾಭರಣ, ವೃತ್ತಕುಂಡಲ, ಎರಡೆಳೆಯ ತೋಳ್ಬಂಧಿ ಮತ್ತು ಮುಂಗೈ ಕಡಗಗಳನ್ನು ಧರಿಸಿದ್ದಾಳೆ. ಸೀರೆಯ ನಿರಿಗೆ, ಮಡಿಕೆಗಳು, ಅದರ ಸೆರಗು ನೋಡಲು ಆಕರ್ಷಕವಾಗಿದ್ದು ಸ್ಪಷ್ಟವಾಗಿ ಕಂಡುಬರುತ್ತದೆ.

೩.೩.೧೬. ದೇವದಾಸಿಯರು

ದೇವದಾಸಿ ಪದ್ಧತಿಯು ವಿಜಯನಗರ ಕಾಲದಲ್ಲಿ ಹೆಚ್ಚು ಪ್ರಖ್ಯಾತಿಯನ್ನು ಪಡೆದಿತ್ತು. ದೇವದಾಸಿಯೊಬ್ಬಳು ಅವಿವಾಹಿತ ಕನ್ಯೆ. ಅವಳು ದೇವಾಲಯದ ಅಥವಾ ಹೊರಗಿನ ಒಂದು ಮೂರ್ತಿಯೊಂದಿಗೆ ಹುಸಿ ಮದುವೆಯನ್ನು ಮಾಡಿಕೊಂಡಿರುತ್ತಾಳೆ.

ದೇವರಿಗೆ ಸಲ್ಲಿಸುವ ಸೇವೆಗಳನ್ನು 'ಅಂಗಭೋಗ' ಮತ್ತೊಂದು 'ರಂಗಭೋಗ' ಎಂದು ಕರೆಯಲಾಗುತ್ತಿದ್ದು, ಅಂಗಭೋಗವು ದೇವರ ಮೂರ್ತಿಗೆ ಸಲ್ಲಿಸುವ ಪೂಜಾ ಕಾರ್ಯಗಳಾದರೆ, ರಂಗಭೋಗವು ನೃತ್ಯ ಸಂಗೀತದ ಕಲೆಯ ಮುಖಾಂತರ ದೇವರಿಗೆ ಸಲ್ಲಿಸುವ ಸೇವೆಯಾಗಿತ್ತು. ಹಾಗಾಗಿ ರಂಗಭೋಗ ಸೇವೆಯನ್ನು ಮಾಡಲು ದೇವಾಲಯಕ್ಕೆ ಮಹಿಳೆಯರನ್ನು ಸೇವಕಿಯರಾಗಿ ಬಿಡುತ್ತಿದ್ದರು. ಅವರನ್ನು 'ದೇವದಾಸಿ' ಎಂದು ಕರೆಯುತ್ತಿದ್ದರು. ಈಕೆ ನೃತ್ಯ ಸಂಗೀತ ಸೇವೆಗಳೊಂದಿಗೆ ದೇವಾಲಯ ಶುದ್ಧಗೊಳಿಸುವ ಕಾರ್ಯ ಹಾಗೂ ದೇವಾಲಯಕ್ಕೆ ಸಂಬಂಧಿಸಿದ ಕೆಲವು ವ್ಯಕ್ತಿಗಳಿಗೆ ಶಯನ ಸುಖವನ್ನು ನೀಡಬೇಕಾದುದು ಅನಿವಾರ್ಯವಾಗಿತ್ತು. ದೇವದಾಸಿಯರು ಬರಬರುತ್ತ ರಾಜನ ಪರಿವಾರಕ್ಕೆ ಸೇರಿಕೊಂಡು ರಾಜ ನರ್ತಕಿಯರಾಗಿ, ರಾಜ ಪರಿವಾರದವರ ವೇಶ್ಯೆಯಾಗಿ ಪರಿವರ್ತಿವಾದದ್ದು ಇತಿಹಾಸ ಸಂಗತಿ.[೨೭೮]

ಹಾಗಾಗಿ ದೇವದಾಸಿಯು ಅನಿವಾರ್ಯವಾಗಿ ವೇಶ್ಯಾವೃತ್ತಿಯನ್ನು ಮಾಡಬೇಕಾಗಿತ್ತು. ದೇವಾಲಯಗಳು ದೊಡ್ಡದಾದಷ್ಟು, ದೇವದಾಸಿಯರ ಸಂಖ್ಯೆ ಹೆಚ್ಚಾಗುತ್ತಿತ್ತು. ಅಲ್ಲದೇ ಆ ಕಾಲದಲ್ಲಿ ಅದು ಗೌರವದ ಸಂಕೇತವಾಗಿತ್ತು. ಇದು ಮುಂದೆ ವಂಶಪಾರಂಪರ್ಯವಾಗಿ ಮುಂದುವರೆದು ರಾಜರ ಆಶ್ರಯ ಅಥವಾ ರಾಜರಿಂದ ಶಾಶ್ವತವಾದ ದಾನದತ್ತಿಗಳನ್ನು ಪಡೆಯುವಂತಾಗಿತ್ತು. ಎಲ್ಲಾ ದೇವದಾಸಿಯರು ವೇಶ್ಯೆಯಾಗಿರುತ್ತಿದ್ದರು. ಆದರೆ ಎಲ್ಲಾ ವೇಶ್ಯೆಯರು ದೇವದಾಸಿಯಾಗಿರಲಿಲ್ಲ. 'ಸೂಳೆ' ಎಂಬ ಪದವನ್ನು ದೇವರ ಗುಡಿಗಳಿಗೆ ನೀಡಿದ ದಾನಗಳಲ್ಲಿ ಉಪಯೋಗಿಸಲಾಗುತ್ತಿತ್ತು.

ಆದರೆ ಇದರ ಅರ್ಥ 'ದೇವದಾಸಿ' ಎಂದಾಗುತ್ತಿತ್ತು.[೨೭೯] ಇವರ ವೃತ್ತಿಯನ್ನು ನಡೆಸಲು ಸರ್ಕಾರದ ಅನುಮತಿಯನ್ನು ಎದುರು ನೋಡಬೇಕಾಗಿತ್ತು. ಸರ್ಕಾರ ಇವರ ಮೇಲೆ 'ಸೂಳೆದೆರೆ' ಎಂಬ ತೆರಿಗೆಯನ್ನು ವಿಧಿಸುತ್ತಿತ್ತು. ಕನ್ನಡಿಯನ್ನು ಇಡುತ್ತಿದ್ದಕ್ಕಾಗಿಯೂ ಇವರು ತೆರಿಗೆಯನ್ನು ಕೊಡಬೇಕಾಗುತ್ತಿತ್ತು.[೨೮೦] ಕ್ರಿ.ಶ. ೧೩೮೦ರ ಹರಿಹರದ ಶಾಸನವೊಂದು ನರ್ತಕಿಯರಿಗೆ ಸಂಬಂಧಿಸಿದಂತೆ ಈ ರೀತಿಯಾದ ಒಂದು ಕನ್ನಡಿಯ ಪ್ರದರ್ಶನದ ಬಗ್ಗೆ ಉಲ್ಲೇಖವನ್ನು ನೀಡುತ್ತದೆ. ಈ ರೀತಿಯಾಗಿ ವಿಜಯನಗರದಲ್ಲಿ ಕನ್ನಡಿಗಳನ್ನು ತೆರಿಗೆಯ ಹೊರೆಗೆ ಗುರಿಪಡಿಸಲಾಗುತ್ತಿತ್ತು.[೨೮೧]

ವಿಜಯನಗರದಲ್ಲಿ ದೇವದಾಸಿ ಪದ್ಧತಿ ಹೇಗಿತ್ತು ಎಂಬುದನ್ನು ಪ್ರವಾಸಿಯಾದ ಬಾರ್ಬೋಸಾ ವಿವರಿಸುತ್ತಾನೆ: "ಸಹಗಮನ ಮಾಡದ ಹೆಂಗಸನ್ನು ಬಹಳ ಅಗೌರವದಿಂದ ಕಾಣುತ್ತಾರೆ. ಅವರ ತಲೆಯನ್ನು ಬೋಳಿಸಿ ಮನೆತನಕ್ಕೆ ಅಮಂಗಳವೆಂದು ಹೊರಗೆ ಅಟ್ಟುತ್ತಾರೆ. ಹೀಗೆ ಮನೆಯಿಂದ ಅಟ್ಟಲ್ಪಟ್ಟ ವಿಧವೆಯರು ದಿಕ್ಕಿಲ್ಲದೆ ಅಲೆಯುತ್ತಾರೆ. ಅತಿ ಚಿಕ್ಕ ವಯಸ್ಸಿನ ವಿಧವೆಯರ ಬಗ್ಗೆ ದಯಾ ದಾಕ್ಷಿಣ್ಯ ತೋರಿಸಿದ ಪಕ್ಷದಲ್ಲಿ, ಅವರನ್ನು ದೇವಸ್ಥಾನಗಳಿಗೆ ಕಳುಹಿಸಿ; ಅಲ್ಲಿ ದೇವಸ್ಥಾನಕ್ಕಾಗಿ ಹಣ ಗಳಿಸಲು ದೇವದಾಸಿಯರಾಗಿ ಬಿಡುತ್ತಾರೆ. ದೇವದಾಸಿಯರಿರುವ ದೇವಸ್ಥಾನಗಳು ಅನೇಕ ಇವೆ. ಅಲ್ಲಿ ಐವತ್ತರಿಂದ ನೂರು ದೇವದಾಸಿಯರಿರುವುದನ್ನು ನೋಡಬಹುದು. ಮದುವೆಯಾಗದ ಕೆಲವು ಹೆಂಗಸರು ತಮ್ಮ ಆತ್ಮ ಸಂತೋಷದಿಂದ ದೇವದಾಸಿಯಾಗಿರುವುದೂ ಉಂಟು. ಇವರು ನಿಗದಿಯಾದ ವೇಳೆ ದೇವರ ಮುಂದೆ ನಿತ್ಯವೂ ಕುಣಿದು ಹಾಡುತ್ತಾರೆ. ಉಳಿದ ವೇಳೆಯಲ್ಲಿ ತಮಗಿಷ್ಟ ಬಂದ ರೀತಿಯಲ್ಲಿ ಕಳೆಯುತ್ತಾರೆ".[೨೮೨]

ಪಾಯೇಸ್‌ನು ದೇವದಾಸಿಯರ ಕುರಿತು, "ದೇವರಿಗೆ ನೈವೇದ್ಯ ಮಾಡುವಾಗ ದೇವಸ್ಥಾನಕ್ಕೆ ಸೇರಿದ ದೇವದಾಸಿಯರು ನೃತ್ಯ ಮಾಡುತ್ತಾರೆ. ಈ ದೇವದಾಸಿಯರಿಗೆ ಹುಟ್ಟಿದ ಹೆಣ್ಣು ಮಕ್ಕಳೆಲ್ಲಾ ದೇವಸ್ಥಾನಕ್ಕೆ ಸೇರಿದವರಾಗುತ್ತಾರೆ. ಈ ದೇವದಾಸಿಯರು ಸೂಳೆಗಾರಿಕೆ ಮಾಡುತ್ತ ಊರಿನ ಅತ್ಯುತ್ತಮವಾದ ಬೀದಿಗಳಲ್ಲಿ ವಾಸಮಾಡುತ್ತಾರೆ. ಎಲ್ಲಾ ಊರುಗಳಲ್ಲಿಯೂ ಇದೇ ರೀತಿ ಇವರಿರುವ ಬೀದಿಗಳಲ್ಲಿ ಒಳ್ಳೆಯ ಮನೆಗಳು ಇರುತ್ತವೆ. ಇವರ ಬಗ್ಗೆ ಜನ ಬಹಳ ಗೌರವ ತೋರಿಸುತ್ತಾರೆ. ದಳಪತಿಗಳ ನಾಯಕಸಾನಿ ಎನಿಸಿಕೊಂಡವಳಿಗೆ ಮತ್ತಷ್ಟು ಗೌರವ. ಎಂತಹ ಗೌರವಸ್ಥನಾದರೂ ಇವರ ಮನೆಗೆ ಯಾವ ದೂಷಣೆಗೂ ಒಳಗಾಗದೆ ಹೋಗಬಹುದು. ಈ ಸ್ತ್ರೀಯರು ರಾಜನ ಅಂತಃಪುರದ ಸ್ತ್ರೀಯರ ಬಳಿಗೆ ಹೋಗಬಹುದಲ್ಲದೆ ಅವರೊಡನೆ ಕುಳಿತು ಎಲೆ-ಅಡಿಕೆ ಸೇವಿಸಬಹುದು. ಬೇರೆ ಯಾರಿಗೂ ಅವರೆಷ್ಟು ದೊಡ್ಡವರಾದರೂ ಇಂಥ ಅವಕಾಶ ಸಿಕ್ಕುವುದಿಲ್ಲ".[೨೮೩]

ನ್ಯೂನಿಜ್ ದೇವದಾಸಿಯರ ಕುರಿತು ಈ ರೀತಿ ಹೇಳುತ್ತಾನೆ; "ಪ್ರತಿ ಶನಿವಾರ ದೇವದಾಸಿಯರು ಅರಮನೆಗೆ ಹೋಗಿ ಅಲ್ಲಿರುವ ದೇವರ ಮುಂದೆ ನೃತ್ಯ ಮಾಡಬೇಕು".[೨೮೪]

ಒಟ್ಟಾರೆ ದೇವದಾಸಿಯರು ದೇವರ ಸೇವೆಗಾಗಿ ಸೇರಿದ್ದು ಅವಶ್ಯಕವಾಗಿಯೋ, ಅಲ್ಲವೋ ನೃತ್ಯ ಮತ್ತು ಸಂಗೀತ ಕಲಾ ಪ್ರದರ್ಶನದೊಂದಿಗೆ ವೇಶ್ಯಾವೃತ್ತಿಯನ್ನು ಮಾಡಬೇಕಾಗಿತ್ತು. ಹಾಗಾಗಿ

ಇವರು ಆರ್ಥಿಕವಾಗಿ ಶ್ರೀಮಂತರಾಗಿದ್ದರು. ನೃತ್ಯ ಪ್ರದರ್ಶನಗಳೊಂದಿಗೆ ರಾಜರಿಂದ ದಾನದತ್ತಿಗಳನ್ನು ಪಡೆದು ಶ್ರೀಮಂತರಾಗಿದ್ದರು. ಹಾಗಾಗಿ ಇವರು ಬೆಲೆಬಾಳುವ ವಸ್ತ್ರ ಮತ್ತು ಆಭರಣಗಳನ್ನು ಧರಿಸುತ್ತಿದ್ದರು. ಇವರ ವಸ್ತ್ರ ಮತ್ತು ಆಭರಣ ಕುರಿತು ಪ್ರತ್ಯೇಕವಾಗಿ ಚರ್ಚಿಸುವ ಬದಲು ನೃತ್ಯಗಾರ್ತಿಯರು ಮತ್ತು ವಾರಾಂಗನೆಯರು ಎಂಬ ವಿಷಯದ ಶೀರ್ಷಿಕೆಗಳಲ್ಲಿಯೇ ಚರ್ಚಿಸಲಾಗಿದೆ.

೩.೩.೧೭. ವಾರಂಗನೆಯರು

ವಾರಂಗನೆಯರು, ಸೂಳೆಯರು, ಗಣಿಕೆಯರು, ವೇಶ್ಯೆಯರು ಎಂಬ ಪದಗಳು ವೇಶ್ಯಾವೃತ್ತಿಗೆ ಸಂಬಂಧಿಸಿದ ಸ್ತ್ರೀಯರನ್ನು ಕರೆಯುತ್ತಿದ್ದ ಅಥವಾ ಸಂಬೋಧಿಸುತ್ತಿದ್ದ ಪರ್ಯಾಯ ಪದಗಳಾಗಿವೆ. ಇದು ಪುರಾತನ ಕಾಲದಿಂದಲೂ ಅಸ್ತಿತ್ವದಲ್ಲಿದ್ದ ವೃತ್ತಿಯಾಗಿದೆ. ವಿಜಯನಗರ ಕಾಲದಲ್ಲಿ ಇದು ರಾಜ ಪೋಷಿತ ವೃತ್ತಿಯಾಗಿ ಮಾನ್ಯತೆ ಗಳಿಸಿತ್ತು. ಈ ಕಾಲದಲ್ಲಿ ವೇಶ್ಯಾವೃತ್ತಿಯು ಒಂದು ಸಂಸ್ಥೆಯಾಗಿ ಬೆಳವಣಿಗೆ ಆಗಲಿಕ್ಕೆ ಕಾರಣ ನಗರಗಳ ಬೆಳವಣಿಗೆ ಹಾಗೂ ರಾಜಾಶ್ರಯ. ಹಾಗಾಗಿ ಇವರು ತಮ್ಮದೇ ಪ್ರತ್ಯೇಕ ಕೇರಿಗಳಲ್ಲಿ ವಾಸಿಸುವಷ್ಟು ಆರ್ಥಿಕವಾಗಿ ಸಬಲರೂ ಆಗಿರುತ್ತಿದ್ದರು.

'ಸೂಳೆಗೇರಿ' ಎಂಬ ಪ್ರತ್ಯೇಕ ಬೀದಿ ಇತ್ತು ಎಂಬುದನ್ನು ರಾಮನಾಥ ಚರಿತ ಕಾವ್ಯದಿಂದ ತಿಳಿದು ಬರುತ್ತದೆ. ಆ ಕುರಿತು ಪದ್ಯವೊಂದರಲ್ಲಿ,

ಇಂತು ಮೆಜೆದ ಪೂವಿನ ಪಸರಗಳನೋ
ರಂತೆ ನೋಡುತ ಬರುತವನು
ಮುಂತೆ ಕಂಡನು ಕಾವದೇವನೋಲಗಶಾಲೆ
ಯಂತಿಹ ಸೂಳೆಗೇರಿಯನು[೨೮೫]

ಅದೇ ಕಾವ್ಯದ ಮತ್ತೊಂದು ಪದ್ಯದಲ್ಲಿ ವಾರಂಗನೆಯರ ವೇಷ–ಭೂಷಣಗಳನ್ನು ಕುರಿತು,

ಕತ್ತುರಿಬೊಟ್ಟು ಮುತ್ತಿನ ಮೂಕುತಿ ನಗೆ
ವೆತ್ತ ಕಣ್ನೆಲೆಮೊಲೆಯೆಸೆಯೆ
ಒತ್ತಿಗೆ ಬಂದು ನಿಂದಿರ್ದೆಳೆವರೆಯದ
ಮತ್ತಕಾಶಿನಿಯರೆಸೆದರು[೨೮೬]

ಈ ಮೇಲಿನ ಪದ್ಯದಲ್ಲಿ ವಾರಂಗನೆಯರು ಕಸ್ತೂರಿಯ ತಿಲಕ ಮುತ್ತಿನ ಮೂಗುತಿ ಮುಂತಾದ ಆಭರಣಗಳ ಅಲಂಕರಣೆಯಿಂದ ತಮ್ಮ ಸೌಂದರ್ಯವನ್ನು ಇಮ್ಮಡಿಗೊಳಿಸಿ ಕೊಂಡು ಅಲ್ಲಿದ್ದ ಪುರುಷರಲ್ಲಿ ಮತ್ತನ್ನು ಭರಿಸುತ್ತಿದ್ದರು ಎಂದು ತಿಳಿಸುತ್ತದೆ.

ಇನ್ನೊಂದು ಪದ್ಯದಲ್ಲಿ,

ಮುಡಿದ ಮಲ್ಲಿಗೆ ಪೂಸಿದ ಚಂದನ ನಿಱು
ವಿಡಿದುಟ್ಟ ಬಿಳಿದು ಮುತ್ತುಗಳ
ತೊಡವೆಸೆದಿರೆ ಬಾಲೆಯರು ಬೆಳುದಿಂಗಳ
ಬಿಡುಗಂಡರೆಣೆಯಂತೆಸೆದರು[೨೮೭]

ಮುಂದುವರೆದು,

ಕಂಕಣರವ ನೂಪುರನಾದ ಕಾಂಚೀ
ಕಿಂಕಿಣಿಯುಲುಪು ತಾತಿಗಳ
ಝುಂಕಾರನಿನದವಾ ಸೂಳೆಗೇರಿಯೊಳು ಕ
ಲಂಕುತಿಹವು ವಿಟರೆದೆಯ[೨೮೮] ಎಂದಿದೆ.

ವೇಶ್ಯೆಯರು ತಾವು ಧರಿಸುತ್ತಿದ್ದ ನೂಪುರ ಮತ್ತು ಕಾಂಚೀದಾಮಗಳಿಗೆ ಸದ್ದು ಬರುವ ಗೆಜ್ಜೆಗಳನ್ನು ಹೆಚ್ಚಾಗಿ ಬಳಸುತ್ತಿದ್ದರು ಅಲ್ಲದೆ, ಗೆಜ್ಜೆಯ ನಾದವು ವಿಟರ ಮನವನ್ನು ತಲ್ಲಣಗೊಳಿಸುತ್ತಿತ್ತು. ಹೀಗೆ ನೂಪುರ ಸಹ ಪುರುಷರ ಮನ ಕಲಕುವ ಆಭರಣ ಎಂಬುದು ಗಮನಾರ್ಹ.

ವಿಜಯನಗರ ಕಾಲದಲ್ಲಿ ಬಾಲಕಿಯರನ್ನು ಸಹ ವೇಶ್ಯಾವೃತ್ತಿಗೆ ಬಳಸಲಾಗುತ್ತಿತ್ತು. ಈ ಕುರಿತು ರಾಮನಾಥ ಚರಿತದಲ್ಲಿ ಸೂಳೆಯಗೇರಿಯಲ್ಲಿ ಬಾಲವೇಶ್ಯೆಯರ ಕುರಿತು ಹೀಗೆ ತಿಳಿಸಿದೆ:

ಕುಣಿಯೆ ಕುರುಳು ಗದಗದಿಸೆ ಪೆರ್ಮೊಲೆ ನಡು
ಮಣಿಯೆ ಮೇಲುದು ನಸುಜಾರೆ
ಮಣಿಹಾರವಲೆಯೆ ಹೊಯ್ ಚೆಂಡಾಡುವ ಬಾಲ
ಗಣಿಕೆಯರೊಪ್ಪಿದರಲ್ಲಿ[೨೮೯]

ಇದಕ್ಕೆ ಪೂರಕವಾಗಿ ಕಂಠೀರವನರಸರಾಜ ವಿಜಯದಲ್ಲಿಯೂ ಬಾಲವೇಶ್ಯೆಯರ ವಿವರವಿದೆ:

ಕಾಲಂದುಗೆ ಕಟಿಸೂತ್ರ ಕಂಕಣ ಸಣ್ಣ
ಸಾಲಿಯ ಸೀರೆಯ ನೆರಿಯಾ
ಬಾಲಿಕಿಯೊರ್ವಳು ಬಹುಸಿಂಗಾರದ
ಜಾಲವ ಬೀಸಿದಳ್ವಿಟಗೆ[೨೯೦]

ಈ ಸೂಳೆಯರು ತಮ್ಮ ಬಳಿ ಬರುವ ಪುರುಷರಿಂದ ಹಣ, ಒಡವೆ ವಸ್ತುಗಳನ್ನು ಗಳಿಸುವ ಕ್ರಮವನ್ನು ಕುರಿತು ಈ ಕೆಳಗಿನಂತೆ ರಾಮನಾಥ ಚರಿತದಲ್ಲಿ ವಿವರಿಸಲಾಗಿದೆ:

ಇತ್ತೊಡವೆಯನೊಲ್ಲದಂತೆ ತೆಗೆದುಕೊಂಡು
ಮತ್ತೆ ಸಖಿಯರಿಂದ ಕಿಱುದ
ಒತ್ತಿ ಬೇಡಿಸಿ ಧನದಾಸೆಯಿಂ ನಲ್ಲರ
ನೊತ್ತುವವಳು ಬಲ್ಲವಳೆ[೨೯೧]

ಕಂಠೀರವನರಸರಾಜ ವಿಜಯನಲ್ಲಿ ಇಂಥದ್ದೇ ಸಂದರ್ಭವನ್ನು ವಿವರಿಸಿರುವ ಪದ್ಯವೊಂದು ಹೀಗಿದೆ;

ಕಾಮನ ಪೋಲುವ ಸೋಮವದನನನು
ಕೋಮಲಾಂಗಿಯೆ ಕರೆತರಲು
ಪ್ರೇಮದಿಂ ಮುತ್ತಿನಹಾರವನೀವೆನು
ತಾಮಸಗೆಯ್ಯದೆ ಪೋಗಿ[೨೯೨]

ಈ ಮೇಲಿನ ಎರಡು ಪದ್ಯಗಳಲ್ಲಿ ವಾರಂಗನೆಯರು ತಮ್ಮ ಬಳಿ ಬರುವ ಪುರುಷರಿಂದ ಕಾಡಿ ಬೇಡಿ ಹಣವನ್ನು, ಮುತ್ತಿನ ಹಾರ ಮುಂತಾದವುಗಳನ್ನು ಪಡೆದು ಕೊಳ್ಳುತ್ತಿದ್ದರು. ಅಲ್ಲದೆ ಆ ವಿಟರು ವಾರಂಗನೆಯರನ್ನು ಸಮಾಧಾನ ಮಾಡುವ ಪರಿಯನ್ನು ಸಹ ಇಲ್ಲಿ ತಿಳಿಯಬಹುದಾಗಿದೆ.

ರಾಮನಾಥ ಚರಿತದಲ್ಲಿ ಧನಿಕರು ಅಥವಾ ಶ್ರೀಮಂತರು ವಾರಂಗನೆಯರಿಗೆ ನೀಡುತ್ತಿದ್ದ ಹಣವನ್ನು ಕುರಿತು:

ಅಜಿತ ಚಕೋರಿ ಜೊನ್ನಮನೊಲಿದೀಂಟುವ
ತೆಜಿದಿಂದಿನಿಯರಿಂದುಟಿಯ
ನೆಜಿ ಸವಿದೊಡಗೂಡುವ ಕಾಂತೆಗಲ್ಲದೆ
ತೆಱುವರೆ ಧನವರಸಿಕರು[೨೯೩]

ಹೀಗೆ ವೇಶ್ಯೆಯರು ಹಣವನ್ನು ತಮ್ಮ ವೃತ್ತಿಯಿಂದ ಗಳಿಸುತ್ತಾ ಶ್ರೀಮಂತರಾಗಿರುತ್ತಿದ್ದರು. ಅಷ್ಟೇ ಅಲ್ಲದೇ ಅವರಲ್ಲಿಗೆ ಬರುತ್ತಿದ್ದ ವಿಟರನ್ನು ಆಕರ್ಷಿಸಲು ಚದುರಂಗದಾಟ, ಸಂಗೀತ, ಸಾಹಿತ್ಯ ಕಛೇರಿಗಳನ್ನು ಏರ್ಪಡಿಸಿ, ಅವರನ್ನು ರಂಜಿಸಿ, ಹಣವನ್ನು ಗಿಟ್ಟಿಸಿಕೊಳ್ಳುತ್ತಿದ್ದರು. ಆ ಕುರಿತು ರಾಮನಾಥ ಚರಿತದಲ್ಲಿ ಹೀಗೆ ವಿವರಿಸಿದೆ;

ಸಂಗೀತ ಸಾಹಿತ್ಯ ಪರಿಹಾಸಕಗಳಿಂ
ಪಿಂಗಿದ ಸೂಳೆವನೆಯೊಳು
ಅಂಗಜನಾಳ್ತನ ಮೆಜೆಯದು ನಿನ್ನಾಣೆ
ತುಂಗಪಯೋಧರಯುಗಳೆ[೨೯೪]

ಹಾಗಾಗಿ ಇವರು ಸಂಗೀತ, ನಾಟ್ಯಗಳಲ್ಲಿ ನುರಿತವರಾಗಿದ್ದರು ಹಾಗೂ ಆ ಮೂಲಕ ತಮ್ಮ ಬಳಿಗೆ ಬರುತ್ತಿದ್ದ ಪುರುಷರನ್ನು ರಂಜಿಸುತ್ತಾ ಹಣವನ್ನು ಗಳಿಸುತ್ತಿದ್ದರು.

ಶ್ರೀಕೃಷ್ಣದೇವರಾಯನ ಆಮುಕ್ತಮಾಲ್ಯದಲ್ಲಿ ಇವರನ್ನು ಕುರಿತು, "ಮಥುರಾ ನಗರದಲ್ಲಿರುವ ವೇಶ್ಯೆಯರು ಸುಂದರಿಯರು, ಅಪ್ಸರೆಯರಂತಿರುತ್ತಾರೆ. ಅವರು ತಮ್ಮ ಜಡೆಗಳನ್ನು ಮುಡಿಗಳನ್ನು ಬಿಚ್ಚಿದಾಗ ಅವರ ಕೇಶರಾಶಿ ಪಾದಗಳನ್ನು ಸೋಕುತ್ತದೆ"[೨೯೫] ಎಂಬುದಾಗಿ ಅವರ ಸೌಂದರ್ಯ ಮತ್ತು ಕೇಶರಾಶಿಯನ್ನು ವಿವರಿಸಿದೆ.

ವಿಜಯನಗರ ಸಾಮ್ರಾಜ್ಯಕ್ಕೆ ಭೇಟಿ ನೀಡಿದ್ದ ವಿದೇಶಿ ಪ್ರವಾಸಿಗರು ವೇಶ್ಯೆಯರ ಕುರಿತು, ಅವರ ಶ್ರೀಮಂತಿಕೆ ಹಾಗೂ ರಾಜರಿಂದ ದೊರೆತ ಮನ್ನಣೆ ಇತ್ಯಾದಿ ವಿಷಯಗಳ ಕುರಿತು ತಮ್ಮ ವರದಿಗಳಲ್ಲಿ ದಾಖಲಿಸಿದ್ದಾರೆ. ಅವರಲ್ಲಿ ನಿಕೊಲೊ–ದೆ–ಕೊಂತಿ, ರಜಾಕ್, ಬಾರ್ಬೋಸಾ, ಪಾಯೇಸ್, ನ್ಯೂನಿಜ್‌ರವರ ಬರಹಗಳು ಬಹುಮುಖ್ಯವಾಗಿದ್ದು, ವೇಶ್ಯೆಯರ ಕುರಿತು ತಿಳಿಯಲು ಸಹಾಯಕವಾಗಿವೆ. ನಿಕೊಲೊ–ದೆ–ಕೊಂತಿ ದಾಖಲಿಸಿದಂತೆ, "ವೇಶ್ಯಾಂಗನೆಯರು ಎಲ್ಲಾ ಕಡೆಯೂ ದೊರೆಯುತ್ತಾರೆ. ಇವರು ತಮ್ಮದೇ ಆದ ಮನೆಗಳಲ್ಲಿ ಪಟ್ಟಣದ ಎಲ್ಲಾ ಕಡೆಗಳಲ್ಲಿಯೂ ವಾಸಮಾಡುತ್ತಾರೆ. ಸುಗಂಧ ದ್ರವ್ಯಗಳನ್ನು ಪೂಸಿಕೊಂಡು ತಮ್ಮ ರೂಪ ಮತ್ತು ಯೌವನಗಳಿಂದ ಪುರುಷರನ್ನು ಆಕರ್ಷಿಸುತ್ತಾರೆ. ಏಕೆಂದರೆ ಇಂಡಿಯಾ ದೇಶದವರು ಬಹು ಸ್ತ್ರೀಲೋಲರು"[೨೯೬] ಎಂದು ವಿವರಿಸಿದ್ದಾನೆ.

ಅಬ್ದುರ್ ರಜಾಕ್ ವೇಶ್ಯೆಯರ ಕುರಿತು, "ದರಬ್‌ಖಾನೆಗೆ ಎದುರಾಗಿ ರಾಜ್ಯಪಾಲನ ಮನೆಯಿದೆ. ಇಲ್ಲಿ ಹನ್ನೆರಡು ಸಾವಿರ ಸೈನಿಕರು ಕಾವಲು ಕಾಯುತ್ತಾರೆ. ಪ್ರತಿಯೊಬ್ಬರಿಗೂ ದಿನಕ್ಕೆ ಒಂದು 'ಫನಂ' ಸಂಬಳ ಕೊಡುತ್ತಾರೆ. ಈ ಸಂಬಳಕ್ಕೆ ಬೇಕಾದ ಹಣ ವೇಶ್ಯಾಗೃಹಗಳ ಮೇಲೆ ಹಾಕಿದ ತೆರಿಗೆಯಿಂದ ಬರುತ್ತದೆ. ಈ ವೇಶ್ಯಾಗೃಹಗಳ ಭವ್ಯತೆಯನ್ನು, ಈ ಗೃಹಗಳಲ್ಲಿರುವ ಯುವತಿಯರ ಸೌಂದರ್ಯವನ್ನು, ಅವರ ಹಾವಭಾವ ವಿಲಾಸಗಳನ್ನು ವರ್ಣಿಸಲು ಸಾಧ್ಯವಿಲ್ಲ".

"...ಇವರು ಮಧ್ಯಾಹ್ನವಾದ ಮೇಲೆ ಭವ್ಯವಾಗಿ ಸಿಂಗರಿಸಿದ ಈ ಗೃಹಗಳ ಮುಂದೆ ವೇಶ್ಯಾಂಗನೆಯರು ಮೇಲೆ ತಿಳಿಸಿದ ಪೀಠಗಳ ಮೇಲೆ ಕುಳಿತುಕೊಳ್ಳುತ್ತಾರೆ. ಈ ವೇಶ್ಯೆಯರು ಬೆಲೆಯಾದ ಮುತ್ತು ಮಾಣಿಕ್ಯಗಳಿಂದಲೂ, ವಸ್ತ್ರಗಳಿಂದಲೂ ಅಲಂಕೃತರಾಗಿರುತ್ತಾರೆ. ಇವರು ನವಯೌವ್ವನೆಯರು ಹಾಗೂ ಬಹು ರೂಪವತಿಯರು, ಪ್ರತಿಯೊಬ್ಬ ವೇಶ್ಯೆಯ ಬಳಿ ಇಬ್ಬರು ದಾಸಿಯರು ಇದ್ದು, ಮನರಂಜನೆಯನ್ನು ಉಂಟುಮಾಡುತ್ತಾರೆ. ಯಾರು ಬೇಕಾದರೂ ಈ ಬೀದಿಗೆ ಬಂದು ತನಗೆ ಮೆಚ್ಚುಗೆಯಾದ ವೇಶ್ಯೆಯನ್ನು ಆರಿಸಿಕೊಂಡು ಅವಳೊಡನೆ ಕಾಲಕಳೆಯಬಹುದು".[೨೯೭] ಎಂದು ವಿವರಿಸಿದ್ದಾನೆ.

"ಈ ನಗರದ ಏಳು ಕೋಟೆಗಳಲ್ಲಿಯೂ ಈ ತರಹ ಅನೇಕ ವೇಶ್ಯಾಗೃಹಗಳಿವೆ. ಈ ವೇಶ್ಯಾಗೃಹಗಳ ಮೇಲೆ ಹಾಕಿದ ತೆರಿಗೆಯಿಂದ ಹನ್ನೆರಡು ಸಾವಿರ 'ಫನಂ' ಆದಾಯ ಬರುತ್ತದೆ. ಈ ಹಣವನ್ನು ಪಹರೆಯವರಿಗೆ ಸಂಬಳವಾಗಿ ಕೊಡುತ್ತಾರೆ".[೨೯೮]

ರಾಜನ ಸೈನ್ಯ ಯುದ್ಧಕ್ಕೆ ಹೊರಟಿತೆಂದರೆ ಅವರಲ್ಲಿ ದಂಡನಾಯಕರು, ವೀರಾಧಿ ವೀರರು ಮಾತ್ರವಲ್ಲ, ಅವರ ಸತಿಯರು ಮಾತ್ರವಲ್ಲ, ಸೂಳೆಯರು, ವ್ಯಾಪಾರಿಗಳು ಮುಂತಾದವರು ಇರುತ್ತಾರೆ. ಈ ಕುರಿತು ಕಂಠೀರವನರಸರಾಜ ವಿಜಯದಲ್ಲಿ,

> ಕೂಳ ಪಾಳೆಯದ ಸಂಗಡ ಕುದುರೆಯ ಮೇಲೆ
> ಕಾಲಕುಪ್ಪಸ ಪಾಪೋಸು
> ಜೋಲುವ ರವಿಕೆಯ ಮೊಲೆಕಟ್ಟುಗಳ ಚೆಲ್ವ
> ಸೂಳೆಯರೈದಿದರಾಗ[೨೯೯] ಎಂದಿದೆ.

ನ್ಯೂನಿಜ್‌ನ ನೀಡುವ ಮುಂದಿನ ವಿವರಗಳು ಮೇಲಿನ ಹೇಳಿಕೆಗೆ ಸಮರ್ಥನೆ ನೀಡುತ್ತವೆ. ನ್ಯೂನಿಜ್ ವಿವರಿಸುವಂತೆ, "ಕೃಷ್ಣದೇವರಾಯನ ರಾಯಚೂರು ದಂಡಯಾತ್ರೆಯ ಸಮಯದಲ್ಲಿ ಸೇನಾ ಪರಿವಾರದೊಂದಿಗೆ ವೇಶ್ಯೆಯರು ದಂಡಯಾತ್ರೆಯಲ್ಲಿದ್ದರು" ಎಂದು ಹೇಳುತ್ತಾನೆ. ಮುಂದುವರೆದು, "ಈ ಸೈನ್ಯವನ್ನು ಹಿಂಬಾಲಿಸಿ ಹೋದ ಅಗಸರ ಮತ್ತು ವೇಶ್ಯೆಯರ ವಿಚಾರ ಹೇಳಬೇಕಿಲ್ಲ. ಒಟ್ಟು ೨೦,೦೦೦ ವೇಶ್ಯೆಯರು ರಾಜನ ದಂಡಯಾತ್ರೆಯಲ್ಲಿದ್ದರು"[೩೦೦] ಎಂದು ವಿವರಿಸಿದ್ದಾನೆ.

ದಂಡಯಾತ್ರೆ ಹೊರಟಾಗ ಸೈನ್ಯದಲ್ಲಿ ವೇಶ್ಯೆಯರ ಅಗತ್ಯವೇನಿತ್ತು? ಎಂಬ ಪ್ರಶ್ನೆ ಉದ್ಭವಿಸುವುದು ಸಹಜ. ಸೈನಿಕರನ್ನು ಪ್ರೇರೇಪಿಸಲು ಹಾಗೂ ಅವರು ವೀರಾವೇಶದಿಂದ

ಹೋರಾಡಲು ವೇಶ್ಯೆಯರನ್ನು ಕರೆದುಕೊಂಡು ಹೋಗುತ್ತಿದ್ದರು ಎಂಬುದಾಗಿ ಬಾರ್ಬೋಸ ವಿವರಿಸಿದ್ದಾನೆ. ಬಾರ್ಬೋಸ ಸೇನೆಯಲ್ಲಿದ್ದ ವೇಶ್ಯೆಯರ ಕುರಿತು ಹೀಗೆ ವಿವರಿಸಿದ್ದಾನೆ, "ವಿಜಯನಗರ ರಾಜರು ಯುದ್ಧಕ್ಕೆ ಹೋಗುವಾಗ ವೇಶ್ಯೆಯರನ್ನು ಕರೆದುಕೊಂಡು ಹೋಗುತ್ತಿದ್ದರು. ಅವರಿಗೆ ಹೆಚ್ಚಿನ ಸಂಬಳ ಕೊಡುತ್ತಿದ್ದುದ್ದರ ಕುರಿತು ಹೇಳುತ್ತಾ, "ಈ ಹೆಚ್ಚಿನ ಸಂಬಳಕ್ಕೆ ಮೊದಲು ಅರ್ಹರು ಯಾರೆಂದರೆ ಮದುವೆಯಾಗದ ಹುಡುಗಿಯರು", ಇಂಥವರು ಬಹಳ ಜನ ಇರುತ್ತಾರೆ. ಇವರು ಯುದ್ಧ ಮಾಡದಿದ್ದರೂ ಇವರನ್ನು ಮೆಚ್ಚಿದ ಯೋಧರು ವೀರಾವೇಶದಿಂದ ಹೋರಾಡುತ್ತಾರೆ. ಈ ಯುವತಿಯರ ಮೇಲಿನ ಆಸೆಗಾಗಿ ಬೇರೆ ರಾಜ್ಯಗಳಿಂದಲೂ ಶ್ರೀಮಂತರೂ, ಸರದಾರರೂ ಬಂದು ರಾಜನ ಸೈನ್ಯವನ್ನು ಸೇರಿಕೊಳ್ಳುತ್ತಾರೆ. ಪ್ರತಿಯೊಬ್ಬರೂ ಏಳೆಂಟು ಮುದ್ದು ಯುವತಿಯರನ್ನು ತಮ್ಮ ಸೇವೆಗೆ ಸೇರಿಸಿಕೊಂಡಿದ್ದಾರೆ. ಇವರಿಗೆ ರಾಜನ ಬೊಕ್ಕಸದಿಂದ ಸಂಬಳ ದೊರೆಯುತ್ತದೆ".[೨೦೧]

"ಈ ಯುವತಿಯರು ಬಹಳ ಮಾನ್ಯತೆಯಿಂದ ಇರುತ್ತಾರೆ. ಇವರಿಗೆ ಯಾರು ವಾರಸುದಾರರು ಇಲ್ಲದೇ ಹೋದಾಗ ಇವರ ಇಡೀ ಆಸ್ತಿಯೆಲ್ಲ ರಾಜನಿಗೆ ಸೇರುತ್ತದೆ. ಒಂದು ಸಲ ಇಂಥವಳೊಬ್ಬಳು ಸತ್ತಾಗ ರಾಜನಿಗೆ ಅರವತ್ತು ಸಾವಿರ ಚಿನ್ನದ ಪಾರ್ದೊಗಳು ಸಿಕ್ಕಿದವು. ಇಷ್ಟಲ್ಲದೆ ಆಕೆ ಹನ್ನೆರಡು ಸಾವಿರ ಚಿನ್ನದ ಪಾರ್ದೊಗಳನ್ನು ತಾನು ಚಿಕ್ಕಂದಿನಿಂದ ಸಾಕಿದ್ದ ದಾಸಿಯೊಬ್ಬಳಿಗೆ ದಾನ ಮಾಡಿದ್ದಳು".[೨೦೨]

ವೇಶ್ಯೆಯರು ಸೂಳೆಗೇರಿಗಳಲ್ಲಿ ಅಷ್ಟೇ ಅಲ್ಲದೇ ಸೈನ್ಯದ ಜೊತೆಯಲ್ಲಿ ಯುದ್ಧರಂಗಕ್ಕೆ ಹೋಗಿ ರಾಜರಿಂದ ಹಣಗಳಿಸಿ ಶ್ರೀಮಂತರಾಗುತ್ತಿದ್ದರು ಎಂಬುದು ಒಂದೆಡೆಯಾದರೆ, ಸೈನಿಕರು ವೀರಾವೇಶದಿಂದ ಹೋರಾಡಿ ರಾಜನನ್ನು ಯುದ್ಧದಲ್ಲಿ ವಿಜಯಶಾಲಿಯನ್ನಾಗಿ ಮಾಡುತ್ತಿದ್ದರು ಎಂಬುದರಲ್ಲಿ ವೇಶ್ಯೆಯರ ಪಾತ್ರವೂ ಬಹುಮುಖ್ಯವಾಗಿದೆ. ಹಾಗಾಗಿ ರಾಜನ ಸೈನಿಕ ಪಾಳೆಯದಲ್ಲಿ ಯುದ್ಧೋಪಕರಣಗಳು ಎಷ್ಟು ಮುಖ್ಯವೋ ಅಷ್ಟೇ ಮುಖ್ಯವಾದ ಭಾಗ ವೇಶ್ಯೆಯರದೂ ಆಗಿತ್ತು.

ದೇವದಾಸಿಯರು ವೇಶ್ಯಾವೃತ್ತಿಯನ್ನು ಮಾಡುತ್ತಿದ್ದರು ಎಂಬುದನ್ನು ಪಾಯೇಸ್ ಈ ರೀತಿ ತಿಳಿಸಿದ್ದಾರೆ, "ದೇವರಿಗೆ ನೈವೇದ್ಯ ಮಾಡುವಾಗ ದೇವಸ್ಥಾನಕ್ಕೆ ಸೇರಿದ ದೇವದಾಸಿಯರು ನೃತ್ಯ ಮಾಡುತ್ತಾರೆ. ಈ ದೇವದಾಸಿಯರಿಗೆ ಹುಟ್ಟಿದ ಹೆಣ್ಣು ಮಕ್ಕಳೆಲ್ಲಾ ದೇವಸ್ಥಾನಕ್ಕೆ ಸೇರಿದವರಾಗುತ್ತಾರೆ. ಈ ದೇವದಾಸಿಯರು ಸೂಳೆಗಾರಿಕೆ ಮಾಡುತ್ತಾ ಊರಿನ ಅತ್ಯುತ್ತಮವಾದ ಬೀದಿಗಳಲ್ಲಿ ವಾಸಮಾಡುತ್ತಾರೆ. ಎಲ್ಲಾ ಊರುಗಳಲ್ಲಿಯೂ ಇದೇ ರೀತಿ ಇವರಿರುವ ಬೀದಿಗಳಲ್ಲಿ ಒಳ್ಳೆಯ ಮನೆಗಳು ಇರುತ್ತವೆ. ಇವರ ಬಗ್ಗೆ ಜನ ಬಹಳ ಗೌರವ ತೋರಿಸುತ್ತಾರೆ. ದಳಪತಿಗಳ ನಾಯಕಸಾನಿ ಎನಿಸಿಕೊಂಡವಳಿಗೆ ಮತ್ತಷ್ಟು ಗೌರವ. ಎಂತಹ ಗೌರವಸ್ಥನಾದರೂ ಇವರ ಮನೆಗೆ ಯಾವ ದೂಷಣೆಗೂ ಒಳಗಾಗದೆ ಹೋಗಬಹುದು. ಈ ಸ್ತ್ರೀಯರು ರಾಜನ ಅಂತಃಪುರದ ಸ್ತ್ರೀಯರ ಬಳಿಗೆ ಹೋಗಬಹುದಲ್ಲದೆ ಅವರೊಡನೆ ಕುಳಿತು ಎಲೆ-ಅಡಿಕೆ ಸೇವಿಸಬಹುದು. ಬೇರೆ ಯಾರಿಗೂ, ಅವರೆಷ್ಟು ದೊಡ್ಡವರಾದರೂ, ಇಂಥ ಅವಕಾಶ ಸಿಕ್ಕುವುದಿಲ್ಲ".[೨೦೩]

ಹಾಗೆಯೇ ಮುಂದುವರಿದು, "ರಾಜನ ಸಿಂಹಾಸನದ ಮುಂದೆ ಜಟ್ಟಿಗಳು ಮಾತ್ರ ನೆಲದ

ಮೇಲೆ ಕುಳಿತುಕೊಳ್ಳುತ್ತಾರೆ. ಇವರ ವಿನಃ ಬೇರೆ ಯಾರೂ ಕುಳಿತುಕೊಳ್ಳುವುದಿಲ್ಲ. ಈ ಜಟ್ಟಿಗಳು ದೇವದಾಸಿಯರು ರಾಜನ ಸಮ್ಮುಖದಲ್ಲಿ ವೀಳೆಯ ಅಗಿಯಬಹುದು. ಇವರನ್ನು ಬಿಟ್ಟರೆ ಬೇರೆಯವರು ವೀಳೆಯ ಆಗಿಯುವಂತಿಲ್ಲ".[೨೦೪] ಎಂಬುದಾಗಿ ವಿವರಿಸಿದ್ದಾರೆ.

ವೇಶ್ಯೆಯರು ರಾಜನ ಅಂತಃಪುರದ ಸ್ತ್ರೀಯರ ಬಳಿಯಷ್ಟೆ ಅಲ್ಲದೇ ರಾಜರ ಮುಂದೆ ಸಹ ವೀಳೆಯ ಅಗಿಯಬಹುದಾಗಿತ್ತು. ಅಂದರೆ ರಾಜರಿಂದ ಮಾನ್ಯತೆಯನ್ನು ಪಡೆದವರಲ್ಲಿ ಪ್ರಮುಖರಾಗಿದ್ದರು. ಅಲ್ಲದೆ ವೇಶ್ಯೆಯರು ಶ್ರೀಮಂತ ಜೀವನ ನಡೆಸುತ್ತಾ ರಾಜ್ಯಕ್ಕೆ ತೆರಿಗೆಯನ್ನು ಪಾವತಿಸುತ್ತಿದ್ದರು. ಇದರಿಂದ ವೇಶ್ಯಾವೃತ್ತಿಯು ವಿಜಯನಗರ ಕಾಲದಲ್ಲಿ ಸಾಮಾನ್ಯ ವೃತ್ತಿಯಾಗಿದ್ದುದು ಸ್ಪಷ್ಟವಾಗುತ್ತದೆ. ಹಾಗಾಗಿಯೇ ಅವರು ಬೆಲೆಬಾಳುವ ವಸ್ತ್ರ ಮತ್ತು ಆಭರಣಗಳನ್ನು ಧರಿಸುತ್ತಿದ್ದರು ಅಲ್ಲದೇ ತಮ್ಮ ಬಳಿ ಬರುತ್ತಿದ್ದವರನ್ನು ಸೆಳೆಯಲು ಆ ರೀತಿಯ ಅಲಂಕಾರಿಕ ವಸ್ತ್ರ ಮತ್ತು ಆಭರಣಗಳನ್ನು ಹಾಗೆ ಧರಿಸುವುದು ಅವರಿಗೆ ಅಗತ್ಯವೂ ಆಗಿತ್ತು.

೩.೩.೧೮. ಸತಿಪದ್ಧತಿ

ಸತಿ ಸಹಗಮನವು ಸಾಮಾಜಿಕವಾಗಿ ಆಚರಣೆಯಲ್ಲಿದ್ದ ಒಂದು ಪದ್ಧತಿಯಾಗಿದೆ. ತನ್ನ ಪತಿಯ ಮರಣದ ನಂತರ ಪತ್ನಿಯೂ ಚಿತೆಯೇರುವ ಒಂದು ವ್ಯವಸ್ಥೆಯಿದು. ಈ ವ್ಯವಸ್ಥೆಯಲ್ಲಿ ಸತಿಯು ತನಗೆ ಇಚ್ಛೆಯಿದ್ದೋ ಅಥವಾ ಬಲವಂತವಾಗಿಯೋ ಮರಣವನ್ನಪ್ಪುವವಳು. ಈ ರೀತಿಯ ವ್ಯವಸ್ಥೆ ಭಾರತದಲ್ಲಷ್ಟೆ ಅಲ್ಲದೇ ಈಜಿಪ್ಟ್, ಗ್ರೀಕ್, ಚೀನಾ, ಸಿರಿಯಾ ಮುಂತಾದ ದೇಶಗಳಲ್ಲಿಯೂ ಆಚರಣೆಯಲ್ಲಿತ್ತು.[೨೦೫] ಭಾರತದಲ್ಲಿ ಸಿಂಧೂ ನಾಗರಿಕತೆ ಕಾಲದಲ್ಲಿ ದಂಪತಿಗಳನ್ನು ಒಂದೇ ಸಮಾಧಿಯಲ್ಲಿ ಹೂತಿರುವ ಕುರುಹುಗಳು ಪತ್ತೆಯಾಗಿವೆ.[೨೦೬] ಬಹುಶಃ ಇದೇ ಪ್ರಾಚೀನ ಭಾರತದಲ್ಲಿ ಸತಿಪದ್ಧತಿಯು ಅಸ್ತಿತ್ವದಲ್ಲಿತ್ತು ಎಂಬುದನ್ನು ತಿಳಿಸುವ ಮೊದಲ ಆಕರವಾಗಿದೆ.

ಇದು ಗುಪ್ತರ ಕಾಲದಲ್ಲಿಯು ಪ್ರಚಲಿತವಾಗಿತ್ತು. ಬಾಣನ ಹರ್ಷಚರಿತೆಯಲ್ಲಿ ರಾಜನಾದ ಹರ್ಷವರ್ಧನನ ತಾಯಿ ಯಶೋಮತಿ ಕ್ರಿ.ಶ.೬೦೦ರಲ್ಲಿ ಸತಿಯಾದಳು ಎಂಬುದನ್ನು ಉಲ್ಲೇಖಿಸುತ್ತದೆ. ಅಲ್ಲದೇ ಚಿತೆಯೇರುವ ವಿವರಗಳನ್ನು ಸಹ ಇದರಲ್ಲಿ ವಿವರಿಸಲಾಗಿದೆ.[೨೦೭]

ಈ ಪದ್ಧತಿಯು ವಿಜಯನಗರ ಕಾಲದಲ್ಲಿ ವ್ಯಾಪಕವಾಗಿ ಕಂಡುಬರುತ್ತದೆ. ದೇಶಿಯ ಸಾಹಿತ್ಯದೊಂದಿಗೆ, ವಿದೇಶಿಯ ಪ್ರವಾಸಿಗರು ತಾವು ಕಣ್ಣಾರೆ ಕಂಡ ಸತಿಪದ್ಧತಿಯ ದೃಶ್ಯಗಳನ್ನು ದಾಖಲಿಸಿದ್ದಾರೆ. ವಿಜಯನಗರಕ್ಕೆ ಭೇಟಿ ನೀಡಿದ್ದ ನಿಕೊಲೊ–ದೆ–ಕೊಂತಿ, ಬಾರ್ಬೋಸಾ, ನ್ಯೂನಿಜ್, ಫ್ರೆಡರಿಕ್ ಮುಂತಾದವರು ವಿಜಯನಗರದಲ್ಲಿ ಸತಿಪದ್ಧತಿಯನ್ನು ಯಾವ ರೀತಿಯಲ್ಲಿ ಆಚರಿಸಲಾಗುತ್ತಿತ್ತು ಎಂಬುದನ್ನು ವಿವರಿಸಿದ್ದಾರೆ. ವಿಜಯನಗರ ಕಾಲದಲ್ಲಿ ಇದೊಂದು ಸಂಸ್ಥೆಯಾಗಿ ಬೆಳೆದಿತ್ತು.

ನಂಜುಂಡ ಕವಿಯ ರಾಮನಾಥ ಚರಿತದಲ್ಲಿ ಸತಿಪದ್ಧತಿಯನ್ನು ಕುರಿತು,

ತನ್ನಳಿವುಳಿವ ಕೇಳುತ ಕೆಳದಿಯರಿಂದ
ಕನ್ನಡಿ ನಿಂಬೆವಣ್ಣಗಳನು
ವನ್ನಿಸುತಲ್ಲಿರ್ದ ನಿಜಸತಿಯರ ಮೊಗ
ಗನ್ನಡಿಗಳ ಕಂಡನೊಸೆದು[೨೦೮] ಎಂದಿದೆ.

ಸತಿಹೋಗುವಾಗ ಕನ್ನಡಿ, ನಿಂಬೆಹಣ್ಣುಗಳನ್ನು ಆಕೆ ಹಿಡಿದಿರುತ್ತಿದ್ದಳು ಎಂಬುದನ್ನು ತಿಳಿಸುತ್ತದೆ. ಇದನ್ನು ಮಹಾಸತಿಗಲ್ಲುಗಳಲ್ಲಿಯೂ ಕಾಣಬಹುದು.

ರಾಮನಾಥ ಚರಿತದ ಮತ್ತೊಂದು ಪದ್ಯದಲ್ಲಿ ಅದರ ಉಲ್ಲೇಖ ಈ ಮುಂದಿನಂತಿದೆ.

ವೀಣೆ ಕಿನ್ನರಿಗಳಂ ತನ್ನ ಪೆಸರ ಪದ
ಶ್ರೇಣಿಯನೊಸೆದು ಬಾಜಿಸುವ
ರಾಣೀ ವಾಸಗಳು ಕಂಡನು ಸುರು
ತ್ರಾಣಲಾಬ್ಧಿಬಾಡಬನು[೩೦೯]

ಸತಿಪದ್ಧತಿಯ ಮೆರವಣಿಗೆಯ ಸಂದರ್ಭದಲ್ಲಿ ಮಂಗಳ ವಾದ್ಯಗಳ ಘೋಷಣೆ ಯೊಂದಿಗೆ ಸತಿಯಾಗುವವಳನ್ನು ಕರೆದೊಯ್ಯಲಾಗುತ್ತಿತ್ತು. ಕುಮಾರರಾಮನ ಮರಣದ ನಂತರ ಅವನ ಮಡದಿಯರು ಸತಿಯಾದ ಬಗೆಗೆ ಹಾಗೂ ಸತಿ ಧರಿಸಿದ್ದ ಆಭರಣಗಳ ಕುರಿತು ನಂಜುಂಡ ಕವಿಯು ರಾಮನಾಥ ಹೀಗೆ ವಿವರಿಸಿದ್ದಾನೆ.

ಮುರಡಿಯ ಸರಪಣಿ ಮುಂಗಯ್ಯ ಮುರುಹಸ್ತ
ಸರ ಹೊನ್ನ ಬಳೆ ತೋಳ ಬಂದಿ
ಕರ ಮಸೆಯಲು ಮಾಸತಿಯರಾದರು ರಾಮ
ನರಸಿಯರಂದು ರಾಗದೊಳು[೩೧೦]

ಮುಂದುವರೆದು,

ಪಿಡಿದ ನಿಂಬೆಯ ಹಣ್ಣು ಕನ್ನಡಿಕಯ್ಯೊಳು
ಬಿಡದೆ ಮರೆಯಲಂದವರು
ಸಡಗರದಿಂ ಬಂದು ಹರಿಹರದೇವಿಯ
ರಡಿಗೆರಿಗಿದರು ಮೋಹರಿಸಿ[೩೧೧]

ಹೀಗೆ ಸತಿಯಾಗುವ ಸಂದರ್ಭದಲ್ಲಿ ಸತಿಯಾಗುವ ಮಹಿಳೆ ಮುಂಗೈ ಹಸ್ತಸರ, ಚಿನ್ನದ ಬಳೆ ತೋಳ್ಬಂದಿ, ಕರದಲ್ಲಿ ಹಿಡಿದ ನಿಂಬೆಹಣ್ಣು, ಕನ್ನಡಿ ಮುಂತಾದವುಗಳನ್ನು ಕುರಿತು ಹಾಗೂ ಸತಿಹೋಗುವ ಮೊದಲು ಮದುವಣಗಿತ್ತಿಯಂತೆ ಸರ್ವಾಲಂಕೃತ ಭೂಷಿತರಾಗಿರುತ್ತಿದ್ದರು ಸತಿಹೋಗುವ ಸ್ತ್ರೀಯರು ಎಂಬುದನ್ನು ರಾಮನಾಥ ಚರಿತವು ವಿವರಿಸುತ್ತದೆ.

ಅಂತೆಯೇ ವಿದೇಶಿ ಪ್ರವಾಸಿಗರ ವಿವರಣೆಗಳು ಸತಿಪದ್ಧತಿಯ ತಿಳಿಯಲು ಸಹಾಯಕ ವಾಗಿವೆ. ದುಆರ್ತೆ ಬಾರ್ಬೋಸಾ ಸತಿಪದ್ಧತಿಯನ್ನು ಕುರಿತು, "ಗಂಡ ಸತ್ತಾಗ ಹೆಂಡತಿ ಗಂಡನೊಂದಿಗೆ ಸಹಗಮನ ಮಾಡಲೇಬೇಕು. ಇದನ್ನು ಪತಿಭಕ್ತಿ ಎಂದು ಭಾವಿಸುತ್ತಾರೆ. ಬಡವಳಾದವಳು ತನ್ನ ಆತ್ಮ ಸಂತೋಷದಿಂದ ಸೀದಾ ಹೋಗಿ ಗಂಡನ ಚಿತೆಯಲ್ಲಿ ಬಿದ್ದು ಸಾಯುತ್ತಾಳೆ. ಅನುಕೂಲಸ್ಥಳಾದವಳು ಚಿತೆಗೆ ಬೀಳುವ ಮುನ್ನ ನೆಂಟರಿಷ್ಟರನ್ನೆಲ್ಲಾ ಸೇರಿಸಿ ಊಟೋಪಚಾರ ಮಾಡಿ, ಬಿಳಿ ಅಥವಾ ಬೂದು ಬಣ್ಣದ ಕುದುರೆಯ ಮೇಲೆ ಮೆರವಣಿಗೆ ಹೊರಡುತ್ತಾಳೆ. ಚಿತೆಯೇರುವ ಮೊದಲು ತಾನು ತೊಟ್ಟ ಆಭರಣಗಳನ್ನೆಲ್ಲಾ ತನ್ನ ನೆಂಟರಿಷ್ಟರಿಗೆ ಹಂಚಿ ಬಿಡುತ್ತಾಳೆ. ಕೊನೆಗೆ ಸೊಂಟಕ್ಕೆ ಸುತ್ತಿದ ಬಟ್ಟೆ ಮಾತ್ರ ಉಳಿಯುತ್ತೆ".[೩೧೨]

ಸೀಜರ್ ಫ್ರೆಡರಿಕ್‌ನ ವಿವರಣೆಗಳು ಬಾರ್ಬೋಸಾ ನೀಡುವ ಸತಿಪದ್ಧತಿಯ ವಿವರಣೆಯನ್ನು ಪುಷ್ಠೀಕರಿಸುತ್ತವೆ. ಇದರೊಂದಿಗೆ ರಾಮನಾಥ ಚರಿತದ ಮೇಲಿನ ಪದ್ಯಗಳಿಗೆ ವಿವರಣೆ ನೀಡುವುದಕ್ಕೆ ಪೂರಕ ಆಕರವಾಗಿವೆ. ಫ್ರೆಡೆರಿಕ್ ಹೇಳುವಂತೆ, "ಸತಿಯಾಗುವ ಸ್ತ್ರೀ ವಧುವಿನಂತೆ ಅಲಂಕಾರ ಮಾಡಿ ಕೊಂಡಿರುತ್ತಾಳೆ, ತಲೆ ಕೂದಲನ್ನು ಇಳಿಯಬಿಟ್ಟಿರುತ್ತಾಳೆ. ತನ್ನ ಅಂತಸ್ತಿಗನುಗುಣವಾಗಿ ಒಡವೆ ವಸ್ತ್ರಗಳನ್ನು ಹಾಕಿಕೊಂಡಿರುತ್ತಾಳೆ. ಊರಿನಲ್ಲೆಲ್ಲಾ ಆಕೆಯ ಮೆರವಣಿಗೆಯಾಗುತ್ತದೆ. ವೆನಿಸ್‌ನಲ್ಲಿ ಮದುವೆಗೆ ಹೊರಟ ಹೆಣ್ಣಿನ ಮೆರವಣಿಗೆಯಂತೆ ಆಕೆಯ ಎಡಗೈಯಲ್ಲಿ ಕನ್ನಡಿ, ಬಲಗೈಯಲ್ಲಿ ಒಂದು ಬಾಣ ಇರುತ್ತದೆ. ನದಿಯ ಬಳಿ ಹೋಗಿ ತನ್ನ ವಸ್ತ್ರ ಮತ್ತು ಆಭರಣಗಳನ್ನೆಲ್ಲಾ ಕಳಚಿ ತನ್ನ ತಂದೆ ತಾಯಿಗಳಿಗೂ, ನೆಂಟರಿಷ್ಟರಿಗೂ ಕೊಟ್ಟು ಒಂದು ಬಟ್ಟೆಯನ್ನು ಸುತ್ತಿಕೊಂಡು ನದಿಯಲ್ಲಿ ಸ್ನಾನಮಾಡಿ ಹದಿನಾಲ್ಕು ಮೊಳ ಉದ್ದದ ಅರಿಸಿನದ ಬಟ್ಟೆಯನ್ನು ಉಟ್ಟುಕೊಳ್ಳುತ್ತಾಳೆ".[೩೧೩] ಇದು ವಿಜಯನಗರ ಕಾಲದಲ್ಲಿದ್ದ ಸತಿಪದ್ಧತಿಗೆ ಜೀವಂತ ಉದಾಹರಣೆಯಾಗಿದೆ.

ಸತಿಪದ್ಧತಿಯು ರಾಜಮನೆತನಗಳಲ್ಲಿಯು ಸಹ ಆಚರಣೆಯಲ್ಲಿತ್ತು. ಈ ಕುರಿತು ನಂಜುಂಡ ಕವಿಯ ರಾಮನಾಥ ಚರಿತದಲ್ಲಿ ಕುಮಾರರಾಮ ಮರಣಿಸಿದ ನಂತರ ಆತನ ಸತಿಯರು ಸತಿಯಾದರು ಎಂಬುದನ್ನು ಈ ಹಿಂದೆ ತಿಳಿದಿದ್ದೇವೆ. ಅದಕ್ಕೆ ಬಾರ್ಬೋಸ ಮತ್ತು ನ್ಯೂನಿಜ್‌ರ ವಿವರಣೆಗಳು ಸಮರ್ಥನೆಯನ್ನು ನೀಡುತ್ತವೆ.

ಬಾರ್ಬೋಸಾ ದಾಖಲಿಸಿದಂತೆ, "ರಾಜನು ಸತ್ತರೆ ಅವನ ಅಂತಃಪುರದ ನಾನೂರು–ಐನೂರು ಸ್ತ್ರೀಯರು ಅವನೊಡನೆ ಚಿತೆಯಲ್ಲಿ ಬೀಳುತ್ತಾರೆ. ಇಷ್ಟು ಜನರ ಅನುಕೂಲಕ್ಕಾಗಿ ಚಿತೆಯ ಗುಂಡಿಯನ್ನು, ಚಿತಾಗ್ನಿಯನ್ನು ಬಹಳ ದೊಡ್ಡದು ಮಾಡಿರುತ್ತಾರೆ. ಈ ಚಿತೆಯಲ್ಲಿ ಬೀಳುವುದಕ್ಕೆ ನಾ ಮುಂದು, ತಾ ಮುಂದು ಎಂದು ನುಗ್ಗುತ್ತಾರೆ. ಅದೊಂದು ಅಪೂರ್ವ ದೃಶ್ಯ!"[೩೧೪] ಎಂದು ವಿವರಿಸುತ್ತಾನೆ. ಇದೇ ರೀತಿಯ ಹೇಳಿಕೆಯನ್ನು ನ್ಯೂನಿಜ್ ರಾಯಚೂರು ಕೋಟೆಯ ಮುತ್ತಿಗೆಯ ಆರಂಭದಲ್ಲಿ "ಕೃಷ್ಣದೇವರಾಯನು ತನ್ನ ಬೆರಳಿನಿಂದ ಒಂದು ಉಂಗುರವನ್ನು ಬಿಚ್ಚಿ ತನ್ನ ಸೇವಕನೊಬ್ಬನ ಕೈಯಲ್ಲಿ ಕೊಟ್ಟು, ತಾನು ಸತ್ತರೆ ಅದನ್ನು ತನ್ನ ರಾಣಿಯರಿಗೆ ತೋರಿಸಬೇಕೆಂದೂ, ಅದನ್ನು ನೋಡಿ ಅವರು ಚಿತೆಯೇರುವರೆಂದೂ ಹೇಳಿದನು".[೩೧೫] ಬಾರ್ಬೋಸ ಮತ್ತು ನ್ಯೂನಿಜ್‌ರ ವಿವರಗಳಿಂದ ರಾಜಮನೆತನದಲ್ಲಿ ಸತಿಪದ್ಧತಿ ಆಚರಣೆಯಲ್ಲಿತ್ತು ಎಂಬುದು ಸ್ಪಷ್ಟವಾಗುತ್ತದೆ. ಹಾಗಾಗಿ ಸಹಜವಾಗಿ ರಾಜ ಮನೆತನದ ಸ್ತ್ರೀಯರು ಬೆಲೆಬಾಳುವ ವಸ್ತ್ರ ಮತ್ತು ಆಭರಣಗಳನ್ನು ಧರಿಸುತ್ತಿದ್ದರು ಎಂಬುದು ಈಗಾಗಲೇ ತಿಳಿದಿರುವ ವಿಷಯವಾಗಿದ್ದು, ಅವುಗಳನ್ನು ಸತಿಯಾಗುವಾಗ ಇತರರಿಗೆ ಹಂಚುತ್ತಿದ್ದರು ಎಂಬುದನ್ನು ಅರಿಯಲು ಸಾಧ್ಯವಾಗುತ್ತದೆ. ಸತಿಯಾಗುವ ಸ್ತ್ರೀಯರ ಅಂತಸ್ತಿಗೆ ಅನುಗುಣವಾಗಿ ಅವಳ ವಸ್ತ್ರ ಮತ್ತು ಆಭರಣಗಳು ಇರುತ್ತಿದ್ದವು. ಚಿತೆಗೆ ಹಾರುವಾಗ ಅಥವಾ ಸತಿಯಾಗುವಾಗ ಆಕೆ ಹಳದಿ ಅಥವಾ ಅರಿಶಿನ ಬಣ್ಣದ ವಸ್ತ್ರವೊಂದನ್ನು ಮಾತ್ರ ಧರಿಸಿರುತ್ತಿದ್ದಳು ಎಂಬುದು ಸ್ಪಷ್ಟವಾಗುತ್ತದೆ.

ಸತಿಪದ್ಧತಿ ಹಿಂದೂ ಸಮಾಜದಲ್ಲಿ ಅಷ್ಟೇ ಜಾರಿಗೆ ಇರಲಿಲ್ಲ. ಮುಸ್ಲಿಂ ಸಮಾಜದಲ್ಲಿಯೂ ಆಚರಣೆಯಲ್ಲಿತ್ತು ಎಂಬ ಅಂಶವನ್ನು ಬುಲಾತಿನೆ–ಸಲಾತೀನ ಎಂಬ ಗ್ರಂಥ ತಿಳಿಸುತ್ತದೆ.

ವಿಜಯನಗರ ಸಾಮ್ರಾಜ್ಯದ ಸಮಕಾಲೀನ ಸಾಮ್ರಾಜ್ಯವಾದ ಬಹುಮನಿ ಸುಲ್ತಾನರ ಕಾಲದಲ್ಲಿ ಈ ಪದ್ಧತಿ ಆಚರಣೆಯಲ್ಲಿದ್ದುದ್ದನ್ನು ಈ ಮುಂದಿನಂತೆ ವಿವರಿಸಲಾಗಿದೆ. ತಾಳಿಕೋಟೆಯ ಯುದ್ಧದ ಸಂದರ್ಭದಲ್ಲಿ, "ಈ ಯುದ್ಧದಲ್ಲಿ ನಿಜಾಮಷಹನ ಜೊತೆಗೆ ಅವನ ಒಂದು ನೂರು ಖಾಸಾ ಮದುವೆಯಾದ ಹೆಂಡತಿಯರಿದ್ದರು. ಪ್ರತಿಯೊಬ್ಬ ಸ್ತ್ರೀಯ–ಜೊತೆ ಒಬ್ಬ ಖೋಜ (ನಪುಂಸಕ)ನನ್ನು ಬಿಚ್ಚುಗತ್ತಿ ಯೊಂದಿಗೆ ಇಟ್ಟಿದ್ದನು. ಯಾಕೆಂದರೆ ಕಾರ್ಯಭಾರವು ವಿಪರೀತವಾಗಿ ಒಂದು ವೇಳೆ ನಿಜಾಮಷಹನು ಸತ್ತರೆ ಆ ಖೋಜಾಗಳು ತಕ್ಷಣ ತಮ್ಮ ಬಿಜ್ಜುಗತ್ತಿಯಿಂದ ಆ ಸ್ತ್ರೀಯರನ್ನು ಕತ್ತರಿಸಿ ಹಾಕಬೇಕು. ಇದನ್ನೆಲ್ಲಾ ಕಂಡ ರಾಮರಾಯನು ಮುಸಲ್ಮಾನ ಜನರು ಕೊನೆಯ ಯುದ್ಧಕ್ಕಾಗಿ ಬಂದಿದ್ದರೆಂದು ಖಚಿತಪಡಿಸಿಕೊಂಡನು".[೩೧೬]

ವಿಧವಾ ಸ್ತ್ರೀಯರು ಉಡುವ ಬಿಳಿಯ ವಸ್ತ್ರವನ್ನು ಕುರಿತು ಬುಲಾತಿನೆ–ಸಲಾತೀನ ಹೀಗೆ ವಿವರಿಸಿದೆ, "ಅಲಿ ಆದಿಲ್‌ಷಹಾ ಬಾದಷಹನು ರಾಣಿವಾಸದ ಒಬ್ಬ ಕುಣಬೀ ಸೇವಕಿಗೆ ಹೇಳುತ್ತಾ, ನಮ್ಮ ರಾಣಿಯರಿಗೆ ಉಡಲು ವಸ್ತ್ರಗಳನ್ನು ಕೇಳಿದ್ದಾರೆ, ಎಂದು ಹೇಳುತ್ತಾ, ಈ ವಿಧವಾದ ವಸ್ತ್ರಗಳನ್ನು ರಾಣಿಯರಿಗೆ ನೀಡಲು ಸೇವಕರಿಗೆ ಆಜ್ಞೆ ಮಾಡಿದನು, ಬಿಳಿ ವಸ್ತ್ರಗಳನ್ನು ಕೊಡು ಯಾಕೆಂದರೆ ದಕ್ಷಿಣ ದೇಶದಲ್ಲಿ ವಿಧವಾ ಸ್ತ್ರೀಯರು ಬಿಳಿ ವಸ್ತ್ರಗಳನ್ನು ಉಡುವುದು ರೂಢಿಯಲ್ಲಿದೆ ಎಂದನು".[೩೧೭] ಇದರಿಂದ ದಕ್ಷಿಣ ದೇಶದಲ್ಲಿ ವಿಧವಾ ಸ್ತ್ರೀಯರು ಶ್ವೇತವರ್ಣದ ವಸ್ತ್ರಗಳನ್ನು ಧರಿಸುತ್ತಿದ್ದರು ಎಂಬುದು ಸ್ಪಷ್ಟವಾಗುತ್ತದೆ.

ಒಟ್ಟಾರೆ ಸತಿಪದ್ಧತಿ ಹಿಂದೂ ಮತ್ತು ಮುಸ್ಲಿಂ ಸಮಾಜದಲ್ಲಿ ಅಸ್ತಿತ್ವದಲ್ಲಿತ್ತು ಎಂಬುದು ಕಂಡುಬರುತ್ತದೆ. ಈ ರೀತಿ ಸತಿಯಾಗುತ್ತಿದ್ದ ಮಹಿಳೆಯರ ಸ್ಮರಣಾರ್ಥವಾಗಿ ಕಲ್ಲುಗಳನ್ನು ನೆಡುತ್ತಿದ್ದರು. ಇವುಗಳನ್ನು ಮಾಸ್ತಿಕಲ್ಲು ಎಂದು ಕರೆಯುತ್ತಾರೆ. ವಿಜಯನಗರ ಕಾಲದ ಸ್ಮಾರಕಶಿಲ್ಪಗಳಲ್ಲಿ ಹಲವಾರು ಮಾಸ್ತಿಕಲ್ಲುಗಳನ್ನು ಕಾಣಬಹುದು. ಅಲ್ಲದೆ ಸತಿಪದ್ಧತಿಯ ಕುರಿತು ಹಲವಾರು ಶಾಸನಗಳಲ್ಲಿ ಉಲ್ಲೇಖಗಳು ಲಭ್ಯವಿವೆ.

ಹಂಪಿಯ ಕಮಲಾಪುರದ ವಸ್ತು ಸಂಗ್ರಹಾಲಯದಲ್ಲಿರುವ ಮಾಸ್ತಿಕಲ್ಲು(ಚಿತ್ರ–೫೩) ಒಂದರಲ್ಲಿ, ಸ್ತ್ರೀಯು ತುರುಬನ್ನು ಹಾಕಿದ್ದು, ದೊಡ್ಡದಾದ ವೃತ್ತಕುಂಡಲವನ್ನು, ಕಂಠೀಹಾರ ಮತ್ತು ಸ್ತನಹಾರ, ಮುಂಗೈಸರ, ತೋಳ್ಬಂಧಿ, ಕೈಕಡಗ ಹಾಗೂ ದಪ್ಪ ಕಾಲ್ಕಡಗ ಧರಿಸಿದ್ದಾಳೆ. ಸ್ತ್ರೀಯು ಕಚ್ಚೆ ಹಾಕಿ ಧರಿಸಿರುವ ಸೀರೆಯ ಮೇಲೆ ಮೇಖಲೆಯನ್ನು ಧರಿಸಿದ್ದಾಳೆ.

೩.೪. ದಾರ್ಶನಿಕರು

೩.೪.೧. ಯತಿಗಳು

ರಾಮಾನುಜಾಚಾರ್ಯರು

ಶ್ರೀರಾಮಾನುಜಾಚಾರ್ಯರು ಕ್ರಿ.ಶ. ೧೦೩೭ ರಿಂದ ೧೧೩೭ರ ವರೆಗೂ ಜೀವಿಸಿದ್ದು, ತಾವು ಜೀವಿಸಿದ ಅವಧಿಯವರೆಗೂ ಧರ್ಮಪ್ರಚಾರ ಕಾರ್ಯಕೈಗೊಂಡು ತಮಿಳುನಾಡು ಮತ್ತು ಕರ್ನಾಟಕದಾದ್ಯಂತ ಶ್ರೀವೈಷ್ಣವ ಮತಪ್ರಚಾರಕ್ಕೆ ಕಾರಣರಾದರು. ಇವರು ಕ್ರಿ.ಶ. ೧೧೩೮ರಲ್ಲಿ

ಕರ್ನಾಟಕಕ್ಕೆ ಆಗಮಿಸಿ ಸುಮಾರು ೪೨ ವರ್ಷಗಳ ಕಾಲ ತೊಣ್ಣೂರು ಮತ್ತು ಮೇಲುಕೋಟೆಯನ್ನು ಕೇಂದ್ರವನ್ನಾಗಿ ಮಾಡಿಕೊಂಡು ಧರ್ಮಪ್ರಚಾರ ಕೈಗೊಂಡರು. ಇವರ ವ್ಯಕ್ತಿತ್ವದ ಪ್ರಭಾವದಿಂದ ಕಾಲಾನಂತರದಲ್ಲಿ ಇವರ ಭಕ್ತರಾದ ಶ್ರೀವೈಷ್ಣರವರಿಗೆ ಉಚಿತ ಅಶನಕ್ಕಾಗಿ ರಾಮಾನುಜರ ಹೆಸರಿನಲ್ಲಿ ರಾಮಾನುಜಕೂಟಗಳನ್ನು ಏರ್ಪಡಿಸುವುದು ಸಹ ತಮ್ಮ ಗುರುಗಳಿಗೆ ಭಕ್ತಿಪೂರ್ವಕವಾಗಿ ಸಲ್ಲಿಸುವ ಸೇವೆ ಎಂದು ಭಾವಿಸಲಾಗಿತ್ತು.

ಮೇಲುಕೋಟೆಯ ಕ್ರಿ.ಶ.೧೨೫೬ರ ಒಂದು ಶಾಸನದಲ್ಲಿ ಮೊದಲ ಬಾರಿಗೆ ರಾಮಾನುಜ ಕೂಟದ ಪ್ರಸ್ತಾಪವಿದೆ.[೨೧೮] ವಿಜಯನಗರ ಕಾಲದಲ್ಲಿಯೂ ರಾಮಾನುಜ ಕೂಟಗಳು ಕಂಡುಬರುತ್ತವೆ. ಈ ರೀತಿಯ ರಾಮಾನುಜಕೂಟಕ್ಕೆ ದಾನ ನೀಡಿರುವುದನ್ನು ಶಾಸನಗಳಲ್ಲಿ ಕಾಣಬಹುದಾಗಿದೆ. ಶ್ರೀಕೃಷ್ಣದೇವರಾಯನ ಅವಧಿಯ ಚಿಕ್ಕಬೆಟ್ಟಹಳ್ಳಿಯ ಕ್ರಿ.ಶ. ೧೫೨೪ರ ಶಾಸನದಲ್ಲಿ, "ಸಿಂಗಪ್ಪನಾಯಕನು ಸಿಂಗಾಪುರ ಗ್ರಾಮದಲ್ಲಿರುವ ತಿರುವೆಂಗಳನಾಥ ದೇವಾಲಯದ ರಾಮಾನುಜಕೂಟದ ನಿರ್ವಹಣೆಗಾಗಿ ಹಿರಿಯ ವರದಿರಾಜಯ್ಯನೆಂಬುವನಿಗೆ ಚಿಕ್ಕಬೆಟ್ಟದಹಳ್ಳಿಯನ್ನು ದಾನವಾಗಿ ನೀಡಿದನು".[೨೧೯] ಇದು ಶ್ರೀಕೃಷ್ಣದೇವರಾಯನ ಅವಧಿಯ ಶಾಸನದಲ್ಲಿ ಮೊದಲ ಬಾರಿಗೆ ಉಲ್ಲೇಖವಾಗಿರುವ ರಾಮಾನುಜಕೂಟವಾಗಿದೆ.

ರಾಮಾನುಜಕೂಟವೆಂದರೆ ಶ್ರೀವೈಷ್ಣವರ ಗುಂಪು, ಬಳಗ ಎಂದು ಅರ್ಥ. ಬಾ.ರಾ. ಗೋಪಾಲರ ಅಭಿಪ್ರಾಯದಂತೆ ರಾಮಾನುಜಕೂಟವೆಂದರೆ ಶ್ರೀವೈಷ್ಣವರು ತಂಗುವ ಹಾಗೂ ಅವರಿಗೆ ಆಹಾರವನ್ನು ಒದಗಿಸಲು ಇರುವ ಮನೆ ಎಂದು ಹೇಳುವರು.[೨೨೦] ಅಂದರೆ ಈ ರಾಮಾನುಜಕೂಟಕ್ಕೂ ಮತ್ತು ಸುಪ್ರಸಿದ್ಧ ಶ್ರೀವೈಷ್ಣವ ಯತಿಗಳಾದ ಶ್ರೀರಾಮಾನುಜಾಚಾರ್ಯರಿಗೂ ಸಂಬಂಧವಿರುವುದು ತಿಳಿದುಬರುತ್ತದೆ.

ವಿಜಯನಗರದ ರಾಜರು ಧರ್ಮಸಹಿಷ್ಣುಗಳಾಗಿದ್ದರು. ಕೃಷ್ಣದೇವರಾಯನ ಕಾಲದಲ್ಲಿ ಈ ಕ್ರಮ ಮುಂದುವರೆದರೂ ಶ್ರೀವೈಷ್ಣವ ಧರ್ಮವು ಹೆಚ್ಚಿನ ಪ್ರಾಧಾನ್ಯತೆ ಪಡೆದುಕೊಂಡಿತ್ತು.

ರಾಮಾನುಜಚಾರ್ಯರ ಶಿಲ್ಪಗಳನ್ನು ವಿಜಯನಗರ ಕಾಲದ ಹಂಪಿಯ ವಿಜಯವಿಠಲ, ಅನಂತಶಯನ, ಪಟ್ಟಾಭಿರಾಮ ದೇವಾಲಯಗಳಲ್ಲಿನ ಸ್ತಂಭಗಳಲ್ಲಿ ಕಾಣಬಹುದಾಗಿದೆ.

ವಿಜಯವಿಠಲ ದೇವಾಲಯದ ಕಲ್ಯಾಣ ಮಂಟಪದ ಸ್ತಂಭದ ಮೇಲಿನ ಶಿಲ್ಪ ವೊಂದರಲ್ಲಿರುವ (ಚಿತ್ರ–೫೪) ರಾಮಾನುಜಾಚಾರ್ಯರು ಬಲಗೈಯಲ್ಲಿ ಬಾವುಟ ಹಿಡಿದು ಬಲಭುಜಕ್ಕೆ ಒರಗಿಸಿಕೊಂಡು ಅಂಜಲಿ ಹಸ್ತದಲ್ಲಿದ್ದಾರೆ. ಚದುರಿದ ಜಟೆ, ಧೋತ್ರವನ್ನು ಪಾದಗಳವರೆಗೆ ಪೂರ್ಣೋರುಕವನ್ನು ಧರಿಸಿದ್ದು ಜೋಲಾಡುವ ಉದ್ದ ಸರಪಳಿಯ ಕರ್ಣಾಭರಣ, ಮುಂಗೈಗೆ ಎರಡೆಳೆಯ ರುದ್ರಾಕ್ಷಿಯ ಕಡಗ, ಎರಡೆಳೆಯ ಹಾಗೂ ದೊಡ್ಡ ಪದಕವಿರುವ ಹಾರ ಧರಿಸಿದ್ದಾರೆ.

ಅದೇ ದೇವಾಲಯದ ಮತ್ತೊಂದು ಶಿಲ್ಪದಲ್ಲಿ ರಾಮಾನುಜಚಾರ್ಯರು ಧರಿಸಿರುವ ಉದ್ದವಾದ ಎರಡೆಳೆಯ ರುದ್ರಾಕ್ಷಿಯ ಸರವು ನಾಭಿಯವರೆಗೆ ಇದೆ. ಅಲ್ಲದೇ ಹಣೆಗೆ ನಾಮವನ್ನು ಇಟ್ಟಿದ್ದಾರೆ. ರಾಮಾನುಚಾರ್ಯರ ಶಿಲ್ಪಗಳಲ್ಲಿನ ವಸ್ತ್ರ ಮತ್ತು ಆಭರಣಗಳು ತುಂಬಾ ಸರಳವಾಗಿವೆ.

ವ್ಯಾಸರಾಯರು

ವ್ಯಾಸರಾಯರ ಮೂಲ ಹೆಸರು ವ್ಯಾಸತೀರ್ಥರು. ಇವರು ವಿಜಯನಗರ ಅರಸೊತ್ತಿಗೆಯ ಆರು ಜನ ಚಕ್ರವರ್ತಿಗಳಾದ ಸಾಳುವನರಸಿಂಹ, ವೀರನರಸಿಂಹ, ಶ್ರೀಕೃಷ್ಣ ದೇವರಾಯ, ಅಚ್ಯುತರಾಯ, ಸದಾಶಿವರಾಯ ಮೊದಲಾದ ರಾಜರಿಗೆ, ರಾಜಗುರುಗಳಾಗಿ, ಆಪ್ತರಾಗಿ, ಮಾರ್ಗದರ್ಶಕರಾಗಿ ವಿಜಯನಗರದ ಅಂಚಿನವರೆಗೂ ಇದ್ದರು ಹಾಗೂ ಈ ಸಾಮ್ರಾಜ್ಯ ವೈಭವ ತಲುಪಲು ಕಾರಣರಾದವರಲ್ಲಿ ಇವರೂ ಒಬ್ಬರೆಂದು ಹೇಳಲಾಗುತ್ತದೆ.

ಶ್ರೀಕೃಷ್ಣದೇವರಾಯನ ಕಾಲದಲ್ಲಿ ರಾಜನಿಗೆ ಒದಗಿದ್ದ ಕುಹೂಯೋಗ (ದುಷ್ಪಗ್ರಹ ಬಾಧೆ)ವನ್ನು ಸ್ವತಃ ಶ್ರೀವ್ಯಾಸರಾಯರೇ ಮೂರುಮುಕ್ಕಾಲು ಘಳಿಗೆ ಅಂದರೆ ಒಂದೂವರೆ ಘಂಟೆಗಳ ಕಾಲ ವಿಜಯನಗರ ಸಿಂಹಾಸನವನ್ನೇರಿ, ಸಾಮ್ರಾಜ್ಯ ಪರಿಪಾಲಿಸಿ, ನಂತರ ಶ್ರೀಕೃಷ್ಣದೇವರಾಯರಿಗೆ ಸಿಂಹಾಸನ ಹಿಂದಿರುಗಿಸಿದರು. ಈ ಕಾರಣದಿಂದ ವ್ಯಾಸತೀರ್ಥ ರಾಗಿದ್ದ ಇವರು ಮುಂದೆ ವ್ಯಾಸರಾಜರೆಂದು ಹೆಸರಾದರು. ಹೀಗೆ ಶ್ರೀಕೃಷ್ಣದೇವರಾಯನಿಗೆ ಎದುರಾಗಿದ್ದ ಕುಹೂಯೋಗದಿಂದ ಪಾರುಮಾಡಿದ ಕಾರಣಕ್ಕೆ ರಾಯರು ವ್ಯಾಸರಾಯರಿಗೆ ರತ್ನಾಭರಣಗಳಿಂದ ಅಭಿಷೇಕ ಮಾಡಿದ ಬಗೆಗೆ ತಿರುಪತಿ ತಿರುಮಲದಲ್ಲಿರುವ ಶಾಸನಗಳು ತಿಳಿಸುತ್ತವೆ.

ಸಾಳುವ ನರಸಿಂಹನ ಕಾಲದಲ್ಲಿ ವಿಜಯನಗರಕ್ಕೆ ಸೇರಿದ್ದ ತಿರುಪತಿ ತಿರುಮಲೆ ದೇವಸ್ಥಾನದ ಅರ್ಚಕ ಕುಟುಂಬದವರು ದೇವರ ಒಡವೆಗಳನ್ನು ಕದ್ದು, ತಮ್ಮ ಸ್ವಂತಕ್ಕೆ ದುರುಪಯೋಗ ಪಡಿಸಿಕೊಳ್ಳುತ್ತಿದ್ದುದು ತಿಳಿದಾಗ, ಅವರನ್ನು ಪೂಜಾ ಕೈಂಕರ್ಯದಿಂದ ಬಿಡಿಸಿದರು. ಇದರಿಂದ ಅಪಮಾನಗೊಂಡ ಇಡೀ ಅರ್ಚಕರ ಕುಟುಂಬವೇ ಆತ್ಮಹತ್ಯೆ ಮಾಡಿಕೊಂಡಿತು. ಹೀಗಾಗಿ ದೇವರ ದೈನಂದಿನ ಪೂಜಾ ಕಾರ್ಯವೇ ಕೆಲಕಾಲ ನಿಂತು ಹೋಯಿತು. ಆಗ ಸಾಳುವ ನರಸಿಂಹನು ವ್ಯಾಸರಾಯರನ್ನು ಪ್ರಾರ್ಥಿಸಲು, ಇವರು ತಿರುಪತಿ ತಿರುಮಲೆಗೆ ಹೋಗಿ ಹನ್ನೆರಡು ವರ್ಷಗಳ ಕಾಲ (ಕ್ರಿ.ಶ.೧೪೮೬–೧೪೯೮)ಗಳವರೆಗೆ ತಿರುಪತಿ ಶ್ರೀನಿವಾಸನ ಪೂಜಾಕಾರ್ಯ ಗಳನ್ನು ನೆರವೇರಿಸಿ, ಅನಂತರ ವಿಜಯನಗರಕ್ಕೆ ಹಿಂತಿರುಗಿದರು.[೩೧]

ಹೀಗೆ ವ್ಯಾಸರಾಯರ ದೈವಭಕ್ತಿಗೆ ನಮಿಸಿ ವಿಜಯನಗರದ ರಾಜರು ಹಲವಾರು ದಾನಗಳನ್ನು ನೀಡಿದ್ದಾರೆ. ವಿಠಲ ದೇವಾಲಯದ ಕ್ರಿ.ಶ.೧೫೧೩ ಶಾಸನದಲ್ಲಿ ವಿಠಲ ದೇವರಿಗೆ ಬಿಟ್ಟ ದಾನದಲ್ಲಿ ಎರಡು ಪಾಲು ವ್ಯಾಸರಾಯರಿಗೆ ಸೇರಬೇಕೆಂದು ತಿಳಿಸುತ್ತದೆ.[೩೨] ತಿರುಪತಿಯಲ್ಲಿ ಮಠದ ಧರ್ಮಕ್ಕೆಂದು ರಾಯನ ಹೆಸರಿನಲ್ಲಿ ದೇವರಿಗೆ ಸಲ್ಲುವ ನೈವೇದ್ಯ ಪ್ರಸಾದದ ಒಂದು ಪಾಲನ್ನು ವ್ಯಾಸತೀರ್ಥರಿಗೆ ಸಲ್ಲಬೇಕೆಂದೂ ಕ್ರಿ.ಶ. ೧೫೨೪ರ ಶಾಸನವು ತಿಳಿಸುತ್ತದೆ.[೩೩]

ವ್ಯಾಸರಾಯರು ವಿಜಯನಗರ ಅರಸರಿಗೆ ಮಾರ್ಗದರ್ಶನವನ್ನು ನೀಡುವ ಜೊತೆಯಲ್ಲಿ ತಮ್ಮ ಶಿಷ್ಯರಾಗಿದ್ದ ಪುರಂದರದಾಸರು ಮತ್ತು ಕನಕದಾಸರಿಗೆ ದೀಕ್ಷೆಯನ್ನು ನೀಡಿದ್ದಾರೆ. ವ್ಯಾಸರಾಯರ ವಸ್ತ್ರ ಮತ್ತು ಆಭರಣಕ್ಕೆ ಸಂಬಂಧಿಸಿದಂತೆ ತಿಳಿಯಲು ವಿಜಯನಗರದ ಉಬ್ಬು ಶಿಲ್ಪಗಳು ಸಹಕಾರಿಯಾಗುತ್ತವೆ.

ಹಂಪಿಯ ವಿಠಲ ದೇವಾಲಯದ ಗೋಪುರದ ಗಾರೆಶಿಲ್ಪದಲ್ಲಿ ಚತುರ್ಭುಜನಾದ ವೆಂಕಟೇಶ್ವರಮೂರ್ತಿಯು ಸ್ಥಾನಿಕ ಭಂಗಿಯಲ್ಲಿದೆ. ದೇವರ ಬಲಭಾಗದಲ್ಲಿ ರಾಜ ಅಂಜಲಿ ಹಸ್ತದಲ್ಲಿ ನಿಂತಿದ್ದಾನೆ. ಎಡಭಾಗದಲ್ಲಿ ಒಬ್ಬ ಯತಿ ನಿಂತಿದ್ದಾನೆ. ಈ ಶಿಲ್ಪದಲ್ಲಿರುವ ಯತಿಯು ಕಮಂಡಲವನ್ನು ತನ್ನ ಎಡಗೈಯಲ್ಲಿ ಹಿಡಿದಿದ್ದು, ಬಲಗೈಯನ್ನು ಎದೆಯ ಮೇಲಿಟ್ಟುಕೊಂಡು ಸ್ವಾಮಿಯನ್ನು ಸ್ಮರಿಸುತ್ತಿರುವಂತಿದೆ. ಜಟಾಮಕುಟಧಾರಿಯಾಗಿದ್ದು, ಸಣ್ಣಕುಂಡಲಗಳು, ಎರಡೆಳೆಯ ರುದ್ರಾಕ್ಷಿಸರ, ತೋಳ್ಬಂದಿ, ಯಜ್ಞೋಪವೀತ ಧರಿಸಿದ್ದು, ಮುನಿಯು ಅರ್ಧೋರುಕದಲ್ಲಿ ಧೋತ್ರ ವನ್ನು, ಉತ್ತರೀಯವನ್ನು ಧೋತ್ರದ ಮೇಲೆ ಅಗಲವಾಗಿ ಬರುವಂತೆ ಕಟ್ಟಿಕೊಂಡಿದ್ದಾರೆ. ಹಣೆಯ ಮೇಲೆ ಗಂಧ ಹಚ್ಚಿರುವುದು ಗಮನಾರ್ಹ.

ಹಂಪಿಯ ವಿಠಲ ದೇವಾಲಯದ ಭಜನಮಂದಿರದ ಸ್ತಂಭದ ಮೇಲೆ ಯತಿ ಮತ್ತು ರಾಜನ ಶಿಲ್ಪವಿದೆ (ಚಿತ್ರ-೫೫). ಈ ಶಿಲ್ಪದಲ್ಲಿರುವ ಯತಿಯನ್ನು ವ್ಯಾಸರಾಯರೆಂದು ಹಾಗೂ ರಾಜನನ್ನು ಕೃಷ್ಣದೇವರಾಯ ಎಂಬುದಾಗಿ ಗುರುತಿಸಲಾಗಿದೆ. ಏಕೆಂದರೆ ಈ ದೇವಾಲಯವು ಕೃಷ್ಣದೇವರಾಯನ ಕಾಲದಲ್ಲಿ ನಿರ್ಮಾಣವಾಗಿದ್ದು, ವಿಠಲದೇವಾಲಯಕ್ಕೆ ಸಂಬಂಧಿಸಿದ ಶಾಸನ ಗಳಲ್ಲಿ ದೇವರಿಗೆ ಬಿಟ್ಟ ದಾನಗಳಲ್ಲಿ ಎರಡು ಪಾಲು ಗುರುಗಳಾದ ವ್ಯಾಸರಾಯರಿಗೆ ನೀಡಬೇಕು ಎಂಬುದಾಗಿ ತಿಳಿಸುತ್ತದೆ. ಹಾಗಾಗಿ ಶಿಲ್ಪದಲ್ಲಿ ನಿಂತಿರುವ ಯತಿ ವ್ಯಾಸರಾಯರೇ ಆಗಿರುವ ಸಾಧ್ಯತೆ ಹೆಚ್ಚಾಗಿದೆ. ಇಲ್ಲಿ ಯತಿಯು ತನ್ನ ಎಡಗೈಯಲ್ಲಿ ಕಮಂಡಲವನ್ನು ಹಿಡಿದಿದ್ದು ಬಲಗೈಯಿಂದ ರಾಜನಿಗೆ ಏನೋ ಕೊಡುತ್ತಿರುವಂತೆ ಇದೆ (ಬಹುಶಃ ತೀರ್ಥ ಪ್ರಸಾದವಿರಬಹುದು). ಯತಿಯು ಪೂರ್ಣೋರುಕದಲ್ಲಿ ಕಚ್ಚೆ ಹಾಕಿದ ಧೋತ್ರವನ್ನು ಧರಿಸಿದ್ದು, ಧೋತ್ರದ ಮೇಲೆ ಉತ್ತರೀಯವನ್ನು ಕಟ್ಟಿದ್ದಾರೆ. ಧೋತ್ರದ ಅಂಚುಗಳು ಹಾಗೂ ನಿರಿಗೆಗಳು ಸ್ಪಷ್ಟವಾಗಿ ಕಂಡುಬರುತ್ತವೆ. ಯಜ್ಞೋಪವೀತ, ಉದ್ದವಾದ ಎರಡೆಳೆಯ ರುದ್ರಾಕ್ಷಿಸರ, ಎರಡೆಳೆಯ ರುದ್ರಾಕ್ಷಿ ಬಹುಬಂಧಿ, ಸರಪಣಿಯಂತಹ ಕರ್ಣಾಭರಣ ಧರಿಸಿದ್ದಾರೆ. ಕರ್ಣಾಭರಣವು ಯತಿಯ ಭುಜಗಳನ್ನು ತಾಕುವಷ್ಟು ಉದ್ದವಾಗಿವೆ.

ಹಂಪಿಯ ಹಜಾರ ರಾಮಚಂದ್ರ ದೇವಾಲಯದ ಶಿಲ್ಪದಲ್ಲಿರುವ ವಸಿಷ್ಠ ಮುನಿಗಳು ಅರ್ಧೋರುಕ ಧೋತ್ರವನ್ನು ಧರಿಸಿದ್ದು, ಜಟಾಮಕುಟಧಾರಿಯಾಗಿದ್ದು, ಯಜ್ಞೋಪವೀತ, ರುದ್ರಾಕ್ಷಿಸರ, ರುದ್ರಾಕ್ಷಿಯ ತೋಳ್ಬಂದಿ ಮತ್ತು ಕಾಲ್ಕಡಗ ಧರಿಸಿದ್ದಾರೆ.

ಒಟ್ಟಾರೆಯಾಗಿ ಯತಿಗಳ ವಸ್ತ್ರ ಮತ್ತು ಆಭರಣಗಳೆಂದರೆ ಅರ್ಧೋರುಕ ಅಥವಾ ಪೂರ್ಣೋರುಕದಲ್ಲಿ ಧರಿಸಿದ ನೂಲಿನ ಧೋತ್ರ ಅದರ ಮೇಲೆ ಉತ್ತರೀಯವನ್ನು ಅಗಲವಾಗಿ ಕಟ್ಟಿರುವುದು, ಯಜ್ಞೋಪವೀತ, ರುದ್ರಾಕ್ಷಿಸರ, ರುದ್ರಾಕ್ಷಿಯ ಎರಡೆಳೆಯ ತೋಳ್ಬಂದಿ ಮತ್ತು ಮುಂಗೈ ಕಡಗ, ಸಣ್ಣಕುಂಡಲಗಳು, ಸಾದಾ ಕಾಲ್ಗಡಗ, ಜೋಲಾಡುವ ಸರಪಣಿಯಂತಹ ಕರ್ಣಾಭರಣ. ಎಡಗೈಯಲ್ಲಿ ಕಮಂಡಲ, ಜಟಾಮಕುಟ ಅಥವಾ ಜಟಾಧಾರಿ, ಗಡ್ಡದಾರಿಗಳಾಗಿರುತ್ತಾರೆ. ಇವು ಯತಿಗಳು ಧರಿಸುತ್ತಿದ್ದ ಸಾಧಾರಣವಾದ ವಸ್ತ್ರ ಮತ್ತು ಆಭರಣಗಳಾಗಿದ್ದವು.

ನಾಥಮುನಿಗಳು

ವಿಜಯನಗರ ಕಾಲವು ಹಲವು ಧಾರ್ಮಿಕ ಸಂಪ್ರದಾಯಗಳಿಗೆ ಆಶ್ರಯವನ್ನು ನೀಡಿತ್ತು. ಅವುಗಳಲ್ಲಿ 'ನಾಥ' ಸಂಪ್ರದಾಯವೂ ಒಂದು. ವಿಜಯನಗರದ ದೇವಾಲಯ ಗಳಾದ ವಿರೂಪಾಕ್ಷ, ಹಜಾರ ರಾಮಚಂದ್ರ, ವಿಠಲ, ಪಟ್ಟಾಭಿರಾಮ ಮುಂತಾದ ದೇವಾಲಯಗಳ ಸ್ತಂಭಗಳ ಮೇಲೆ 'ನಾಥ' ಮುನಿಗಳ ಶಿಲ್ಪಗಳು ಕಂಡುಬರುತ್ತವೆ. ಈ 'ನಾಥ' ಮುನಿಗಳು ಸಾಮಾನ್ಯವಾಗಿ ಯೋಗಪಟ್ಟನ್ನು ಹೊಂದಿದ್ದು, ತಮ್ಮ ಕೊರಳಲ್ಲಿ 'ಸಿಂಗಿನಾದ' ಎಂಬ ತುತ್ತೂರಿಯನ್ನು ತೂಗುಹಾಕಿರುವರು. ಇವರು ಊಟಕ್ಕೆ ಮೊದಲು ದೇವರನ್ನು ಪ್ರಾರ್ಥಿಸಿ ಸಿಂಗಿನಾದವನ್ನು ಊದುತ್ತಾರೆ.[೨೪]

ಹಂಪಿಯ ವಿರೂಪಾಕ್ಷ ದೇವಾಲಯದ ಸಾಲು ಮಂಟಪದ ಸ್ತಂಭದ ಮೇಲಿರುವ ಶಿಲ್ಪದಲ್ಲಿ (ಚಿತ್ರ-೫೬) ಯೋಗಪಟ್ಟನ್ನು ಧರಿಸಿರುವ ಮುನಿ ಕುಳಿತಿದ್ದಾನೆ. ಚದುರಿದ ಜಟೆ, ಬಲಗೈಯಲ್ಲಿ ಯೋಗದಂಡ ಹಿಡಿದಿದ್ದು, ಕೊರಳಲ್ಲಿ ಸಿಂಗಿನಾದವನ್ನು ಒಳಗೊಂಡ ಮೂರೆಳೆಯ ಸರ, ಎರಡೆಳೆಯ ತೋಳ್ಬಂದಿ ಮತ್ತು ಮುಂಗೈ ಕಡಗಗಳು, ಸಣ್ಣ ಕುಂಡಲಗಳು ಮೂರಳೆಯ ಕಟಿಸೂತ್ರ ಮತ್ತು ಒಂದೆಳೆ ಕಾಲ್ಗಡಗ ಧರಿಸಿದ್ದಾನೆ.

ಹಂಪಿಯ ಮಾಧವ ದೇವಾಲಯದ ಸ್ತಂಭದ ಮೇಲಿರುವ ಶಿಲ್ಪದಲ್ಲಿ ಮತ್ಸ್ಯದ ಮೇಲೆ ಕುಳಿತಿರುವ ಮತ್ಸ್ಯೇಂದ್ರನಾಥನು (ಚಿತ್ರ-೫೬ಎ) ಚದುರಿದ ಜಟಾಧಾರಿಯಾಗಿದ್ದಾನೆ. ಯೋಗಪಟ್ಟ ಮತ್ತು ಯೋಗದಂಡ ಬಿಟ್ಟು ಉಳಿದ ಎಲ್ಲಾ ಆಭರಣಗಳು ಮೇಲಿನ ಶಿಲ್ಪದಲ್ಲಿರುವಂತಿದೆ. ಈ ಶಿಲ್ಪದಲ್ಲಿರುವ ವಿಶೇಷತೆಯೆಂದರೆ ಮತ್ಸ್ಯಕ್ಕೂ ಎರಡೆಳೆಯ ಗೆಜ್ಜೆಸರ ತೊಡಿಸಿರುವುದು ಕಂಡುಬರುತ್ತದೆ. ಈ ಮತ್ಸ್ಯೇಂದ್ರನಾಥ ಅಥವಾ ನಾಥಮುನಿಗಳ ಶಿಲ್ಪಗಳಲ್ಲಿ ವಸ್ತ್ರಗಳನ್ನು ಧರಿಸಿರುವುದು ಕಂಡುಬರುವುದಿಲ್ಲ.

೩.೪.೨. ದಾಸರು

ವಿಜಯನಗರ ಕಾಲದ ದಾಸ ಪರಂಪರೆಯಲ್ಲಿ ಪ್ರಮುಖವಾಗಿ ಕಂಡುಬರುವವರು ಪುರಂದರದಾಸರು, ಕನಕದಾಸರು. ಈ ದಾಸರು ತಮ್ಮ ಕೀರ್ತನೆಗಳಲ್ಲಿ ಆ ಕಾಲದ ಜನಜೀವನದಲ್ಲಿ ಕಂಡುಬಂದ ನ್ಯೂನ್ಯತೆಗಳನ್ನು ಎತ್ತಿತೋರಿಸಿ ವಿವೇಕ ಬೋಧನೆಯನ್ನು ಮಾಡಿ ಭಕ್ತಪಂಥವನ್ನೂ ಪುಷ್ಠೀಕರಿಸಿದರು. ಇವರು ಕೃಷ್ಣದೇವರಾಯನ ಸಮಕಾಲೀನರು ಹಾಗೂ ಹಂಪಿ ನಗರವಾಸಿಗಳು. ದಕ್ಷಿಣ ದೇಶದ ಸಂಗೀತ ಪರಂಪರೆಯನ್ನು ಶ್ರೀಮಂತಗೊಳಿಸಿದವರು. ರಾಜಾಶ್ರಯವನ್ನು ಅಪೇಕ್ಷಿಸದೆ, ಐಶ್ವರ್ಯಕ್ಕೂ, ಅಧಿಕಾರಕ್ಕೂ ತಲೆಬಾಗದೆ, ಬೀದಿ ಬೀದಿಗಳಲ್ಲಿ ತಿಳಿಯಾದ ಅರ್ಥಗರ್ಭಿತವಾದ ಸರಳ ಭಾಷೆಯಲ್ಲಿ ಹಾಡುತ್ತಿದ್ದರು. ಆ ಮೂಲಕ ಸಮಾಜದ ಕಾಡುವ ಅಸಹಿಷ್ಣುತೆ, ಅಸ್ಪೃಶ್ಯತೆ, ಅರ್ಥವಿಲ್ಲದ ಮಡಿವಂತಿಕೆ ಮುಂತಾದ ನ್ಯೂನ್ಯತೆಗಳನ್ನು ತಮ್ಮ ಕೀರ್ತನೆಗಳಲ್ಲಿ ಅಳವಡಿಸಿ ಹಾಡುವುದರ ಮೂಲಕ ಸಮಾಜವನ್ನು ತಿದ್ದುವ ಪ್ರಯತ್ನವನ್ನು ಮಾಡಿದರು.

ಪುರಂದರದಾಸರು

ದಕ್ಷಿಣ ಭಾರತದ ಹರಿದಾಸ ಪರಂಪರೆಯಲ್ಲಿ ಪ್ರಮುಖರು ಹಾಗೂ ವ್ಯಾಸರಾಯರ ಶಿಷ್ಯರಲ್ಲಿ ಒಬ್ಬರು. ವ್ಯಾಸರಾಯರು, ತಮ್ಮ ಶಿಷ್ಯರಾದ ಪುರಂದರದಾಸರನ್ನು 'ದಾಸರೆಂದರೆ ಪುರಂದರದಾಸರಯ್ಯ' ಎಂಬುದಾಗಿ ಹಾಡಿ ಹೊಗಳಿದ್ದಾರೆ. ವ್ಯಾಸರಾಯರಿಂದ ಪುರಂದರ ವಿಠಲನೆಂಬ ದೀಕ್ಷಾನಾಮವನ್ನು ಪಡೆದರು. ಪುರಂದರದಾಸರು ತಮ್ಮ ಕೃತಿ ಯೊಂದರಲ್ಲಿ ತಾವು ದಾಸರಾಗಲು ಕಾರಣರಾದ ಸಂದರ್ಭವನ್ನು ವಿವರಿಸುತ್ತಾ, ತಮ್ಮ ಹೆಂಡತಿಯ ಪ್ರಭಾವವನ್ನು ಸ್ಮರಿಸಿಕೊಂಡಿದ್ದಾರೆ. "ದಂಡಿಗೆ ಬೆತ್ತ ಹಿಡಿಯಲು ಮಂಡೆ ಮಾಚಿ ನಾಚುತಲಿದ್ದೆ, ಹೆಂಡತಿ ಸಂತತಿ ಸಾವಿರವಾಗಲಿ, ದಂಡಿಗೆ ಬೆತ್ತ ಹಿಡಿಸಿದಳಯ್ಯ" ಎಂಬುದಾಗಿ ತಿಳಿಸಿದ್ದಾರೆ.

ಪುರಂದರದಾಸರು ದೇವರನ್ನು ತಾವು ರಚಿಸಿದ ದೇವರನಾಮಗಳಿಂದ ಹಾಡಿ, ಕುಣಿದು ಆರಾಧಿ ಸುತ್ತಿದ್ದರು. ಇವರು ರಚಿಸಿದ ಕೃತಿಗಳ ಒಟ್ಟು ಸಂಖ್ಯೆ ೪,೭೫,೦೦೦ ಎಂದು ತಿಳಿದುಬರುತ್ತದೆ. ಆದರೆ ಇಂದು ಅಲ್ಪ ಪ್ರಮಾಣದಲ್ಲಿ ಮಾತ್ರ ಅವು ಉಳಿದುಕೊಂಡಿವೆ. ಸಂಗೀತಶಾಸ್ತ್ರದಲ್ಲಿ ಇವರು ಮಾಡಿದ ಕೃಷಿ ಅಪೂರ್ವ ಮತ್ತು ಅದ್ಭುತವಾದುದು. ಸಂಗೀತವನ್ನು ಸಂಪ್ರದಾಯ ಶುದ್ಧವಾಗಿ ಮಾಡಿದವರು ಇವರೇ. ಈ ಎಲ್ಲಾ ಕಾರಣಗಳಿಂದ ಪುರಂದರದಾಸರನ್ನು 'ಕರ್ನಾಟಕ ಸಂಗೀತದ ಪಿತಾಮಹ'ರೆಂದು ಕರೆಯಲಾಗಿದೆ. ಇವರ ಸೇವೆಯ ಗೌರವಾರ್ಥವಾಗಿ ತುಂಗಭದ್ರ ತೀರದಲ್ಲಿ ಪುರಂದರಮಂಟಪವನ್ನು ವಿಜಯ ನಗರದ ರಾಜರು ಕಟ್ಟಿಸಿದ್ದಾರೆ. ಹೀಗೆ ಸಾಮಾಜಿಕ ಕಳಕಳಿ ಹೊಂದಿದ್ದ ದಾಸರು ಸಹಜವಾಗಿ ಸರಳ ವಸ್ತ್ರಗಳನ್ನು ಧರಿಸುತ್ತಿದ್ದರು ಎಂಬುದು ಗಮನಿಸಬೇಕಾದ ಸಂಗತಿ.

ಕನಕದಾಸರು

ಕನಕದಾಸರು ಸಹ ವ್ಯಾಸರಾಯರ ಶಿಷ್ಯರಾಗಿದ್ದರು. ಕನಕದಾಸರು ರಚಿಸಿದ ಕೃತಿಗಳಲ್ಲಿ ಪ್ರಸಿದ್ಧ ವಾದವು ಮೋಹನತರಂಗಿಣಿ, ರಾಮಧಾನ್ಯಚರಿತೆ, ನಳಚರಿತೆ ಮತ್ತು ಹರಿಭಕ್ತಸಾರ. ಕನಕದಾಸರು ಮೊದಲು ಡಣಾಯಕ ಪದವಿಯಲ್ಲಿದ್ದು, ಯುದ್ಧಗಳಲ್ಲಿ ಭಾಗವಹಿಸಿ ರಾಜಸೇವೆಯನ್ನು ಮಾಡಿದ್ದರು. ನಂತರ ರಾಜ ಸೇವೆಯನ್ನು ಬಿಟ್ಟು ತಾಳ ತಂಬೂರಿಯನ್ನು ಹಿಡಿದ ಹೊರಟು, ಕೀರ್ತನೆಗಳನ್ನು ರಚಿಸಿದರು. ಇವರ ಆರಾಧ್ಯದೈವ ಆದಿಕೇಶವ. ಜನಸಾಮಾನ್ಯನಿಗೆ ಅರ್ಥವಾಗುವ ಸರಳ ಭಾಷೆಯಲ್ಲಿ ಕೀರ್ತನೆಗಳನ್ನು ರಚಿಸಿ, ಹಾಡಿದ್ದಾರೆ. ತಮ್ಮ ಕೀರ್ತನೆಗಳ ಮುಖಾಂತರ ಅಂದಿನ ಸಮಾಜದ ವಸ್ತುಸ್ಥಿತಿಯನ್ನು ನಮ್ಮ ಮುಂದಿಟ್ಟಿದ್ದಾರೆ.

ಜೀವನ ನಿರ್ವಹಣೆಗೆ ಕೆಲಸ ಎಷ್ಟು ಅವಶ್ಯಕ ಎಂಬುದನ್ನು ಹೇಳುತ್ತಾರೆ. ಎಲ್ಲ ವೃತ್ತಿಗಳ ಹಿಂದಿನ ಉದ್ದೇಶ 'ಉದರ ನಿಮಿತ್ತಂ ಬಹುಕೃತವೇಷಂ' ಎಂದು ಹೇಳುತ್ತಾರೆ. ಆ ಕುರಿತು ಅವರ ಕೀರ್ತನೆಯೊಂದರಲ್ಲಿ

ತಾಳದಂಡಿಗೆ ಶ್ರುತಿ ಮೇಳ ತಂಬೂರಿಯ ಹಿಡಿದುಕೊಂಡು
ಸೂಳೆಯಂತೆ ಕುಣಿಯುವುದು ಹೊಟ್ಟೆಗಾಗಿ ಗೇಣುಬಟ್ಟೆಗಾಗಿ[೩೭]
'ಎಲ್ಲರೂ ಮಾಡುವುದು ಹೊಟ್ಟೆಗಾಗಿ, ಗೇಣು ಬಟ್ಟೆಗಾಗಿ' ಎಂಬುದಾಗಿ ಹಾಡಿದ್ದಾರೆ.

ಕನಕ ಸಾಹಿತ್ಯ ದರ್ಶನದಲ್ಲಿ ಕನಕದಾಸರ ವೇಷಭೂಷಣಗಳನ್ನು ಕುರಿತು ಈ ಮುಂದಿನ ಪದ್ಯದ ಸಾಲುಗಳು ವಿವರಗಳನ್ನು ನೀಡುತ್ತವೆ. ಅದರಂತೆ,

ಕಂಚಿನ ಕೈ ತಾಳ ತಂತಿಯ ಏಕತಾರಿ
ಕಾಗಿನೆಲೆಯ ಗುಡಿಮುಂದೋ।
ಕಾಗಿನೆಲೆಯ ಗುಡಿಯಿಂದ ಕನಕಯ್ಯ
ಬಕುತಿಯ ಹಾಡ ಬರದಾನೋ॥[೩೬]

ಇನ್ನೊಂದು ಪದ್ಯದಲ್ಲಿ,

ಪಾದುಕ ಮೆಟ್ಯಾನ ಕಂಬಳಿಯ ಹೊತ್ತಾನ
ಮಾತಿಗೆ ಮಾತು ಬೆಳೆಸ್ಯಾನೋ।
ಮಾತಿಗೆ ಮಾತು ಬೆಳೆಸ್ಯಾನೋ ಕನಕಯ್ಯಾ
ಸೂರ್ಯಾನ ಬೆಳಕಾ ತೋರ್ಯಾನೋ॥[೩೭]

ಈ ಮೇಲಿನ ಸಾಲುಗಳು ಕನಕದಾಸರು ಧರಿಸುತ್ತಿದ್ದ ವಸ್ತ್ರಗಳ ಮೇಲೆ ಬೆಳಕು ಚೆಲ್ಲುತ್ತವೆ. ಕನಕದಾಸರು ತಮ್ಮ ಬಲ ಹೆಗಲ ಮೇಲೆ ಕರಿಕಂಬಳಿಯನ್ನು ಅಂಗವಸ್ತ್ರದಂತೆ ಹಾಕಿಕೊಂಡಿದ್ದು, ಅರ್ಧೋರುಕವನ್ನು ಧರಿಸಿದ್ದಾರೆ. ಕೊರಳಿಗೆ ರುದ್ರಾಕ್ಷಿಮಾಲೆ ಹಾಕಿಕೊಂಡಿದ್ದಾರೆ. ಬಲಗೈಯಲ್ಲಿ ತಂಬೂರಿ, ಎಡಗೈಯಲ್ಲಿ ಚಿಟಕೆತಾಳ ಇಟ್ಟಿಕೊಂಡಿದ್ದು, ಎಡ ಹೆಗಲಿನ ಮೇಲೆ ಜೋಳಿಗೆ ಹಿಡಿದು, ಪಾದುಕೆಗಳನ್ನು ಧರಿಸಿದ್ದಾರೆ.

ಒಟ್ಟಾರೆ ದಾಸರು ಧರಿಸುತ್ತಿದ್ದ ವಸ್ತ್ರ ಮತ್ತು ಆಭರಣಗಳು ತುಂಬಾ ಸರಳವಾಗಿದ್ದವು. ಅವರು ತುಳಸಿಮಾಲೆ, ರುದ್ರಾಕ್ಷಿಸರ, ಕಾಲಿಗೆ ಗೆಜ್ಜೆ, ಅರ್ಧೋರುಕ ಅಥವಾ ಪೂರ್ಣೋರುಕದಲ್ಲಿ ಧರಿಸಿದ ನೂಲಿನ ಧೋತ್ರ, ಎಡ ಹೆಗಲಿಗೆ ಜೋಳಿಗೆ, ಬಲಗೈಯಲ್ಲಿ ತಂಬೂರಿ, ಎಡಗೈಯಲ್ಲಿ ಚಿಟಿಕೆ ತಾಳ ಇಟ್ಟುಕೊಂಡು ಕೀರ್ತನೆಗಳನ್ನು ಹಾಡುತ್ತಿರುವ ಭಂಗಿಯಲ್ಲಿರುತ್ತಾರೆ. ಈ ರೀತಿಯ ವಸ್ತ್ರ ಮತ್ತು ಆಭರಣಗಳು ದಾಸರ ಚಿತ್ರಣವನ್ನು ಮೂಢಿಸುತ್ತವೆ.

೩.೫. ದೇವತೆಗಳು

ಮಾನವನ ಆರಂಭ ಕಾಲದಲ್ಲಿ ದೇವರ ಮೂರ್ತಿ ಪೂಜೆಯು ಇರದೆ, ಪ್ರಕೃತಿಯ ರೂಪವಾದ ಮರ, ನದಿ, ಗುಡ್ಡ, ಕಲ್ಲು, ವಾಯು, ವರುಣ, ಅಗ್ನಿ ಮುಂತಾದವುಗಳನ್ನು ಪೂಜಿಸುತ್ತಿದ್ದ. ನಂತರ ಮಾನವ ತನ್ನ ಹಾಗೂ ಸಮುದಾಯದ ಒಳಿತಿಗಾಗಿ ಪೂಜಾ ಕಾರ್ಯದಲ್ಲಿ ತೊಡಿಸಿಕೊಂಡನು. ಸೈಂಧವ ಸಂಸ್ಕೃತಿಯಲ್ಲಿ ಮನೆಗಳಿದ್ದ ಸ್ಥಳದಲ್ಲಿ ಜೇಡಿಮಣ್ಣಿನ, ಸುಣ್ಣಕಲ್ಲಿನ, ಸಣ್ಣ ಸಣ್ಣ ವಿಗ್ರಹಗಳು ಹಲವಾರು ದೊರೆತಿದ್ದು, ಇವು ದೇವತಾ ಮೂರ್ತಿಗಳಾಗಿದ್ದವು. ಅವುಗಳನ್ನು ತಮ್ಮ ಮನೆಗಳಲ್ಲಿ ಇಟ್ಟು ಪೂಜೆಯನ್ನು ಸಲ್ಲಿಸುತ್ತಿದ್ದರು. ಅವುಗಳಲ್ಲಿ ಲಿಂಗ ಮತ್ತು ಮಾತೃದೇವತೆಗಳು ಮುಖ್ಯವಾಗಿದ್ದವು. ಇದು ಆ ಕಾಲದಲ್ಲಿನ ಮೂರ್ತಿಪೂಜೆಯಾಗಿತ್ತು. ಸಿಂಧೂ ಸಂಸ್ಕೃತಿಯ ಅವಶೇಷಗಳಲ್ಲಿ ಪ್ರಕೃತಿಯ ಪೂಜೆ ಯೊಂದಿಗೆ ಪಶುಪತಿಯ ಮುದ್ರೆ ದೊರೆತಿದೆ. ಹೀಗೆ ಮೂರ್ತಿ ಪೂಜೆ ಪ್ರಾರಂಭವಾಗಿ ಶಿವನನ್ನು ಪೂಜಿಸುತ್ತಿದ್ದರು. ನಂತರ ಬಂದ ಆರ್ಯರು ಮೂರ್ತಿ

ಪೂಜೆಯನ್ನು ಅನುಸರಿಸಿದರು. ಆದರೆ ಆ ಕಾಲದಲ್ಲಿ ದೇವಾಲಯಗಳ ನಿರ್ಮಾಣವಾಗಿರಲಿಲ್ಲ. ಅನಾರ್ಯರು ಕಟ್ಟಡ ಕಟ್ಟುತ್ತಿದ್ದ ಕಲೆ, ಆರ್ಯರ ಯಜ್ಞ, ಯಾಗ ಮಂತ್ರಗಳಿಂದ ಕೂಡಿದ ಪೂಜಾಕಾರ್ಯಗಳು ಗೃಹದೇವತೆಗಳಿರುವಂತೆ ಸಾಮೂದಾಯಿಕ ದೇವತೆಗಳಿಗೂ ಕಟ್ಟಡಗಳನ್ನು ಕಟ್ಟಿದರು. ಹೀಗೆ ಸಾರ್ವಜನಿಕ ಪೂಜಾ ಮಂದಿರವನ್ನು ಸಾಧ್ಯವಾದಷ್ಟು ಸ್ಥಿರವಾಗಿ, ಸುಂದರವಾಗಿ, ಸುಭದ್ರವಾಗಿ ಮಾಡಿದರು. ಇದು ಮುಂದೆ ದೇವಾಲಯ ಸಂಸ್ಕೃತಿಯ ಉಗಮಕ್ಕೆ ನಾಂದಿಯಾಯಿತು.

ಈ ದೇವಾಲಯಗಳಲ್ಲಿ ವಿವಿಧ ದೇವರುಗಳನ್ನು ಹಲವು ಅವತಾರಗಳಲ್ಲಿ ಪೂಜಿಸಲು ಪ್ರಾರಂಭಿಸಿದರು. ದೇವರು ಮನುಷ್ಯನಿಗಿಂತ ವಿಭಿನ್ನವಾಗಿ ಕಾಣಲು ಮತ್ತು ದೈವಗಳ ವಿಶಿಷ್ಟ ಗುಣಗಳನ್ನು ಎತ್ತಿ ತೋರಿಸಲು ಹಲವು ಭಂಗಿಗಳನ್ನು, ಆಯುಧಗಳನ್ನು, ವಾಹನಗಳಾಗಿ ಪ್ರಾಣಿಗಳನ್ನು ಹಲವು ವಿಶೇಷ ವಸ್ತ್ರ ಮತ್ತು ಆಭರಣಗಳನ್ನು ತೊಡಿಸಿ ಕೂರಿಸಿದರು.

ಹೀಗೆ ಶಿವ ಮತ್ತು ಶಿವನ ಅವತಾರಗಳನ್ನು ಆರಾಧಿಸುವುದನ್ನು ಶೈವ ಧರ್ಮ ಎಂದೂ ವಿಷ್ಣು ಮತ್ತು ಆತನ ಅವತಾರಗಳನ್ನು ಆರಾಧಿಸುವುದನ್ನು ವೈಷ್ಣವ ಧರ್ಮವೆಂದು ಕರೆಯಲಾಗಿದೆ. ಅಲ್ಲದೇ ಈ ದೇವಾಲಯಗಳಲ್ಲಿ ಪರಿವಾರ ದೇವತೆಗಳನ್ನು ಸ್ಥಾಪಿಸಿ ಆರಾಧಿಸುವುದನ್ನು ಅನುಸರಿಸಿಕೊಂಡು ಬಂದಿದ್ದಾರೆ. ಅಗಮಗಳು ಮತ್ತು ಪುರಾಣಗಳ ಹಿನ್ನೆಲೆಯಲ್ಲಿ ದೇವತೆಗಳನ್ನು ಪೂಜಿಸಿಕೊಂಡು ಬಂದಿದ್ದಾರೆ. ಆಗಮ ಮತ್ತು ಪುರಾಣಗಳಲ್ಲಿ ದೇವತಾಮೂರ್ತಿಯ ಅಳತೆ, ಅವು ಹಿಡಿದಿರಬೇಕಾದ ಆಯುಧಗಳು, ಅವರುಗಳು ಧರಿಸಿರಬೇಕಾದ ವಸ್ತ್ರ ಮತ್ತು ಆಭರಣಗಳು ಹಾಗೂ ದೇವತೆಗಳ ವಿವಿಧ ಅವತಾರಕ್ಕೆ ಪುರಾಣಗಳ ಹಿನ್ನೆಲೆ ನೀಡುವುದರೊಂದಿಗೆ ಪ್ರತಿಮಾ ಲಕ್ಷಣಗಳನ್ನು ತಿಳಿಯಬಹುದಾಗಿದೆ. ವಿಜಯನಗರ ಕಾಲದ ದೇವತೆಗಳು ಎಂಬ ಉಪಶೀರ್ಷಿಕೆಯಲ್ಲಿ ಈ ಕಾಲದ ಶೈವ ಮತ್ತು ವೈಷ್ಣವ ಶಿಲ್ಪಗಳನ್ನು ಅಧ್ಯಯನಕ್ಕೆ ಒಳಪಡಿಸಲಾಗಿದೆ.

೩.೫.೧. ಶೈವ ಶಿಲ್ಪಗಳು

ಲಿಂಗ

ಪ್ರಾಚೀನ ಕಾಲದಿಂದಲೂ ಭಾರತದಲ್ಲಿ ಪ್ರಚಲಿತವಿರುವ ಶೈವಧರ್ಮದಲ್ಲಿ ಶಿವನ ಪ್ರತೀಕವಾಗಿ 'ಲಿಂಗ'ವನ್ನು ಪೂಜಿಸುತ್ತಾರೆ. 'ಲಿಂಗ'ವೆಂಬ ಶಬ್ದಕ್ಕೆ 'ಚಿಹ್ನೆ', 'ಸಂಕೇತ', 'ಲಾಂಛನ'ವೆಂಬ ಅರ್ಥವಿದೆ. ಇಡೀ ಚರಾಚರ ಜಗತ್ತನ್ನು ನಿಲ್ಲಿಸಿರುವ ಆಧಾರಸ್ತಂಭವೇ 'ಲಿಂಗ'. 'ಲಿಂಗ'ದ ರೂಪವು ಶಿವಶಕ್ತಿಯರ ಸಂಗಮದ ಸಂಕೇತವೆಂದು. 'ಲಿಂಗ'ವು ಬ್ರಹ್ಮ, ವಿಷ್ಣು ಮತ್ತು ಮಹೇಶ್ವರ ಇವರುಗಳ ಸಂಗಮದ ಸಂಕೇತವೆಂದು ಹೇಳಲಾಗಿದೆ. ಲಿಂಗವನ್ನು ಮೂರು ಭಾಗಗಳಾಗಿ ವಿಂಗಡಿಸಿರುವರು. ಕೆಳಗಿನ ಚತುರ್ಭುಜಾಕಾರದ ಅಧಿಷ್ಠಾನದ ಪೀಠ ಭಾಗವನ್ನು 'ಬ್ರಹ್ಮಭಾಗ'ವೆಂದು, ಅದರ ಮೇಲಿನ ಅಷ್ಟಭುಜಾಕಾರದ ಪಾಣಿಪೀಠದ ಭಾಗವನ್ನು 'ವಿಷ್ಣುಭಾಗ'ವೆಂದು ಇದರ ಮಧ್ಯಭಾಗದಲ್ಲಿರುವ ಲಿಂಗಾಕಾರದ ಭಾಗವನ್ನು 'ರುದ್ರಭಾಗ' (ಪೂಜಾಭಾಗ)ವೆಂದು ಭಾವಿಸುತ್ತಾರೆ. ರುದ್ರಭಾಗದಲ್ಲಿನ ಮಧ್ಯಭಾಗದಲ್ಲಿ ನೇರ ವಾಗಿರುವ ಎರಡು ಗೆರೆಗಳು, ಅದಕ್ಕೆ ಸೇರಿದಂತೆ ಎರಡೂ ಪಾರ್ಶ್ವಗಳಲ್ಲಿ ಎರಡೆರಡೂ ಪಾರ್ಶ್ವರೇಖೆಗಳು ಇರುತ್ತವೆ. ಈ ಗೆರೆಗಳನ್ನು 'ಬ್ರಹ್ಮಸೂತ್ರ'ಗಳೆನ್ನುವರು. ಬ್ರಹ್ಮಸೂತ್ರಗಳಿರದ ಲಿಂಗಗಳು ಪೂಜಾರ್ಹವಲ್ಲವೆಂಬ ನಂಬಿಕೆಯೂ ಇದೆ.

ಗೋಕರ್ಣಮಹಾತ್ಮೆಯು ಗೋಕರ್ಣದ ಮಹಾಬಲೇಶ್ವರನ ಮಹಿಮೆಯನ್ನು ತಿಳಿಸುತ್ತದೆ. ಅದರಂತೆ; ರಾವಣನು ತನ್ನ ತಾಯಿಯ ಬಯಕೆಯಂತೆ ಶಿವನನ್ನು ಕುರಿತು ತಪ್ಪಸ್ಸು ಮಾಡಿ ಆತ್ಮಲಿಂಗವನ್ನು ಪಡೆದನು. ಗಣಪತಿಯ ಕಾರಣದಿಂದ ಆತ್ಮಲಿಂಗವು ಗೋಕರ್ಣದಲ್ಲಿಯೇ ಪ್ರತಿಷ್ಠಾಪನೆಯಾಯಿತು ಎಂಬುದಾಗಿ ತಿಳಿಸುತ್ತದೆ.[೨೮]

ವಿಜಯನಗರ ಕಾಲಕ್ಕೆ ಸಂಬಂಧಿಸಿದಂತೆ ಹಂಪಿಯ ವಿರೂಪಾಕ್ಷ ಲಿಂಗ ಮೂಲತಃ ಉದ್ಭವ ಲಿಂಗದಂತೆ ಕಂಡುಬರುತ್ತದೆ. ಬಡವಿಲಿಂಗ ಎಂದು ಕರೆಯುವ ಬೃಹದಾಕಾರದ ಲಿಂಗವಿದೆ. ಲೇಪಾಕ್ಷಿಯ ಸರ್ಪ ಪ್ರಭಾವಳಿಯಿಂದ ಕೂಡಿದ ನಾಗಲಿಂಗ ಬೃಹದಾಕಾರವಾಗಿದ್ದು ತುಂಬಾ ಮಹತ್ವವನ್ನು ಪಡೆದಿದೆ. ಅಲ್ಲದೆ ಶ್ರೀಶೈಲ ಮಲ್ಲಿಕಾರ್ಜುನ ದೇವಾಲಯದ ಲಿಂಗವು 'ದ್ವಾದಶ ಜ್ಯೋತಿರ್ಲಿಂಗ'ಗಲ್ಲಿ ಒಂದಾಗಿದೆ. ಇವೆಲ್ಲಾ ತುಂಬಾ ಪ್ರಸಿದ್ದವಾದ ಶಿವನ ಸ್ವರೂಪಗಳಾಗಿವೆ.

ಉಮಾಮಹೇಶ್ವರ

ವಿಜಯನಗರ ಕಾಲಕ್ಕೆ ಸಂಬಂಧಿಸಿದ ಉಮಾಮಹೇಶ್ವರ ಶಿಲ್ಪವು ಹಂಪಿಯ ಕಮಲಾಪುರದ ವಸ್ತುಸಂಗ್ರಹಾಯದಲ್ಲಿದೆ. ಈ ಶಿಲ್ಪದಲ್ಲಿ ಒಂದೇ ಪೀಠದ ಮೇಲೆ ಉಮಾಮಹೇಶ್ವರರು ಲಲಿತಾಸನದಲ್ಲಿ ಕುಳಿತಿದ್ದಾರೆ. ಶಿವನ ಎಡಭಾಗದಲ್ಲಿ ಉಮೆ ಕುಳಿತಿದ್ದಾಳೆ. ಚತುರ್ಭುಜನಾಗಿರುವ ಶಿವನ ಜಟಾಮಕುಟ ಧಾರಿಯಾಗಿದ್ದು, ಕಿವಿಯಲ್ಲಿ ನಾಗಕುಂಡಲಗಳು, ತೋಳಿನಲ್ಲಿ ನಾಗಬಂಧಿ, ಸರ್ಪಯಜ್ಞೋಪವೀತ ವನ್ನು ಧರಿಸಿದ್ದಾನೆ. ದಪ್ಪದಾದ ಮುಂಗೈ ಕಡಗಗಳು ಹಾಗೂ ಕಟಿಯಲ್ಲಿ ವ್ಯಾಘ್ರಾಜಿನವನ್ನು ಬಿಡಿಸಿದ್ದಾರೆ. ಉಮೆಯೂ ಸಹ ಚತುರ್ಭುಜಧಾರಿಯಾಗಿದ್ದು, ಕರಂಡಮಕುಟ ಧರಿಸಿದ್ದು, ವೃತ್ತಾಕಾರದ ಅಗಲವಾಗಿರುವ ಕರ್ಣಾಭರಣ, ಕಂಠಿಕೆ, ಮೂರೆಳೆಯ ಬಾಹುಬಂಧ, ಎರಡೆಳೆಯ ಮುಂಗೈ ಕಂಕಣಗಳು, ನೂಪುರ ಮತ್ತು ಕಾಲ್ಗಡಗ ಧರಿಸಿದ್ದಾಳೆ. ಸೀರೆಯನ್ನು ಕಚ್ಚೆಹಾಕಿ ಉಟ್ಟಿದ್ದು, ಸೀರೆಯ ಮೇಲೆ ಕಟಿಭಾಗದಲ್ಲಿ ಮೇಖಲೆಯನ್ನು ಧರಿಸಿದ್ದಾಳೆ. ಅದು ವೈವಿಧ್ಯಮಯವಾದ ಅಲಂಕರಣೆಯಿಂದ ಕೂಡಿದೆ.

ಹಂಪಿಯ ವಿರೂಪಾಕ್ಷ ದೇವಾಲಯದ ಗೋಪುರದ ಗೂಡಿನಲ್ಲಿರುವ ಉಮಾ ಮಹೇಶ್ವರ ಶಿಲ್ಪವು ಗಾರೆಶಿಲ್ಪವಾಗಿದೆ. ಈ ಶಿಲ್ಪದಲ್ಲಿ ಶಿವನು ಜಟಾಧಾರಿಯಾಗಿದ್ದು, ಜಟೆಯನ್ನು ಅಲಂಕೃತಗೊಂಡಿದ್ದಾನೆ. ಸರ್ಪಕುಂಡಲಗಳು, ಮೂರೆಳೆಯ ಕಂಠೀಹಾರ, ಮಣಿಹಾರ, ಒಂದೆಳೆಯ ಸಾದಾ ಬಹುಬಂಧಿ ಮತ್ತು ತೋಳ್ಬಂಧಿಗಳು, ಕಾಲ್ಗಡಗ ವ್ಯಾಘ್ರನುಡಿಗೆಯ ಮೇಲೆ ಮಣಿ ಮೇಖಲೆಯನ್ನು ಧರಿಸಿದ್ದು, ಶಿವನ ಎಡಭಾಗದಲ್ಲಿ ಉಮೆ (ಪಾರ್ವತಿ)ಯು ನಿಂತಿದ್ದು, ಶಿವನು ಉಮೆಯನ್ನು ತನ್ನ ಕೈಯಿಂದ ಹಿಡಿದು ನಿಂತಿದ್ದಾನೆ. ಉಮೆಯು ಕರಂಡಮಕುಟ, ಅಗಲವಾದ ವೃತ್ತಾಕಾರದ ಕುಂಡಲ, ಪದಕಗಳಿಂದ ಅಲಂಕರಿಸಿದ ಮೇಖಲೆಯನ್ನು ಸೀರೆಯ ಮೇಲೆ ಧರಿಸಿದ್ದಾಳೆ. ಸೀರೆಯನ್ನು ಪಾದಗಳವರೆಗೆ ಧರಿಸಿದ್ದು, ಸೀರೆಯ ಮೇಲೆ ಮುತ್ತು ರತ್ನಗಳಿಂದ ಅಡ್ಡಗೆರೆಗಳಲ್ಲಿ ಕೂರಿಸಿದ ಕುಸುರಿ ಕೆಲಸವನ್ನು ಕಾಣಬಹುದು. ಇದರ ಅಲಂಕರಣೆಯು ಆಧುನಿಕ ಸೀರೆಗಳಲ್ಲಿನ 'ಕುಂದನ್' ವರ್ಕ್‌ನಂತೆ ಕಂಡುಬರುತ್ತದೆ.

ಗಜಸಂಹಾರಮೂರ್ತಿ ಶಿವ

ಗಜಸಂಹಾರ ಮೂರ್ತಿ ಶಿವನ ಶಿಲ್ಪವನ್ನು ಬಳ್ಳಾರಿ ಜಿಲ್ಲೆಯ ತಿಮ್ಮಲಾಪುರದ ಶಿವ ದೇವಾಲಯದಲ್ಲಿ ಕಾಣಬಹುದಾಗಿದೆ. ಚತುರ್ಭುಜನಾದ ಶಿವನು ತ್ರಿಭಂಗಿಯಲ್ಲಿ ನಿಂತಿದ್ದು, ಎಡಗಾಲಿನಿಂದ ಆನೆಯ ಶಿರವನ್ನು ಮೆಟ್ಟಿ ನಿಂತಿದ್ದಾನೆ. ಗಜಾಸುರನ ಚರ್ಮವು ಶಿವನ ಶಿಲ್ಪದ ಸುತ್ತ ಪ್ರಭಾಮಂಡಲದಂತೆ ಹರಡಿದೆ. ಶಿವನು ವ್ಯಾಘ್ರ ಚರ್ಮವನ್ನು ಉಡುಗೆಯಾಗಿ ಧರಿಸಿದ್ದಾನೆ. ಎತ್ತರದ ಜಟಾಮಕುಟ, ನಾಗಕರ್ಣಕುಂಡಲ, ಮುತ್ತಿನ ಕಂಠಿಕೆ, ಮಣಿಯುಕ್ತ ಬಾಹುಪೂರ ಮತ್ತು ಕಂಚೀಧಾಮ ಧರಿಸಿದ್ದು, ವ್ಯಾಘ್ರನುಡಿಗೆಯ ಮೇಲೆ ಕಟಿಬಂಧವನ್ನು, ಉದ್ದವಾದ ವನಮಾಲ, ದಪ್ಪವಾದ ಪಾದಕಡಗಗಳನ್ನು ಹಾಗೂ ಪಾದಜಾಲಕಗಳನ್ನು ಸಹ ಧರಿಸಿದ್ದಾನೆ.

ವೀರಭದ್ರ

ದಕ್ಷಪ್ರಜಾಪತಿಯ ಮಗಳು ದಾಕ್ಷಯಣಿ ಶಿವನ ಹೆಂಡತಿಯಾದ ಮೇಲೆ ಒಮ್ಮೆ ದಕ್ಷನು ಯಜ್ಞ ಮಾಡಲು ಹವಣಿಸಿ ಶಿವ ದಾಕ್ಷಾಯಣಿಯರಿಬ್ಬರನ್ನು ಮಾತ್ರ ಕರೆಯದೆ ಉಳಿದ ಎಲ್ಲರನ್ನೂ ಕರೆದ. ಹಾಗಾದಾರೂ ದಾಕ್ಷಾಯಣಿಯು ತಾನು ಯಜ್ಞಮಂಟಪಕ್ಕೆ ಹೋದಳು. ಅಲ್ಲಿ ಅವಳ ತಂದೆ ಅವಳನ್ನು ಅಪಮಾನಗೊಳಿಸಿದಾಗ, ಆಕೆಯು ಯಜ್ಞಕುಂಡದಲ್ಲಿ ಬಿದ್ದು ಪ್ರಾಣಬಿಟ್ಟಳು. ಇದರಿಂದ ಸಿಟ್ಟಿಗೆದ್ದ ಶಿವನು ತನ್ನ ಜಟೆಯನ್ನು ನೆಲಕ್ಕೆ ಅಪ್ಪಳಿಸಲು ವೀರಭದ್ರನು ಹುಟ್ಟಿಕೊಂಡು ದಕ್ಷನ ತಲೆಯನ್ನು ಕಡಿದು ಅವನ ಯಾಗವನ್ನು ಧ್ವಂಸಪಡಿಸಿದ ಎಂಬ ಪುರಾಣ ಕಥೆಯನ್ನಾಧರಿಸಿದೆ. ಹಾಗಾಗಿ ವೀರಭದ್ರ ಶಿಲ್ಪದಲ್ಲಿ ದಕ್ಷನನ್ನು ಆಡಿನ ತಲೆಯ ಭಕ್ತ ವಿಗ್ರಹವನ್ನಾಗಿ ಕಾಣಿಸುತ್ತಾರೆ.[೨೯]

ಕಾರಣಾಗಮವು ವೀರಭದ್ರಮೂರ್ತಿಯ ಲಕ್ಷಣವನ್ನು ತಿಳಿಸುತ್ತಾ, "ವೀರಭದ್ರನ ಶಿಲ್ಪಕ್ಕೆ ನಾಲ್ಕು ಕೈಗಳು, ಮೂರು ಕಣ್ಣು ಇದ್ದು, ಜ್ವಾಲೆಯಿಂದ ಕೂಡಿದ ಕೆದರಿದ ಜಟಾಭಾರ ವಿರುತ್ತದೆ. "ಶಿವನು ಗಂಟೆಗಳ ಹಾರ ಮತ್ತು ರುಂಡಮಾಲೆಯನ್ನು, ಚೋಳಿನ ಆಭರಣ ಗಳನ್ನು ಧರಿಸಿರುತ್ತಾನೆ. ನಾಗಯಜ್ಞೋಪವೀತ ಧರಿಸಿದ ವೀರಭದ್ರನ ಕಾಲುಗಳಲ್ಲಿ ಪಾದಜಾಲಕ, ಅಂದುಗೆ ಮತ್ತು ಪಾದುಕೆಗಳಿರುತ್ತವೆ. ಇವನ ಮುಖವು ಉಗ್ರರೂಪದ್ದಾಗಿದ್ದು, ಕೈಗಳಲ್ಲಿ ಖಡ್ಗ, ಖೇಟಕ, ಧನಸ್ಸು, ಕಪಾಲ, ಬಾಣಗಳನ್ನು ಹಿಡಿದಿರುತ್ತಾನೆ"[೩೦] ಎಂದು ಹೇಳಿದೆ.

ವಿರೂಪಾಕ್ಷ ಪಂಡಿತನ ಚೆನ್ನಬಸವ ಪುರಾಣದಲ್ಲಿ ವೀರಭದ್ರನು ದಕ್ಷನ ಯಜ್ಞವನ್ನು ಧ್ವಂಸಮಾಡಿದ ಸನ್ನಿವೇಶವನ್ನು ಕುರಿತು,

> ಕಟ್ಟದಿರಿನೊಳ್ ತೋರ್ಪ ಮಟ್ಟಿಯ ಮರಳ್ವಿಪ್ರ
> ರುಟ್ಟ ಧೋತ್ರಂಗಳಂ ಸೆಳೆದು ಭಂಗಿಸಿ ತೆಗೆದು
> ಕಟ್ಟುತೋರ್ಪನ ಶಿಖಿಮನೊರ್ವವನ ಗಡ್ಡಕಿಂತೆಲ್ಲರಂ ಮರಳ ತಂಡಂ।
> ಅಟ್ಟುಳಿಯನೆಸಗಬೇಡೆಂದು ಕೃಪೆಯಿಂ ಸಂತ
> ವಿಟ್ಟು ಮುನಿನಿಕರಮಂ ಶಿಖಿಗೆ ಪೂರ್ಣಾಹುತಿಯ
> ಕೊಟ್ಟು ಪೆನೆನುತ್ತಿರ್ಪ ದಕ್ಷನ ಶಿರಾಸ್ಸುಮಂ ಕುಟ್ಟಿ ಹೋಮದೊಳಿಟ್ಟನು॥[೩೧]

ಎಂಬುದಾಗಿ ತಿಳಿಸಿದೆ.

ಈ ಮೇಲಿನ ಸಾಲುಗಳು ವೀರಭದ್ರನು ಉಗ್ರ ರೂಪವನ್ನು ತಾಳಿ ದಕ್ಷನ ಯಜ್ಞವನ್ನು ಹಾಳು ಮಾಡಿದನು. ಆ ಸಂದರ್ಭದಲ್ಲಿ ಯಜ್ಞಯಾಗಕ್ಕಾಗಿ ಅಲ್ಲಿ ನೆರೆದಿದ್ದ ವಿಪ್ರರು ಉಟ್ಟಿದ್ದ ಧೋತ್ರಗಳನ್ನು ಎಳೆದು ಹಾಕಿದನು. ಮುನಿಗಳು ವೀರಭದ್ರನನ್ನು ಶಾಂತನಾಗುವಂತೆ ಪ್ರಾರ್ಥಿಸುತ್ತಿದ್ದರು. ವೀರಭದ್ರ ದಕ್ಷನ ಶಿರವನ್ನು ತುಂಡರಿಸಿ ಹೋಮ ಕುಂಡದಲ್ಲಿ ಹಾಕಿದನು.

ಲಕ್ಷಣದಂಡೇಶನ ಶಿವತತ್ವ ಚಿಂತಾಮಣಿಯಲ್ಲಿ ವೀರಭದ್ರನ ಕುರಿತು ಹೀಗೆ ವರ್ಣಿಸಿದೆ.

ಕಟ್ಟುಗ್ರಮೂರ್ತಿ ಪೊಂಬಟ್ಟೆ ಚಲ್ಲಣವೆಸೆಯ
ಲುಟ್ಟಖಿಳಭೂಷಣಂದೊಟ್ಟು ಶಿರಮಾಲೆಯಂ
ಕಟ್ಟಿ ಫಣಿಕುಂಡಲಗಳಿಟ್ಟು ಹೊಳೆಹೊಳೆವ ದಂಷ್ಟ್ರಂಗಳಿಂಗಿಂಬುಗೊಟ್ಟು
ನೆಟ್ಟನುರುಲಿಂಗವಳವಟ್ಟು ನಕ್ಷತ್ರಕುಲ
ವಿಟ್ಟಣಿಪ ಮುಡಿಹೂವನಿಟ್ಟು ಚರಣದೊಳಗಳ
ವಟ್ಟ ಹಾಹೆಯ ತೊಡರನಿಟ್ಟ ವೀರೇಶ್ವರ ಚರಣಾಂಬುಜಕ್ಕೆ ಶರಣು[೩೨]

ಈ ಮೇಲಿನ ಸಾಲುಗಳಲ್ಲಿ ವೀರಭದ್ರನು ಉಗ್ರಸ್ವರೂಪನೂ, ಹೊನ್ನಿನ ಬಟ್ಟೆಯ ಧೋತ್ರವನ್ನು ಧರಿಸಿ, ನಾಗಕುಂಡಲ ಹಾಗೂ ಬಿದುರಿನ ಪೆಂಡೆಯ(ಹಾಹೆ)ನ್ನು ಧರಿಸಿದ್ದಾನೆ ಎಂಬುದಾಗಿ ವಿವರಿಸುತ್ತದೆ.

ವಿಜಯನಗರ ಕಾಲದ ಸ್ಮಾರಕಗಳಲ್ಲಿ ವೀರಭದ್ರನ ಹಲವಾರು ಶಿಲ್ಪಗಳು ದೊರೆಯುತ್ತವೆ. ಕಮಲಾಪುರದ ವಸ್ತುಸಂಗ್ರಹಾಲಯದಲ್ಲಿರುವ ವೀರಭದ್ರನ ಶಿಲ್ಪವೊಂದರಲ್ಲಿ (ಚಿತ್ರ-೫೭) ವೀರಭದ್ರನು ದಶಾಭರಣಗಳನ್ನು ಹೊಂದಿದ್ದು, ಹಲವಾರು ಆಯುಧಗಳನ್ನು ಹಿಡಿದಿದ್ದಾನೆ. ಮೊಣಕಾಲಿನವರೆಗೆ ಅಧೋರ್ರುಕವನ್ನು ಧರಿಸಿದ್ದು, ದಪ್ಪಮೀಸೆಯಿದೆ. ಜಟಾಮುಕುಟ, ನಾಗಕುಂಡಲಗಳು, ಕಂಠಿಕೆ, ತ್ರಿಪುರ, ಉಪವೀತ, ನಾಗಯಜ್ಞೋಪವೀತ, ಉದರಬಂಧ, ವನಮಾಲ ಮತ್ತು ರುಂಡಮಾಲೆಯನ್ನು ಧರಿಸಿದ್ದಾನೆ. ನಾಗಬಂಧ, ಎರಡೆಳೆಯ ಮುಂಗೈ ಕಡಗಗಳು, ಮೇಖಲೆ, ಕಾಲ್ಗಡಗ, ಪಾದವಲಯ ಹಾಗೂ ಪಾದುಕೆಗಳನ್ನು ಧರಿಸಿರುವುದು ಕಂಡುಬರುತ್ತದೆ.

ಲೇಪಾಕ್ಷಿಯ ವೀರಭದ್ರ ದೇವಾಲಯದ ಮಹಾಮಂಟಪದಲ್ಲಿರುವ ವೀರಭದ್ರ ಶಿಲ್ಪದಲ್ಲಿ ಚತುರ್ಭುಜನಾದ ವೀರಭದ್ರನ ಜಟೆಯು ಜ್ವಾಲೆಯಿಂದ ಕೂಡಿದ ಕೆದರಿದ ಜಟಾಭಾರವಿದೆ. ನಾಗಕುಂಡಲ, ನಾಗಯಜ್ಞೋಪವೀತ, ದ್ವಿಸರ ಹಾಗೂ ರುಂಡಮಾಲೆಯನ್ನು ಧರಿಸಿದ್ದಾನೆ. ಇದರೊಂದಿಗೆ ಉದರಬಂಧ, ದಪ್ಪ ಕೈಕಡಗಗಳು ಹಾಗೂ ಎರಡೆಳೆಯ ಕಾಲ್ಗಡಗ, ಪಾದಸರದೊಂದಿಗೆ ಪಾದುಕೆಗಳನ್ನು ಕಂಡರಿಸಿದ್ದಾರೆ. ಕಾಮಿಕಾಗಮದಲ್ಲಿ ತಿಳಿಸಿರುವ ಆಭರಣಗಳನ್ನು ಈ ಶಿಲ್ಪದಲ್ಲಿ ಕಾಣಬಹುದಾಗಿದೆ.

ಭಿಕ್ಷಾಟನಮೂರ್ತಿ

ಶಿವನು ಭಿಕ್ಷಾಟನೆ ಮಾಡಿದ್ದ ಒಂದು ಸಂದರ್ಭದ ನಿರೂಪನಾ ಶಿಲ್ಪವೇ ಭಿಕ್ಷಾಟನ ಮೂರ್ತಿ. ಕೂರ್ಮಪುರಾಣದಲ್ಲಿ ತಿಳಿಸಿರುವಂತೆ. ಭೈರವನ ಅವತಾರದ ಸಂದರ್ಭದಲ್ಲಿ ವಿವರಿಸುವ ಘಟನೆಯೇ

ಇದಕ್ಕೆ ಕಾರಣವಾಗಿದೆ. ಇದರಂತೆ ಶಿವನು ಬ್ರಹ್ಮನ ಒಂದು ಶಿರವನ್ನು ಕತ್ತರಿಸಿದ ಮೇಲೆ ಬ್ರಹ್ಮನ ಕಪಾಲವು ಶಿವನ ಅಂಗೈಗೆ ಹತ್ತಿಕೊಳ್ಳುತ್ತದೆ; ಆ ಕಪಾಲ ವಿಮೋಚನೆಯಾಗಬೇಕಾದರೆ ಹನ್ನೆರಡು ವರ್ಷಗಳ ಕಾಲ ಭೈರವನು ದಿಗಂಬರನಾಗಿ ಭೂತಗಣದೊಡನೆ ಪರ್ಯಟನೆ ಮಾಡುತ್ತಿದ್ದ. ಅಂತಿಮವಾಗಿ ಪವಿತ್ರ ವಾರಣಾಸಿಯಲ್ಲಿ ಆ ಕಪಾಲವು ಶಿವನ ಕೈಯಿಂದ ಕಳಚಿಬಿತ್ತು ಎಂಬುದಾಗಿ ತಿಳಿಸುತ್ತದೆ.[೩೩೩]

ಲೇಪಾಕ್ಷಿಯ ವೀರಭದ್ರ ದೇವಾಲಯದಲ್ಲಿ ಬೃಹದಾಕಾರದ ಸ್ತಂಭಗಳಿದ್ದು, ಆ ಸ್ತಂಭಗಳ ಮೇಲಿನ ಶಿಲ್ಪಗಳು ಆಕರ್ಷಿಣೀಯವಾಗಿವೆ. ಇಲ್ಲಿನ ಭಿಕ್ಷಾಟನಮೂರ್ತಿಯ ಶಿಲ್ಪದಲ್ಲಿ ಪ್ರಭಾವಳಿಯ ನಡುವೆ ಚಲಿಸುತ್ತಿರುವಂತೆ ಆಲೀಢಭಂಗಿಯಲ್ಲಿರುವ ಶಿವನು ಕೆದರಿದ ಜಟೆಯೊಂದಿಗೆ ಜಟಾಮಕುಟಧರಿಸಿದ್ದು, ಮುಖದಲ್ಲಿ ಹಣೆಗಣ್ಣಿದೆ. ಚತುರ್ಭುಜಧಾರಿಯಾದ ಶಿವನ ಎರಡು ಬಲಗೈಗಳಲ್ಲಿ ಗರಿಕೆಗಳಿದ್ದು ಕೆಳಗಿರುವ ಜಿಂಕೆ ಅದನ್ನು ತಿನ್ನುತ್ತಿರುವಂತೆ ಬಾಯಿಚಾಚಿದೆ, ಮತ್ತೊಂದು ಕೈಯಲ್ಲಿ ಢಮರಿದೆ. ಶಿವನ ಎರಡು ಎಡಗೈಗಳಿಂದ ಕಂಕಾಳದಂಡವನ್ನು ಹಿಡಿದಿದ್ದಾನೆ. ಕಂಕಾಳದಿಂದ ಚರ್ಮದ ಭಾಗವು ನೇತಾಡುತ್ತಿದೆ. ಶಿವನ ಎಡಭಾಗದಲ್ಲಿ ಕುಬ್ಜನೊಬ್ಬನು ತಲೆಯ ಮೇಲೆ ಬುಟ್ಟಿಯನ್ನು ಹೊತ್ತು ನಿಂತಿದ್ದಾನೆ. ಶಿವನು ಪದ್ಮ ಪದಕವಿರುವ ಕಂಠಿಕೆಯನ್ನು ರುದ್ರಾಕ್ಷಿಹಾರ, ನಾಗಯಜ್ಞೋಪವೀತ, ಉದರಬಂಧ ಹಾಗೂ ರುಂಡಮಾಲೆಯನ್ನು ಧರಿಸಿದ್ದಾನೆ.

ಇದರೊಂದಿಗೆ ಭುಜಕೀರ್ತಿ ನಾಗಬಹುಬಂಧಿ, ಮುಂಗೈಗೆ ಮೂರಳೆಯ ಕಡಗಗಳನ್ನು ಧರಿಸಿದ್ದಾನೆ, ಕೈ ಬೆರಳುಗಳಿಗೆ ಉಂಗರಗಳನ್ನು ಧರಿಸಿರುವುದು ಕಂಡುಬರುತ್ತದೆ. ಪಾದಭೂಷಣ ಗಳಾದ ಕಡಗವು ಮಣಿಯಿಂದ ಕೂಡಿದ್ದು, ದಪ್ಪಗಾತ್ರದಲ್ಲಿದೆ. ಪಾದಸರ (ನೂಪುರ)ಧರಿಸಿದ್ದು, ಎತ್ತರವಾದ ಪಾದುಕೆಗಳ ಮೇಲೆ ನಿಂತಿದ್ದಾನೆ. ವ್ಯಾಘ್ರಚರ್ಮದುಡಿಗೆ ತೊಟ್ಟಿದ್ದು, ಅದರ ಮೇಲೆ ವಿವಿಧ ಹಂತಗಳಲ್ಲಿರುವ ಮೇಖಲೆಯನ್ನು ಧರಿಸಿದ್ದು, ಅದರ ಹಾರಗಳು ತೊಡೆಯಭಾಗದವರೆಗೆ ಇಳಿಬಿದ್ದಿವೆ. ಕಟಿಯಲ್ಲಿ ಕತ್ತಿ (ಕಠಾರಿ)ಯೊಂದನ್ನು ಸಿಕ್ಕಿಸಿ ಕೊಂಡಿರುವುದು ಕಂಡುಬರುತ್ತದೆ. ಈ ರೀತಿಯಾಗಿ ಭಿಕ್ಷಾಟನಾಮೂರ್ತಿಯ ಶಿಲ್ಪಗಳು ಹಂಪಿಯ ಕಮಲಾಪುರದ ವಸ್ತುಸಂಗ್ರಹಾಲಯ ಮತ್ತು ವಿರೂಪಾಕ್ಷ ದೇವಾಲಯ ಶಿಲ್ಪಗಳಲ್ಲಿ ಕಂಡುಬರುತ್ತದೆ.

ಕಲ್ಯಾಣಸುಂದರಮೂರ್ತಿ

ಶಿವ-ಪಾರ್ವತಿಯರ ವಿವಾಹದ ಸಂದರ್ಭವನ್ನು ಬಿಂಬಿಸುವ ಶಿಲ್ಪವನ್ನು 'ಕಲ್ಯಾಣ ಸುಂದರಮೂರ್ತಿ' ಅಥವಾ 'ಗಿರಿಜಾಕಲ್ಯಾಣಮೂರ್ತಿ' ಎನ್ನುವರು. ಶಿವನ ಪತ್ನಿಯು ದಕ್ಷಬ್ರಹ್ಮನ ಮಗಳೂ ಆಗಿದ್ದ ದಾಕ್ಷಾಯಣಿಯು ಯಜ್ಞಕುಂಡಕ್ಕೆ ಬಿದ್ದು ಆತ್ಮಾಹುತಿ ಮಾಡಿ ಕೊಂಡಳು. ನಂತರದ ಜನ್ಮದಲ್ಲಿ ಪರ್ವತರಾಜನಾದ ಹಿಮವಂತನ ಮಗಳಾಗಿ ಜನಿಸುತ್ತಾಳೆ. ಪರ್ವತರಾಜನ ಮಗಳಾದ ಗಿರಿಜೆ(ಪಾರ್ವತಿ)ಯೊಂದಿಗಿನ ವಿವಾಹ ಸಂದರ್ಭವನ್ನು ಈ ಕಥೆಯು ತಿಳಿಸುತ್ತದೆ.

ಅಂಶುಮದ್ಭೇದಾಗಮ, ಉತ್ತರಕಾಮಿಕಾಗಮ, ಶಿಲ್ಪರತ್ನ ಮುಂತಾದ ಕೃತಿಗಳು ಕಲ್ಯಾಣ ಸುಂದರ ಮೂರ್ತಿಯ ಲಕ್ಷಣಗಳನ್ನು ತಿಳಿಸುತ್ತವೆ. ಅದರಂತೆ ಶಿವನು ಕಾಂತಿಯುಕ್ತ ದೇಹವುಳ್ಳವನಾಗಿದ್ದು, ಜಟಾಮಕುಟಧಾರಿಯಾಗಿ, ಸರ್ವಾಭರಣ ಭೂಷಿತನಾಗಿರಬೇಕು. ಬಲಗಡೆ

ಲಜ್ಜೆಯಿಂದ ತಲೆಬಾಗಿಸಿದ ಗೌರಿಯ ಎಡಗೈಯಲ್ಲಿ ಉತ್ಪಲವಿರುತ್ತದೆ. ಪಾರ್ವತಿಯನ್ನು ಅನುಸರಿಸಿ ಸರ್ವಾಭರಣ ಭೂಷಿತರಾದ ಲಕ್ಷ್ಮಿ ಮತ್ತು ಭೂದೇವಿಯರಿರುತ್ತಾರೆ. ಶಿವನ ಎದುರಿನಲ್ಲಿ ಪದ್ಮಪೀಠದಲ್ಲಿ ಆಸೀನನಾಗಿ ಬ್ರಹ್ಮನು ಹೋಮ ಮಾಡುತ್ತಿರುವಂತೆ ಇರಬೇಕು. ಶಿವನ ಬಳಿ ವಿಷ್ಣುವೂ ಇದ್ದು, ವಿಷ್ಣುವೂ ವರದಹಸ್ತನಾಗಿ ಧಾರೆ(ನೀರು) ಎರೆಯುತ್ತಿರುತ್ತಾನೆ. ಈ ಶಿಲ್ಪದಲ್ಲಿ ಸಿದ್ದರು, ಯಕ್ಷರು, ಗಂಧರ್ವರು, ಋಷಿಗಳು, ದೇವತೆಗಳು ಎಲ್ಲರೂ ಬೆರಗಾಗಿ ನೋಡುತ್ತಿರುವಂತಿರುತ್ತಾರೆ ಎಂಬುದಾಗಿ ವಿವರಿಸಲಾಗಿದೆ.[೩೩೪]

ಶಿವಪಾರ್ವತಿಯರ ಕಲ್ಯಾಣಕ್ಕೆ ಸಂಬಂಧಿಸಿದಂತೆ ವಿಜಯನಗರ ಕಾಲದ ಹಲವು ಸಾಹಿತ್ಯ ಕೃತಿಗಳಲ್ಲಿ ವರ್ಣಿಸಲಾಗಿದೆ. ಅದರಂತೆ, ತೆಂಕಣಾಂಬಿ ಬೊಮ್ಮರಸನ ಸನತ್ಕುಮಾರ ಚರಿತದಲ್ಲಿ ಶಿವಪಾರ್ವತಿಯರ ಕಲ್ಯಾಣ ಮಂಟಪದ ಅಲಂಕರಣೆಯನ್ನು ಕುರಿತು ಪದ್ಯವೊಂದರಲ್ಲಿ ವರ್ಣಿಸಲಾಗಿದೆ. ಅದರಂತೆ,

ಪೊಳೆವ ಪವಳದ ಕಂಬ ವಜ್ರದ
ತೊಲೆ ಸುಮುಕ್ತಾಫಲದ ಬೋದಿಗೆ
ಲಲಿತ ಮರಕತ ರತ್ನಗಳ ನೆಲಗಟ್ಟು ಯೋಜನದ
ವಲಯದಲಿ ಝಲ್ಲಗಳ ಪಟ್ಟಾ
ವಳಿಯ ಮುತ್ತಿನ ಕುಚ್ಚುಗಳೊಳಾ
ನಿಳಯಮೊಪ್ಪಿತು ವಿಶ್ವಸೇನಕುಮಾರ ಪರಿಣಯದ[೩೩೫]

ಎಂಬುದಾಗಿ ಸನತ್ಕುಮಾರ ಚರಿತದಲ್ಲಿ ಕಲ್ಯಾಣ ಮಂಟಪದ ಅಲಂಕರಣೆಯನ್ನು ಸೊಗಸಾಗಿ ವರ್ಣಿಸಿದೆ.

ಅದೇ ರೀತಿಯಾಗಿ ಲಕ್ಕಣ್ಣದಂಡೇಶನ ಶಿವತತ್ತ್ವಚಿಂತಾಮಣಿಯಲ್ಲಿರುವ ಒಂದು ಪದ್ಯದಲ್ಲಿನ ವಿವರಗಳು ಸಹ ಮೇಲಿನ ವಿವರಗಳಿಗೆ ಪುಷ್ಠಿ ನೀಡುತ್ತವೆ. ಅದರಂತೆ;

ಎಸೆವ ಮಾಣಿಕ್ಯದ ಸ್ತಂಭಸಾಹಸ್ರದಿಂ
ಮಿಸುಪ ವಜ್ರದ ಕೀಲಣೆಯ ಪವಳಬೋದಿಗೆಯ
ಕುಸುರಿಗೆಲಸದ ಪಲವು ಚಿನ್ನರತ್ನದ ಮದನಕೈಗಳಿಂದಾ ಶಶಿಕಾಂತದ
ಪಸರಿಸಿದ ಕುಟ್ಟಿಮದನಂತರೀತಿಯ ಗುಡಿಯ
ಕುಸುಮವಲ್ಲರಿಯ ಬಹುಕಾಂತಿಯಿಂ ರವಿ ಬಿಟ್ಟ
ಹೊಸಬೀಡೆನಲ್ ಮಂಟಪಂ ಸವೆದುದರುವದರ ಚರಣಾಂಬುಜಕ್ಕೆ ಶರಣು[೩೩೬]

ಎಂದು ವಿವರಿಸುತ್ತಾನೆ.

ಈ ಪದ್ಯದಲ್ಲಿ ಶಿವಪಾರ್ವತಿಯರ ಕಲ್ಯಾಣಕ್ಕೆ ಸಹಸ್ರಸ್ತಂಭಗಳಿಂದ ಕೂಡಿದ ಕಲ್ಯಾಣ ಮಂಟಪವನ್ನು ನಿರ್ಮಿಸಲಾಗಿತ್ತು. ಅದು ಬಹು ದೊಡ್ಡದ್ದು ಹಾಗೂ ಅದರ ಅಲಂಕರಣೆ ಯನ್ನು ಗಮನಿಸಿದಾಗ ದೇವಾನುದೇವತೆಗಳನ್ನು, ಋಷಿಮುನಿಗಳನ್ನು ಹಾಗೂ ಇತರ ಗಣಗಳನ್ನು ಆಹ್ವಾನಿಸಿದ್ದಾರೆಂಬುದರ ಹಿನ್ನೆಲೆಯನ್ನು ಸೂಚಿಸುತ್ತಾ, ಅದ್ದೂರಿ ಮಂಟಪವನ್ನು ವ್ಯವಸ್ಥೆಗೊಳಿಸಲಾಗಿತ್ತು ಎಂಬುದನ್ನು ತಿಳಿಯಬಹುದಾಗಿದೆ. ದೊಡ್ಡ ಸಂಖ್ಯೆಯ ಅತಿಥಿಗಳನ್ನು ವಿವಾಹಕ್ಕೆ ಆಹ್ವಾನಿಸಿದ್ದಾರೆಂಬುದನ್ನು ವರ್ಣಿಸುತ್ತದೆ.

ಕಾವ್ಯಗಳಲ್ಲಿ ವರನಾದ ಶಿವನ ಅಲಂಕರಣೆಯನ್ನು ಕುರಿತು ವರ್ಣನೆ ಮಾಡಲಾಗಿದೆ. ಶಿವತತ್ತ್ವಚಿಂತಾಮಣಿಯ ಒಂದು ಪದ್ಯದಲ್ಲಿ ಆ ಕುರಿತಾಗಿ ವರ್ಣಿಸಿದೆ.

ತೊಳತೊಳಗಿ ಬೆಳಗುವಳೆವೆಜೆಯೊಡನೆ ಮತ್ಸರಿಸಿ
ಮೊಳೆವ ಪಾವಳದ ಬಳ್ಳಿಯೆನಿಪ ಕೆಂಜೆಡೆಯನೇಂ
ಬಳಸಿ ನಿಂದವೊ ತಾರಕಾವಳಿಗಳೆಂಬಂತೆ ಕುಸುಮ ಪ್ರಚಯ ಮೊಪ್ಪಲು
ಎಳೆಯ ಫಣಿಕುಂಡಲಗಳಿಂ ಕರೆಗೊರತಲ್ ಮಿಸುಗೆ
ತಳೆದ ನಾನಾಭರಣದಿಂ ವ್ಯಾಘ್ರಚರ್ಮದುಡಿ
ವಳಿಯದಿಂದೆಸೆವ ನಂದಿಯನೇಱಿದೀಶ್ವರನ ಚರಣಾಂಬುಜಕ್ಕೆ ಶರಣು[೩೩೭]

ಈ ಮೇಲಿನ ಸಾಲುಗಳಿಂದ ಶಿವನು ವರನಾಗಿ ಎಳೆಯ ಸರ್ಪಕುಂಡಲಗಳನ್ನು ಹಾಗೂ ನಾನಾಭರಣಗಳಿಂದ, ಹುಲಿಚರ್ಮದ ಉಡುಗೆಯನ್ನು ಧರಿಸಿ, ನಂದಿವಾಹನನಾಗಿ ವಿವಾಹಕ್ಕೆ ಅಲಂಕೃತಗೊಂಡಿದ್ದನ್ನು ವಿವರಿಸುತ್ತದೆ.

ವಧುವಾದ ಪಾರ್ವತಿಯ ಅಲಂಕರಣೆಯ ಕುರಿತು ಸನತ್ಕುಮಾರ ಚರಿತೆಯ ಪದ್ಯವೊಂದರಲ್ಲಿ ವರ್ಣನೆ ಮಾಡಲಾಗಿದೆ. ಅದರಲ್ಲಿ ವರ್ಣಿಸುವಂತೆ,

ಉಡಿಸಿದರು ದಿವ್ಯಾಂಬರವನುಳೆ
ತೊಡಿಸಿದರು ಸಕಲಾಭರಣಗಳ
ಮುಡಿಸಿದರು ಮಾಲ್ಯಂಗಳನು ಕೇಶದಲಿ ಬಾಲಕಿಯ
ಇಡಿಸಿದರು ಕತ್ತುರಿಯ ತಿಲಕವ
ಪಡಿಸಿದರು ನಯನಗಳಿಗಿಚ್ಚೆಯ
ಪಿಡಿಸಿದರು ಪೊಂದಳಿಗೆಯಾರತಿಗಳನು ರಮಣಿಯರು[೩೩೮]

ಎಂಬುದಾಗಿ ಗಿರಿರಾಜಸುತೆಗೆ ತೊಡಿಸಿದ ವಸ್ತ್ರ ಮತ್ತು ಆಭರಣಗಳ ಹಾಗೂ ಹಣೆಗೆ ಇರಿಸಿದ ಕಸ್ತೂರಿತಿಲಕ ಮುಂತಾದ ಅಲಂಕರಣೆಯನ್ನು ತಿಳಿಯಲು ಇದು ಸಹಾಯಕವಾಗಿದೆ.

ಅದೇ ರೀತಿಯಲ್ಲಿ ಚೆನ್ನಬಸವಪುರಾಣದ ಪದ್ಯವೊಂದರಲ್ಲಿ ಗಿರಿಜೆಯ ವಸ್ತ್ರಾಭರಣ ಅಲಂಕರಣೆಯನ್ನು ಕುರಿತು ಹೀಗೆ ವರ್ಣಿಸಿದೆ. ಅದರಂತೆ,

ಲಲಿತ ಜೂಳೆಯ ರನ್ನದೋಲೆ ಮುತ್ತಿನ ಬೊಟ್ಟು
ಪೊಳೆವ ಮೂಗುತಿ ಕಂಠಮಾಲೆ ಭುಜಕೀರ್ತಿ ಸರ
ಪಳಿ ತೋಳಬಳೆ ಹಸ್ತಕಡಗ ಮಾಣಿಕ್ಯದುಂಗುರ ರಂಜಿಪೊಡ್ಯಾಣಮುಂ।
ಉಲಿವ ಘಂಟೆಗಳ ಕಟಿಸೂತ್ರ ನೂಪುರ ಕಾಲ
ಲುಳಿ ಕಡೆಯ ಬೆರಳಮುದ್ರಿಕೆ ಕಂಕಣಂಗಳು
ಲಲನೆಯರ್ ಗಿರಿರಾಜಸುತೆಗೆ ಸಿಂಗರಿಸಲತಿವಿಭವದಿಂ ರಂಜಿಸಿದಳು॥[೩೩೯]

ಈ ಮೇಲಿನ ಸಾಲುಗಳು ಗಿರಿರಾಜಸುತೆಯಾದ ಪಾರ್ವತಿಯು ಸರ್ವಾಭರಣ ಭೂಷಿತೆಯಾಗಿ ಮದುವಣಗಿತ್ತಿಯಾಗಿ ಅಲಂಕರಣೆಗೊಂಡಿರುವ ಚಿತ್ರಣವನ್ನು ಕೊಡುತ್ತದೆ.

ಅದೇ ರೀತಿಯಾಗಿ ರಾಮನಾಥಚರಿತದಲ್ಲಿ ಸ್ತ್ರೀಯರ ಅಲಂಕರಣೆಯನ್ನು ವರ್ಣಿಸುತ್ತದೆ.

ಪೆರೆನೊಸಲುರೆ ಮುತ್ತಿನ ಬೊಟ್ಟು
ಮಿರುಪವೇಂಟೆಯ ವಜ್ರದೋಲೆ
ತುರುಬಿನ ಮುತ್ತಿನ ಬಲೆ ಚೆನ್ನಗೇದಿಗೆ
ಗರಿಗಳಿಂ ಸಿಂಗರಿಸಿದಳು[೩೪೦]

ಹೀಗೆ ಅಲಂಕೃತರಾದ ಶಿವ-ಪಾರ್ವತಿಯರ ವಿವಾಹ ಸಂದರ್ಭದಲ್ಲಿ ಜೀರಿಗೆ ಬೆಲ್ಲವನ್ನು ಶಿವಪಾರ್ವತಿಯರು ಒಬ್ಬರಿಗೊಬ್ಬರು ಇಡುತ್ತಿರುವ ಚಿತ್ರಣವನ್ನು ಶಿವತತ್ತ್ವಚಿಂತಾಮಣಿಯ ಪದ್ಯವೊಂದರಲ್ಲಿ ಹೀಗೆ ವಿವರಿಸಿದೆ. ಅದರಂತೆ,

ಸುರಗುರು ವಿನಾಯತ ಮುಹೂರ್ತದೊಳ್ ಪಿಡಿದಿರ್ದ
ತೆರೆ ಸರಿವ ಸಮಯದೊಳು ದೇವವಾದ್ಯಗಳುಲಿಯೆ
ಕರಡೆ ಮದ್ದಳೆ ಭೇರಿ ಕಹಳೆ ಕೌಸಳ ವೇಣು ಶಂಖರವದೋಱುತಿರಲು
ಹರನು ಜೀರಿಗೆ ಬೆಲ್ಲದಿಂದದ್ರಿಜೆಯನಿಡಲು
ಮರಳಿ ಪಾರ್ವತಿ ಜೀರಿಗೆಯು ಬೆಲ್ಲದಿಂ ಶಿವನ
ನಿರದಿಡಲು ಕೊಂಡಾಡಿ ದನಿಮಾಡಲರಿವವರ ಚರಣಾಂಬುಜಕ್ಕೆ ಶರಣು[೩೪೧]

ಈ ಮೇಲಿನ ಸಾಲುಗಳಿಂದ ಶಿವ-ಪಾರ್ವತಿಯರ ವಿವಾಹ ಸಂದರ್ಭದ ನೈಜ ಚಿತ್ರಣವನ್ನು ಈ ಪದ್ಯವು ವಿವರಿಸುತ್ತದೆ. ಅಲ್ಲದೆ ದೇವ ವಿವಾಹದ ಸಂದರ್ಭದಲ್ಲಿ ಬಳಸುತ್ತಿದ್ದ ವಿವಿಧ ವಾದ್ಯಗಳನ್ನು ತಿಳಿಯಲು ಸಹಾಯಕವಾಗುತ್ತದೆ.

ಈ ಮೇಲಿನ ಎಲ್ಲಾ ವರ್ಣನೆಗಳು ಸಾಹಿತ್ಯಾಕರಗಳದರೆ, ಇವಕ್ಕೆ ವಿವರಣೆಗಳು ಅಥವಾ ಸಮರ್ಥನೆಯನ್ನು ಹಂಪಿಯ ವಿರೂಪಾಕ್ಷ ದೇವಾಲಯದ ಕಲ್ಯಾಣ ಮಂಟಪದ ಮೇಲ್ಚಾವಣಿಯಲ್ಲಿನ ವರ್ಣಚಿತ್ರಗಳು ಹಾಗೂ ಆಂಧ್ರಪ್ರದೇಶದ ಲೇಪಾಕ್ಷಿಯ ವೀರಭದ್ರ ದೇವಾಲಯದ ಕಲ್ಯಾಣ ಮಂಟಪದ ಮೇಲ್ಚಾವಣೆಯಲ್ಲಿನ ವರ್ಣಚಿತ್ರಗಳು ಶಿವಪಾರ್ವತಿಯರ ವಿವಾಹದ ಸ್ಪಷ್ಟ ನಿರೂಪಣೆಗಳಾಗಿವೆ.

ಮೊದಲಿಗೆ ಹಂಪಿಯ ವಿರೂಪಾಕ್ಷ ದೇವಾಲಯದ ಕಲ್ಯಾಣ ಮಂಟಪದಲ್ಲಿನ ಮೇಲ್ಚಾವಣೆಯ ವರ್ಣಚಿತ್ರಗಳನ್ನು(ಚಿತ್ರ–೫೮) ಗಮನಿಸಿದಾಗ ಗಿರಿಜೆ ಮತ್ತು ಅವಳ ಜೊತೆಯಿರುವ ಲಕ್ಷ್ಮಿ, ಭೂದೇವಿ ಮತ್ತು ಇತರೆ ಸ್ತ್ರೀಯರ ವಸ್ತ್ರಾಭರಣಗಳು ಬಹುತೇಕ ಒಂದೇ ಮಾದರಿಯಲ್ಲಿವೆ. ಆದರೆ ಬಣ್ಣ ಮತ್ತು ವಿನ್ಯಾಸದಲ್ಲಿ ವೈವಿಧ್ಯತೆಯಿಂದ ಕೂಡಿವೆ. ವಸ್ತ್ರಗಳು ಕಪ್ಪು, ಕೆಂಪು, ಬಿಳಿ ಮತ್ತು ಬೂದು ಬಣ್ಣಗಳಿಂದ ಕೂಡಿದ್ದು, ಚೌಕಳಿ, ಅಡ್ಡಗೆರೆಗಳ ಸಾದಾ ಸೀರೆ, ಅಂಚಿನ ಸೀರೆ, ಸೀರೆಯ ತುಂಬಾ ಇಂಗ್ಲಿಷ್‌ನ ಎಕ್ಸ್ (x) ಅಕ್ಷರದ ಸಣ್ಣ ಸಣ್ಣ ಸಂಕೇತಗಳಿಂದ ಹಾಗೂ ವಿವಿಧ ವಿನ್ಯಾಸಗಳಿಂದ ಸೀರೆಗಳನ್ನು ಮೂಡಿಸಿದ್ದಾರೆ.

ಈ ರೀತಿಯಾಗಿ ಬಣ್ಣದ ವಸ್ತ್ರಗಳನ್ನು ದೇವತೆಗಳಿಗೆ ತೊಡಿಸುತ್ತಿದ್ದರು ಎಂಬುದಕ್ಕೆ ಶಾಸನದ ಉಲ್ಲೇಖಗಳು ಸಮರ್ಥನೆಯನ್ನು ನೀಡುತ್ತವೆ. ಅದರಂತೆ ಕ್ರಿ.ಶ. ೧೫೩೨ರ ಅಚ್ಯುತರಾಯನ ಕಾಲಕ್ಕೆ ಸೇರಿದ ಶಾಸನವೊಂದರಲ್ಲಿ, "ಕಂಚಿಯ ವರದರಾಜದೇವರಿಗೆ ಅಚ್ಯುತರಾಯ, ರಾಣಿ

ವರದರಾಜದೇವಿ ಹಾಗೂ ರಾಜಕುಮಾರ ವೆಂಕಟಾದ್ರಿ ಭೇಟಿ ನೀಡಿ ಮುತ್ತಿನ ತುಲಾಪುರುಷ ದಾನ ಮಾಡಿ ಇತರ ದಾನಗಳನ್ನು ಸಮರ್ಪಿಸಿದರು". ಅದೇ ಶಾಸನದಲ್ಲಿ ಮುಂದುವರೆಸಿ, "ಸೀತಾಂಬ್ರ, ನಾಣಿಯವೆ ಪಟ್ಟೆ, ಹಚ್ಚಡ ೧೦, ಪಟ್ಟೆ ಸೀರೆ ೧೧, ಚಿಂನದ ಬರಹದ ಹಚಡ ೧೧, ಚಿಂನದ ಬರಹದ ಸೀರೆ ೩, ಮಂಜಿಡಿಕೆ ೨" ಎಂಬುದಾಗಿ ವಿವರಿಸುತ್ತದೆ. ಅಲ್ಲದೇ ಈ ಶಾಸನದಲ್ಲಿ ವಸ್ತ್ರದ ಸೆರಗಿನ ಅಲಂಕರಣೆಯನ್ನು ತಿಳಿಸುತ್ತಾ ಲತೆ ಹೂಗಳು ಮುಂತಾದ ವಿನ್ಯಾಸಗಳಿಗೆ ಮುತ್ತುರತ್ನ, ಕೆಂಪು, ಪಚ್ಚೆ, ಪುಷ್ಪರಾಗ, ಮಾಣಿಕ್ಯ, ವಜ್ರ, ನೀಲ ಮುಂತಾದವುಗಳಿಂದ ವಿನ್ಯಾಸಗೊಳಿಸಲು ನವರತ್ನಗಳಿಂದ ಕೂಡಿಸಿದ ಹೂಲತೆಗಳ ಅಲಂಕರಣೆ ಮಾಡಿಸಿ, ವಿವಿಧ ಬಣ್ಣಗಳ ವಸ್ತ್ರಗಳನ್ನು ದಾನ ನೀಡುತ್ತಿದ್ದರು ಎಂಬುದು ತಿಳಿಯುತ್ತದೆ.[೩೪೨] ಈ ಶಾಸನವು ಉಲ್ಲೇಖಿಸಿರುವಂತೆ ಪಟ್ಟೆ(ರೇಷ್ಮೆ ವಸ್ತ್ರ), ಸೀತಾಂಬ್ರ(ಬಿಳಿಯ ವಸ್ತ್ರ), ಮಂಜಿಡಿಕೆ(ಕೆಂಪುಬಣ್ಣದ ಸೀರೆ) ಮುಂತಾದ ಬಣ್ಣಗಳ ಉಲ್ಲೇಖವಿದ್ದು, ಆ ಕಾಲದ ವಸ್ತ್ರಗಳಿಗೆ ಹಾಕುತ್ತಿದ್ದ ಕಲೆಯನ್ನು ತಿಳಿಯುವಲ್ಲಿ ಉತ್ತಮ ಆಕರವಾಗಿದೆ.

ವಿಶೇಷವೆಂದರೆ ಮೂಗುತಿ ಮತ್ತು ಮುಕುರ (ಮೂಗಿನ ಹೊಳ್ಳೆಗಳ ನಡುವಿನ ಆಭರಣ) ಗಳನ್ನು ಗಿರಿಜೆ ಹಾಗೂ ಇತರೆ ಸ್ತ್ರೀ ಶಿಲ್ಪಗಳಲ್ಲಿ (ಚಿತ್ರ–೫೮) ಕಾಣಬಹುದು. ಕೆಲ ವಿದ್ವಾಂಸರ ಅಭಿಪ್ರಾಯದಂತೆ ಈ ವರ್ಣಚಿತ್ರಗಳು ಹದಿನೇಳನೆ ಶತಮಾನದ ನಂತರ ಪುನರ್ ಬಣ್ಣಗೊಂಡಿದ್ದು, ಹಾಗಾಗಿ ಮೊದಲಿನ ಶಿಲ್ಪಗಳಲ್ಲಿ ಮೂಗುತಿ ಇರಲಿಲ್ಲ. ಪುನರ್ ಬಣ್ಣಗೊಂಡ ಚಿತ್ರಗಳಾಗಿದ್ದರಿಂದ ಆ ಕಾಲದ ಆಭರಣಗಳನ್ನು ಈ ಚಿತ್ರಗಳಲ್ಲಿ ಮೂಢಿಸಿದ್ದಾರೆ ಎಂಬುದಾಗಿ ಅಭಿಪ್ರಾಯಪಡುತ್ತಾರೆ. ಆದರೆ ವಿಜಯನಗರ ಕಾಲದ ಆಕರಗಳಲ್ಲಿ ಮೂಗುತಿ ಮತ್ತು ಮುಕುರದ ಉಲ್ಲೇಖಗಳು ಸಿಗುತ್ತವೆ. ಚೆನ್ನಬಸವಪುರಾಣದಲ್ಲಿ, 'ಪೊಳೆವ ಮುಗುತಿ',[೩೪೩] ರಾಮನಾಥ ಚರಿತದಲ್ಲಿ 'ಮುತ್ತಿನ ಬೊಟ್ಟು', 'ಮೂಕುತಿ ಮುದ್ದು ಮೊಗ',[೩೪೪] ಅದೇ ಕೃತಿಯ ಮತ್ತೊಂದು ಪದ್ಯದಲ್ಲಿ 'ಮಿಸುಪ ಮೂಗುತಿ, ಸುಲಿಪಲ್ಲು ಮಿಂಚೋಲೆಯಿಂ'[೩೪೫] ಎಂಬ ಮೂಗಿನ ಆಭರಣದ ಉಲ್ಲೇಖವಿದೆ. ಅದರಂತೆಯೇ ರಾಯ ವಾಚಕಮು ಕೃತಿಯಲ್ಲಿ, 'ಶ್ರೀಕೃಷ್ಣದೇವರಾಯನು ಮಧುರೆಯ ಮೀನಾಕ್ಷಿ ಅಮ್ಮನವರ ದರ್ಶನ ಪಡೆದು ಅಮ್ಮನವರಿಗೆ, 'ಪಚ್ಚೆಯ ಕರ್ಣಕುಂಡಲ'ಗಳನ್ನು, 'ಮುತ್ತಿನ ಮುಕ್ರ'ವನ್ನು ಸಮರ್ಪಿಸಿದನು[೩೪೬] ಎಂಬುದಾಗಿ ತಿಳಿಸಲಾಗಿದೆ. ಬಾರ್ಬೋಸ ಸ್ತ್ರೀಯರು ಧರಿಸುತ್ತಿದ್ದ ಆಭರಣಗಳನ್ನು ಕುರಿತು ವಿವರಿಸುತ್ತಾ ಮೂಗುತಿಯ ಪ್ರಸ್ತಾಪವನ್ನು ಮಾಡುತ್ತಾನೆ. ಅವನು ವಿವರಿಸುವಂತೆ, "ಸ್ತ್ರೀಯರು ಮೂಗಿಗೆ ಒಂದು ಕಡೆ ತೂತು ಮಾಡಿ ಮುತ್ತಿನ ಅಥವಾ ಹರಳಿನ ತೂಗು ಮುಗುತಿಯನ್ನು ಧರಿಸುತ್ತಾರೆ".[೩೪೭] ಈ ರೀತಿಯಾಗಿ ವಿಜಯನಗರ ಕಾಲದಲ್ಲಿ ಸ್ತ್ರೀಯರು ಧರಿಸುತ್ತಿದ್ದ ಮೂಗಿನ ಆಭರಣವನ್ನು ದಾಖಲಿಸಿದ್ದಾನೆ. ಅವನು ನೀಡುವ ವಿವರಣೆಯಂತೆ ತೂಗು ಮೂಗುತಿ ಎಂದರೆ ಮುಕುರ (ಬುಲಾಕು)ವಾಗಿದೆ. ಹಾಗಾಗಿ ಹಂಪಿಯ ವಿರೂಪಾಕ್ಷ ಕಲ್ಯಾಣ ಮಂಟಪದಲ್ಲಿನ ವರ್ಣ ಚಿತ್ರಗಳಲ್ಲಿರುವ ಗಿರಿಜಾ ಕಲ್ಯಾಣ ಪಟ್ಟಿಕೆಯಲ್ಲಿ ಗಿರಿಜೆ ಹಾಗೂ ಇತರ ಸ್ತ್ರೀ ದೇವತೆಗಳು ಧರಿಸಿರುವ ಮೂಗಿನ ಆಭರಣ ವಿಜಯನಗರ ಕಾಲದ್ದೆಂದೇ ಗುರುತಿಸಬಹುದಾಗಿದೆ. ಈ ರೀತಿಯ ಆಭರಣಗಳು ಅಂದಿನ ಸಮಾಜದಲ್ಲಿ ಸ್ತ್ರೀಯರು ಬಳಸುತ್ತಿದ್ದ ಕಾರಣದಿಂದಾಗಿ ವರ್ಣಚಿತ್ರಗಳಲ್ಲಿ ತೊಡಿಸಿದ್ದರು ಎಂಬುದಾಗಿ ತಿಳಿದುಬರುವ ಸ್ಪಷ್ಟ ಸಂಗತಿ.

ಒಟ್ಟಾರೆ ಮೂಗುತಿ ಮತ್ತು ಮುತ್ತಿನ ಮುಕುರವನ್ನು ಈ ಚಿತ್ರಗಳಲ್ಲಿ ಸ್ಪಷ್ಟವಾಗಿ ಗಮನಿಸಬಹುದು. ಇದರೊಂದಿಗೆ ಓಲೆ, ಜುಮುಕಿ ಎಂಬ ಕರ್ಣಾಭರಣಗಳನ್ನು, ಮೇಲ್ಗಿವಿಗೆ ಧರಿಸುವ ಕೊಪ್ಪು ಹಾಗೂ ಸಣ್ಣ ಎಲೆಯಾಕಾರದ ವಿನ್ಯಾಸವಿರುವ ನೂಪುರಗಳನ್ನು ಚಿತ್ರಿಸಿ ರುವುದನ್ನು ಕಾಣಬಹುದಾಗಿದೆ.

ಲೇಪಾಕ್ಷಿಯ ವೀರಭದ್ರ ದೇವಾಲಯದಲ್ಲಿನ ಹಿಂಭಾಗದಲ್ಲಿ ಅಪೂರ್ಣಗೊಂಡ ಕಲ್ಯಾಣ ಮಂಟಪವಿದೆ. ಈ ಕಲ್ಯಾಣ ಮಂಟಪದಲ್ಲಿನ ಶಿಲ್ಪಗಳು ಶಿವಪಾರ್ವತಿಯರ ಕಲ್ಯಾಣ ಮಂಟಪವನ್ನು ನಿರೂಪಿಸುವಂತಿದೆ. ಕಲ್ಯಾಣಮಂಟಪದಲ್ಲಿ ದೊಡ್ಡ ಸ್ತಂಭಗಳಿದ್ದು, ಆ ಸ್ತಂಭಗಳ ಮೇಲೆ ಪಾರ್ವತಿ ಪರಮೇಶ್ವರರ ವಿವಾಹಕ್ಕೆ ಆಗಮಿಸಿದ ಪಾರ್ವತಿಯ ತಂದೆ ತಾಯಿಗಳಾದ ಹಿಮವಂತ, ಮೀನಾದೇವಿ, ದೇವೇಂದ್ರ, ಅಗ್ನಿ, ವಿಶ್ವಾಮಿತ್ರ, ಕುಬೇರ ಮುಂತಾದವರು ತಮ್ಮತಮ್ಮ ವಾಹನಗಳ ಸಮೇತ ಬಂದಂತೆ ಸ್ತಂಭಗಳ ಮೇಲೆ ಶಿಲ್ಪಗಳನ್ನು ಕೆತ್ತಿದ್ದಾರೆ. ಹಿಮವಂತನು ಕನ್ಯಾದಾನ ಮಾಡಲು ಕ್ಷೀರ ಪಾತ್ರೆ (ವರನ ಕಾಲು ತೊಳೆಯಲು ಬಳಸುವ ನೀರಿನ ಪಾತ್ರೆ)ಯನ್ನು ಹಿಡಿದು ನಿಂತಿದ್ದಾನೆ (ಚಿತ್ರ–೫೯). ಹಿಮವಂತ ಪೂರ್ಣೋರುಕವನ್ನು ಧರಿಸಿದ್ದು, ಅದರ ಮೇಲೆ ಮೇಖಲೆಯನ್ನು ಧರಿಸಿದ್ದಾನೆ. ಮೇಖಲೆಯು ವಿವಿಧ ಹಂತಗಳ ಹಾರವನ್ನು ಮುತ್ತು ರತ್ನ, ಚಿನ್ನದಿಂದ ಕೂಡಿದೆ. ಅದೇ ಮಾದರಿಯ ಸಣ್ಣ ಪ್ರಮಾಣದಲ್ಲಿ ಉದರ ಬಂಧವಿದೆ. ಈ ಉದರ ಬಂಧ ಮೇಖಲೆಯ ಮಾದರಿಯಲ್ಲಿಯೇ ಖಂಡಿರಿಸಿದ್ದು, ತುಂಬಾ ವಿಶೇಷವಾದ ಆಭರಣವಾಗಿದೆ.

ಅದೇ ದೇವಾಲಯದ ಮಹಾಮಂಟಪದ ಮೇಲ್ಚಾವಣಿಯಲ್ಲಿರುವ ವರ್ಣಚಿತ್ರಗಳಲ್ಲಿ ಶಿವಪಾರ್ವತಿಯರ ಕಲ್ಯಾಣಕ್ಕೆ ಸಂಬಂಧಿಸಿದ ಚಿತ್ರಣವಿದೆ. ಬ್ರಹ್ಮನು ಯಜ್ಞಕುಂಡದ ಬಳಿ ಕುಳಿತ್ತಿದ್ದು, ಹೋಮ ಮಾಡುತ್ತಾ ಪೌರೋಹಿತ್ಯ ಸ್ಥಾನವನ್ನು ಅಲಂಕರಿಸಿದ್ದಾನೆ, ವಿಷ್ಣು ಮತ್ತು ಹಲವು ದೇವತೆಗಳು, ಸ್ತ್ರೀ ದೇವತೆಗಳು, ಋಷಿಮುನಿಗಳು ವಿವಾಹಕ್ಕೆ ಆಹ್ವಾನಿರತಾಗಿ ಬಂದಿರುವಂತೆ ಚಿತ್ರಿಸಲಾಗಿದೆ.

ಕಲ್ಯಾಣ ಮಂಟಪದಲ್ಲಿರುವ ಸ್ತಂಭದ ಮೇಲಿರುವ ಗಿರಿಜೆಯ ಶಿಲ್ಪದಲ್ಲಿ (ಚಿತ್ರ–೫೯ಎ), ವಧುವಾದ ಗಿರಿಜೆಯು ತನ್ನ ಬಲಗೈಯಲ್ಲಿ ಉತ್ಪಲವನ್ನು ಹಿಡಿದಿದ್ದು, ಎಡಗೈ ಕೆಳಭಾಗದಲ್ಲಿ ಇಳಿಬಿಟ್ಟಿರುವಂತೆ ಚಿತ್ರಿಸಲಾಗಿದೆ. ಗಿರಿಜೆಯ ಜಟೆಯು ಹರಡಿದ್ದು, ಅದರ ಮೇಲೆ ಕರಂಡ ಮಕುಟವನ್ನು ಧರಿಸಿದ್ದು, ಮಕುಟದ ಮುಂದಿನ ಮಧ್ಯಭಾಗದಲ್ಲಿ ಪದಕವಿದೆ. ಎರಡೆಳೆಯ ಮುತ್ತಿನ ದೊಡ್ಡ ವೃತ್ತದ ಓಲೆಗಳು, ಪದಕವಿರುವ ಮೂರೆಳೆಯ ಮುತ್ತುರತ್ನದಿಂದ ಕೂಡಿದ ಕಂಠೀಹಾರ, ಮೋಹನಮಾಲೆಯ ಸ್ತನಹಾರ, ಮುತ್ತಿನ ಎರಡೆಳೆಯ ಬಾಹುವಲಯ, ಮುತ್ತು ಮತ್ತು ರತ್ನದ ಮೂರೆಳೆಯ ಬಾಹುಬಂಧಿಗಳು ಮತ್ತು ಮುಂಗೈ ಕಂಕಣಗಳು, ಎರಡೂ ಕೈಗಳ ಎಲ್ಲ ಬೆರಳುಗಳಿಗೆ ಉಂಗುರಗಳು, ಹಸ್ತವಲಯಗಳು, ಪದಕವಿರುವ ಮೇಖಲೆ, ಕಾಲ್ಗಡಗಗಳು, ಪಾದವಲಯವನ್ನು ಹಾಗೂ ವನಮಾಲೆಯನ್ನು ಧರಿಸಿದ್ದಾಳೆ. ವಸ್ತ್ರಗಳಲ್ಲಿ ಕುಚಬಂಧ, ಕಚ್ಚೆ ಹಾಕಿದ ಪಟ್ಟಾವಳಿ ಸೀರೆಯನ್ನು ಪಾದಗಳವರೆಗೆ ಧರಿಸಿದ್ದು, ಸೀರೆಯಲ್ಲಿ ಮುತ್ತುರತ್ನಗಳ ಕುಸುರಿ ಕೆಲಸವನ್ನು ಅಡ್ಡಗೆರೆಯೋಪಾದಿಯಲ್ಲಿ ಮಾಡಲಾಗಿದೆ. ಹೀಗೆ ಗಿರಿಜೆಯನ್ನು ಶಿಲ್ಪದಲ್ಲಿ ವಧುವಾಗಿ

ಶ್ರೀಮಂತ ವಸ್ತ್ರ ಮತ್ತು ಆಭರಣಗಳಿಂದ ಶೃಂಗಾರವಾಗಿ ಚಿತ್ರಿಸಿದ್ದು, ನೋಡಲು ಬಹು ಸುಂದರವಾಗಿದೆ.

ಇಲ್ಲಿ ಶಿವನು ಎತ್ತರದ ಜಟಾಮಕುಟಧಾರಿಯಾಗಿದ್ದು, ಜಟೆಯನ್ನು ವಿವಿಧ ಮುತ್ತು ರತ್ನಗಳಿಂದ ಅಲಂಕರಿಸಿಕೊಂಡಿದ್ದಾನೆ. ಇದರೊಂದಿಗೆ ಹಲವು ಆಭರಣಗಳನ್ನು ಧರಿಸಿದ್ದಾನೆ. ವ್ಯಾಘ್ರಚರ್ಮದ ಉಡುಗೆ ಹಾಗೂ ನಿತಂಬಗಳ ಮುಂದೆ ವಸ್ತ್ರದ ಕುಚ್ಚುಗಳು ಇಳಿಬಿದ್ದಿವೆ. ಇದರೊಂದಿಗೆ ರೇಷ್ಮೆಯ ಉತ್ತರೀಯನ್ನು ಕಟಿಯ ಎರಡೂ ಭಾಗದಲ್ಲಿ ಹಾರಾಡುತ್ತಾ ಇಳಿದಿರುವಂತೆ ಚಿತ್ರಿಸಲಾಗಿದ್ದು, ಇದರ ಅಂಚುಗಳು ಉತ್ಕೃಷ್ಟ ಅಲಂಕರಣೆ ಯಿಂದ ಕೂಡಿವೆ. ಶಿವನ ಕೆಳಗೆ ನಂದಿಯನ್ನು ಸಣ್ಣ ಪ್ರಮಾಣದಲ್ಲಿ ಚಿತ್ರಿಸಲಾಗಿದೆ. ಉಳಿದಂತೆ ಬ್ರಹ್ಮ, ವಿಷ್ಣು ಹಾಗೂ ಹಲವು ಗಣ ದೇವತೆಗಳ ವಸ್ತ್ರ ಮತ್ತು ಆಭರಣಗಳು ಶ್ರೀಮಂತ ಅಲಂಕರಣೆಯನ್ನು ಒಳಗೊಂಡಿವೆ.

ಸ್ತ್ರೀ ಚಿತ್ರಗಳ ವಸ್ತ್ರ ಆಭರಣಗಳಿಗೆ ಸಂಬಂಧಿಸಿದಂತೆ ವಿವಿಧ ವಿನ್ಯಾಸದ ಸೀರೆಗಳನ್ನು ಧರಿಸಿದಂತೆ ಚಿತ್ರಿಸಲಾಗಿದೆ (ಚಿತ್ರ–೬೦). ಅದರಲ್ಲಿ ಚೌಕಳಿ, ಅಡ್ಡಗೆರೆ, ಉದ್ದಗೆರೆ, ವಜ್ರಾಕಾರದ ವಿನ್ಯಾಸದಲ್ಲಿ ಕೆಂಪು ಮತ್ತು ಕಪ್ಪು ಮುಂತಾದ ಬಣ್ಣಗಳಿಂದ ಕೂಡಿದ ಸೀರೆ, ಬಿಳಿ, ಕಪ್ಪು, ಕೆಂಪು ಮುಂತಾದ ಬಣ್ಣಗಳ ಸೀರೆಗಳನ್ನು ಕಾಣಬಹುದಾಗಿದೆ. ಈ ಸೀರೆಗಳಿಗೆ ವಿವಿಧ ಅಂಚುಗಳ ಅಲಂಕರಣೆಯಿದೆ. ಆಭರಣಗಳಿಗೆ ಬಂದರೆ ಕಾವ್ಯಗಳಲ್ಲಿ ವ್ಯಕ್ತವಾಗಿರುವ ಬಹುತೇಕ ಆಭರಣಗಳ ಸ್ಪಷ್ಟ ಚಿತ್ರಣವನ್ನು ಈ ವರ್ಣಚಿತ್ರಗಳು ನೀಡುತ್ತವೆ. ಮುತ್ತಿನ ಬೈತಲೆ ಬೊಟ್ಟು (ಜೂಳೆಯ), ಅಗಲವಾದ ಮುತ್ತಿನ ಕಿವಿಯೋಲೆ, ಬುಗುಡಿ, ಮುತ್ತಿನ ಬಾವಲಿ (ನಡುಗಿವಿಯ ಮೇಲೆ ಧರಿಸುವಂತೆ) ಸಾದಾಬಾವಲಿ (ರಿಂಗ್ ಮಾದರಿ), ಹಲವು ಕಂಠೀ ಹಾರಗಳು, ಇವುಗಳೊಂದಿಗೆ, ಮತ್ತೊಂದು ವಿಶೇಷ ತುರುಬಿಗೆ ಮುತ್ತುರತ್ನದ ಮುತ್ಸಾಲ ಜಲ್ಲಿಯನ್ನು ಹಾಕಿದ್ದಾನೆ. ಆ ತುರುಬಿನ ಮುತ್ಸಾಲ ಜಲ್ಲಿಯಲ್ಲಿ ಬಿಂಬಮು (ಬಲೆಗೆ) ಎಂಬ ವಿವಿಧ ಸಣ್ಣ ಸಣ್ಣ ಮುತ್ತುರತ್ನಗಳಿಂದ ಸುತ್ತುವರೆದ ಬಂಗಾರದ ವರ್ತುಲಾಕಾರದ ಹೂಗಳಿಂದ ತುರುಬಿನ ಬಲೆಯನ್ನು ಅಲಂಕರಿಸಿದ್ದಾರೆ. ರಾಮನಾಥಚರಿತದ ಪದ್ಯದಲ್ಲಿನ ತುರುಬಿನ ಮುತ್ತಿನ ಬಲೆ ಹಾಗೂ ಅದರ ಅಲಂಕರಣೆಗೆ ಸಂಬಂಧಿಸಿದ ಚಿನ್ನದ ಹೂಗಳ ಉಲ್ಲೇಖವನ್ನು ಲೇಪಾಕ್ಷಿಯ ವರ್ಣಚಿತ್ರಗಳಲ್ಲಿ ಗಿರಿಜೆ ಹಾಗೂ ಇತರೆ ಸ್ತ್ರೀ ದೇವತೆಗಳ ತುರುಬಗಳ ಅಲಂಕರಣೆಯು ಪುಷ್ಠೀಕರಿಸುತ್ತವೆ. ಗಿರಿಜೆಯ ಸಹಚರ ಸ್ತ್ರೀಯರು ಚಿತ್ರಗಳಲ್ಲಿ ಉದ್ದ ಜಡೆಯನ್ನು ಹಾಕಿದ್ದು, ಜಡೆಯ ತುದಿಗೆ ರಿಬ್ಬನ್ ಮಾದರಿಯಲ್ಲಿ ದಾರವನ್ನು ಕಟ್ಟಿ ಹೆಣೆದ ಜಡೆ ಬಿಚ್ಚದಂತೆ ಬಿಗಿಗೊಳಿಸಿರುವುದನ್ನು ಗಮನಿಸಬಹುದಾಗಿದೆ.

ಈ ಎಲ್ಲಾ ಶಿಲ್ಪಗಳಲ್ಲಿ ಮುತ್ತಿನ ಆಭರಣಗಳು ಪ್ರಧಾನ ಪಾತ್ರವಹಿಸಿವೆ. ಈ ಸ್ತ್ರೀ ಶಿಲ್ಪಗಳಿಗೆ ಕಿರೀಟ ಮಕುಟಗಳಿಲ್ಲ. ಬಹುಶಃ ಆಭರಣಗಳು ಕಾಣಬೇಕೆನ್ನುವ ಹಿನ್ನೆಲೆಯಲ್ಲಿ ವರ್ಣಚಿತ್ರಗಳಲ್ಲಿ ಹೀಗೆ ಮಾಡಿರಬಹುದೇನೊ. ಆದರೆ ಹಂಪಿಯ ವಿರೂಪಾಕ್ಷ ದೇವಾಲಯದ ವರ್ಣಚಿತ್ರಗಳಲ್ಲಿ ಸ್ತ್ರೀಶಿಲ್ಪಗಳಿಗೆ ಕರಂಡಮಕುಟವನ್ನು ಚಿತ್ರಿಸಲಾಗಿದೆ. ಅಲ್ಲದೇ ಅಲ್ಲಿ ಸೀರೆಯನ್ನು ಶಿಲ್ಪಗಳಲ್ಲಿ ಕಂಡಿರಿಸಿರುವಂತೆ ಕಟಿಯಿಂದ (ನಾಭಿಯವರೆಗೆ) ಪಾದಗಳ ಮೇಲ್ಭಾಗದವರೆಗೆ ಇದ್ದು, ಕಚ್ಚೆಹಾಕಿ ಉಟ್ಟಿದ್ದಾರೆ. ಆದರೆ ಲೇಪಾಕ್ಷಿಯ ಈ ಗಿರಿಜಾಕಲ್ಯಾಣಕ್ಕೆ ಸಂಬಂಧಿಸಿದ ವರ್ಣಚಿತ್ರಗಳಲ್ಲಿ ಎಲ್ಲಾ

ಸ್ತ್ರೀ ಶಿಲ್ಪಗಳಿಗೆ ಇಂದಿನ ಸ್ತ್ರೀಯರು ಉಡುವಂತೆ ಸಡಿಲವಾದ ವಿಧಾನದಲ್ಲಿ ಸೀರೆಯನ್ನು ಚಿತ್ರಿಸಿದ್ದಾರೆ. ಸೀರೆಯ ಸೆರಗನ್ನು ವಿಭಿನ್ನ ವಿನ್ಯಾಸದಲ್ಲಿ ಹಾಕಿರುವಂತೆ ಚಿತ್ರಿಸಿದ್ದಾರೆ. ಆದರೆ ರವಿಕೆಯನ್ನು ಚಿತ್ರಿಸಿರುವುದಿಲ್ಲದಿರುವುದು ಸ್ಪಷ್ಟವಾಗಿ ಕಂಡುಬರುತ್ತದೆ.

ಒಟ್ಟಾರೆ ಗಿರಿಜಾ ಕಲ್ಯಾಣಕ್ಕೆ ಸಂಬಂಧಿಸಿದಂತೆ ಎಲ್ಲಾ ಶಿಲ್ಪ ಹಾಗೂ ವರ್ಣಚಿತ್ರಗಳಲ್ಲಿ ಶ್ರೀಮಂತ ಅಲಂಕರಣೆಯನ್ನು ಕಾಣಬಹುದಾಗಿದೆ. ಬಹುಶಃ ವಿಶೇಷ ಸಂದರ್ಭವಾದ್ದರಿಂದ (ಒಂದು ದೇವರ ಮದುವೆ, ಮತ್ತೊಂದು ಸಾಮಾಜಿಕ ಅಂಶವಾದ ವಿವಾಹ ಸಂದರ್ಭ) ಚಿತ್ರ ರಚನಾಕಾರರು ತಮ್ಮ ಮನೋಬಲದಿಂದ ಅತ್ಯುತ್ತಮ ಚಿತ್ರಣವನ್ನು ಮೂಡಿಸಿದ್ದಾರೆ. ಹಾಗಾಗಿ ಆಗಮಗಳು, ಶಿಲ್ಪರತ್ನ ಮತ್ತು ವಿಜಯನಗರ ಕಾಲದ ಕಾವ್ಯಗಳಲ್ಲಿರುವ ವಿವರಗಳಿಗೆ ಈ ಶಿಲ್ಪಗಳು ಮತ್ತು ವರ್ಣಚಿತ್ರಗಳು ಸಮರ್ಥನೆಯನ್ನು ನೀಡುತ್ತವೆ ಎಂದೇ ಹೇಳಬಹುದಾಗಿದೆ.

೩.೫.೨. ವೈಷ್ಣವ ಶಿಲ್ಪಗಳು

ವೇದಕಾಲದಿಂದ ವಿಷ್ಣುವಿನ ಆರಾಧನೆ ನಡೆದುಕೊಂಡು ಬಂದಿದೆ. ಶತಪಥ ಬ್ರಾಹ್ಮಣದಲ್ಲಿ ವಿಷ್ಣುವನ್ನು ಅತ್ಯಂತ ಉನ್ನತ ಸ್ಥಾನದಲ್ಲಿ ಪೂಜಿಸಲು ಪ್ರಾರಂಭವಾಯಿತು ಎಂದು ತಿಳಿದುಬಂದಿದೆ. ವಿಷ್ಣುವನ್ನು ಸ್ಥಾನಿಕ, ಆಸೀನ ಹಾಗೂ ಶಯನ ಭಂಗಿಗಳಲ್ಲಿ ಪೂಜಿಸುವುದು ರೂಢಿಯಲ್ಲಿದೆ. ವಿಷ್ಣುವಿನ ವಾಹನ ಗರುಡ, ಮಹಾಭಾರತದಲ್ಲಿ ಗರುಡವಾಹನ ಮೂರ್ತಿವಿಷ್ಣು ಎಂಬುದಾಗಿ ಉಲ್ಲೇಖಿಸುತ್ತದೆ.[೩೪೮]

ವಿಷ್ಣು

ಪದ್ಮ ಪೀಠದ ಮೇಲೆ ಸಮಭಂಗಿಯಲ್ಲಿ ನಿಂತಿರುವ ಮೂರ್ತಿಯನ್ನು ಸ್ಥಾನಕ ಮೂರ್ತಿ ಎಂದು ಕರೆಯವರು. ಈ ರೀತಿಯ ಶಿಲ್ಪವನ್ನು ಕಮಲಾಪುರದ ವಸ್ತು ಸಂಗ್ರಹಾಲಯದಲ್ಲಿ ಕಾಣಬಹುದಾಗಿದೆ. ಇಲ್ಲಿ ಸ್ಥಾನಕ ಮೂರ್ತಿ ವಿಷ್ಣುವು ಪದ್ಮಪೀಠದ ಮೇಲೆ ನಿಂತಿದ್ದಾನೆ. ವಿಷ್ಣುವಿನ ತಲೆಯ ಭಾಗ ತುಂಡರಿಸಿದೆ. ಚತುರ್ಭುಜನಾದ ವಿಷ್ಣು ಮಣಿರತ್ನಗಳಿಂದ ಕೂಡಿದ ಭುಜವಲಯ, ಪದ್ಮಪದಕವಿರುವ ಕಂಠಿಕೆ, ಅದರ ಕೆಳಗೆ ಎರಡೆಳೆಯ ಪದ್ಮಪದಕವಿರುವ ಮುತ್ತು ರತ್ನದ ಕಂಠೀಹಾರ, ಇದರೊಂದಿಗೆ ಮತ್ತೊಂದು ಮುತ್ತಿನ ಹಾರವನ್ನು ನಾಭಿಯವರೆಗೆ ಧರಿಸಿದ್ದು, ಎರಡೆಳೆಯ ಭುಜಕೀರ್ತಿ (ಕೇಯೂರ), ದಪ್ಪವಾದ ಎರಡೆಳೆಯ ಮುಂಗೈ ಕಡಗಗಳು, ಕೈಬೆರಳುಗಳಲ್ಲಿ ಉಂಗುರಗಳನ್ನು ಧರಿಸಿದ್ದು, ಪದಕವಿರುವ ವೈಜಯಂತಿಮಾಲೆ ಕಾಲ್ಗಡಗ ಮತ್ತು ಪಾದಸರವನ್ನು ಧರಿಸಿದ್ದಾನೆ. ಕಚ್ಚೆ ಹಾಕಿದ ಧೋತ್ರವನ್ನು ಪೂರ್ಣೋರುಕದಲ್ಲಿ ಧರಿಸಿದ್ದು, ಉತ್ತರೀಯವನ್ನು ಕಟಿಯ ಎರಡೂ ಭಾಗಗಳಿಗೆ ಹಾರಡುವಂತೆ ಬಂಧಿಸಲಾಗಿದೆ. ಧೋತ್ರದ ಮೇಲೆ ಪದ್ಮಪದಕ ಮತ್ತು ಸಣ್ಣ ಹಾರಗಳ ವಿನ್ಯಾಸದಿಂದ ಮುತ್ತುರತ್ನಗಳಿಂದ ಕೂಡಿದ ಮೇಖಲೆ ಧರಿಸಿರುವುದನ್ನು ಕಾಣ ಬಹುದು. ಉದರಬಂಧವನ್ನು ಧರಿಸಿದ್ದು, ಈ ಶಿಲ್ಪದ ಬಹುತೇಕ ವಸ್ತ್ರ ಮತ್ತು ಆಭರಣಗಳಿಗೆ ಮುತ್ತುಗಳನ್ನು ಬಳಸಿರುವುದು ಗಮನಾರ್ಹ ಅಂಶವಾಗಿದೆ.

ಅದೇ ವಸ್ತು ಸಂಗ್ರಹಾಲಯದಲ್ಲಿರುವ ಮತ್ತೊಂದು ಸ್ಥಾನಿಕ ವಿಷ್ಣುಮೂರ್ತಿ ಶಿಲ್ಪದಲ್ಲಿ

ಎಡ ಕೆಳಗೈಯಲ್ಲಿ ಅಕ್ಷಮಾಲೆಯನ್ನು ಹಿಡಿದುಕೊಂಡಿದ್ದು, ಧೋತ್ರವು ತುಂಬಾ ಅಲಂಕರಣೆಯಿಂದ ಕೂಡಿದ ಪೀತಾಂಬರವಾಗಿದೆ. ಧೋತ್ರದ ಅಂಚುಗಳನ್ನು ಕಟಿಯಿಂದ ಪಾದಗಳ ವರೆಗೆ ಮಧ್ಯಭಾಗದಲ್ಲಿ ಬರುವಂತೆ ಧರಿಸಿರುವುದು ವಿಶೇಷವಾಗಿದೆ.

ಆಸನಮೂರ್ತಿ ವಿಷ್ಣು

ವಿಜಯನಗರ ಕಾಲದ ಆಸನಮೂರ್ತಿ ವಿಷ್ಣುವಿನ ಶಿಲ್ಪಗಳು ಕಮಲಾಪುರದ ವಸ್ತು ಸಂಗ್ರಹಾಲಯದಲ್ಲಿ ಕಂಡುಬರುತ್ತವೆ. ಪದ್ಮಪೀಠದ ಮೇಲೆ ಚತುರ್ಭುಜನಾಗಿ ಕುಳಿತಿರುವ ವಿಷ್ಣುವು ಅಭಯ ಮತ್ತು ವರದ ಹಸ್ತನಾಗಿ ಹಾಗೂ ಚಕ್ರ ಮತ್ತು ಶಂಖಗಳನ್ನು ಹಿಡಿದಿದ್ದಾನೆ. ಈ ಶಿಲ್ಪದಲ್ಲಿನ ವಿಷ್ಣುವಿನ ವಸ್ತ್ರಗಳಿಗೆ ಸಂಬಂಧಿಸಿದಂತೆ ಧೋತ್ರವನ್ನು ಕಚ್ಚೆಹಾಕಿ ಪೂರ್ಣೋರುಕವನ್ನು ಧರಿಸಿದ್ದು, ಇತರ ಆಭರಣಗಳೊಂದಿಗೆ, ವಿಶೇಷವಾಗಿ ಕಂಡುಬರುವ ಮಕರಕುಂಡಲಗಳು, ಮೂರೆಳೆಯ ಮುತ್ತಿನ ಉದರಬಂದ, ಮುತ್ತಿನ ಛನ್ನವೀರ, ಇವುಗಳೊಂದಿಗೆ ಆಯುಧಗಳಾದ ಶಂಖಕ್ಕೆ ಹಿಡಿಕೆಯಿದ್ದು, ಅದರ ಮೇಲೆ ಅಲಂಕರಣೆಗೊಂಡಿದೆ, ಅಲ್ಲದೆ ಗದೆಯ ಮುಂಭಾಗದಲ್ಲಿ ಅದೇ ರೀತಿಯ ಅಲಂಕರಣೆಯನ್ನು ಗಮನಿಸಬಹುದಾಗಿದೆ. ಆಸನಮೂರ್ತಿ ವಿಷ್ಣುವಿನ ಶಿಲ್ಪವು ವಿರೂಪಾಕ್ಷ ದೇವಾಲಯದ ಮುಖಮಂಟಪದ ಸ್ತಂಭವೊಂದರ ಮೇಲೆ ಸಹ ಕಂಡುಬಂದಿದೆ.

ಶಯನಮೂರ್ತಿ ವಿಷ್ಣು

ವಿಷ್ಣುವು ಸರ್ಪದ ಮೇಲೆ(ಶೇಷದ)ಮಲಗಿರುವ ಭಂಗಿಯನ್ನು ಶೇಷಶಯನ ವಿಷ್ಣು ಅಥವಾ ಶಯನ ಮೂರ್ತಿ ವಿಷ್ಣು ಎಂದು ಕರೆಯುತ್ತಾರೆ. ವಿಷ್ಣುಧರ್ಮೋತ್ತರ ಪುರಾಣದಲ್ಲಿ ಸಮುದ್ರಮಂಥನ ಸಂದರ್ಭದಲ್ಲಿ ವಿಷ್ಣುವು ಸರ್ಪದ ಮೇಲೆ ಮಲಗಿದ್ದನು. ಅವನ ಎದೆಯಿಂದ ಕಮಲವು ಉದ್ಭವವಾಯಿತು. ಬ್ರಹ್ಮನ ನಿರ್ದೇಶನದಂತೆ ಲಕ್ಷ್ಮಿಯು ಕಮಲದ ಮೇಲೆ ಆಸೀನಳಾಗುತ್ತಾಳೆ ಎಂಬುದಾಗಿ ವಿವರಿಸುತ್ತದೆ.[೩೯] ಹಾಗಾಗಿ ವಿಷ್ಣುವನ್ನು 'ಅನಂತಶಯನ', 'ಪದ್ಮನಾಭ' ಎಂಬುದಾಗಿಯೂ ಕರೆಯಲಾಗುತ್ತದೆ.

ಹೊಸಪೇಟೆ ತಾಲ್ಲೂಕಿನಲ್ಲಿ ವಿಜಯನಗರಕಾಲದ ಅನಂತಶಯನ ದೇವಾಲಯದ ಗರ್ಭಗೃಹದಲ್ಲಿ ಪಾಣೀಪೀಠವಷ್ಟೇ ಇದ್ದು, ಮೂಲಮೂರ್ತಿಯಿಲ್ಲ. ಕಮಲಾಪುರದ ವಸ್ತು ಸಂಗ್ರಹಾಲಯದಲ್ಲಿ ಅನಂತಶಯನಮೂರ್ತಿಯ ಬಿಡಿ ಶಿಲ್ಪಗಳನ್ನು ಕಾಣಬಹುದಾಗಿದೆ. ಅಲ್ಲಿನ ಶಿಲ್ಪವೊಂದರಲ್ಲಿ ಪದ್ಮನಾಭನಾದ ವಿಷ್ಣುವು ಶೇಷಶಯನನಾಗಿದ್ದು, ಪಾದದ ಅಡಿಯಲ್ಲಿ ಭೂದೇವಿ ಮತ್ತು ಶ್ರೀದೇವಿಯರು ಕುಳಿತಿದ್ದಾರೆ. ವಿಷ್ಣುವು ಅಲಂಕೃತಗೊಂಡ ಪಟ್ಟಾವಳಿ ಧೋತ್ರವನ್ನು ಪಾದಗಳವರೆಗೆ ಧರಿಸಿದ್ದು, ಮೋಹನಮಾಲೆ ಮತ್ತು ವೈಜಯಂತಿಮಾಲೆಗಳನ್ನು ಧರಿಸಿದ್ದಾನೆ. ಮೇಖಲೆಯು ಅಲಂಕೃತಗೊಂಡಿಲ್ಲ. ಬಹುಶಃ ಒರಟು ಕಲ್ಲಾಗಿದ್ದ ಕಾರಣದಿಂದ ಈ ಶಿಲ್ಪದಲ್ಲಿ ಅಲಂಕರಣೆಗೆ ಅಷ್ಟು ಉನ್ನತವಾಗಿಲ್ಲವೆಂದು ತಿಳಿಯಬಹುದಾಗಿದೆ. ಶ್ರೀದೇವಿ ಮತ್ತು ಭೂ ದೇವಿಯರು ಕಮಲದ ಮೊಗ್ಗನ್ನು ತಮ್ಮ ಎಡಗೈಯಲ್ಲಿ ಹಿಡಿದಿದ್ದು, ಬಲಗೈಯಿಂದ ಸ್ವಾಮಿಯ ಪಾದವನ್ನು ಒತ್ತುತ್ತ ಸೇವೆಯನ್ನು ಮಾಡುತ್ತಿರುವಂತಿದೆ. ಈ ಇಬ್ಬರೂ ಕರಂಡಮಕುಟ, ಕುಂಚಕಗಳನ್ನು ಧರಿಸಿದ್ದಾರೆ. ಕಟಿಯಿಂದ ಸೀರೆಯನ್ನು ಕಾಸೆಕಟ್ಟಿ ಧರಿಸಿರುವುದು ಕಂಡುಬರುತ್ತದೆ.

ಅನಂತಶಯನಮೂರ್ತಿ

ಕಮಲಾಪುರದ ವಸ್ತುಸಂಗ್ರಹಾಲಯದಲ್ಲಿರುವ ಮತ್ತೊಂದು ಅನಂತಶಯನಮೂರ್ತಿ ಶಿಲ್ಪದಲ್ಲಿ (ಚಿತ್ರ–೬೧), ವಿಷ್ಣುವು ಚತುರ್ಭುಜನಾಗಿದ್ದು, ಎರಡು ಕೈಗಳಲ್ಲಿ ಶಂಖ ಚಿತ್ರಗಳನ್ನು ಹಿಡಿದಿದ್ದು, ಬಲ ಕೈಯನ್ನು ತಲೆಯ ಕೆಳಗೆ ಒರಗಿಸಿದ್ದಾನೆ. ಕೆಳ ಎಡಗೈ ತನ್ನ ಪಾದಸೇವೆ ಮಾಡುತ್ತಿರುವ ಭೂದೇವಿಯರ ಸ್ತನದ ಮೇಲಿದೆ. ವಿಷ್ಣುವು ಪದ್ಮನಾಭನಾಗಿದ್ದು, ನಾಭಿಯ ಪದ್ಮದಲ್ಲಿ ಬ್ರಹ್ಮನು ಕುಳಿತಿದ್ದು ಬ್ರಹ್ಮನು ಕಿರೀಟಮುಖ ಹೊಂದಿದ್ದಾನೆ. ವಿಷ್ಣುವು ಮುತ್ತುರತ್ನಗಳಿಂದ ಕೂಡಿದ ಅಡ್ಡಗೆರೆಗಳಿಂದಾದ ಪಟ್ಟಾವಳಿಯ ಧೋತ್ರವನ್ನು ಪಾದಗಳ ವರೆಗೆ ಧರಿಸಿದ್ದಾನೆ. ಮಕರಕುಂಡಲಗಳನ್ನು ಧರಿಸಿದ್ದಾನೆ. ಉಳಿದಂತೆ ಆಭರಣಗಳು ಸಾಧಾರಣವಾಗಿವೆ. ಶ್ರೀದೇವಿ ಮತ್ತು ಭೂದೇವಿಯರು ತಮ್ಮ ಎಡಗೈಯಲ್ಲಿ ಕಮಲದ ಮೊಗ್ಗನ್ನು ಕರಂಡಮಕುಟ, ವೃತ್ತಕುಂಡಲ, ಎರಡೆಳೆಯ ಕಂಠಿಕೆ, ಸ್ತನಹಾರ ಕಂಚುಕಗಳನ್ನು ಧರಿಸಿದ್ದಾರೆ.

ವಿಷ್ಣುವಿನ ದಶಾವತಾರ ಶಿಲ್ಪಗಳು

ವಿಷ್ಣುಪುರಾಣ, ಮತ್ಸ್ಯಪುರಾಣ, ಭಾಗವತಪುರಾಣಗಳು ವಿಷ್ಣುವಿನ ಅವತಾರಗಳನ್ನು ಹಾಗೂ ಅವತಾರಗಳ ಹಿನ್ನೆಲೆಯ ಕಥೆಯನ್ನು ತಿಳಿಸುತ್ತವೆ. ಹಾಗಾಗಿ ದಶಾವತಾರಗಳಲ್ಲಿ ಒಂದೊಂದು ಅವತಾರಕ್ಕೂ ಒಂದೊಂದು ಕಥೆಯ ಹಿನ್ನೆಲೆಯಿದೆ. ವಿಷ್ಣುವಿನ ಅವತಾರ ಗಳಾದ ಮತ್ಸ್ಯ, ಕೂರ್ಮ, ವರಾಹ, ನರಸಿಂಹ, ವಾಮನ, ಪರಶುರಾಮ, ರಾಮ, ಕೃಷ್ಣ, ಬುದ್ಧ ಮತ್ತು ಕಲ್ಕಿ. ಕೆಲವೊಮ್ಮೆ ಬುದ್ಧನ ಬದಲು ಬಲರಾಮನನ್ನು ಪರಿಗಣಿಸಲಾಗುತ್ತದೆ. ವಿಜಯನಗರ ಕಾಲದಲ್ಲಿ ದಶಾವತಾರಗಳಲ್ಲಿ ನರಸಿಂಹ, ರಾಮ ಮತ್ತು ಕೃಷ್ಣ ಹೆಚ್ಚಾಗಿ ಆರಾಧನೆಗೆ ಮಹತ್ವ ಪಡೆದವ ರಾಗಿರುತ್ತಾರೆ. ವಿಷ್ಣುವಿನ ದಶಾವತಾರದ ಶಿಲ್ಪಗಳು ಹಂಪಿಯ ಹಜಾರರಾಮ ದೇವಾಲಯ, ಹೇಮಕೂಟ ಹಾಗೂ ಕೋಟಿಲಿಂಗದ ಬೃಹತ್ ಬಂಡೆಯ ಮೇಲೆ ಒಂದೇ ಪಟ್ಟಿಕೆಯಲ್ಲಿರುವುದನ್ನು ಕಾಣುತ್ತೇವೆ. ಪಟ್ಟಾಭಿರಾಮ, ವಿರೂಪಾಕ್ಷ, ವಿಜಯವಿಠಲ ದೇವಾಲಯಗಳ ಶಿಲ್ಪಗಳಲ್ಲಿ ಸ್ತಂಭಗಳ ಮೇಲೆ ಬಿಡಿಬಿಡಿಯಾಗಿ ಕಾಣಬಹುದಾಗಿದೆ.

ಮತ್ಸ್ಯಾವತಾರ

ವಿಷ್ಣುವಿನ ಕಟಿಯಿಂದ ಕೆಳಭಾಗ ಮೀನು ಹಾಗೂ ಕಟಿಯ ಮೇಲ್ಭಾಗದಲ್ಲಿ ಮಾನವನ ರೂಪವನ್ನೊಳಗೊಂಡ ಸಮ್ಮಿಶ್ರಣವೇ ಮತ್ಸ್ಯಾವತರ ವಿಷ್ಣು. ಈ ಅವತಾರದ ಹಿಂದಿನ ಹಿನ್ನೆಲೆಯು ಮಹಾಭಾರತದಲ್ಲಿ ಹಾಗೂ ಹಲವು ಪುರಾಣಗಳಿಂದ ತಿಳಿದುಬರುತ್ತದೆ.

ಮತ್ಸ್ಯಾವತಾರದ ಶಿಲ್ಪಗಳನ್ನು ವಿಜಯನಗರ ಕಾಲದ ಹಜಾರರಾಮಚಂದ್ರ, ವಿಜಯವಿಠಲ ದೇವಾಲಯ, ಪಟ್ಟಾಭಿರಾಮ ದೇವಾಲಯಗಳಲ್ಲಿ ಕಾಣಬಹುದಾಗಿದೆ. ಹಜಾರರಾಮ ದೇವಾಲಯದಲ್ಲಿರುವ ಮತ್ಸ್ಯಾವತಾರ ಶಿಲ್ಪದಲ್ಲಿ ವಿಷ್ಣುವು ಚತುರ್ಭುಜ ನಾಗಿದ್ದು, ಶಂಖ, ಚಕ್ರ, ಅಭಯ ಮತ್ತು ವರದ ಮುದ್ರೆಯಲ್ಲಿದ್ದಾನೆ. ಕಿರೀಟಮಕುಟ, ಮಕರ ಕುಂಡಲ, ದ್ವಿಸರ, ಉದರ ಬಂಧ ಕಾಣಬಹುದು. ಮೇಖಲೆಯ ಹಾರಗಳು ಮತ್ಸ್ಯದ ತಲೆಯ ಮೇಲೆ ಇದೆ. ಅಲ್ಲದೆ ವೈಜಯಂತಿಹಾರ ಸಹ ಮತ್ಸ್ಯವನ್ನು ಮುಂಭಾಗದಲ್ಲಿ ಸುತ್ತುವರಿದಿದೆ.

ಕೂರ್ಮಾವತಾರ

ಕೂರ್ಮಾವತಾರದಲ್ಲಿ ವಿಷ್ಣುವಿಗೆ ನಾಲ್ಕು ಕೈಗಳಿದ್ದು, ಅಭಯ ವರದ ಮುದ್ರೆಗಳನ್ನು ಶಂಖ ಮತ್ತು ಚಕ್ರಗಳನ್ನು ಹಿಡಿದುಕೊಂಡಿದೆ. ವಿಜಯವಿಠಲ ದೇವಾಲಯದ ಕಲ್ಯಾಣಮಂಟಪ ದಲ್ಲಿರುವ ಸ್ತಂಭ ಶಿಲ್ಪದಲ್ಲಿನ ಕೂರ್ಮಾವತಾರ ವಿಷ್ಣುವು ಕಿರೀಟಮಕುಟ, ಮಕರಕುಂಡಲಗಳು, ಕಂಠೀಹಾರ, ಹಾರಗಳ ಕಟಿಬಂಧ, ಮೇಖಲೆ, ಕೈಉಂಗುರಗಳು, ಬಾಹುಬಂಧ ಮತ್ತು ಮುಂಗೈ ಆಭರಣಗಳ ಅಲಂಕರಣೆಯನ್ನು ಕಾಣಬಹುದು. ಶಂಖ ಮತ್ತು ಚಕ್ರಗಳಿಗೂ ಅಲಂಕರಣೆ ಮಾಡಿರುವುದನ್ನು ಕಾಣಬಹುದಾಗಿದೆ. ಇದೇ ಮಾದರಿಯ ಶಿಲ್ಪಗಳನ್ನು ಹಜಾರರಾಮ ದೇವಾಲಯದಲ್ಲಿನ ಶಿಲ್ಪಗಳಲ್ಲಿಯೂ ಕಾಣಬಹುದಾಗಿದೆ.

ವರಾಹಾವತಾರ

ವರಾಹಾವತಾರದ ಮೊದಲ ನೆಲೆಯನ್ನು ಶತಪಥ ಬ್ರಾಹ್ಮಣದಲ್ಲಿ ಮತ್ತು ತೈತ್ತಿರೀಯ ಅರಣ್ಯದಲ್ಲಿಯೂ ಕಾಣಬಹುದು. ಅಸುರ ಹಿರಣ್ಯಾಕ್ಷನು ಭೂಮಿಯನ್ನು ನೀರಿನಲ್ಲಿ ಮುಳುಗಿಸಿದಾಗ ವಿಷ್ಣು ವರಾಹನಾಗಿ ಬಂದು ಹಿರಣ್ಯಾಕ್ಷನನ್ನು ಕೊಂದು ಭೂಮಿಯನ್ನು ಮೇಲೆತ್ತಿದ ಕಥೆ ಅಗ್ನಿಪುರಾಣದಲ್ಲಿದೆ. ಹಂದಿಯ ಮುಖವನ್ನು ಮನುಷ್ಯಾಕಾರದಲ್ಲಿ ತಳೆದು ವಿಷ್ಣು ಚತುರ್ಭುಜಗಳಲ್ಲಿ ಶಂಖ ಚಕ್ರಧಾರಿಯಾಗಿ ಸ್ತ್ರೀ ಸ್ವರೂಪದ ಭೂಮಿಯನ್ನು ಎಡ ತೊಡೆಯ ಮೇಲೆ ಕೂರಿಸಿಕೊಂಡು ಮೇಲೆ ಬಂದನು. ಈ ಚಿತ್ರಣದ ಮೂರ್ತಿಗಳನ್ನು 'ಭೂವರಾಹ ಮೂರ್ತಿ', 'ಆದಿವರಾಹ' ಎಂದೂ ಕರೆಯುತ್ತಾರೆ. ಇಲ್ಲಿ ಭೂದೇವಿಯು ಅಂಜಲಿಬದ್ಧಳಾಗಿ ಕುಳಿತ್ತಿರುತ್ತಾಳೆ.

ಈ ರೀತಿಯ ಶಿಲ್ಪಗಳನ್ನು ಹಜಾರರಾಮ ಮತ್ತು ವಿಠಲದೇವಾಲಯಗಳಲ್ಲಿ ಕಾಣುತ್ತೇವೆ. ವಿಠಲದೇವಾಲಯದಲ್ಲಿರುವ ವರಾಹಮೂರ್ತಿ ವಿಷ್ಣುವು ಆಸೀನ ಭಂಗಿಯಲ್ಲಿ ತನ್ನ ಎಡ ತೊಡೆಯ ಮೇಲೆ ಭೂದೇವಿಯನ್ನು ಕೂರಿಸಿಕೊಂಡಿದ್ದಾನೆ. ಕಿರೀಟಮಕುಟ, ಎರಡೆಳೆಯ ಕಂಠಿಕೆ, ಯಜ್ಞೋಪವೀತ, ಉದರಬಂಧ ಧರಿಸಿದ್ದು, ಪೂರ್ಣೋರುಕದಲ್ಲಿ ಧೋತ್ರವನ್ನು ಧರಿಸಿದ್ದಾನೆ. ಭೂದೇವಿಯು ತುಂಬಾ ಅಲಂಕೃತಗೊಂಡಿದ್ದು ಸರ್ವಾಭರಣ ಭೂಷಿತೆಯಾಗಿದ್ದಾಳೆ. ವರಾಹ ಅವತಾರಕ್ಕೆ ಸಂಬಂಧಿಸಿದ ಶಿಲ್ಪಗಳನ್ನು ಹಜಾರರಾಮಚಂದ್ರ, ವಿಠಲದೇವಾಲಯ, ಪಟ್ಟಾಭಿರಾಮದೇವಾಲಯ, ಕಮಲಾಪುರದ ವಸ್ತು ಸಂಗ್ರಹಾಲದಲ್ಲಿ ಕಾಣಬಹುದಾಗಿದೆ.

ನರಸಿಂಹಾವತಾರ

ಹಿರಣ್ಯಾಕ್ಷನ ವಧೆಯಾದ ಮೇಲೆ ಅವನ ತಮ್ಮ ಹಿರಣ್ಯಕಶ್ಯಪನು ವಿಷ್ಣುವಿನ ಮೇಲೆ ದ್ವೇಷವನ್ನು ಸಾಧಿಸುತ್ತ, ಲೋಕಕಂಟಕನಾಗಿರಲು ಅವನ ಮಗ ಪ್ರಹ್ಲಾದನ ಭಕ್ತಿಗೆ ಒಲಿದು ವಿಷ್ಣು ನರಸಿಂಹಾವತಾರ ಎತ್ತಿದ. ಈ ಕಥೆ ಅಗ್ನಿಪುರಾಣ, ವಿಷ್ಣುಪುರಾಣಗಳಲ್ಲಿ ಬರುತ್ತದೆ.[೩೫೦] ಸಿಂಹಮುಖ, ಮನುಷ್ಯನ ದೇಹದಲ್ಲಿರುವುದು ಈ ಮೂರ್ತಿಯ ಲಕ್ಷಣ.

ವಿಜಯನಗರ ಕಾಲದಲ್ಲಿ ನರಸಿಂಹ ಅವತಾರದ ಶಿಲ್ಪಗಳು ಹಜಾರರಾಮ, ಪಟ್ಟಾಭಿರಾಮ, ವಿಠಲ ದೇವಾಲಯ ಹಾಗೂ ಬೃಹತ್ ಏಕಶಿಲಾ ಯೋಗ ಲಕ್ಷ್ಮಿ ನರಸಿಂಹ ಮೂರ್ತಿಗಳಿರುವುದು ಕಂಡುಬರುತ್ತದೆ.

ಹಂಪಿಯ ಕೃಷ್ಣ ದೇವಾಲಯದ ವಾಯುವ್ಯ ಭಾಗದ ಮಂಟಪದಲ್ಲಿರುವ ಲಕ್ಷ್ಮಿ ನರಸಿಂಹವು ಬೃಹತ್ ಗಾತ್ರದ ಶಿಲ್ಪವಾಗಿದೆ. ಈ ಶಿಲ್ಪದಲ್ಲಿ ನರಸಿಂಹನು ಯೋಗಪಟ್ಟದಲ್ಲಿ ಆದಿಶೇಷನ ಮೇಲೆ ಕುಳಿತಿದ್ದಾನೆ. ಚತುರ್ಭುಜದಲ್ಲಿರುವ ಈ ಶಿಲ್ಪದಲ್ಲಿ ನರಸಿಂಹ ಎರಡು ಕೈಗಳು ಹಾಗೂ ಲಕ್ಷ್ಮಿಯ ಶಿಲ್ಪವೂ ಮುರಿದು ಬಿದ್ದಿದೆ. ನರಸಿಂಹನು ಕಿರೀಟಮಕುಟವನ್ನು, ಒಂದೆಳೆಯ ಮುತ್ತಿನಸರ, ಭುಜಕೀರ್ತಿ, ಮುತ್ತಿನ ಕೇಯೂರಗಳು, ಯಜ್ಞೋಪವೀತ, ಉದರಬಂಧ ಹಾಗೂ ಕಾಲಕಡಗಳನ್ನು ಧರಿಸಿದ್ದಾನೆ. ಇದರೊಂದಿಗೆ ಧೋತ್ರವನ್ನು ಪಾದಗಳವರೆಗೆ ಧರಿಸಿದ್ದು, ಕಟಿವಸ್ತ್ರವನ್ನು ಸುತ್ತಿರುವುದು ಕಂಡುಬರುತ್ತದೆ. ಹಣೆಯಲ್ಲಿ ಇಂಗ್ಲಿಷ್ ಭಾಷೆಯ 'ಯೂ'(U) ಅಕ್ಷರದಂತೆ ನಾಮ ಧರಿಸಿರುವುದು ಕಂಡುಬರುತ್ತದೆ. ಇದರೊಂದಿಗೆ ಕಿರೀಟದ ಮುಂಭಾಗದ ಶಿಖರದ ಕೆಳಗೆ ಕೀರ್ತಿಮುಖ (ನರಸಿಂಹನ ಮುಖ) ವನ್ನು ಸಣ್ಣ ಪ್ರಮಾಣದಲ್ಲಿ ಚಿತ್ರಿಸಿರುವುದು ಗಮನಾರ್ಹ. ಅಲ್ಲದೇ ಅದರ ಕೆಳಗಿನ ಭಾಗದಲ್ಲಿ ಮೇಖಲೆಯಲ್ಲಿನ ಸಣ್ಣಹಾರಗಳಂತಹ ಅಲಂಕರಣೆ ಇದ್ದು ತುಂಬಾ ವಿಶೇಷವಾಗಿದೆ.

ವಿಠಲ ದೇವಾಲಯದ ಮಹಾಮಂಟಪದಲ್ಲಿರುವ ಉಗ್ರನರಸಿಂಹ ಶಿಲ್ಪದಲ್ಲಿ (ಚಿತ್ರ-೬೨), ನರಸಿಂಹನು ಹಿರಣ್ಯಕಶ್ಯಪನನ್ನು ತನ್ನ ತೊಡೆಯ ಮೇಲೆ ಮಲಗಿಸಿಕೊಂಡಿದ್ದಾನೆ. ಅಷ್ಟಭುಜಧಾರಿಯಾದ ನರಸಿಂಹನು ಕೆಳಗಿನ ಎರಡು ಕೈಯಲ್ಲಿ ಹಿರಣ್ಯಕಶ್ಯಪನನ್ನು ಹಿಡಿದು ಕೊಂಡಿದ್ದು, ಅದರ ಮೇಲಿನ ಎರಡು ಕೈಗಳಿಂದ ಹಿರಣ್ಯಕಶ್ಯಪನ ಹೊಟ್ಟೆಯನ್ನು ಬಗೆಯುತ್ತಿದ್ದು, ಮತ್ತೊಂದು ಕೈಯಲ್ಲಿ ಚಕ್ರ ಹಿಡಿದಿದ್ದು, ಮತ್ತೆರಡು ಕೈಗಳಲ್ಲಿ ಹಿರಣ್ಯಕಶ್ಯಪನ ಕರಳುಗಳನ್ನು ಹಾರದಂತೆ ಧರಿಸುತ್ತಿರುವ ಚಿತ್ರಣವಿದೆ. ನರಸಿಂಹವತಾರದಲ್ಲಿ ವಿಷ್ಣುವು ಕಿರೀಟಮಕುಟ, ಬಾಹುಬಂಧಿ ತೋಳಬಂಧಿ, ಉದರಬಂಧಿ, ಮುಂಗೈ ಕಡಗ, ಕಂಠಿಹಾರ, ಪದಕಸರ, ಮೇಖಲೆ ಹಾಗೂ ಕಾಲ್ಕಡಗಗಳನ್ನು ಕಾಣಬಹುದಾಗಿದೆ. ಇದರೊಂದಿಗೆ ಈ ಆಭರಣಗಳು ಕುಸೂರಿ ಕೆಲಸದಿಂದ ಕೂಡಿದ್ದು, ಮುತ್ತುರತ್ನಗಳಿಂದ ತಯಾರಿಸಿದ್ದಾಗಿವೆ. ವಿಷ್ಣುವಿನ ಮುಖ ಸಿಂಹಮುಖವಾದ ಕಾರಣ ಕರ್ಣಕುಂಡಲಗಳು ಧರಿಸಿದಂತೆ ಕಂಡು ಬರುವುದಿಲ್ಲ. ಧೋತ್ರವನ್ನು ಪಾದಗಳವರೆಗೆ ಧರಿಸಿದ್ದಾನೆ.

ವಾಮನ-ತ್ರಿವಿಕ್ರಮ

ವಾಮನ-ತ್ರಿವಿಕ್ರಮ ಎರಡೂ ಒಂದೇ ಸಂದರ್ಭದಲ್ಲಿ ಕಾಣಿಸಿಕೊಂಡ ಮೂರ್ತಿಗಳು. ಬಲಿಚಕ್ರವರ್ತಿಯ ಬಳಿಗೆ ವಾಮನಾಕಾರದ ಬ್ರಹ್ಮಚಾರಿಯಾಗಿ ಬಂದ ವಿಷ್ಣು ತ್ರಿವಿಕ್ರಮ ಕಾರವನ್ನು ತಳೆದನು.

ವಾಮನ

ಶತಪತಬ್ರಾಹ್ಮಣದಲ್ಲಿ ತಿಳಿಸಿರುವಂತೆ ವಿಷ್ಣುವು ವಾಮನ ಅವತಾರದಲ್ಲಿ ಬಲಿ ಚಕ್ರವರ್ತಿಯ ಬಳಿ ವಟುವಿನ ರೂಪದಲ್ಲಿ ಬರುವುದನ್ನು ಉಲ್ಲೇಖಿಸುತ್ತದೆ.[೩೫೧] ಗ್ರಂಥಗಳಲ್ಲಿ ಉಲ್ಲೇಖಿಸಿರುವಂತೆ "ವಾಮನನು ೫೬ ಅಂಗುಲಗಳಷ್ಟು ಉದ್ದವಿರುತ್ತಾನೆ. ದ್ವಿಭುಜನಾಗಿ, ಬಲಗೈಯಲ್ಲಿ ಕಮಂಡಲ,

ಎಡಗೈಯಲ್ಲಿ ಛತ್ರಿಯನ್ನು ಹಿಡಿದಿರುತ್ತಾನೆ. ಕರ್ಣಕುಂಡಲ, ಜಿಂಕೆಯ ಉಪವೀತವನ್ನು ಹಾಗೂ ಧೋತ್ರವನ್ನು ಧರಿಸಿದ್ದು, ಕೈಯಲ್ಲಿ ಒಂದು ಪುಸ್ತಕವನ್ನು ಹಿಡಿದು, ವೈದಿಕ ವಿದ್ಯಾರ್ಥಿಯಂತೆ (ಬ್ರಹ್ಮಚಾರಿಯಂತೆ) ಬಿಂಬಿಸಬೇಕೆಂದು". ತಿಳಿಸುತ್ತವೆ.

ವಿಜಯನಗರ ಕಾಲದ ದಶಾವತಾರ ಶಿಲ್ಪಗಳಲ್ಲಿ ವಾಮನ ಅವತಾರದಲ್ಲಿ ವಿಷ್ಣುವಿನ ಶಿಲ್ಪಗಳನ್ನು ಕಾಣಬಹುದಾಗಿದೆ. ಹಂಪಿಯ ಹಜಾರರಾಮಚಂದ್ರ ದೇವಾಲಯದ ದಶಾವತಾರ ಶಿಲ್ಪಪಟ್ಟಿಕೆಯಲ್ಲಿರುವ ವಾಮನರೂಪದ ವಿಷ್ಣುವು ದ್ವಿಭುಜನಾಗಿದ್ದು, ಬಲಗೈಯಲ್ಲಿ ಕಮಂಡಲ ಎಡಗೈಯಲ್ಲಿ ಹರಡಿದ ಛತ್ರಿಯನ್ನು ತಲೆಮೇಲೆ ಹಿಡಿದಿದ್ದಾನೆ. ಧೋತ್ರವನ್ನು ಕಟಿಭಾಗದಿಂದ ಮೊಣಕಾಲಿನ ಕೆಳಗಿನವರೆಗೆ ಧರಿಸಿದ್ದು, ಧೋತ್ರದ ಮೇಲೆ ಕಟಿಯಲ್ಲಿ ಉತ್ತರೀಯವನ್ನು ಗಂಟು ಹಾಕಿರುವುದನ್ನು ಕಾಣಬಹುದಾಗಿದೆ.

ಹಂಪಿಯ ಕೋಟಿಲಿಂಗದಲ್ಲಿನ ಬಂಡೆಯ ಮೇಲಿನ ದಶಾವತಾರ ಶಿಲ್ಪದಲ್ಲಿನ ವಾಮನ ವಿಷ್ಣುವು ಧೋತ್ರವನ್ನು ಪಾದಗಳವರೆಗೆ ಧರಿಸಿದ್ದು, ಧೋತ್ರದ ಮಧ್ಯಭಾಗದಲ್ಲಿ (ನಿತಂಬಗಳ) ಮಧ್ಯೆ ಧೋತ್ರದ ಅಂಚುಗಳನ್ನು ಕಾಣಬಹುದಾಗಿದೆ. ಇದರೊಂದಿಗೆ ಉತ್ತರೀಯನ್ನು ಕಟಿಭಾಗದಲ್ಲಿ ಕಟ್ಟಿದ್ದು, ಕಂಠೀಹಾರ, ಯಜ್ಞೋಪವೀತಗಳನ್ನು ಕಾಣ ಬಹುದಾಗಿದೆ. ಇದೇ ರೀತಿಯಲ್ಲಿ ಧೋತ್ರವನ್ನು ಪೂರ್ಣೋರುಕದಲ್ಲಿ ಧರಿಸಿರುವ ವಾಮನ ಶಿಲ್ಪ ತಮಿಳುನಾಡಿನ ಶ್ರೀರಂಗಂನ ಗರುಡ ಮಂಟಪದಲ್ಲಿನ ಸ್ಥಂಭದ ಮೇಲಿದೆ. ಈ ಶಿಲ್ಪದಲ್ಲಿ ವಾಮನ ಪೂರ್ಣೋರುಕವನ್ನು ಧರಿಸಿದ್ದು, ಉತ್ತರೀಯವನ್ನು ಧೋತ್ರದ ಮೇಲೆ ಗಂಟು ಹಾಕಿರುವುದು ಕಂಡುಬರುತ್ತದೆ. ಆಭರಣಗಳಲ್ಲಿ ಮಕರಕುಂಡಲ, ಎರಡೆಳೆಯ ರುದ್ರಾಕ್ಷಿಯ ಬಾಹುಬಂಧಿ, ಎರಡೆಳೆಯ ಮುಂಗೈ ಕಡಗ, ರುದ್ರಾಕ್ಷಿಸರ ಧರಿಸಿದ್ದು, ಹಣೆಗೆ ತ್ರಿಪುಂಡ್ರ (ನಾಮ)ವನ್ನು ಇಟ್ಟಿರುವುದು ಕಂಡುಬರುತ್ತದೆ.

ವಿಜಯನಗರ ಕಾಲದ ಶಾಸನಗಳಲ್ಲಿ ಬ್ರಾಹ್ಮಣರಿಗೆ ಭೂದಾನಗಳನ್ನು ನೀಡಿದ್ದ ಉಲ್ಲೇಖಗಳನ್ನು ಕಾಣಬಹುದಾಗಿದೆ. ಹಾಗೆಯೇ ಹಂಪಿಯ ವಿಠಲ ದೇವಾಲಯ ಮಂಟಪದ ಸ್ತಂಭಗಳಲ್ಲಿನ ಶಿಲ್ಪವೊಂದರಲ್ಲಿ ರಾಜನು ಯತಿಗೆ ದಾನ ನೀಡುತ್ತಿರುವಂತೆ ಚಿತ್ರಿಸಿರುವ ಶಿಲ್ಪವನ್ನು ಕಾಣಬಹುದಾಗಿದೆ. ಅಂದರೆ ರಾಜರು ಬ್ರಾಹ್ಮಣರನ್ನು ಅಷ್ಟು ನಂಬುತ್ತಿದ್ದರು ಹಾಗೂ ಆಡಳಿತದಲ್ಲಿ ಉತ್ತಮ ಸ್ಥಾನಮಾನಗಳನ್ನು ನೀಡಿದ ನಿದರ್ಶನಗಳು ವಿಜಯನಗರ ಕಾಲದಲ್ಲಿ ಕಾಣಬಹುದಾಗಿದೆ.

ತ್ರಿವಿಕ್ರಮ

ತ್ರಿವಿಕ್ರಮ ಮೂರ್ತಿಯ ಪ್ರಮಾಣದ ಕುರಿತು ಶಾಸ್ತ್ರಗಳು ಈ ರೀತಿಯಾಗಿ ಹೇಳುತ್ತವೆ, "ಎಂಟು ಕೈಗಳು; ಎಡಗಾಲನ್ನು ಮೇಲೆತ್ತಿ ಹಿಡಿದಿರುತ್ತಾನೆ. ಅವನ ಮೊಣಕಾಲಿನವರೆಗೆ ಭೂಲೋಕ, ಅಲ್ಲಿಂದ ಹೊಕ್ಕಳಿನವರೆಗೆ ಅಂತರಿಕ್ಷ, ಅಲ್ಲಿಂದ ಹಣೆಯ ತನಕ ಸ್ವರ್ಗಲೋಕ ಇದು ತ್ರಿವಿಕ್ರಮನ ಕಲ್ಪನೆ. ಇಂದ್ರ ಕಲ್ಪವೃಕ್ಷದ ಬಳಿಯಿದ್ದು, ಅವನಿಗೆ ಕೊಡೆ ಹಿಡಿದಿರುವಂತೆ, ವಾಯು-ವರುಣ ಗಾಳಿ ಬೀಸುತ್ತಿರುವಂತೆ, ಶಿವನು ಕೈ ಮುಗಿದಿರುವಂತೆ, ಬ್ರಹ್ಮನು ತ್ರಿವಿಕ್ರಮನ ಎಡಗಾಲನ್ನು ತೊಳೆಯುತ್ತಿರುವಂತೆ, ಬಲಗಾಲ ಬಳಿ ನಮುಚಿ(ಎಂದರೆ ವೈದಿಕ ಸಂದರ್ಭದಲ್ಲಿ ಇಂದ್ರನನ್ನು

ಸೆಣಸಿದ ವೃತ್ರಾಸುರ) ಅಂಗಲಾಚುತ್ತಿರುವಂತೆ, ಅಲ್ಲದೇ ಶುಕ್ರಾಚಾರ್ಯರು ಅಲ್ಲಿ ನಿಂತಿರುವಂತೆ, ಬಲಿಚಕ್ರವರ್ತಿ ಭೂದಾನ ನೀಡುತ್ತಿರುವಂತೆ ಚಿತ್ರಿಸಿರಬೇಕು" ಎಂಬುದಾಗಿ ತಿಳಿಸುತ್ತವೆ.

ಹಂಪಿಯ ವಿಠಲದೇವಾಲಯದ ಕಲ್ಯಾಣ ಮಂಟಪದಲ್ಲಿ ಸ್ತಂಭ ಶಿಲ್ಪವೊಂದರಲ್ಲಿ ವಾಮನ–ತ್ರಿವಿಕ್ರಮ ಶಿಲ್ಪವಿದೆ. ಈ ಶಿಲ್ಪದಲ್ಲಿ ವಿಷ್ಣುವು ವಾಮನ ಅವತಾರದಲ್ಲಿ ಕೆಳಗೆ ನಿಂತಿದ್ದು, ತ್ರಿವಿಕ್ರಮನಾಗಿ ಬೆಳೆದ ವಿಷ್ಣು ಬಲಿ ಚಕ್ರವರ್ತಿಯನ್ನು ಪಾತಾಳಕ್ಕೆ ತುಳಿಯುತ್ತಿರುವ ಚಿತ್ರಣವಿದೆ. ಇದರೊಂದಿಗೆ ಮೇಲೆ ದೇವಗಣಗಳಿದ್ದು, ಅದನ್ನು ವೀಕ್ಷಿಸುತ್ತಿರುವಂತೆ ಕಂಡುಬರುತ್ತದೆ. ಇಲ್ಲಿ ತ್ರಿವಿಕ್ರಮ ವಿಷ್ಣುವು ಅಷ್ಟಭುಜಧಾರಿಯಾಗಿ ವಿವಿಧ ಆಯುಧಗಳನ್ನು ಹಿಡಿದಿದ್ದಾನೆ. ಕಿರೀಟಮಕುಟವನ್ನು, ಮಕರ ಕುಂಡಲಗಳು, ಬಾಹುಪುರಣ, ಯಜ್ಞೋಪವೀತ, ಛನ್ನವೀರ ಕಂಠಿಕೆ, ಸ್ತನಹಾರ, ಪದಕ, ಉದರಬಂಧ, ಮೇಖಲೆ, ಕಾಲ್ಗಡಗ ಮತ್ತು ನೂಪುರ ಗಳನ್ನು ಧರಿಸಿದ್ದಾನೆ. ಈ ಶಿಲ್ಪದಲ್ಲಿ ಶಂಖ ಮತ್ತು ಚಕ್ರಕ್ಕೆ ಕವಚಗಳನ್ನು ತೊಡಿಸಿರುವುದನ್ನು ಕಾಣಬಹುದು. ಧೋತ್ರವನ್ನು ಪೂರ್ಣೋರುಕದಲ್ಲಿ ಪಾದ ಗಳವರೆಗೆ ಧರಿಸಿದ್ದು, ಅದು ವಿವಿಧ ಅಲಂಕರಣೆಯಿಂದ ಕೂಡಿದೆ. ಇದರೊಂದಿಗೆ 'ತ್ರಿಪುಂಡ್ರ'ವನ್ನು ಹಣೆಯಲ್ಲಿ ಧರಿಸಿದ್ದಾನೆ. ಈ ಶಿಲ್ಪವು ವಿಷ್ಣುವಿನ ವಾಮನ–ತ್ರಿವಿಕ್ರಮ ಅವತಾರದ ಚಿತ್ರಣವನ್ನು ನೀಡುತ್ತದೆ.

ರಾಮಾವತಾರ

ರಾಮಾವತಾರಕ್ಕೆ ಸಂಬಂಧಿಸಿದಂತೆ ಮಾಹಿತಿಯನ್ನು ವಾಲ್ಮೀಕಿ ರಾಮಾಯಣ ಹಾಗೂ ತಮಿಳಿನ ಶಿಲಪ್ಪಾಧಿಗಾರಂ ಕಾವ್ಯಗಳು ತಿಳಿಸುತ್ತವೆ. ವಿಜಯನಗರ ಕಾಲದ ಹಜಾರರಾಮ ದೇವಾಲಯದಲ್ಲಿನ ಬಹುತೇಕ ಎಲ್ಲಾ ಶಿಲ್ಪಗಳು ರಾಮಾಯಣಕ್ಕೆ ಸಂಬಂಧಿಸಿದ ನಿರೂಪಣಾತ್ಮಕ ಚಿತ್ರಗಳಾಗಿವೆ. ಪ್ರತಿಮಾ ಲಕ್ಷಣದಲ್ಲಿ ರಾಮನನ್ನು ದ್ವಿಭುಜಧಾರಿಯಾಗಿ ಬಿಲ್ಲು ಬಾಣ ಹಿಡಿದಿರುವಂತೆ ಚಿತ್ರಿಸಲಾಗಿದೆ.

ಹಂಪಿಯ ವಿರೂಪಾಕ್ಷ ದೇವಾಲಯದ ಗೋಪುರದ ಗಾರೆ ಶಿಲ್ಪವೊಂದರಲ್ಲಿ ಲಕ್ಷ್ಮಣ, ರಾಮ, ಸೀತೆಯ ಶಿಲ್ಪವಿದೆ. ಈ ಗಾರೆಶಿಲ್ಪದಲ್ಲಿ ರಾಮನು ಮಧ್ಯಭಾಗದಲ್ಲಿದ್ದಾನೆ. ರಾಮನ ಎಡಭಾಗದಲ್ಲಿ ಸೀತೆ, ಬಲಭಾಗದಲ್ಲಿ ಲಕ್ಷ್ಮಣರ ಶಿಲ್ಪಗಳಿವೆ. ರಾಮ ಪೂರ್ಣೋರುಕವನ್ನು ಧರಿಸಿದ್ದು, ಉತ್ತರೀಯವನ್ನು ಕಟಿಭಾಗದಲ್ಲಿ ಕಟ್ಟಿದ್ದು, ಅದರ ಎರಡೂ ತುದಿಗಳು ಕಟಿಯ ಎಡಬಲಭಾಗಗಲ್ಲಿ ಹಾರಾಡುತ್ತಿರುವಂತಿವೆ. ಕಿರೀಟಮಕುಟ, ಹಿಂದೆ ಪ್ರಭಾವಳಿಯಿದೆ. ಮುತ್ತಿನ ದ್ವಿಸರ, ಪದಕವಿರುವ ಕಂಠಿಕೆ, ಉದರಬಂಧ, ಮುತ್ತಿನ ಮುಂಗೈ ಕಡಗಗಳು ಹೆಚ್ಚು ಅಲಂಕರಣಗೊಂಡಿರುವ ಮೇಖಲೆ ಹಾಗೂ ಪದ್ಮಪದಕವಿರುವ ವನಮಾಲೆಯನ್ನು ಧರಿಸಿದ್ದಾನೆ.

ಲಕ್ಷ್ಮಣನ ಕಿರೀಟ ರಾಮನ ಕಿರೀಟಕ್ಕಿಂತ ಸ್ವಲ್ಪ ಎತ್ತರದಲ್ಲಿ ಕಡಿಮೆಯಿದ್ದು, ಉಳಿದಂತೆ ವಸ್ತ್ರ ಮತ್ತು ಆಭರಣಗಳು ರಾಮನು ಧರಿಸಿದ್ದಂತೆ ಹೋಲುತ್ತವೆ. ಸೀತೆಯು ಕರಂಡ ಮಕುಟ ಧರಿಸಿದ್ದು, ಸಣ್ಣ ಮುತ್ತಿನ ಸರವಷ್ಟೆ ಕಂಡು ಬರುತ್ತದೆ. ಉಳಿದಂತೆ ಮುತ್ತಿನ ಎರಡೆಳೆಯ ಬಾಹುಬಂಧಿ, ಎರಡೆಳೆಯ ಮುತ್ತಿನ ಮುಂಗೈ ಕಡಗ, ಹೆಚ್ಚು ಅಲಂಕೃತಗೊಂಡಿರದ ಕಾಂಚೀಧಾಮ ಧರಿಸಿದ್ದು, ಸೀರೆಯನ್ನು ಕಟಿಯಿಂದ ಪಾದಗಳವರೆಗೆ ಧರಿಸಿದ್ದಾಳೆ. ಆದರೆ ಈ ಶಿಲ್ಪಗಳು ಹೆಚ್ಚು ಅಲಂಕರಣೆ ಹೊಂದಿರುವುದಿಲ್ಲ.

ಕೃಷ್ಣಾವತಾರ

ವಿಷ್ಣುವು ಕೃಷ್ಣಾವತಾರದಲ್ಲಿ ಕಾಳಿಂಗಮರ್ಧನನಾಗಿ, ಗೋಪಾಲಕೃಷ್ಣನಾಗಿ, ಗೀತೋಪದೇಶ ಮಾಡುತ್ತಿರುವ ನವನೀತ ಕೃಷ್ಣನಾಗಿ ಹಲವಾರು ರೂಪಗಳಲ್ಲಿ ಕಾಣಬಹುದು. ಈ ರೀತಿಯ ವಿವಿಧ ಶಿಲ್ಪಗಳನ್ನು ವಿಜಯನಗರ ಕಾಲದ ಹಜಾರರಾಮ ದೇವಾಲಯ, ಕೃಷ್ಣದೇವಾಲಯ, ವಿಠಲದೇವಾಲಯ, ಮುಂತಾದ ದೇವಾಲಯದಲ್ಲಿನ ಶಿಲ್ಪಗಳಲ್ಲಿ ಕಾಣಬಹುದಾಗಿದೆ.

ಬಾಲಕೃಷ್ಣ

ಬಾಲಕೃಷ್ಣನಾಗಿ ಅವನು ದಿನನಿತ್ಯ ಮಾಡುತ್ತಿದ್ದ ಕೆಲಸ, ಸ್ನೇಹಿತರೊಂದಿಗಿನ ತುಂಟತನಗಳನ್ನು ಪುರಂದರದಾಸರು ಹಾಗೂ ವಾದಿರಾಜರ ಶ್ರೀಕೃಷ್ಣ ಬಾಲಲೀಲೆಯಲ್ಲಿ ಕಾಣಬಹುದು. ಈ ಪದ್ಯಗಳಲ್ಲಿ ಕೃಷ್ಣನನ್ನು ವರ್ಣಿಸುತ್ತಾ ಅವನು ಧರಿಸಿಕೊಂಡಿದ್ದ ವಸ್ತ್ರ ಮತ್ತು ಆಭರಣಗಳನ್ನು ಈ ಮುಂದಿನಂತೆ ತಿಳಿಯಬಹುದಾಗಿದೆ.

ವಾದಿರಾಜರ ಶ್ರೀಕೃಷ್ಣ ಬಾಲಲೀಲೆಯಲ್ಲಿನ ಪದ್ಯವೊಂದರಲ್ಲಿ ವರ್ಣಿಸುವಂತೆ,

ಹಾರ ಸರಗಳನೆ ಹಾಕಿ ತೋಳು ಬೊಟ್ಟುಗಳನೆ ಕಟ್ಟಿ
ಥೋರವಾದ ಮುಂಗೈಯ ಮೂರಾರಿಗಿಟ್ಟರು[೩೫೨]
ಕಡಗ ಕಂಕಣಗಳು ರವೆಯ ಉಂಗುರಗಳು
ನಡುವಿನೊಡ್ಯಾಣ ಜಲಕಮಲವಿಟ್ಟರು[೩೫೩]
ಸಾರಾವಳಿಯ ಅಂಗಿ ಸರದ ಮುತ್ತಿನ ಟೋಪಿ
ಕೃಷ್ಣರಾಮನ ತಾಯಿಗುಡಿಲ ತುಂಬಿದ್ದರು[೩೫೪]

ಎಂಬುದಾಗಿ ಕೃಷ್ಣ ಮಗುವಾಗಿದ್ದಾಗ ಹಾಗೂ ಅವನಿಗೆ ತೊಟ್ಟಿಲು ಇಡುವ ಸಂದರ್ಭದಲ್ಲಿ ತೊಡಿಸುತ್ತಿದ್ದ ವಸ್ತ್ರ ಮತ್ತು ಆಭರಣಗಳ ಚಿತ್ರಣವನ್ನು ನೀಡುತ್ತದೆ.

ಪುರಂದರದಾಸರು ಚಿತ್ರಿಸಿದ ಬಾಲಕೃಷ್ಣ ಎಂಬ ಕೃತಿಯಲ್ಲಿ, ಕೃಷ್ಣ ತನ್ನ ಸ್ನೇಹಿರೊಂದಿಗೆ ಬೆಣ್ಣೆ ಕದಿಯಲು ಹೋಗಿದ್ದಾಗಿನ ಸಂದರ್ಭವನ್ನು ಈ ಮುಂದಿನ ಪದ್ಯ ವಿವರಿಸುತ್ತದೆ.

ಕೂಗದೆ ಉಸಿರಿಕ್ಕದೆ – ನೀವು ।
ಬೇಗನೆ ಬನ್ನಿ ರಂಗ ಮನೆಯ ಪೊಕ್ಕ ॥
ಹೆಜ್ಜೆಗಳಿವೆಕೋ ಮನೆಯಲಿ – ಕಾಲ ।
ಗೆಜ್ಜೆಯ ದನಿ ಕೇಳಿಬರುತಲಿದೆ ॥[೩೫೫]

ಎಂಬುದಾಗಿ ಕೃಷ್ಣನು ಧರಿಸಿದ್ದ ಗೆಜ್ಜೆಯ ಕಾಲಿನ ಆಭರಣಗಳನ್ನು ಹಾಗೂ ಅವನ ತುಂಟತನವನ್ನು ವಿವರಿಸುತ್ತಾರೆ.

ವಿಜಯನಗರ ಕಾಲದ ಶಿಲ್ಪಗಳಲ್ಲಿ ಅಂಬೆಗಾಲ ಕೃಷ್ಣನ ಹಲವಾರು ಶಿಲ್ಪಗಳು ದೊರೆಯುತ್ತವೆ. ಹಂಪಿಯ ವಿರೂಪಾಕ್ಷ ದೇವಾಲಯದ ಸಾಲುಮಂಟಪದ ಸ್ತಂಭದ ಶಿಲ್ಪದಲ್ಲಿ (ಚಿತ್ರ–೬೩) ಕೃಷ್ಣನು ಬೆಣ್ಣೆಯ ಗಡಿಗೆಯನ್ನು ಎಡಗೈಯಲ್ಲಿ ಹಿಡಿದುಕೊಂಡು ಬಲಗೈಯಲ್ಲಿ ಬೆಣ್ಣೆ ತಿನ್ನುತ್ತಿದ್ದಾನೆ.

ಚದುರಿದ ಜಟೆ, ಹಣೆಗೆ ನಾಮ, ಎರಡೆಳೆಯ ತೋಳ್ಬಂಧಿ, ಮುಂಗೈ ಕಡಗಗಳು ಹಾಗೂ ಗೆಜ್ಜೆಯ ಕಾಲಂದಿಗೆ ಧರಿಸಿದ್ದಾನೆ. ಹಜಾರ ರಾಮಚಂದ್ರ ದೇವಾಲಯದ ಬಾಲಕೃಷ್ಣ ಶಿಲ್ಪದಲ್ಲಿ (ಚಿತ್ರ-೬೪) ಕೃಷ್ಣ ತುರುಬನ್ನು ಕೊಂಡಿಯಂತೆ ಕಟ್ಟಿದ್ದು, ತ್ರಿಪುಂಡ್ರ, ಕರ್ಣಕುಂಡಲಗಳು ನಾಲ್ಕು ಎಳೆಗಳಿಂದ ಕೂಡಿದ್ದು, ಪ್ರತಿ ಎಳೆಯ ತುದಿಯು ತುಂಡಾದ ಮಣಿಯಿಂದ ಕೂಡಿದೆ. ಮೂರೆಳೆಯ ಗೆಜ್ಜೆಯ ಕಟಿಬಂಧ, ಮಣಿಗೆಜ್ಜೆಗಳಿಂದ ಕೂಡಿದ ದಪ್ಪ ಕಾಲ್ಕಡಗ, ಎರಡೆಳೆಯ ಕರ್ಣಾಭರಣ, ಮತ್ತೊಂದು ಪದಕಹಾರ ವಿಶೇಷವಾಗಿದೆ.

ಕಾಳಿಂಗಮರ್ದನ ಕೃಷ್ಣ

ಕೃಷ್ಣ ಕಾಳಿಂಗಮರ್ದನ ಮಾಡಲು ಕಾರಣವಾದ ಸಂದರ್ಭವನ್ನು ವಾದಿರಾಜರ ಶ್ರೀಕೃಷ್ಣ ಬಾಲಲೀಲೆಯಲ್ಲಿ ಹೀಗೆ ವಿವರಿಸಿದೆ.

> ಕಾಳಿಂಗನು ವಿಷವಕಾರಿ ಕಂಗೆಟ್ಟು ಒರಲುತ್ತಿರಲು
> ನಾಗಪತ್ನಿಯರು ತುತಿಸಿದರು ನಾರದವರದನ[೩೫೬]
> ಉನ್ನತದ ಕಾಳಿಂಗನ ರಕ್ಷಿಸಯ್ಯ ನೀನೆಮಗೆ
> ಮುತ್ತೈದೆತನದ ಕೊಡು ಭಕ್ತವತ್ಸಲ[೩೫೭]
> ಕಂದ ಕಷ್ಟದಿಂದ ಕರೆಯೆ ಕಂಭದಿಂದುಸಿ ಬಂದ
> ಕಂದ ನೀ ಕಾಯೆ ನಮ್ಮ ವಾಲೆ ಭಾಗ್ಯವ[೩೫೮]

ಎಂಬುದಾಗಿ ನಾಗಪತ್ನಿಯರು ತಮ್ಮ ಮುತ್ತೈದೆ ಭಾಗ್ಯವ ಉಳಿಸು ಎಂದು ಶ್ರೀಕೃಷ್ಣನನ್ನು ಕೇಳಿಕೊಂಡ ಸಲುವಾಗಿ ಕೃಷ್ಣ ಕಾಳಿಂಗಮರ್ದನ ಮಾಡುತ್ತಾನೆ.

ಹಂಪಿಯ ಹಜಾರ ರಾಮ ದೇವಾಲಯದ ಸ್ತಂಭದಲ್ಲಿರುವ ಕಾಳಿಂಗಮರ್ದನ ಕೃಷ್ಣನ ಶಿಲ್ಪವು (ಚಿತ್ರ-೬೫) ನೋಡಲು ಆಕರ್ಷಣೀಯವಾಗಿದೆ. ಈ ಶಿಲ್ಪದಲ್ಲಿ ಕೃಷ್ಣ ಕಾಳಿಂಗಸರ್ಪದ ಮೇಲೆ ನೃತ್ಯ ಮಾಡುತ್ತಿರುವ ಹಾಗೂ ತನ್ನ ಎಡಗೈಯಲ್ಲಿ ಅದರ ಬಾಲವನ್ನು ಹಿಡಿದಿರುವ ಚಿತ್ರಣವಿದೆ. ಕೃಷ್ಣನು ಸರ್ವಾಭರಣಭೂಷಿತನಾಗಿದ್ದಾನೆ. ಕೃಷ್ಣನ ಜಟೆಯು ಚದುರಿದ್ದು ಇಂಗ್ಲಿಷಿನ 'ಯೂ'(U) ಅಕ್ಷರದ ನಾಮವನ್ನು ಇಟ್ಟಿದ್ದಾನೆ. ಮೂರೆಳೆಯ ಕಂಠೀಹಾರ, ಪದ್ಮಪದಕವಿರುವ ಮೂರೆಳೆಯ ಉದರಬಂಧ, ಮಕರಕುಂಡಲ ಮೂರೆಳೆಯ ತೋಳ್ಬಂಧಿ, ವಾಜೀಬಂಧ ಮತ್ತು ಮುಂಗೈ ಬಳೆಗಳು, ಪದ್ಮಪದಕವಿರುವ ಮುತ್ತುರತ್ನದ ವೈಜಯಂತಿ ಮಾಲೆ, ಮೂರೆಳೆಯ ಕಾಲ್ಗಡಗ, ನೂಪುರ ಹಾಗೂ ಕೈ ಎಲ್ಲ ಬೆರಳುಗಳಿಗೆ ಉಂಗುರುಗಳನ್ನು ಧರಿಸಿದ್ದಾನೆ. ವಸ್ತ್ರಗಳಿಗೆ ಸಂಬಂಧಿಸಿದಂತೆ ಧೋತ್ರವನ್ನು ಮೊಣಕಾಲಿನವರೆಗೆ ಹಾಗೂ ಕಟಿಯಲ್ಲಿ ಉತ್ತರೀಯವನ್ನು ಕಟ್ಟಿರುವುದನ್ನು ಕಾಣಬಹುದಾಗಿದೆ.

ಈ ಶಿಲ್ಪದಲ್ಲಿ ಕೃಷ್ಣನ ಆಭರಣಗಳಿಗೆ ಮುತ್ತುರತ್ನಗಳನ್ನು ಬಳಸಿರುವುದು ಕಂಡು ಬರುತ್ತದೆ. ಪದ್ಮಪದಕವನ್ನು ಉದರಬಂಧದ ಮಧ್ಯದಲ್ಲಿ ಸೇರಿಸಿರುವುದು ವಿಶೇಷವಾಗಿದೆ.

ವೇಣುಗೋಪಾಲಕೃಷ್ಣ

ಹಂಪಿಯ ಹಜಾರರಾಮ ಚಂದ್ರ ದೇವಾಲಯದ ನವರಂಗದ ಸ್ತಂಭದ ಮೇಲಿರುವ ವೇಣುಗೋಪಾಲಕೃಷ್ಣ ಶಿಲ್ಪದಲ್ಲಿ (ಚಿತ್ರ–೬೬) ಕೃಷ್ಣನು ಚತುರ್ಭುಜನಾಗಿ ಎರಡು ಕೈಗಳಲ್ಲಿ ಕೊಳಲನ್ನು ಹಿಡಿದು ನುಡಿಸುತ್ತಿರುವ ಹಾಗೂ ಉಳಿದೆರಡು ಕೈಗಳಲ್ಲಿ ಶಂಖ ಮತ್ತು ಚಕ್ರ ಹಿಡಿದಿದ್ದಾನೆ. ಚೌಕಳಿ ವಿನ್ಯಾಸದ ಅಂಚುಗಳಿರುವ ಧೋತ್ರವನ್ನು ಮೊಣಕಾಲಿನ ಮೇಲಿನವರೆಗೂ ಹಾಗೂ ಕಟಿಭಾಗದಲ್ಲಿ ಉತ್ತರೀಯವನ್ನು ಕಟ್ಟಿದ್ದು, ಉತ್ತರೀಯದ ತುದಿಗಳು ಕಟಿಯ ಎರಡೂ ಬದಿಗೆ ಇಳಿದಿರುವುದನ್ನು ಕಾಣಬಹುದಾಗಿದೆ. ಕಿರೀಟ ಮಕುಟ, ಅದರ ಹಿಂದೆ ಏಳು ಹೆಡೆಯ ನಾಗ, ಮಕರ ಕುಂಡಲಗಳು ಹಾಗೂ ಮೂರೆಳೆಯ ಬಾಹುಬಂದಿ ಮತ್ತು ಮುಂಗೈ ಕಡಗಗಳು, ಎಲ್ಲ ಬೆರಳುಗಳಿಗೆ ಉಂಗುರುಗಳು, ದ್ವಿಸರ, ಉದರಬಂದ, ಯಜ್ಞೋಪವೀತ, ಮೇಖಲೆ, ಮುತ್ತಿನ ಕಾಲ್ಗಡಗ, ನೂಪುರ ಧರಿಸಿದ್ದಾನೆ. ಗೋಪಾಲನ ಕೊಳಲ ಧ್ವನಿಗೆ ಗೋವುಗಳು ಬಂದು ನಿಂತಿದ್ದು, ಕೃಷ್ಣನ ಧೋತ್ರದ ತುದಿಯನ್ನು ಬಾಯಿಂದ ಎಳೆಯುತ್ತಿರುವಂತೆ ಚಿತ್ರಿಸಲಾಗಿದೆ. ಗೋವುಗಳಿಗೂ ಅಲಂಕೃತ ಕೊರಳಪಟ್ಟಿಯನ್ನು ಧರಿಸಿರುವುದು ಕಂಡುಬರುತ್ತದೆ.

ಅದೇ ದೇವಾಲಯದ ಮತ್ತೊಂದು ವೇಣುಗೋಪಾಲ ಶಿಲ್ಪದಲ್ಲಿ ಕೃಷ್ಣ ಅಷ್ಟಭುಜಧಾರಿಯಾಗಿದ್ದಾನೆ. ಎಂಟು ಕೈಗಳಲ್ಲಿ ಎರಡರಲ್ಲಿ ಕೊಳಲನ್ನು, ಉಳಿದವುಗಳಲ್ಲಿ ಆಯುಧಗಳನ್ನು ಹಿಡಿದಿದ್ದಾನೆ. ಈ ಶಿಲ್ಪದಲ್ಲಿ ವಿಶೇಷವಾಗಿ ಕಂಡುಬಂದಿರುವ ಆಭರಣ ವೆಂದರೆ ಮುಂಗೈಗೆ ಎಂಟು ಮುತ್ತಿನ ಬಳೆಗಳನ್ನು ಕೂಡಿಸಿದ ಕಡಗವನ್ನು ಧರಿಸಿರುವುದು. ವೈಜಯಂತಿ ಮಾಲೆಗೆ ಒಂದು ಮುತ್ತಿನ ಪದಕ(ಲೋಲಕದಂತೆ)ಇದ್ದು, ಮಾಲೆಯ ತುಂಬಾ ದೊಡ್ಡ ಮುತ್ತುಗಳಿಂದ ಕೂಡಿದೆ. ಗೋಪಾಲನ ಕೊಳಲ ಧ್ವನಿಗೆ ಗೋವುಗಳು ಬಂದು ನಿಂತತಿವೆ. ಈ ರೀತಿಯ ವೇಣುಗೋಪಾಲ ಕೃಷ್ಣನ ಹಲವಾರು ಶಿಲ್ಪಗಳು ವಿಜಯನಗರ ಕಾಲದ ಸ್ಮಾರಕಗಳಲ್ಲಿ ಕಾಣಬಹುದು.

ವೆಂಕಟೇಶ

ವಿಷ್ಣುವಿನ ಇನ್ನಿತರ ಅವತಾರಗಳಲ್ಲಿ ವೆಂಕಟೇಶನ ಅವತಾರವೂ ಒಂದು ಹಾಗೂ ಬಹುಮುಖ್ಯವಾದುದು. ವಿಜಯನಗರ ಸಾಮ್ರಾಜ್ಯದ ರಾಜಮನೆತನದ ದೇವರು ಹಂಪಿಯ ವಿರೂಪಾಕ್ಷನಾದರು, ತುಳುವ ಮನೆತನದ ಆಳ್ವಿಕೆಯ ಕಾಲಕ್ಕೆ ವೈಷ್ಣವ ಭಕ್ತಿ ಹೆಚ್ಚಾಗಿ ಕೃಷ್ಣದೇವರಾಯ, ಅಚ್ಯುತರಾಯರು ವೆಂಕಟೇಶನ ಆರಾಧನೆಯನ್ನು ವಿರೂಪಾಕ್ಷನೊಂದಿಗೆ ಮಾಡತೊಡಗಿದರು. ಆ ನಿಟ್ಟಿನಲ್ಲಿ ತಿರುಪತಿಯ ವೆಂಕಟೇಶನನ್ನು ಈ ರಾಜರು ಹಲವು ಬಾರಿ ಕುಟುಂಬಸಹಿತ ಹೋಗಿ ದರ್ಶನ ಪಡೆದು ಸ್ವಾಮಿಗೆ ದಾನಗಳೊಂದಿಗೆ ವಸ್ತ್ರ ಮತ್ತು ಆಭರಣಗಳನ್ನು ಅರ್ಪಿಸಿರುವುದು ಈ ಕಾಲದ ಶಾಸನಗಳಿಂದ ತಿಳಿಯಬಹುದಾಗಿದೆ. ಕೃಷ್ಣದೇವರಾಯ ತನ್ನ ಆಡಳಿತದ ಅವಧಿಯಲ್ಲಿ ತಿರುಮಲೆಯ ತಿಮ್ಮಪ್ಪನನ್ನು ಏಳು ಬಾರಿ ಭೇಟಿ ಮಾಡಿ ಸ್ವಾಮಿಯ ದರ್ಶನ ಪಡೆದಿದ್ದನು. ಕೃಷ್ಣದೇವರಾಯನ ಆರಾಧ್ಯದೈವ ತಿರುಪತಿಯ ವೆಂಕಟೇಶ್ವರ ಆಗಿದ್ದ ಎಂದರೆ ತಪ್ಪಾಗಲಾರದು.

ವಿಠಲದೇವಾಲಯದ ಗೋಪುರದ ಗಾರೆಶಿಲ್ಪದಲ್ಲಿ (ಚಿತ್ರ–೬೭) ಚತುರ್ಭುಜನಾದ

ವೆಂಕಟೇಶನ ಮೂರ್ತಿಯು ನಿಂತಿದ್ದು, ಮೂರ್ತಿಯ ಬಲಭಾಗದಲ್ಲಿ ರಾಜನು ತ್ರಿಭಂಗಿಯಲ್ಲಿ ಅಂಜಲಿ ಹಸ್ತದಲ್ಲಿ ನಮಸ್ಕರಿಸುತ್ತಿದ್ದಾನೆ. ವೆಂಕಟೇಶ ಮೂರ್ತಿಯಲ್ಲಿ ಕಿರೀಟಮಕುಟ, ದಪ್ಪವಾದ **'U'** ಆಕಾರದ ನಾಮ, ನಾಮದ ಕೆಳಗೆ ಸಣ್ಣ ಚುಕ್ಕೆ ಇದೆ. ಮಕರಕುಂಡಲ, ಪದ್ಮಪದಕವಿರುವ ಕಂಠೀಹಾರ, ಉದರಬಂಧ, ಯಜ್ಞೋಪವೀತ, ಛನ್ನವೀರ, ಮೇಖಲೆ, ವೈಜಯಂತಿಮಾಲೆ, ಪತ್ರಪದಕವಿರುವ ಎರಡೆಳೆಯ ಮುಂಗೈ ಕಡಗಗಳು, ಪತ್ರಪದಕವಿರುವ ಎರಡೆಳೆಯ ತೋಳ್ಬಂದಿ ಎರಡೂ ಕೈಗಳ ಎಲ್ಲ ಬೆರಳುಗಳಿಗೂ ಉಂಗುರಗಳನ್ನು ಧರಿಸಿದ್ದಾನೆ. ಪಟ್ಟಾವಳಿಯ ಧೋತ್ರವು ಮುತ್ತುರತ್ನಗಳಿಂದ ಕೂಡಿದೆ. ವೆಂಕಟೇಶ ಸ್ವಾಮಿಯ ಬಲಭಾಗದಲ್ಲಿ ರಾಜ ಕೈಮುಗಿದು ನಿಂತಿದ್ದು, ರಾಜನು ಕುಲಾಯಿ, ಮುತ್ತಿನ ಎರಡೆಳೆಯ ಸರ, ಧೋತ್ರವನ್ನು ಮೊಣಕಾಲಿನವರೆಗೂ ಧರಿಸಿದ್ದು, ಧೋತ್ರದ ಮೇಲೆ ಉತ್ತರೀಯವನ್ನು ಕಟ್ಟಿದ್ದಾನೆ.

ಈ ಶಿಲ್ಪದಲ್ಲಿ ನಿಂತಿರುವ ರಾಜ ಕೃಷ್ಣದೇವರಾಯನೇ ಎಂಬುದಾಗಿ ಊಹಿಸಬಹುದಾಗಿದೆ. ಏಕೆಂದರೆ ತಿರುಪತಿಯ ವೆಂಕಟೇಶಸ್ವಾಮಿಯ ಮೇಲೆ ಕೃಷ್ಣದೇವರಾಯನಿಗೆ ಅಪಾರ ಭಕ್ತಿಭಾವಗಳಿದ್ದು, ಏಳು ಬಾರಿ ತಿರುಪತಿಗೆ ಭೇಟಿ ನೀಡಿ, ಹಲವು ದಾನಗಳನ್ನು ಆ ದೇವರಿಗೆ ಅರ್ಪಿಸಿದ್ದನು. ಕೃಷ್ಣದೇವರಾಯ ನೀಡಿದಷ್ಟು ದಾನಗಳನ್ನು ಮತ್ಯಾವ ವಿಜಯನಗರ ರಾಜರು ವೆಂಕಟೇಶಸ್ವಾಮಿಗೆ ನೀಡಿಲ್ಲ. ಅಲ್ಲದೆ ಆತನ ಕಾಲದಲ್ಲಿಯೇ ವಿಠಲದೇವಾಲಯ ನಿರ್ಮಾಣವಾದ ಕಾರಣ, ಈ ಶಿಲ್ಪದಲ್ಲಿರುವ ರಾಜನ ಮೂರ್ತಿ ಬಹುಶಃ ಕೃಷ್ಣದೇವರಾಯ ಪ್ರತಿರೂಪ ಶಿಲ್ಪ ಎಂದು ಹೇಳಬಹುದಾಗಿದೆ.

ವೆಂಕಟೇಶಸ್ವಾಮಿಯ ಎಡಭಾಗದಲ್ಲಿ ಯತಿಯೊಬ್ಬರು ನಿಂತಿದ್ದಾನೆ. ಯತಿಯು ಕಮಂಡಲವನ್ನು ತನ್ನ ಎಡಗೈಯಲ್ಲಿ ಹಿಡಿದಿದ್ದು, ಬಲಗೈಯಿಂದ ಸ್ವಾಮಿಯನ್ನು ನೆನೆಯುತ್ತಿರುವಂತಿದೆ. ಜಟೆಯನ್ನು ತಲೆಯ ಮೇಲೆ ಗಂಟುಹಾಕಿದ್ದು, ಸಣ್ಣ ಕುಂಡಲಗಳು, ಎರಡೆಳೆಯ ರುದ್ರಾಕ್ಷಿ ಸರ, ಎರಡೆಳೆಯ ರುದ್ರಾಕ್ಷಿ, ತೋಳ್ಬಂಧಿ, ಯಜ್ಞೋಪವೀತ ಧರಿಸಿದ್ದಾನೆ. ಮುನಿಯು ಅಧೋರ್ರುಕದಲ್ಲಿ ಧೋತ್ರವನ್ನು ಧರಿಸಿದ್ದು, ಧೋತ್ರದ ಮೇಲೆ ಉತ್ತರೀಯವನ್ನು ಅಗಲವಾಗಿ ಕಟ್ಟಿದ್ದಾನೆ. ಹಣೆಯಲ್ಲಿ ಗಂಧಾಕ್ಷತೆ ಹಚ್ಚಿರುವುದನ್ನು ಕಾಣಬಹುದಾಗಿದೆ.

ಶಾಸನಗಳಲ್ಲಿ ಉಲ್ಲೇಖವಾಗಿರುವ ವಸ್ತ್ರ ಮತ್ತು ಆಭರಣಗಳು

ವಿಜಯನಗರ ಸಾಮ್ರಾಜ್ಯದ ಅಧಿದೇವರು ಹಂಪಿಯ ವಿರೂಪಾಕ್ಷ. ಈ ಸಾಮ್ರಾಜ್ಯವನ್ನಾಳಿದ ರಾಜರು ವಿರೂಪಾಕ್ಷನಿಗೆ ಅಷ್ಟೇ ಅಲ್ಲದೇ ಕೃಷ್ಣ, ವಿಜಯವಿಠಲ, ತಿರುಪತಿಯ ವೆಂಕಟೇಶನಿಗೆ ಹಲವು ದಾನಗಳನ್ನು ನೀಡಿದ್ದಾರೆ. ರಾಜರು ತಮ್ಮ ತಂದೆ ತಾಯಿಗಳಿಗೆ ಪುಣ್ಯವಾಗಲೆಂದು, ದಿಗ್ವಿಜಯದ ನಂತರ ದಲ್ಲಿ ದೇವರಿಗೆ ಭಕ್ತಿಪೂರ್ವಕವಾಗಿ ಭೂದಾನ, ಗೋದಾನ, ಸುವರ್ಣದಾನ, ತುಲಾಪುರುಷದಾನ, ವಸ್ತ್ರಾಭರಣ ದಾನಗಳನ್ನು ನೀಡಿರುವುದನ್ನು ಶಾಸನಗಳ ಮೂಲಕ ತಿಳಿಯಬಹುದಾಗಿದೆ. ರಾಜರಷ್ಟೇ ಅಲ್ಲದೆ ರಾಣಿಯರು, ದಂಡನಾಯಕರು, ಜನಸಾಮಾನ್ಯರು ಸಹ ದಾನಗಳನ್ನು ನೀಡಿದ್ದಾರೆ.

ಶೈವದೇವತೆಗಳಿಗೆ

ಕ್ರಿ.ಶ. ೧೪೪೦ರ ಕಾಲಕ್ಕೆ ಸೇರಿದ ಕಿರಗೂರು ಮಂಡ್ಯ ಜಿಲ್ಲೆಯ ಶಾಸನವು, "ಮಹಾ ಪ್ರಧಾನನಾದ ಲಕ್ಕಣ್ಣ ದಂಡನಾಯಕರು ಪ್ರತಾಪ ದೇವರಾಯರಿಗೆ ಆರೋಗ್ಯ ಅಭಿವೃದ್ಧಿಯಾಗಲೆಂದು ತಲಕಾಡಿನ ವೈದ್ಯನಾಥ ದೇವರಿಗೆ ಅಮೃಪಡಿ, ಪಂಚಾಮೃತ, ನಂದಾದೀಪ, ಗಂಧ, ವಸ್ತ್ರ, ಧೂಪ ಮುಂತಾದವುಕ್ಕೆ ಕಿರುಗುಸೂರು ಗ್ರಾಮದಿಂದ ಅರಮನೆಗೆ ಮತ್ತು ಬೆಳಕವಾಡಿಯ ಠಾಣೆಯಕ್ಕೆ ಸಲ್ಲುತ್ತಿದ್ದ ಸುಂಕ ವರಹ, ಗದ್ಯಾಣ, ಅನ್ನದಾನವಾಗಿ ಬಿಡುವಂತೆ ಪಟ್ಟಣದ ರಾಯಣ್ಣ ಒಡೆಯರಿಗೆ ನಿರೂಪಿಸುತ್ತಾನೆ".[೩೫೯]

ಕ್ರಿ.ಶ. ೧೪೩೮ರ ಪಿರನ್ಮೆಲೈ ಶಾಸನವು ಎರಡನೇ ದೇವರಾಯನ ಕಾಲದ್ದಾಗಿದೆ. ಈ ಶಾಸನದಲ್ಲಿ, "ದೇವರಾಯನ ಆಳ್ವಿಕೆಯಲ್ಲಿ ಪಾಂಡ್ಯ ಮಂಡಲವು ತಿರುಮಲೈನಾಡಿನ ತಿರುಕ್ಕ್ಡಿಕ್ಕುಂಡ್ರದ ಉಡೈಯಾರ್ ತಿರುಕ್ಕೈಡಿಕ್ಕುಂಡ್ರ ನಾಯನಾರ್‌ನಿಗೆ ಲಕ್ಕಣ್ಣ ಒಡೆಯ ಮತ್ತು ತಮ್ಮ ಮಾದಣ್ಣ ಒಡೆಯರು ಆ ದೇವಾಲಯದ ಪ್ರತಿದಿವಸದ ಪ್ರಸಾದ ತಯಾರಿಕೆಗಾಗಿ ತಿರುಮಂಜನಕ್ಕಾಗಿ, ದೇವರ ಅಂಗವಸ್ತ್ರಕ್ಕಾಗಿ ಇವು ಮಂಡಲದ ಸುರಭಿನಾಡಿನ ಅರುನೂಟ್ರುಕೆಯ ಜಾಗದಲ್ಲಿ ಉತ್ಪತ್ತಿಯಾದ ಎಲ್ಲ ರೀತಿಯ ಆದಾಯವನ್ನು ದೇವರಿಗಾಗಿ ಮೀಸಲಿಟ್ಟಿದ್ದನ್ನು ಶಾಸನ ತಿಳಿಸುತ್ತದೆ".[೩೬೦]

ಕ್ರಿ.ಶ. ೧೫೧೦ರ ಜನವರಿ ೨೪ರಂದು ಕೃಷ್ಣದೇವರಾಯನ ಪಟ್ಟಾಭಿಷೇಕವಾದ ದಿನ. "ಆ ದಿನದಂದು ಕೃಷ್ಣದೇವರಾಯನು ಹಂಪಿಯ ವಿರೂಪಾಕ್ಷ ದೇವರಿಗೆ ಸಿಂಗೇನಹಳ್ಳಿ ಗ್ರಾಮವನ್ನು ದಾನ ನೀಡಿ, ಅಲ್ಲಿನ ಗೋಪುರವನ್ನು ಜೀರ್ಣೋದ್ಧಾರ ಮಾಡಿಸಿ, ದೇವರಿಗೆ ನವರತ್ನಗಳಿಂದ ಕೂಡಿದ ಚಿನ್ನದ ಕಮಲವನ್ನು, ನಾಗಾಭರಣಗಳನ್ನು ಮಾಡಿಸಿ, ದೇವರ ಪೂಜೆಗೆ ಒಂದು ಚಿನ್ನದ ಹರಿವಣ, ಎರಡು ಚಿನ್ನದ ಆರತಿ, ೨೪ ಬೆಳ್ಳಿಯ ಆರತಿಗಳನ್ನು ಮಾಡಿಸಿ ದಾನವಾಗಿ ನೀಡಿದ್ದಾನೆ".[೩೬೧]

ಕ್ರಿ.ಶ. ೧೫೧೩ರ ಜೂನ್ ತಿಂಗಳಲ್ಲಿ ಕೃಷ್ಣದೇವರಾಯನು ವಿರೂಪಾಕ್ಷ ದೇವರಿಗೆ, "ತನ್ನ ತಂದೆ ತಾಯಿಗಳಿಗೆ ಪುಣ್ಯವಾಗಲೆಂದು ಹಲವಾರು ಗ್ರಾಮಗಳ ಉತ್ಪತ್ತಿಯನ್ನು ದಾನವಾಗಿ ನೀಡಿರುವುದರೊಂದಿಗೆ ನಾಗಾಭರಣ, ನವರತ್ನದ ತಾವರೆ ಕಮಲ, ಚಿನ್ನದ ಹರಿವಾಣ, ಎರಡು ಚಿನ್ನದ ಆರತಿಹಲಗೆ, ೩೪ ಬೆಳ್ಳಿಯ ಆರತಿಯಹಲಗೆಗಳನ್ನು ದಾನವಾಗಿ ನೀಡಿದ್ದಾನೆ".[೩೬೨]

ಕೃಷ್ಣದೇವರಾಯನು ಮಧುರೆಯ ಮೀನಾಕ್ಷಿ ಅಮ್ಮನವರ ದರ್ಶನ ಪಡೆದು, ಅಮ್ಮನವರಿಗೆ ವಜ್ರದ ಕರ್ಣಕುಂಡಲಗಳನ್ನು, ವೈಢೂರ್ಯದ ಪದಕಗಳನ್ನು, ಪಚ್ಚೆಯ ಕರ್ಣಕುಂಡಲಗಳನ್ನು ಮುತ್ತಿನ ಮುಕ್ರವನ್ನು (ಮೂಗುತಿ) ಸಮರ್ಪಿಸಿದನು.[೩೬೩]

ವೈಷ್ಣವ ದೇವತೆಗಳಿಗೆ

ಕ್ರಿ.ಶ. ೧೪೨೯ರ ಕಾಲಕ್ಕೆ ಸೇರಿದ ಪ್ರೌಢದೇವರಾಯನ ಮಹಾರಾಯನು ತಿರುಮಾಲೆ ದೇವರ ಸೇವೆಗಾಗಿ ಒಟ್ಟು ಎರಡು ಸಾವಿರದ ಇನ್ನೂರು ವರಹಗಳನ್ನು, ೩೩ ಚಿನ್ನದ ಹರಿವಾಣಗಳನ್ನು

ಮತ್ತು ಕೆಲವು ಬೆಳ್ಳಿಯ ಆರತಿಗಳನ್ನು ದಾನ ನೀಡಿದ ವಿಷಯವನ್ನು ತಿಳಿಸುತ್ತದೆ.[೩೬೪]

ಕ್ರಿ.ಶ.೧೪೩೦ರ ಕಾಲಕ್ಕೆ ಸೇರಿದ ಶಾಸನದಲ್ಲಿ ಎರಡನೇ ದೇವರಾಯನ ಮಗನಾದ ಶ್ರೀಗಿರೀಶ್ವರನು ಚಿನ್ನ ಮತ್ತು ರತ್ನಗಳಿಂದ ಕೂಡಿದ ಪಟ್ಟವನ್ನು ತಿರುಮಲೆಯ ಶ್ರೀವೆಂಕಟೇಶ್ವರನಿಗೆ ಮಾಡಿಸಿ ಸಮರ್ಪಿಸಿದಂತೆ ತಿಳಿಸುತ್ತದೆ.[೩೬೫]

ಕ್ರಿ.ಶ. ೧೪೩೦ರ ಶಾಸನವು ಎರಡನೇ ದೇವರಾಯನ ಕಾಲಕ್ಕೆ ಸೇರಿದ್ದು, ತಮಿಳುನಾಡಿನ ಶ್ರೀರಂಗಂನ ಶ್ರೀರಂಗನಾಥ ದೇವಾಲಯದ ಪ್ರಾಕಾರದಲ್ಲಿದೆ. ಈ ಶಾಸನದಲ್ಲಿ ತಿಳಿಸುವಂತೆ, "ಎರಡನೇ ದೇವರಾಯನು ರಂಗನಾಥ ದೇವರಿಗೆ ಹಲವಾರು ದಾನಗಳನ್ನು ನೀಡುವುದರೊಂದಿಗೆ, ಮುತ್ತಿನ ಒಡವೆಗಳನ್ನು ಸಮರ್ಪಿಸಿದನು" ಎಂಬುದಾಗಿ ತಿಳಿಸುತ್ತದೆ.[೩೬೬]

ಕ್ರಿ.ಶ.೧೫೧೩ರ ಮಾರ್ಚ್ ೧೧ರಂದು ಹಂಪಿಯ ವಿಠಲದೇವರಿಗೆ ಕೃಷ್ಣದೇವರಾಯನು ತನ್ನ ತಂದೆ ತಾಯಿಗಳಿಗೆ ಪುಣ್ಯವಾಗಲೆಂದು ಹಲವು ಗ್ರಾಮಗಳ ಆದಾಯವನ್ನು ದಾನವಾಗಿ ನೀಡಿದ. ಕೃಷ್ಣದೇವರಾಯನ ರಾಣಿಯರಾದ ಚಿನ್ನಾದೇವಿ ಮತ್ತು ತಿರುಮಲದೇವಿಯರು ಶ್ರೀವಿಠಲದೇವರಿಗೆ ಬೆಳ್ಳಿಯ ನೀಲಾಂಜನದ ಹಲಗೆ, ಹಿರಿಯ ಆರತಿ, ಪ್ರತಿಮೆ ಆರತಿ, ಪುರುಷಾಮೃಗದ ಆರತಿಗಳನ್ನು ನೀಡಿದರು.[೩೬೭]

ಕ್ರಿ.ಶ. ೧೫೧೫ರ ಶಾಸನವು ಹಂಪಿಯ ಬಾಲಕೃಷ್ಣ ದೇವಾಲಯದಲ್ಲಿದೆ. ಈ ಶಾಸನದಲ್ಲಿ, "ಕೃಷ್ಣದೇವರಾಯನು ಉದಯಗಿರಿಯ ದಂಡಯಾತ್ರೆಯ ನಂತರ ಅಲ್ಲಿಂದ ತಂದ ಬಾಲಕೃಷ್ಣ ದೇವರನ್ನು ಹಂಪಿಯಲ್ಲಿ ಪ್ರತಿಷ್ಠಾಪಿಸಿ, ದೇವರಿಗೆ ನವರತ್ನ ಖಚಿತವಾದ ನಾನಾ ವಿಧಧ ಆಭರಣಗಳನ್ನು, ಚಿನ್ನಬೆಳ್ಳಿಯ ಪರಿಕರಗಳನ್ನು ದಾನ ನೀಡಿದ್ದಾನೆ".[೩೬೮]

ಕ್ರಿ.ಶ. ೧೫೧೩ರ ಶಾಸನವು ಹಂಪಿಯ ವಿಠಲ ದೇವಾಲಯದ ಮುಂದಿರುವ ಮಂಟಪದಲ್ಲಿದೆ.ಈ ಶಾಸನದಲ್ಲಿ ಕೃಷ್ಣದೇವರಾಯನು ವಿಠಲದೇವರಿಗೆ ಹಲವು ದಾನಗಳನ್ನು ನೀಡಿರುವುದರೊಂದಿಗೆ, ದೇವರ ಆಭರಣಗಳನ್ನು ಬೀಗಮುದ್ರೆ ಸಮೇತ ಕಾಪಾಡಿಕೊಂಡು ಬರಬೇಕೆಂದು ಹಿರೇತಿಮ್ಮಯ್ಯನೆಂಬ ಭಂಡಾರಿಯನ್ನು ನೇಮಿಸಿದ್ದನು.[೩೬೯]

ಕೃಷ್ಣದೇವರಾಯನು ತನ್ನ ಆಳ್ವಿಕೆಯ ಅವಧಿಯಲ್ಲಿ ತಿರುಪತಿಯ ತಿಮ್ಮಪ್ಪನ ದರ್ಶನವನ್ನು ಏಳು ಬಾರಿ ಮಾಡಿದನು.[೩೭೦] ತಾನು ದರ್ಶನ ಪಡೆದ ಸಂದರ್ಭದಲ್ಲಿ ತಿಮ್ಮಪ್ಪನಿಗೆ ಹಲವಾರು ವಸ್ತ್ರ ಮತ್ತು ಆಭರಣಗಳನ್ನು ದಾನ ನೀಡಿರುವುದು ಶಾಸನಗಳಿಂದ ತಿಳಿದುಬರುತ್ತದೆ. ಅದರಂತೆ,

ಕ್ರಿ.ಶ. ೧೫೧೩ರ ಫೆಬ್ರವರಿ ೧೦ ರಂದು ಮೊದಲ ಬಾರಿಗೆ ತನ್ನ ರಾಣಿಯರಾದ ತಿರುಮಲಾ ದೇವಿ ಮತ್ತು ಚಿನ್ನಾದೇವಿಯರೊಂದಿಗೆ ದೇವರ ದರ್ಶನವನ್ನು ಪಡೆದು, ದೇವರ ಸೇವೆಗಾಗಿ ನವರತ್ನ ಖಚಿತವಾದ ಕಿರೀಟ, ಪದಕ ಮತ್ತು ಮೂರೆಳೆಯ ಮುತ್ತಿನ ಸರವನ್ನು ಹಾಗೂ ೨೫ ಬೆಳ್ಳಿಯ ಆರತಿಗಳನ್ನು ಮಾಡಿಸಿಕೊಟ್ಟನು. ಕಿರೀಟದಲ್ಲಿ ಮತ್ತು ಮೂರೆಳೆ ಮುತ್ತಿನ ಸರದಲ್ಲಿ ಬಳಸಿದ್ದ ನವರತ್ನಗಳಾದ ಚಿನ್ನ, ಕೆಂಪುಕಲ್ಲು, ಪಚ್ಚೆ, ರತೀ, ವಜ್ರ, ಮಾಣಿಕ್ಯ, ನೀಲಾ, ವೈಢೂರ್ಯ, ಗೋಮೇಧಿಕಾ ಮತ್ತು ಮುತ್ತುಗಳ ಸಂಖ್ಯೆಯನ್ನು ಸಹ ತಿಳಿಯಬಹುದಾಗಿದೆ.[೩೭೧] ನವರತ್ನದ

ಕಿರೀಟದ ಒಟ್ಟು ತೂಕ ೩೩೦೮ ಮತ್ತು ಮುತ್ತಿನ ಮೂರೆಳೆಯ ಸರದ ಒಟ್ಟು ತೂಕ ೯೧.[೩೨೨]

ಕ್ರಿ.ಶ. ೧೫೧೩ರ ಫೆಬ್ರವರಿ ೧೦ ರಂದು ಕೃಷ್ಣದೇವರಾಯನು ಚಿತ್ತೂರು ಜಿಲ್ಲೆಯ ಕಾಳಹಸ್ತಿಯ ಕಾಳಹಸ್ತೇಶ್ವರ ದೇಗುಲಕ್ಕೆ ಭೇಟಿ ನೀಡಿ ದೇವರ ದರ್ಶನ ಪಡೆದನು. ಈ ಸಂದರ್ಭದಲ್ಲಿ ದೇವರಿಗೆ ಮುತ್ತಿನ ಕಂಠಮಾಲೆ ಮತ್ತು ಮಾಣಿಕ್ಯದ ಕಂಠಮಾಲೆ, ಚಿನ್ನದ ಬಟ್ಟಲು, ಚಿನ್ನದ ಪುರುಷಾಮೃಗದ ಆರತಿ, ಗಿರಿಯಾರತಿ, ೨೪ ಬೆಳ್ಳಿಯ ಆರತಿಗಳನ್ನು ದಾನವಾಗಿ ನೀಡಿದ್ದಾನೆ. ಈ ಶಾಸನದಿಂದ ಕಂಠಮಾಲೆಗಳಿಗೆ ಬಳಸಿದ ಲೋಹಗಳ ಬಗ್ಗೆ ಮತ್ತು ಮಾಣಿಕ್ಯ, ನೀಲಗಳ ಸಂಖ್ಯೆಯನ್ನು ಮತ್ತು ಅದರ ತೂಕದ ವಿವರವಿದೆ.[೩೨೩]

ಕ್ರಿ.ಶ. ೧೫೧೩ರ ಮೇ ೨ ರಂದು ಕೃಷ್ಣದೇವರಾಯನು ತಿರುಮಲೆಯ ವೆಂಕಟೇಶ್ವರನ ದರ್ಶನವನ್ನು ಎರಡನೇ ಬಾರಿಗೆ ಪಡೆದನು. ಈ ಸಂದರ್ಭದಲ್ಲಿ ತಿರುವೇಂಗಳನಾಥ ದೇವರಿಗೆ ತಿರುವಾಭರಣ ಸ್ವರೂಪದ ಉಡುದಾರ, ಅಡ್ಡಿಗೆಗಳನ್ನು, ಕಠಾರಿ ಒರೆಯನ್ನು, ಭುಜಕೀರ್ತಿಗಳನ್ನು, ಉತ್ಸವ ಮೂರ್ತಿಗಳಿಗೆ ಮೂರು ಕಿರೀಟಗಳನ್ನು ಸಮರ್ಪಿಸಿದನು. ಈ ಆಭರಣಗಳ ತಯಾರಿಕೆಗೆ ಬಳಸಿದ ಮುತ್ತು, ರತ್ನಗಳ ಸಂಖ್ಯೆ, ಮತ್ತು ಆಭರಣದ ತೂಕವನ್ನು ಈ ಶಾಸನದಿಂದ ತಿಳಿಯಬಹುದು.[೩೨೪]

ಕ್ರಿ.ಶ. ೧೫೧೩ರ ಮೇ ೧೧ ರಂದು ಚಿತ್ತೂರು ಜಿಲ್ಲೆಯ ಚಂದ್ರಗಿರಿ ತಾಲ್ಲೂಕಿನ ಕಾಳಹಸ್ತಿಯ ಕಾಳಹಸ್ತೇಶ್ವರ ದೇವರ ದರ್ಶನವನ್ನು ಕೃಷ್ಣದೇವರಾಯ ಎರಡನೆ ಬಾರಿಗೆ ಪಡೆದನು. ಈ ಸಂದರ್ಭದಲ್ಲಿ ಕಾಳಹಸ್ತೇಶ್ವರನಿಗೆ ಮುತ್ತು, ಪಚ್ಚೆ, ಕೆಂಪು, ವೈಢೂರ್ಯ, ನೀಲಗಳಿಂದ ಕೂಡಿದ ೩೭ ತೂಕದ ಪದಕವನ್ನು ದಾನವಾಗಿ ನೀಡಿದನು.[೩೨೫]

ಕ್ರಿ.ಶ. ೧೫೧೩ರಲ್ಲಿ ಮತ್ತೊಮ್ಮೆ ಕೃಷ್ಣದೇವರಾಯನು ಕಾಳಹಸ್ತಿಯ ಕಾಳಹಸ್ತೇಶ್ವರ ದೇವರ ದರ್ಶನವನ್ನು ಮಾಡಿ, ತನ್ನ ತಂದೆ–ತಾಯಿಗಳಿಗೆ ಪುಣ್ಯವಾಗಲೆಂದು ದೇವರಿಗೆ ನವರತ್ನ ಖಚಿತವಾದ ಚಿನ್ನದ ಪ್ರಭಾವಳಿಯನ್ನು ಹಾಗೂ ಇತರ ದಾನಗಳನ್ನು ನೀಡಿದ್ದನು.[೩೨೬]

ಕ್ರಿ.ಶ. ೧೫೧೪ರ ಜುಲೈ ೬ ರಂದು ಕೃಷ್ಣದೇವರಾಯನು ಉದಯಗಿರಿಯ ದಿಗ್ವಿಜಯದ ನಂತರ ತನ್ನ ರಾಣಿಯಾದ ಚಿನ್ನಾದೇವಿಯೊಂದಿಗೆ ತಿರುಪತಿಯ ತಿರುವೇಂಗಳನಾಥನನ್ನು ೪ನೇ ಬಾರಿ ದರ್ಶನ ಪಡೆದಿದ್ದನು. ಈ ಸಂದರ್ಭದಲ್ಲಿ ದೇವರಿಗೆ ಕನಕಾಭಿಷೇಕವನ್ನು ಮಾಡಿಸಿ, ಮುತ್ತು ರತ್ನಗಳಿಂದ ಕೂಡಿದ ಮೂರೆಳೆಯ ಸರವನ್ನು(ತ್ರಿಸರ) ದಾನವಾಗಿ ನೀಡಿದನು.[೩೨೬] ಇದೇ ಸಂದರ್ಭದಲ್ಲಿ ರಾಣಿಯಾದ ಚಿನ್ನಾದೇವಿಯೂ ದೇವರ ಸೇವೆಗಾಗಿ ಮುತ್ತು, ರತ್ನ, ವಜ್ರಗಳಿಂದ ಕೂಡಿದ ಕಂಠಮಾಲೆಯನ್ನು ಸಮರ್ಪಿಸಿದ್ದಳು.[೩೨೮]

ಕ್ರಿ.ಶ. ೧೫೧೫ರ ಜುಲೈ ೨೫ ರಂದು ಕೃಷ್ಣದೇವರಾಯನು ಪೂರ್ವ ದಿಗ್ವಿಜಯದ ನಂತರ ತನ್ನ ರಾಣಿಯರ ಸಮೇತ ಆಂಧ್ರದ ಕೃಷ್ಣನದೀ ತೀರದ ಅಮರೇಶ್ವರಕ್ಕೆ ಬಂದು, ಅಮರೇಶ್ವರ ದೇವರಿಗೆ ತುಲಾಪುರುಷ ಮಹಾದಾನವನ್ನು ಮಾಡಿದನು. ಇದೇ ಸಂದರ್ಭದಲ್ಲಿ ತನ್ನ ರಾಣಿಯರಾದ

ಚಿನ್ನಾದೇವಿಯಿಂದ ರತ್ನಧೇನು ಮಹಾದಾನವನ್ನು ಮತ್ತು ತಿರುಮಲಾ ದೇವಿಯಿಂದ ಸಪ್ತಸಾಗರ ಮಹಾದಾನವನ್ನು ಮಾಡಿಸಿದನು.[೩೭೯]

ಕ್ರಿ.ಶ. ೧೫೧೫ರ ಅಕ್ಟೋಬರ್ ೨೫ ರಂದು ಕೃಷ್ಣದೇವರಾಯನು ತಿರುಮಲೆಯ ತಿರುವೇಂಗನಾಥನ ದರ್ಶನವನ್ನು ಪಡೆದಿದ್ದನು. ಈ ಸಂದರ್ಭದಲ್ಲಿ ದೇವರಿಗೆ ೩೧,೧೨೪ ತೂಕದ ನವರತ್ನ ಖಚಿತವಾದ ಪ್ರಭಾವಳಿಯನ್ನು ದಾನವಾಗಿ ಕೊಟ್ಟನು.[೩೮೦]

ಕ್ರಿ.ಶ. ೧೫೨೧ರ ಫೆಬ್ರವರಿ ೧೭ ರಂದು ಕೃಷ್ಣದೇವರಾಯನು ೭ನೇ ಬಾರಿಗೆ ತಿರುಪತಿ ವೆಂಕಟೇಶ್ವರನ ದರ್ಶನವನ್ನು ಪಡೆದನು. ಆಗ ದೇವರಿಗೆ ನವರತ್ನ ಖಚಿತವಾದ ಪೀತಾಂಬರ, ಎರಡು ಚಾಮರ, ಒಂದು ಪದಕವು ಸೇರಿದಂತೆ ಮುತ್ತು ಮಾಣಿಕ್ಯ, ನೀಲ, ಪಚ್ಚೆಗಳಿಂದ ಕೂಡಿದ ಒಂದು ಕುಲಾಯವನ್ನು ರಾಣಿ ತಿರುಮಲಾದೇವಿಯ ಕೈಯಿಂದ ಸಮರ್ಪಿಸಿದ್ದನು.[೩೮೧]

ಕೃಷ್ಣದೇವರಾಯನು ಶ್ರೀವಳ್ಳಿ ಪುತ್ತೂರಿಗೆ ಬಂದು ಅಲ್ಲಿನ ಸಂಪಂಗಿ ಮನ್ನಾರ್ ಸ್ವಾಮಿಯ ಸೇವೆ ಮಾಡಿ ತಿರುಮುಕ್ಕುಕೆಂಪಿನ ವಡ್ಯಾಣ, ಬಂಗಾರು ನೂಪುರಗಳನ್ನು, ನವರತ್ನ ಖಚಿತ ಸಿಂಹಮುಖ ಪ್ರಭಾವಳಿಯನ್ನು ಅರ್ಪಿಸಿದ್ದನು.[೩೮೨]

ಕ್ರಿ.ಶ. ೧೫೩೨ಕ್ಕೆ ಸೇರಿದ ಶಾಸನದಲ್ಲಿ ಅಚ್ಯುತರಾಯ ಮಹಾರಾಯನು ತನ್ನ ರಾಜಕೀಯ ಸಾಧನೆಗಳನ್ನು ದಾಖಲಿಸಿದ ನಂತರ ರಾಜ, ರಾಣಿಯಾದ ವರದರಾಜದೇವಿ ಅಮ್ಮ, ರಾಜಕುಮಾರ ವೆಂಕಟಾದ್ರಿ ಅವರುಗಳು ವರದರಾಜ ದೇವರ ಸನ್ನಿಧಿಯಲ್ಲಿ ತುಲಾಪುರುಷ ಮಹಾದಾನಗಳನ್ನು ನೆರವೇರಿಸಿ, ದೇವರಿಗೆ ಚೆರವು, ಪುಳಗಾವು, ಸೀತಾಂಬ್ರ, ಪದಕ, ಪಟ್ಟೆ, ಹಚ್ಚಡ, ಪಟ್ಟೆಸೀರೆ, ಮಂಜಿಡಿಕೆ ಸೀರೆ, ನೈವೇದ್ಯ ಪದಾರ್ಥಗಳು ಹಾಗೂ ರತ್ನಘಟಿತ ಶಂಖು, ಚಕ್ರ, ಆಭಯಹಸ್ತ, ತಿರುನಾಮಗಳನ್ನು ಹಾಗೂ ಹದಿನೇಳು ಗ್ರಾಮಗಳನ್ನು ದತ್ತಿಬಿಟ್ಟ ವಿವರವಿದೆ.[೩೮೩] ಇದರಿಂದ ವಸ್ತ್ರಗಳಿಗೆ ಬಳಸಬೇಕಾಗಿರುವ ನವರತ್ನಗಳ ಹೆಸರು, ಅವುಗಳ ಸಂಖ್ಯೆ, ಹಾಗೂ ವಸ್ತ್ರಗಳ ಬಣ್ಣಗಳ ಕುರಿತ ಮಾಹಿತಿಯನ್ನು ಇಲ್ಲಿ ಕಾಣಬಹುದು.

ಕ್ರಿ.ಶ. ೧೫೩೨ರ ಶಾಸನದಲ್ಲಿ, "ಅಚ್ಯುತರಾಯನು ತನ್ನ ದಿಗ್ವಿಜಯಗಳ ನಂತರ ತುಲಾಪುರುಷ ಮಹಾದಾನಕ್ಕೆ ಹದಿವಾಸವನ್ನು ಮಾಡಿ, ಚಿತ್ಯೈಸಿ ೧೨ ಆದಲೂ ಮುತ್ತಿನ ತುಲಾಪುರುಷ(ವನೂ) ವರದಾದೇವಿ ಅಮ್ಮನವರು ಕುಮಾರ ವೆಂಕಟಾದ್ರಿ ಚಿಕ್ಕವೊಡೆಯರೂ ತುಲಾಪುರುಷ ಮಹಾಭೂತ ಘಟದಾನ, ಸಹಸ್ರಗೋದಾನ, ನಿತ್ಯದಾನ ಮುಂತಾದ ದಾನಗಳನ್ನು ವರದರಾಜದೇವರಿಗೆ ಸಮರ್ಪಿಸಿದರು".[೩೮೪]

ಕ್ರಿ.ಶ. ೧೫೩೨ರ ಶಾಸನದಲ್ಲಿ ತಿಳಿಸುವಂತೆ, "ಅಚ್ಯುತರಾಯನು, ರಾಣಿ ವರದಾದೇವಿ ಹಾಗೂ ರಾಜಕುಮಾರ ಚಿಕ್ಕವೆಂಕಟಾದ್ರಿ ಅವರೊಂದಿಗೆ ವಿಷ್ಣು ಕಂಚಿಗೆ ಬಂದು ಅಲ್ಲಿನ ದೇವರಿಗೆ ಮುತ್ತಿನ ತುಲಾಪುರುಷ, ಭೂದಾನ, ಗೋಸಹಸ್ತ್ರ ದಾನಗಳನ್ನು ಮಾಡಿ, ವರದರಾಜ ದೇವರ ಪೂಜಾಕೈಂಕರ್ಯಗಳಿಗಾಗಿ ೧೫೦೦ ಗದ್ಯಾಣಗಳ ಆದಾಯುವುಳ್ಳ ೧೭ ಗ್ರಾಮಗಳನ್ನು ದತ್ತಿ ನೀಡಿದುದ್ದಾಗಿ ತಿಳಿಸುತ್ತದೆ".[೩೮೫]

ಕ್ರಿ.ಶ. ೧೫೩೪ರ ಅಚ್ಯುತರಾಯನ ಕಾಲಕ್ಕೆ ಸೇರಿದ ಶಾಸನದಲ್ಲಿ ತಿಳಿಸುವಂತೆ, "ಅವಸರದ ಮಲ್ಲರಸನ ಪಾರುಪತ್ಯದಲ್ಲಿ ಅಚ್ಯುತರಾಯನು ಶ್ರೀರಂಗನಾಥ ದೇವರಿಗೆ ಸಮರ್ಪಿಸಿದ ಚಿನ್ನದ ಪಾತ್ರೆ ಸಾಮಾನುಗಳು, ಚಿನ್ನದ ಪೀತಾಂಬರ, ಹಾಗೂ ಸಜ್ಜಾಗೃಹದ ಬಾಗಿಲವಾಡಕ್ಕೆ ಚಿನ್ನದ ಹೊದಿಕೆಯನ್ನು ನೀಡಿದ ವಿವರವಿದೆ".[೩೮೬]

ಕ್ರಿ.ಶ. ೧೫೨೯ರ ಅಚ್ಯುತರಾಯನ ಕಾಲದ ಶಾಸನದಲ್ಲಿ, "ಶ್ರೀರಂಗಂನ ಶ್ರೀರಂಗ ನಾಥ ದೇವರಿಗೆ ರಾಜನು ಕಿರೀಟ, ಕರ್ಣಪತ್ರ, ರತ್ನಕುಂಡಲಗಳನ್ನು ರಾಮಭಟ್ಲಯ್ಯರವರ ರಾಯಸಂವೆಂಗಳಯ್ಯನ ಮೂಲಕ ಕಳುಹಿಸಿದ ವಿವರವಿದೆ".[೩೮೭]

ಕ್ರಿ.ಶ. ೧೫೩೩ರ ಶಾಸನವು ತಿಳಿಸುವಂತೆ, "ಅಚ್ಯುತರಾಯ ಮತ್ತು ಅವನ ರಾಣಿ ವರದಾದೇವಿ ಮತ್ತು ಅವರ ಮಗನಾದ ವೆಂಕಟಾದ್ರಿಯು ತಿರುಪತಿಗೆ ಬಂದು, ಅಚ್ಯುತರಾಯನು ಅಲ್ಲಿಯ ದೇವರಿಗೆ ಬೆಲೆಬಾಳುವ ಹಲವು ಆಭರಣಗಳನ್ನು ಅರ್ಪಿಸುತ್ತಾನೆ. ನೂರಾರು ವಜ್ರ, ಮುತ್ತು, ಪಚ್ಚೆ, ರತ್ನಗಳನ್ನು ಕೂಡಿಸಿದ ಕವಚ, ಕುಲಾಯಿ, ತಲೆಮಣಿ, ಕೈಬಳೆಗಳು, ಹಾರಗಳು ಮೊದಲಾದವನ್ನೆಲ್ಲಾ ಅರ್ಪಿಸಿದ್ದನು".[೩೮೮]

ರಾಜಮನೆತನಕ್ಕೆ ಸಾಳ್ವ ಈರಕೆಂಪಯ್ಯದೇವ ಮಹಾರಾಜನ ಮಗನಾದ ಸಾಳ್ವ ಮಲ್ಲಯ್ಯ ಮಹಾರಾಜನು ಹಸ್ತಮಾತ್ರ ಮತ್ತು ಕರ್ಣಮಾತ್ರಗಳನ್ನು ಹಾಗೂ ರತ್ನಕಂಬಳಿ, ಪಟ್ಟುಚ್ಚಲೈ(ರೇಷ್ಮೆ ವಸ್ತ್ರ)ಯನ್ನು ತಿರುಮಲೆ ತಿರುಪತಿ ದೇವರಿಗೆ ಅರ್ಪಿಸಿದನು.[೩೮೯]

ದೇವಾಲಯಗಳಲ್ಲಿ ಕೂಡಿಟ್ಟ ಆಸ್ತಿ ಎಂದರೆ ಒಡವೆ ಅಥವಾ ಆಭರಣಗಳೇ ಆಗಿದ್ದವು ಹಾಗೂ ದೇವಾಲಯಗಳಿಗೆ ಆಭರಣಗಳಿಂದ ಬಹುದೊಡ್ಡ ಆದಾಯವು ಹರಿದು ಬರುತ್ತಿತ್ತು ಎಂಬ ಅಂಶಕ್ಕೆ ಈ ಮೇಲಿನ ಶಾಸನಗಳು ಪುಷ್ಟಿಯನ್ನು ನೀಡುತ್ತವೆ. ಶೈವ ದೇವಾಲಯ ಗಳಿಗಿಂತ ವೈಷ್ಣವ ದೇವಾಲಯಗಳಿಗೆ ಹೆಚ್ಚಿನ ವಸ್ತ್ರಾಭರಣಗಳ ದಾನಗಳನ್ನು ನೀಡಿರುವುದು ಕಂಡುಬರುತ್ತದೆ. ಅಲ್ಲದೆ ವಿಠಲದೇವಾಲಯದ ಶಾಸನದಲ್ಲಿ ತಿಳಿಸುವಂತೆ ದೇವರ ಆಭರಣಗಳ ರಕ್ಷಣೆಯ ನಿರ್ವಹಣೆಗೆ ಭಂಡಾರಿಯನ್ನು ನೇಮಿಸಿದ್ದರು ಎಂಬುದು ತಿಳಿದುಬರುತ್ತದೆ. ಈ ಎಲ್ಲ ದಾನಗಳ ವಿವರಗಳಿಂದ ವಿಜಯನಗರ ರಾಜರ ಧಾರ್ಮಿಕ ಒಲವು ಶೈವದಿಂದ ವೈಷ್ಣವದತ್ತ ಹೆಚ್ಚಾಗಿ ಹರಿದಿರುವುದು ಗಮನಾರ್ಹ ಸಂಗತಿ.

ಶಾಸನಗಳಲ್ಲಿ ಉಲ್ಲೇಖವಾಗಿರುವ ವಸ್ತ್ರ ಮತ್ತು ಆಭರಣಗಳನ್ನು ಸೂಕ್ಷ್ಮವಾಗಿ ಗಮನಿಸಿದಾಗ ಶಿವನಿಗೆ ನೀಡಿರುವ ವಸ್ತ್ರಗಳಲ್ಲಿ ಅಂಗವಸ್ತ್ರಕ್ಕೆ ನವರತ್ನದಿಂದ ಕೂಡಿದ ಚಿನ್ನದ ಕಮಲ, ನಾಗಾಭರಣವನ್ನು ಹಾಗೂ ಇತರ ಪೂಜಾ ಪರಿಕರಗಳನ್ನು ದಾನವಾಗಿ ನೀಡಿರುವುದು ತಿಳಿದುಬರುತ್ತದೆ. ಆದರೆ ವಿಷ್ಣುವಿಗೆ ನೀಡಿರುವ ವಸ್ತ್ರ ಮತ್ತು ಆಭರಣ ದಾನಗಳಲ್ಲಿ ಚಿನ್ನ ಮತ್ತು ರತ್ನಗಳಿಂದ ಕೂಡಿದ ಪಟ್ಟ (ರೇಶಿಮೆಯ ವಸ್ತ್ರ), ಮುತ್ತಿನ ಒಡವೆಗಳು, ನವರತ್ನ ಖಚಿತವಾದ ನಾನಾ ಆಭರಣಗಳು, ನವರತ್ನ ಖಚಿತವಾದ ಕಿರೀಟ, ಪದಕ ಮತ್ತು ಮೂರಳೆ ಮುತ್ತಿನ ಸರ, ಮುತ್ತಿನ ಮತ್ತು ಮಾಣಿಕ್ಯದ ಕಂಠಮಾಲೆ, ತಿರುವಾಭರಣ ಸ್ವರೂಪದ ಉಡಿದಾರ, ನವರತ್ನ

ಖಚಿತವಾದ ಪ್ರಭಾವಳಿ, ಮುತ್ತುರತ್ನಗಳಿಂದ ಕೂಡಿದ ತ್ರಿಸರ, ಕಂಠಮಾಲೆ, ನವರತ್ನ ಖಚಿತವಾದ ಪೀತಾಂಬರ ಚಾಮರಗಳು, ಮುತ್ತು ರತ್ನಗಳಿಂದ ಕೂಡಿದ ಕುಲಾಯಿ, ತಿರುಮುಕ್ಕುಕೆಂಪಿನ ವಡ್ಯಾಣ, ಬಂಗಾರದ ನೂಪುರಗಳು, ನವರತ್ನ ಖಚಿತ ಸಿಂಹಮುಖ ಪ್ರಭಾವಳಿ, ಸೀತಾಂಬ್ರ, ಪಟ್ಟೆ ಹಚ್ಚಡ, ಪಟ್ಟೆ ಸೀರೆ, ಮಂಜಿಡಿಕೆ ಸೀರೆ, ತಿರುನಾಮಗಳು, ಕರ್ಣಪತ್ರ, ಕರ್ಣಕುಂಡಲಗಳು, ಕವಚ, ತಲೆಮಣಿ, ಕೈಬಳೆಗಳು, ಹಾರಗಳು ಅಲ್ಲದೇ ತುಲಾಪುರಷ ದಾನ, ರತ್ನಾಧೇನುದಾನ, ಗೋಸಹಸ್ರದಾನ ಮುಂತಾದಗಳ ದಾನ ನೀಡಿರುವುದನ್ನು ಗಮನಿಸಿದಾಗ ವಿಷ್ಣುವು ವಸ್ತ್ರ ಮತ್ತು ಆಭರಣ ಪ್ರಿಯನು ಎಂಬುದು ಅರ್ಥವಾಗುತ್ತದೆ. ರಾಜರು ಅಥವಾ ರಾಜಪರಿವಾರದವರು ದೇವರಿಗೆ ದಾನಗಳನ್ನು ನೀಡುವಾಗ ತಾವು ಧರಿಸುತ್ತಿದ್ದ ವಸ್ತ್ರ ಮತ್ತು ಆಭರಣಗಳ ಮಾದರಿಯಂತಹವು ನೀಡಿರುವ ಸಾಧ್ಯತೆಯಿದೆ. ಅಲ್ಲದೆ ಅವುಗಳ ತಯಾರಿಕೆಯಲ್ಲಿ ಬಳಸುತ್ತಿದ್ದ ನವರತ್ನಗಳ ಸಂಖ್ಯೆ, ಕುಸುರಿ ಕೆಲಸದ ಕುರಿತು ಶಾಸನಗಳು ತಿಳಿಸುತ್ತವೆ. ಹಾಗಾಗಿ ಈ ಆಭರಣಗಳ ರಕ್ಷಣೆಯನ್ನು ರಾಜರು ಮಾಡಬೇಕಾದ ಜವಾಬ್ದಾರಿಯಿದ್ದರಿಂದ, ಅವುಗಳ ರಕ್ಷಣೆಗೆ ಭಂಡಾರಿಯನ್ನು ನೇಮಿಸಿದ್ದ ಸಂಗತಿಯು ವಿಠಲ ದೇವಾಲಯದ ಶಾಸನಗಳಿಂದ ತಿಳಿದುಬರುತ್ತದೆ.

ಗಣಪತಿ

ಗಣಪತಿಯ ಕುರಿತು ಋಗ್ವೇದದಲ್ಲಿ ಎರಡು ಬಾರಿ ಪ್ರಸ್ತಾಪ ಬರುತ್ತದೆ.[೩೯೦] ಗಣಪತಿಯನ್ನು 'ಹಸ್ತಿವಕ್ತ್ರ'ನೆಂದೂ (ದಂಡಿಯ ದಶಕುಮಾರಚರಿತೆ), 'ವಕ್ರತುಂಡ'ನೆಂದು (ನಾರಯಣೋಪನಿಷತ್), 'ಏಕದಂಷ್ಟ್ರ'ನೆಂದು (ಬಾಣನ ಹರ್ಷಚರಿತೆ), 'ಲಂಬೋದರ', 'ಸ್ಥೂಲದೇಹನೆಂದು'(ವರಾಹಮಿಹಿರನ ಬೃಹತ್ಸಂಹಿತೆ), 'ಗಜರೂಪಧರ'ನೆಂದು(ವರದತಾಪನಿಯೋಪನಿಷತ್) ಗ್ರಂಥಗಳಲ್ಲಿ ವರ್ಣನೆಯನ್ನು ಮಾಡುತ್ತವೆ.[೩೯೧]

ಗಣಪತಿಯನ್ನು 'ಮೂಷಿಕವಾಹನ' ನೆಂದು ಬಣ್ಣಿಸುತ್ತಾರೆ. ಗಣಪತ್ಯಪನಿಷತ್ತಿನಲ್ಲಿರುವ ಒಂದು ಕಥೆಯ ಪ್ರಕಾರ, "ವಾಮದೇವ ಋಷಿಯ ಶಾಪದಿಂದ ಕ್ರೌಂಚನೆಂಬ ಗಂಧರ್ವ ಇಲಿಯಾಗಿ ಮಾರ್ಪಟ್ಟು ಹಾವಳಿಮಾಡತೊಡಗಿದನಂತೆ. ಪರಾಶರ ಮುನಿಯ ಅಣತಿಯಂತೆ ಗಜಾನನು ಅವನನ್ನು ನಿಗ್ರಹಿಸಿ ಇಲಿಯನ್ನು ತನ್ನ ವಾಹನವನ್ನಾಗಿ ಇರಿಸಿಕೊಂಡ"[೩೯೨] ಎಂಬುದಾಗಿ ತಿಳಿಸುತ್ತದೆ.

ದೇವಿಪುರಾಣದಲ್ಲಿ ಬರುವ ಒಂದು ಕಥೆಯಲ್ಲಿ, "ವಿಘ್ನನೆಂಬ ರಾಕ್ಷಸನನ್ನು ಕೊಲ್ಲಲು ಗಣಪತಿ ಹೊರಟಾಗ ಶಿವ ಅವನಿಗೆ ತನ್ನ ಅರ್ಧಚಂದ್ರನನ್ನು, ಬ್ರಹ್ಮ ತನ್ನ ಬಳಿಯ ನಡುಪಟ್ಟಿಯನ್ನು, ಸೂರ್ಯ ತನ್ನ ಮಣಿಯನ್ನು, ವರುಣ ತನ್ನ ಪಾಶ, ವಿಷ್ಣುವು ತನ್ನ ಶಂಖ ಮತ್ತು ಗದೆಗಳನ್ನು, ಇಂದ್ರನು ತನ್ನ ವಜ್ರಾಯುಧವನ್ನು, ಯಮನು ತನ್ನ ದಂಡವನ್ನು ಕೊಟ್ಟರಂತೆ". ಗಣಪತಿಯ ಮೂರ್ತಿಶಿಲ್ಪದಲ್ಲಿರುವ ಆಯುಧ-ಆಭರಣಗಳನ್ನು ವಿವರಿಸುವ ಕಥೆಯಿದು. ಆದರೆ ಎಲ್ಲಾ ವೈದಿಕ ದೇವತೆಗಳ ಸಮಾವೇಶ ಗಣಪತಿಯಲ್ಲಾಗಿದೆ ಎಂದು ತಿಳಿದುಬರುತ್ತದೆ.[೩೯೩] ಶಾಸ್ತ್ರಗಳಲ್ಲಿ ಗಣಪತಿಗೆ ಕೆಂಪು ಬಣ್ಣದ ವಸ್ತ್ರವನ್ನು ತೊಡಿಸಬೇಕೆಂದು ಸೂಚಿಸುತ್ತದೆ.

ವಿಜಯನಗರ ಕಾಲದ ಸ್ಮಾರಕಗಳಲ್ಲಿ ಗಣಪತಿಯ ಮೂರ್ತಿಯ ಶಿಲ್ಪಗಳು ಹಲವಾರು

ಲಭ್ಯವಿವೆ. ವಿಠಲದೇವಾಲಯದ ಹಿಂದಿನ ಮಂಟಪದಲ್ಲಿರುವ ಸ್ತಂಭದ ಮೇಲಿನ ಗಣೇಶ ಶಿಲ್ಪದಲ್ಲಿ ಗಣೇಶ ಕರಂಡಮಕುಟ, ನಾಗಯಜ್ಞೋಪವೀತ, ಒಂದೆಳೆಯ ಮುಂಗೈಕಡಗಗಳು ಹಾಗೂ ಉದರಬಂಧ ಮಾತ್ರ ಕಂಡುಬರುತ್ತದೆ.

ಅದೇ ದೇವಾಲಯದ ಮತ್ತೊಂದು ಗಣೇಶ ಶಿಲ್ಪದಲ್ಲಿ ಚತುರ್ಭುಜಧಾರಿಯಾದ ಗಣೇಶನು ಕರಂಡಮಕುಟ, ಒಂದೆಳೆಯ ಮುಂಗೈ ಕಡಗ, ಮೂರೆಳೆಯ ಯಜ್ಞೋಪವೀತ ಉದರಬಂಧ, ಕಾಲ್ಗಡಗ ಹಾಗೂ ಪಾದಸರ ಧರಿಸಿದ್ದಾನೆ. ಪಾದಗಳವರೆಗೆ ಧೋತ್ರವನ್ನು ಧರಿಸಿದ್ದು, ಕಟಿಬಂಧ ಕಂಡುಬರುತ್ತದೆ.

ಹೇಮಕೂಟದ ಬೆಟ್ಟದಲ್ಲಿರುವ ಕಡಳೆಕಾಳು ಗಣೇಶ ಶಿಲ್ಪದಲ್ಲಿ, ಗಣೇಶ ಮುತ್ತಿನ ಕಾಲ್ಕಡಗ, ನೂಪುರ ಹಾಗೂ ಕೈಯಲ್ಲಿರುವ ಎಲ್ಲ ಬೆರಳುಗಳಿಗೆ ಉಂಗುರ ಧರಿಸಿರುವುದು ಕಂಡುಬರುತ್ತದೆ. ಹಂಪಿಯ ಸಾಸಿವೆ ಕಾಳು ಗಣೇಶ ಮೂರ್ತಿಯಲ್ಲಿ ಕಂಠೀಹಾರ, ಕಟಿಬಂಧ, ಮೂರೆಳೆಯ ಯಜ್ಞೋಪವೀತ, ಛನ್ನವೀರ ಹಾಗೂ ನಾಗಉದರಬಂಧ, ದಪ್ಪವಾದ ಕಾಲ್ಕಡಗ ಹಾಗೂ ನೂಪುರ ಧರಿಸಿರುವುದು ಕಂಡುಬರುತ್ತದೆ. ಹಂಪಿಯ ಉತ್ಖನನದಲ್ಲಿ ದೊರೆತ ಗಣೇಶ ವಿಗ್ರಹದಲ್ಲಿ ಯಜ್ಞೋಪವೀತ ಮತ್ತು ನಾಗಉದರಬಂಧ[೩೪] ಧರಿಸಿರುವುದು ಕಂಡುಬರುತ್ತದೆ.

ಹಜಾರರಾಮಚಂದ್ರ ದೇವಾಲಯದ ಸ್ತಂಭದ ಮೇಲಿರುವ ಈ ಗಣೇಶ ಶಿಲ್ಪದಲ್ಲಿ (ಚಿತ್ರ-೬೮), ಕರಂಡಮಕುಟ, ಬಾಹುಪುರ, ಬಾಹುಬಂಧ, ಮುಂಗೈಗೆ ಎರಡೆಳೆಯ ಕಡಗಗಳು, ಕಂಠಮಾಲೆ ದಪ್ಪ ಕಾಲಂದಿಗೆ ಧರಿಸಿದ್ದಾನೆ. ಅಲ್ಲದೆ ನಾಗಯಜ್ಞೋಪವೀತ, ಪದಕವಿರುವ ಉದರಬಂಧ ಧರಿಸಿರುವುದು ಕಂಡುಬರುತ್ತದೆ.

ತಿಮ್ಮಲಾಪುರದ ಶಿವದೇವಾಲಯದಲ್ಲಿರುವ ಗಣೇಶ ಶಿಲ್ಪದಲ್ಲಿ, ಗಣೇಶ, ಮೂಷಿಕ ವಾಹನನಾಗಿದ್ದಾನೆ. ಈ ಶಿಲ್ಪದಲ್ಲಿ ಇಲಿಗೆ ಮೂರಳೆಯ ಸರ, ಬೆನ್ನಿನ ಮೇಲೆ ಹೊದಿಕೆ (ಝೂಲ) ತೊಡಿಸಿದ್ದಾರೆ. ಗಣೇಶನ ಆಭರಣಗಳಲ್ಲಿ ವಿಶೇಷತೆಯಿಲ್ಲ.

ಒಟ್ಟಾರೆ ಗಣೇಶನ ವಸ್ತ್ರ ಮತ್ತು ಆಭರಣದ ವಿಶೇಷತೆಯೆಂದರೆ ನಾಗಉದರಬಂಧ ಮತ್ತು ನಾಗಯಜ್ಞೋಪವೀತ ಧರಿಸಿ, ಕಟಿಯಿಂದ ಪಾದಗಳವರೆಗೆ ಧೋತ್ರ ಮತ್ತು ಉತ್ತರೀಯ ಧರಿಸಿರುವುದು ಕಂಡುಬರುತ್ತದೆ. ಶಿವನನ್ನು ಬಿಟ್ಟರೆ ನಾಗಯಜ್ಞೋಪವೀತ ಮತ್ತು ನಾಗಉದರಬಂಧ ಧರಿಸಿರುವುದು ಗಣೇಶ ಮಾತ್ರ ಎಂಬುದು ಸ್ಪಷ್ಟ.

ಸುಬ್ರಹ್ಮಣ್ಯ

ಶಿವನ ಪರಿವಾರದಲ್ಲಿ ಅವನ ಮಗನೆಂದು ಹೆಸರಾದ ಸುಬ್ರಹ್ಮಣ್ಯನಿಗೆ ವಿಶೇಷವಾದ ಸ್ಥಾನವಿದೆ. ಬೃಹತ್ಸಂಹಿತೆಯಲ್ಲಿ ಇವನನ್ನೂ 'ಬರ್ಹಿಕೇತು' ಎಂದರೆ ನವಿಲಿನ ಧ್ವಜವುಳ್ಳವನು ಎಂದು ವರ್ಣಿಸಿದೆ.[೩೫] ಸುಬ್ರಹ್ಮಣ್ಯನನ್ನು ತರುಣನಂತೆ ಚಿತ್ರಿಸಬೇಕೆಂದು ಶಾಸ್ತ್ರಗಳು ತಿಳಿಸುತ್ತವೆ. ನವಿಲು ಸುಬ್ರಹ್ಮಣ್ಯನ ವಾಹನ ವಾಗಿದೆ. ನವಿಲನ್ನೇರಿ ಕುಳಿತಂತೆ, ನವಿಲು ಬಳಿ ನಿಂತಂತೆ ಈ ದೇವತೆಯನ್ನು ಶಿಲ್ಪಗಳಲ್ಲಿ ಚಿತ್ರಿಸಿರುತ್ತಾರೆ. ಹಾಗಾಗಿ ಸುಬ್ರಹ್ಮಣ್ಯನನ್ನು 'ಶಿಖಿವಾಹನ' ಎಂದೂ ಕರೆಯುತ್ತಾರೆ.

ಸುಬ್ರಹ್ಮಣ್ಯನಿಗೆ ತೊಡಿಸುವ ವಸ್ತ್ರ ಕೆಂಪು ಬಣ್ಣದ್ದಿರಬೇಕೆಂದೂ, ಅವನ ಪುಷ್ಪಗಳೂ ಕೆಂಪು ಬಣ್ಣದವಾಗಿರಬೇಕೆಂದು ತಿಳಿದುಬರುತ್ತದೆ.[೩೯೬]

ವಿಜಯನಗರ ಕಾಲದಲ್ಲಿ ಸುಬ್ರಹ್ಮಣ್ಯನ ಹಲವಾರು ಶಿಲ್ಪಗಳು ದೊರೆಯುತ್ತವೆ. ಹಂಪಿಯ ಹಜಾರರಾಮ ದೇವಾಲಯದ ಮಹಾಮಂಟಪದ ಸ್ತಂಭ ಶಿಲ್ಪದಲ್ಲಿ (ಚಿತ್ರ-೬೯) ಸುಬ್ರಹ್ಮಣ್ಯ ಶಿಖಿವಾಹನನಾಗಿದ್ದಾನೆ. ನವಿಲು ತನ್ನ ಬಾಯಿಂದ ಸರ್ಪವನ್ನು ಹಿಡಿದಿದೆ. ಈ ಶಿಲ್ಪದಲ್ಲಿ ಸುಬ್ರಹ್ಮಣ್ಯ ಕರಂಡಮಕುಟ, ವೃತ್ತಕುಂಡಲ (ರಿಂಗ್‌ಮಾದರಿ), ಯಜ್ಞೋಪವೀತ, ಛನ್ನವೀರ, ಸಣ್ಣ ಕುಂಡಲದಂತಿರುವ ಪದಕಸರ ಎರಡೆಳೆಯ ಉದರಬಂಧ, ತೋಳ್ಬಂಧಿ ಮತ್ತು ಮುಂಗೈ ಕಡಗ, ಕಾಲ್ಕಡಗ ಹಾಗೂ ಪಾದಸರವನ್ನು ಧರಿಸಿದ್ದಾನೆ. ಧೋತ್ರವನ್ನು ಅರ್ಧೋರುಕದಲ್ಲಿ ಧರಿಸಿದ್ದಾನೆ.

ಈ ಶಿಲ್ಪದಲ್ಲಿ ನವಿಲಿಗೆ ಸಹ ಅಲಂಕರಣೆ ಮಾಡಲಾಗಿದೆ. ನವಿಲಿಗೆ ಮೂರೆಳೆಯ ಸರ ಹಾಗೂ ಮುತ್ತುಗಳಿಂದ ಕೂಡಿಸಿದ ಅಂಚುಗಳುಳ್ಳ ಝೂಲ ಅಥವಾ ರತ್ನಗಂಬಳಿಯನ್ನು ಅದರ ಬೆನ್ನ ಮೇಲೆ ಹೊದಿಸಿರುವುದು ಕಂಡುಬರುತ್ತದೆ. ಅದೇ ದೇವಾಲಯದ ಮತ್ತೊಂದು ಶಿಲ್ಪದಲ್ಲಿ ಮಯೂರವಾಹನನಾದ ಸುಬ್ರಹ್ಮಣ್ಯನು ವೈಜಯಂತಿಮಾಲೆ ಧರಿಸಿದ್ದಾನೆ.

ಹನುಮಂತ

ಸಾಮಾನ್ಯವಾಗಿ ಶೈವ, ವೈಷ್ಣವ ಮತ್ತು ಶ್ಯಾಕ್ತ ಎಲ್ಲಾ ಪಂಥಗಳಲ್ಲಿ ಪೂಜೆಗೆ ಒಳಪಡುವ ದೇವರು ಹನುಮಂತ. ತಮಿಳು ಕವಿ ಕಂಬನ್‌ನು ತಮಿಳು ರಾಮಾಯಣದಲ್ಲಿ ಹನುಮಂತನನ್ನು ವಾಯು ಮತ್ತು ರುದ್ರರಿಬ್ಬರ ಅಂಶ ಎಂಬುದಾಗಿ ಹೇಳಿದ್ದಾನೆ. ಹಾಗಾಗಿ ಹಿಂದೂ ದೇವತೆಗಳ ಸಾಲಿನಲ್ಲಿ ಸ್ವತಂತ್ರವಾಗಿ ಬೆಳೆದಿರುವ ದೇವರಾಗಿದ್ದಾನೆ. ಸುಗ್ರೀವನಿಗೆ ಸಚಿವನಾಗಿ, ರಾಮನಿಗೆ ಭಂಟನಾಗಿದ್ದವನು ಹನುಮಂತ. ವಾಯುಪುತ್ರನೆಂದು ಪ್ರಸಿದ್ಧಿ ಪಡೆದ ಈತನ ಗುಡಿಗಳು ಮಧ್ವ ಸಂಪ್ರದಾಯದ ಪ್ರಭಾವದಿಂದ ಕನ್ನಡನಾಡಿನಲ್ಲಿ ಹರಡಿದವು ಎನ್ನಬಹುದು. ಅದರಲ್ಲಿಯೂ ಮಧ್ವಾಚಾರ್ಯರ ಪರಂಪರೆಯಲ್ಲಿ ಬಂದ ವ್ಯಾಸತೀರ್ಥರು ಹೋದಲ್ಲೆಲ್ಲ ಹನುಮಂತನ ಮೂರ್ತಿಗಳನ್ನು ಪ್ರತಿಷ್ಠಾಪನೆ ಮಾಡುತ್ತಾ ಬಂದಿದ್ದಾರೆ ಎಂಬುದಾಗಿ ತಿಳಿಯುತ್ತದೆ.[೩೯೭]

ವಿಜಯನಗರ ಕಾಲದಲ್ಲಿ ಹನುಮಂತನು ಮೂರ್ತಿರೂಪದಲ್ಲಿ ಹೆಚ್ಚಾಗಿ ರಚನೆ ಯಾದಂತೆ ಕಂಡುಬರುತ್ತದೆ. ಹನುಮಂತನ ಶಿಲ್ಪಗಳಲ್ಲಿ ಹನುಮಂತನನ್ನು ಸದೃಢವಾದ ದೇಹದಿಂದ ಒಡಗೂಡಿಸಿ ಕಿರುಚಲ್ಲಣ ಧರಿಸಿದ, ಮುಖ ಹಾಗೂ ಕಟಿಯ ಕೆಳಭಾಗ, ಎಡಭಾಗಕ್ಕೆ ಮುಖಮಾಡಿ (ಪಾರ್ಶ್ವಮುಖ) ಹಾರುವ ಅಥವಾ ವೇಗವಾಗಿ ಚಲಿಸುತ್ತಿರುವಂತೆ ಮೂಡಿಸಿರುತ್ತಾರೆ. ಒಂದು ಕೈ ತಲೆಯ ಭಾಗದಲ್ಲಿ ಇರಿಸಿ ಸಂಜೀವಿನಿ ಪರ್ವತ ಹೊತ್ತಂತೆ ಅಥವಾ ಹಣ್ಣಿನ ಗೊನೆಯನ್ನು ಹಿಡಿದಂತೆ, ಇನ್ನೊಂದು ಕೈಯನ್ನು ಮೇಲೆತ್ತಿದ್ದು, ಹಸ್ತ ಮೇಲ್ಮುಖವಾಗಿ ಚಾಚಿರುವಂತಿಯಿರುತ್ತದೆ. ಬಾಲವು ಬೆನ್ನ ಮೇಲಿನಿಂದ ಅರೆ ವೃತ್ತಾಕಾರ ವಾಗಿ ಹಾದು ಶೀರೋಭಾಗದ ಮೂಲಕ ಎಡಭುಜದ ಮೇಲೆ ಹಾದು ಎಡತೊಡೆಯ ಹಿಂದಿರುತ್ತದೆ. ಕೆಲವೊಮ್ಮೆ ಬಾಲದ ತುದಿಯಲ್ಲಿ ಗಂಟೆ ಕಟ್ಟಿದಂತೆ ಚಿತ್ರಿಸಿರುತ್ತಾರೆ.

ಹನುಮಂತನ ಈ ರೀತಿಯ ಚಿತ್ರಗಳನ್ನು ವಿಜಯನಗರ ಕಾಲದ ದೇವಾಲಯದ ಸ್ತಂಭಗಳ ಮೇಲೆ ಹಾಗೂ ಹುಟ್ಟುಬಂಡೆಗಳ ಮೇಲೆ ಕಾಣಬಹುದಾಗಿದೆ. ಅದರಂತೆ ಹಂಪಿಯ ವಿಠಲ ದೇವಾಲಯದ ಸ್ತಂಭವೊಂದರ ಮೇಲಿರುವ ಹನುಮಂತನ ಶಿಲ್ಪವು (ಚಿತ್ರ-೭೦) ನೋಡಲು ಸುಂದರವಾಗಿದ್ದು, ವಸ್ತ್ರ ಮತ್ತು ಆಭರಣಗಳನ್ನು ಉತ್ತಮ ರೀತಿಯಲ್ಲಿ ಚಿತ್ರಿಸಲಾಗಿದೆ. ಈ ಶಿಲ್ಪದಲ್ಲಿರುವಂತೆ ಹನುಮಂತನು ಎಡಪಾರ್ಶ್ವಾಭಿಮುಖವಾಗಿ ನಿಂತಿದ್ದು, ಕಿವಿಗೆ ರುದ್ರಾಕ್ಷಿ ಸೇರಿಸಿದ ರತ್ನ ಕುಂಡಲ ಧರಿಸಿದ್ದು, ಕುಂಡಲದ ತುದಿಯನ್ನು ಸುರಳಿಸುತ್ತಿ ಅಲಂಕರಿಸಲಾಗಿದೆ. ಮಣಿಪದ್ಮ ಪದಕವಿರುವ ಮೂರೆಳೆಯ ಕಂಠಿಕೆ ಹಾಗೂ ಮತ್ತೊಂದು ಮೂರಳೆಯ ಕಂಠೀಹಾರದಲ್ಲಿ ಮೂರು ಪದಕಗಳಿದ್ದು, ಅದರಲ್ಲಿ ಪದ್ಮದ ದಳಗಳು ಒಂದಕ್ಕೊಂದು ಅಂಟಿಕೊಂಡಿರುವಂತೆ ಚಿತ್ರಿಸಲಾಗಿದೆ. ಇದರೊಂದಿಗೆ ಮೂರೆಳೆಯ ಮುತ್ತಿನ ಉದರಬಂಧಕ್ಕೂ ಪದಕವಿದೆ. ಯಜ್ಞೋಪವೀತ, ಎಲೆಯಾಕಾರದ ಪದ್ಮಪದಕವಿರುವ ಭುಜವಲಯ, ಸಾದಾ ಮೂರೆಳೆಯ ಬಾಹುಬಂಧಿ ಮತ್ತು ಎರಡೆಳೆಯ ಮುಂಗೈ ಕಡಗಳನ್ನು ಧರಿಸಿದ್ದಾನೆ. ದಪ್ಪ ಕಾಲ್ಗಡಗ, ಸಾದಾ ನೂಪುರ (ಪಾದ ವಲಯ) ಗಳನ್ನು ಧರಿಸಿದ್ದಾನೆ.

ವಸ್ತ್ರಗಳಲ್ಲಿ ತೊಡೆ ಚಲ್ಲಣವನ್ನು ಧರಿಸಿದ್ದು, ಚಲ್ಲಣಗಳು ಅಂಚುಗಳಿಂದ ಕೂಡಿವೆ. ಚಲ್ಲಣದ ಮೇಲೆ ಉತ್ತರೀಯವನ್ನು ಬಂಧಿಸಿದ್ದು, ಉತ್ತರೀಯದ ತುದಿಯನ್ನು ನಿತಂಬಗಳ ಮಧ್ಯದಲ್ಲಿ ಇಳಿಬಿದ್ದಿವೆ. ಚಲ್ಲಣದ ಮೇಲೆ ಮುತ್ತು ರತ್ನಗಳಿಂದ ಅಲಂಕರಿಸಿದ ಮೇಖಲೆ ಯನ್ನು ಧರಿಸಿದ್ದು, ಸಣ್ಣ ಕತ್ತಿ (ಕಠಾರಿ)ಯನ್ನು ಬಲಕಟಿಭಾಗದಲ್ಲಿರುವುದು ಕಂಡುಬರುತ್ತದೆ. ಇದೇ ರೀತಿಯ ಶಿಲ್ಪಗಳನ್ನು ಕಮಲಾಪುರದ ವಸ್ತುಸಂಗ್ರಹಾಲಯ ಹಾಗೂ ಕೋಲಾರ ಜಿಲ್ಲೆಯ ಮುಳಬಾಗಿಲಿನಲ್ಲಿರುವ ಹನುಮಂತನ ಶಿಲ್ಪಗಳಲ್ಲಿ ಕಾಣಬಹುದಾಗಿದೆ.

ಹಂಪಿಯ ಹಜಾರರಾಮ ದೇವಾಲಯದ ಸ್ತಂಭ ಶಿಲ್ಪವೊಂದರ ಮೇಲೆ ರಾಮಲಕ್ಷಣ ಮತ್ತು ಆಂಜನೇಯರ ಮೂರ್ತಿಗಳನ್ನು ಕಾಣಬಹುದು. ಈ ಶಿಲ್ಪದಲ್ಲಿ ಆಂಜನೇಯನು ತುರುಬನ್ನು ಕಟ್ಟಿದ್ದು, ಸಣ್ಣ ರತ್ನ ಕುಂಡಲಗಳು, ಮೂರೆಳೆಯ ಕಂಠಿಕೆ, ಸಾದಾ ಮೂರೆಳೆಯ ಬಾಹುಬಂಧಿ ಮತ್ತು ಮುಂಗೈ ಕಡಗಗಳನ್ನು ಹಾಗೂ ಕಾಲ್ಗಡವನ್ನು ಧರಿಸಿದ್ದಾನೆ. ಧೋತ್ರವನ್ನು ಅರ್ಧೋರುಕದಲ್ಲಿ ಧರಿಸಿ ಉತ್ತರೀಯವನ್ನು ಕಟಿಭಾಗದಲ್ಲಿ ಕಟ್ಟಿದ್ದಾನೆ. ಬಾಲವು ತಲೆಯ ಮೇಲಿನ ಭಾಗದಲ್ಲಿದೆ. ಬಾಲಕ್ಕೆ ಮಧ್ಯೆ ಮಧ್ಯೆ ಹಾಗೂ ಬಾಲದ ತುದಿಗೂ ಸಹ ದಾರವನ್ನು ಕಟ್ಟಿದಂತಿದೆ (ರಿಬ್ಬನ್ ರೀತಿಯಲ್ಲಿ). ರಾಮನಿಂದ ಮುದ್ರೆಯುಂಗುರವನ್ನು (ಅದನ್ನು ಸೀತೆಗೆ ತೋರಿಸಲು) ಪಡೆಯುತ್ತಿರುವ ದೃಶ್ಯವಿದೆ. ಸ್ವತಂತ್ರಮೂರ್ತಿಗಳಲ್ಲಿ ಬಾಲವು ಪ್ರಭಾವಳಿಯಂತೆ ಬಂದು ಸುತ್ತುವರೆದಿದ್ದರೆ, ಈ ಶಿಲ್ಪದಲ್ಲಿ ಸ್ವಾಮಿನಿಷ್ಠೆಯ ಹಿನ್ನೆಲೆಯಲ್ಲಿ ಬಾಲವನ್ನು ತಲೆಯ ಮೇಲೆ ಬಂದು ಮುದುರಿಕೊಂಡಿರುವಂತೆ ವಿಭಿನ್ನತೆಯಲ್ಲಿ ತೋರಿಸ ಲಾಗಿದೆ. ಒಟ್ಟಾರೆ ಹನುಮಂತನ ಶಿಲ್ಪಗಳಲ್ಲಿನ ಆಭರಣದ ವಿಶೇಷತೆಯೆಂದರೆ ರುದ್ರಾಕ್ಷಿಯಿಂದ ಕೂಡಿದ ರತ್ನದಿಂದಾದ ಕರ್ಣಕುಂಡಲವಾಗಿದೆ.

೩.೬. ಪ್ರಾಣಿಗಳು

ನಿಸರ್ಗದ ಮಡಿಲಿನಲ್ಲಿ ಪ್ರಾಣಿಗಳ ಮಧ್ಯೆ ಬದುಕಿದ್ದ ಆದಿಮಾನವ ತನ್ನ ಸುತ್ತಲಿನ ಪ್ರಾಣಿಗಳ ಸ್ವಭಾವವನ್ನು ಅರಿತು, ಕೆಲ ಪ್ರಾಣಿಗಳನ್ನು ಸಾಕ ತೊಡಗಿದ. ಸೌಂದರ್ಯ ಪ್ರಿಯನಾದ ಮಾನವ ತಾನು ಆಭರಣಗಳನ್ನು ಧರಿಸಿ ಆನಂದಿಸಿದ. ಸ್ತ್ರೀಯರಿಗೆ ತೊಡಿಸಿ ಹಿಗ್ಗಿದ. ಅಂತೆಯೇ ತನ್ನ ಅಚ್ಚು ಮೆಚ್ಚಿನ ಪ್ರಾಣಿಗಳಿಗೂ ವಸ್ತ್ರ ಮತ್ತು ಆಭರಣಗಳನ್ನು ತೊಡಿಸಿ ಸಂತೋಷಪಟ್ಟನು. ಹಾಗಾಗಿ ನಂದಿ, ಕುದುರೆ, ಆನೆ ಮುಂತಾದ ಪ್ರಾಣಿಗಳಿಗೆ ವಸ್ತ್ರ ಮತ್ತು ಆಭರಣಗಳನ್ನು ಹಾಕಿರುವುದನ್ನು ಸಾಹಿತ್ಯಾಕರಗಳು ಹಾಗೂ ಶಿಲ್ಪಗಳಿಂದ ತಿಳಿದುಬರುತ್ತದೆ. ಕೌಟಲ್ಯ ಹೇಳಿರುವಂತೆ, "ಪ್ರಾಣಿಗಳ ಕೊರಳಿಗೆ ಗಂಟೆಯನ್ನು ಏಕೆ ಕಟ್ಟುತ್ತಿದ್ದರು ಎಂದರೆ ಕಾಡಿನಲ್ಲಿ ಸಂಚರಿಸುವಾಗ ಅವುಗಳನ್ನು ವಿಷಜಂತುಗಳಿಂದ ರಕ್ಷಿಸಲು, ಆ ಶಬ್ದ ಕೇಳಿ ವಿಷಜಂತುಗಳು ದೂರ ಸರಿಯುತ್ತಿದ್ದವು"[೩೮] ಎಂಬುದಾಗಿ ಹೇಳಿದ್ದಾನೆ.

ಹಾಗಾಗಿ ಆಭರಣಗಳನ್ನು ಪ್ರಾಣಿಗಳಿಗೆ ತೊಡಿಸುವ ಹಿಂದೆ ಸೌಂದರ್ಯಪ್ರಜ್ಞೆ, ಧಾರ್ಮಿಕ ಹಿನ್ನೆಲೆ, ವೈದ್ಯಕೀಯ ಅಂಶ, ರಕ್ಷಣೆ ಮತ್ತು ನಂಬಿಕೆ ಇತ್ಯಾದಿ ಅಂಶಗಳು ಪ್ರಾಣಿಗಳ ಹುಟ್ಟು ಹಾಗೂ ವೃದ್ಧಿಗೆ ಕಾರಣವಾದವು. ಮುಂದೆ ಗೌರವ, ಪ್ರತಿಷ್ಠೆ ಹಾಗೂ ಶ್ರೀಮಂತಿಕೆಯ ದ್ಯೋತಕವಾಗಿಯೂ ವಿಶೇಷ ಸಂದರ್ಭಗಳಲ್ಲಿ ವಸ್ತ್ರ ಮತ್ತು ಆಭರಣಗಳನ್ನು ತೊಡಿಸುತ್ತಾ ಬಂದರು. ದೇವಾಲಯಗಳಲ್ಲಿ ನಡೆಯುವ ಉತ್ಸವ ಮತ್ತು ಅರಮನೆಗಳಲ್ಲಿ ನಡೆಯುತ್ತಿದ್ದ ಕಾರ್ಯಕ್ರಮಗಳಲ್ಲಿ ಸಾಕುಪ್ರಾಣಿಗಳಿಗೆ ತೊಡಿಸುತ್ತಿದ್ದ ವಸ್ತ್ರ ಮತ್ತು ಆಭರಣಗಳು ಅಲಂಕರಣೆ ಮತ್ತು ಶ್ರೀಮಂತಿಕೆ ಪ್ರಧಾನ ಪಾತ್ರವನ್ನು ವಹಿಸುತ್ತಿತ್ತು ಎಂಬುದನ್ನು ತಿಳಿಯಬಹುದಾಗಿದೆ. ವಿಜಯನಗರ ಕಾಲದ ವಸ್ತ್ರ ಮತ್ತು ಆಭರಣಗಳಿಗೆ ಸಂಬಂಧಿಸಿದಂತೆ ವರಾಹ, ನಂದಿ, ಆನೆ, ಕುದುರೆ ಹಾಗೂ ಇತರೆ ಪ್ರಾಣಿ ಮತ್ತು ಪಕ್ಷಿಗಳಿಗೆ ತೊಡಿಸುತ್ತಿದ್ದ ವಸ್ತ್ರ ಮತ್ತು ಆಭರಣಗಳನ್ನು ಅಧ್ಯಯನಕ್ಕೆ ಒಳಪಡಿಸಲಾಗಿದೆ.

೩.೬.೧. ವರಾಹ

ವರಾಹ (ಹಂದಿ) ಒಂದು ಸಾಕು ಪ್ರಾಣಿಯಾಗಿದೆ. ಆದರೆ ಇದಕ್ಕೆ ವಸ್ತ್ರ ಮತ್ತು ಆಭರಣಗಳನ್ನು ತೊಡಿಸುತ್ತಿದ್ದರು ಎಂಬ ಅಂಶ ಯಾವ ಸಾಹಿತ್ಯಾಕರಗಳಲ್ಲಿಯೂ ಕಂಡು ಬರುವುದಿಲ್ಲ. ಆದರೆ ವಿಜಯನಗರ ಶಿಲ್ಪಗಳಲ್ಲಿ ವರಾಹಕ್ಕೆ ವಸ್ತ್ರ ಮತ್ತು ಆಭರಣಗಳನ್ನು ತೊಡಿಸಿರುವುದು ವಿಶೇಷ ಸಂಗತಿಯಾಗಿದೆ. ವಿಜಯನಗರ ಸಾಮ್ರಾಜ್ಯದ ರಾಜ ಲಾಂಛನ 'ವರಾಹ'ವಾಗಿತ್ತು. ಈ ಹಿನ್ನೆಲೆಯಲ್ಲಿ ವರಾಹವನ್ನು ಶಿಲ್ಪಗಳಲ್ಲಿ ಅಲಂಕರಿಸಿರುವ ಸಾಧ್ಯತೆಯನ್ನು ತಳ್ಳಿಹಾಕುವಂತಿಲ್ಲ.

ಹಂಪಿಯ ವಿಜಯವಿಠಲ ದೇವಾಲಯದ ಗರ್ಭಗೃಹದ ಹಿಂದಿರುವ ಮಂಟಪ ವೊಂದರಲ್ಲಿರುವ ಉಬ್ಬು ಶಿಲ್ಪದಲ್ಲಿ ವರಾಹ ಶಿಲ್ಪವಿದ್ದು (ಚಿತ್ರ-೭೧), ಅದರಲ್ಲಿ ವರಾಹದ ಕೊರಳಿಗೆ ಗಗ್ಗರ (ಕಿರುಗೆಜ್ಜೆಗಳಿಂದ ಕೂಡಿದ ಸರ) ಕಾಲಿಗೆ ಕಡಗಗಳನ್ನು ಹಾಗೂ ಬೆನ್ನಿನ ಮೇಲೆ ವಸ್ತ್ರವನ್ನು ಹೊದಿಸಿರುವುದು ಕಂಡುಬಂದಿದೆ.[೩೯]

ಈ ರೀತಿಯ ಅಲಂಕರಣೆಯನ್ನು ನಂದಿ, ಆನೆ ಮುಂತಾದ ಪ್ರಾಣಿಗಳಿಗೆ ಮಾಡುತ್ತಿದ್ದದು

ಸಾಮಾನ್ಯವಾಗಿತ್ತು. ಆದರೆ ವರಾಹಕ್ಕೆ ಮಾಡಿರುವುದು ತುಂಬಾ ಅಪರೂಪ ಹಾಗೂ ವಿಶೇಷವಾಗಿದೆ. ವಾಸ್ತವದಲ್ಲಿ ಈ ರೀತಿಯಾಗಿ ಅಲಂಕರಣೆ ಅಸಾಧ್ಯವಾದರೂ ಶಿಲ್ಪದಲ್ಲಿ ಕಂಡುಬಂದಿರುವ ಅಪರೂಪದ ಅಂಶವಾಗಿದೆ.

೩.೬.೨. ನಂದಿ

ನಂದಿ ಅಥವಾ ಗೋವನ್ನು ಭಾರತದೇಶದಲ್ಲಿ ಪೂಜ್ಯ ಭಾವನೆಯಿಂದ ಕಾಣುವುದು ವಾಡಿಕೆಯಿದೆ. ನಂದಿ ಶಿವನ ವಾಹನವಾಗಿದ್ದು, ಶೈವ ದೇವಾಲಯಗಳಲ್ಲಿ ಶಿವಲಿಂಗಕ್ಕೆ ಅಭಿಮುಖವಾಗಿ ನಂದಿಯನ್ನು ಪ್ರತಿಷ್ಠಾಪಿಸಿರುತ್ತಾರೆ. ಹಾಗಾಗಿ ಅವುಗಳಿಗೆ ಸಹಜವಾಗಿ ಹೆಚ್ಚಿನ ಅಲಂಕರಣೆ ಮಾಡಿರುವುದು ಕಂಡುಬರುತ್ತದೆ. ಈ ಕುರಿತು ವಿದೇಶಿ ಪ್ರವಾಸಿ ಪಾಯೇಸ್ ಹೀಗೆ ವಿವರಿಸುತ್ತಾನೆ, "ಈ ಜನರು ಹಸುಗಳನ್ನು ಪೂಜಿಸುತ್ತಾರೆ. ಕಲ್ಲಿನಲ್ಲಿ ಹಸು ಮತ್ತು ಗೂಳಿಗಳ ವಿಗ್ರಹಗಳನ್ನು ಮಾಡಿಸಿ ದೇವಸ್ಥಾನಗಳಲ್ಲಿ ಇಡುತ್ತಾರೆ".[೮೦೦] ಹೀಗೆ ಪಾಯೇಸ್‌ನು ವಿಜಯನಗರದಲ್ಲಿ ತಾನು ಕಂಡ ವಾಸ್ತವ ಅಂಶಗಳನ್ನು ತನ್ನ ವರದಿಯಲ್ಲಿ ದಾಖಲಿಸಿದ್ದಾನೆ. ಈ ಹೇಳಿಕೆಗೆ ಹಲವಾರು ಶಿಲ್ಪಗಳು ಸಮರ್ಥನೆಯನ್ನು ನೀಡುತ್ತವೆ. ಹಂಪಿಯ ವಿರೂಪಾಕ್ಷ ದೇವಾಲಯದ ಶಿವಲಿಂಗಕ್ಕೆ ಅಭಿಮುಖವಾಗಿರುವ ನಂದಿಯ ಶಿಲ್ಪದಲ್ಲಿ (ಚಿತ್ರ–೭೨) ನಂದಿಯ ಕೊರಳಿಗೆ ಸರಪಣಿ ಸರ, ಕಿರುಗಂಟೆಗಳಿಂದ ಕೂಡಿದ ಮತ್ತೊಂದು ಸರ, ಅದರ ಡುಬ್ಬದ ಮೇಲಿದೆ ಕುಂಭ ಸ್ಥಳದಲ್ಲಿ ಮಗದೊಂದು ಗಂಟೆ ಸರವನ್ನು ಕಟ್ಟಿದ್ದಾರೆ. ಅಲ್ಲದೇ ಕೊಂಬಿನ ಮೇಲೆ ಮುತ್ತಿನಿಂದ ಕೂಡಿದ ತುರಾಯಿಗಳಿರುವ ಸರಗಳು (ಹಾರಗಳು), ತಲೆಯ ಮಧ್ಯಭಾಗದಿಂದ ಹಣೆಯ ಭಾಗದವರೆಗೆ ಆ ಸರಗಳಿಗೆ ಸೇರಿಸಿದ ಮುತ್ತಿನ ಸಣ್ಣ ಮೂರು ಗೊಂಡೆಗಳು ಇಳಿಬಿದಿರುವುದನ್ನು ಕಾಣಬಹುದಾಗಿದೆ. ಇದರೊಂದಿಗೆ ಕಾಲಿಗೆ ಗಗ್ಗರವನ್ನು ತೊಡಿಸಿದ್ದಾರೆ. ಅದೇ ದೇವಾಲಯದ ಮತ್ತೊಂದು ಶಿಲ್ಪದಲ್ಲಿ ಎರಡೆಳೆಯ ಗಗ್ಗರ(ಗೆಜ್ಜೆಸರ), ಸರದ ಮಧ್ಯದಲ್ಲಿ ಗಂಟೆಯನ್ನು ಸೇರಿಸಿ ಕಟ್ಟಿದ್ದಾರೆ. ರತ್ನಕಂಬಳಿಯನ್ನು ಹೊದಿಸಿರುವುದು ಕಂಡುಬರುತ್ತದೆ. ಅದೇ ದೇವಾಲಯದ ದಕ್ಷಿಣ ಭಾಗದಲ್ಲಿರುವ ಗಾರೆಶಿಲ್ಪದಲ್ಲಿ ನಂದಿವಾಹನ ಸಹಿತ ಶಿವನ ಶಿಲ್ಪವಿದೆ. ನಂದಿಯ ಕೊರಳಲ್ಲಿ ಸಾದಾ ಸರಪಣಿ ಸರ, ಕೊಳವೆಯಾಕಾರದ ಮಣಿಯ ಸರ, ಮತ್ತೊಂದು ಗೆಜ್ಜೆ ಸರ(ಕಾಲು ಗಗ್ಗರ) ತೊಡಿಸಿರುವುದು ಕಂಡುಬರುತ್ತದೆ.

ಆಂಧ್ರ ಪ್ರದೇಶದಲ್ಲಿರುವ ಲೇಪಾಕ್ಷಿಯ ವೀರಭದ್ರ ದೇವರಿಗೆ ಅಭಿಮುಖವಾಗಿರುವ ನಂದಿ ಶಿಲ್ಪ (ಚಿತ್ರ–೭೩) ತುಂಬಾ ವಿಶೇಷವಾದ ಅಲಂಕರಣೆಯಿಂದ ಕೂಡಿದೆ. ನಂದಿಯ ಕಿವಿಗಳಿಗೆ ಮುಂಭಾಗದಲ್ಲಿ ಬುಗುಡಿಯಂತಹ ಕರ್ಣಾಭರಣ ತೊಡಿಸಿದ್ದಾರೆ. ನಾಲ್ಕು ಅಂತಸ್ತಿನಲ್ಲಿ ನಾಲ್ಕು ವಿವಿಧ ಸರಗಳನ್ನು ಹಾಕಿದ್ದು, ನಾಲ್ಕು ಸರಗಳಿಗೂ ಸೇರಿಸಿ ಕೊರಳಿನ ಮುಂಭಾಗ ದೊಡ್ಡ ಗಂಟೆಯನ್ನು ಕಟ್ಟಿರುವುದನ್ನು ನೋಡಬಹುದಾಗಿದೆ. ಮೊದಲನೆಯದು ಮುತ್ತಿನ ಸರ, ಎರಡನೆಯದು ಸರಪಣಿಯ ಹಾರ, ಮೂರನೆಯದು ಗೆಜ್ಜೆ ಮತ್ತು ಮುತ್ತು ಸೇರಿಸಿ ಪೋಣಿಸಿದ ಸರ, ನಾಲ್ಕನೆಯದು ಗಂಟೆ ಮುತ್ತು ಸೇರಿಸಿ ಪೋಣಿಸಿದ ಸರ. ಇದರಲ್ಲಿ ಗೆಜ್ಜೆಸರದಲ್ಲಿ ಪ್ರತಿಗೆಜ್ಜೆಯು ವಿಭಿನ್ನವಾದ ಕುಸುರಿ ಕೆಲಸದ ಅಲಂಕರಣೆಯಿಂದ ಕೂಡಿದೆ. ಗೆಜ್ಜೆಯ ಮೇಲೆ ಸಣ್ಣ ಸರಗಳು, ಮುತ್ತುಗಳ

ಹಾರಗಳಂತೆ ಇಳಿಬಿದ್ದಿವೆ. ಇದು ಮೇಖಲೆಯ(ಸೊಂಟಪಟ್ಟಿಯ) ಮೇಲಿನ ಅಲಂಕರಣೆಯ ಮಾದರಿಯಲ್ಲಿದೆ. ಇವುಗಳಲ್ಲಿ ತುಂಬಾ ಸೂಕ್ಷ್ಮ ರೀತಿಯಲ್ಲಿ ಕೆತ್ತನೆಯ ಕೆಲಸ ಮಾಡಿದ್ದು, ಈ ಸರಗಳ ಅಣು ಅಣುವೂ ಸ್ಪಷ್ಟವಾಗಿ ಕಾಣುವಂತೆ ಕೆತ್ತಲಾಗಿದೆ. ಡುಬ್ಬದ ಮೇಲೆ ಮತ್ತೊಂದು ಮುತ್ತು ಮತ್ತು ಗಂಟೆಯನ್ನು ಸೇರಿಸಿರುವ ಸರವನ್ನು ತೊಡಿಸಿದ್ದಾರೆ. ಇದರೊಂದಿಗೆ ಬೆನ್ನಿನ ಮೇಲೆ ರತ್ನ ಗಂಬಳಿ ಅಥವಾ ಝೂಲವನ್ನು ಹೊದೆಸಿದ್ದು, ಕಾಲಿಗೆ ಸಾದಾ ಗಗ್ಗರಗಳನ್ನು ತೊಡಿಸಿದ್ದಾರೆ. ಈ ಶಿಲ್ಪವು ನಂದಿಯ ಮೇಲಿನ ಆಭರಣಗಳ ಅಧ್ಯಯನಕ್ಕೆ ಅತ್ಯುತ್ತಮ ಶಿಲ್ಪವೆಂದರೆ ತಪ್ಪಲ್ಲ. ಲೇಪಾಕ್ಷಿಯ ವರ್ಣಚಿತ್ರಗಳಲ್ಲಿನ ಗಿರಿಜಾಕಲ್ಯಾಣ ವರ್ಣಚಿತ್ರದಲ್ಲಿ ನಂದಿಯನ್ನು ಸಣ್ಣ ಪ್ರಮಾಣದಲ್ಲಿ ಚಿತ್ರಿಸಿದ್ದಾರೆ. ನಂದಿಗೆ ರತ್ನದ ಝೂಲ, ಗೆಜ್ಜೆಸರ, ಕಾಲ ಗಗ್ಗರಗಳನ್ನು ತೊಡಿಸಿರುವುದು ಕಂಡುಬರುತ್ತದೆ.

ಅಥನೇಷಿಯಸ್ ನಿಕಿಟಿನ್ ವಿಜಯನಗರದ ಎತ್ತು (ಹೋರಿ)ಗಳ ಕುರಿತು ಹಾಗೂ ಅವುಗಳ ಅಲಂಕರಣೆ ಕುರಿತು ತಾನು ಕಂಡ ವಾಸ್ತವ ಅಂಶಗಳ ಹಿನ್ನೆಲೆಯಲ್ಲಿ ಈ ಮುಂದಿನಂತೆ ವಿವರಿಸಿದ್ದಾನೆ. ಅವನು ಹೇಳುವಂತೆ, "ಇಲ್ಲಿಗೆ ಯಾತ್ರಿಕರು ಎತ್ತುಗಳ ಮೇಲೆ ಸವಾರಿ ಮಾಡಿಕೊಂಡು ಬರುತ್ತಾರೆ. ಈ ಎತ್ತುಗಳ ಕೊಂಬುಗಳಿಗೆ ಹಿತ್ತಾಳೆ ಕೊಂಬು ಕಳಸಗಳನ್ನು ಹಾಕಿರುತ್ತಾರೆ. ಈ ಎತ್ತುಗಳ ಕಾಲಿಗೆ ಲಾಳ ಕಟ್ಟಿರುತ್ತಾರೆ. ಕೊರಳಿಗೆ ಮುನ್ನೂರು ಗಂಟೆಗಳ ಸರ ಹಾಕುತ್ತಾರೆ".[೪೦೧] ನಿಕಿಟಿನ್ ಈ ವಿವರಣೆಗೆ ಬಹುಶಃ ಜಾತ್ರೆಗೆ ಬರುತ್ತಿರುವ ಎತ್ತುಗಳ ಅಲಂಕರಣೆಯ ಕುರಿತಾಗಿರುವಂತಿದೆ. ಈ ವಿವರಣೆಗೆ ಉತ್ತಮ ಉದಾಹರಣೆ ಯಾಗಿ ಆಂಧ್ರದ ಶ್ರೀಶೈಲ ಮಲ್ಲಿಕಾರ್ಜುನ ದೇವಾಲಯದ ಪ್ರಾಕಾರದಲ್ಲಿರುವ ಪಶುಪಾಲಕ ಶಿಲ್ಪವೊಂದು ಸಮರ್ಥನೆಯನ್ನು ಒದಗಿಸುತ್ತದೆ. ಈ ಕುರಿತಂತೆ ಪಶುಪಾಲಕ ಶಿಲ್ಪಗಳ ಅಧ್ಯಯನದಲ್ಲಿ ವಿವರಿಸಲಾಗಿದೆ.

ಹಂಪಿಯ ಉತ್ಖನನದಲ್ಲಿ ಎರಡು ನಂದಿ ಶಿಲ್ಪಗಳು ದೊರೆತ್ತಿದ್ದು, ಅದರಲ್ಲಿ ಒಂದು ನಂದಿಯ ಕೊರಳಿಗೆ ಗಂಟೆಯನ್ನು[೪೦೨] ಕಟ್ಟಿರುವುದು ಕಂಡುಬಂದಿದೆ.

೩.೬.೩. ಕುದುರೆ

ಕುದುರೆಗಳಿಗೆ ಅಶ್ವ, ವಾಜಿ, ಘೋಟ, ತುರುಗ, ತೇಜಿ ಮುಂತಾದ ಸಮಾನಾರ್ಥಕ ಪದಗಳಿವೆ. ಅಶ್ವಗಳನ್ನು ದೇವಾಲಯ, ಅರಮನೆ ಹಾಗೂ ಸಾರಿಗೆ ಸಾಧನಗಳಾಗಿ ಮತ್ತು ಯುದ್ಧದಲ್ಲಿ ಒಂದು ದಳವಾಗಿ (ಅಶ್ವದಳ) ಬಳಸಲ್ಪಡುತ್ತದೆ. ಹೀಗೆ ಬಹುಪಯೋಗಿ ಕುದುರೆಯನ್ನು ಬಳಸಲು ಕಾರಣ ಇವು ವೇಗವಾಗಿ ಸಂಚರಿಸುತ್ತವೆಯಷ್ಟೇ ಅಲ್ಲದೇ, ಕಾರ್ಯಸಾಧನಕ್ಕೆ ಉತ್ತಮ ವಾಹನವಾಗಿವೆ.

ಯುದ್ಧಕ್ಕೆ ಬೇಕಾದ ಉತ್ತಮ ಜಾತಿಯ ಕುದುರೆಗಳನ್ನು ವಿಜಯನಗರದ ಅರಸರು ಪರ್ಶಿಯ ಮತ್ತು ಪೋರ್ಚುಗಲ್‌ಗಳಿಂದ ಆಮದು ಮಾಡಿಕೊಳ್ಳುತ್ತಿದ್ದರು ಎಂಬ ಅಂಶವನ್ನು ವ್ಯಾಪಾರಕ್ಕೆ ಸಂಬಂಧಿಸಿದ ಉಪಶೀರ್ಷಿಕೆಯ ಅಧ್ಯಯನದಲ್ಲಿ ವಿವರಿಸಲಾಗಿದೆ. ದೇವಾಲಯಗಳಲ್ಲಿ ನಡೆಯುವ ಸೇವೆಗಳಲ್ಲಿ ಕಮ್ಮಲೆ ಉತ್ಸವಗಳಲ್ಲಿ ಆನೆ ಕುದುರೆಗಳನ್ನು ಬಳಸುತ್ತಿದ್ದರು. ಇಂದಿಗೂ ಪ್ರಮುಖ ದೇವಾಲಯದ ಅವರಣದಲ್ಲಿ ಬಿಳಿ ಕುದುರೆಯನ್ನು ಪೋಷಿಸುತ್ತಿರುವುದನ್ನು ಕಾಣಬಹುದು.

ಕ್ಷೇತ್ರಕಾರ್ಯ ಪ್ರಯುಕ್ತ ತಮಿಳುನಾಡಿನ ಶ್ರೀರಂಗಂನ ಶ್ರೀರಂಗನಾಥ ದೇವಾಲಯಕ್ಕೆ ಭೇಟಿ ನೀಡಿದ್ದೆನು. ಅಲ್ಲಿನ ದೇವಾಲಯದಲ್ಲಿ ಬಿಳಿ ಕುದುರೆಯನ್ನು ದೇವಾಲಯದ ಪೂಜಾ ಕಾರ್ಯದ ಸಂದರ್ಭದಲ್ಲಿ ಕಟ್ಟಿದ್ದರು ಮತ್ತು ಆ ಕುದುರೆಗೂ ಪೂಜೆ ಮಾಡಿದ್ದನ್ನು ಕಂಡಿದ್ದೇನೆ. ಇದರಿಂದ ತಿಳಿಯುವುದು ದೇವಾಲಯದ ಪೂಜಾ ಕಾರ್ಯಗಳಲ್ಲಿ ಕುದುರೆಗೂ ಪೂಜ್ಯ ಸ್ಥಾನವನ್ನು ಕಲ್ಪಿಸಿರುವುದು.

ಪಾಯೇಸ್ ವಿಜಯನಗರದಲ್ಲಿ ನಿತ್ಯವೂ ಹಬ್ಬವನ್ನು ಆಚರಿಸುವ ರೀತಿಯನ್ನು ಕುರಿತು ಈ ರೀತಿ ವರ್ಣಿಸಿದ್ದಾನೆ, "ಪ್ರಾತಃಕಾಲ ರಾಜನು ಜಯಮಹಲಿನಲ್ಲಿರುವ ದೇವಸ್ಥಾನಕ್ಕೆ ಹೋಗಿ ಮೊದಲು ದೇವರ ಪೂಜೆ ಮಾಡುತ್ತಾನೆ. ಅನಂತರ ಹೊರಗಡೆಗೆ ಬಂದು ನೆರೆದ ತನ್ನ ದಳವಾಯಿ, ಭಕ್ಷಿ ಮುಂತಾದ ಪರಿವಾರದವರ ಸಮ್ಮುಖದಲ್ಲಿ ಅಲಂಕರಿಸಿದ ಹನ್ನೊಂದು ಕುದುರೆಗಳನ್ನು ನಾಲ್ಕು ಆನೆಗಳನ್ನು ಬಿಳಿಯ ಗುಲಾಬಿ ಹೂಗಳಿಂದ ಪೂಜಿಸುತ್ತಾನೆ. ರಾಜನು ಆಮೇಲೆ ತನ್ನ ಆಸನವನ್ನು ಅಲಂಕರಿಸುತ್ತಾನೆ..."[೪೦೩]

ಮಹಾನವಮಿ ಉತ್ಸವದ ಸಂದರ್ಭದಲ್ಲಿ ಅಲಂಕೃತಗೊಂಡ ಅಶ್ವವನ್ನು ಕುರಿತು ಕಂಠೀರವ ನರಸರಾಜ ವಿಜಯದ ಪದ್ಯವೊಂದರಲ್ಲಿ ಹೀಗೆ ವರ್ಣಿಸಿದೆ. ಅದರಂತೆ:

ಕೊರಳ ತುಂಬಿದ ಮುತ್ತಿನಸರ ನೊಸಲೊಳು
ಮೆರೆವ ಮಾಣಿಕ್ಯಜೂಳೆಯದ
ಬಿರುದಿನ ಪೊಂಬಾವಡೆಗಳ ಸಿಂಗರ
ಮೆರೆದ ತೇಜಿಗಳೈದಿದುವು[೪೦೪] ಎಂದು ವಿವರಿಸಿದೆ.

ಡೋಮಿಂಗೋ ಪಾಯೇಸ್‌ನು ಕೃಷ್ಣದೇವರಾಯನ ಕಾಲದಲ್ಲಿ ವಿಜಯನಗರಕ್ಕೆ ಭೇಟಿ ನೀಡಿದ್ದು. ಅವನು ಅಲ್ಲಿ ಮಹಾನವಮಿ ಉತ್ಸವದಲ್ಲಿ ಪಾಲ್ಗೊಂಡಿದ್ದನು. ಆ ಉತ್ಸವ ಸಂದರ್ಭದಲ್ಲಿ ರಾಜನ ಮುಂದೆ ಪಥ ಸಂಚಲನದ ಪ್ರದರ್ಶನ ಏರ್ಪಡುತ್ತದೆ. ಅದರಲ್ಲಿ ಪಾಯೇಸ್‌ನು ಕುದುರೆಗಳ ಪಥ ಸಂಚಲನದ ಕುರಿತು ಈ ಮುಂದಿನಂತೆ ವಿವರಿಸಿದ್ದಾನೆ. ಅವನು ಹೇಳುವಂತೆ, "ನೃತ್ಯ, ಕುಸ್ತಿ ಮೊದಲಾದ ಪಥ ಸಂಚಲನದ ಅನಂತರ ಭವ್ಯವಾಗಿ ಅಲಂಕರಿಸಿದ ಕುದುರೆಗಳು ಬರುತ್ತವೆ. ಇವುಗಳನ್ನು ಗುಲಾಬಿ ಹೂಗಳಿಂದಲೂ, ಜರತಾರಿ ವಸ್ತ್ರಗಳಿಂದಲೂ ಸೊಗಸು ಮಾಡಿರುತ್ತಾರೆ. ಈ ಕುದುರೆಗಳ ಮುಂದೆ ಎರಡು ಛತ್ರಿಗಳನ್ನು ಹೊತ್ತಿ ಎಲ್ಲಕ್ಕಿಂತಲೂ ಹೆಚ್ಚು ಸೊಗಸೂ ಮಾಡಿದ ಕುದುರೆ ಬರುತ್ತದೆ. ಇದನ್ನು ಒಬ್ಬ ಅಶ್ವಪಾಲ ಹಿಡಿದುಕೊಂಡಿರುತ್ತಾನೆ. ಇದೇ ಪಟ್ಟದ ಕುದುರೆ. ರಾಜನು ಪಟ್ಟದ ಕುದುರೆಯ ಮೇಲೆ ಪ್ರಮಾಣ ವಚನ ಸ್ವೀಕರಿಸದೆ ಹೋದಾಗ ಪಟ್ಟದ ಆನೆಯ ಮೇಲೆ ಪ್ರಮಾಣ ವಚನ ಸ್ವೀಕರಿಸುವಂತೆ ಮಾಡುತ್ತಾರೆ. ಈ ಕುದುರೆಯ ಮುಂದೆ ಇನ್ನೊಂದು ಕುದುರೆ ಕುಣಿಯುತ್ತಾ ಹೋಗುತ್ತದೆ. ಇಲ್ಲಿರುವ ಕುದುರೆಗಳೆಲ್ಲ ಎರಡು ಸುತ್ತು ಈ ಅಂಗಳದಲ್ಲಿ ಸುತ್ತಿ ರಾಜನಿಗೆ ಅಭಿಮುಖವಾಗಿ ನಿಂತುಕೊಳ್ಳುತ್ತವೆ. ಅರಮನೆಯ ಮುಖ್ಯ ಪುರೋಹಿತನು ಅರಮನೆ ಯೊಳಗಿನಿಂದ ಬಂದು ತೆಂಗಿನಕಾಯಿ, ಹೂವು ಮುಂತಾದವುಗಳಿಂದ ಕುದುರೆಗೆ ಪೂಜೆ ಮಾಡಿ ಹಿಂದಿರುತ್ತಾನೆ".[೪೦೫] ಪಾಯೇಸ್ ಕೊಡುವ ಈ ವಿವರಣೆ ಉತ್ಸವದ ಸಂದರ್ಭದಲ್ಲಿ

ಅಲಂಕೃತಗೊಂಡ ಪಟ್ಟದ ಕುದುರೆಯ ಕುರಿತದ್ದಾಗಿದೆ.

ಆದರೆ ಯುದ್ಧಾಶ್ವಗಳ ಅಲಂಕರಣೆ ಇದಕ್ಕೆ ವಿಭಿನ್ನವಾಗಿದೆ ಯುದ್ಧಕ್ಕೆ ಹೋಗುವಾಗ ಕುದುರೆಗಳಿಗೆ ಅಲಂಕರಣೆಗಿಂತ ರಕ್ಷಣೆಯ ಉದ್ದೇಶದಿಂದಲೇ ಬಹುವಾಗಿ ಸಿಂಗರಿಸುತ್ತಿದ್ದರು. ಇಲ್ಲಿ ಕುದುರೆಯ ರಕ್ಷಣೆ ಅತ್ಯವಶ್ಯವಾಗಿದ್ದು, ಆ ನಿಟ್ಟಿನಲ್ಲಿ ಅಲಂಕರಣೆಗೆ ರಕ್ಷಣಾ ಸಾಧನಗಳನ್ನು ಬಳಸುತ್ತಿದ್ದುದನ್ನು ಅಧ್ಯಯಿಸಲಾಗಿದೆ.

ಗಂಗಾದೇವಿಯ ಮಧುರವಿಜಯಂನಲ್ಲಿ ತನ್ನ ಪತಿ ಕಂಪಣ್ಣನು ಕೈಗೊಂಡ ಮಧುರೆಯ ದಂಡಯಾತ್ರೆಯ ಅವಧಿಯಲ್ಲಿ ಸಿದ್ಧತೆಗೊಂಡಿದ್ದ ಕುದುರೆಯ ಚಿತ್ರಣವನ್ನು ಈ ಮುಂದಿನ ಪದ್ಯದಿಂದ ತಿಳಿಯಬಹುದಾಗಿದೆ. ಅದರಂತೆ,

ಕಚ್ಚಿದ್ದ ಹಾವಂತೆ ಬಾಯಲಿರೆ ಕಡಿವಾಣ
ಚಿತ್ತಾರಗೊಂಡ ಪಕ್ಕರೆ ರೆಕ್ಕೆಯಂತೆ
ದೇಹ ರೂಪದಿ ಕೂಡ ಹೋಲಿಕೆಯ ತೋರಿಸಿತು
ದಿವ್ಯ ತುರಗವು ತಾನು ಗರುಡನಂತೆ[೪೦೬]

ನಂಜುಂಡ ಕವಿಯ ರಾಮನಾಥಚರಿತದಲ್ಲಿ ಯುದ್ಧಾಶ್ವಗಳ ಸಿದ್ದತೆ ಕುರಿತು ಹಲವು ಪದ್ಯಗಳಲ್ಲಿ ವಿವರಣೆಗಳಿವೆ. ಅವುಗಳಂತೆ,

ಚಿನ್ನದ ಲಾಳ, ವಜ್ರದ ಪೆಂಡೆಯ ಪೊಸ
ರನ್ನದ ಪಕ್ಕರೆ ಮೊಗದ
ಕನ್ನಡಿ ಕಂದವಕ್ಕರಿಕೆ ಮೆರೆಯೆ ಚೆಲ್ವ
ಕನ್ನಡಿಸಿದುದಾ ವಾಜಿ[೪೦೭]

ಇನ್ನೊಂದು ಪದ್ಯದಲ್ಲಿನ ಉಲ್ಲೇಖ ಈ ಮುಂದಿನಂತಿದೆ

ಮುತ್ತಿನ ಸರಗಳಿಂ ಕಟ್ಟಿದ ಝುಲ್ಲಿಯ
ಮೊತ್ತದಿಂ ಬೆಳುದಿಂಗಳನು
ಬಿತ್ತಸಿರಿಸಿದ ತುರುಗವನರಿದನು ಕೈ
ಯೆತ್ತಿ ಕೊಂಡಾಡೆ ವಂದಿಗಳು[೪೦೮]

ಹಾಗೆಯೇ ಇನ್ನೊಂದೆಡೆ ಹೀಗೆ ಉಲ್ಲೇಖಿಸಲಾಗಿದೆ.

ಲೋಹವಕ್ಕ ಝುಲ್ಲಿ ಮೊಗರಂಭ ಮೊದಲಾ
ದಾಹವ ಸನ್ನಾಹವೆಸೆಯೆ
ಗುಹುಗದುಕನುಳಿದೇರಿದರಶ್ವಾ
ರೋಹಕರಾ ಸಮಯದಲಿ[೪೦೯]

ಹೀಗೆ ಕುದುರೆಗಳಿಗೆ ಕಣ್ಣು, ಗೊರಸುಗಳನ್ನು ಬಿಟ್ಟು ಉಳಿದ ಅಂಗಾಂಗಳಿಗೆ ಕವಚಗಳನ್ನು ತೊಡಿಸುತ್ತಿದ್ದು ತಿಳಿದುಬರುತ್ತದೆ.

ವಿದೇಶಿ ಪ್ರವಾಸಿಗರ ವರದಿಗಳು ಸಹ ಯುದ್ಧಾಶ್ವಗಳ ಅಲಂಕರಣೆಯನ್ನು ಕುರಿತು

ಉಲ್ಲೇಖಿಸುತ್ತಾವೆ. ಪಾಯೇಸ್‌ನು ವಿವರಿಸಿರುವಂತೆ "ವಿಜಯನಗರದ ಮಹಾನವಮಿ ಉತ್ಸವದ ಸಂದರ್ಭದಲ್ಲಿ ರಾಜನ ಮುಂದೆ ಹಲವು ದಳಗಳ ಪ್ರದರ್ಶನದ ನಂತರ ಅಶ್ವದಳ ಪ್ರದರ್ಶನ ನಡೆಯುತ್ತದೆ". ಆ ಪ್ರದರ್ಶನದಲ್ಲಿ ಯುದ್ಧಾಶ್ವದ ಅಲಂಕರಣೆ ಕುರಿತು ಈ ರೀತಿಯಾಗಿ ವಿವರಿಸಿದ್ದಾನೆ, "ರಾವುತರು ಕುದುರೆಗಳನ್ನೇರಿದ್ದರು. ಕುದುರೆಗಳಿಗೆ ಮೈತುಂಬ ಗವಸು, ಹಣೆಯ ಮೇಲೆ ಬೆಳ್ಳಿಯ ಅಥವಾ ಚಿನ್ನದ ಗಿಲೀಟು ಮಾಡಿದ ಫಲಕಗಳು, ನಾನಾ ಬಣ್ಣದ ಗೊಂಡೆ ಕುಚ್ಚ; ರೇಷ್ಮೆಯ ಕಡಿವಾಣ, ಅವು ಮೆಕ್ಕಾದ ಮಕಮಲ್ಲಿನಿಂದಲೂ, ರೇಷ್ಮೆ ಮತ್ತು ಬನಾತಿನಿಂದಲೂ, ಚೀನಾ ಮತ್ತು ಪರ್ಷಿಯಾ ದೇಶಗಳ ಕಿಂಕಾಪಿನಿಂದಲೂ ಸಜ್ಜುಗೊಳಿಸಲ್ಪಟ್ಟಿದ್ದವು. ಕೆಲವು ಸವಾರರು ವಜ್ರಗಳಿಂದಲೂ ಮುತ್ತುಗಳಿಂದಲೂ ಅಲಂಕರಿಸಿದ ಫಲಕಗಳನ್ನು ಹಾಕಿದ್ದರು. ಕೆಲವು ಕುದುರೆಗಳ ಮುಖಕ್ಕೆ ಸರ್ಪ ಮುಂತಾದ ದೊಡ್ಡ ಪ್ರಾಣಿಗಳ ತಲೆಗಳಿಂದ ಮುಖವಾಡ ತೊಡಿಸಿದ್ದರು. ಈ ಮುಖವಾಡಗಳನ್ನು ಮಾಡಿದ ನೈಪುಣ್ಯತೆಯನ್ನು ಮೀರಿಸುವಂತಿರಲಿಲ್ಲ. ಈ ದೃಶ್ಯವನ್ನು ನೋಡಲು ಎರಡು ಕಣ್ಣು ಸಾಲದು".[೪೧೦] ಇದಕ್ಕೆ ಪೂರಕವಾಗಿ ನ್ಯೂನಿಜ್ "ಕುದುರೆಗಳಿಗೆ ವಸ್ತ್ರಗಳನ್ನು ಹೊದಿಸಿದ್ದರು"[೪೧೧] ಎಂಬುದನ್ನು ದಾಖಲಿಸಿದ್ದಾನೆ.

ಈ ಮೇಲಿನ ಸಾಹಿತ್ಯದ ವಿವರಣೆಗಳಿಗೆ ಶಿಲ್ಪಗಳು ಸಮರ್ಥನೆಯನ್ನು ನೀಡುತ್ತವೆ. ಕುದುರೆಗಳಿಗೆ ರಕ್ಷಕವಚವನ್ನು ತೊಡಿಸಿದ್ದರು ಎಂಬುದನ್ನು ಗಂಗಾದೇವಿಯ ಮಧುರಾ ವಿಜಯಂನಲ್ಲಿ ರಾಮನಾಥಚರಿತದಲ್ಲಿ ಹಾಗೂ ಪಾಯೇಸ್‌ನ ವಿವರಣೆಗಳಲ್ಲಿ ಕಾಣುತ್ತೇವೆ. ಈ ರೀತಿ ರಕ್ಷಾ ಕವಚಗಳನ್ನು ಆಂಧ್ರದ ಶ್ರೀಶೈಲ ಮಲ್ಲಿಕಾರ್ಜುನ ದೇವಾಲಯದ ಪ್ರಾಕಾರದಲ್ಲಿರುವ ಶಿಲ್ಪವೊಂದರಲ್ಲಿ ಯುದ್ಧನಿರತ ಕುದುರೆಗಳ ಚಿತ್ರಣವಿದ್ದು, ಇದರಲ್ಲಿ ಕುದುರೆಯ ಮುಖ ಮತ್ತು ಕಾಲನ್ನು ಬಿಟ್ಟರೆ ಅದರ ದೇಹದ ಉಳಿದ ಭಾಗಕ್ಕೆ ರಕ್ಷಾ ಕವಚವನ್ನು ಕಾಣಬಹುದು.

ಈ ರೀತಿಯ ರಕ್ಷಾ ಕವಚಗಳನ್ನು ಶಿವಮೊಗ್ಗದ ವಸ್ತು ಸಂಗ್ರಹಾಲಯದಲ್ಲಿರುವ ಹುಲಿಕಲ್ಲು ಮತ್ತು ಬಸವನಕಲ್ಲಿನ ವೀರಗಲ್ಲು[೪೧೨] ಶಿಲ್ಪಗಳಲ್ಲಿ ಸ್ಪಷ್ಟವಾಗಿ ಗಮನಿಸಬಹುದಾಗಿದೆ. ಈ ರೀತಿಯ ರಕ್ಷಾ ಕವಚಗಳನ್ನು ಸೇನೆಯ ಎಲ್ಲಾ ಕುದುರೆಗಳಿಗೆ ತೊಡಿಸುತ್ತಿದ್ದುದು ಅಸಾಧ್ಯವೆನ್ನಬಹುದು. ಏಕೆಂದರೆ ನ್ಯೂನಿಜ್ ವಿವರಗಳಲ್ಲಿ, "ರಾಜನು ತನ್ನ ರಕ್ಷಣಾ ದಳದ ಒಳ್ಳೊಳ್ಳೆಯ ಆರು ಸಾವಿರ ಕುದುರೆಗಳನ್ನು ಚುನಾಯಿಸಿದನು"[೪೧೩] ಎಂಬುದಾಗಿ ವಿಜಯನಗರ ಸೇನೆಯಲ್ಲಿನ ಅಶ್ವದಳವನ್ನು ಕುರಿತು ಉಲ್ಲೇಖಿಸುತ್ತಾನೆ. ಇಷ್ಟು ಬೃಹತ್ ಪ್ರಮಾಣದ ಅಶ್ವಗಳಿಗೆ ರಕ್ಷಾ ಕವಚಗಳನ್ನು ಒದಗಿಸುತ್ತಿದ್ದುದು ಅಸಂಭವವಾದರೂ, ಪ್ರಮುಖ ಅಶ್ವಗಳಿಗೆ ಅಂದರೆ ರಾಜ ಮತ್ತು ರಾಜಪರಿವಾರದ, ಸೇನಾ ಮುಖಂಡರು ಏರುತ್ತಿದ್ದ ಯುದ್ಧಾಶ್ವಗಳಿಗೆ ಈ ರೀತಿಯ ರಕ್ಷಾ ಕವಚಗಳನ್ನು ತೊಡಿಸುತ್ತಿದ್ದರಬಹುದೇನೊ ಎಂಬ ಉತ್ತರ ಕಂಡು ಕೊಳ್ಳಲು ಸಾಧ್ಯವಾಗುತ್ತದೆ.

೩.೬.೪. ಆನೆ

ಇತಿಹಾಸ ಆರಂಭ ಕಾಲದಿಂದಲೂ ಆನೆ ಮತ್ತು ಕುದುರೆಗಳು ಸಾಕಾಣಿಕೆಗಳಲ್ಲದೆ, ಯುದ್ಧದ ಸಂದರ್ಭಗಳಲ್ಲೂ ಬಳಕೆಯಾಗುತ್ತಿದ್ದವು. ಗಜ, ಹಸ್ತಿ, ಕರಿ ಮುಂತಾದ ಹೆಸರುಗಳಿಂದ ಪ್ರಚಲಿತವಾದ

ಆನೆಯ ಹಾಗೇ ಅದರ ಗಾತ್ರ, ಬಲ ಹಾಗೂ ಗಾಂಭೀರ್ಯತೆಗಳಿಗೆ ಹೆಸರುವಾಸಿಯಾದ ಮತ್ತೊಂದು ಪ್ರಾಣಿ ಇಲ್ಲ. ಗಜಗಳನ್ನು ದೇವಾಲಯ, ಅರಮನೆ ಹಾಗೂ ಯುದ್ಧದ ದಳಗಳಲ್ಲಿ ಬಳಸುತ್ತಿದ್ದರು. ಆನೆಯನ್ನು ಇಡಲು ಗಜಶಾಲೆಗಳನ್ನು ನಿರ್ಮಿಸಿದ್ದರು.

ರಾಮನಾಥಚರಿತದ ಪದ್ಯವೊಂದರಲ್ಲಿ ಗಜಶಾಲೆಯ ಕುರಿತು ಹೀಗೆ ಉಲ್ಲೇಖಿಸುತ್ತದೆ.

ಗಜಶಾಲೆ ಹಯಶಾಲೆ ಜಯನ ಶಾಲೆಯ ಮುಂದೆ
ಸುಜನರು ನೆರೆದು ಭೀತಿಯೊಳು
ನಿಜದೇವತೆಗಳ ನೆನೆವುತ ಬಾಯ್ಬಿಡುತಿರೆ
ಗುಜುಗುಜಿಸುತ್ತಿರ್ದರಲ್ಲಿ[೪೧೪]

ಅಬ್ದುರ್ ರಜಾಕ್‌ನು ಎರಡನೆ ದೇವರಾಯನ ಕಾಲದಲ್ಲಿ ವಿಜಯನಗರಕ್ಕೆ ಭೇಟಿ ನೀಡಿದ್ದನು. ಅವನು ಆನೆಗಳ ಕುರಿತು, "ದಿವಾನ ಖಾನೆಯ ಎದುರಿಗೆ ಗಜಶಾಲೆಯಿದೆ. ಪ್ರತಿಯೊಂದು ಆನೆಗೆ ಒಂದು ಪ್ರತ್ಯೇಕ ಗಜಶಾಲೆಯಿದೆ. ಪ್ರತಿಯೊಂದು ಆನೆಗೆ ಒಂದು ಪ್ರತ್ಯೇಕ ಅಂಕಣವಿದೆ. ಅದರ ಗೋಡೆಗಳು ಗಟ್ಟಿಯಾಗಿದ್ದು, ಮಾಳಿಗೆಯನ್ನು ಕಟ್ಟಿಗೆಯ ಗಟ್ಟಿ ತುಂಡುಗಳಿಂದ ಮಾಡಲಾಗಿದೆ..."[೪೧೫] ಎಂದು ವಿವರಿಸುತ್ತಾನೆ. ಈ ಗಜಶಾಲೆಯನ್ನೇ ಇಂದು ಆನೆಯಲಾಯ ಎಂದು ಕರೆಯಲಾಗುತ್ತಿದೆ.

"ರಾಜನ ಅಪ್ಪಣೆಯಂತೆ ರಾಜ್ಯದ ನಾನಾ ಕಡೆಗಳಿಂದ ಮಾಂಡಲಿಕರು, ಸರದಾರರು ಮತ್ತು ಮುಖ್ಯಸ್ಥರು ರಾಜಧಾನಿಗೆ ಬರುತ್ತಾರೆ. ಹೀಗೆ ಸೇರಿದ ಆನೆಗಳ ಸಮೂಹ ಅಲ್ಲೋಲಕಲ್ಲೋಲ ವಾದ ಸಮುದ್ರವನ್ನು ಅಥವಾ ಬಿರುಗಾಳಿಗೆ ತುತ್ತಾದ ಮೇಘವನ್ನು ಹೋಲುತ್ತದೆ. ಆನೆಗಳಿಗೆ ಸೊಗಸಾದ ಹೊದಿಕೆಗಳನ್ನು ಹೊದಿಸಿ ಬೆನ್ನಿಗೆ ಅಂಬಾರಿಗಳನ್ನು ಬಿಗದಿರುತ್ತಾರೆ. ಈ ಅಂಬಾರಿಗಳಲ್ಲಿ ದೊಂಬರೂ, ನಾನಾ ಆಟ ಚತುರರು ಕುಳಿತುಕೊಳ್ಳುತ್ತಾರೆ. ಆನೆಯ ಸೊಂಡಿಲು ಮತ್ತು ಕಿವಿಗಳ ಮೇಲೆ ರಸಸಿಂಧೂರ ಮತ್ತು ಇತರ ಬಣ್ಣಗಳನ್ನು ಸೇರಿಸಿ ಅಪೂರ್ವವೂ ಮತ್ತು ಆಶ್ಚರ್ಯವೂ ಆದ ರೀತಿಯಲ್ಲಿ ಅಲಂಕಾರ ಮಾಡುತ್ತಾರೆ".[೪೧೬] ರಜಾಕ್ ಮುಂದುವರೆಸುತ್ತಾ, "ಆನೆಗಳು ರಾಜ ವೈಭವದ ಸಂಕೇತಗಳಾಗಿದ್ದು, ಅವುಗಳಲ್ಲಿ ಪಟ್ಟದಾನೆಗಳು ಪೂಜ್ಯನೀಯವೂ ಆಗಿದ್ದವು. ರಾಜನ ಬಳಿ ಅತ್ಯಂತ ದೊಡ್ಡದಾದ ಬಿಳಿ ಆನೆಯಿದೆ. ಇದನ್ನು ರಾಜನು ಪ್ರತಿದಿನ ಬೆಳಗಿನ ಜಾವ ನೋಡುವ ಪರಿಪಾಠವಿಟ್ಟುಕೊಂಡಿದ್ದನು. ಇದರ ದರ್ಶನವು ತನಗೆ ಒಳ್ಳೆಯದೆಂದು ರಾಜ ಭಾವಿಸುತ್ತಿದ್ದನ್ನು"[೪೧೭] ಎಂದು ರಜಾಕ್ ಹೇಳಿದ್ದಾನೆ.

ಪಾಯೇಸ್‌ನು ಶ್ರೀಕೃಷ್ಣದೇವರಾಯನ ಕಾಲದಲ್ಲಿ ವಿಜಯನಗರಕ್ಕೆ ಭೇಟಿ ನೀಡಿದ್ದನು. ಆತನ ತನ್ನ ವರದಿಯಲ್ಲಿ ದಾಖಲಿಸಿದಂತೆ, "ಮಹಾನವಮಿ ಉತ್ಸವದ ಸಂದರ್ಭದಲ್ಲಿ ರಾಜನ ಮುಂದೆ ವಿವಿಧ ದಳಗಳ ಪ್ರದರ್ಶನದಂತೆ ಗಜದಳವು ಬಂದಿತ್ತು, ಆನೆಗಳಿಗೆ ಮಕಮಲ್ಲು ಮುಂತಾದ ಬೆಲೆಬಾಳುವ ಬಟ್ಟೆಗಳನ್ನು ಹೊದಿಸಿ, ಗಂಟೆಗಳ ಸರಗಳನ್ನು ಕಟ್ಟಿದ್ದರು. ಈ ಗಂಟೆಗಳ ನಾದಕ್ಕೆ ಭೂಮಿ ಪ್ರತಿಧ್ವನಿಗೂಡುತ್ತಿತ್ತು. ಅವುಗಳ ಮುಖದ ಮೇಲೆ ನಾನಾ ತರದ ಚಿತ್ರಗಳನ್ನು ಚಿತ್ರಿಸಿ ಅಲಂಕಾರ ಮಾಡಿದ್ದರು".[೪೧೮]

ಉತ್ಸವ ಸಂದರ್ಭಗಳಲ್ಲಿ ಗಜ ಅಲಂಕರಣೆಯ ಕುರಿತು ಗೋವಿಂದ ವೈದ್ಯನ ಕಂಠೀರವ ನರಸರಾಜ ವಿಜಯದಲ್ಲಿ ಹಲವಾರು ಪದ್ಯಗಳಲ್ಲಿ ಆನೆಗಳಿಗೆ ತೊಡಿಸುತ್ತಿದ್ದ ವಸ್ತ್ರ ಮತ್ತು ಆಭರಣಗಳ ಅಲಂಕರಣೆಯ ಕುರಿತು ಸೊಗಸಾಗಿ ವರ್ಣಿಸಲಾಗಿದೆ. ಅದರಂತೆ,

ಪನ್ನೀರ ಚಳೆಯ ಕತ್ತುರಿಯ ಸಾರಣೆ ಮುತ್ತಿ
ನುನ್ನತ ರಂಗವಲ್ಲಿಗಳ
ಸನ್ನಾಹಗೊಳಿಸಿ ಕುಂಕುಮದ ಕಾರಣೆಗಳ
ಚೆನ್ನಾಗಿ ಮಿಗೆ ರಚಿಸಿದರು[೪೧೯]

ಮತ್ತೊಂದೆಡೆ ಹೀಗೆ ವರ್ಣಿಸಲಾಗಿದೆ.

ಪೊಸ ಮುತ್ತು ವಜ್ರ ವೈಢೂರ್ಯ ಗೋಮೇಧಿಕ
ಮಿಸುಪ ನೀಲ ಕುಚ್ಚಿನಿಂದ
ಜಸವಡೆದುದು ಕರಿರಾಜನ ತಿರುನಾಳಿ
ಗೆಸೆಯುವುತ್ಸವ ಮಂಟಪವು[೪೨೦]

ಇನ್ನೊಂದು ಪದ್ಯದಲ್ಲಿ ಅಶ್ವಗಳ ಬಣ್ಣನೆ ಈ ಮುಂದಿನಂತಿದೆ,

ಕೊರಳ ಹೊರಜಿ ಕುಂಭಸ್ಥಳ ಕೋಹಾಳೆ
ಸರಗಂಟೆ ಪಕ್ಕಗಂಟೆಗಳು
ಬಿರುದಿನ ಪಟ ಪಲ್ಲವ ಸತ್ತಿಗೆ ಮದ
ಕರಿಯ ಮೇಲೊಡನೆ ಮೆರೆದವು[೪೨೧]

ಹೀಗೆ ಆನೆಗಳಿಗೆ ಉತ್ಸವ ಸಂದರ್ಭದಲ್ಲಿ ಅಲಂಕರಣೆ ಮಾಡುತ್ತಿದ್ದರು. ಉತ್ಸವದಲ್ಲಿ ಆನೆಯು ಒಂದು ಕೇಂದ್ರ ಬಿಂದುವಾಗಿತ್ತು. ಈ ಕುರಿತು ವಿಜಯನಗರ ಕಾಲದ ಶಾಸನದಲ್ಲಿ ಉಲ್ಲೇಖವಿದ್ದು, ಅದಕ್ಕಾಗಿ ದಾನದತ್ತಿ ಬಿಟ್ಟಿರುವುದು ಗಮನಾರ್ಹ ಅಂಶ.

ಶ್ರೀಕೃಷ್ಣದೇವರಾಯನು ಕಳಿಂಗದ ದಿಗ್ವಿಜಯದ ನಂತರ ಹಂಪಿಗೆ ಹಿಂದಿರುಗಿ ಅಲ್ಲಿಂದ ತಂದ ಬಾಲಕೃಷ್ಣನ ಮೂರ್ತಿಯನ್ನು ಕ್ರಿ.ಶ.೧೫೧೫ರಲ್ಲಿ ಇಲ್ಲಿ ಪ್ರತಿಷ್ಠಾಪಿಸುತ್ತಾನೆ. ಆ ಸಂದರ್ಭದಲ್ಲಿ ದೇವರಿಗೆ ಹಲವು ಆಭರಣಗಳು, ಗ್ರಾಮಗಳನ್ನು ದಾನ ನೀಡುತ್ತಾನೆ. ಆ ಗ್ರಾಮದಲ್ಲಿ ಅತ್ತಿವಟ್ಟಿ ಗ್ರಾಮವನ್ನು ದಾನ ನೀಡುತ್ತಾನೆ. ಶಾಸನದಲ್ಲಿರುವಂತೆ, "ಶ್ರೀ ಬಾಲಕೃಷ್ಣ ದೇವರ ಪ್ರತಿಷ್ಠಾ ಕಾಲದಲ್ಲಿ ಅಮೃತ ಪಡಿ ಅಂಗರಂಗ ವೈಭವ ಚೈತ್ರಮಾಸದ ರಥೋತ್ಸವ, ನಿತ್ಯನೈಮಿತ್ತಿಕ ದೀಪಾರಾಧನೆಗಳು ಪಂಚಪರ್ವ ಯುಗಾದಿಮನಾದಿ ಅಯನ 'ಗಜಭಾಯ ಪಥಕ' (ಗಜಭಾಯಪಥಕ' ಈ ಪದದ ಅರ್ಥವನ್ನು ಅಡಿ ಟಿಪ್ಪಣಿಯಲ್ಲಿ ನೀಡಲಾಗಿದೆ) ಗ್ರಹಣ ಸಂಕ್ರಾಂತಿ ಮಹೋತ್ಸವ, ಪಕ್ಷೋತ್ಸವ, ನಿತ್ಯೋತ್ಸವ ಮುಂತಾದ ಕಾರ್ಯಗಳಿಗೆ ದಾನ ನೀಡಲಾಗಿದೆ"[೪೨೨] ಎಂದು ಹೇಳುವ ವರ್ಣನೆಯಲ್ಲಿ 'ಗಜಭಾಯಪಥಕ'[೪೨೩] ಎಂಬ ಪದವು ವಿಶೇಷವಾಗಿದ್ದು, ಇಲ್ಲಿಯವರೆಗೂ ಯಾವ ಶಾಸನದಲ್ಲೂ ಈ ಶಬ್ದ ಕಂಡು ಬಂದಿಲ್ಲದಿರುವುದು ಗಮನಿಸಬೇಕಾದ ಸಂಗತಿ.

ಹಬ್ಬ, ಉತ್ಸವಗಳ ಸಂದರ್ಭಗಳಲ್ಲಿ ದೇವರ ಉತ್ಸವ ಮೂರ್ತಿಯನ್ನು ಗಜದ ಬೆನ್ನ

ಮೇಲೆ ಅಂಬಾರಿ ಕಟ್ಟಿ ಕೂರಿಸಿ ಮೆರವಣಿಗೆ ಮಾಡುತ್ತಿದ್ದರು ಎಂಬುದನ್ನು ಸೂಚಿಸುತ್ತದೆ. ಇದೇ ಸಂಪ್ರದಾಯ ಈಗಿನ ದಸರಾ ಉತ್ಸವದಲ್ಲಿ ಮುಂದುವರೆದಿರುವುದನ್ನು ಕಾಣಬಹುದು. ಈ ರೀತಿಯ ಮೆರವಣಿಗೆಯಲ್ಲಿ ಭಾಗವಹಿಸುವ ಆನೆಗಳ ನಿರ್ವಹಣೆಗೆ, ಆನೆಗಳ ಅಲಂಕಾರಿಕ ಪರಿಕರಗಳಿಗೆ ಮತ್ತು ಅವುಗಳ ನಿರ್ವಹಣೆಗೆ ಈ ರೀತಿಯಾಗಿ ದಾನ-ದತ್ತಿ ನೀಡಿರಬೇಕು. ಇದರಿಂದಾಗಿ ವಿಜಯನಗರ ಅರಸರ ಕಾಲದಲ್ಲಿ ದೇವಾಲಯಗಳಲ್ಲಿ ಆನೆಗಳಿಗೆ ಪ್ರಮುಖ ಸ್ಥಾನವಿತ್ತಿದ್ದರೆಂದು ತಿಳಿದು ಬರುವುದಲ್ಲದೇ ಇಂತಹ ಆನೆಗಳ ಬಗ್ಗೆ ವಿಶೇಷ ಗಮನವನ್ನು ವಹಿಸಲಾಗುತ್ತಿತ್ತು ಎಂಬುದನ್ನು ತಿಳಿಯಬಹುದಾಗಿದೆ.

ಇಂದಿಗೂ ಮೈಸೂರಿನ ದಸರಾ ಸಂದರ್ಭದಲ್ಲಿ ಗಜಗಳೇ ಕೇಂದ್ರ ಬಿಂದು ವಾಗಿರುವುದು ವಿಜಯನಗರ ಪರಂಪರೆಯ ಕುರುಹಾಗಿದೆ. ಗಜಶಾಸ್ತ್ರದಲ್ಲಿ 'ಪರಿಸ್ತೋಮ' ಎಂದರೆ ಆನೆಯ ಮೇಲೆ ಹಾಸುವ ಚಿತ್ರಿತ ಕಂಬಳಿ ಎಂದೂ 'ಆಸ್ತರಣ' ಎಂದರೆ ಈ ರೀತಿ ಹಾಕುವ ಚಿತ್ರಿತ ಕಂಬಳಿ ಅಲಂಕಾರ ಅಥವಾ ರಕ್ಷಣೆಗೆ ತೊಡಿಸುವ ಬಟ್ಟೆ ಎಂದು ವ್ಯಾಖ್ಯಾನಿಸಲಾಗಿದೆ.[೪೨೪] ಈ ಮೇಲಿನ ಎಲ್ಲಾ ವಿವರಣೆಗಳು ಉತ್ಸವ ಸಂದರ್ಭದಲ್ಲಿನ ಗಜಗಳ ಅಲಂಕರಣೆ, ನಿರ್ವಹಣೆಗೆ ಸಂಬಂಧಿಸಿವೆ. ಆದರೆ ಯುದ್ಧ ಸಂದರ್ಭದಲ್ಲಿ ಬಳಸುತ್ತಿದ್ದ ಗಜಗಳ ಅಲಂಕರಣೆ ಬಹುತೇಕ ರಕ್ಷಣೆಯೆಂದರೆ ತಪ್ಪಲ್ಲ.

ವಿಜಯನಗರ ಅರಸರ ಸೇನೆಯಲ್ಲಿ ಗಜದಳ ಪ್ರಾಧಾನ್ಯತೆಯನ್ನು ಪಡೆದಿತ್ತು. ಕೌಟಲ್ಯನ ಅರ್ಥಶಾಸ್ತ್ರದಲ್ಲಿ ಕುದುರೆ ಆನೆಗಳನ್ನು ರಾಜ ಮಾತ್ರ ಸವಾರಿ ಮಾಡಬೇಕೆಂದು, ಆನೆಗಳ ಮುಖ್ಯಸ್ಥನನ್ನು ಹಸ್ತ್ಯಾಧ್ಯಕ್ಷ ಎಂದು ಕರೆದಿದ್ದಾನೆ. ಯುದ್ಧ ಸಂದರ್ಭದಲ್ಲಿನ ಆನೆಗಳ ಅಲಂಕರಣೆಯನ್ನು ಕುರಿತು ಕೌಟಿಲ್ಯನು, "ಆಲಾನಸ್ಥಂಭ, ಕುತ್ತಿಗೆಗೆ ಹಾಕುವ ಸರಪಳಿ, ಆನೆಯ ಮೇಲೇರುವುದಕ್ಕೆ ಉಪಯೋಗಿಸುವ ಹಗ್ಗ, ಕಾಲಿಗೆ ಹಾಕುವ ಹಗ್ಗ, ಉತ್ತರಾದಿಗಳು ಬಂಧನಗಳು, ಅಂಕುಶ ದಂಡಯಾತ್ರಾದಿಗಳು, ಉಪಕರಣ, ಗಜಪತಾಕ, ನಕ್ಷತ್ರಮಾಲೆ, ಆಸ್ತರಣ, ವರ್ಣಕಂಬಳಿ ಮೊದಲಾದವುಗಳ ಅಲಂಕಾರಗಳು ಕವಚ, ತೋಮರ, ಬತ್ತಳಿಕೆ, ಯಂತ್ರ ಮೊದಲಾದವುಗಳು ಯುದ್ಧಕಾಲದ ಅಲಂಕಾರ"[೪೨೫] ಎಂಬುದಾಗಿ ಉಲ್ಲೇಖಿಸಿದ್ದಾನೆ.

ವಿಜಯನಗರ ಸಾಮ್ರಾಜ್ಯದ ಸೇನಾ ವ್ಯವಸ್ಥೆಯಲ್ಲಿ ಗಜದಳ ಪ್ರಮುಖವಾಗಿದೆ. ಇಲ್ಲಿ ಯುದ್ಧಕ್ಕೆ ಬೇಕಾದ ಉತ್ತಮ ತಳಿಯ ಗಜಗಳ ಆಭಾವವಿರುತ್ತಿದ್ದರಿಂದ ರಾಜರು ಆನೆಗಳನ್ನು ಶ್ರೀಲಂಕಾದಿಂದ ಆಮದು ಮಾಡಿಕೊಳ್ಳುತ್ತಿದ್ದರು.[೪೨೬] ಗಂಗಾದೇವಿಯ ಮಧುರಾವಿಜಯಂನಲ್ಲಿ ಸೇನೆಯಲ್ಲಿದ್ದ ಆನೆಗಳ ಅಲಂಕರಣೆ ಯನ್ನು ಕುರಿತು ಹೀಗೆ ವರ್ಣಿಸಿದ್ದಾರೆ.

ಮಣಿ ಗಂಟೆಗಳ ಕಟ್ಟಿದಗಲ ಗಂಡಸ್ಥಳದ
ಅಂಚುವರೆಗಿಳಿಯುತಿಹ ಮದಜಲದ ಧಾರೆ
ಯೊಡಗೂಡಿ ನೂರಾರು ಸಂಖ್ಯೆಯಲ್ಲಿ ಆನೆಗಳ
ಥಟ್ಟುಗಳು ಎಡೆವಿಡಿದು ಸಾಲು, ಸಾಲೆ[೪೨೭]

ಈ ಪದ್ಯವು ವಿಜಯನಗರ ಸೈನ್ಯದಲ್ಲಿ ಗಜಸೈನ್ಯದ ಇರುವಿಕೆಯನ್ನು ಹಾಗೂ ಅದನ್ನು

ಯುದ್ಧಕ್ಕೆ ಸಿದ್ದಗೊಳಿಸುವ ಬಗೆಯನ್ನು ತಿಳಿಸುತ್ತದೆ.

ವಿದೇಶಿ ಪ್ರವಾಸಿಗರು ಗಜಗಳನ್ನು ಯುದ್ಧಕ್ಕೆ ಸಿದ್ದಗೊಳಿಸುತ್ತಿದ್ದ ಹಾಗೂ ಅವುಗಳಿಗೆ ತೊಡಿಸುತ್ತಿದ್ದ ವಸ್ತ್ರ ಮತ್ತು ಆಭರಣಗಳನ್ನು ಕುರಿತು ಮಹತ್ವದ ಅಂಶಗಳನ್ನು ದಾಖಲಿಸಿ ದ್ದಾರೆ. ನಿಕೆಟಿನ್ ವಿವರಿಸುವಂತೆ, "ಆನೆಗಳಿಗೆ ಅಲಂಕರಿಸಿದ ಉಕ್ಕಿನ ತಗಡುಗಳನ್ನು ಹೊದಿಸಿ, ಅವುಗಳ ಸೊಂಡಿಲಿಗೂ ಮತ್ತು ಕೋರೆಗಳಿಗೂ ದೊಡ್ಡ ಕೋಲ್ಗತ್ತಿಗಳನ್ನು ಸಿಕ್ಕಿಸುತ್ತಾರೆ. ಬೆನ್ನಿಗೆ ಅಂಬಾರಿಗಳನ್ನು ಬಿಗಿದು ಅದರೊಳಗೆ ಬಂದೂಕುಗಳನ್ನು, ಬಿಲ್ಲುಬಾಣಗಳನ್ನು ಹಿಡಿದು ರಕ್ಷಾ ಕವಚಗಳನ್ನು ಧರಿಸಿದ ಹನ್ನೆರಡು ಜನ ಇರುತ್ತಾರೆ".[೪೨೮] ಪಾಯೇಸ್ ವಿವರಿಸುವಂತೆ, "ಆನೆಗಳಿಗೂ ಮಕಮಲ್ಲು ಮುಂತಾದ ಬೆಲೆಯ ಬಟ್ಟೆಗಳನ್ನು ಹೊದಿಸಿ, ಗಂಟೆಗಳ ಸರಗಳನ್ನು ಕಟ್ಟಿದ್ದರು. ಈ ಗಂಟೆಗಳ ನಾದಕ್ಕೆ ಭೂಮಿ ಪ್ರತಿಧ್ವನಿಗೊಡುತ್ತಿತ್ತು. ಅವುಗಳ ಮುಖದ ಮೇಲೆ ನಾನಾ ತರದ ಚಿತ್ರಗಳನ್ನು ಚಿತ್ರಿಸಿ ಅಲಂಕಾರ ಮಾಡುತ್ತಿದ್ದರು. ಅಂಬಾರಿಯಲ್ಲಿ ಭಲ್ಲೆಭರ್ಜಿಗಳಿಂದ ಸಜ್ಜಿತರಾದ ಯೋಧರು ಧಾಳಿಗಾಗಿ ಹೊರಡು ತ್ತಿದ್ದರು".[೪೨೯]

ನ್ಯೂನಿಜ್ ಕೊಡುವ ವಿವರಣೆ ಈ ಮುಂದಿನಂತಿದೆ, "ಆನೆಗಳಿಗೆ ಕೌದಿಗಳನ್ನು ಹೊದಿಸಿ ಅಂಬಾರಿ ಬಿಗಿದಿದ್ದರು. ಈ ಅಂಬಾರಿಗಳಲ್ಲಿ ನಾಲ್ಕು ಕಡೆಯೂ ನಾಲ್ಕು ಯೋಧರು ಕುಳಿತು ಯುದ್ಧ ಮಾಡಬಹುದಾಗಿತ್ತು. ಆನೆಗಳ ಕೊಂಬುಗಳಿಗೆ ಚುಚ್ಚುಗತ್ತಿಗಳನ್ನು ಸಿಕ್ಕಿಸಿದ್ದರು".[೪೩೦]

ಪ್ರವಾಸಿಗರ ಈ ವರ್ಣನೆಯು, ವೀರಗಲ್ಲುಗಳ ಶಿಲ್ಪದಲ್ಲಿನ ಆನೆಗಳನ್ನು ವಿವರಿಸುವಲ್ಲಿ ನೆರವಾಗುತ್ತದೆ. ಆನೆಯ ಕುಂಭಸ್ಥಳವು ತುಂಬಾ ಮೃದುವಾಗಿದ್ದು, ಶತ್ರುಗಳು ಬಿಟ್ಟ ಬಾಣಗಳು ನಾಟದಂತೆ ಒಂದು ಕವಚವನ್ನು ಹಾಕುತ್ತಿದ್ದರೆಂಬುದು ನೇರ್ಲಿಗೆ ವೀರಗಲ್ಲು ಮತ್ತು ವಿಜಯನಗರದ ಕಮಲಾಪುರದ ವಸ್ತು ಸಂಗ್ರಹಾಲಯದಲ್ಲಿರುವ ವೀರಗಲ್ಲುಗಳನ್ನು ಗಮನಿಸಿದಾಗ ಕಂಡುಬರುತ್ತದೆ.

ಹಾಗೆಯೇ ಹಂಪಿಯ ಮಹಾನವಮಿ ದಿಬ್ಬದ ಶಿಲ್ಪ ಪಟ್ಟಿಕೆಯೊಂದರಲ್ಲಿನ ಆನೆಗಳು ಸಾಲು ಸಾಲಾಗಿ ಹೋಗುತ್ತಿರುವಂತೆ ಕಂಡುಬರುತ್ತವೆ. ಪ್ರತಿಯೊಂದು ಆನೆಗೂ ಗೆಜ್ಜೆಸರ, ಗಂಟೆ ಕಟ್ಟಿದ್ದು, ನಾಲ್ಕು ಕಾಲಿಗೂ ಸಾದಾ ಗಗ್ಗರ, ಹಗ್ಗವನ್ನು ಬೆನ್ನಿನ ಹಿಂಭಾಗ, ಕುಂಭಸ್ಥಳಕ್ಕೆ ಬಿಗಿದಿದ್ದಾರೆ. ಬೆನ್ನಿನ ಮೇಲೆ ವಸ್ತ್ರವನ್ನು(ಝೂಲ) ಹೊದಿಸಿರುವುದು ಕಂಡುಬರುತ್ತದೆ. ಹಾಗಾಗಿ ಯುದ್ಧ ಸಂದರ್ಭದಲ್ಲಿ ಆನೆಗಳಿಗೆ ತೊಡಿಸುತ್ತಿದ್ದ ವಸ್ತ್ರ ಮತ್ತು ಆಭರಣಗಳೇ ರಕ್ಷಣಾ ಕವಚಗಳಾಗಿದ್ದವು. ಆನೆಗಳ ಕೊರಳಿಗೆ ಗೆಜ್ಜೆ ಸರದ ಗಂಟೆಯನ್ನಷ್ಟೇ ಅಲ್ಲದೆ ಅದರ ಕುಂಭಸ್ಥಳಕ್ಕೆ ಗಂಟೆ ಕಟ್ಟಿದ ಹಗ್ಗವನ್ನು ಬಿಗಿದು ಕಟ್ಟುತ್ತಿದ್ದರು(ಚಿತ್ರ-೭೪) ಎಂಬುದನ್ನು ಹಂಪಿಯ ಕೃಷ್ಣ ದೇವಾಲಯದ ಆನೆಯ ಶಿಲ್ಪವೊಂದರಲ್ಲಿ ಗಮನಿಸಬಹುದಾಗಿದೆ. ವಿಜಯನಗರ ಸ್ಮಾರಕಗಳಲ್ಲಿ ಹಲವಾರು ಇಂತಹ ಶಿಲ್ಪಗಳು ಕಂಡುಬರುತ್ತವೆ.

ಪ್ರಾಚೀನ ಕಾಲದಿಂದ ವಿಜಯನಗರ ಹಾಗೂ ನಂತರದ ದಿನಗಳಲ್ಲಿ ಪ್ರಾಣಿಗಳಿಗೆ ಅಲಂಕರಣೆಯನ್ನು ಮಾಡುತ್ತಿದ್ದುದು ಕಂಡುಬರುತ್ತದೆ. ಆನೆ, ಕುದುರೆ, ಹಸು, ನಂದಿ(ಎತ್ತು) ಮುಂತಾದ ಪ್ರಾಣಿಗಳಿಗೆ ಉತ್ಸವ, ಜಾತ್ರೆ, ಮೆರವಣಿಗೆ, ಯುದ್ಧ ಹೀಗೆ ವಿವಿಧ ಸಂದರ್ಭ ಗಳಲ್ಲಿ

ತೊಡಿಸುತ್ತಿದ್ದ ವಸ್ತ್ರ ಮತ್ತು ಆಭರಣಗಳು ವಿಭಿನ್ನವಾಗಿವೆ. ಯುದ್ಧ ಹೊರತುಪಡಿಸಿ ಮೇಲೆ ಉಲ್ಲೇಖಿಸಿದ ಸಂದರ್ಭಗಳಲ್ಲಿ ಅಲಂಕರಣೆ, ಅಂತಸ್ತು ಶ್ರೀಮಂತಿಯೆ ಪ್ರಧಾನ ಪಾತ್ರ ವಹಿಸಿದರೆ ಯುದ್ಧ ಸಂದರ್ಭದಲ್ಲಿ ರಕ್ಷಣಾ ಸಾಧನಗಳು ವಸ್ತ್ರ ಮತ್ತು ಆಭರಣಗಳು ಪ್ರಾಮುಖ್ಯತೆ ವಹಿಸಿರುವುದು ಕಂಡುಬರುತ್ತದೆ.

೩.೬.೫. ಇತರ ಪ್ರಾಣಿಸಂಕುಲ

ನಾಯಿ

ಮಾನವನ ಮೊದಲ ಗೆಳೆಯ ನಾಯಿ. ನಾಯಿ ನಿಯತ್ತಿಗೆ ಹೆಸರುವಾಸಿಯಾದ ಪ್ರಾಣಿ. ಸಾಕು ಪ್ರಾಣಿಯಾದ ಈ ನಾಯಿ ತನ್ನ ಒಡೆಯನೊಂದಿಗೆ ಎಲ್ಲ ಕಡೆ ಹೋಗುತ್ತದೆ. ಈ ರೀತಿಯ ಶಿಲ್ಪ ಹಂಪಿಯ ವಿಠಲ ದೇವಾಲಯದ ಅಭಿಷ್ಠಾನದ ಬೇಟೆಗಾರ ಶಿಲ್ಪದಲ್ಲಿ ಕಂಡುಬರುತ್ತದೆ. ಬೇಟೆಗಾರ ಜಿಂಕೆಯನ್ನು ಬೇಟೆಯಾಡುತ್ತಿದ್ದು, ಜಿಂಕೆ ತಪ್ಪಿಸಿಕೊಳ್ಳಲು ಆಗದಿರುವಂತೆ ನಾಯಿ ಜಿಂಕೆಯ ಹಿಂದೆ ನಿಂತು ತನ್ನ ಬಾಲವನ್ನು ಮೇಲೆತ್ತಿ ಬೊಗಳುತ್ತ ಜಿಂಕೆಯನ್ನು ಬೆದರಿಸುವಂತಿದೆ. ಈ ಶಿಲ್ಪದಲ್ಲಿ (ಚಿತ್ರ–೭೫) ನಾಯಿಯ ಕೊರಳಿಗೆ ಕತ್ತುಪಟ್ಟಿ (ಬೆಲ್ಟ್)ಯನ್ನು ಕಟ್ಟಿರುವುದು ಕಂಡುಬರುತ್ತದೆ.

ಕುರಿ

ಹಂಪಿಯ ವಿಠಲ ದೇವಾಲಯದ ಅಭಿಷ್ಠಾನದಲ್ಲಿ ಕುದುರೆ ಸಾಲಿನೊಂದಿಗೆ ಕುರಿಯೊಂದು ಹೋಗುತ್ತಿರುವ ಶಿಲ್ಪವಿದೆ (ಚಿತ್ರ–೭೬). ಈ ಶಿಲ್ಪದಲ್ಲಿರುವ ಕುರಿಯ ಕೊರಳಿಗೆ ದಾರವನ್ನು ಕಟ್ಟಿದ್ದಾರೆ. ಅದೇ ರೀತಿ ಶ್ರೀಶೈಲ ಮಲ್ಲಿಕಾರ್ಜುನ ದೇವಾಲಯದ ಪ್ರಾಕಾರದ ಶಿಲ್ಪದ ಶಿವಲಿಂಗದ ಬಳಿಯಿರುವ ಕುರಿಯ ಕೊರಳಿಗೆ ಗಂಟೆಯನ್ನು ಸೇರಿಸಿದ ದಾರವನ್ನು ಕಟ್ಟಿರುವುದನ್ನು ಗುರುತಿಸಬಹುದಾಗಿದೆ.

ಒಂಟೆ

ಒಂಟೆಗಳು ವಿಜಯನಗರ ಸೈನ್ಯದ ಒಂದು ವಿಭಾಗವಾಗಿದ್ದವು. ಅವುಗಳ ಕುರಿತು ಸಾಹಿತ್ಯಗಳಲ್ಲಿ ಹಾಗೂ ವಿದೇಶಿಯರ ಬರವಣಿಗೆಗಳಲ್ಲಿ ಹೆಚ್ಚು ವಿವರಗಳು ದೊರೆಯುವುದಿಲ್ಲ. ವಿಜಯನಗರದ ಸ್ಮಾರಕಗಳಲ್ಲಿನ ಭಿತ್ತಿಗಳ ಮೇಲಿನ ಚಿತ್ರಗಳಿಂದ ಒಂಟೆಗಳ ಕುರಿತು ತಿಳಿಯಬಹುದಾಗಿದೆ. ನ್ಯೂನಿಜ್ ಹಾಗೂ ರಾಮರಾಜನ ಬಖೈರಿನಲ್ಲು ತಿಳಿಸುವಂತೆ, ಒಂಟೆಗಳನ್ನು ಯುದ್ಧಗಳಲ್ಲಿ ಸಾಮಾಗ್ರಿಗಳನ್ನು ಹೊರುವ ಸಾಧನಗಳನ್ನಾಗಿ ಉಪಯೋಗಿಸುತ್ತಿದ್ದರೇ ಹೊರತು ಹೋರಾಟಕ್ಕಲ್ಲ. ನಂಜುಂಡ ಕವಿ ರಾಮನಾಥ ಚರಿತದಲ್ಲಿ ತಿಳಿಸಿರುವಂತೆ, ದೆಹಲಿ ಸುಲ್ತಾನನ ಮೇಲೆ ನಡೆದ ಯುದ್ಧದ ಸಂದರ್ಭದಲ್ಲಿ ಸೈನಿಕರು ಪಾಳಯವನ್ನು ವಶಪಡಿಸಿಕೊಂಡಾಗ ಆನೆ ಕುದುರೆಗಳನ್ನು ವಶಪಡಿಸಿಕೊಂಡಿದ್ದರ ಜೊತೆಗೆ 'ಹಿಡಿದರೊಂಟೆಯ ಹಿಡಿದರು ಪಾಳೆಯವನು'[೪೩೧] ಎಂದು ವಿವರಿಸಿದೆ. ಮಹಾನವಮಿ ದಿಬ್ಬದಲ್ಲಿರುವ ಒಂಟೆಯ ಶಿಲ್ಪದಲ್ಲಿ ಒಂಟೆಗೆ ಜೀನನ್ನು ಕಟ್ಟಿದ್ದು, ಅದರ ಡುಬ್ಬದ ಮೇಲೆ ಝೂಲವನ್ನು ಹೊದಿಸಿ ದಾರದಿಂದ ಬಂಧಿಸಿದ್ದಾರೆ.

ಇಲಿ

ಗಣಪತಿಯ ವಾಹನ ಇಲಿಯಾಗಿದೆ. ಹಾಗಾಗಿ ಇಲಿಗೂ ಸಹ ವಸ್ತ್ರ ಮತ್ತು ಆಭರಣಗಳನ್ನು ತೊಡಿಸಿರುವುದು ಶಿಲ್ಪಗಳಿಂದ ತಿಳಿದುಬರುತ್ತದೆ. ತಿಮ್ಮಲಾಪುರದ ಶಿವದೇವಾಲಯದಲ್ಲಿರುವ ಮೂಷಿಕವಾಹನ ಗಣೇಶನ ಶಿಲ್ಪದಲ್ಲಿ ಇಲಿಗೆ ಮೂರೆಳೆಯ ಕೊರಳಾಭರಣ, ಬೆನ್ನಿನ ಮೇಲೆ ಜೂಲ ಅಥವಾ ಹೊದಿಕೆ ತೊಡಿಸಿರುವುದು ಕಂಡುಬರುತ್ತದೆ.

೩.೬.೬. ಪಕ್ಷಿಗಳು

ಪ್ರಾಣಿಗಳಿಗಷ್ಟೇ ಅಲ್ಲದೇ ಪಕ್ಷಿಗಳಿಗೂ ಸಹ ವಸ್ತ್ರ ಮತ್ತು ಆಭರಣಗಳನ್ನು ಧರಿಸುತ್ತಿದ್ದರು ಎಂಬುದನ್ನು ವಿಜಯನಗರ ಕಾಲದ ಶಿಲ್ಪಗಳಲ್ಲಿ ನೋಡಬಹುದು.

ಗಿಣಿ

ಹಂಪಿಯ ವಿಠಲ ದೇವಾಲಯದ ಶುಕಭಾಷಣಿ ಶಿಲ್ಪದಲ್ಲಿ (ಚಿತ್ರ-೭೭) ಗಿಣಿಯ ಬೆನ್ನಿನ ಭಾಗಕ್ಕೆ ಮುತ್ತಿನ ಸರ ಹಾಕಿದ್ದು, ಗಿಣಿಯನ್ನು ಸ್ತ್ರೀಯು ತನ್ನ ಬಲಗೈಯಲ್ಲಿ ಹಿಡಿದಿದ್ದಾಳೆ. ಅದೇ ದೇವಾಲಯದ ಗರುಡ ಮಂಟಪದ ಅಧಿಷ್ಠಾನದಲ್ಲಿ ಗಿಣಿವಾಹನನಾದ ಮನ್ಮಥನ ಶಿಲ್ಪವಿದೆ. ಈ ಶಿಲ್ಪದಲ್ಲಿರುವ ಗಿಣಿಯ ಕೊರಳಿಗೆ ಎರಡೆಳೆಯ ಸರವನ್ನು ತೊಡಿಸಿರುವುದನ್ನು ಕಾಣಬಹುದಾಗಿದೆ.

ನವಿಲು

ನವಿಲು ಸುಬ್ರಹ್ಮಣ್ಯ ದೇವರ ವಾಹನವಾಗಿದೆ. ಹಂಪಿ ರಾಮಚಂದ್ರ ದೇವಾಲಯ ದಲ್ಲಿರುವ ಶಿಖಿವಾಹನ ಸುಬ್ರಹ್ಮಣ್ಯ ಶಿಲ್ಪದಲ್ಲಿನ ನವಿಲಿಗೆ ಮುತ್ತುಗಳಿಂದ ಅಲಂಕರಣೆಗೊಂಡ ಅಂಚುಗಳನ್ನು ಹೊಂದಿರುವ ರತ್ನ ಕಂಬಳಿಯನ್ನು ಹೊದಿಸಲಾಗಿದೆ. ಅಲಂಕಾರ ಪ್ರಿಯನಾದ ಮಾನವ ತಾನಷ್ಟೇ ವಸ್ತ್ರ ಮತ್ತು ಆಭರಣಗಳನ್ನು ಧರಿಸದೇ ತನಗೆ ಪ್ರಿಯವಾದ ಸಾಕು ಪ್ರಾಣಿಗಳಿಗೆ ಅವುಗಳನ್ನು ತೊಡಿಸಿ ಸಂತೋಷಪಡುತ್ತಿದ್ದ ಎಂಬುದನ್ನು ಆಕರಗಳಿಂದ ಸ್ಪಷ್ಟವಾಗುತ್ತವೆ.

ಹಂಪಿಯ ಉತ್ಖನನದಲ್ಲಿ ದೊರೆತ ಆಭರಣಗಳು

ಕ್ರಿ.ಶ. ೧೯೯೧-೨೦೧೦ರವರೆಗೆ ಹಂಪಿಯಲ್ಲಿ ನಡೆಸಿದ ಉತ್ಖನನದಲ್ಲಿ ೯೦೦೦ ಪ್ರಾಚ್ಯ ಅವಶೇಷಗಳು ದೊರೆತಿವೆ.[೪೩] ಅವುಗಳಲ್ಲಿ ಆಭರಣ ಮತ್ತು ಮಣಿಗಳು ದೊರೆತಿದ್ದು, ವಿಜಯನಗರ ಆಭರಣಗಳ ಅಧ್ಯಯನಕ್ಕೆ ಉತ್ಖನನ ವರದಿಯ ಅಂಶಗಳು ನೆರವಾಗಿವೆ.

ಬಳೆಗಳು

ಸ್ತ್ರೀಯರ ಆಭರಗಳಲ್ಲಿ ಬಳೆಗಳು ಪ್ರಮುಖ ಪಾತ್ರವಹಿಸಿವೆ. ಈ ಉತ್ಖನನದಲ್ಲಿ ಸುಮಾರು ೭೦೦ ಗಾಜಿನ ಬಳೆಯ ಚೂರುಗಳು ದೊರೆತಿವೆ. ಆದರೆ ಅವು ಪೂರ್ಣ ಪ್ರಮಾಣದ ಬಳೆಯ ರೂಪದಲ್ಲಿಯಿಲ್ಲ. ದೊರೆತಿರುವ ಬಳೆ ಚೂರುಗಳು ಅರೆವೃತ್ತಾಕಾರ ಮತ್ತು ಸಮತಟ್ಟಾದ ಮಾದರಿಯಲ್ಲಿವೆ. ಕಪ್ಪು, ಚಾಕಲೇಟ್ ಬಣ್ಣ(ಕಂದು), ಹಳದಿ, ಬಿಳಿ ಕಿತ್ತಳೆ, ಬೂದು, ನೀಲಿ ಮತ್ತು ಬಿಳಿ-ಬೂದು ಬಣ್ಣದ್ದಾಗಿವೆ. ಕಪ್ಪು ಬಣ್ಣದ ಬಳೆ ಚೂರುಗಳು ಹೆಚ್ಚಿನ ಪ್ರಮಾಣದಲ್ಲಿ ದೊರೆತಿವೆ. ಬಳೆಯ ಮೇಲೆ ಮಧ್ಯೆ ಮಧ್ಯೆ ಚುಕ್ಕೆ, ಸಾಲುಗೆರೆಗಳ ವಿನ್ಯಾಸ, ಹೂವಿನ ರಚನೆ,

ಜಿಗ್-ಜಾಗ್(ಕ್ರಿಸ್-ಕ್ರಾಸ್), ಹೂದಳ, ಸಣ್ಣಗೆರೆಗಳ ವಿನ್ಯಾಸಗಳನ್ನು ಒಳಗೊಂಡ ವಿವಿಧ ಮಾದರಿಯ ಬಳೆ ಚೂರುಗಳು ದೊರೆತಿವೆ.

ಮಣಿಗಳು

ಉತ್ಖನನದಲ್ಲಿ ೨೩೫ ಮಣಿಗಳು ದೊರೆತಿವೆ. ಕಲ್ಲು, ಮಣ್ಣು(ಟೆರ್ರಕೋಟಾ), ಗಾಜು, ತಾಮ್ರ, ದಂತ ಶಂಖ, ಮರ ಮತ್ತು ಇತರ ಬೆಲೆಬಾಳುವ ಹರಳುಗಳಾದ ರತ್ನ, ಹವಳ ಮತ್ತು ಸ್ಫಟಿಕಗಳನ್ನು ಮಣಿ ತಯಾರಿಸಲು ಬಳಸುತ್ತಿದ್ದರು. ಈ ಮಣಿಗಳು ವಿವಿಧ ಮಾದರಿಗಳಲ್ಲಿವೆ. ಕೊಳವೆ(ಸಿಲಿಂಡ್ರಿಕಲ್), ಕೋನ, ಟ್ಯಾಬ್ಯೂಲರ್, ಸಮತಟ್ಟಾದ, ಷಡ್ಭುಜಾಕೃತಿ, ಗಡ್ಡೆಯಂತೆ, ನಳಿಗೆ ಆಕಾರಗಳಲ್ಲಿವೆ. ಅವು ಕಪ್ಪು, ಬಿಳಿ, ಕೆಂಪು ಬೂದು, ಹಸಿರು, ಬೂದು-ಹಸಿರುವ ಮತ್ತು ಬೂದು-ಕೆಂಪು ಬಣ್ಣಗಳಿವೆ. ದಾರಕ್ಕೆ ಮಣಿಗಳನ್ನು ಸೇರಸಲು ಅನುಕೂಲವಾಗುವಂತೆ ಅವುಗಳ ತುದಿಗಳಲ್ಲಿ ರಂಧ್ರ ಮಾಡಿದ್ದಾರೆ.

ಲೋಹದ ವಸ್ತುಗಳು

ತಾಮ್ರ, ಕಂಚು, ಬೆಳ್ಳಿ, ಬಂಗಾರ ಮತ್ತು ಕಬ್ಬಿಣದ ವಸ್ತುಗಳು ಸಿಕ್ಕಿವೆ. ಅವು ತಾಯಿತ, ಕಾಲ್ಗಡಗ, ಪಾತ್ರೆಗಳು, ನಾಣ್ಯ, ಚೂರಿ, ಬೆರಳ ಉಂಗುರ, ಕಬ್ಬಿಣದ ಮೊಳೆ, ಚಾಕು, ಬೀಗ, ಪೀಕಾಸಿ, ಉಂಗುರಗಳು, ಕುಡಗೋಲು ಇನ್ನು ಮುಂತಾದ ವಸ್ತುಗಳು ದೊರೆತಿವೆ. ಉತ್ಖನನದಲ್ಲಿ ೩೧ ಉಂಗುರಗಳು ದೊರೆತಿವೆ. ಇದರಲ್ಲಿ ತಾಮ್ರ ಮತ್ತು ಕಬ್ಬಿಣದಿಂದ ತಯಾರಿಸಿದ ಉಂಗುರಗಳು ಸಿಕ್ಕಿವೆ. ಉಂಗುರಗಳು ವೃತ್ತಾಕಾರ, ಅರ್ಧಚಂದ್ರಾಕಾರ, ಹಗ್ಗದ ಮಾದರಿಗಳಲ್ಲಿವೆ. ಕೆಲವು ಬಿಳಿಕಲ್ಲುಗಳಿಂದ ಕೂಡಿವೆ. ಕಣಿಕಣಿ ಸದ್ದು ಮಾಡುವ ಗಂಟೆಗಳು ಸಹ ದೊರೆತಿವೆ. ತಾಮ್ರದ ಕಾಲಂದಿಗೆಗಳು ದೊರೆತಿದ್ದು, ಅವು ವೃತ್ತಾಕಾರದ, ಹಗ್ಗದ ಮಾದರಿಯಲ್ಲಿವೆ. ಇವು ಸಣ್ಣದ ಪ್ರಮಾಣದಲ್ಲಿದ್ದು ಮಕ್ಕಳಿಗೆ ತೊಡಿಸುವ ಕಾಲಂದಿತೆ ಯಂತಿವೆ. ಚಿನ್ನದ ಪದಕದ ದೊರೆತಿದ್ದು, ಅದು ವೃತ್ತಾಕಾರದಲ್ಲಿದೆ. ಸಾದಾ ವಿನ್ಯಾಸದಿಂದ ಕೂಡಿದೆ. ಅದರ ಮೇಲ್ಭಾಗದಲ್ಲಿ ದಾರ ಸೇರಿಸಲು ರಂಧ್ರವಿದೆ.

ವಿಜಯನಗರ ಕಾಲದಲ್ಲಿ ಗಾಜು, ಮರ, ಶಂಖ ಮತ್ತು ವಿವಿಧ ಲೋಹದ ಹಾಗೂ ಹಲವು ಬಣ್ಣಗಳನ್ನೊಳಗೊಂಡ ಮಾದರಿ ಮತ್ತು ವಿನ್ಯಾಸದ ಆಭರಣಗಳನ್ನು ತಯಾರಿಸಿ ಧರಿಸುತ್ತಿದ್ದರು ಎಂಬುದಕ್ಕೆ ಉತ್ಖನನದಲ್ಲಿ ಸಿಕ್ಕಿರುವ ಈ ಅವಶೇಷಗಳೇ ಸಾಕ್ಷಿಗಳಾಗಿವೆ. ವಿಜಯನಗರದ ಜನತೆ ಆಭರಣ ಪ್ರಿಯರು ಎಂಬುದಾಗಿ ವಿದೇಶಿ ಪ್ರವಾಸಿ ಅಬ್ದುರ್ ರಜಾಕ್‌ನ ಉದ್ಗಾರಕ್ಕೆ ಇಲ್ಲಿ ದೊರೆತಿರುವ ಪ್ರಾಚ್ಯಾವಶೇಷಗಳು ಇಂಬು ನೀಡುತ್ತವೆ ಎಂದರೆ ತಪ್ಪಲ್ಲ.

ಒಟ್ಟಿನಲ್ಲಿ ಈ ಮೇಲಿನ ಅಧ್ಯಾಯದಿಂದ ವಿಜಯನಗರ ಕಾಲದಲ್ಲಿ ಆಡಳಿತ ವರ್ಗ, ವೃತ್ತಿನಿರತರು, ಸ್ತ್ರೀಯರು, ದಾರ್ಶನಿಕರು, ದೇವತೆಗಳು ಹಾಗೂ ಪ್ರಾಣಿಗಳು ಧರಿಸುತ್ತಿದ್ದ ವಸ್ತ್ರ ಮತ್ತು ಆಭರಣಗಳನ್ನು ತಿಳಿಯಬಹುದಾಗಿದೆ. ಅವು ಕಾಲ, ಸ್ಥಾನ, ವೃತ್ತಿ, ಸ್ಥಳ, ಲಿಂಗ, ಮಾದರಿ ಮತ್ತು ವಿನ್ಯಾಸಗಳಷ್ಟೇ ಅಲ್ಲದೇ ಆರ್ಥಿಕ ಮತ್ತು ಸಾಮಾಜಿಕ ಸ್ಥಾನಗಳಿಗೆ ಅನುಗುಣವಾಗಿ

ಅಳತೆ, ಮಾದರಿ ಮತ್ತು ವಿನ್ಯಾಸ ಮತ್ತು ಗುಣಮಟ್ಟದಲ್ಲಿಯೂ ವಿಭಿನ್ನತೆಯಿತ್ತು ಎಂಬುದು ಕಂಡುಬರುತ್ತದೆ. ಈ ಮೇಲಿನ ಅಂಶಗಳು ಸಾಹಿತ್ಯ, ಶಾಸನ, ಉತ್ಖನನ ಹಾಗೂ ಶಿಲ್ಪಗಳಿಂದ ದೃಢಗೊಳ್ಳುತ್ತವೆ. ವಸ್ತ್ರ ಮತ್ತು ಆಭರಣಗಳು ವಿಜಯನಗರ ಕಾಲದ ಜನಜೀವನದ ವಿವಿಧ ಮಜಲುಗಳನ್ನು ಅರಿಯಲು ಉತ್ತಮ ಸಾಧನಗಳು ಎಂಬುದು ಸ್ಪಷ್ಟ ಸಂಗತಿ.

ಆಕರ ಗ್ರಂಥಗಳು

೧. ರಾಯವಾಚಕಮು, ಪು.ಸಂ.೨೫೬.

೨. ಅಬ್ದುರ್ ರಜಾಕ್, ಪ್ರ.ಕ.ಇಂ., ಸಂ.೨, ಪು.ಸಂ.೧೪೭.

೩. Madhao, P.Patil, Court Life under the Vijayanagara Rulers, P.No.70.

೪. ಅಬ್ದುರ್ ರಜಾಕ್, ಪ್ರ.ಕ.ಇಂ., ಸಂ.೨, ಪು.ಸಂ.೧೪೭.

೫. ಶ್ರೀಕಂಠಯ್ಯ, ಎಸ್., ವಿ.ಕಾ.ಕ.ಸಾ.ಜ.ಚಿತ್ರ, ಪು.ಸಂ.೪೧೦.

೬. ಅದೇ, ಪು.ಸಂ.೪೧೦.

೭. ಪಾಯೇಸ್, ಪ್ರ.ಕ.ಇಂ., ಪು.ಸಂ.೩೩೭.

೮. ನಿರೂಪಮಾ, ಆಮುಕ್ತಮಾಲ್ಯದ, ಪು.ಸಂ.೩೪–೩೫.

೯. ಅದೇ, ಪು.ಸಂ.೪೯.

೧೦. ಅದೇ, ಪು.ಸಂ.೮೪.

೧೧. ಪಾಯೇಸ್, ಪ್ರ.ಕ.ಇಂ., ಪು.ಸಂ.೩೨೮.

೧೨. Mahalingam, T.V, Administration and Social Life under Vijayanagara, P.No.54.

೧೩. ಪಾಯೇಸ್, ಪ್ರ.ಕ.ಇಂ., ಪು.ಸಂ.೩೨೮.

೧೪. ಸರಸ್ವತಿ, ಎನ್, ವಿಜಯನಗರ ಕಾಲದ ಮಹಿಳೆಯರ ಕೊಡುಗೆಗಳು, ಪು.ಸಂ.೧೫೩.

೧೫. ಸೋಮಶೇಖರ್, ಎಸ್.ವೈ., ವಿಜಯನಗರ ಕಾಲದ ಸೈನ್ಯ ಮತ್ತು ಯುದ್ಧನೀತಿ: ಪು.ಸಂ.೧೧೫.

೧೬. ಅದೇ, ಪು.ಸಂ.೧೪೨.

೧೭. ರಾಮಚಂದ್ರ ರಾವ್, ಸಿ.ವಿ(ಸಂ), ರಾಯವಾಚಕಮು, ಪು.ಸಂ.೮೭.

೧೮. ನ್ಯೂನಿಜ್, ಪ್ರವಾಸಿ ಕಂಡ ವಿಜಯನಗರ, ಪು.ಸಂ.೧೮೩.

೧೯. ಮಾಧವ್, ಪಿ.ಪಾಟೀಲ್, ಪೂರ್ವೋಕ್ತ, ಪು.ಸಂ.೭೦.

೨೦. ನ್ಯೂನಿಜ್, ಪ್ರ.ಕ.ಇಂ., ಪು.ಸಂ.೩೮೭.

೨೧. ಅಬ್ದುರ್ ರಜಾಕ್, ಪ್ರ.ಕ.ಇಂ., ಸಂ.೨, ಪು.ಸಂ.೧೫೭.

೨೨. ಸೋಮಶೇಖರ್, ಎಸ್.ವೈ., ಪೂರ್ವೋಕ್ತ, ಪು.ಸಂ.೭೫.

೨೩. ಶ್ರೀಕಂಠಯ್ಯ, ಎಸ್., ವಿ.ಕಾ.ಕ.ಸಾ.ಜ.ಚಿತ್ರ, ಪು.ಸಂ.೭೫.

೨೪. ಯೋಗೇಶ್ವರಪ್ಪ, ಡಿ.ಎನ್., ಕೃಷ್ಣದೇವರಾಯನ ಸಚಿವ ಸಂಪುಟದ ಪ್ರಭಾವಿ ಸಾಳುವ

ತಿಮ್ಮರಸು(ಲೇಖನ), ಇತಿಹಾಸ ದರ್ಶನ, ಪು.ಸಂ.೨೫೪, ಸಂಪುಟ-೨೭, ೨೦೧೨.

೨೫. ಶ್ರೀಕಂಠಯ್ಯ, ಎಸ್., ಪೂರ್ವೋಕ್ತ, ಪು.ಸಂ.೫೯.

೨೬. ರಾಯವಾಚಕಮು, ಪು.ಸಂ.೯೧.

೨೭. ಯೋಗೇಶ್ವರಪ್ಪ, ಡಿ.ಎನ್, ಪೂರ್ವೋಕ್ತ, ಪು.ಸಂ.೨೫೪.

೨೮. ಸೋಮಶೇಖರ್, ಎಸ್.ವೈ., ಪೂರ್ವೋಕ್ತ, ಪು.ಸಂ.೯೫.

೨೯. ಅದೇ, ಪೂರ್ವೋಕ್ತ, ಪು.ಸಂ.೯೬.

೩೦. ರಾಮನಾಥಚರಿತೆ, ಪದ್ಯ - ೬೮, ಪು.ಸಂ.೧೮೩.

೩೧. ಸೋಮಶೇಖರ್, ಎಸ್.ವೈ, ಪೂರ್ವೋಕ್ತ, ಪು.ಸಂ.೯೭.

೩೨. ಅಬ್ದುರ್ ರಜಾಕ್, ಪ್ರ.ಕ.ಇಂ., ಪು.ಸಂ.೧೪೭.

೩೩. ಅದೇ, ಪೂರ್ವೋಕ್ತ.

೩೪. ಪಾಯೇಸ್, ಪ್ರ.ಕ.ಇಂ., ಪು.ಸಂ.೩೨೮.

೩೫. ವೆಂಕಟರಾಮಪ್ಪ, ಕೆ., ಶ್ರೀಕೃಷ್ಣದೇವರಾಯನ ಕಾಲದ ಕರ್ನಾಟಾಂಧ್ರ ಸಾಹಿತ್ಯ ಸಮೀಕ್ಷೆ, ಪು.ಸಂ.೫೩.

೩೬. ಬುಸಾತಿನ-ಸಲಾತೀನ, ಪು.ಸಂ. ೭೬-೭೭.

೩೭. ಚಿದಾನಂದಮೂರ್ತಿ, ಎಂ., ಕನ್ನಡ ಶಾಸನಗಳಲ್ಲಿ ಸಾಂಸ್ಕೃತಿಕ ಅಧ್ಯಯನ: ಪು.ಸಂ.೪೮೮.

೩೮. ವೀರೇಶ್ ಬಡಿಗೇರ, ಶಾಸನಗಲ್ಲಿ ಆಯಗಾರಿಕೆ ಸಂಸ್ಕೃತಿ, ಪು.ಸಂ.೦೫.

೩೯. ವಿರೂಪಾಕ್ಷಿ ಪೂಜಾರಹಳ್ಳಿ, ಕರ್ನಾಟಕದಲ್ಲಿ ತಳವಾರಿಕೆ, ಕ.ವಿ.ವಿ., ಹಂಪಿ, ಪು.ಸಂ.೨೮.

೪೦. ಕೃಷ್ಣದೇವರಾಯನ ಶಾಸನಗಳು, ಪು.ಸಂ. ೬೪-೬೫.

೪೧. ಅದೇ, ಪು.ಸಂ. ೭೭-೭೮.

೪೨. ವಿರೂಪಾಕ್ಷಿ ಪೂಜಾರಹಳ್ಳಿ, ಪೂರ್ವೋಕ್ತ, ಪು.ಸಂ.೪೨.

೪೩. ತಾರಿಹಳ್ಳಿ ಹನುಮಂತಪ್ಪ(ಸಂ), ಕಮಲಾಪುರದ ಬೇಡ ನಾಯಕರ ಸಾಮಾಜಿಕ ಮತ್ತು ಸಾಂಸ್ಕೃತಿಕ ಬದಲಾವಣೆಗಳು, ಕ.ವಿ.ವಿ., ಹಂಪಿ, ಪು.ಸಂ.೦೫-೧೪.

೪೪. ಬೆಟಗೇರಿ ಕೃಷ್ಣಶರ್ಮ, ಕರ್ನಾಟಕ ಜನಜೀವನ, ಪು.ಸಂ.೧೦೪.

೪೫. ಅದೇ, ಪು.ಸಂ.೧೦೩-೦೪.

೪೬. ನಿರುಪಮ(ಅನು), ಶ್ರೀ ಕೃಷ್ಣದೇವರಾಯನ ಆಮುಕ್ತಮೌಲ್ಯದ, ಪು.ಸಂ.೩೯.

೪೭. ಅದೇ, ಪೂರ್ವೋಕ್ತ, ಪು.ಸಂ.೩೯.

೪೮. ಸೋಮಶೇಖರ್, ಎಸ್.ವೈ., ಪೂರ್ವೋಕ್ತ, ಪು.ಸಂ.೩೧.

೪೯. ಬಾರ್ಬೋಸಾ, ಪು.ಸಂ.೨೭೨.

೫೦. ರಾಮನಾಥ ಚರಿತ, ಪದ್ಯ-೧೧-೨೪, ಪು.ಸಂ.೧೯೦.

೫೧. ಶ್ರೀಕಂಠಯ್ಯ, ಎಸ್., ವಿ.ಕಾ.ಕ.ಸಾ.ಜ.ಚಿತ್ರ, ಪು.ಸಂ.೧೦೮.

೫೨. ನಿಕಿಟಿನ್, ಪ್ರಕಂ.ಇಂ., ಪು.ಸಂ.೧೬೨.

೫೩. ಪಾಯೇಸ್, ಪ್ರ.ಕಂ.ಇಂ., ಪು.ಸಂ.೩೫೦.

೫೪. ನ್ಯೂನಿಜ್, ಪ್ರ.ಕಂ.ಇಂ., ಪು.ಸಂ.೩೬೭.

೫೫. ರಾಮನಾಥ ಚರಿತ, ಪದ್ಯ – ೯೮, ಪು.ಸಂ.೧೮.

೫೬. ಅದೇ, ಪದ್ಯ – ೭೮, ಪು.ಸಂ.೩೮೮.

೫೭. ಅದೇ, ಪದ್ಯ – ೧೬, ಪು.ಸಂ.೪೯೭.

೫೮. ಕಂಠೀರವ ನರಸರಾಜ ವಿಜಯ, ಪದ್ಯ – ೩೪, ಪು.ಸಂ.೩೧೩.

೫೯. ಪಾಯೇಸ್, ಪ್ರ.ಕಂ.ಇಂ., ಪು.ಸಂ.೩೫೦.

೬೦. ಬಾರ್ಬೋಸ, ಪ್ರ.ಕಂ.ಇಂ., ಪು.ಸಂ. ೩೬೭.

೬೧. ನ್ಯೂನಿಜ್, ಪ್ರ.ಕ.ಇಂ., ಪು.ಸಂ.೩೮೬.

೬೨. ಅದೇ, ಪು.ಸಂ.೩೮೯.

೬೩. ಬುಸಾತಿನೆ – ಸಲಾತೀನ, ಪು.ಸಂ.೮೭.

೬೪. ಪ್ರೌಢದೇವರಾಯನ ಶಾಸನಗಳು, ಶಾ.ಸಂ.೧೩೨, ಪು.ಸಂ.೨೮೨–೮೩.

೬೫. ಎಪಿಗ್ರಾಫಿಯ ಕರ್ನಾಟಕ, ಸಂಪುಟ–೧೧, ನಿಬಗೂರು ಶಾಸನ, ಶಾ.ಸಂ.೪೧, ಪು.ಸಂ.೨೪೯–೫೦.

೬೬. ಕನ್ನಡ ವಿಶ್ವವಿದ್ಯಾಲಯ ಶಾಸನ ಸಂಪುಟ., ೦೧, ಸಂ.೩, ಪು.ಸಂ.೪೫೬.

೬೭. ಸೋಮಶೇಖರ್, ಎಸ್.ವೈ., ಪೂರ್ವೋಕ್ತ, ಪು.ಸಂ.೫೩.

೬೮. ರಾಮನಾಥ ಚರಿತ, ಪದ್ಯ–೨೪, ಪು.ಸಂ.೧೯೦.

೬೯. ಪರಮಶಿವಮೂರ್ತಿ, ಡಿ.ವಿ.(ಸಂ)., ಕೃಷ್ಣದೇವರಾಯನ ಶಾಸನಗಳು, ಶಾಸನ ಸಂಖ್ಯೆ. ೬೬, ಪು.ಸಂ.೧೩೮–೩೯.

೭೦. ಪಾಯೇಸ್, ಪ್ರ.ಕಂ.ಇಂ., ಪು.ಸಂ.೩೫೦.

೭೧. ನ್ಯೂನಿಜ್, ಪ್ರ.ಕಂ.ಇಂ., ಪು.ಸಂ.೩೬೭.

೭೨. ಶ್ರೀಕೃಷ್ಣದೇವರಾಯನ ದಿನಚರಿ, ಪು.ಸಂ.೭.

೭೩. ಅಬ್ದುರ್ ರಜಾಕ್, ಪ್ರ.ಕಂ.ಇಂ., ಪು.ಸಂ.೧೪೪.

೭೪. ಬಾರ್ಬೋಸ, ಪ್ರ.ಕಂ.ಇಂ., ಪು.ಸಂ.೨೭೧.

೭೫. ಶ್ರೀಕೃಷ್ಣದೇವರಾಯನ ದಿನಚರಿ, ಪು.ಸಂ.೪೮.

೭೬. ಅದೇ, ಪು.ಸಂ. ೫೦–೫೧.

೭೭. ರಾಮಚಂದ್ರರಾವ್, ಸಿ.ವಿ.(ಸಂ), ರಾಯವಾಚಕಮು, ಪು.ಸಂ.೮೭.

೭೮. ಕಲಬುರ್ಗಿ, ಎಂ.ಎಂ(ಸಂ), ಕರ್ನಾಟಕದ ಕೈಫಿಯತ್ತುಗಳು, ಪು.ಸಂ.೫೪೬.

೭೯. ರಾಮರಾಜನ ಬಖೈರು, ಪು.ಸಂ.೪೯.

೮೦. ಬುಸಾತಿನೆ–ಸಲಾತೀನ, ಪು.ಸಂ.೮೩.

೮೧. ಬೆಟಗೆರೆ ಕೃಷ್ಣಶರ್ಮ, ಕರ್ನಾಟಕ ಜನಜೀವನ, ಪು.ಸಂ:೯೭.

೮೨. ಶ್ರೀಕಂಠಯ್ಯ.ಎಸ್, ವಿ.ಕಾ.ಕ.ಸಾ.ಜ.ಚಿತ್ರ, ಪು.ಸಂ:೧೯೩.

೮೩. ಬಾರ್ಬೋಸ, ಪ್ರ.ಕ.ಇಂ, ಪು.ಸಂ.೨೯೩.
೮೪. ಅದೇ, ಪು.ಸಂ.೨೭೪.
೮೫. ಆಮುಕ್ತಮಾಲ್ಯದ, ಪು.ಸಂ.೩೬–೩೭.
೮೬. ಪ್ರೌಢದೇವರಾಯನ ಶಾಸನಗಳು, ಶಾ.ಸಂ.೨೧೪, ಪು.ಸಂ.೪೨೫.
೮೭. ಶ್ರೀಕಂಠಯ್ಯ, ಎಸ್., ವಿ.ಕಾ.ಕ.ಸಾ.ಜ.ಚಿತ್ರ, ಪು.ಸಂ.೩೮೭.
೮೮. ಚಿದಾನಂದಮೂರ್ತಿ, ಎಂ., ಕ.ಶಾ.ಸಾ.ಅಧ್ಯಯನ, ಪು.ಸಂ.೩೧೦.
೮೯. ಅದೇ, ಪು.ಸಂ.೩೧೧.
೯೦. ಶ್ರೀಕಂಠಯ್ಯ, ಎಸ್., ಪೂರ್ವೋಕ್ತ, ಪು.ಸಂ.೧೬೬.
೯೧. ಪ್ರೌಢದೇವರಾಯನ ಶಾಸನಗಳು, ಶಾ.ಸಂ.೧೭೮, ಪು.ಸಂ.೩೬೧–೩೬೫.
೯೨. ಶ್ರೀಕಂಠಯ್ಯ, ಎಸ್., ಪೂರ್ವೋಕ್ತ, ಪು.ಸಂ.೩೮೬.
೯೩. ಸನತ್ಕುಮಾರ ಚರಿತೆ, ಪು.ಸಂ.೨೦೨.
೯೪. ಕಂಠೀರವ ನರಸರಾಜ ವಿಜಯ, ಪು. ಸಂ.೪೮೫.
೯೫. ಚಿದಾನಂದಮೂರ್ತಿ, ಎಂ., ಕ.ಶಾ.ಸಾ.ಅಧ್ಯಯನ, ಪು.ಸಂ.೧೯೩.
೯೬. ಚೆಲುವರಾಜು, ಹಂಪಿಯ ಸ್ಮಾರಕಗಳಲ್ಲಿ ಜಾನಪದೀಯ ಅಂಶಗಳು, ಪು.ಸಂ.೪೪.
೯೭. ಪ್ರೌಢದೇವರಾಯನ ಶಾಸನಗಳು, ಶಾ.ಸಂ.೧೨೦, ಪು.ಸಂ.೨೬೨–೬೩.
೯೮. Jyotsna, K.Kamat., Social Life in Medieval Karnataka, P.No.70.
೯೯. ಪಾಯೇಸ್, ಪ್ರ.ಕ.ಇಂ., ಪು.ಸಂ.೩೩೭.
೧೦೦. ಅದೇ, ಪು.ಸಂ.೩೪೬.
೧೦೧. ಸೋಮಶೇಖರ್, ಎಸ್.ವೈ., ವಿ.ಕಾ.ಸ್ಮೈ ಮತ್ತು ಯು.ನೀತಿ, ಪು.ಸಂ.೯೪.
೧೦೨. ಪಾಯೇಸ್, ಪೂರ್ವೋಕ್ತ, ಪು.ಸಂ.೩೩೬.
೧೦೩. ನಿರುಪಮಾ(ಅನು), ಶ್ರೀಕೃಷ್ಣದೇವರಾಯನ ಆಮುಕ್ತಮಾಲ್ಯದ, ಪು.ಸಂ.೩೬.
೧೦೪. ಅದೇ, ಪು.ಸಂ.೩೮.
೧೦೫. ಸರಸ್ವತಿ, ಎನ್., ವಿಜಯನಗರ ಕಾಲದ ಮಹಿಳೆಯರ ಕೊಡುಗೆಗಳು, ಪು.ಸಂ.೩೨.
೧೦೬. ಶಾಮಶಾಸ್ತ್ರಿ, ಆರ್(ಸಂ), ಕಂಠೀರವನರಸರಾಜ ವಿಜಯ, ಪು.ಸಂ.೪೦೭.
೧೦೭. ಶ್ರೀಕಂಠಯ್ಯ, ಎಸ್., ವಿ.ಕಾ.ಕ.ಸಾ.ಜ.ಚಿತ್ರ, ಪು.ಸಂ.೩೮೩.
೧೦೮. ನ್ಯೂನಿಜ್, ಮರೆತುಹೋದ ಮಹಾಸಾಮ್ರಾಜ್ಯ, ಪು.ಸಂ.೩೮೫.
೧೦೯. ಬುಲಾತಿನೆ–ಸಲಾತೀನ, ಪು.ಸಂ.೧೫–೧೬.
೧೧೦. ಬಾರ್ಬೋಸ, ಪ.ಕಂ.ಇಂ., ಪು.ಸಂ.೨೮೬.
೧೧೧. ಚೆಲುವರಾಜು, ಹಂಪಿಯ ಸ್ಮಾರಕಗಳಲ್ಲಿ ಜಾನಪದೀಯ ಅಂಶಗಳು, ಪು.ಸಂ.೬೭.
೧೧೨. ಪುರುಷೋತ್ತಮ ಬಿಳಿಮಲೆ, ಹಂಪಿ ಜಾನಪದ, ಕ.ವಿ.ವಿ., ಹಂಪಿ, ಪು.ಸಂ.೪೬.
೧೧೩. ಸರಸ್ವತಿ, ಎನ್., ವಿಜಯನಗರ ಕಾಲದ ಮಹಿಳೆಯರ ಕೊಡುಗೆಗಳು, ಪು.ಸಂ.೧೭೦.
೧೧೪. Nagaraju, H.M., Devaraya II and His Times, P.No.139.

೧೧೫. ನಿಕಟಿನ್, ಪ್ರವಾಸಿ ಕಂಡಿ ಇಂಡಿಯಾ, ಪು.ಸಂ.೧೬೩.

೧೧೬. ಚೆಲುವರಾಜು, ಹಂಪಿಯ ಸ್ಮಾರಕಗಳಲ್ಲಿ ಜಾನಪದೀಯ ಅಂಶಗಳು, ಪು.ಸಂ.೭೦

೧೧೭. ಸರಸ್ವತಿ, ಎನ್., ವಿ.ಕಾ.ಮ.ಕೊಡುಗೆಗಳು, ಪು.ಸಂ.೧೭೧

೧೧೮. ವೀರೇಶ್ ಬಡಿಗೇರ, ಶಾಸನಗಳಲ್ಲಿ ಆಯಗಾರಿಕೆ ಸಂಸ್ಕೃತಿ, ಪು.ಸಂ.೦೫.

೧೧೯. ನಿವೇದಿತಾ, ಎಸ್.ಸ್ವಾಮಿ., ಶಾಸನಗಳಲ್ಲಿ ವರ್ತಕರು, ಶಾಸನ ಅಧ್ಯಯನ, ಸಂ–೯, ಪು.ಸಂ.೧೦೭.

೧೨೦. ಅದೇ, ಪೂರ್ವೋಕ್ತ.

೧೨೧. ಮೋಹನತರಂಗಿಣಿ, ಪದ್ಯ–೧೩, ಪು.ಸಂ.೦೮.
(ಬೆಟಗೇರಿ ಕೃಷ್ಣಶರ್ಮರು: ಕರ್ನಾಟಕ ಜನಜೀವನದಲ್ಲಿ ಕೆಂಜಾಜಿ ಎಂಬ ಹೂವನ್ನು ಗುಲಾಬಿ ಹೂ ಎಂದು ಅರ್ಥೈಸಿದ್ದಾರೆ. ಪು.ಸಂ.೯೨)

೧೨೨. ರಾಮನಾಥ ಚರಿತೆ, ಪದ್ಯ –೧೮, ಪು.ಸಂ.೧೫೭.

೧೨೩. ನಿರುಪಮಾ(ಅನು), ಶ್ರೀಕೃಷ್ಣದೇವರಾಯನ ಆಮುಕ್ತಮಾಲ್ಯದ, ಪು.ಸಂ.೧೧.

೧೨೪. ರಾಮನಾಥ ಚರಿತೆ, ಪೂರ್ವೋಕ್ತ.

೧೨೫. ನಿರುಪಮಾ(ಅನು), ಪೂರ್ವೋಕ್ತ.

೧೨೬. ಅಬ್ದುರ್ ರಜಾಕ್, ಪ್ರ.ಕಂ.ವಿ., ಪು.ಸಂ.೧೩.

೧೨೭. ಮೋಹನತರಂಗಿಣಿ, ಪದ್ಯ – ೧೨, ಪು.ಸಂ.೦೮.

೧೨೮. ಅದೇ, ಪದ್ಯ – ೨೨, ಪು.ಸಂ.೧೨.

೧೨೯. ಸನತ್ಕುಮಾರ ಚರಿತೆ, ಪದ್ಯ – ೩೩, ಪು.ಸಂ.೧೭೪.

೧೩೦. ಅದೇ, ಪದ್ಯ – ೩೪, ಪು.ಸಂ.೧೭೪–೧೭೫.

೧೩೧. ಹಜರತ್ ಸಾಬ್, ಹು.ನದಾಫ್., ಕನಕದಾಸರ ಕೃತಿಗಳ ಜಾನಪದೀಯ ಅಧ್ಯಯನ, ಪು.ಸಂ.೧೯೩.

೧೩೨. ಕಂಠೀರವ ನರಸರಾಜ ವಿಜಯ: ಪದ್ಯ –೭೧, ಪು.ಸಂ.೭೬.

೧೩೩. ಪ್ರೌಢದೇವರಾಯನ ಶಾಸನಗಳು, ಪು.ಸಂ.೧೨೭–೧೨೯.

೧೩೪. ಹಜರತ್ ಸಾಬ್, ಹು.ನದಾಫ್., ಪೂರ್ವೋಕ್ತ, ಪದ್ಯ –೩೦, ಪು.ಸಂ.೧೯೩. 'ಘೋಟ'ಎಂದರೆ ಕುದುರೆ ಎಂದರ್ಥ, ಘೋಟಕ ಎಂದರೆ ಕುದುರೆ ಮಾರುವವನು ಎಂದರ್ಥ.

೧೩೫. ಚೆನ್ನಬಸವ ಪುರಾಣ, ಪದ್ಯ–೧೩೧, ಪು.ಸಂ.೩೦.

೧೩೬. ಬಾರ್ಬೋಸ, ಪ್ರ.ಕ.ಇಂ., ಪು.ಸಂ.೩೦೬.

೧೩೭. ಪ್ರೌಢದೇವರಾಯನ ಶಾಸನಗಳು, ಪು.ಸಂ.೧೨೭–೧೨೯.

೧೩೮. ಸೋಮಶೇಖರ್, ಎಸ್.ವೈ., ಕರ್ನಾಟಕದ ಬಿರುದಾವಳಿಗಳು, ಪು.ಸಂ.೧೫೬.

೧೩೯. ಅದೇ, ಪೂರ್ವೋಕ್ತ, ಪು.ಸಂ.೧೫೭–೧೭೧.

೧೪೦. ಅಬ್ದುರ್ ರಜಾಕ್, ಪ್ರ.ಕ.ಇಂ., ಸಂಪುಟ.೦೨, ಪು.ಸಂ.೧೫೪.

೧೪೧. Gopal, R., Venetian Coins in Karnataka, Dire torate of Archaelogy and Museums, Hospet, P.No.21.

೧೪೨. Manjunatha. P: Vijayanagara Urbanity, P.No.50.

೧೪೩. ವೀಣಾ, ಎನ್., ವಿಜಯನಗರ ಕಾಲದ ರಾಜರ ವಸ್ತ್ರ ಮತ್ತು ಆಭರಣಗಳು (ಲೇಖನ), ದೇಸಿ ಚರಿತ್ರೆ, ಸಂಪುಟ-೦೧, ದೇಸಿ ಚರಿತ್ರೆ, ತ್ರೈಮಾಸಿಕ ಜರ್ನಲ್, ೨೦೧೪, ಪು.ಸಂ. ೪೦-೪೭.

೧೪೪. ಸೋಮಶೇಖರ್, ಎಸ್.ವೈ., ಹಂಪಿಯ ಬಜಾರುಗಳು, ಪು.ಸಂ.೨೩.

೧೪೫. ಸೋಮಶೇಖರ್, ಎಸ್.ವೈ., ಕರ್ನಾಟಕದ ಬಿರುದಾವಳಿಗಳು, ಪು.ಸಂ.೪೯.

೧೪೬. ಬಾರ್ಬೋಸ: ಪ್ರ.ಕ.ಇಂ: ಪು.ಸಂ.೩೨೫.

೧೪೭. ಅದೇ, ಪು.ಸಂ.೩೧೬.

೧೪೮. ಅದೇ, ಪು.ಸಂ.೩೦೭.

೧೪೯. ಶಾಮಶಾಸ್ತ್ರಿ, ಆರ್.(ಸಂ)., ಕಂಠೀರವ ನರಸರಾಜ ವಿಜಯ, ಪದ್ಯ-೨೦, ಪು.ಸಂ.೩೧೨

೧೫೦. ರಾಮನಾಥ ಚರಿತ, ಪದ್ಯ-೧೬, ಸಂ-೦೩, ಪು.ಸಂ.೪೯೭.

೧೫೧. ಚಿದಾನಂದಮೂರ್ತಿ.ಎಂ : ಕ.ಶಾ.ಸಾಂ.ಅಧ್ಯಯನ:ಪು.ಸಂ.೫೦೮-೫೦೯.

೧೫೨. ವಸಂತಮಾಧವ, ಕೆ.ಜಿ., ಸಂಗೀತ ಮತ್ತು ನೃತ್ಯಗಳ ಇತಿಹಾಸ, ಶಾಸನಗಳ ಅಧ್ಯಯನ, ಸಂ-೯, ಪು.ಸಂ.೪೪.

೧೫೩. ಚಿದಾನಂದಮೂರ್ತಿ, ಪೂರ್ವೋಕ್ತ, ಪು.ಸಂ.೫೧೦.

೧೫೪. ಸೋಮಶೇಖರ್, ಎಸ್.ವೈ., ಪೂರ್ವೋಕ್ತ, ಪು.ಸಂ.೧೬೧.

೧೫೫. ಅದೇ, ಪು.ಸಂ.೧೭೨.

೧೫೬. ಅದೇ, ಪು.ಸಂ.೧೮೩.

೧೫೭. Mahalingam, T.V., P.No.74.

೧೫೮. ಶ್ರೀಕಂಠಯ್ಯ, ಎಸ್., ವಿ.ಕಾ.ಕ.ಸಾ.ಜ.ಜೀ.ಚಿತ್ರ, ಪು.ಸಂ.೪೩೧.

೧೫೯. Reddappa, K., Material Depicted in Vijayanagara Period, P.No.99.

೧೬೦. ಶ್ರೀಕಂಠಯ್ಯ, ಎಸ್., ಪೂರ್ವೋಕ್ತ, ಪ.ಸಂ.೪೪೧.

೧೬೧. Reddappa, K., ಪೂರ್ವೋಕ್ತ, P.No.99.

೧೬೨. ಶ್ರೀಕಂಠಯ್ಯ, ಎಸ್., ಪೂರ್ವೋಕ್ತ, ಪು.ಸಂ.೪೩೬.

೧೬೩. ದಯಾನಂದ ಪಟೇಲ್, ಟಿ., ವಿಜಯನಗರ ಕಾಲದಲ್ಲಿ ಸಂಗೀತ ಮತ್ತು ನೃತ್ಯ ಶಾಸನಾಧಾರಿತ ಅಧ್ಯಯನ, ವಿಜಯನಗರ ಅಧ್ಯಯನ, ಸಂಪುಟ-೬, ಪು.ಸಂ.೧೧೧.

೧೬೪. ಅದೇ, ಪು.ಸಂ.೧೧೨.

೧೬೫. ಪ್ರೌಢದೇವರಾಯನ ಶಾಸನಗಳು, ಪು.ಸಂ.೧೮೭.

೧೬೬. ದಯಾನಂದ ಪಟೇಲ್, ಟಿ., ಪೂರ್ವೋಕ್ತ.

೧೬೭. ಚಾಮರಸನ ಪ್ರಭುಲಿಂಗಲೀಲೆ, ಪದ್ಯ-೪೧, ಪು.ಸಂ.೪೦.

೧೬೮. ಕನಕದಾಸರ ಮೋಹನತರಂಗಿಣಿ, ಪದ್ಯ-೨೯, ಪು.ಸಂ.೮.

೧೬೯. ಪಾಯೇಸ್, ಪ್ರ.ಕಂ.ಇಂ., ಪು.ಸಂ.೩೪೮.

೧೭೦. ಅದೇ, ಪು.ಸಂ.೩೩೬.

೧೭೧. ನ್ಯೂನಿಜ್, ಪ್ರ.ಕಂ.ಇಂ., ಪು.ಸಂ.೩೬೯.

೧೭೨. ಕನಕದಾಸರ ಮೋಹನತರಂಗಿಣಿ, ಪದ್ಯ-೨೯, ಪು.ಸಂ.೬೦.

೧೭೩. ಚಾಮರಸನ ಪ್ರಭುಲಿಂಗಲೀಲೆ, ಪದ್ಯ-೦೫, ಪು.ಸಂ.೪೮.

೧೭೪. ಅದೇ, ಪದ್ಯ-೦೬, ಪು.ಸಂ.೪೮.

೧೭೫. ಅದೇ, ಪದ್ಯ-೦೭, ಪು.ಸಂ.೪೯.

೧೭೬. ಅದೇ, ಪದ್ಯ-೦೯, ಪು.ಸಂ.೪೯.

೧೭೭. ನ್ಯೂನಿಜ್, ಪ್ರ.ಕ.ಇಂ., ಪು.ಸಂ.೩೬೯.

೧೭೮. ದಯಾನಂದ ಪಟೇಲ್, ಟಿ., ಪೂರ್ವೋಕ್ತ, ಪು.ಸಂ.೧೧೨.

೧೭೯. ಕನಕದಾಸರ ಮೋಹನತರಂಗಿಣಿ, ಪದ್ಯ-೨೯, ಪು.ಸಂ.೦೮.

೧೮೦. ಚಾಮರಸನ ಪ್ರಭುಲಿಂಗಲೀಲೆ, ಪದ್ಯ-೪೧, ಪು.ಸಂ.೪೦.

೧೮೧. ಪಾಯೇಸ್, ಪ್ರ.ಕ.ಇಂ., ಪು.ಸಂ.೩೪೮.

೧೮೨. ಶ್ರೀಕಂಠಯ್ಯ, ಎಸ್., ಪೂರ್ವೋಕ್ತ, ಪು.ಸಂ.೪೩೮.

೧೮೩. ಸರಸ್ವತಿ, ಎನ್., ವಿ.ಕಾ.ಮ.ಕೊಡುಗೆಗಳು, ಪುಸಂ.೧೬೧.

೧೮೪. ರಾಮನಾಥ ಚರಿತ, ಪದ್ಯ-೨೩, ಪು.ಸಂ.೮೯.

೧೮೫. ಅದೇ, ಪದ್ಯ-೬೮, ಪು.ಸಂ.೪೧೭.

೧೮೬. ಪಾಯೇಸ್, ಪ್ರ.ಕ.ಇಂಡಿಯ, ಪು.ಸಂ.೩೪೮.

೧೮೭. ಅಬ್ದುರ್ ರಜಾಕ್, ಪ್ರ.ಕ.ಇಂ., ಪು.ಸಂ.೧೩೬-೧೩೭.

೧೮೮. ಶ್ರೀಕಂಠಯ್ಯ, ಎಸ್., ಪು.ಸಂ.೪೦೪.

೧೮೯. ಅದೇ.

೧೯೦. ರಾಮನಾಥ ಚರಿತ, ಪದ್ಯ-೯೩, ಪು.ಸಂ.೩೭೧.

೧೯೧. ಶಿವತತ್ತ್ವ ಚಿಂತಾಮಣಿ, ಪದ್ಯ-೨೬, ಪು.ಸಂ.೧೦೦-೧೦೧.

೧೯೨. ಚಿದಾನಂದಮೂರ್ತಿ, ಎಂ., ಕನ್ನಡಸಾಹಿತ್ಯ ಶಾಸನಗಳಲ್ಲಿ ಸಂಗೀತ ವಿಚಾರ, ಪು.ಸಂ.೬೦.

೧೯೩. ರಾಮನಾಥ ಚರಿತ, ಪದ್ಯ-೭೧, ಪು.ಸಂ.೧೪೨.

೧೯೪. ಮಧುರಾ ವಿಜಯಂ, ಪದ್ಯ-೪-೧೬, ಪು.ಸಂ.೫೭.

೧೯೫. ದಯಾನಂದ ಪಟೇಲ್, ಪೂರ್ವೋಕ್ತ, ಪು.ಸಂ.೧೧೧.

೧೯೬. ರಾಮನಾಥ ಚರಿತ, ಪದ್ಯ-೨೪, ಪು.ಸಂ.೩೯೩.

೧೯೭. ಅದೇ, ಪದ್ಯ-೮೪, ಪು.ಸಂ.೪೩೫.

೧೯೮. ಕಂಠೀರವ ನರಸರಾಜ ವಿಜಯಂ, ಪದ್ಯ – ೩೮, ಪು.ಸಂ.೩೧.
೧೯೯. Venkata Ramanyya, N., Studies in the History of the Third Dynasty of Vijayanagara, P.No.372-73.
೨೦೦. ಅದೇ.
೨೦೧. ಶೀಲಾಕಾಂತ ಪತ್ತಾರ, ಬಾದಾಮಿ : ಸಾಂಸ್ಕೃತಿಕ ಅಧ್ಯಯನ, ಪು.ಸಂ.೯೨.
೨೦೨. Sudharshan, S., Women in Hoysala Sculptures: A Cultural Study, P.No.233.
೨೦೩. Sulochana Ayyar, Costumes and Ornaments as Depicted in the Sculptures of Gwaliar Museum, P.No.137.
೨೦೪. Mahalingam, T.V., Administration and Social Life Under Vijayanagara, Part –II, P.No. 62.
೨೦೫. ಅದೇ, ಪು.ಸಂ.೬೨–೬೩.
೨೦೬. ಅದೇ.
೨೦೭. Reddappa, K., Material Culture Depicted in Vijayanagara Temples, P.No.14-15.
೨೦೮. Mahalingam, T.V., ಪೂರ್ವೋಕ್ತ, P.No.63.
೨೦೯. ಚನ್ನಬಸವ ಪುರಾಣ ಸಂಗ್ರಹ, ಪು.ಸಂ.೬೪.
೨೧೦. ರಾಮನಾಥಚರಿತ(ಸಂಪುಟ–೦೩), ಪು.ಸಂ.೦೬.
೨೧೧. ಸನತ್ಕುಮಾರ ಚರಿತೆ, ಪು.ಸಂ.೯೫.
೨೧೨. Mahalingam, T.V., ಪೂರ್ವೋಕ್ತ, P.No.65.
೨೧೩. ಸರಸ್ವತಿ, ಎನ್., ವಿಜಯನಗರ ಕಾಲದ ಮಹಿಳೆಯರ ಕೊಡುಗೆಗಳು, ಪು.ಸಂ.೧೮೨.
೨೧೪. ನ್ಯೂನಿಜ್, ಪ್ರ.ಕಂ.ಇಂ., ಪು.ಸಂ.೨೪೧.
೨೧೫. ವೀಣಾ, ಎನ್., ಆಂಧ್ರಪ್ರದೇಶದಲ್ಲಿ ಕೃಷ್ಣದೇವರಾಯನ ಶಾಸನಗಳಲ್ಲಿ ಆಭರಣಗಳ ಉಲ್ಲೇಖ(ಲೇಖನ), ಕರ್ನಾಟಕ ಇತಿಹಾಸ ಕಾಂಗ್ರೆಸ್, ೨೦೧೩, ಪು.ಸಂ.೨೭೭.
೨೧೬. ಅದೇ.
೨೧೭. ಪಾಯೇಸ್, ಮರೆತು ಹೋದ ಮಹಾಸಾಮ್ರಾಜ್ಯ ವಿಜಯನಗರ, ಪು.ಸಂ. ೨೬೮–೬೯.
೨೧೮. ಚಿದಾನಂದಮೂರ್ತಿ, ಎಂ., ಕ.ಶಾ.ಸಾಂ.ಅಧ್ಯಯನ, ಪು.ಸಂ.೩೭೨.
೨೧೯. ಪರಮಶಿವಮೂರ್ತಿ, ಡಿ.ವಿ.(ಸಂ)., ಕೃಷ್ಣದೇವರಾಯನ ಶಾಸನಗಳು, ಶಾ.ಸಂ–೩೩೨, ಪು.ಸಂ.೭೨೪–೨೫.
೨೨೦. Reddeppa, K., Consume, Coiffure and Ornaments of the

Chamaradharanies Depicted in the Chennakeshava Temple, Sompalem(Article), South Indian History Congress Session – 31, 2011.

೨೨೧. ಕುಲಕರ್ಣಿ ಅರಕೇರಿ, ಆರ್.ಜಿ.(ಸಂ), ಶ್ರೀಕೃಷ್ಣ ಪಾರಿಜಾತ, ಕನ್ನಡ ಅಧ್ಯಯನ ಸಂಸ್ಥೆ, ಅಪರಾಳ ತಮ್ಮಣ(ಮೂಲ), ಪು.ಸಂ.೭೮.

೨೨೨. Saletore, R.N., Vijayanagara Art, P. No. 242.

೨೨೩. ಎ.ಕ., ಸಂ.೬, ನಂ.೨೪, ಮೂಡಿಗೆರೆ.

೨೨೪. ಕನ್ನಡ ವಿಶ್ವವಿದ್ಯಾಲಯ ಶಾಸನ ಸಂಪುಟ–೩, ಹಂಪಿ ಶಾಸನಗಳು, ಶಾಸನ ಸಂಖ್ಯೆ.೧೯೬.

೨೨೫. ದಯಾನಂದ ಪಟೇಲ್, ಟಿ., ವಿಜಯನಗರ ಕಾಲದಲ್ಲಿ ಸಂಗೀತ ಮತ್ತು ನೃತ್ಯ ಶಾಸನಾಧಾರಿತ ಅಧ್ಯಯನ(ಲೇಖನ), ವಿಜಯನಗರ ಅಧ್ಯಯನ, ಸಂಪುಟ–೬, ಪು.ಸಂ.೧೧೧–೧೧೨.

೨೨೬. Rao, GSP., Krishnadevaraya, PST University.

೨೨೭. ರತ್ನಾಕರವರ್ಣಿ, ಭರತೇಶ ವೈಭವ, ಪು.ಸಂ.೧೧೯.

೨೨೮. Choodamani Nandagopal, Dance and Music in the Temple Architecture, P.No.129.

೨೨೯. ಆದ್ಯರಂಗಾಚಾರ್ಯ(ಅನು)., ನಾಟ್ಯಶಾಸ್ತ್ರ, ಪು.ಸಂ.೫೦.

೨೩೦. ಶ್ರೀಕಂಠಯ್ಯ, ಎಸ್., ವಿ.ಕಾ.ಕ.ಸಾ.ಜ.ಚಿತ್ರ, ಪು.ಸಂ.೪೬೧.

೨೩೧. ಅದೇ, ಪು.ಸಂ.೪೬೧–೬೨.

೨೩೨. ಕಂಠೀರವ ನರಸರಾಜ ವಿಜಯ, ಪು.ಸಂ.೪೧೧.

೨೩೩. ರಾಮನಾಥ ಚರಿತ, ಪು.ಸಂ.೪೧೩.

೨೩೪. Saletore, R.N., ಪೂರ್ವೋಕ್ತ, P.No.244 – 45.

೨೩೫. ಪಾಯೇಸ್, ಎ ಫಾರಗಾಟನ್ ಎಂಪೈರ್, ಪು.ಸಂ.೨೬೩.

೨೩೬. ಶ್ರೀಕಂಠಯ್ಯ, ಎಸ್., ಪೂರ್ವೋಕ್ತ, ಪು.ಸಂ.೪೭೫.

೨೩೭. ಪಾಯೇಸ್, ಪ್ರಕಂ.ಇಂ., ಸಂ–೨, ಪು.ಸಂ.೩೪೭.

೨೩೮. Saletore, R.N., ಪೂರ್ವೋಕ್ತ, P.No.245.

೨೩೯. ಸರಸ್ವತಿ, ಎನ್., ಪೂರ್ವೋಕ್ತ, ಪು.ಸಂ.೧೫೩.

೨೪೦. ಚೂಡಾಮಣಿನಂದಗೋಪಾಲ್, ಶಿಲ್ಪಕಲೆ, ಪು.ಸಂ.೩೨೬.

೨೪೧. Saletore, R.N., ಪೂರ್ವೋಕ್ತ, P.No.253-54.

೨೪೨. ಅದೇ, ಪು.ಸಂ.೨೫೪.

೨೪೩. ಕಂಠೀರವ ನರಸರಾಜ ವಿಜಯ, ಪದ್ಯ–೧೦೮, ಪು.ಸಂ.೪೧೦.

೨೪೪. ಅದೇ, ಪದ್ಯ-೧೧೦, ಪು.ಸಂ.೪೧೦.

೨೪೫. ಅದೇ, ಪದ್ಯ-೧೧೧, ಪು.ಸಂ.೪೧೦.

೨೪೬. ಅದೇ, ಪದ್ಯ-೧೧೨, ಪು.ಸಂ.೪೧೧.

೨೪೭. ಹಜರತ್‌ಸಾಬ್, ಹು.ನದಾಫ್., ಕನಕದಾಸರ ಕೃತಿಗಳು ಜಾನಪದೀಯ ಅಧ್ಯಯನ, ಪು.ಸಂ.೨೩೨.

೨೪೮. ರಾಮನಾಥ ಚರಿತೆ, ಪದ್ಯ-೧೦೭, ಪು.ಸಂ.೧೪೮.

೨೪೯. ಅದೇ, ಪದ್ಯ-೧೧೦, ಪು.ಸಂ.೧೪೮.

೨೫೦. ಸನತ್ಕುಮಾರ ಚರಿತೆ, ಪದ್ಯ-೦೬, ಪು.ಸಂ.೫೨.

೨೫೧. ಅದೇ, ಪದ್ಯ-೦೯, ಪು.ಸಂ.೫೩.

೨೫೨. ನಿಕೊಲೋ-ದೆ-ಕೊಂತಿ, ಪ್ರ.ಕ.ಇಂ., ಸಂ-೨, ಪು.ಸಂ.೧೨೮-೨೯.

೨೫೩. ಚೆನ್ನಬಸವ ಪುರಾಣ, ಪು.ಸಂ.೩೯.

೨೫೪. ವಾದಿರಾಜರು ಚಿತ್ರಿಸಿದ ಶ್ರೀಕೃಷ್ಣ ಬಾಲಲೀಲೆ, ಪದ್ಯ-೧೮೪-೧೮೫, ಪು.ಸಂ.೯೨.

೨೫೫. ಸನತ್ಕುಮಾರ ಚರಿತೆ, ಪದ್ಯ-೧೧, ಪು.ಸಂ.೫೩.

೨೫೬. ವಾದಿರಾಜರ ಶ್ರೀಕೃಷ್ಣ ಬಾಲಲೀಲೆ, ಪದ್ಯ-೫೪೬, ಪು.ಸಂ.೪೬.

೨೫೭. ಅದೇ, ಪದ್ಯ-೫೪೭ ಪು.ಸಂ.೪೬.

೨೫೮. ಅದೇ, ಪದ್ಯ-೫೪೮ ಪು.ಸಂ.೪೬.

೨೫೯. ಅದೇ, ಪದ್ಯ-೫೫೯ ಪು.ಸಂ.೪೭.

೨೬೦. ಅದೇ, ಪದ್ಯ-೫೬೦ ಪು.ಸಂ.೪೭.

೨೬೧. ಅದೇ, ಪದ್ಯ-೫೬೧ ಪು.ಸಂ.೪೭.

೨೬೨. ಅದೇ, ಪದ್ಯ-೫೬೨ ಪು.ಸಂ.೪೭.

೨೬೩. ಸನತ್ಕುಮಾರಚರಿತೆ, ಪು.ಸಂ.೯೫.

೨೬೪. ನಾವಿಡ, ಎ.ವಿ(ಸಂ)., ವಾದಿರಾಜರ ಶ್ರೀಕೃಷ್ಣ ಬಾಲಲೀಲೆ, ಪು.ಸಂ.೧೬-೧೭.

೨೬೫. ಬಾರ್ಬೋಸ, ಪ್ರ.ಕಂ.ಇಂ., ಪು.ಸಂ.೨೮೬.

೨೬೬. ನ್ಯೂನಿಜ್, ಪ್ರ.ಕಂ.ವಿಜಯನಗರ, ಪು.ಸಂ.೨೪೧.

೨೬೭. ಸನತ್ಕುಮಾರ ಚರಿತ, ಪು.ಸಂ.೧೫೧.

೨೬೮. ನ್ಯೂನಿಜ್, ಪ್ರವಾಸಿ ಕಂಡ ವಿಜಯನಗರ, ಪು.ಸಂ.೨೪೧.

೨೬೯. ಹಂಪಿ ಶಾಸನಗಳು, ಕ.ವಿ.ವಿ., ಶಾಸನ ಸಂ-೦೩, ಪು.ಸಂ.೪೩.

೨೭೦. ಹಜರತ್‌ಸಾಬ್, ಹು.ನದಾಫ್., ಪೂರ್ವೋಕ್ತ, ಪು.ಸಂ.೨೪೦-೪೧.

೨೭೧. ಜ್ಯೋತ್ಸ್ನಾ ಕಾಮತ್, ಹಂಪಿಯ ಉಬ್ಬು ಚಿತ್ರಗಳಲ್ಲಿ ಜನಸಾಮಾನ್ಯ(ಲೇಖನ), ಹಂಪಿ ಪರಂಪರೆ, ಪು.ಸಂ.೯೭.

೨೭೨. ರಾಮನಾಥ ಚರಿತೆ, ಸಂ.೦೩, ಪದ್ಯ-೭೨, ಪು.ಸಂ.೧೪೩.

೨೭೩. ವಾಸುದೇವ ಅಗ್ನಿಹೋತ್ರಿ, ಪುರಂದರ ದಾಸರು ಚಿತ್ರಿಸಿದ ಬಾಲಕೃಷ್ಣ, ಪು.ಸಂ.

೨೭೪. ಅದೇ.

೨೭೫. ನಾವಿಡ, ಎ.ವಿ(ಸಂ)., ವಾದಿರಾಜರ ಶ್ರೀಕೃಷ್ಣ ಬಾಲಲೀಲೆ, ಪು.ಸಂ.೧೬-೧೭.

೨೭೬. Reddappa, K., Material Culture Depicted in Vijayanagara Temples, P. No. 211.

೨೭೭. Venkata Ramanyya, N., Studies in the History of the Third Dynasty of Vijayanagara, P.No.372-73.

೨೭೮. ಶಾಂತಮಠ, ದೇವದಾಸಿ ಪದ್ಧತಿ ಒಂದು ವಿಶ್ಲೇಷಣೆ (ಲೇಖನ), ಮಹಿಳಾ ಅಧ್ಯಯನ, ಕ.ವಿ.ವಿ., ಹಂಪಿ, ಸಂ.೧೦, ಪು.ಸಂ.೭೮.

೨೭೯. ಸರಸ್ವತಿ, ಎನ್., ವಿಜಯನಗರ ಕಾಲದ ಮಹಿಳೆಯರ ಕೊಡುಗೆಗಳು, ಪು.ಸಂ.೧೧೫.

೨೮೦. ಎಪಿಗ್ರಾಫಿಯ ಕರ್ನಾಟಕ-೧೧, ದಾವಣಗೆರೆ, ಪು.ಸಂ.೧೩೩.

೨೮೧. ಅದೇ, ಪು.ಸಂ.೧೧೬.

೨೮೨. ಬಾರ್ಬೋಸ, ಪ್ರ.ಕ.ಇಂ., ಪು.ಸಂ.೨೭೩-೭೪.

೨೮೩. ಪಾಯೇಸ್, ಪ್ರ.ಕ.ಇಂ., ಪು.ಸಂ.೩೩೨-೩೩.

೨೮೪. ನ್ಯೂನಿಜ್, ಪ್ರ.ಕ.ಇಂ., ಪು.ಸಂ.೩೮೮.

೨೮೫. ರಾಮನಾಥ ಚರಿತ, ಪದ್ಯ-೨೩, ಪು.ಸಂ.೧೫೮.

೨೮೬. ಅದೇ, ಪದ್ಯ-೩೦, ಪು.ಸಂ.೧೫೯.

೨೮೭. ಅದೇ, ಪದ್ಯ-೩೧, ಪು.ಸಂ.೧೫೯.

೨೮೮. ಅದೇ, ಪದ್ಯ-೪೯, ಪು.ಸಂ.೧೬೨.

೨೮೯. ಅದೇ, ಪದ್ಯ-೫೦, ಪು.ಸಂ.೧೬೨.

೨೯೦. ಕಂಠೀರವ ನರಸರಾಜ ವಿಜಯ, ಪದ್ಯ-೪೨, ಪು.ಸಂ.೧೬೨.

೨೯೧. ರಾಮನಾಥ ಚರಿತ, ಪೂರ್ವೋಕ್ತ, ಪದ್ಯ-೭೮, ಪು.ಸಂ.೧೬೬.

೨೯೨. ಕಂಠೀರವ ನರಸರಾಜ ವಿಜಯಂ, ಪದ್ಯ-೪೨, ಪು.ಸಂ.೧೬೨.

೨೯೩. ರಾಮನಾಥ ಚರಿತ, ಪೂರ್ವೋಕ್ತ, ಪದ್ಯ-೮೧, ಪು.ಸಂ.೧೬೭.

೨೯೪. ಅದೇ, ಪದ್ಯ-೬೮, ಪು.ಸಂ.೧೬೫.

೨೯೫. ಆಮುಕ್ತಮಾಲ್ಯದ, ಪು.ಸಂ.೧೨.

೨೯೬. ನಿಕೊಲೊ-ದಿ-ಕೊಂತಿ, ಪ್ರ.ಕ.ಇಂ., ಪು.ಸಂ.೧೨೪.

೨೯೭. ಅಬ್ದುರ್ ರಜಾಕ್, ಪ್ರ.ಕ.ಇಂ., ಪು.ಸಂ.೧೪೬.

೨೯೮. ಅದೇ, ಪೂರ್ವೋಕ್ತ, ಪು.ಸಂ.೧೪೬.

೨೯೯. ಕಂಠೀರವ ನರಸರಾಜ ವಿಜಯಂ, ಪು.ಸಂ.೧೩.

೩೦೦. ನ್ಯೂನಿಜ್, ಪ್ರ.ಕ.ಇಂ., ಪು.ಸಂ.೩೬೭.

೩೦೧. ಬಾರ್ಬೋಸ, ಪ್ರ.ಕ.ಇಂ., ಪು.ಸಂ.೨೭೭.

೩೦೨. ಅದೇ, ಪು.ಸಂ.೨೭೭.

೩೦೩. ಪಾಯೇಸ್, ಪ್ರ.ಕ.ಇಂ., ಪು.ಸಂ.೩೩೨–೩೩.

೩೦೪. ಅದೇ, ಪು.ಸಂ.೩೪೬.

೩೦೫. ಚಿನ್ನಸ್ವಾಮಿ ಸೋಸಲೆ, ಎನ್., ಸಾಮ್ರಾಜ್ಯ ಮತ್ತು ಸಂಸ್ಥಾನ, ಪು.ಸಂ.೭೨–೭೩.

೩೦೬. ಸರಸ್ವತಿ, ಸತೀ ಪದ್ಧತಿ ಒಂದು ಚಾರಿತ್ರಿಕ ನೋಟ(ಲೇಖನ), ಸಂಪುಟ–೩೧, ಸಂಚಿಕೆ–೦೨, ಪು.ಸಂ.೦೨.

೩೦೭. ರೋಹಿಣಿ, ಬಿ.ಎಂ., ಮತ್ತು ಶಶಿಲೇಖಾ, ಬಿ., ತುಳುನಾಡಿನ ಮಾಸ್ತಿಗಲ್ಲುಗಳು–ವೀರಗಲ್ಲುಗಳು, ಪು.ಸಂ.೫೮.

೩೦೮. ರಾಮನಾಥ ಚರಿತ, ಪದ್ಯ–೫೩, ಪು.ಸಂ.೪೮೪.

೩೦೯. ಅದೇ, ಪದ್ಯ–೫೪, ಪು.ಸಂ.೪೮೪.

೩೧೦. ಅದೇ, ಪದ್ಯ–೧೫೯, ಪು.ಸಂ.೩೩೭.

೩೧೧. ಅದೇ, ಪದ್ಯ–೧೫೯, ಪು.ಸಂ.೩೩೭.

೩೧೨. ಬಾರ್ಬೋಸಾ, ಪ್ರ.ಕ.ಇಂ., ಪು.ಸಂ.೨೭೩.

೩೧೩. ಸೀಸರ್ ಫ್ರೆಡೆರಿಕ್, ಪ್ರ.ಕ.ಇಂ., ಪು.ಸಂ.೪೨೭–೨೮.

೩೧೪. ಬಾರ್ಬೋಸಾ, ಪೂರ್ವೋಕ್ತ, ಪು.ಸಂ.೨೭೪.

೩೧೫. ನ್ಯೂನಿಜ್, ಪ್ರ.ಕ.ಇಂ., ಪು.ಸಂ.೩೭೦–೭೧.

೩೧೬. ಬುಲಾತಿನೆ–ಸಲಾತೀನ, ಪು.ಸಂ.೮೪.

೩೧೭. ಅದೇ, ಪು.ಸಂ.೧೩೦.

೩೧೮. ಕೃಷ್ಣದೇವರಾಯನ ಶಾಸನಗಳು, ಪು.ಸಂ.೫೪.

೩೧೯. ಅದೇ, ಶಾಸನ ಸಂ.೧೮೫, ಚಿಕ್ಕಬೆಟ್ಟಹಳ್ಳಿ, ಪು.ಸಂ.೩೭೯–೮೦.

೩೨೦. ಅದೇ, ಪು.ಸಂ.೫೪.

೩೨೧. ಸಂತೇಬೆನ್ನೂರು ಸುಮಂತೀಂದ್ರ ನಾಡಿಗ್(ಲೇಖಕರು), ವಿಜಯನಗರ ಅರಸರು ಮತ್ತು ವ್ಯಾಸರಾಜರು(ಲೇಖನ), ಕೃಷ್ಣದೇವರಾಯ ಆಯ್ದ ಲೇಖನ ಸಂಪುಟ, ಪು.ಸಂ.೨೬೪.

೩೨೨. ಅದೇ, ಶಾಸನ ಸಂ.೩೬, ಪು.ಸಂ.೭೧–೭೩.

೩೨೩. ರಾಮಚಂದ್ರರಾವ್, ಎಸ್.ಆರ್., ತಿರುಪತಿ ತಿಮ್ಮಪ್ಪ, ಪು.ಸಂ.೧೪೮.

೩೨೪. ಮಂಜುನಾಥಯ್ಯ, ಟಿ.ಎಂ., ವಿಜಯನಗರ ಪಟ್ಟಣದಲ್ಲಿ ನಾಥ ಸಂಪ್ರದಾಯ (ಲೇಖನ), ವಿಜಯನಗರ ಅಧ್ಯಯನ, ಸಂ.೦೭, ೨೦೦೧, ಪು.ಸಂ.೯೮–೨೧೧.

೩೨೫. ಹಜರತ್‌ಸಾಬ್, ಹು.ನದಾಫ್., ಕನಕದಾಸರ ಕೃತಿಗಳು ಜಾನಪದೀಯ ಅಧ್ಯಯನ, ಪು.ಸಂ.೨೧೨.

೩೨೬. ಜವರೇಗೌಡ(ಸಂ), ಕನಕ ಸಾಹಿತ್ಯ ದರ್ಶನ, ಪು.ಸಂ.೧೯.

೩೨೭. ಅದೇ.

೩೨೮. ರಾಮಚಂದ್ರರಾವ್, ಎಸ್.ಕೆ., ಮೂರ್ತಿಶಿಲ್ಪ:ನೆಲೆ ಮತ್ತು ಹಿನ್ನೆಲೆ, ಪು.ಸಂ.೧೧೩.

೩೨೯. ಮೂರ್ತಿಶಿಲ್ಪ, ನೆಲೆ ಮತ್ತು ಹಿನ್ನೆಲೆ, ಪು.ಸಂ.೧೨೬.

೩೩೦. ವಸಂತಲಕ್ಷ್ಮಿ, ಕೆ., ಪೂರ್ವೋಕ್ತ, ಪು.ಸಂ.೮೬.

೩೩೧. ಚೆನ್ನಬಸವಪುರಾಣ, ಪದ್ಯ-೨೦೬, ಪು.ಸಂ.೪೬.

೩೩೨. ಶಿವತತ್ತ್ವಚಿಂತಾಮಣಿ, ಪದ್ಯ-೧೮, ಪು.ಸಂ.೧೨೨.

೩೩೩. Suresh, K.M., Sculptural Art of Hampi, Page No.64.

೩೩೪. ವಸಂತಲಕ್ಷ್ಮಿ, ಕೆ., ಪೂರ್ವೋಕ್ತ.

೩೩೫. ಸನತ್ಕುಮಾರ ಚರಿತೆ, ಪದ್ಯ-೩೧, ಪು.ಸಂ.೧೫೧.

೩೩೬. ಶಿವತತ್ತ್ವಚಿಂತಾಮಣಿ, ಪದ್ಯ-೧೮, ಪು.ಸಂ.೯೮.

೩೩೭. ಅದೇ, ಪದ್ಯ-೨೯, ಪು.ಸಂ.೯೯.

೩೩೮. ಸನತ್ಕುಮಾರ ಚರಿತೆ, ಪದ್ಯ-೪೩, ಪು.ಸಂ.೧೫೪.

೩೩೯. ಚೆನ್ನಬಸವಪುರಾಣ, ಪದ್ಯ-೨೮೭, ಪು.ಸಂ.೬೪.

೩೪೦. ರಾಮನಾಥಚರಿತ, ಪದ್ಯ-೯೭, ಪು.ಸಂ.೧೮೭.

೩೪೧. ಶಿವತತ್ತ್ವಚಿಂತಾಮಣಿ, ಪದ್ಯ-೨೬, ಪು.ಸಂ.೧೦೦-೧೦೧.

೩೪೨. ತಮಿಳುನಾಡಿನ ಕನ್ನಡ ಶಾಸನಗಳು, ಕ.ವಿ.ವಿ.ಶಾ.ಸಂ:೪, ಶಾ.ಸಂಖ್ಯೆ: ೧೬-೧೭, ಪು.ಸಂ.೨೧-೨೫.

೩೪೩. ಚೆನ್ನಬಸವ ಪುರಾಣ, ಪೂರ್ವೋಕ್ತ.

೩೪೪. ರಾಮನಾಥಚರಿತ, ಪದ್ಯ-೩೫, ಪು.ಸಂ.೦೭.

೩೪೫. ಅದೇ, ಪದ್ಯ-೧೦೪, ಪು.ಸಂ.೧೨೧.

೩೪೬. ರಾಯವಾಚಕಮು, ಪು.ಸಂ.೯೦.

೩೪೭. ಬಾರ್ಬೋಸ, ಪ್ರ.ಕ.ಇಂ., ಪು.ಸಂ.೨೭೦.

೩೪೮. ಮೂರ್ತಿಶಿಲ್ಪ, ನೆಲೆ ಮತ್ತು ಹಿನ್ನೆಲೆ, ಪು.ಸಂ.೧೩೩

೩೪೯. ಅದೇ, ಪು.ಸಂ.೧೪೬.

೩೫೦. ಅದೇ, ಪು.ಸಂ.೧೪೭-೧೪೮.

೩೫೧. Suresh, K.M., ಪೂರ್ವೋಕ್ತ, Page No.96.

೩೫೨. ವಾದಿರಾಜರ ಶ್ರೀ ಬಾಲಕೃಷ್ಣಲೀಲೆ, ಪದ್ಯ-೨೧೬, ಪು.ಸಂ.೧೯.

೩೫೩. ಅದೇ, ಪದ್ಯ-೨೧೭, ಪು.ಸಂ.೧೯.

೩೫೪. ಅದೇ, ಪದ್ಯ-೨೨೮, ಪು.ಸಂ.೨೦.

೩೫೫. ಪುರಂದರದಾಸರು ಚಿತ್ರಿಸಿದ ಬಾಲಕೃಷ್ಣ, ಪು.ಸಂ.೧೩.

೩೫೬. ವಾದಿರಾಜರ ಶ್ರೀಕೃಷ್ಣ ಬಾಲಲೀಲೆ, ಪದ್ಯ-೪೮, ಪ.ಸಂ.೪೧.

೩೫೭. ಅದೇ, ಪದ್ಯ-೪೮೨.

೩೫೮. ಅದೇ, ಪದ್ಯ-೪೮೩.

೩೫೯. ಪರಮಶಿವಮೂರ್ತಿ,ಡಿ.ವಿ.(ಸಂ)., ಪ್ರೌಢದೇವರಾಯನ ಶಾಸನಗಳು, ಶಾ.ಸಂ.೧೫೬.

೩೬೦. ಅದೇ, ಶಾ.ಸಂ.೨೮, ಪು.ಸಂ.೫೧೧.

೩೬೧. ಕೃಷ್ಣದೇವರಾಯನ ಶಾಸನಗಳು, ಶಾ.ಸಂ.೦೪, ಪು.ಸಂ.೦೬-೧೧.

೩೬೨. ಅದೇ, ಶಾ.ಸಂ.೪೨, ಪು.ಸಂ.೮೪-೮೫.

೩೬೩. ರಾಯವಾಚಕಮು, ಪು.ಸಂ.೯೦.

೩೬೪. ಪ್ರೌಢದೇವರಾಯನ ಶಾಸನಗಳು, ಶಾ.ಸಂ.೪೯, ಪು.ಸಂ.೯೫.

೩೬೫. ಅದೇ, ಶಾ.ಸಂ.೦೭, ಪು.ಸಂ.೧೨೨.

೩೬೬. ಅದೇ, ಶಾ.ಸಂ.೦೭, ಪು.ಸಂ.೪೮೩-೮೪.

೩೬೭. ಕೃಷ್ಣದೇವರಾಯನ ಶಾಸನಗಳು, ಶಾ.ಸಂ.೪೨, ಪು.ಸಂ.೮೪-೮೫.

೩೬೮. ಅದೇ, ಶಾ.ಸಂ.೬೪, ಪು.ಸಂ.೧೨-೨೭.

೩೬೯. ಅದೇ, ಶಾ.ಸಂ.೩೬, ಪು.ಸಂ.೭೧-೭೩.

೩೭೦. ಸಿಂದಗಿ ರಾಜಶೇಖರ, ೧೯೯೬, ತಿರುಪತಿಯಲ್ಲಿರುವ ಕೃಷ್ಣದೇವರಾಯ ಮತ್ತು ಅವನ ರಾಣಿಯರ ಕಂಚಿನ ವಿಗ್ರಹಗಳು-ಒಂದು ಟಿಪ್ಪಣಿ, ವಿಜಯನಗರ ಅಧ್ಯಯನ ಸಂ.೦೧, ಪು.ಸಂ.೩೦.

೩೭೧. ಕೃಷ್ಣದೇವರಾಯನ ಶಾಸನಗಳು, ಶಾ.ಸಂ.೩೦೮, ಪು.ಸಂ.೫೮೨-೮೩.

೩೭೨. ಮಹೇಶ್, ಕೆ., ಕೃಷ್ಣದೇವರಾಯನ ಕಾಲದ ವೈಷ್ಣವ ದೇವಾಲಯಗಳು, ಪು.ಸಂ.೧೭೯.

೩೭೩. ಕೃಷ್ಣದೇವರಾಯನ ಶಾಸನಗಳು, ಶಾ.ಸಂ.೩೧೧, ಪು.ಸಂ.೫೮೬.

೩೭೪. ಅದೇ, ಶಾ.ಸಂ:೩೧೩, ಪು.ಸಂ.೫೮೮.

೩೭೫. ಅದೇ, ಶಾ.ಸಂ:೩೧೫, ಪು.ಸಂ.೫೯೧.

೩೭೬. ಅದೇ, ಶಾ.ಸಂ:೩೧೭, ಪು.ಸಂ.೫೯೪.

೩೭೭. ಅದೇ, ಶಾ.ಸಂ:೩೨೩, ಪು.ಸಂ.೬೦೮.

೩೭೮. ಅದೇ, ಶಾ.ಸಂ:೩೨೪, ಪು.ಸಂ.೬೦೯-೧೦.

೩೭೯. ಅದೇ, ಶಾ.ಸಂ:೩೨೬, ಪು.ಸಂ.೬೧೩-೧೪.

೩೮೦. ಅದೇ, ಶಾ.ಸಂ:೩೨೭, ಪು.ಸಂ.೬೧೫-೧೭.

೩೮೧. ಅದೇ, ಶಾ.ಸಂ:೩೩೨, ಪು.ಸಂ.೬೨೪-೨೫.

೩೮೨. ರಾಯವಾಚಕಮು, ಪು.ಸಂ.೯೧.

೩೮೩. ತಮಿಳುನಾಡಿನ ಕನ್ನಡ ಶಾಸನಗಳು, ಕ.ವಿ.ವಿ.ಶಾ.ಸಂ-೦೪, ಪು.ಸಂ.೨೧-೨೨.

೩೮೪. ಅದೇ, ಶಾ.ಸಂ.೧೭, ಪು.ಸಂ.೨೪-೨೫.

೩೮೫. ಅದೇ, ಶಾ.ಸಂ.೧೮, ಪು.ಸಂ.೨೫.

೩೮೬. ಅದೇ, ಶಾ.ಸಂ.೨೯, ಪು.ಸಂ.೪೪.

೩೮೭. ಅದೇ, ಶಾ.ಸಂ.೩೦, ಪು.ಸಂ.೪೫.

೩೮೮. ರಾಮಚಂದ್ರರಾವ್, ಸಾ.ಕೃ., ತಿರುಪತಿ ತಿಮ್ಮಪ್ಪ, ಪು.ಸಂ.೧೭೫-೭೬.

೩೮೯. Subramanya Sastry, Inscription of Saluva Narasimha's Time, ಶಾ.ಸಂ.೧೮, ಪು.ಸಂ.೨೮.

೩೯೦. ಮೂರ್ತಿಶಿಲ್ಪ: ನೆಲೆ ಮತ್ತು ಹಿನ್ನೆಲೆ, ಪು.ಸಂ.೭೭.

೩೯೧. ಅದೇ, ಪು.ಸಂ.೮೪-೮೫.

೩೯೨. ಅದೇ, ಪು.ಸಂ.೮೫.

೩೯೩. ಅದೇ, ಪು.ಸಂ.೮೭.

೩೯೪. Vasudevan, C.S., Report on the Excavations at HAMPI(1991-2010), P.No.09.

೩೯೫. ಮೂರ್ತಿಶಿಲ್ಪ: ನೆಲೆ ಮತ್ತು ಹಿನ್ನೆಲೆ, ಪು.ಸಂ.೧೯೭.

೩೯೬. ಅದೇ.

೩೯೭. ಅದೇ, ಪು.ಸಂ.೩೨೪.

೩೯೮. ಕೌಟಲ್ಯನ ಅರ್ಥಶಾಸ್ತ್ರ, ಪು.ಸಂ.೧೮೦.

೩೯೯. ಕ್ಷೇತ್ರಕಾರ್ಯದ ವರದಿ.

೪೦೦. ಪಾಯೇಸ್, ಪ್ರ.ಕ.ಇಂ., ಪು.ಸಂ.೩೩೧.

೪೦೧. ನಿಕಿಟಿನ್, ಪ್ರ.ಕ.ಇಂ., ಪು.ಸಂ.೧೬೬.

೪೦೨. Vasudevan, C.S., ಪೂರ್ವೋಕ್ತ, P.No.10.

೪೦೩. ಪಾಯೇಸ್, ಪ್ರ.ಕ.ಇಂ., ಪು.ಸಂ. ೩೪೫-೪೬.

೪೦೪. ಕಂಠೀರವನರಸರಾಜ ವಿಜಯ, ಪದ್ಯ – ೯೩, ಪು.ಸಂ.೪೪೯.

೪೦೫. ಪಾಯೇಸ್, ಪೂರ್ವೋಕ್ತ, ಪು.ಸಂ.೩೪೮

೪೦೬. ಗಂಗಾದೇವಿಯ ಮಧುರಾವಿಜಯಂ, ಕುಶಲಪ್ಪಗೌಡ(ಅನು)., ಪದ್ಯ-೪೨೫, ಪು.ಸಂ.೫೮

೪೦೭. ರಾಮನಾಥಚರಿತೆ, ಪದ್ಯ-೬೨, ಪು.ಸಂ.೩೮೬.

೪೦೮. ಅದೇ, ಪದ್ಯ-೬೪, ಪು.ಸಂ.೩೮೭.

೪೦೯. ಅದೇ.

೪೧೦. ಪಾಯೇಸ್, ಪ್ರ.ಕ.ಇಂ., ಪು.ಸಂ.೩೪೯-೫೦.

೪೧೧. ನ್ಯೂನಿಜ್, ಪ್ರ.ಕ.ಇಂ., ಪು.ಸಂ.೩೬೭.

೪೧೨. ಸೋಮಶೇಖರ್,ಎಸ್.ವೈ., ಪೂರ್ವೋಕ್ತ, ಪು.ಸಂ.೧೬೧-೬೨.

೪೧೩. ನ್ಯೂನಿಜ್, ಪೂರ್ವೋಕ್ತ, ಪು.ಸಂ.೩೬೭.

೪೧೪. ರಾಮನಾಥ ಚರಿತ, ಪದ್ಯ-೧೧೬, ಪು.ಸಂ.೩೭೪.

೪೧೫. ಅಬ್ದುರ್ ರಜಾಕ್, ಮರೆತುಹೋದ ಮಹಾಸಾಮ್ರಾಜ್ಯ ವಿಜಯನಗರ, ಪು.ಸಂ.೯೪.

೪೧೬. ಅಬ್ದುರ್ ರಜಾಕ್, ಪ್ರ.ಕ.ಇಂ., ಪು.ಸಂ.೧೫೦-೫೧.

೪೧೭. ಅದೇ.

೪೧೮. ಪಾಯೇಸ್, ಪ್ರ.ಕ.ಇಂ., ಪು.ಸಂ.೩೫೦.

೪೧೯. ಕಂಠೀರವ ನರಸರಾಜ ವಿಜಯ, ಪದ್ಯ-೦೩, ಪು.ಸಂ.೪೧೫.

೪೨೦. ಅದೇ, ಪದ್ಯ-೨೮, ಪು.ಸಂ.೪೩೮.

೪೨೧. ಅದೇ, ಪದ್ಯ-೧೦೨, ಪು.ಸಂ.೪೫೧.

೪೨೨. ಪರಮಶಿವಮೂರ್ತಿ, ಡಿ.ವಿ(ಸಂ)., ಕೃಷ್ಣದೇವರಾಯನ ಶಾಸನಗಳು, ಪು.ಸಂ. ೧೩೮-೩೯.

೪೨೩. 'ಅಯನ ಗಜಛಾಯಪಥಕ' ಎಂಬ ಪದಕ್ಕೆ ನಿಘಂಟಿನ ಅರ್ಥ-ಅಯನ- ಚಲಿಸುವುದು, ಮಾರ್ಗ, ಗಜ-ಆನೆ, ಛಾಯ-ನೆರಳು ಕನ್ನಡಿ ಮತ್ತು ಲಾಂಛನ, ಪಥ-ಮೆರವಣಿಗೆ ಅಥವಾ ಪಥಸಂಚಲನ, ಪಥಿಕ-ಪ್ರಯಾಣಿಕ. ಇಲ್ಲಿ ಗಜಛಾಯಾಪಥಕ ಎಂಬುದಕ್ಕೆ ಉತ್ಸವ ಮೂರ್ತಿಯನ್ನು ಹೊತ್ತು ಮೆರವಣಿಗೆ ಸಾಗುವ ಗಜ ಎಂದರ್ಥ ಬರುತ್ತದೆ.

೪೨೪. ಶೋಭಾ, ಹೊಯ್ಸಳ ಶಿಲ್ಪಗಳಲ್ಲಿ ಆನೆಗಳಿಗೆ ರಕ್ಷಣಾ ವ್ಯವಸ್ಥೆಯ ಚಿತ್ರಣ(ಲೇಖನ), ಇತಿಹಾಸ ದರ್ಪಣ, ಸಂ.೨೬, ೨೦೧೧, ಪು.ಸಂ.೧೧೮.

೪೨೫. ಕೌಟಲ್ಯನ ಅರ್ಥಶಾಸ್ತ್ರ, ಪು.ಸಂ.೧೯೧.

೪೨೬. ಬಾರ್ಬೋಸ, ಪ್ರ.ಕಂ.ಇ., ಪು.ಸಂ.೩೨೫.

೪೨೭. ಗಂಗಾದೇವಿ ವಿರಚಿತ ಮಧುರಾವಿಜಯಂ, ಪದ್ಯ-೪೮, ಪು.ಸಂ.೫೬.

೪೨೮. ನಿಕಿಟಿನ್, ಪ್ರ.ಕಂ.ಇಂ, ಪು.ಸಂ.೧೬೨.

೪೨೯. ಪಾಯೇಸ್, ಪ್ರ.ಕಂ.ಇಂ., ಪು.ಸಂ.೩೫೦.

೪೩೦. ನ್ಯೂನಿಜ್, ಪ್ರ.ಕಂ.ಇಂ., ಪು.ಸಂ.೩೬೨.

೪೩೧. ಶ್ರೀಕಂಠಯ್ಯ, ಎಸ್., ಪೂರ್ವೋಕ್ತ, ಪು.ಸಂ.೧೨೫-೧೨೬.

೪೩೨. Vasudevan, C.S., ಪೂರ್ವೋಕ್ತ, Vol - 1, P.No.1-10.

ಅಧ್ಯಾಯ ನಾಲ್ಕು : ವಸ್ತ್ರ ಮತ್ತು ಆಭರಣಗಳ ತಯಾರಿಕಾ ವರ್ಗ

೪.೧. ವಸ್ತ್ರ ತಯಾರಿಕಾ ವರ್ಗ/ನೇಕಾರ ಸಮುದಾಯ

೪.೨. ಆಭರಣ ತಯಾರಿಕಾ ವರ್ಗ/ಅಕ್ಕಸಾಲಿಗ ಸಮುದಾಯ

ವಸ್ತ್ರ ಮತ್ತು ಆಭರಣಗಳ ತಯಾರಿಕಾ ವರ್ಗ

ವಸ್ತ್ರ ಮತ್ತು ಆಭರಣಗಳ ವಿಷಯವನ್ನು ಆಧರಿಸಿದ ಈ ಅಧ್ಯಯನದಲ್ಲಿ ಅವುಗಳ ತಯಾರಿಕಾ ಸಮುದಾಯಗಳ/ವರ್ಗದವರ ಕುರಿತಾಗಿ ತಿಳಿಯುವುದು ಅಗತ್ಯ. ಹಾಗಾಗಿ ಆ ವರ್ಗದವರ ಬದುಕು, ಕೈಗಾರಿಕೆಗಳು, ಅವರ ಸಂಘಟನೆಗಳು/ಸಂಘಗಳು, ರಾಜಾಶ್ರಯ ಹಾಗೂ ತೆರಿಗೆ ಪದ್ಧತಿ ಮುಂತಾದ ಅಂಶಗಳನ್ನು ತಿಳಿಯುವುದು ಅತ್ಯವಶ್ಯಕ.

೪.೧. ವಸ್ತ್ರ ತಯಾರಿಕಾ ವರ್ಗ/ನೇಕಾರ ಸಮುದಾಯ

ನೇಕಾರಿಕೆ ಅತ್ಯಂತ ಪ್ರಾಚೀನ ವೃತ್ತಿ. ಇದು ಇತಿಹಾಸ ಪೂರ್ವದಿಂದ ನಾಗರೀಕತೆ ಮತ್ತು ಸಂಸ್ಕೃತಿಯೊಂದಿಗೆ ತಳಕು ಹಾಕಿಕೊಂಡು, ಸಾಮಾಜಿಕ ಜೀವನದಲ್ಲಿ ಪ್ರಮುಖ ಪಾತ್ರವಹಿಸಿದೆ. ದೇವರು ಆಕಾಶ ಮತ್ತು ಭೂಮಿಯನ್ನು ಮಗ್ಗ ಮಾಡಿ, ಸೂರ್ಯ-ಚಂದ್ರರನ್ನು ಹಾಸು-ಹೊಕ್ಕನ್ನಾಗಿ ಸೃಷ್ಟಿಯನ್ನು ನೇಯ್ದಿದ್ದಾನೆ ಎಂಬ ನಂಬಿಕೆಯಿದೆ. ನೇಕಾರಿಕೆ ಕೃಷಿಯನ್ನು ಅವಲಂಬಿಸಿದ ವೃತ್ತಿಯಾಗಿದೆ.

ಪ್ರಾಚೀನ ಕಾಲದಿಂದಲೂ ಆಂಧ್ರ, ಕರ್ನಾಟಕ ಮತ್ತು ತಮಿಳುನಾಡು ಪ್ರಾಂತ್ಯಗಳು ಜವಳಿ ಉತ್ಪಾದನೆಯ ಮುಖ್ಯ ಕೇಂದ್ರಗಳಾಗಿವೆ. ಚೋಳರ ಕಾಲದಿಂದ ವಿಜಯನಗರ ಅರಸರ ಕಾಲದವರೆಗೂ ನೇಕಾರಿಕೆಗೆ ಪ್ರಚೋದನೆ ಮತ್ತು ಪ್ರೋತ್ಸಾಹ ದೊರೆಯಿತು. ಈ ನೇಕಾರರು ಸ್ಥಳೀಯ ಮತ್ತು ವಿದೇಶಿಯರ ಅಗತ್ಯಗಳನ್ನು ಗಮನದಲ್ಲಿಟ್ಟುಕೊಂಡು ವಸ್ತ್ರ ಗಳನ್ನು ಉತ್ಪಾದಿಸುತ್ತಿದ್ದರು.

ನೇಕಾರರಲ್ಲಿ ಒಳಪಂಗಡಗಳು

ನೇಕಾರರಲ್ಲಿ ಹಲವು ಒಳಪಂಗಡಗಳಿದ್ದವು. ದೇವಾಂಗ(ಪಟ್ವಗಾರ), ಜೇಡ, ಸಾಲಿಗ, ಕದಿರ, ಕೈಕೋಳರು ಮೊದಲಾದ ಒಳ ಪಂಗಡಗಳಿದ್ದವು. ಇವರು ನಿರ್ದಿಷ್ಟ ರೀತಿಯ ವಸ್ತ್ರಗಳನ್ನು ಸಿದ್ಧಪಡಿಸುತ್ತಿದ್ದರು. ಬಹುಶಃ ಆ ಪಂಗಡಗಳ ಕೆಲ ಹೆಸರುಗಳು ಅವರು ಸಿದ್ಧಪಡಿಸುತ್ತಿದ್ದ ವಸ್ತ್ರಗಳಿಂದಲೇ ಹೆಸರಿಸಿದ್ದುದು ತಿಳಿದುಬರುತ್ತದೆ.

ಕದಿರ ಕಾಯಕದವರು ಹತ್ತಿಯಿಂದ ನೂಲು ತಯಾರಿಸುವವರು. ಜೇಡರು ಹತ್ತಿ ಬಟ್ಟೆಗಳನ್ನು ನೇಯುವವರು. ದೇವಾಂಗದವರು ರೇಷ್ಮೆ ಬಟ್ಟೆಗಳನ್ನು ನೇಯುವವರಾಗಿದ್ದರು. ದೇವರಿಗೆ ಸಂಬಂಧಿಸಿದ ವಸ್ತ್ರಗಳನ್ನು ನೇಯುತ್ತಿದ್ದರಿಂದ ಇವರಿಗೆ 'ದೇವಾಂಗ' ಎಂದು ಹೆಸರು ಬಂದಿದೆ ಎಂಬುದಾಗಿ ನಂಬಲಾಗಿದೆ. ದೇವಾಂಗದವರನ್ನು ಪಟ್ಟಗಾರರು ಎಂದು ಕರೆಯುತ್ತಾರೆ. ಚಿಪ್ಪಿಗರು ಬಟ್ಟೆಗಳನ್ನು ಕತ್ತರಿಸಿ ಹೊಲಿಯುವವರಾಗಿದ್ದರು.

ಆಮುಕ್ತಮಾಲ್ಯದಲ್ಲಿ ನೇಕಾರರ ಕುರಿತು, "ವಿಜಯನಗರ ಕಾಲದಲ್ಲಿ ಕೈಗಾರಿಕೆ ಮುಂದುವರಿದಿತ್ತು ರಾಟೆಗಳ ಮೇಲೆ ನೂಲು ತೆಗೆಯುತ್ತಿದ್ದರು. ಅವರನ್ನು ಪಟ್ಟೆಗಾರರು ಎಂದು ಕರೆಯುತ್ತಿದ್ದರು. ಅವರಲ್ಲಿ ಸಾಲೆ, ಪದ್ಮಸಾಲೆ, ಪಟ್ಟಸಾಲೆ ಎಂಬ ಮೂರು ವಿಧವಿದ್ದರು"[೧] ಎಂಬುದಾಗಿ ತಿಳಿಸಿದೆ.

ಸೆಟ್ಟಿಗಳು ಈ ನೇಕಾರರಲ್ಲಿ ನೇಯ್ದ ಬಟ್ಟೆಗಳನ್ನು ಕೊಂಡು ಒಂದು ಕಡೆಯಿಂದ ಮತ್ತೊಂದು ಕಡೆಗೆ ಮಾರಾಟ ಮಾಡುತ್ತಿದ್ದ ನೇಕಾರ ಸೆಟ್ಟಿಗಳಿರುವುದನ್ನು ಲಕ್ಷ್ಮೇಶ್ವರ ಶಾಸನದಿಂದ ತಿಳಿದುಬರುತ್ತದೆ.[೨] ದೂಸಿಗ ಎಂಬುವವರು ಸೀರೆ ವ್ಯಾಪಾರ ಮಾಡುತ್ತಿದ್ದರು.[೩]

ವಿಜಯನಗರ ಕಾಲದ ತಮಿಳುನಾಡಿನಲ್ಲಿ ಕೈಕೋಳರು ಪ್ರಮುಖ ನೇಯ್ಗೆ ಸಮುದಾಯವಾಗಿದ್ದರು. ಬಾರ್ಬೋಸ ಹೇಳುವಂತೆ, ಸಾಲಿಗರು ಮಲಬಾರ್ ತೀರ ಪ್ರದೇಶದಲ್ಲಿ ಪ್ರಭಾವಿ ಸಮುದಾಯವಾಗಿದ್ದರು. ಅವರನ್ನು ಬಾರ್ಬೋಸ 'ಚಲಿಯನ್ಸ್'[೪] ಎಂಬುದಾಗಿ ಕರೆದಿದ್ದಾನೆ.

ವಿಜಯನಗರ ಕಾಲದಲ್ಲಿ ವಿವಿಧ ವೃತ್ತಿಯರಿಗೆಂದೇ ಪ್ರತ್ಯೇಕ ಕೇರಿಗಳಿದ್ದವು. ನೇಕಾರ ಸಮುದಾಯದವರು ಪ್ರತ್ಯೇಕ ಬೀದಿಗಳಲ್ಲಿ ವಾಸವಾಗಿದ್ದರು ಎಂಬುದನ್ನು ಅಬ್ದುರ್ ರಜಾಕ್ ತಿಳಿಸುತ್ತಾನೆ. ಅವನು ವಿವರಿಸುವಂತೆ, "ಕ್ರಿ.ಶ. ೧೪೨೮ರಲ್ಲಿ ಎರಡನೆ ದೇವರಾಯನ ಆಳ್ವಿಕೆಯ ಕಾಲದಲ್ಲಿ 'ಮಡಂಬಕಮಂ' ನಲ್ಲಿ ಕೈಕೋಳರ ಪ್ರತ್ಯೇಕ ಕೇರಿಯಿತ್ತು".[೫] ಶ್ರೀಕೃಷ್ಣದೇವರಾಯನ ಕಾಲದಲ್ಲಿ ಸೇಲಂ ಜಿಲ್ಲೆಯ ತಿರುಚೆಂಗೋಡುನಲ್ಲಿ ಕೈಕೋಳರ ಕೇರಿಯ ಮಗ್ಗದ ಮೇಲೆ ವಿಧಿಸಿದ್ದ ಮಗ್ಗ ತೆರಿಗೆಯನ್ನು ಮನ್ನಾ ಮಾಡಲಾಗಿತ್ತು.[೬] ಈ ಸ್ಥಳ ಸೇಲಂ ಜಿಲ್ಲೆಯಲ್ಲಿ ಸಿದ್ಧ ನೇಯ್ಗೆ ಕೇಂದ್ರವಾಗಿತ್ತು.

ಹೀಗೆ ಗ್ರಾಮ ಪಟ್ಟಣಗಳಲ್ಲಿ ನೇಕಾರರು ವಾಸಿಸುತ್ತಿದ್ದ ಪ್ರತ್ಯೇಕ ಕೇರಿಗಳು ಇದ್ದವು ಎಂಬುದು ಮೇಲಿನ ವಿವರಣೆಗಳಿಂದ ಅರ್ಥವಾಗುತ್ತದೆ. ಅಲ್ಲದೆ ಈ ನೇಕಾರರು ದೇವತೆಗಳಿಗೆ ಹಾಗೂ ರಾಜರಿಗೆ ಬೆಲೆಬಾಳುವ ವೈವಿಧ್ಯದ ವಸ್ತ್ರಗಳನ್ನು ನೇಯ್ದು ಒದಗಿಸ ಬೇಕಾಗಿದ್ದರಿಂದ, ಅವರು ದೇವಾಲಯ ವಲಯದಲ್ಲಿ ವಾಸಿಸುವ ಅವಕಾಶವು ಒದಗಿತ್ತು. ಕೆಲವೊಮ್ಮೆ ಮಗ್ಗ ತೆರಿಗೆಗಳಲ್ಲಿ ವಿನಾಯಿತಿ ದೊರೆತಿದ್ದತಲ್ಲದೇ ರಾಜರಿಂದ ಹಲವು ಸೌಲಭ್ಯ ಗಳನ್ನು ಪಡೆದವರಾಗಿದ್ದರು. ಹೀಗೆ ನೇಕಾರರ ಒಳಪಂಗಡಗಳಲ್ಲಿ ವಿಂಗಡಣೆಗಳು ಇದ್ದರೂ ರಾಜರು ತೆರಿಗೆಯನ್ನು ಹೆಚ್ಚಿಸಿದಾಗ, ಅವರು ಒಳಪಂಗಡದ ಭೇದ ಮರೆತು ಪ್ರತಿಭಟಿಸಿದ ಪ್ರಸಂಗಗಳು ಉಂಟು. ವಿಜಯನಗರದ ಎರಡನೆ ಹರಿಹರನು ತೆರಿಗೆ ಹೆಚ್ಚಿಸಿದಾಗ ನೇಕಾರರು ತೀವ್ರವಾಗಿ ಪ್ರತಿಭಟಿಸಿ, ದೊರೆಗಳೇ ಅಂತಿಮವಾಗಿ ಸೋತು ತೆರಿಗೆ ಕಡಿಮೆ ಮಾಡಿದರು.[೭]

ಆರಾಧನೆ :

ನೇಕಾರರಿಗೆ ಮಾರ್ಕಂಡೇಯ ಪುರಾಣವೇ ಮೂಲವಾದುದು. ಇವರು ಶಿವ ಸಂಸ್ಕೃತಿಯ ಆರಾಧಕರು.

ವಿಜಯನಗರ ಸಾಮ್ರಾಜ್ಯದ ವಿವಿಧ ಭಾಗಗಳಲ್ಲಿ ಹತ್ತಿಯನ್ನು ಬೆಳೆಯಲಾಗುತ್ತಿತ್ತು. ಹತ್ತಿಯಿಂದ ನೂಲನ್ನು ತೆಗೆದು, ಬಟ್ಟೆಯನ್ನು ನೇಯುವ ಕೇಂದ್ರಗಳು ರಾಜ್ಯದಾದ್ಯಂತ ಇದ್ದವೆಂದು ಟೆವೆರ್ನಿಯರ್ ತಿಳಿಸುತ್ತಾನೆ. ನೇಕಾರಿಕೆಯ ವೃತ್ತಿ ದೈಹಿಕ ಶ್ರಮವನ್ನು ಹೆಚ್ಚಾಗಿ ಅವಲಂಬಿಸಿದೆ. ಮಕ್ಕಳಿಂದ ಹಿಡಿದು ವೃದ್ಧರವರೆಗೆ ಹತ್ತಿಯಿಂದ ಬೀಜ ಬೇರ್ಪಡಿಸುವುದರಿಂದ ಹಿಡಿದು ಸಿದ್ಧವಸ್ತು ತಯಾರಿಸುವವರೆಗೆ ಎಲ್ಲರ ಸಹಕಾರ ಅವಶ್ಯಕ. ಹಾಗಾಗಿ ಮಕ್ಕಳು, ಸ್ತ್ರೀಯರು ಮತ್ತು ವೃದ್ಧರು ಕೆಲಸದಲ್ಲಿ ತೊಡಗಿಸಿಕೊಳ್ಳುವುದು ಅವಶ್ಯ ಕವಾಗಿತ್ತು. ಈ ಹಿನ್ನೆಲೆಯಲ್ಲಿಯೇ ಇದೊಂದು ರೀತಿಯ ಕೌಟುಂಬಿಕ ವೃತ್ತಿಯಾಗಿತ್ತು. ಈ ಶ್ರಮದ ಕಾರಣವಾಗಿ ಒಂದು ಗಾದೆ ಮಾತು ಪ್ರಚಲಿತದಲ್ಲಿದೆ. ಅದು 'ದೇವಾಂಗದವರ ಮನೆಯಲ್ಲಿ ದೆವ್ವಗಳಿಗೂ ಕೆಲಸ ಉಂಟು' ಎಂಬುದಾಗಿದೆ.

ವಸ್ತ್ರಗಳ ವೈವಿಧ್ಯತೆ

ಮಕ್ಕಳಿಂದ ಹಿಡಿದು ಸ್ತ್ರೀ ಪುರುಷರಿಗೆ (ಸಾಮಾನ್ಯರಿಂದ ಹಿಡಿದು ರಾಜಮನೆತನ ದವರೆಗೂ) ಹಾಗೂ ದೇವ-ದೇವತೆಗಳಿಗೆ ವಿವಿಧ ಸಂದರ್ಭಗಳಿಗೆ ಧರಿಸಲು ಬೇಕಾಗುವಂತಹ ವಸ್ತ್ರಗಳನ್ನು ಈ ನೇಕಾರರು ನೇಯುತ್ತಿದ್ದರು. ಕ್ರಿ.ಶ.೧೩೮೨ರ ಒಂದನೇ ಬುಕ್ಕನ ಕಾಲದ ಶಾಸನವು ವಿವಿಧ ರೀತಿಯ ವಸ್ತ್ರಗಳನ್ನು ಹೆಸರಿಸುತ್ತದೆ. ಅದರಂತೆ, ದೇವಗಿರಿ ಜವಳಿ, ಮದುವೆಯ ಜವಳಿ, ಬಿಳಿ ಜವಳಿ, ಎಂಬತ್ತರ ಮಲವಿ (೮೦ ಯಾರ್ಡ್ ಬಟ್ಟೆ), ಪಟ್ಟನೂಲು ಜವಳಿ(ಪಟ್ಟನೂಲು ದಾರದಿಂದ ತಯಾರಿಸಿದ್ದು), ನೂಲು ಮಲವಿ (ಹತ್ತಿ ನೂಲಿನಿಂದ ತಯಾರಿಸಿದ್ದು), ಹತ್ತಿಯ ಮಲವಿ, ರತ್ನಗಂಬಳಿ, ಗೋಣಿಯ-ಪಟ್ಟಾಯ ಮಲವಿ[೮] ಮುಖ್ಯವಾಗಿವೆ. ಈ ಶಾಸನದ ಸಾಲುಗಳಿಂದ ವಸ್ತ್ರದ ಉತ್ಪಾದನೆ, ವಸ್ತ್ರಗಳ ಉದ್ದ, ವಸ್ತ್ರಗಳ ತಯಾರಿಕೆಗೆ ಬಳಸುತ್ತಿದ್ದ ನೂಲಿನ ವಿವಿಧ ಹೆಸರುಗಳು ತಿಳಿದುಬರುತ್ತದೆ.

ನೇಕಾರರು ಕಂಬಳಿ, ಜಮಖಾನ, ಪೇಟ, ಸೀರೆ, ಧೋತಿ, ಮಂಚಗಳಿಗೆ ಪಟ್ಟಿಗಳನ್ನು ತಯಾರಿಸುತ್ತಿದ್ದರು. ನ್ಯೂನಿಜ್ ಹೇಳುವಂತೆ, ರಾಜರು ಮಲಗುವ ಮಂಚಕ್ಕೆ ಹಾಸಿಗೆಯನ್ನು ರೇಷ್ಮೆಯಿಂದ ಮಾಡಿರುತ್ತಾರೆ. ಹಾಸಿಗೆಯ ಮೇಲೆ ಹಾಸುವ ಹೊದಿಕೆ ರೇಷ್ಮೆ ಬಟ್ಟೆಯಾಗಿರುವುದು.[೯]

ಹೀಗೆ ನೇಕಾರರು ಹತ್ತಿ, ರೇಷ್ಮೆ, ಉಣ್ಣೆಯ ಬಟ್ಟೆಗಳು ಹಾಗೂ ಅವುಗಳ ವಿವಿಧ ವಿನ್ಯಾಸಗಳನ್ನು ಮೂಡಿಸಿ ವಸ್ತ್ರಗಳನ್ನು ನೇಯುತ್ತಿದ್ದರು. ಹಬ್ಬ ಹರಿದಿನ, ಮದುವೆ, ಆಡಳಿತ ವರ್ಗ, ಆಸ್ಥಾನದವರ್ಗದವರಿಗೆ ಅಗತ್ಯವಾದ ವಸ್ತ್ರಗಳು, ಧಾರ್ಮಿಕ ಕಾರ್ಯಗಳಿಗೆ ಬೇಕಾದ ವಸ್ತ್ರಗಳು ಹೀಗೆ ವಿವಿಧ ಸಂದರ್ಭಗಳನ್ನು ಸೂಚಿಸುವ ವಸ್ತ್ರಗಳನ್ನು ನೇಯುತ್ತಿದ್ದರು. ಹಾಗಾಗಿ ನೇಕಾರರು ನೇಯುತ್ತಿದ್ದ ವಸ್ತ್ರ ವೈವಿಧ್ಯತೆಯು ಜಾತಿ, ವೃತ್ತಿ, ಧರ್ಮ, ಲಿಂಗ ಸಾಮಾಜಿಕ ಹಾಗೂ ಆರ್ಥಿಕ ಅಂತಸ್ತನ್ನು ಪ್ರತಿನಿಧಿಸುತ್ತಿದ್ದವು.

ವಸ್ತ್ರಗಳಿಗೆ ಬಣ್ಣಹಾಕುವುದು

ಸಂಘಂ ಸಾಹಿತ್ಯವು ಬಟ್ಟೆಗಳಿಗೆ ಹಾಕುವ ಬಣ್ಣಗಳನ್ನು ಉಲ್ಲೇಖಿಸುತ್ತದೆ. ನೀಲಿಬಣ್ಣ ಮತ್ತು ಸಸ್ಯಜನ್ಯ ಬಣ್ಣಗಳನ್ನು ಬಳಸುತ್ತಿದ್ದ ಬಗ್ಗೆ ಮಿತಾಕ್ಷರ ಸಂಹಿತೆ ಮತ್ತು ಮನಸೋಲ್ಲಾಸ ಕೃತಿಗಳಲ್ಲಿ ಉಲ್ಲೇಖಿಸಲಾಗಿದೆ. ಆಮುಕ್ತಮಾಲ್ಯದಲ್ಲಿ ತಿಳಿಸಿರುವಂತೆ, "ವಸ್ತ್ರಗಳಿಗೆ ದೇಶೀ ಬಣ್ಣವನ್ನೇ ಹೆಚ್ಚಾಗಿ ಉಪಯೋಗಿಸುತ್ತಿದ್ದರು. ಅದರಲ್ಲಿ ಹೆಚ್ಚಾಗಿ ನೀಲಿಯ ಬಣ್ಣವನ್ನೇ ಉಪಯೋಗಿಸುತ್ತಿದ್ದರು. ಮಂಜಟಿ, ಅಳಲೆಕಾಯಿ, ಇಂಗಲೀಕ ಮುಂತಾದವುಗಳನ್ನು ಬಣ್ಣಗಳಿಗೆ ಬಳಸುತ್ತಿದ್ದರು".[೧೦]

ನೀಲಿ ಮತ್ತು ಮಂಜಿಷ್ಠ ಬಣ್ಣವನ್ನು ವಾರಂಗಲ್ಲಿನಿಂದ ತರಿಸಿಕೊಳ್ಳುತ್ತಿದ್ದರು. ಪೆಗು ದೇಶದಿಂದ ಕೆಂಪು ಬಣ್ಣವನ್ನು ಜಿದ್ದಾದ(ಮಿಡಲ್ ಈಸ್ಟ್) ಮುಖಾಂತರ ಕೆಂಪು ಮತ್ತು ಇತರ ಬಣ್ಣಗಳನ್ನು ಆಮದು ಮಾಡಿಕೊಳ್ಳುತ್ತಿದ್ದರು.

ನೇಕಾರರ ಸಂಘ/ಸಂಘಟನೆ

ಈ ನೇಕಾರರು ಆಯಾ ಗ್ರಾಮಗಳಲ್ಲಿ ರಚಿಸಿಕೊಂಡ ಸಂಘದ ಹೆಸರು 'ಸಾಲೆ ಸಾಸಿರ್ವರು'. ಈ ಸಂಘದ ಪರ್ಯಾಯ ಪದ ಸಮಯ ಸಾಲಿಗರು, 'ಜೇಡಗೊತ್ತಳಿ', 'ಪಟ್ಟಗಾಜಿಸೇಣಿ' ಅಥವಾ 'ಪಟ್ಟಗಾರ ಸಮಯ'[೧೧] ಎಂಬ ವಿವಿಧ ಹೆಸರಿನ ಸಂಘಗಳನ್ನು ರಚಿಸಿಕೊಂಡಿದ್ದರು. ರಾಜ ತೆರಿಗೆಯನ್ನು ಹೆಚ್ಚಿಸಿದಾಗ ಅದರ ವಿರುದ್ಧ ಒಟ್ಟಾಗಿ ಹೋರಾಟ ವನ್ನು ಮಾಡುತ್ತಿದ್ದರು.

ನೇಯ್ಗೆ ತಂತ್ರಜ್ಞಾನ

ಅಂದು ಕೃಷಿಯನ್ನು ಬಿಟ್ಟರೆ ಕೈಮಗ್ಗದಿಂದ ಬಟ್ಟೆಗಳನ್ನು ತಯಾರಿಸುವುದು ಪ್ರಮುಖ ಕೈಗಾರಿಕೆಯಾಗಿತ್ತು. ಹತ್ತಿಯಿಂದ ರಾಟೆಯಲ್ಲಿ ನೂಲು ತೆಗೆಯುತ್ತಿದ್ದರು. ರಾಟೆಯ ವಿವಿಧ ಭಾಗಗಳೆಂದರೆ: ಅಡಿಯ ಹಲಗೆ, ತೋರಣ ಗೊಂಬೆ, ಸೂತ್ರಕರ್ಣ ಮತ್ತು ಕದಿರು. ರಾಟೆಯನ್ನು ಕೈಯಲ್ಲಿ ಹಿಡಿದು ತಿರುಗಿಸುತ್ತ ನೂಲು ತೆಗೆಯುತ್ತಿದ್ದರು. ಆ ನೂಲು ಕದಿರಿ ನಲ್ಲಿ ಸುತ್ತಿಕೊಳ್ಳುತ್ತಿತ್ತು. ನೂಲು ತೆಗೆದು, ಬಿಡಿಸಿ ಸ್ವಚ್ಛ ಮಾಡಲು ಹಂಜಿಯನ್ನು ಉಪಯೋಗಿಸುತ್ತಿದ್ದರು. ನೂತ ನೂಲನ್ನು ನೇಯ್ಗೆಯವರಿಗೆ ಮಾರುತ್ತಿದ್ದರು. ನೂಲುವುದಕ್ಕಾಗಿ ಹತ್ತಿಯನ್ನು ಕೊಳ್ಳುತ್ತಿದ್ದರು. ಹತ್ತಿಯಿಂದ ನೂಲು ತೆಗೆಯುವವರನ್ನು ಕದರಿ ಕಾಯದವರು ಎಂದು ಕರೆಯುತ್ತಿದ್ದರು.[೧೨]

ನೂಲಿನಿಂದ ವಸ್ತ್ರವನ್ನು ನೇಯುವವರು ಜೇಡರು. ನೂಲನ್ನು ಗಂಜಿಯಲ್ಲಿ ಅದ್ದಿ ಅದನ್ನು 'ಹಾಸುವಣಿ' ಎಂಬ ಮರದ ಚೌಕಟ್ಟಿಗೆ ಕಟ್ಟುತ್ತಿದ್ದರು. ಹೀಗೆ ಕಟ್ಟಿದ ನೂಲನ್ನು ಹುರಿಗೊಳಿಸುವದಕ್ಕಾಗಿ ತಿರುಗಿಸುತ್ತಿದ್ದರು. ನೇಯುವುದಕ್ಕಾಗಿ ಮಗ್ಗದಲ್ಲಿ ಉದ್ದುದ್ದವಾಗಿ ಹಾಸಿದ ನೂಲಿನ ಹಾಸನ್ನು ಉಂಕಿ ಎಂದು ಕರೆಯುತ್ತಿದ್ದರು. ಹೀಗೆ ಉಂಕೆಯನ್ನು ಮಾಡುವಾಗ ಅದನ್ನು ಶುಭ್ರಗೊಳಿಸುವುದಕ್ಕೆ ಕುಂಚಿಗೆಯನ್ನು ಬಳಸುತ್ತಿದ್ದರು. ಮಗ್ಗದ ಹಾಸಿನ ಮೇಲೆ ಕಟ್ಟಬೇಕಾದ ನಿರ್ದಿಷ್ಟ ಸಂಖ್ಯೆಯ ನೂಲಿಗೆ 'ಅಣಿ' ಎಂಬ ಹೆಸರಿತ್ತು. ಇದನ್ನು ಮಗ್ಗದ ಮೇಲ್ಭಾಗದಲ್ಲಿ ಮತ್ತು ಕೆಳಭಾಗದಲ್ಲಿ ಜೋಡಿಸಿ ಕಟ್ಟುವುದನ್ನು 'ಅಣಿಕಟ್ಟು' ಎಂದು ಕರೆಯುತ್ತಾರೆ. ಉದ್ದುದ್ದವಾಗಿರುವ ನೂಲನ್ನು 'ಹಾಸು' ಎಂದು ಅಡ್ಡಡ್ಡವಾಗಿರುವ ನೂಲನ್ನು 'ಹೊಕ್ಕು' ಎಂದು ಈಗಿನ ಹೆಸರಿನಿಂದಲೇ ಆಗಲೂ

ಕರೆಯುತ್ತಿದ್ದರು. ಇವೆರಡೂ ಬೆರೆತು ವಸ್ತ್ರವಾಗುತ್ತಿತ್ತು. ಹೀಗೆ ಹಾಸು ಹೊಕ್ಕುಗಳನ್ನು ಸೇರಿಸಲು ಬಳಸುತ್ತಿದ್ದ ನೂಲಿನ ಉಪಕರಣವನ್ನು 'ಲಾಳಿ' ಎಂದೂ, ಲಾಳಿಯಲ್ಲಿ ಸೇರಿಸಲು ಹಾಕುತ್ತಿದ್ದ ನೂಲಿನ ಉಂಡೆ ಯನ್ನು 'ಕಂಡಿಕೆ' ಎಂದೂ, ಕಂಡಿಕೆಯನ್ನು ಸೇರಿಸುವುದಕ್ಕಾಗಿ ಉಪಯೋಗಿಸುತ್ತಿದ್ದ ಕೊಕ್ಕೆಯನ್ನು 'ಮುಳ್ಳು' ಅಥವಾ 'ಕಂಡಿಕೆಯ ಮುಳ್ಳು' ಎನ್ನುತ್ತಿದ್ದರು.

ಹೀಗೆ ದೈಹಿಕ ಶ್ರಮ ಮತ್ತು ಸಹನೆಯನ್ನು ಹೆಚ್ಚು ಬಯಸುವ ಈ ಕೆಲಸದಲ್ಲಿ ಸ್ತ್ರೀಯರು ಹೆಚ್ಚಾಗಿ ತೊಡಗಿಸಿಕೊಳ್ಳುತ್ತಿದ್ದರು. ಅಲ್ಲದೇ ಇಲ್ಲಿ ಕೂಲಿಯೂ ಕಡಿಮೆಯಿರುವ ಕಾರಣ ಪುರುಷರು ಹತ್ತಿಯಿಂದ ಬೀಜ ಬೇರ್ಪಡಿಸಿ, ನೂಲು ತೆಗೆಯುವ ಕಾರ್ಯದಲ್ಲಿ ಹೆಚ್ಚು ತೊಡಗಿಸಿಕೊಳ್ಳುತ್ತಿರಲಿಲ್ಲ.

ವ್ಯಾಪಾರ

ನೇಕಾರರು ತಾವು ನೇಯ್ದ ವಸ್ತ್ರವನ್ನು ಸಂತೆಗಳಲ್ಲಿ ಮಾರಾಟ ಮಾಡುತ್ತಿದ್ದರು. ಹಂಪಿಯ ಬಜಾರುಗಳಲ್ಲಿ ವಾರದ ಒಂದು ದಿನ ಸಂತೆ ನಡೆಯುತ್ತಿತ್ತು. ಆ ಸಂತೆಗಳಲ್ಲಿ ಇತರ ವಸ್ತುಗಳೊಂದಿಗೆ ವಸ್ತ್ರಗಳನ್ನು ಮಾರಾಟ ಮಾಡುತ್ತಿದ್ದರು ಎಂಬುದು ಬಾರ್ಬೋಸ ಮತ್ತು ಪಾಯೇಸ್‌ರವರ ಹೇಳಿಕೆಗಳಿಂದ ತಿಳಿದುಬರುತ್ತದೆ. ಇವರು ಹತ್ತಿಯ ವಸ್ತ್ರಗಳನ್ನು ಅಲ್ಲದೆ ರೇಷ್ಮೆಯ ವಸ್ತ್ರಗಳನ್ನು ನೇಯ್ದು ಮಾರಾಟ ಮಾಡುತ್ತಿದ್ದರು. ಇಂಥ ರೇಷ್ಮೆ ವ್ಯಾಪಾರಿಯನ್ನು 'ಪಟ್ವಾಯಿಲ' ಎಂದು, ರೇಷ್ಮೆ ಬಟ್ಟೆಯ ಅಂಗಡಿಯನ್ನು 'ಪಟ್ಟೆಯ ಅಂಗಡಿ' ಎಂದೂ ಕರೆಯುತ್ತಿದ್ದರು. ಈಗಿನಂತೆಯೇ ಹಿಂದೆ ರೇಷ್ಮೆ ವಸ್ತ್ರಗಳ ಪ್ರತ್ಯೇಕ ಮಳಿಗೆಗಳು ಇದ್ದುದು ತಿಳಿದುಬರುತ್ತದೆ.

ವ್ಯಾಪಾರಕ್ಕಾಗಿಯೇ ಜವಳಿ ವ್ಯಾಪಾರದ ಪ್ರತ್ಯೇಕ ಮಳಿಗೆಗಳಿದ್ದವು. ಆ ಕುರಿತು ಕಂಠೀರವನರಸರಾಜ ವಿಜಯದಲ್ಲಿ ಹೀಗೆ ವರ್ಣಿಸಿದೆ.

ಹಳದಿ ಪೊಪ್ಪಳಿ ಚಂದ್ರಗಾವಿ ಬೊಂಬೆಯ ಬಣ್ಣ
ಸಲಿಪಲ್ಲು ಹೊನ್ನ ತಗಡಿನ
ಬೆಳುವಟ್ಟೆ ನಾನಾವರ್ಣದ
ಜವಳಿಯ ಮಳಿಗೆಗೆಳಸೆದುವರ್ತಿಯಲ್ಲಿ[೧೩]

ಹೀಗೆ ವಿಜಯನಗರ ಕಾಲದಲ್ಲಿ ವಸ್ತ್ರ ವ್ಯಾಪಾರಕ್ಕೆ ಸಂಬಂಧಿಸಿದಂತೆ ವಿವಿಧ ಬಣ್ಣ, ವಿನ್ಯಾಸವಿರುವ ಹಾಗೂ ಬಟ್ಟೆಗಳಿಗೆ ಚಿತ್ರಗಳನ್ನು ಒತ್ತುವಂತಹ ಪ್ರತ್ಯೇಕ ಅಂಗಡಿ ಮಳಿಗೆಗಳಿದ್ದವು ಎಂಬುದಾಗಿ ತಿಳಿದು ಬರುತ್ತದೆ.

ರಫ್ತು

ಭಾರತದಲ್ಲಿ ಉತ್ಪಾದಿಸುತ್ತಿದ್ದ ಹತ್ತಿ ಬಟ್ಟೆಯನ್ನು ಚೈನಾ ದೇಶಕ್ಕೆ, ಹತ್ತಿ ನೂಲನ್ನು ಬರ್ಮಾಗೆ, ಇಂಡಿಗೋವನ್ನು ಪರ್ಶಿಯಾಗೆ, ಸಿದ್ಧಗೊಳಿಸಿದ ಹತ್ತಿ ಬಟ್ಟೆಯನ್ನು ಓರ್ಮುಜ್, ಅರೇಬಿಯಾ, ಮಲಕ್ಕಾ, ಪೆಗು, ಸುಮಾತ್ರಗಳಿಗೆ ರಫ್ತುಮಾಡುತ್ತಿದ್ದರು. ಭೂತಾನ್‌ಗೆ ಕ್ಯಾಲಿಕೋ ಬಟ್ಟೆ, ಪೆಗು ದೇಶಕ್ಕೆ ಪುಲಿಕಾಟ್‌ನಿಂದ ಪಟೋಲ(ರೇಷ್ಮೆ ಬಟ್ಟೆ), ಮಚಲಿಪಟ್ಟಣಂನ ಕ್ಯಾಲಿಕೋಸ್ ಮತ್ತು ಗೋವಾದ ಮಸ್ಲಿನ್ ಬಟ್ಟೆಗಳು ವಿದೇಶಗಳಿಗೆ ರಫ್ತಾಗುತ್ತಿದ್ದವು.

ಆಮದು

ವಿದೇಶಗಳಿಂದ ಭಾರತಕ್ಕೆ ಆಮದಾಗುತ್ತಿದ್ದ ವಸ್ತ್ರಗಳು ಚೈನಾದಿಂದ ರೇಷ್ಮೆ ತಮಿಳುನಾಡಿಗೆ ಬರುತ್ತಿತ್ತು. ಚೈನಾದಿಂದ ಹೈದ್ರಾಬಾದ್ ಮೂಲಕ ತಮಿಳುನಾಡಿಗೆ ಇದ್ದ ರಸ್ತೆಯನ್ನು 'ಸಿಲ್ಕ್ ರೂಟ್' ಎಂದೇ ಕರೆಯಲಾಗುತ್ತಿತ್ತು. ಪ್ಯಾಲೆಸ್ಟೈನ್ ಮತ್ತು ಓಡನ್‌ನಿಂದ ಬಣ್ಣದ ವೆಲ್ವೆಟ್, ಜಿದ್ದಾದಿಂದ ಟಫೋಟ್ಸ್, ಪರ್ಶಿಯಾದಿಂದ ಸ್ಯಾಟಿನ್, ಡಮಾಸ್ಕಸ್ ಬಟ್ಟೆಗಳು ಆಮದಾಗುತ್ತಿದ್ದವು.

ಬಂದರು ಪ್ರದೇಶಗಳು

ವಿಜಯನಗರ ಸಾಮ್ರಾಜ್ಯದಲ್ಲಿ ಮುನ್ನೂರು ಬಂದರುಗಳಿವೆಯೆಂದು ಅಬ್ದುರ್ ರಜಾಕ್ ಹೇಳಿದ್ದಾನೆ. ಅವುಗಳಲ್ಲಿ ವಸ್ತ್ರ ವ್ಯಾಪಾರಕ್ಕೆ ಸಂಬಂಧಿಸಿದ ಬಂದರುಗಳು ಅಂಕೋಲ, ಹೊನ್ನಾವರ, ಭಟ್ಕಳ, ಪುಲಿಕಾಟ್, ಮೈಲಾಪುರ, ಕ್ಯಾಲಿಕಟ್ ಮುಂತಾದವು. ಈ ಬಂದರುಗಳ ಮೂಲಕ ವಿಜಯನಗರದಿಂದ ವಸ್ತ್ರಗಳು ರಫ್ತಾಗುತ್ತಿದ್ದವು. ಇವು ಹತ್ತಿ ಬೆಳೆಯುವ ಪ್ರದೇಶದ ಸಮೀಪವಿರುವ ಬಂದರುಗಳಾಗಿವೆ.

ತೆರಿಗೆ

ನೇಕಾರರ ಮಗ್ಗಗಳ ಮೇಲೆ ವಿಧಿಸುತ್ತಿದ್ದ ತೆರಿಗೆಯನ್ನು ಮಗ್ಗದೆರೆ, ನೂಲುದೆರೆ ಎಂಬುದಾಗಿ ಶಾಸನಗಳಲ್ಲಿ ಉಲ್ಲೇಖವಿದೆ.

- ➢ ಪ್ರತಿ ಕೈಕೋಳ ನೇಕಾರರ ಕೆಲಸ ನಿರ್ವಹಿಸುವ ಮಗ್ಗದ ಮೇಲೆ–೪ ಪಣಂ
- ➢ ಪ್ರತಿ ಕೈಕೋಳ ನೇಕಾರರ ಕೆಲಸ ನಿರ್ವಹಿಸದ ಮಗ್ಗದ ಮೇಲೆ–೨ ಪಣಂ
- ➢ ಪ್ರತಿ ಸಾಲಿಗರ ಪ್ರತಿ ಮಗ್ಗದ ಮೇಲೆ–೯ ಪಣಂ
- ➢ ಸುಸ್ಥಿತಿಯಲ್ಲಿರುವ ನೂಲಿನ ಎಳೆಯನ್ನು ತೆಗೆಯುವ ಮಗ್ಗದ ಮೇಲೆ–೩ ಪಣಂ
- ➢ ಸುಸ್ಥಿತಿಯಲ್ಲಿಲ್ಲದ ನೂಲಿನ ಎಳೆಯನ್ನು ತೆಗೆಯಲಾಗದ ಮಗ್ಗದ ಮೇಲೆ– ೧½ ಪಣಂ[೧೪]
- ➢ ಪ್ರತಿ ಸೆಟ್ಟಿ ಕೈಕೋಳರ ಮೇಲೆ – ೨ ಪಣಂ[೧೫]
- ➢ ಒಂದು ಚೀಲ ಹತ್ತಿ ನೂಲಿಗೆ – ೪ ದಮ್ಮ[೧೬]

ಈ ಮೇಲಿನ ತೆರಿಗೆಯಿಂದ ತಿಳಿದುಬರುವ ಅಂಶ ವಿಜಯನಗರ ಕಾಲದಲ್ಲಿ ಯಾರು ಅಥವಾ ಯಾವ ವಸ್ತು ತೆರಿಗೆಯ ವ್ಯಾಪ್ತಿಗೆ ಒಳಪಡದೆ ಇರಲಿಲ್ಲ ಎಂಬುದು ಅರ್ಥವಾಗುತ್ತದೆ. ಮಗ್ಗ ಸುಸ್ಥಿತಿಯಲ್ಲಿರಲಿ ಅಥವಾ ಇಲ್ಲದಿರಲಿ ತೆರಿಗೆ ಹಾಕುತ್ತಿದ್ದರು ಎಂಬುದನ್ನು ಮೇಲಿನ ವಿವರಣೆಗಳು ದೃಢೀಕರಿಸುತ್ತವೆ. ಮತ್ತೊಂದು ಪ್ರಮುಖವಾಗಿ ಗಮನಿಸಬೇಕಾದ ವಿಷಯವೆಂದರೆ ನೇಕಾರರು ತೆರಿಗೆ ತೆರುವಷ್ಟು ಆರ್ಥಿಕವಾಗಿ ಪ್ರಬಲರಾಗಿದ್ದರು ಎಂಬುದು ತಿಳಿದುಬರುತ್ತದೆ. ನೇಕಾರ ಸಮುದಾಯದ ಮಗ್ಗಗಳ ಮೇಲೆ ತೆರಿಗೆ ವಿಧಿಸಿ ರುವುದನ್ನು ಗಮನಿಸಿದಾಗ ಸಾಲಿಗರ ಮಗ್ಗದ ಮೇಲೆ ಹೆಚ್ಚು ತೆರಿಗೆ ಹಾಕಿರುವುದು ತಿಳಿದುಬರುತ್ತದೆ. ಸಾಲಿಗರು ಪ್ರಭಾವಿ ಸಮುದಾಯದವರಾಗಿದ್ದರು ಎಂಬ ಬಾರ್ಬೋಸನ ಹೇಳಿಕೆಗೆ ಈ ತೆರಿಗೆಯು ಪುಷ್ಟೀ ನೀಡುತ್ತದೆ.

ಇದರಿಂದ ತೆರಿಗೆ ಪಾವತಿದಾರರ ಜೀವನ ಕ್ರಮ ಸುಧಾರಿತ ಜೀವನವೇ ಆಗಿದ್ದಿತೆಂಬುದು ನೈಜನೀಯ ಸಂಗತಿ.

ಶಾಸನಗಳಲ್ಲಿ ಉಲ್ಲೇಖವಾಗಿರುವ ಮಗ್ಗದೆರೆ (ಮಗ್ಗ ತೆರಿಗೆ)

ಬಟ್ಟೆಗಳನ್ನು ನೇಯುತ್ತಿದ್ದವರು ನೇಕಾರರು ಅಥವಾ 'ಜೇಡರು'. ಕ್ರಿ.ಶ. ೧೦೫೪ರ ಶಿಕಾರಿಪುರ ಶಾಸನದಲ್ಲಿ ಬಳ್ಳಿಗಾವೆಯ ಗವಜೇಶ್ವರ ದೇವರಿಗೆ ಅಲ್ಲಿಯ ಜೇಡರು ಒಂದೊಂದು ಮಗ್ಗಕ್ಕೆ ವರ್ಷಂಪ್ರತಿ ಐದು ವೀಸಗಳಂತೆ ಕೊಡಲು ಒಪ್ಪಿದಂತೆ ("ಜೇಡರು ವರ್ಷಕ್ಕಂ ಕೂಟಗೆ ವೀಸವಯ್ದು ಕೊಟ್ಟರು")[೧೭] ತಿಳಿಸುತ್ತದೆ. 'ಪಟ್ಟಗಾಱರ ಸೇಣಿಯ' ಹೆಸರು ಶಾಸನವೊಂದರಲ್ಲಿದೆ. ರೇಷ್ಮೆ ಮುಂತಾದ ನಯವಾದ ವಸ್ತ್ರಗಳನ್ನು ನೇಯುವವರೇ ಪಟ್ಟಗಾಱರು. ಬಟ್ಟೆಗಳನ್ನು ಕತ್ತರಿಸಿ ಹೊಲಿಯುತ್ತಿದ್ದವರು ಚಿಪ್ಪಿಗರು. ಚಿಪ್ಪಿಗ ಕೊತ್ತಳಿ ಅಥವಾ ಚಿಪ್ಪಿಗರ ಶ್ರೇಣಿಯ ಹೆಸರು ಅನೇಕ ಶಾಸನಗಳಲ್ಲಿವೆ. ಇವರನ್ನು ಕ್ರಿ.ಶ.೧೧೮೩ರ ಬೇಲೂರಿನ ಶಾಸನದಲ್ಲಿ 'ವಸ್ತ್ರ ಖಂಡಿತ ಶೃಂಗಾರ ವಿದ್ಯಾಪ್ರವೀಣ'[೧೮] ರೆಂದು ಉಲ್ಲೇಖಿಸಿದೆ.

ವಿಜಯನಗರ ಕಾಲದ ಶಾಸನಗಳಲ್ಲಿ ಮಗ್ಗ ತೆರಿಗೆಯ ಕುರಿತು ಹಲವಾರು ಉಲ್ಲೇಖಗಳು ಲಭಿಸುತ್ತವೆ. ಅದರಂತೆ, ಕ್ರಿ.ಶ. ೧೪೮೨ರ ಮಾಂಬಳ್ಳಿ ಶಾಸನದಲ್ಲಿ, ಮಾಂಬಳ್ಳಿಯ ಹರಿಹರನಾಥನ ಮಜ್ಜನಕ್ಕೆ ಮತ್ತು ವೈದ್ಯನಾಥದೇವರ ಸೇವೆಗಾಗಿ ಮಗ್ಗವನ್ನು ಮತ್ತು ತೆರಿಗೆಯನ್ನು ದಾನಬಿಟ್ಟ ವಿವರ ತಿಳಿಸುತ್ತದೆ. (ಶಾಸನದಲ್ಲಿ ದೇವರ ಮಾನ್ಯಲಿ ೩ ಮಗ್ಗ ೧ಕ್ಕೆ ಗ ೧ ವನು ತ್ಯಜುವರು... ಎಂಬುದಾಗಿ ತಿಳಿಸಿದೆ.)[೧೯]

ಕ್ರಿ.ಶ.೧೪೩೧ರ ಗಂಗವಾಡಿ ಶಾಸನದಲ್ಲಿ, ಪ್ರತಾಪದೇವರಾಯನು ಆಳುತ್ತಿರುವಾಗ ನಂಜರಸ ವೊಡೆಯರು ಗಂಗವಾಡಿಯ ನಂಜನಾಥ ದೇವರ ಪೂಜೆಗಾಗಿ ಮಗ್ಗದ ತೆರಿಗೆಗಳನ್ನು ದಾನವಾಗಿ ಬಿಟ್ಟ ವಿಷಯವಿದೆ.[೨೦]

ಕ್ರಿ.ಶ.೧೪೩೪ರ ಮೇಗರವಳ್ಳಿ(ಶಿವಮೊಗ್ಗ ಜಿಲ್ಲೆ) ಶಾಸನದಲ್ಲಿ, ಮೇಗರಹಳ್ಳಿ ಗ್ರಾಮದ ಹೆಗಡೆಯ ಅಳಿಯಂದಿರು ಶುದ್ಧ ಶೈವಾಗಮಿಯಾಗಿದ್ದ ದೇವಂಣ ಆರಾಧ್ಯರಿಗೆ ಮದವಳಿಗೆ ನಾಡಿನ ಮೇಗರವಳ್ಳಿ ಗ್ರಾಮವನ್ನು ತೈಲಪ ಹೆಗಡೆಯ ಅಳಿಯ ಮತ್ತು ಅವರ ಮಕ್ಕಳು ಕೂಡಿಕೊಂಡು ಅಣಪವಳ್ಳಿ ಗ್ರಾಮವನ್ನು ದಾನ ನೀಡಿರುವರು. ಈ ಗ್ರಾಮಕ್ಕೆ ಸಲ್ಲುವ ಗ್ರಾಮಗದ್ಯಾಣ, ಮಗ್ಗದೆರೆ ಮುಂತಾದ ತೆರಿಗೆಗಳನ್ನು ಅನುಭವಿಸುವ ಅಧಿಕಾರ ಇವರಿಗೆ ನೀಡಲಾಗಿದೆ.[೨೧]

ಕ್ರಿ.ಶ. ೧೪೮೩ರ ಕ್ಯಾತನಹಳ್ಳಿ ಶಾಸನದಲ್ಲಿ, ಲಕ್ಕಣ್ಣ ದಂಡನಾಯಕರ ಕೈಯಿಂದ ತಳಕಾಡನಾಡ ಅಧಿಕಾರಿ ಪೆರುಮಾಳ ದೇವರಸರು ಕೇತನಹಳ್ಳಿಯನ್ನು ಮತ್ತು ರಠಳ್ಳಿಯನ್ನು ಕೀರ್ತಿನಾರಾಯಣ ದೇವರ ಕಾರ್ಯಕ್ಕೆ ದಾನವಾಗಿ ಬಿಡಿಸುತ್ತಾನೆ. ಈ ಗ್ರಾಮಗಳ ಕೆಲವು ಸುಂಕ, ಮಗ್ಗಮುದ್ರೆ, ವೊಳವಾಱು ಹೊಱವಾಱು ತೋಂಟ ಗಾಣಸುಂಕ ಮೊದಲಾದವುಗಳನ್ನು ದಾನ ಬಿಡಲಾಗಿದೆ.[೨೨]

ಪ್ರೌಢದೇವರಾಯನ ಕಾಲಕ್ಕೆ ಸೇರಿದ ಹೊರಣಬಯಲು(ಶಿವಮೊಗ್ಗ ಜಿಲ್ಲೆಯ) ಶಾಸನದಲ್ಲಿ, ಹೊರಣಬಯಲು ಗ್ರಾಮವನ್ನು ಅಗ್ರಹಾರವನ್ನಾಗಿ ಮಾರ್ಪಡಿಸಿ, ಲಖರಸ ನೆಂಬುವನಿಗೆ ಶಾಸನ

ಸಮೇತ ದಾನವಾಗಿ ನೀಡಿದ ವಿಷಯವನ್ನು ತಿಳಿಸುತ್ತದೆ. ಅಗ್ರಹಾರದ ಇತರ ತೆರಿಗೆಗಳೊಂದಿಗೆ ಮಗ್ಗದೆರೆಯನ್ನು ಸರ್ವಮಾನ್ಯವಾಗಿ ನೀಡಲಾಗಿದೆ.[೨೩]

ಕ್ರಿ.ಶ. ೧೫೧೩ರ ತ್ರಯಂಬಕಪುರ ಶಾಸನದಲ್ಲಿ, ತೆರಕಣಾಂಬಿಯನ್ನು ಆಳುತ್ತಿದ್ದ ಸಾಳುವ ಗೋವಿಂದರಾಜನು ತ್ರಿಯಂಬಕದೇವರ ಸೇವೆಗಾಗಿ, ತ್ರಿಯಂಬಕಪುರ, ಮದ್ದೂರು, ಎಳಗನೂರು, ಬೆಳಾಮೆ..., ಕೊಟಸೋಣೆ, ಬೊಂಮ್ಮನಹಳ್ಳಿ, ತುಪೂರು, ಪುರತಂಣೆರೆ, ಬಲಚವಾಡಿ, ದಿಉಡಿಗಳೆ, ಮಂಗದಮಾಳ, ಮಾಧವಪಟ್ಟಣ ಮುಂತಾದ ಗ್ರಾಮಗಳಿಂದ ತೆರಕಣಾಂಬಿಯ ಭಂಡಾರಕ್ಕೆ ಸಲ್ಲುತ್ತಿದ್ದ ವಿವಿಧ ತೆರಿಗೆಗಳೊಂದಿಗೆ ಮಗ್ಗ ಸುಂಕ ದಾನ ನೀಡಲಾಗಿದೆ. ದೇವರಿಗೆ ಕರ್ಪೂರ ವೀಳೆಯ ಸಲ್ಲುವುದಕ್ಕೆ ಈ ದಾನವನ್ನು ನೀಡಿದೆ ಎಂಬುದಾಗಿ ತಿಳಿಸುತ್ತದೆ.[೨೪]

ಕ್ರಿ.ಶ.೧೫೨೧ರ ತ್ರಯಂಬಕಪುರ(ಚಾಮರಾಜನಗರ ಜಿಲ್ಲೆ) ಶಾಸನದಲ್ಲಿ ವಿವಿಧ ತೆರಿಗೆಗಳೊಂದಿಗೆ ಮಗ್ಗ ಸುಂಕವನ್ನು ತ್ರಯಂಬರಕಲಿಂಗ ದೇವರಿಗೆ ದಾನ ನೀಡಲಾಗಿದೆ.[೨೫]

ಈ ಮೇಲಿನ ಶಾಸನಗಳ ವಿವರಗಳಿಂದ ವ್ಯಕ್ತವಾಗುವ ಅಂಶವೆಂದರೆ ನೇಕಾರರು ವಿವಿಧ ತೆರಿಗೆಗಳನ್ನು ನೀಡುವಷ್ಟು ಆರ್ಥಿಕವಾಗಿ ಪ್ರಬಲರಾಗಿದ್ದರು ಮತ್ತು ಇದು ಆ ಕಾಲದಲ್ಲಿ ನೇಕಾರರ ಸಾಮಾಜಿಕ ಮತ್ತು ಆರ್ಥಿಕ ಸ್ಥಾನವು ಉನ್ನತಮಟ್ಟದಲ್ಲಿತ್ತು ಎಂಬುದನ್ನು ದೃಢಪಡಿಸುತ್ತದೆ.

ವಿಜಯನಗರ ಕಾಲದಲ್ಲಿ ರಾಜಮನೆತನದವರು ವಸ್ತ್ರ ಪ್ರಿಯರಾಗಿದ್ದರು ಹಾಗೂ ದುಬಾರಿ ಬೆಲೆಯನ್ನು ಕೊಟ್ಟು ವಸ್ತ್ರಗಳನ್ನು ತಯಾರಿಸಿಕೊಳ್ಳುತ್ತಿದ್ದರು ಎಂಬುದನ್ನು ಈ ಹಿಂದಿನ ಅಧ್ಯಾಯದಲ್ಲಿ ತಿಳಿದಿದ್ದೇವೆ. ಹಾಗಾಗಿ ನೇಕಾರರು ರಾಜರಿಂದ ಸವಲತ್ತುಗಳನ್ನು ಪಡೆದು ನಗರಗಳಲ್ಲಿ ಹಾಗೂ ಬಂದರು ಪ್ರದೇಶಗಳಿಗೆ ಹತ್ತಿರದಲ್ಲಿ ವಾಸಿಸುತ್ತಿದ್ದರು. ತಮ್ಮದೇ ಆದ ದೈವರಾಧನೆ, ಸಂಪ್ರದಾಯ ಗಳನ್ನು ಅನುಸರಿಸಿಕೊಂಡು ಬರುತ್ತಿದ್ದರು. ಅಲ್ಲದೆ ಸಮಾಜದ ಸಾಮಾನ್ಯವರ್ಗದವರಿಂದ ಹಿಡಿದು ರಾಜಮನೆತನ, ದೇವದೇವತೆಗಳು ಹಾಗೂ ಪ್ರಾಣಿಗಳಿಗೆ ಅಗತ್ಯವಾಗಿದ್ದ ವಸ್ತ್ರಗಳನ್ನು ತಯಾರಿಸುವಲ್ಲಿ ನೇಕಾರರು ಪ್ರಮುಖ ಪಾತ್ರ ವಹಿಸುತ್ತಿದ್ದರು.

೪.೨. ಆಭರಣ ತಯಾರಿಕಾ ವರ್ಗ/ಅಕ್ಕಸಾಲಿಗ ಸಮುದಾಯ

ಅಕ್ಕಸಾಲಿಗ ಅಥವಾ ಅರ್ಕಸಾಲಿಗ ಪದದ ಮೂಲ ರೂಪ ಅರ್ಕಶಾಲಿ. ಜಗತ್ತನ್ನು ಸೃಷ್ಟಿಸಿದವನು ವಿಶ್ವಕರ್ಮನೆಂಬುದು ವೇದಗಳಲ್ಲಿ ವರ್ಣಿತವಾಗಿದೆ. ವಿಶ್ವಕರ್ಮ ಈ ವಂಶದ ಮೂಲಪುರುಷನೆಂದು ತಿಳಿದುಬರುತ್ತದೆ. ಸಿಂಧೂ ನಾಗರಿಕತೆಯ ಕಾಲದಿಂದಲೇ ಅಕ್ಕಸಾಲಿಗ ಉದ್ಯಮ ಇತ್ತು ಎಂಬುದು ಅಲ್ಲಿ ಸಿಕ್ಕಿರುವ ಆಭರಣಗಳಿಂದ ತಿಳಿಯಬಹುದಾಗಿದೆ. ಕೌಟಿಲ್ಯನ ಅರ್ಥಶಾಸ್ತ್ರವು ಚಿನ್ನ, ಬೆಳ್ಳಿಯ ಕೆಲಸ ಮಾಡುವ ಸ್ಥಳವನ್ನು 'ಅಕ್ಷಶಾಲೆ' ಎಂದೂ, ಈ ಕಾರ್ಯಾಗಾರದ ಮೇಲುಸ್ತುವಾರಿಯನ್ನು ನೋಡಿಕೊಳ್ಳುವವನನ್ನು 'ಸುವರ್ಣಾಧ್ಯಕ್ಷ' ಎಂದು ಕರೆದಿದೆ.

ಕಮ್ಮಾರ, ಬಡಗಿ, ಅಕ್ಕಸಾಲಿ, ಕಂಚುಗಾರ ಮತ್ತು ಶಿಲ್ಪಿ ಈ ಐವರನ್ನು ಪಾಂಚಾಳರೆಂದು ಕರೆಯುತ್ತಿದ್ದರು. ಇವರು ಹೆಸರಿಗೆ ತಕ್ಕಂತೆ ಆಯಾ ವೃತ್ತಿಗಳನ್ನು ಮಾಡುತ್ತಿದ್ದರು. ಅದೇ ವೃತ್ತಿಯನ್ನು ನಿರ್ವಹಿಸಬೇಕೆಂಬ ಕಟ್ಟಳೆಗಳಿರಲಿಲ್ಲ. ಕೆಲವರು ಈ ಐದೂ ಕ್ಷೇತ್ರಗಳಲ್ಲಿ ವೃತ್ತಿನಿರತರಾಗಿದ್ದರು.

ಚಿನ್ನದ ಕೆಲಸ ಮಾಡುತ್ತಿದ್ದ ಅಕ್ಕಸಾಲಿಗರು ಅಪರೂಪಕ್ಕೆ ಒಮ್ಮೊಮ್ಮೆ ಶಾಸನಗಳನ್ನು ಕೆತ್ತುತ್ತಿದ್ದರು. ರಾಜರು ಟಂಕಸಾಲೆಗಳಲ್ಲಿ ನಾಣ್ಯ ತಯಾರಿಸಲು ಇವರನ್ನು ನೇಮಿಸಿಕೊಳ್ಳುತ್ತಿದ್ದರು ಮತ್ತು ಇವರಿಗೆ ವಾರ್ಷಿಕ ವೇತನವನ್ನು ನೀಡುತ್ತಿದ್ದರು.[೨೬]

ನಗರಗಳು ವಿಶ್ವಕರ್ಮದವರ ಕುಶಲ ಕೆಲಸಗಳ ಕೇಂದ್ರವಾಗಿದ್ದವು. ಪಾಂಚಾಳರು ವಿಜಯ ನಗರದ ರಾಜಬೀದಿಗಳಲ್ಲಿ ಇದ್ದರು ಎಂಬ ಉಲ್ಲೇಖವನ್ನು ಕನಕದಾಸರು ಮೋಹನ ತರಂಗಿಣಿಯ ಪದ್ಯವೊಂದರಲ್ಲಿ ವಿವರಿಸಿದ್ದಾರೆ.

ಕಂಚುಗಾರರು ಕೈದುಗಾರರು ಹೊಳೆವ ಹೊಂ
ಮಂಚಗಾರರು ಶಿಲ್ಪಗರು
ಸಂಚುಗಾರರು ಸದ್ವಿದ್ಯಾಧಿಕರಾದ
ಪಂಚಾಳರಿರ್ದರಿಕ್ಕೆಲದಿ[೨೭]

ಈ ಪದ್ಯದ ಸಾಲುಗಳು ಪಾಂಚಾಳರ ಕುರಿತು, ಅವರು ವಿಜಯನಗರದ ಪ್ರತ್ಯೇಕ ಬೀದಿಗಳಲ್ಲಿ ಮಳಿಗೆಗಳನ್ನು ಇಟ್ಟುಕೊಂಡಿದ್ದರು ಹಾಗೂ ಅವರು ಸಕಲ ವಿದ್ಯಾಪರಂಗತರಾಗಿದ್ದರು ಎಂಬುದಾಗಿ ಅರ್ಥೈಸುತ್ತದೆ.

ಪಾಂಚಾಳರು ವಾಸವಾಗಿದ್ದ ಕೇರಿಗಳು

ನಗರಗಳಲ್ಲಿ ಪಾಂಚಾಲ ಕುಶಲ ಕೆಲಸಗಾರರ ಕೇಂದ್ರಗಳಿದ್ದವು. ಅಲ್ಲದೇ ಇವರು ನಗರಗಳಲ್ಲಿ ಪ್ರತ್ಯೇಕ ಕೇರಿಗಳಲ್ಲಿ ವಾಸಿಸುತ್ತಿದ್ದರು. ವಿಜಯನಗರದ ಇಂತಹ ಪ್ರತ್ಯೇಕ ಕೇರಿಗಳಲ್ಲಿ ಪಾಂಚಾಳರು ವಾಸವಾಗಿರಲು ರಾಜರು ಅವಕಾಶ ಕಲ್ಪಿಸಿದ್ದರು ಎಂಬುದನ್ನು ಸಾಹಿತ್ಯಾಕಾರಗಳು ಹಾಗೂ ಶಾಸನಗಳಿಂದ ತಿಳಿಯಬಹುದಾಗಿದೆ.

ಸದಾಶಿವರಾಯನ ಆಡಳಿತದ ಅವಧಿಯಲ್ಲಿ ಹಾಕಿಸಿದ್ದ ಬೇಲೂರಿನ ಶಾಸನ ಆ ಕುರಿತು ತಿಳಿಸುತ್ತದೆ. ಕ್ರಿ.ಶ. ೧೫೫೫ರ ಕಾಲಕ್ಕೆ ಸೇರಿದ ಈ ಶಾಸನದಲ್ಲಿ ಪಾಂಚಾಳದವರು ತಾವು ಜಾತಿಧರ್ಮದಲ್ಲಿ ನಡೆದುಕೊಂಡು ಹೋಗುವಂತೆ ಕೇರಿಗಳನ್ನು ಮನೆಗಳನ್ನು ಗೊತ್ತುಮಾಡಿ ಅದಕ್ಕೆ ಗಡಿಯನ್ನು ಗುರುತಿಸಿ ಹದ್ದುಬಸ್ತು ಮಾಡಲಾಗುತ್ತದೆ ಎಂಬುದಾಗಿ ವಿವರಿಸಿದೆ.[೨೮] ಈ ಶಾಸನದ ಸಾಲುಗಳಿಂದ ವ್ಯಕ್ತವಾಗುವ ಅಂಶವೆಂದರೆ ಪಾಂಚಾಳರು ಪ್ರತ್ಯೇಕ ಕೇರಿಗಳಲ್ಲಿ ವಾಸಮಾಡಲು ಹಾಗೂ ಅವರಿಗೆ ಗೃಹ ನಿರ್ಮಾಣ ಮತ್ತು ಕೇರಿಗಳ ಗಡಿಯನ್ನು ಗುರುತಿಸಿ ವಾಸಿಸಲು ಅನುಕೂಲ ಮಾಡಿಕೊಟ್ಟಿದ್ದರು ಎಂದರೆ ರಾಜರಿಂದ ಅನುಗ್ರಹ ಪಡೆದವರಾಗಿದ್ದರು. ಇದು ಆ ಸಮುದಾಯದವರಿಗೆ ಸಮಾಜದಲ್ಲಿದ್ದ ಸ್ಥಾನಮಾನ ಮತ್ತು ಅವರ ಸಂಘಟನ ಶಕ್ತಿಯನ್ನು ಪ್ರತಿಬಿಂಬಿಸುತ್ತದೆ.

ಅಕ್ಕಸಾಲಿಗರು ತಯಾರಿಸುತ್ತಿದ್ದ ಆಭರಣಗಳ ವೈವಿಧ್ಯತೆ

ಇವರು ರಾಜಮನೆತನದವರಿಂದ ಹಿಡಿದು ಸಾಮಾನ್ಯ ಜನರ ಅಗತ್ಯತೆಗಳಿಗೆ ಅನುಗುಣವಾಗಿ

ಹಾಗೂ ದೇವದೇವತೆಗಳಿಗೆ ಆಭರಣಗಳನ್ನು ಚಿನ್ನ, ಬೆಳ್ಳಿ ಹಾಗೂ ಇತರ ಲೋಹಗಳಿಂದ ತಯಾರಿಸುತ್ತಿದ್ದರು. ಅಡಿಯಿಂದ ಮುಡಿಯವರೆಗೆ ಧರಿಸುತ್ತಿದ್ದ ಆಭರಣ ಗಳನ್ನು ಅಷ್ಟೇ ಅಲ್ಲದೇ ರಾಜರಿಗೆ ಅಗತ್ಯವಾದ ಸಿಂಹಾಸನ ಹಾಗೂ ಸೈನಿಕರಿಗೆ ಮತ್ತು ಪ್ರಾಣಿಗಳಿಗೆ ಬೇಕಾದ ರಕ್ಷಣಾ ಸಲಕರಣೆಗಳನ್ನು ತಯಾರಿಸುತ್ತಿದ್ದರು. ರಾಜರು ಧರಿಸುತ್ತಿದ್ದ ಆಭರಣಗಳು ಶ್ರೇಷ್ಠಮಟ್ಟದ್ದಾಗಿದ್ದು, ಅವು ಹೆಚ್ಚು ಕುಸುರಿ ಕೆಲಸದಿಂದ ಕೂಡಿದ್ದವು. ಸಾಹಿತ್ಯ, ಶಾಸನ ಮತ್ತು ಸ್ಮಾರಕಗಳಿಂದ ಅಕ್ಕಸಾಲಿಗರು ತಯಾರಿಸುತ್ತಿದ್ದ ವಿವಿಧ ಆಭರಣಗಳು, ವಿನ್ಯಾಸ, ಹೆಸರು, ಕುಸುರಿ ಕೆಲಸಗಳ ಬಗ್ಗೆ ತಿಳಿಯುತ್ತದೆ. ಆಭರಣ ಮತ್ತು ಇತರ ಪರಿಕರಗಳ ವಿನ್ಯಾಸ ಮತ್ತು ಶೈಲಿಗಳನ್ನು ಮೆಚ್ಚಿ ರಾಜರು ಅವರಿಗೆ ತೆರಿಗೆ ಮಾನ್ಯ ಮಾಡಿದ್ದ ವಿವರ ಗಳನ್ನು ಶಾಸನಗಳಿಂದ ತಿಳಿಯಬಹುದಾಗಿದೆ.

ಆಭರಣ ವ್ಯಾಪಾರಿ ಮಳಿಗೆಗಳು

ವಿಜಯನಗರದ ರಸ್ತೆಗಳ ಇಕ್ಕೆಲಗಳಲ್ಲಿ ಮುತ್ತು, ರತ್ನ ಮುಂತಾದ ಆಭರಣಗಳನ್ನು ರಾಶಿ ಹಾಕಿ ನಿರ್ಭಯವಾಗಿ ವ್ಯಾಪಾರವನ್ನು ಮಾಡುತ್ತಿದ್ದರು ಎಂಬುದಾಗಿ ವಿದೇಶಿ ಪ್ರವಾಸಿ ಅಬ್ದುರ್ ರಜಾಕ್ ತಿಳಿಸುತ್ತಾನೆ. ಅದಕ್ಕೆ ಪೂರಕವಾಗಿ ಸನತ್ಕುಮಾರ ಚರಿತೆಯಲ್ಲಿ ಆಭರಣ ಮಳಿಗೆಗಳನ್ನು ಉಲ್ಲೇಖಿಸುತ್ತದೆ. ಅದರಲ್ಲಿ ತಿಳಿಸಿರುವಂತೆ,

ಒರೆದು ಬಣ್ಣವ ತೂಗಿ ಬೆಲೆಗಳ
ನೊರೆದು ಮಿಸುನಿಯ ಘಟ್ಟಿಯೊಟ್ಟಲ
ಮೆರೆಯೊಳಿರುತಿಹ ಚಿನ್ನವರದರ ಹೊನ್ನಗುಪ್ಪೆಗಳ
ಸುರಿದುಕೊಂಡಿಹ ನಾಣ್ಯಗಾರರ
ತರತರದೊಳಿಹ ಕಂಚುಗಾರರ
ಬರೆವ ಚಿತ್ರಗರಂಗಡಿಗಳನು ನೋಡುತೆಯಿತಂದ[೨೯] ಎಂದು ವರ್ಣಿಸಿದೆ.

ಇನ್ನೊಂದು ಪದ್ಯದಲ್ಲಿ

ಮುತ್ತು ಹವಳದ ಕುಚ್ಚು ವಜ್ರದ
ಮೊತ್ತ ನೀಲದ ಗುಪ್ಪೆ ಮಾಣಿಕ
ದಿತ್ತರದ ರಾಶಿಗಳ ಗೋಮೇಧಿಕದ ವೈಢೂರ್ಯ
ಉತ್ತಮದರತ್ನಗಳ ಪಸರದ
ಬಿತ್ತರದೊಳೆಸೆವಂಗಡಿಗಳನು
ಚಿತ್ರಚೋಪಮಭೂಪ ನೋಡುತ ನಡೆದೆನೊಲವಿಂದ"[೩೦]

ಈ ಮೇಲಿನ ಸಾಲುಗಳು ನವರತ್ನ ಖಚಿತ ಆಭರಣಗಳ ಪ್ರತ್ಯೇಕ ಮಳಿಗೆಗಳು ಇದ್ದವು ಎಂಬುದನ್ನು, ಅಕ್ಕಸಾಲಿಗರು ಚಿನ್ನದ ಬೆಲೆಯನ್ನು ನಿರ್ಧಾರ ಮಾಡುತ್ತಿದ್ದ ಪರಿ, ಚಿನ್ನದ ನಾಣ್ಯಗಳ ರಾಶಿ ಮತ್ತು ವಿಷಯಗಳನ್ನು ತಿಳಿಸುತ್ತದೆ. ಹಾಗಾದರೆ ಇಷ್ಟು ಪ್ರಮಾಣದ ಆಭರಣಗಳ ವ್ಯಾಪಾರ ವಾಣಿಜ್ಯ ನಡೆಯಬೇಕಾದರೆ ಅವುಗಳ ಉತ್ಪಾದನೆಯನ್ನು ಕುರಿತು ತಿಳಿಯುವುದು ಮುಖ್ಯ.

ಆಭರಣಗಳಿಗೆ ಸಂಬಂಧಿಸಿದ ಗಣಿಪ್ರದೇಶಗಳು

ವಿಜಯನಗರದ ಜನರು ವಸ್ತ್ರಪ್ರಿಯರಾಗಿದ್ದಂತೆ ಆಭರಣ ಪ್ರಿಯರಾಗಿದ್ದರು ಎಂಬುದನ್ನು ಈಗಾಗಲೇ ತಿಳಿದಿದ್ದೇವೆ. ಹಾಗಾಗಿ ಈ ಆಭರಣ ತಯಾರಿಕೆಗೆ ಕಚ್ಚ ವಸ್ತುಗಳು ಎಲ್ಲಿ ಲಭಿಸುತ್ತಿದ್ದವು ಎಂಬುದನ್ನು ತಿಳಿಯುವುದು ಅವಶ್ಯಕ.

ತಾಮ್ರದ ಅದಿರು ಮತ್ತು ಚಿನ್ನದ ಅದಿರು ಸಂಡೂರಿನ ದರೋಜಿ, ತಾರಾನಗರ ಮತ್ತು ಎತ್ತಿನ ಹಟ್ಟಿ ಪ್ರದೇಶಗಳಲ್ಲಿ ಲಭ್ಯವಿದೆ.[೩೧] ಕೋಲಾರದ ಚಿನ್ನದ ಗಣಿಯಿಂದ ಚಿನ್ನ ಬರುತ್ತಿತ್ತು. ವಜ್ರಕರೂರು(ಆಂಧ್ರಪ್ರದೇಶದ ಗುತ್ತಿಯಿಂದ ೨೦ ಮೈಲಿ ದೂರದಲ್ಲಿದೆ), ಕೊಂಡಪಲ್ಲಿ ಯಿಂದ[೩೨] ಹಾಗೂ ಬಳ್ಳಾರಿ, ಆಂಧ್ರಪ್ರದೇಶದ ಅನಂತಪುರ ಜಿಲ್ಲೆ, ಕರ್ನೂಲು, ಕಡಪಗಳ ವಜ್ರದ ಗಣಿಗಳಿಂದ ವಿಜಯನಗರಕ್ಕೆ ವಜ್ರಗಳು ಸರಬರಾಜು ಆಗುತ್ತಿದ್ದವು.[೩೩] ಗೋಲ್ಕೊಂಡ ದಲ್ಲಿ ಒಂದು ವಜ್ರದ ಗಣಿಯಿದ್ದು ಅದು ಬಹುಮನಿ ಸುಲ್ತಾನರಿಗೆ ಸೇರಿತ್ತು.

ವಜ್ರದ ಗಣಿಗಳ ಮೇಲೆ ತೆರಿಗೆ ವಿಧಿಸುತ್ತಿದ್ದರು. ಈ ವಜ್ರದ ಗಣಿಗಳು ರಾಜನ ಬೊಕ್ಕಸವನ್ನು ತುಂಬಿಸುವ ಬಹುಮುಖ್ಯವಾದ ಆರ್ಥಿಕ ಮೂಲವಾಗಿತ್ತು. ಅಡಪನಾಯಕ ಎಂಬುವನು ವಜ್ರದ ಗಣಿಯ ಮಾಲೀಕ ಅಥವಾ ಮುಖ್ಯಸ್ಥನಾಗಿದ್ದನು. ಈತ ಪ್ರತಿವರ್ಷ ರಾಜನಿಗೆ ೪೦,೦೦೦ ಪಾರಡೌಸ್ ಹಣವನ್ನು ೨೦ ಮಂಗಲಿಯನ್ ತೂಕದ ವಜ್ರವನ್ನು ನೀಡುತ್ತಿದ್ದನು. ಇಷ್ಟೇ ಅಲ್ಲದೆ ಅಮೂಲ್ಯವಾದ ಹಾಗೂ ಬೆಲೆಬಾಳುವ ವಜ್ರಗಳನ್ನು ರಾಜನಿಗೆ ನೀಡುತ್ತಿದ್ದನು. ಇವು ನೇರವಾಗಿ ರಾಜನ ಖಜಾನೆಗೆ ಸೇರುತ್ತಿದ್ದವು.[೩೪]

ಇವಿಷ್ಟೇ ಅಲ್ಲದೆ ವಿಜಯನಗರಕ್ಕೆ ಹೊರದೇಶಗಳಿಂದ ಮುತ್ತು ರತ್ನಗಳನ್ನು ಆಮದು ಮಾಡಿಕೊಳ್ಳುತ್ತಿದ್ದರು. ಬಾರ್ಬೋಸ ತಿಳಿಸುವಂತೆ, "ಪೆಗು ಮತ್ತು ಸಿಲೋನ್‌ಗಳಿಂದ ಬಂದ ಅನೇಕ ವಜ್ರವೈಢೂರ್ಯಗಳ ಆಭರಣಗಳಿವೆ. ಓರ್ಮೆಸ್ ಮತ್ತು ಕಾಯಲ್‌ಗಳಿಂದ ತಂದು ಮುತ್ತುಗಳೂ, ಸಣ್ಣ ಮುತ್ತುಗಳೂ ಅಪಾರವಾಗಿವೆ. ಇಲ್ಲಿಯ ಜನರಿಗೆ ವಜ್ರವೈಢೂರ್ಯದ ಮತ್ತು ಮುತ್ತುಗಳ ಆಭರಣಗಳನ್ನು ಕಂಡರೆ ಬಹಳ ಆಸೆ. ಅಲ್ಲದೆ ಹವಳಗಳನ್ನು ಗುಂಡುಗಳಾಗಿ ಮಾಡಿ ಧರಿಸುತ್ತಾರೆ"[೩೫] ಎಂಬುದಾಗಿ ವಿವರಿಸುತ್ತಾನೆ. ಅಲ್ಲದೆ ವಿಜಯನಗರ ಪಾನ್‌ಸುಪಾರಿ ಬಜಾರ್‌ನಲ್ಲಿ ಇಂತಹ ಆಭರಣ ವ್ಯಾಪಾರ ನಡೆಯುತ್ತಿತ್ತು ಎಂಬುದಾಗಿ ಪಾಯೇಸ್‌ನು ತಿಳಿಸಿದ್ದಾನೆ.

ಈ ಮೇಲಿನ ವಿವರಣೆಗಳಿಂದ ವಿಜಯನಗರದಲ್ಲಿದ್ದ ಗಣಿಗಳಿಂದ ಉತ್ಪಾದನೆಯಾಗುತ್ತಿದ್ದ ವಜ್ರ, ಚಿನ್ನ, ಬೆಳ್ಳಿ ಮುಂತಾದವು ಆಭರಣಗಳ ತಯಾರಿಕೆಗೆ ಸಾಕಾಗುತ್ತಿರಲಿಲ್ಲ. ಹಾಗಾಗಿ ವಿದೇಶಗಳಿಂದ ಇತರ ಮುತ್ತುರತ್ನ, ಹವಳ ವಜ್ರ ವೈಢೂರ್ಯಗಳನ್ನು ಆಮದು ಮಾಡಿಕೊಳ್ಳುತ್ತಿದ್ದರು. ಇದರಿಂದ ಆಭರಣಧಾರಣೆಯತ್ತ ಇಲ್ಲಿನ ಜನತೆಗೆ ಇರುವ ಮೋಹವು ಅರ್ಥವಾಗುತ್ತದೆ. ಇಂದಿನ ಆಧುನಿಕ ಭಾರತವೂ ಇದರಿಂದ ಹೊರತಾಗಿಲ್ಲವೆಂಬುದಂತೂ ಸತ್ಯ.

ಆಭರಣ ತಯಾರಿಸಲು ಬಳಸುವ ಉಪಕರಣಗಳು

ಚಿನ್ನ ಕರಗಿಸಲು ಸುತ್ತಿಗೆ, ಊದುಕೊಳವೆ, ಚಿಮುಟ ಮತ್ತು ಮುದ್ರೆಗಳು, ಚಿನ್ನ ಕರಗಿಸುವ ಮೂಸೆ, ಕತ್ತರಿ, ತಕ್ಕಡಿ, ಬ್ರಷ್ ಮೊದಲಾದ ಉಪಕರಣಗಳ ಅಗತ್ಯವಿದೆ. ಇವುಗಳೊಂದಿಗೆ ಅಕ್ಕಸಾಲಿಗರು ಸಮುದ್ರದ ಉಪ್ಪು, ಪೆಟ್ಲುಪ್ಪು(ಪೊಟ್ಯಾಶಿಯಂ ನೈಟ್ರೇಟ್), ನುಣ್ಣನೆಯ ಕೆಂಪು ಮರಳು, ಪಟಿಕ, ರಸಕರ್ಪೂರ (ಪಾದರಸದಿಂದಾದ ಒಂದು ಸಿದ್ಧವಸ್ತು-ಕ್ಯಾಲೊಮೆಲ್), ಗಂಧಕಾಮ್ಲ, ನೈಟ್ರಿಕ್ ಆಮ್ಲ, ಬಿಳಿಗಾರ(ಬೋರಾಕ್ಸ್) ಮೊದಲಾದವುಗಳನ್ನು ಆಭರಣ ತಯಾರಿಕಾ ಸಾಮಗ್ರಿಗಳಾಗಿ ಬಳಸುತ್ತಾರೆ.

ಅಕ್ಕಸಾಲಿಗರ ಆರಾಧ್ಯದೈವ(ದೇವತಾರಾಧನೆ)

ಪಾಂಚಾಳರು ಶಿವ ಮತ್ತು ಶ್ರೀಕಾಳಿಕಾದೇವಿಯ ಆರಾಧಕರಾಗಿದ್ದರು. ಅಲ್ಲದೇ ತಮ್ಮ ಸಂಪ್ರದಾಯನುಸಾರ ವಿಧಿವಿಧಾನ ಮತ್ತು ಆಚರಣೆಗಳನ್ನು ಅನುಸರಿಸಲು ಸ್ವತಂತ್ರರಾಗಿದ್ದರು. ರಾಜರು ಅವರಿಗೆ ಅಂತಹ ಅವಕಾಶ ಕಲ್ಪಿಸಿದ್ದರು. ಆ ಕುರಿತು ವಿಜಯನಗರ ಕಾಲದಲ್ಲಿನ ಶಾಸನವೊಂದರಲ್ಲಿ ತಿಳಿಸುವಂತೆ, ಸದಾಶಿವರಾಯನ ಆಳ್ವಿಕೆಯಲ್ಲಿ ಬೇಲೂರಿನಲ್ಲಿ ರೈತರು ಮತ್ತು ಪಾಂಚಾಲರ ನಡುವೆ ಒಂದು ವಿವಾದ ಉಂಟಾಗುತ್ತದೆ. ಕೆಲವು ನಿಯೋಗಗಳು ಮತ್ತು ಸೇನಬೋವಶೆಟ್ಟಿಗಳ ಸಮಕ್ಷಮ ಒಪ್ಪಂದವನ್ನು ಏರ್ಪಡಿಸಲಾಗುತ್ತದೆ. ಈ ತೀರ್ಮಾನದ ಪ್ರಕಾರ ಬೇಲೂರಿನ ದಕ್ಷಿಣ ಬೀದಿಯಲ್ಲಿ ಪಾಂಚಾಲರು ಮನೆಗಳನ್ನು ಕಟ್ಟಲು ತಮ್ಮ ಕೋಮಿನ ವಿಧಿಯನ್ನು ಆಚರಿಸಲು ವಿದ್ಯಾನಗರದ ರಥೋತ್ಸವದ ಕಾಲದಲ್ಲಿ ಪಾಂಚಾಲರಿಗೆ ಕೊಟ್ಟಿದ್ದ ಹಕ್ಕ ಮತ್ತು ಸ್ಥಾನಮಾನಗಳನ್ನು ಬೇಲೂರಿನ ಚೆನ್ನಿಗರಾಯನ ದೇವಸ್ಥಾನದಲ್ಲಿಯೂ ಅನುಭವಿಸಬಹುದೆಂದು ತೀರ್ಮಾನಿಸಲಾಗುತ್ತದೆ.[೩೬]

ಪಾಂಚಾಳರ ಮೇಲೆ ವಿಧಿಸುತ್ತಿದ್ದ ತೆರಿಗೆ

ಅನೇಕ ವೃತ್ತಿಗಳಲ್ಲಿ ನರತರಾದ ಶ್ರಮಿಕವರ್ಗ, ಸಾಮಾಜಿಕ, ಆರ್ಥಿಕ ಕ್ಷೇತ್ರಗಳಿಗೆ ಕೊಟ್ಟ ಕೊಡುಗೆ ಅಪಾರವಾದುದು. ಇವರು ಉತ್ಪಾದನೆ, ವಿತರಣೆ ಮಾರಾಟದಲ್ಲಿ ತೊಡಗಿದ್ದರು. ಹಾಗಾಗಿ ಇಂತಹ ವೃತ್ತಿಗಳ ಮೇಲೆ ವಿಧಿಸುತ್ತಿದ್ದ ತೆರಿಗೆಯಿಂದ ರಾಜ್ಯಕ್ಕೆ ಆದಾಯ ಬರುತ್ತಿತ್ತು.

- ಪ್ರತಿ ಕಮ್ಮಾರ, ಬಡಗಿ, ಬೆಳ್ಳಿ ಬಂಗಾರ ತಯಾರಿಸುತ್ತಿದ್ದ ಅಕ್ಕಸಾಲಿಗರ ಮೇಲೆ ೫ ಪಣಂ[೩೭] ತೆರಿಗೆಯನ್ನು ವಿಧಿಸುತ್ತಿದ್ದರು.
- ಚಿನ್ನದ ಮೇಲೆ ವಿಧಿಸುತ್ತಿದ್ದ ತೆರಿಗೆಯನ್ನು 'ಪೊನ್-ವರಿ'[೩೮] ಎಂದು ಕರೆಯುತ್ತಿದ್ದರು.

ಶಾಸನಗಳಲ್ಲಿ ಉಲ್ಲೇಖವಾಗಿರುವ ಅಕ್ಕಸಾಲಿಗೆ ತೆರಿಗೆ/ಪಾಂಚಾಳರ ತೆರಿಗೆ

ಬಡಗಿ, ಕಮ್ಮಾರ, ಅಕ್ಕಸಾಲಿಗ, ಕಂಚುಗಾರ ಮತ್ತು ಶಿಲ್ಪಿ ಎಂಬ ಐದು ವಿಧವಾದ ಕೆಲಸಗಾರರನ್ನು ಒಟ್ಟಿಗೆ ಸೇರಿಸಿ ಪಾಂಚಾಳರು, ಪಂಚಕಾರರು, ವಿಶ್ವಕರ್ಮರು, ಓಜರು ಮುಂತಾಗಿ ಹೆಸರಿಸಲಾಗಿದೆ. ಇವರೆಲ್ಲರಿಗೂ ಸೇರಿಸಿ ವಿಧಿಸುತ್ತಿದ್ದ ತೆರಿಗೆಯನ್ನು ಪಾಂಚಾಳ ತೆರಿಗೆ,

ಪಂಚಕಾರುದೆರೆ, ಓಜತೆರಿಗೆ ಎಂದು ಶಾಸನಗಳಲ್ಲಿ ಉಲ್ಲೇಖಿಸಲಾಗಿದೆ. ವಿಜಯನಗರದಲ್ಲಿ ಕೃಷ್ಣದೇವರಾಯನ ಕಾಲದಲ್ಲಿ ಪಾಂಚಾಳರ ಮೇಲೆ ವಿಧಿಸುತ್ತಿದ್ದ ತೆರಿಗೆಯನ್ನು ಓಜತೆರಿಗೆ ಎಂಬುದಾಗಿ ಹೆಸರಿಸಿದೆ.

ಕ್ರಿ.ಶ. ೧೦೩೫ರ ಶಾಸನದಲ್ಲಿ, ಅಕ್ಕಸಾಲಿಯ ಆಯದ ('ಅಕ್ಕಸಾಲಿಯಾಯ ಉಪ್ಪೊಳಗಾಗಿ ಧಾನ್ಯಂಗಳೊಳೆಲ್ಲಂ') ಹೆಸರಿದೆ. ಕ್ರಿ.ಶ.೧೦೯೮-೯೯ರ ಶಾಸನದಲ್ಲಿ, 'ಅಕ್ಕಸಾಲಿ ಖಾವೊಜನ ಭಾಗದಾಯದ'[೩೯] ಹೆಸರಿದೆ. ಕ್ರಿ.ಶ.೧೧೩೦ರ ಶಾಸನದಲ್ಲಿ ಅಕ್ಕಸಾಲೆ ಕಮ್ಮಾರನಾಗಿದ್ದ 'ಕದಿಟ್ಟಯನಾಥಾಚಾರಿಯ'[೪೦] ಉಲ್ಲೇಖ ಬರುತ್ತದೆ. ಈ ಶಾಸನವು ಅಕ್ಕಸಾಲೆ, ಕಮ್ಮಾರಿಕೆ, ಬಡಿಗ ವೃತ್ತಿಗಳು ಒಂದೇ ಕುಟುಂಬದ ವೃತ್ತಿಯಾಗಿದ್ದು, ಒಂದೇ ಮೂಲ ದವರೆನ್ನುವುದನ್ನು ದೃಢಪಡಿಸುತ್ತವೆ. ಅಲ್ಲದೇ ಅವರು ಪಾಂಚಾಳ ವೃತ್ತಿಗಳಲ್ಲಿ ಯಾವುದನ್ನು ಬೇಕಾದರೂ ಆಯ್ಕೆ ಮಾಡಿಕೊಂಡು ಕಾಯಕ ಮಾಡುತ್ತಿದ್ದರು ಎಂಬುದು ತಿಳಿಯುತ್ತದೆ. ಇದರೊಂದಿಗೆ ಅಕ್ಕಸಾಲಿಗರ ಹೆಸರುಗಳನ್ನು ತಿಳಿಯಲು ಇವು ಸಹಾಯಕವಾಗಿವೆ.

ಪಾಂಚಾಳ ತೆರಿಗೆಯ ಉಲ್ಲೇಖಗಳು ವಿಜಯನಗರ ಕಾಲದ ಹಲವಾರು ಶಾಸನಗಳಲ್ಲಿ ಲಭಿಸುತ್ತವೆ. ಕ್ರಿ.ಶ. ೧೪೧೮ರ ಹಿಂದೂಪುರ ತಾಲ್ಲೂಕಿನ ಗೌನಿವಾರಿಪಳ್ಳಿಯ ಶಾಸನದಲ್ಲಿ, ವಿಜಯನಗರದ ಅರಸು ಹರಿಹರನ ಮಗ ದೇವರಾಯ ಮಹಾರಾಯನಿಗೆ ಅರಮನೆಯ ಹಜಾರ ಸಿಂಹಾಸನವನ್ನು ಪಾಂಚಾಳಿಕೆಯವರು ಚಿನ್ನದಲ್ಲಿ ಮಾಡಿಕೊಟ್ಟಿದ್ದರು. ಅದನ್ನು ನೋಡಿದ ರಾಜನು ಸುಪ್ರೀತನಾಗಿ ಈ ಪಾಂಚಾಳರಿಗೆ ಕುದುರೆ, ಎತ್ತು, ಎಮ್ಮೆಗಳು, ತೊತ್ತು, ಬಂಡಿ ಮತ್ತು ಆಭರಣಗಳ ಮೇಲಿನ ತೆರಿಗೆಯನ್ನು ಮನ್ನಾ ಮಾಡಿ ಗೌರವಿಸುತ್ತಾನೆ.[೪೧] ರಾಜರು ಪಾಂಚಾಳರ ಮೇಲೆ ತೆರಿಗೆ ವಿಧಿಸುತ್ತಿದ್ದುದು ಅಷ್ಟೇ ಅಲ್ಲದೆ, ಅವರಲ್ಲಿದ್ದ ಪ್ರತಿಭೆ, ಕುಶಲಗಾರಿಕೆಯನ್ನು ಗುರುತಿಸಿ ಗೌರವ ಸೂಚಕವಾಗಿ ತೆರಿಗೆ ಮನ್ನಾ ಮಾಡುತ್ತಿದ್ದರು ಎಂಬುದು ಇದರಿಂದ ತಿಳಿದುಬರುತ್ತದೆ.

ಕ್ರಿ.ಶ. ೧೪೨೯ರ ಪ್ರೌಢದೇವರಾಯನ ಕಾಲಕ್ಕೆ ಸೇರಿದ ಕಬ್ಬಾಳು ಶಾಸನದಲ್ಲಿ, ವಿಶ್ವಕರ್ಮ ಸಮುದಾಯಕ್ಕೆ ದಾನ ನೀಡಿದ ವಿವರವನ್ನೊಳಗೊಂಡಿದೆ. ಅದರಂತೆ, "ಶ್ರೀ ಕಾಳಿಕಾದೇವಿ ಪರಮೇಸ್ವರ ದೇವರದೀವ್ಯ ಶ್ರೀಪಾದಪದ್ಮಾರಾದಕರುಮಪ್ಪ ಶ್ರೀಮೂಳಯಿರದ ರಾಜಧಾನಿ, ಶ್ರೀ ವೀರಪ್ರತಾಪ ದೇವರಾಯ ಮಹಾರಾಯರ ಅರಮನೆಯ ಚಿಂನಭಂಡಾರದ ಅಡ್ಡಕದ ಸಮಯ ಚಕ್ರವರ್ತಿ ನಖರಾಚಾರಿಯರ ಮಕ್ಕಳು ಮಲಪಾಚಾರಿಯರು, ಯತಿರಾಯಾಚಾರಿಯರು, ಕೆಳವೆಯ ನಾಡಿಗೆ ಮುಖ್ಯವಾದ ಚಿಂಣಾಚಾರಿಯ ಮಗ ಮೂಲೋಚ್ಚಗರಚ್ಚ ಚಿಕ್ಕಮಳಲೂರ ದೇವೋಜ, ಹಿರಿಯಮಳಲೂರ ವಿರುಪೋಜ, ಬಲ್ಲೋಜ, ಕಡಲೂರು ಮಾಯೋಜ, ಸೂಳೇರಿಯ ಅಂಕೋಜ, ಹಡಬಳ್ಳಿಯ ದೊಂದೋಜ, ನಿಟೂರ ಬೊಂಬೋಜ ಮೊದಲಾದ ಸಮಸ್ತ ವೀರಪಾಂಚಾಳರು ಸೇರಿ ಕೊಂಡು ಪೆರುಗಾಳ ಮಲ್ಲೋಜ ಮತ್ತು ಬಯಿರೋಜರಿಗೆ ಸಂವತೆರಹಳ್ಳಿ ಪರಮಹಳಿ ಹಿರಿಯೂರ ಬಡಿಗೆ ಕಂದುಜಿಕೆ, ಅಕ್ಕಸಾಲಿಕೆ, ಪಂಚಾಳ ಕೊಲವರ್ತನೆ ಮೊದಲಾದ ಬೇಡಿಕೆಗಳಿಗಾಗಿ ಸರ್ವಮಾನ್ಯವಾಗಿ ದಾನ ನೀಡಲಾಗಿದೆ".[೪೨]

ಈ ಶಾಸನದಿಂದ ಪಾಂಚಾಳರ ಹೆಸರುಗಳು, ವಾಸಿಸುತ್ತಿದ್ದ ಊರು, ಸ್ಥಳಗಳ ಹೆಸರುಗಳನ್ನು ತಿಳಿಯಬಹುದಾಗಿದೆ. ಅಲ್ಲದೆ ಅವರು ಶ್ರೀ ಕಾಳಿಕಾದೇವಿಯ ಆರಾಧಕರಾಗಿದ್ದರು ಎಂಬುದಾಗಿ ತಿಳಿದುಬರುತ್ತದೆ. ಅಲ್ಲದೆ ದಾನ ನೀಡಿರುವವರು ಶ್ರೀವೀರಪ್ರತಾಪ ದೇವರಾಯ ಮಹಾರಾಜರ ಅರಮನೆಯ ಚಿನ್ನಭಂಡಾರದ ಅಡ್ಡಕದ ಸಮಯ ಚಕ್ರವರ್ತಿ ನಕರಾಚಾರಿ ಯರ ಮಕ್ಕಳು ಇವರು ಅರಮನೆಯವರ ಚಿನ್ನಭಂಡಾರದ ಆಭರಣ ತಯಾರಕರಾಗಿರ ಬಹುದಾಗಿದ್ದು, ಸಹಜವಾಗಿ ಆರ್ಥಿಕವಾಗಿ ಪ್ರಬಲರಾಗಿದ್ದು, ದಾನಗಳನ್ನು ನೀಡಿದ್ದಾರೆ ಎಂಬುದಾಗಿ ತಿಳಿದುಬರುತ್ತದೆ.

ಕ್ರಿ.ಶ. ೧೪೩೦ರ ಮರಗಲ್ಲು ಶಾಸನದಲ್ಲಿ, ಲಕ್ಕಂಣ ವೊಡೆಯರು ಆಳುತ್ತಿದ್ದ ಮುಳಬಾಗಿಲು ರಾಜ್ಯದ ತೇಕಲನಾಡಿನ ಜುಂಜಿರುಗಣಂಗಳಿಗೆ ಸಲ್ಲುವ ಮರಗಳಲು(ಈಗಿನ ಮರಗಲ್ಲು) ಗ್ರಾಮದ ಹಲವು ಪಾಂಚಾಳರು ಸೇರಿಕೊಂಡು ಸಂತೆಯನ್ನು ಕಟ್ಟಿಸಿ ಅದರ ಸಂಬಂಧ ಆ ಸಂತೆಯ ಪಟ್ಟಣ ಸ್ವಾಮಿಯಾದ ಚಿಯಿಯಬಸ್ಸಿಸೆಟ್ಟಿಗೆ ಭೂಮಿಯನ್ನು ಮತ್ತು ಕೆಲವು ತೆರಿಗೆಯನ್ನು ಮಾನ್ಯವಾಗಿ ಬಿಡಲಾಗಿದೆ. ಸಂತೆಯಲ್ಲಿ ಕೊತ್ತು, ಯತ್ತು, ತೊತ್ತು ಕುದುರೆಯನ್ನು ಕೊಂಡಾಗ, ಮಾರಿದಾಗ ಕಬ್ಬಿಣ ಕೆಲಸ, ಮರಗೆಲಸ, ಅಕ್ಕಸಾಲೆ, ಅಗಸ, ನಾವಿಂದ, ಹೊಲೆಯ ಮುಂತಾದವರೂ ಮಾನ್ಯವನ್ನು ಸಲ್ಲಿಸಬೇಕು ಎಂದು ಶಾಸನದಲ್ಲಿ ಕಟ್ಟಳೆ ವಿಧಿಸಿದೆ.[೪೩] ಈ ಶಾಸನದಲ್ಲಿ ಸಮಸ್ತ ಪಾಂಚಾಳರು ಸೇರಿಕೊಂಡು ಸಂತೆಯನ್ನು, ಕಟ್ಟಿಸಿ ಭೂಮಿಯನ್ನು ದಾನ ನೀಡಿರುವುದನ್ನು ಗಮನಿಸಿದಾಗ ಅವರ ಒಗ್ಗಟು ಹಾಗೂ ಆರ್ಥಿಕತೆ ಅರ್ಥವಾಗುತ್ತದೆ.

ಕ್ರಿ.ಶ. ೧೫೨೧ರ ಕೋಡಿಹಳ್ಳಿ ಶಾಸನದಲ್ಲಿ, ಕೃಷ್ಣದೇವರಾಯನು ರಾಜ್ಯವಾಳುತ್ತಿದ್ದಾಗ ಇವನಿಗೆ ಪುಣ್ಯವಾಗಬೇಕು, ಸೇನೆ ಸಮೃದ್ಧವಾಗಬೇಕು, ದಿಗ್ವಿಜಯವಾಗಬೇಕೆಂದು ರಾಚಿರಾಜಗಳ ಮಗನಾದ ಸಾಳುವ ಗೋವಿಂದರಾಜನು ತ್ರಿಯಂಬಕದೇವರ ಸೇವೆಗಾಗಿ ತೆರಕಣಾಂಬೆ ಸ್ಥಳದ ಕೋಡಿಹಳ್ಳಿ, ಅಂಣೆಯೂರು, ಚಂನಯ್ಯನಪುರ ಗ್ರಾಮಗಳ ಸಕಲ ತೆರಿಗೆಗಳನ್ನು ದಾನವಾಗಿ ನೀಡಿದ್ದಾನೆ. ಬೆಟ್ಟದ ಕಾವಲು, ಬೋಗಾರದೆರೆ, ಗಣಾಚಾರ ತೆರಿಗೆ, ವೋಜುಗಳ ತೆರಿಗೆ, ದಾಸುಗಳ ತೆರಿಗೆ, ಅಹಳತೆರಿಗೆ, ಅಗಸರ ತೆರಿಗೆ, ನಾಯಿಂದರ ತೆರಿಗೆ, ಕುಂಬಾರ ತೆರಿಗೆ, ಗಾಣಸುಂಕ, ಉಪ್ಪಿಲಿಕಾವಲಿ, ಮಗ್ಗಸುಂಕ ಮೊದಲಾದ ತೆರಿಗೆಗಳಿಂದ ಕೋಡಿಹಳ್ಳಿಗೆ ಸಲ್ಲುತ್ತಿದ್ದ ಸರ್ವ ಆದಾಯವನ್ನು ದಾನ ನೀಡಿದ್ದಾನೆ.[೪೪]

ಈ ಮೇಲಿನ ಶಾಸನದಿಂದ ಕೋಡಿಹಳ್ಳಿಗೆ ಸಲ್ಲುತ್ತಿದ್ದ ವಿವಿಧ ತೆರಿಗೆಗಳ ಹೆಸರುಗಳು ತಿಳಿಯುತ್ತದೆ. ಅಲ್ಲದೆ, ವೋಜತೆರಿಗೆ(ಅಕ್ಕಸಾಲಿಕೆ ತೆರಿಗೆ) ಮತ್ತು ಮಗ್ಗ ತೆರಿಗೆಗಳ ಉಲ್ಲೇಖದಿಂದ ರಾಜ್ಯಕ್ಕೆ ಆದಾಯ ಬರುತ್ತಿತ್ತು ಹಾಗೂ ನೇಕಾರರು ಮತ್ತು ಅಕ್ಕಸಾಲಿಗರು ತೆರಿಗೆ ಕೊಡುವಷ್ಟು ಆದಾಯ ಗಳಿಸಲು ಸಮರ್ಥರಾಗಿದ್ದರು ಎಂಬುದನ್ನು ತಿಳಿಸುತ್ತದೆ. ಕೃಷ್ಣದೇವರಾಯನ ಕಾಲದ ಶಾಸನಗಳಲ್ಲಿ ತೆರಿಗೆಯನ್ನು 'ಓಜ ತೆರಿಗೆ' ಎಂದು ಉಲ್ಲೇಖಿಸುತ್ತದೆ.

ಕ್ರಿ.ಶ. ೧೫೫೫ರ ಸದಾಶಿವರಾಯನ ಕಾಲಕ್ಕೆ ಸೇರಿದ್ದ ಬೇಲೂರಿನ ಶಾಸನದಲ್ಲಿ, ಪಾಂಚಾಳದವರು ಬೇಲೂರಿನ ದಕ್ಷಿಣ ಬೀದಿಯಲ್ಲಿ ಮನೆಗಳನ್ನು ಕಟ್ಟಿಸಿಕೊಳ್ಳಲು ಮತ್ತು ತಮ್ಮ

ಕೋಮಿನ ವಿಧಿಯನ್ನು ಆಚರಿಸಲು ವಿದ್ಯಾನಗರದ ರಥೋತ್ಸವದ ಕಾಲದಲ್ಲಿ ಪಾಂಚಾಲರಿಗೆ ಕೊಟ್ಟಿದ್ದ ಹಕ್ಕನ್ನು ಮತ್ತು ಸ್ಥಾನಮಾನಗಳನ್ನು ಬೇಲೂರಿನ ಚೆನ್ನಿಗರಾಯನ ದೇವಸ್ಥಾನದಲ್ಲಿಯೂ ಅನುಭವಿಸಬಹುದೆಂದು ತಿಳಿಸುತ್ತದೆ.[೪೫] ಈ ಶಾಸನದ ಸಾಲುಗಳು ಪಾಂಚಾಳರಿಗೆ ಪ್ರತ್ಯೇಕ ಕೇರಿಗಳಲ್ಲಿ ತಮ್ಮ ವಾಸ ಗೃಹಗಳನ್ನು ಕಟ್ಟಿಕೊಳ್ಳಲು ಹಾಗೂ ವಿಜಯನಗರ ರಾಜಧಾನಿಯಲ್ಲಿ ಪಾಂಚಾಳರು ಪಡೆದಿದ್ದ ಸವಲತ್ತುಗಳನ್ನು ಬೇಲೂರಿನ ಪಾಂಚಾಳರಿಗೂ ನೀಡಿದ್ದರು ಎಂಬುದನ್ನು ತಿಳಿಸುತ್ತದೆ. ಇದರಿಂದ ವ್ಯಕ್ತವಾಗುವ ಪ್ರಮುಖ ಅಂಶವೆಂದರೆ ರಾಜರಿಂದ ಪಾಂಚಾಳರು ಸಾಮ್ರಾಜ್ಯದಾದ್ಯಂತ ಸಮಾನ ರೀತಿಯಲ್ಲಿ ಮನ್ನಣೆ ಗಳಿಸಿದ್ದರು.

ಒಟ್ಟಾರೆ ಶಾಸನಗಳಿಂದ ವಿಜಯನಗರ ಕಾಲದ ಪಾಂಚಾಳರು ಅದರಲ್ಲೂ ಅಕ್ಕಸಾಲಿಗರ ಹೆಸರುಗಳು ತಿಳಿಯುತ್ತವೆ. ಅಲ್ಲದೆ ಪಾಂಚಾಳರ ಸಂಘಟನೆ, ತೆರಿಗೆ ಕೊಡುವ ಸಾಮರ್ಥ್ಯವನ್ನೂ ಇವರು ಹೊಂದಿದ್ದರು ಎಂಬುದು ಸ್ಪಷ್ಟವಾಗುತ್ತದೆ. ಇವರ ಸೇವೆಯನ್ನು ಗುರುತಿಸಿ ರಾಜರು ಕೆಲ ತೆರಿಗೆಗಳನ್ನು ಮನ್ನಾ ಮಾಡಿ ಗೌರವಿಸುತ್ತಿದ್ದುದನ್ನೂ ಕಾಣಬಹುದು. ಇವರಿಗೆ ಸಮಾಜದಲ್ಲಿ ಗೌರವಯುತ ಸ್ಥಾನ ಲಭಿಸಿದ್ದುದು ಗಮನಾರ್ಹ.

ವಸ್ತ್ರ ಮತ್ತು ಆಭರಣಗಳ ತಯಾರಿಕೆಯಲ್ಲಿ ಪ್ರಮುಖ ಪಾತ್ರ ವಹಿಸಿದ್ದ ನೇಕಾರರು ಮತ್ತು ಅಕ್ಕಸಾಲಿಗರು ರಾಜರಿಗೆ, ಜನಸಾಮಾನ್ಯರಿಗೆ ಮತ್ತು ಸಮಾಜದ ಅಗತ್ಯಕ್ಕೆ ಅನುಗುಣವಾಗಿ ವಸ್ತ್ರಾಭರಣಗಳನ್ನು ತಯಾರಿಸುತ್ತಾ ರಾಜಧಾನಿ ಅಥವಾ ನಗರಗಳಲ್ಲಿ ಹೆಚ್ಚಾಗಿ ವಾಸಿಸುತ್ತಿದ್ದರು. ಅಲ್ಲದೆ ರಾಜರಿಂದ ಮಾನ್ಯತೆಯನ್ನು ಗಳಿಸಿದ್ದರು. ಹಾಗಾಗಿ ಇವರ ಸಾಮಾಜಿಕ ಮತ್ತು ಆರ್ಥಿಕ ಸ್ಥಾನಮಾನ ಉತ್ತಮವಾಗಿತ್ತು ಎಂಬುದು ತಿಳಿದುಬರುವ ಅಂಶ.

ಆಕರ ಗ್ರಂಥಗಳು

೧. ನಿರುಪಮ(ಅನು), ಆಮುಕ್ತಮಾಲ್ಯದ, ಪು.ಸಂ.೩೭.

೨. ಸಿದ್ದಲಿಂಗಮ್ಮ, ಬಿ.ಜಿ., ಪ್ರಾಚೀನ ಸಾಹಿತ್ಯ ಹಾಗೂ ಶಾಸನಗಳಲ್ಲಿ ಸಾಲಿಗರು (ಲೇಖನ), ಇತಿಹಾಸ ದರ್ಶನ, ಸಂಪುಟ-೨೨, ೨೦೦೭, ಪು.ಸಂ.೨೬೧.

೩. ಶ್ರೀಕಂಠಯ್ಯ, ಕೆ., ಕನ್ನಡ ಸಾಹಿತ್ಯದಲ್ಲಿ ಜನಜೀವನ ಚಿತ್ರ, ಪು.ಸಂ.೩೨೬.

೪. Vijaya Ramaswamy, Textiles and Weavers in Medieval South India, P.No.63-64.

೫. ಅದೇ, ಪು.ಸಂ.೬೪.

೬. ಅದೇ.

೭. ನಾಗರಾಜಪ್ಪ, ಕೆ.ಜಿ., ನೇಕಾರರ ಸಾಂಸ್ಕೃತಿಕ ಹಿನ್ನೆಲೆ(ಲೇಖನ), ಮಹದೇವ.ಸಿ(ಸಂ), ನೇಕಾರ ಸಮಾಜ ಸಂಸ್ಕೃತಿ ಆರ್ಥಿಕ ಸ್ಥಿತಿಗತಿ, ಪು.ಸಂ.೦೫.

೮. Kumaraswamy, M.C., Industries in Karnataka with Special Reference to Vijayanagara Period, P.No.9-10.

೯. ನ್ಯೂನಿಜ್, ಪ್ರಕ.ಇ., ಪು.ಸಂ.೩೮೪.
೧೦. ಆಮುಕ್ತಮಾಲ್ಯದ, ಪು.ಸಂ.೩೯.
೧೧. ಹಿರೇಮಠ, ಬಿ.ಆರ್., ಶಾಸನಗಳಲ್ಲಿ ಕರ್ನಾಟಕದ ವರ್ತಕರು, ಪು.ಸಂ.೧೧೧.
೧೨. ಸಿದ್ದಲಿಂಗಮ್ಮ, ಬಿ.ಜಿ., ಪೂರ್ವೋಕ್ತ, ಪು.ಸಂ.೨೬೨.
೧೩. ಕಂಠೀರವ ನರಸರಾಜ ವಿಜಯ, ಪದ್ಯ – ೭೧, ಪು.ಸಂ.೧೯೩.
೧೪. Nagaraju, H.M., Devaraya II and His Times, P.No.103-105.
೧೫. Mahalingam, T.V., Administration and Social Life under Vijayanagara(Part-I), P.No.62-63.
೧೬. ಅದೇ, ಪು.ಸಂ.೬೧.
೧೭. ಚಿದಾನಂದಮೂರ್ತಿ,ಎಂ., ಕನ್ನಡಶಾಸನಗಳ ಸಾಂಸ್ಕೃತಿಕ ಅಧ್ಯಯನ, ಪು.ಸಂ. ೪೮೯–೯೦
೧೮. ಅದೇ.
೧೯. ಪ್ರೌಢದೇವರಾಯನ ಶಾಸನಗಳು, ಶಾ.ಸಂ.೪೦, ಪು.ಸಂ.೮೨–೮೩.
೨೦. ಅದೇ, ಶಾ.ಸಂ.೭೮, ಪು.ಸಂ.೧೭೪–೧೭೫.
೨೧. ಅದೇ, ಶಾ.ಸಂ.೧೧೬, ಪು.ಸಂ.೨೫೧–೨೫೬.
೨೨. ಅದೇ, ಶಾ.ಸಂ.೧೪೯, ಪು.ಸಂ.೩೧೫–೧೬.
೨೩. ಅದೇ, ಶಾ.ಸಂ.೨೧೦, ಪು.ಸಂ.೪೧೯–೪೨೨.
೨೪. ಕೃಷ್ಣದೇವರಾಯನ ಶಾಸನಗಳು, ಶಾ.ಸಂ.೪೮, ಪು.ಸಂ.೧೦೦–೧೦೩.
೨೫. ಅದೇ, ಶಾ.ಸಂ.೧೪೭, ಪು.ಸಂ.೨೯೩–೯೭.
೨೬. ಚಿದಾನಂದ ಮೂರ್ತಿ,ಎಂ., ಪೂರ್ವೋಕ್ತ, ಪು.ಸಂ.೪೮೭.
೨೭. ಮೋಹನತರಂಗಿಣಿ, ಪದ್ಯ–೨೨, ಪು.ಸಂ.೧೨.
೨೮. ಕುಮಾರಸ್ವಾಮಿ, ಕೆ.ಎಸ್., ಪ್ರಾಚೀನ ಕರ್ನಾಟಕದಲ್ಲಿ ಶಿಲ್ಪಚಾರಿಯರು, ಪು.ಸಂ.೧೨೯.
೨೯. ಸನತ್ಕುಮಾರ ಚರಿತೆ, ಪದ್ಯ–೩೩, ಪು.ಸಂ.೧೭೪.
೩೦. ಅದೇ, ಪದ್ಯ–೩೪, ಪು.ಸಂ.೧೭೪–೧೭೫.
೩೧. ತಿಮ್ಮಾರೆಡ್ಡಿ, ಎಸ್.ವೈ., ಕುಲಕಸುಬುಗಳು ಮತ್ತು ಆಧುನಿಕತೆ, ಪು.ಸಂ.೨೩.
೩೨. Nagaraju, H.M., Devaraya II and His Times: P.No.112.
೩೩. Mahalingam, T.V., : Administration and Social Life under Vijayanagara, (Part-II), P.No.116.
೩೪. ಅದೇ.
೩೫. ಬಾರ್ಬೋಸ, ಪ್ರಕ.ಇಂ., ಪು.ಸಂ.೨೬೮.
೩೬. ಕುಮಾರಸ್ವಾಮಿ, ಕೆ.ಎಸ್., ಪೂರ್ವೋಕ್ತ, ಪು.ಸಂ.೯೦.

೩೭. Nagaraju, H.M., ಪೂರ್ವೋಕ್ತ, ಪು.ಸಂ.೧೦೩-೧೦೫.

೩೮. ಅದೇ, ಪು.ಸಂ.೯೮.

೩೯. ಚಿದಾನಂದಮೂರ್ತಿ, ಎಂ., ಪೂರ್ವೋಕ್ತ, ಪು.ಸಂ.೪೮೮.

೪೦. ವೀರೇಶ ಬಡಿಗೇರ, ಶಾಸನಗಳಲ್ಲಿ ಆಯಗಾರಿಕೆ ಸಂಸ್ಕೃತಿ(ಲೇಖನ), ಪು.ಸಂ.೭೭, ಶಾಸನ ಅಧ್ಯಯನ, ಸಂಪುಟ-೫, ಸಂಚಿಕೆ-೧ ಮತ್ತು ೨, ೨೦೦೮.

೪೧. ಕುಮಾರಸ್ವಾಮಿ, ಕೆ.ಎಸ್., ಪೂರ್ವೋಕ್ತ, ಪು.ಸಂ.೭೭.

೪೨. ಪ್ರೌಢದೇವರಾಯನ ಶಾಸನಗಳು, ಶಾ.ಸಂ-೪೩, ಪು.ಸಂ.೮೬-೮೭

೪೩. ಅದೇ, ಶಾ.ಸಂ-೫೭, ಪು.ಸಂ.೧೨೦-೧೨೨.

೪೪. ಕೃಷ್ಣದೇವರಾಯನ ಶಾಸನಗಳು, ಶಾ.ಸಂ-೧೪೮, ಪು.ಸಂ.೨೯೮-೯೯.

೪೫. ಕುಮಾರಸ್ವಾಮಿ, ಕೆ.ಎಸ್., ಪೂರ್ವೋಕ್ತ, ಪು.ಸಂ.೯೦.

ಅಧ್ಯಾಯ ಐದು :ವಸ್ತ್ರ ಮತ್ತು ಆಭರಣಗಳ ಸಾಂಸ್ಕೃತಿಕ ಚಿತ್ರಣ

ವಸ್ತ್ರ ಮತ್ತು ಆಭರಣಗಳ ಸಾಂಸ್ಕೃತಿಕ ಚಿತ್ರಣ

ಮಾನವ ಜೀವನದ ಮೂಲಭೂತ ಅಗತ್ಯಗಳಲ್ಲಿ ಆಹಾರ, ವಸತಿ ಮತ್ತು ವಸ್ತ್ರಗಳು ಅತಿ ಮುಖ್ಯವಾಗಿವೆ. ಮೂಲಭೂತ ಅಗತ್ಯಗಳಲ್ಲೊಂದಾದ ವಸ್ತ್ರವನ್ನು ಮಾನವ ಮೊದಲು ದೇಹ ರಕ್ಷಣೆಗಾಗಿ, ಪ್ರಕೃತಿಯಲ್ಲಿ ದೊರೆಯುತ್ತಿದ್ದ ಎಲೆ, ಪ್ರಾಣಿಯ ಚರ್ಮವನ್ನು ಬಟ್ಟೆಯಂತೆ ಸುತ್ತಿಕೊಂಡನು. ಹಾಗೆಯೇ ಅಲಂಕಾರ ಪ್ರಿಯತೆಯನ್ನು ಮೈಗೂಡಿಸಿಕೊಂಡು, ತಾನು ಇತರರಿಂತ ಸುಂದರವಾಗಿ ಕಾಣಬೇಕೆಂಬ ಒಲವು ಆಭರಣಗಳ ಅನ್ವೇಷಣೆಗೆ ದಾರಿ ಮಾಡಿಕೊಟ್ಟಿತು. ಹಾಗಾಗಿ ಪ್ರಕೃತಿದತ್ತವಾಗಿ ಸಿಗುತ್ತಿದ್ದ ಹೂವು, ಕಪ್ಪೆಚಿಪ್ಪು, ಶಂಖ, ದಂತ ಮುಂತಾದವುಗಳನ್ನು ಆಭರಣಗಳಾಗಿ ಧರಿಸಲು ಪ್ರಾರಂಭಿಸಿದ. ವಸ್ತ್ರ ಮತ್ತು ಆಭರಣಗಳು ಮಾನವನ ದೇಹವನ್ನು ಮುಚ್ಚುವ, ರಕ್ಷಿಸುವ, ಅಲಂಕರಿಸುವ ಮತ್ತು ಶ್ರೀಮಂತಿಕೆ, ಪ್ರತಿಷ್ಠೆ ಹಾಗೂ ಸಂಪತ್ತಿನ ಆಕರಗಳೂ ಆಗಿ ಬೆಳೆಯತೊಡಗಿದವು. ಹಾಗೆಯೇ ಮಾನವ ಜನಾಂಗದ ಭೌತಿಕ ಸಂಸ್ಕೃತಿಯ ವಿಕಾಸದ ಹಾದಿಯನ್ನು ತಿಳಿಯಲು ವಸ್ತ್ರ ಮತ್ತು ಆಭರಣಗಳು ಪ್ರಮುಖ ಪಾತ್ರವಹಿಸಿವೆ.

ಇತಿಹಾಸ ಕಾಲದಿಂದ ವಸ್ತ್ರ ಮತ್ತು ಆಭರಣಗಳ ಧಾರಣೆಯ ಪ್ರಮಾಣ, ವಿನ್ಯಾಸಗಳು ಆಯಾಕಾಲಕ್ಕೆ ತಕ್ಕಂತೆ ಸೇರ್ಪಡೆಗೊಳ್ಳುತ್ತಾ ಬಂದಿವೆ. ವಿಶೇಷ ಸಾಧನೆ, ಸಾಹಸ ಪ್ರದರ್ಶನ, ಅಭಿನಯ, ವಿದೇಶಿಯರು, ರಾಯಭಾರಿಗಳು, ತಪ್ಪು ಮಾಡಿ ಶಿಕ್ಷೆಗೆ ಗುರಿಯಾದವರಿಗೆ ಬಹುಮಾನ ವಾಗಿ, ಯುದ್ಧನಿರತ ಸೈನಿಕರಿಗೆ ಪ್ರೇರೇಪಣಾ ಸಾಧನಗಳಾಗಿ, ದೇವರಿಗೆ ಸೇವಾ ರೀತಿಯ ದಾನಗಳಾಗಿ ವಸ್ತ್ರ ಮತ್ತು ಆಭರಣಗಳನ್ನು ನೀಡುತ್ತಾ ಬಂದಿರುವುದು ಗಮನಾರ್ಹ.

ವಸ್ತ್ರ ಮತ್ತು ಆಭರಣಗಳು ವಿಜಯನಗರ ಕಾಲದ ಸಾಂಸ್ಕೃತಿಕ ಚರಿತ್ರೆಯ ರಚನೆಯಲ್ಲಿ ಅತ್ಯಂತ ಮಹತ್ವದ ಪಾತ್ರವಹಿಸುತ್ತವೆ. ಚರಿತ್ರೆ ರಚನೆಗೆ ಇತರ ಆಕರಗಳು ಹೇಗೆ ಮುಖ್ಯವೋ ಅಂತೆಯೇ ವಸ್ತ್ರ ಮತ್ತು ಆಭರಣಗಳು ಚರಿತ್ರೆಯನ್ನು ಕಟ್ಟಿಕೊಡುವಲ್ಲಿ ಪ್ರಮುಖ ಆಕರಗಳಾಗುತ್ತವೆ. ಆಡಳಿತವರ್ಗ, ವೃತ್ತಿನಿರತರು, ಸ್ತ್ರೀಯರು, ದೇವದೇವತೆಗಳು, ದಾರ್ಶನಿಕರು, ಪ್ರಾಣಿಗಳು

ಮೊದಲಾದವರ ಜೀವನದ ಸ್ಥೂಲ ಪರಿಚಯ ಮಾಡಿಕೊಡುವಲ್ಲಿ ಇವು ಸಹಕಾರಿಯಾಗುತ್ತವೆ. ವಸ್ತ್ರ ಮತ್ತು ಆಭರಣಗಳು ಕೇವಲ ಧಾರಣೆ ಅಲಂಕರಣೆಗಳಿಗಷ್ಟೆ ಅಲ್ಲದೇ, ರಾಜಕೀಯ, ಆರ್ಥಿಕ, ಸಾಮಾಜಿಕ, ಧಾರ್ಮಿಕ ಮತ್ತು ರಕ್ಷಣಾತ್ಮಕ ಸಂಗತಿಗಳನ್ನು ತಿಳಿದುಕೊಳ್ಳಲು ನೆರವಾಗುತ್ತವೆ. ಅಲ್ಲದೇ ಕಲೆ, ಸಾಹಿತ್ಯ, ಸಂಗೀತ, ನೃತ್ಯ, ಸೈನ್ಯ, ವ್ಯಾಪಾರ ವೃತ್ತಿಗಳಿಗೆ ನೀಡಿದ ಆಧ್ಯತೆ, ಪ್ರೋತ್ಸಾಹ ಮೊದಲಾದ ಸಂಗತಿಗಳನ್ನು ಇವು ತಿಳಿಸುತ್ತವೆ.

ರಾಜಕೀಯ

ರಾಜಕೀಯ ಅಥವಾ ಆಡಳಿತಾತ್ಮಕ ಕ್ಷೇತ್ರದಲ್ಲಿ ವಸ್ತ್ರ ಮತ್ತು ಆಭರಣಗಳನ್ನು ಕುರಿತಂತೆ, ಕೃಷ್ಣದೇವರಾಯನು ಆಮುಕ್ತಮಾಲ್ಯದಲ್ಲಿ ಹೇಳಿರುವಂತೆ, "ರಾಜ್ಯಾದಾಯದಲ್ಲಿ ನಾಲ್ಕು ಭಾಗ ಮಾಡಿ ವಿಂಗಡಿಸಿ, ಅದರಲ್ಲಿ ಒಂದು ಭಾಗವನ್ನು ರಾಜ ತನ್ನ ಭೋಗಾದಿಗಳಿಗೆ ಬಳಸಬಹುದು"[೧] ಎಂದು ವಿವರಿಸುತ್ತಾನೆ. ಅಂದರೆ ರಾಜನ ಭೋಗ ಜೀವನದಲ್ಲಿ ವಸ್ತ್ರ ಮತ್ತು ಆಭರಣಗಳಿಗೆ ಹೆಚ್ಚು ವ್ಯಯಿಸುತ್ತಿದ್ದುದಂತೂ ಸ್ಪಷ್ಟ. ಪರ್ಶಿಯಾದ ರಾಯಭಾರಿ ಅಬ್ದುರ್ ರಜಾಕ್‌ನು ಎರಡನೆ ದೇವರಾಯನ ಕಾಲದಲ್ಲಿ ವಿಜಯನಗರಕ್ಕೆ ಭೇಟಿ ನೀಡಿದ್ದನು. ಅವನು,"ರಾಜನಿಗೆ ಸುಂದರವಾದ ಕುದುರೆಗಳನ್ನು, ಬೆಲೆಯಾದ ಡಮಾಸ್ಕ್ ಮತ್ತು ಸ್ಯಾಟೀನ್ ಬಟ್ಟೆಗಳ ಥಾನುಗಳನ್ನು ಅರ್ಪಿಸಿದನು. ರಾಜನು ಹಸಿರು ಬಣ್ಣದ ಸ್ಯಾಟೀನ್ ಬಟ್ಟೆಯನ್ನು ಧರಿಸಿದ್ದನು. ಚಿನ್ನದಿಂದ ಕಸೂತಿ ಕೆಲಸ ಮಾಡಿದ್ದ ಬಜರೀಸ್ ಎಂಬ ಉದ್ದನೆಯ ಅಂಗಿಯನ್ನು ಧರಿಸಿದ್ದನು. ರಾಜನು ಧರಿಸಿದ್ದ ಕುಲಾಯಿ ಆರರಿಂದ ಎಂಟು ಡಯಾಮೀಟರ್ ಅಳತೆಯದಾಗಿತ್ತು" ಎಂದು ಹೇಳುತ್ತಾನೆ. "ರಾಜ ಕೊರಳ ಸುತ್ತ ವಜ್ರ, ವೈಢೂರ್ಯ ಮತ್ತು ಮುತ್ತುಗಳ ಕೊರಳ ಪಟ್ಟಿಯನ್ನು ಹಾಕಿಕೊಂಡಿದ್ದನು. ಆ ಅಚ್ಚುಮುತ್ತಿನ ಹಾರದ ಬೆಲೆಯನ್ನು ಕಟ್ಟಲು ಯಾವ ಸಫಾರರಿಗೂ ಸಾಧ್ಯವಿಲ್ಲವೇನೋ![೨] ಎಂದು ಹೇಳುತ್ತಾನೆ.

ಪಾಯೇಸ್‌ನು ಕೃಷ್ಣದೇವರಾಯನ ಆಳ್ವಿಕೆಯ ಸಂದರ್ಭದಲ್ಲಿ ರಾಯನನ್ನು ಭೇಟಿ ಮಾಡಿದ್ದನು. ಅವನು ಕಣ್ಣಾರೆ ಕಂಡಂತೆ ರಾಜನು ಧರಿಸಿದ್ದ ವಸ್ತ್ರ ಮತ್ತು ಆಭರಣಗಳನ್ನು ಕುರಿತು ಹೀಗೆ ಹೇಳುತ್ತಾನೆ. ಅದರಂತೆ, "ಕೃಷ್ಣದೇವರಾಯನು ಜರತಾರಿಯ ಚಿನ್ನದ ಎಳೆಗಳಿಂದ ಗುಲಾಬಿ ಹೂಗಳ ಕಸೂತಿ ಹಾಕಿ ಅಲಂಕರಿಸಿದ ಪದರು ಪದರಿನ ಬಿಳಿ ರೇಷ್ಮೆಯ ವಸ್ತ್ರಗಳನ್ನು ತೊಟ್ಟು, ಕೊರಳಲ್ಲಿ ಬಹುಬೆಲೆಯಾದ ವಜ್ರಗಳ ಪದಕವನ್ನು, ತಲೆಯ ಮೇಲೆ ರೇಷ್ಮೆ ಹಾಗೂ ಕಿಂಕಾಪಿನ ಗೆಲಿಸಿಯನ್ ಪಾಗನ್ನು ಧರಿಸಿದ್ದನು. ರಾಜನ ಕಿರೀಟ ಚಿನ್ನದಿಂದ ಮಾಡಲ್ಪಟ್ಟಿದ್ದು, ಅದು ಎರಡು ಸ್ಪ್ಯಾನ್‌ಗಳ ಉದ್ದವಿದೆ. ರಾಜನ ಸೊಂಟ ಪಟ್ಟಿಯು ಚಿನ್ನ ಮತ್ತು ಹರಳುಗಳಿಂದ ಕೂಡಿದ್ದು, ಒಂದರ ಕೆಳಗೆ ಒಂದರಂತೆ ಹಲವಾರು ಎಳೆಗಳಿಂದ ಮಾಡಿದ್ದವುಗಳಾಗಿದ್ದವು. ಬೆಲೆಬಾಳುವ ಮುತ್ತುಗಳಿಂದ ತಯಾರಾದ ಕಾಲ್ಕಡಗ ಬೇರೆಲ್ಲವುಗಳಿಗಿಂತ ಬೆಲೆಬಾಳುವ ಆಭರಣವಾಗಿತ್ತು".[೩]

ಈ ಮೇಲಿನ ವಿವರಣೆಗಳಿಂದ ನಮಗೆ ಸ್ಪಷ್ಟವಾಗಿ ಕಾಣುವ ಅಂಶವೆಂದರೆ ರಾಜನ ಹುದ್ದೆಯ ಗಾಂಭೀರ್ಯತೆ, ಸ್ಥಾನದ ಅಲಂಕರಣೆ, ಶ್ರೀಮಂತಿಕೆ, ಸಂಸ್ಕೃತಿಯ ಪ್ರತೀಕವಾಗಿ ರಾಜನ ವಸ್ತ್ರ ಮತ್ತು ಆಭರಣಗಳು ಇದ್ದವು. ಹಾಗಾಗಿ ದುಬಾರಿ ಬೆಲೆಯನ್ನು ನೀಡಿ ಅವುಗಳನ್ನು

ಆಮದು ಮಾಡಿಕೊಂಡು ತನ್ನ ಉಡುಪುಗಳ ಸಿದ್ಧತೆಯಲ್ಲಿ ಬಳಸಿ ಧರಿಸುತ್ತಿದ್ದ ನೆಂದರೆ ಅದು ರಾಜ ಮಾತ್ರವಾಗಿರಲು ಸಾಧ್ಯವಾಗುತ್ತಿತ್ತು.

ನ್ಯೂನಿಜ್‌ನು, "ರಾಜನು ಲಿಖಿತವಾದ ಆಜ್ಞೆಗಳನ್ನು ಹೊರಡಿಸುವುದಿಲ್ಲ, ಆದರೆ ರಾಜನು ಯಾರಿಗೆ ಅನುಗ್ರಹ ತೋರಿಸುತ್ತಾನೋ, ಅವರಿಗೆ ಮೇಣದ ಮೇಲೆ ತನ್ನ ಉಂಗುರದ ಮುದ್ರೆಯನ್ನು ಒತ್ತಿಕೊಡುತ್ತಾನೆ. ಈ ಮುದ್ರೆಗಳು ಸ್ವಾಮ್ಯದ ಸನ್ನದುಗಳು ಇದ್ದಂತೆ"[೪] ಎಂಬುದಾಗಿ ವಿವರಿಸುತ್ತಾನೆ. ನ್ಯೂನಿಜ್‌ನ ವಿವರಣೆಯಲ್ಲಿ ಸ್ಪಷ್ಟವಾಗುವ ಅಂಶವೆಂದರೆ ಮುದ್ರೆಯುಂಗುರದ ಮಹತ್ವ. ರಾಜನಪಟ್ಟಾಭಿಷೇಕ ಸಂದರ್ಭದಲ್ಲಿ ಅಗತ್ಯವಾಗಿ ಧರಿಸಲೇಬೇಕಾದ ಉಂಗುರವಾಗಿತ್ತು. ಇದು ಅಧಿಕಾರ ಹಸ್ತಾಂತರವನ್ನು ಸೂಚಿಸುವ ಆಭರಣವಾಗಿತ್ತು. ಹಾಗಾಗಿ ರಾಜರು ಇದನ್ನು ಮೊಹರಿನಂತೆ ಬಳಸುತ್ತಿದ್ದರು.

ದಂಡನಾಯಕನ ವಸ್ತ್ರ ಮತ್ತು ಆಭರಣಗಳು ರಾಜನ ಮಾದರಿಯಲ್ಲಿ ಇದ್ದರೂ ಪ್ರಮಾಣದಲ್ಲಿ ರಾಜನ ಕಿರೀಟಕ್ಕಿಂತ ಚಿಕ್ಕದಾಗಿದ್ದು, ಉತ್ತರೀಯ ಕಟಿಬಂಧದಂತೆ ಅಗಲವಾಗಿ ಕಟ್ಟಿರುವುದು ಕಂಡುಬರುತ್ತದೆ. ರಾಜನ ನಂತರದ ಹುದ್ದೆ ದಂಡನಾಯಕನ ಹುದ್ದೆ ಎಂಬುದಾಗಿ ಅವರು ಧರಿಸುತ್ತಿದ್ದ ವಸ್ತ್ರ ಮತ್ತು ಆಭರಣಗಳಿಂದ ಅರಿಯಬಹುದಾಗಿದೆ.

'ಗಂಡಪೆಂಡೇರ'ವೆಂಬ ಕಾಲಿನ ಆಭರಣವನ್ನು ರಾಜನ ಆಪ್ತರಕ್ಷಕನು ತನ್ನ ಎಡಗಾಲಿನ ಹೆಬ್ಬೆರಳಿಗೆ ಧರಿಸುವ ಆಭರಣವಾಗಿತ್ತು. ಇದು ಆಪ್ತರಕ್ಷಕನ ಸ್ಥಾನವನ್ನು ಸೂಚಿಸುವ ಆಭರಣವಾಗಿತ್ತು.

ಒಟ್ಟಾರೆ ಆಡಳಿತ ವರ್ಗದಲ್ಲಿ ಮೊದಲ ಸ್ಥಾನ ಅರಸನದು, ನಂತರದ ಸ್ಥಾನ ದಂಡನಾಯಕ, ಅನಂತರದ ಸ್ಥಾನ ರಕ್ಷಕ ಎಂಬುದಾಗಿ ಗುರುತಿಸಲು ವಸ್ತ್ರ ಮತ್ತು ಆಭರಣಗಳ ವೈವಿಧ್ಯತೆ ಮತ್ತು ಸಂಕೇತಗಳ ಹಿನ್ನೆಲೆಯಲ್ಲಿ ಗುರುತಿಸಲು ಸಾಧ್ಯವಾಗುತ್ತದೆ. ಹಾಗಾಗಿ ಹುದ್ದೆ ಮತ್ತು ಸ್ಥಾನಗಳನ್ನು ತಿಳಿಯಲು ಇವು ಪ್ರಮುಖ ಪಾತ್ರವನ್ನು ವಹಿಸುತ್ತವೆ.

ಆರ್ಥಿಕ

ವಸ್ತ್ರ ಮತ್ತು ಆಭರಣಗಳ ಧಾರಣೆಯ ಹಿನ್ನೆಲೆಯನ್ನು ಅರಿಯುವಾಗ ಆಯಾ ವ್ಯಕ್ತಿಗಳ ಮತ್ತು ಸಮುದಾಯಗಳ ಆರ್ಥಿಕ ಸ್ಥಿತಿಯ ಹಿನ್ನೆಲೆಯನ್ನು ಅರಿಯಬಹುದಾಗಿದೆ.

ವಿಜಯನಗರ ಕಾಲದ ಜನಸಾಮಾನ್ಯರು ಆಭರಣಪ್ರಿಯರಾಗಿದ್ದರು ಎಂದು ಅಬ್ದುರ್ ರಜಾಕ್ ಹೇಳುತ್ತಾನೆ. ಅವನು ವಿವರಿಸುವಂತೆ, "ರಾಜನು ಅರಮನೆಯ ನೆಲಮಾಳಿಗೆಯಲ್ಲಿ ಚಿನ್ನದ ಗಟ್ಟಿಗಳನ್ನು ರಾಶಿ ಹಾಕಿದ್ದಾನೆ. ಈ ದೇಶದ ಪ್ರತಿಯೊಬ್ಬ ನಿವಾಸಿಯೂ, ಅವನು ಮೇಲ್ತರಗತಿಯವನಿರಲಿ ಅಥವಾ ಸಾಮಾನ್ಯನಿರಲಿ, ಕೊನೆಗೆ ಅಂಗಡಿಯ ಬದಿಯಲ್ಲಿ ಕೆಲಸ ಮಾಡುವವರು ಸಹ ಕೊರಳು, ಕೈ, ತೋಳು ಬೆರಳುಗಳಿಗೆ ಮುತ್ತುಗಳನ್ನೋ, ರತ್ನಖಚಿತ ವಾದ ಬೆಲೆಯುಳ್ಳ ಒಡವೆಗಳನ್ನೋ, ಧರಿಸಿರುತ್ತಾರೆ".[೫] ರಜಾಕ್‌ನ ಈ ವಿವರಣೆಯಿಂದ ರಾಜನ ಅರಮನೆಯ ಖಜಾನೆಯ ವಿವಿಧ ಶಾಖೆಗಳಲ್ಲಿ ಆಭರಣ ಸಂಗ್ರಹಿಸುವ ಪ್ರತ್ಯೇಕ ಖಜಾನೆ/ಶಾಖೆ ಇತ್ತು ಎಂಬುದು ಸ್ಪಷ್ಟ.

ನ್ಯೂನಿಜ್‌ನು ಅಚ್ಯುತದೇವರಾಯನ ಕಾಲದಲ್ಲಿ ವಿಜಯನಗರಕ್ಕೆ ಭೇಟಿ ನೀಡಿದ್ದನು. ಅವನು ವಿವರಿಸುವಂತೆ, "ರಾಜನು ಯಾವುದೇ ವಸ್ತ್ರವನ್ನು ಒಮ್ಮೆಗಿಂತ ಹೆಚ್ಚು ಸಲ ಧರಿಸುವುದಿಲ್ಲ, ಅದನ್ನು ತೆಗೆದಾಗ ಆ ಕರ್ತವ್ಯವನ್ನು ಹೊಂದಿದ ಕೆಲವು ಅಧಿಕಾರಿಗಳಿಗೆ ಅದನ್ನು ಕೊಡುತ್ತಾನೆ. ಅವರು ಲೆಕ್ಕ ಕೊಡುತ್ತಾರೆ, ಈ ವಸ್ತ್ರಗಳನ್ನು ಎಂದೂ ಯಾರಿಗೂ ಕೊಡಲಾಗುವುದಿಲ್ಲ, ಇದನ್ನು ಘನತೆಯ ಕುರುಹೆಂದು ಪರಿಗಣಿಸಲಾಗುತ್ತದೆ".[೬] ನ್ಯೂನಿಜ್‌ನ ಈ ವಿವರಣೆಯಿಂದ ರಾಜರ ವಸ್ತ್ರದ ಬೆಲೆ, ಪಾವಿತ್ರತೆ ಮತ್ತು ಗುಣಮಟ್ಟ ಅರ್ಥವಾಗುತ್ತದೆ. ಅಲ್ಲದೇ ಅದನ್ನು ನಿರ್ವಹಿಸಲು ಅಥವಾ ಲೆಕ್ಕ ಕೊಡಲು ಪ್ರತ್ಯೇಕ ಅಧಿಕಾರಿಗಳನ್ನು ಹೊಂದಿದ್ದರು ಎಂದರೆ ರಾಜರು ಧರಿಸುತ್ತಿದ್ದ ವಸ್ತ್ರ ಅತ್ಯಂತ ಬೆಲೆಬಾಳುವ ಮುತ್ತು ರತ್ನಗಳಿಂದ ತಯಾರಾಗಿದ್ದ ವಸ್ತ್ರಗಳಾಗಿದ್ದವು ಎಂಬುದನ್ನು ಪ್ರತಿಬಿಂಬಿಸುತ್ತವೆ.

ಅರಮನೆಯ ವಿವಿಧ ಶಾಖೆಗಳಲ್ಲಿ ರಾಜನ ಖಾಸವಸ್ತ್ರ ಶಾಲೆಯೂ ಇತ್ತು ಎಂಬುದೂ ಮುಖ್ಯ. ಹಾಗಾಗಿ ರಾಜರು ಮತ್ತು ರಾಜಮನೆತನದವರು ಧರಿಸುತ್ತಿದ್ದ ವಸ್ತ್ರಗಳು ಅತ್ಯಂತ ದುಬಾರಿ ಮತ್ತು ಗುಣಮಟ್ಟದಾಗಿದ್ದವು ಮತ್ತು ಅವರು ತೊಡುತ್ತಿದ್ದ ಉದ್ದನೆಯ ನಿಲುವಂಗಿ, ಪಾದ ಚಲ್ಲಣಗಳು, ಉತ್ತರೀಯ, ಹಲವು ಚಿನ್ನ, ಮುತ್ತುರತ್ನಗಳಿಂದ ಕೂಡಿದ ಆಭರಣಗಳಾಗಿದ್ದವು ಎಂಬುದು ಸಾಮಾನ್ಯ ಸಂಗತಿ.

ರಾಣಿಯರ ವಸ್ತ್ರ ಮತ್ತು ಆಭರಣಗಳು ಇದೇ ರೀತಿಯಾಲ್ಲಿ ದುಬಾರಿಯಾಗಿದ್ದವು. ಅಚ್ಯುತದೇವರಾಯನ ಕಾಲಕ್ಕೆ ಸೇರಿದ ಕ್ರಿ.ಶ. ೧೫೩೨ರ ಶಾಸನದಲ್ಲಿ ಅಚ್ಯುತದೇವರಾಯ ಮತ್ತು ಆತನ ರಾಣಿಯಾದ ವರದರಾಜದೇವಿಯು ವರದರಾಜ ದೇವರಿಗೆ ತುಲಾಪುರುಷ ದಾನ ಮಾಡಿಸಿ, ದೇವರಿಗೆ ಸೀತಾಂಬ್ರ, ಪದಕ, ಪಟ್ಟೆ, ಹಚ್ಚಡ, ಪಟ್ಟೆಸೀರೆ, ಮಂಜಿಡಿಕೆ ಸೀರೆ ಮುಂತಾದವುಗಳನ್ನು ಸಮರ್ಪಿಸಿದ್ದುದನ್ನು ತಿಳಿಸುತ್ತದೆ. ಆ ವಸ್ತ್ರಗಳಲ್ಲಿ ಲತೆ, ಹೂ ಬಳ್ಳಿಗಳ ವಿನ್ಯಾಸಕ್ಕೆ ಬಳಸಬೇಕಾಗಿದ್ದ ನವರತ್ನಗಳ ಸಂಖ್ಯೆಯನ್ನು ತಿಳಿಸುತ್ತದೆ.[೭] ಅಂದರೆ ಇದರಿಂದ ರಾಜರಾಣಿಯವರು ಬೆಲೆಬಾಳುವ ವಸ್ತ್ರಗಳನ್ನು ಧರಿಸುತ್ತಿದ್ದರು ಹಾಗೂ ಅದೇ ರೀತಿಯ ಬೆಲೆಯಾದ ವಸ್ತ್ರ ಮತ್ತು ಆಭರಣಗಳನ್ನು ದೇವರಿಗೆ ಸಮರ್ಪಿಸುತ್ತಿದ್ದರು ಎಂಬುದು ಸ್ಪಷ್ಟವಾಗುತ್ತದೆ.

ಹಾಗಾದರೆ ಇಷ್ಟು ಬೆಲೆಬಾಳುವ ವಸ್ತ್ರ ಮತ್ತು ಆಭರಣಗಳ ಮೂಲವನ್ನು ಹುಡುಕಿದಾಗ ಆ ರಾಜ್ಯದಲ್ಲಿದ್ದ ಗಣಿಗಾರಿಕೆ, ವಿದೇಶಿ ವ್ಯಾಪಾರದ ಮೇಲೂ ಇವು ಬೆಳಕು ಚೆಲ್ಲುತ್ತವೆ. ಆ ಕುರಿತು ಬಾರ್ಬೋಸ ಈ ಮುಂದಿನಂತೆ ಹೇಳುತ್ತಾನೆ, "ನರಸಿಂಗನ ರಾಜ್ಯದಲ್ಲಿ ಒಂದು ಮತ್ತು ದಖನಿ ರಾಜ್ಯದಲ್ಲಿ ಒಂದು ವಜ್ರದ ಗಣಿಗಳಿವೆ"[೮] ಎಂಬುದಾಗಿ ತಿಳಿಸುತ್ತಾನೆ. ಅವನು ಹೇಳುವ ಗಣಿ ಆಂಧ್ರದ ವಜ್ರಕರೂರು ಗಣಿ ಇರಬೇಕು.

ವ್ಯಾಪಾರ ಮತ್ತು ವಾಣಿಜ್ಯ

ಅಬ್ದುರ್ ರಜಾಕ್ ಮತ್ತು ಬಾರ್ಬೋಸರುಗಳ ವಿವರಣೆಗಳು ವಿದೇಶದಿಂದ ವಿಜಯನಗರಕ್ಕೆ ಆಮದಾಗುತ್ತಿದ್ದ ವಸ್ತ್ರ ಮತ್ತು ಆಭರಣಗಳನ್ನು ಕುರಿತು ತಿಳಿಸುತ್ತವೆ. ವಿಜಯನಗರವು ಹಲವು

ದೇಶಗಳೊಂದಿಗೆ ವ್ಯಾಪಾರ ಸಂಬಂಧವನ್ನು ಹೊಂದಿತ್ತು. ಅವುಗಳಲ್ಲಿ ವಸ್ತ್ರ ಮತ್ತು ಅಭರಣಗಳನ್ನು ಕೆಲ ದೇಶಗಳಿಂದ ತರಿಸಿಕೊಳ್ಳುತ್ತಿದ್ದರು. ಅದರಂತೆ, "ಪರ್ಶಿಯಾದಿಂದ ಡಮಾಸ್ಕ್ ಮತ್ತು ಸ್ಯಾಟೀನ್ ಬಟ್ಟೆ, ಚೀನಾ ಮತ್ತು ಅಲೆಗ್ಸಾಂಡ್ರಿಯಾದಿಂದ ರೇಷ್ಮೆ ಮತ್ತು ಕೆಂಪು(ಕಿಂಕಾಪಿನ) ಬಟ್ಟೆ, ಅರೇಬಿಯ, ಓರ್ಮುಜ್ ಮತ್ತು ಕಾಯಲ್‌ಗಳಿಂದ ಮುತ್ತು, ಪೆಗು ಮತ್ತು ಸಿಲೋನ್‌ಗಳಿಂದ ವಜ್ರವೈಢೂರ್ಯಗಳು ವಿಜಯನಗರಕ್ಕೆ ರಫ್ತಾಗುತ್ತಿದ್ದವು" ಎಂಬುದಾಗಿ ತಿಳಿದುಬರುತ್ತದೆ. ಅರೇಬಿಯಾದಿಂದ ತಂದ ಸಣ್ಣ ಮುತ್ತುಗಳನ್ನು ಕಂಡರೆ ವಿಜಯನಗರದ ರಾಜರಿಗೆ ಬಲು ಪ್ರಿಯ ಎಂದು ವಿದೇಶಿ ಪ್ರವಾಸಿಗರು ವಿವರಿಸಿದ್ದಾರೆ.

ಹೀಗೆ ರಾಜರು ವಿದೇಶಗಳಿಂದ ಬೆಲೆಬಾಳುವ ಮುತ್ತು, ವಜ್ರಗಳು, ಹಾಗೂ ಬಟ್ಟೆಯ ಥಾನುಗಳನ್ನು ಆಮದು ಮಾಡಿಕೊಂಡು ಅವುಗಳಿಂದ ಇಲ್ಲಿ ಸಿದ್ಧವಸ್ತುಗಳಾಗಿ ತಯಾರಿಸಿ ಕೊಂಡು ಧರಿಸುತ್ತಿದ್ದರು ಎಂಬುದಾಗಿ ತಿಳಿಯುತ್ತದೆ. ಹೀಗೆ ವಸ್ತ್ರ ಮತ್ತು ಅಭರಣಗಳು ಸಹ ಆರ್ಥಿಕ ವ್ಯಾಪಾರ ವಹಿವಾಟಿನ ಮೇಲೆ ಪ್ರಭಾವ ಬೀರಿರುತ್ತವೆ.

ಬಾರ್ಬೋಸಾ ವಿಜಯನಗರದಿಂದ ಹೊರದೇಶಗಳಿಗೆ ರಫ್ತಾಗುತ್ತಿದ್ದ ವಸ್ತ್ರಗಳ ಕುರಿತು ಮಾಹಿತಿ ನೀಡುತ್ತಾನೆ. ಅವನು ವಿವರಿಸುವಂತೆ, "ವಿಜಯನಗರ ರಾಜರಿಗೆ ಸೇರಿದ ಪುಲಿಕಾಟ್ ಎಂಬ ನಗರವಿದೆ. ಇದು ಬಂದರು ಪ್ರದೇಶ. ಇಲ್ಲಿ ಸೊಗಸಾದ ಬಣ್ಣಗಳ ಬಟ್ಟೆಯನ್ನು ತಯಾರಿಸುತ್ತಾರೆ. ಈ ಬಟ್ಟೆಗಳಿಗೆ ಮಲೆಕ್ಕ, ಪೆಗು, ಸುಮಾತ್ರ, ಗುಜರಾತ್ ಮತ್ತು ಮಲಬಾರ್‌ಗಳಲ್ಲಿ ಬಹಳ ಬೇಡಿಕೆ ಇದೆ"[೯] ಎಂಬುದಾಗಿ ವಿಜಯನಗರದ ವಸ್ತುಗಳ ರಫ್ತು ಕುರಿತಾಗಿ ಬೆಳಕುಚೆಲ್ಲುತ್ತಾನೆ. ಉತ್ತಮ ಗುಣಮಟ್ಟದ ಹತ್ತಿ ಬಟ್ಟೆಯನ್ನು ಕಂಚೀಪುರಂ, ಮಧುರೈ, ತಂಜಾವೂರು ಕೇಂದ್ರಗಳಿಂದ ತಯಾರಿಸಿ ರಫ್ತನ್ನು ಮಾಡುತ್ತಿದ್ದರು.

ಸ್ಥಳೀಯವಾಗಿ ಇಲ್ಲಿ ಹತ್ತಿಯನ್ನು ಬೆಳೆಯುತ್ತಿದ್ದರು. ವಿಜಯನಗರ ಕಾಲದಲ್ಲಿ ಗೋಲ್ಕಂಡವು ಸಾದಾ ಹತ್ತಿ ಬಟ್ಟೆಗೆ ಹಾಗೂ ಪುಲಿಕಾಟ್ ಪ್ರಿಂಟೆಡ್ ಹತ್ತಿ ಬಟ್ಟೆಗೆ ವಿಶೇಷ ಆದ್ಯತೆ ನೀಡಿದ್ದಿತು ಎಂಬುದಾಗಿ ತಿಳಿದುಬರುತ್ತದೆ.

ವಿಜಯನಗರ ಕಾಲದಲ್ಲಿ ಬಟ್ಟೆಯ ನೇಯ್ಗೆ ಮಾಡುವವರು, ಅದಕ್ಕೆ ಅಚ್ಚು ಒತ್ತುವವರು ಇದ್ದರು ಎಂಬುದಾಗಿ ತಿಳಿದುಬರುತ್ತದೆ. ಆಂಧ್ರ, ಕರ್ನಾಟಕದಲ್ಲಿ ಚೋಳರ ಕಾಲದಿಂದ ವಿಜಯನಗರದ ಕಾಲದವರೆಗೂ ಸಾಲೆ, ಜೇಡರು, ದೇವಾಂಗ ಸಮುದಾಯಗಳು ನೇಯ್ಗೆ ವೃತ್ತಿಯಲ್ಲಿ ಪ್ರಧಾನ ಪಾತ್ರವನ್ನು ವಹಿಸಿದ್ದರು.

ಕನಕದಾಸರ ಮೋಹನತರಂಗಿಣಿಯಲ್ಲಿ ವಿವಿಧ ವೃತ್ತಿಗಳನ್ನು ಹೆಸರಿಸುವಾಗ "ಬಟ್ಟೆಗಳಿಗೆ ಅಚ್ಚು ಒತ್ತುವವರು, ಚಿತ್ರಲಿಪಿಗಾರರ ಅಂಗಡಿಗಳಿದ್ದವು"[೧೦] ಎಂಬುದಾಗಿ ತಿಳಿಸುತ್ತಾರೆ.

ವಿಜಯನಗರ ಕಾಲದಲ್ಲಿ ಬಟ್ಟೆಗಳಿಗೆ ಕೆಂಪು,ಕಪ್ಪು, ಬಿಳಿ, ಹಸಿರು, ಕೇಸರಿ ಬಣ್ಣವನ್ನು ಹಾಕುತ್ತಿದ್ದರು. ಇವುಗಳಿಗೆ ಸ್ಥಳೀಯವಾಗಿ ದೊರೆಯುತ್ತಿದ್ದ ಇಂಗಳಿಕ, ಅಳಲೆಕಾಯಿ, ಮಂಜೀಡಿಕೆ ಎಂಬ ಕಾಯಿಗಳನ್ನು ಬಳಸಿ ಬಣ್ಣವನ್ನು ಹಾಕುತ್ತಿದ್ದರು ಎಂಬುದಾಗಿ ತಿಳಿದು ಬರುತ್ತದೆ. ಇದು

ಆ ಕಾಲದಲ್ಲಿ ಸ್ಥಳೀಯವಾಗಿ ಲಭ್ಯವಿದ್ದ ಬಣ್ಣಗಳನ್ನು ಬಳಸಿ ವಸ್ತ್ರ ಮತ್ತು ಆಭರಣಗಳನ್ನು ತಯಾರಿಸುತ್ತಿದ್ದರು ಎಂಬುದನ್ನು ತಿಳಿಸುತ್ತದೆ.

ರಾಜರು, ಶ್ರೀಮಂತರು, ರಾಜಮನೆತನದವರು, ನರ್ತಕಿಯರು, ಸಹಜವಾಗಿ ಉತ್ತಮ ಉಡುಪುಗಳನ್ನು ಮತ್ತು ಆಭರಣಗಳನ್ನು ಧರಿಸುತ್ತಿದ್ದರು. ರೈತಾಪಿ ವರ್ಗ, ಆರ್ಥಿಕವಾಗಿ ಕೆಲಮಟ್ಟದಲ್ಲಿರುವವರು ನೂಲಿನ ವಸ್ತ್ರಗಳನ್ನು, ತಾಮ್ರ ಹಾಗೂ ಇತರೆ ಗಿಲೀಟಿನ ಆಭರಣಗಳನ್ನು ಧರಿಸುತ್ತಿದ್ದರು ಎಂಬುದಾಗಿ ತಿಳಿದುಬರುತ್ತದೆ. ಅಲ್ಲದೇ ಅವರು ಧರಿಸುತ್ತಿದ್ದ ವಸ್ತ್ರಗಳು ಅಪೂರ್ಣವಾಗಿದ್ದವು. ದೇಹದ ಮೇಲ್ಭಾಗ ಬೆತ್ತಲೆಯಾಗಿತ್ತು. ಇದಕ್ಕೆ ಮತ್ತೊಂದು ಕಾರಣ ಅವರು ತಮ್ಮ ಕೆಲಸಕಾರ್ಯಗಳಲ್ಲಿ ಚಲನವಲನಗಳಿಗೆ ಅಡ್ಡಿಯಾಗದಂತೆ ನೋಡಿ ಕೊಳ್ಳಲು ಅಲ್ಪ ಪ್ರಮಾಣದ ವಸ್ತ್ರವನ್ನು ಧರಿಸಿರುವ ಸಾಧ್ಯತೆಯಿದೆ.

ಒಟ್ಟಾರೆ ವಿಜಯನಗರ ಕಾಲದಲ್ಲಿ ವಸ್ತ್ರ ಮತ್ತು ಆಭರಣಗಳಿಗೆ ಗಣಿ ಉತ್ಪನ್ನದಿಂದ, ಆಮದುಗಳಿಂದ, ಸೈನ್ಯದಲ್ಲಿ ವಶಪಡಿಸಿಕೊಂಡ ಸಂಪತ್ತಿನಿಂದ ಕಪ್ಪಕಾಣಿಕೆಗಳಿಂದ ವಸ್ತ್ರ ಮತ್ತು ಆಭರಣಗಳು ರಾಜರ ಸಾಮ್ರಾಜ್ಯದ ಖಜಾನೆಗೆ ಒಳಪಡುತ್ತಿತ್ತು. ಆ ಮೂಲಕ ವಿಜಯನಗರ ಸಂಪತ್ಭರಿತವಾಗಿತ್ತು. ಈ ಕಾಲದಲ್ಲಿ ರಾಜರ ಖಾಸಾ ವಸ್ತ್ರಶಾಲೆ ಮತ್ತು ಆಭರಣ ನೆಲಮಾಳಿಗೆಗಳು ತುಂಬಲು ಹಾಗೂ ಗುರುತಿಸಲು ಸಾಧ್ಯವಾಗುತ್ತಿತ್ತು.

ಸಾಮಾಜಿಕ

ವಸ್ತ್ರ ಮತ್ತು ಆಭರಣಗಳಲ್ಲಿ ರಾಜಕೀಯ ಆರ್ಥಿಕ ಸಂಗತಿಗಳು ಮಾತ್ರವಿರದೆ ಸಾಮಾಜಿಕ ಅಂಶಗಳನ್ನು ಕಾಣಬಹುದಾಗಿದೆ. ರಾಜರಿಂದ ಹಿಡಿದು ಸಾಮಾನ್ಯ ಜನರವರೆಗೆ ಧರಿಸುತ್ತಿದ್ದ ಹಾಗೂ ಪ್ರಾಣಿಗಳಿಗೆ ತೊಡಿಸುತ್ತಿದ್ದ ವಸ್ತ್ರ ಮತ್ತು ಆಭರಣಗಳ ಧಾರಣೆಯ ಹಿಂದಿನ ಆಸಕ್ತಿ, ವ್ಯಕ್ತಿತ್ವ, ಅಭಿರುಚಿ, ಅಲಂಕರಣೆ ಹಾಗೂ ಅವರು ಭಾಗವಹಿಸುತ್ತಿದ್ದ ಸಂದರ್ಭ, ಸ್ಥಳಗಳನ್ನು ವ್ಯಕ್ತಪಡಿಸುತ್ತಿದ್ದವು. ನಾಮಕರಣ, ತೊಟ್ಟಿಲು ಶಾಸ್ತ್ರ, ವಿವಾಹ, ಹಬ್ಬ, ಉತ್ಸವ, ನೃತ್ಯ, ಮನೋರಂಜನೆ, ಕ್ರೀಡೆ, ಅರಮನೆ, ದೇವಾಲಯ, ಯುದ್ಧ ಸಂದರ್ಭಗಳಲ್ಲಿ ಧರಿಸುತ್ತಿದ್ದ ವಸ್ತ್ರ ಮತ್ತು ಆಭರಣಗಳು ವಿಭಿನ್ನವಾಗಿದ್ದುದ್ದರ ಬಗ್ಗೆ ತಿಳಿಯಬಹುದಾಗಿದೆ.

ವಾದಿರಾಜರು ಚಿತ್ರಿಸಿದ 'ಬಾಲಕೃಷ್ಣ ಲೀಲೆ'ಯ ಕೃತಿಯಲ್ಲಿ ಕೃಷ್ಣನ ನಾಮಕರಣ ಸಂದರ್ಭದಲ್ಲಿ ಕೃಷ್ಣನಿಗೆ ಹಸಿರು ಅಂಗಿ, ಕುಲಾಯಿ, ಮಗಾಯಿ, ಕಾಲಂದಿಗೆ, ಗೆಜ್ಜೆನೂಪುರ ತೊಡಿಸಿದ ಸಂದರ್ಭವನ್ನು ತಿಳಿಸುತ್ತದೆ.

ಚೆನ್ನಬಸವಪುರಾಣ, ಶಿವತತ್ತ್ವಚಿಂತಾಮಣಿ ಮೊದಲಾದವು ವಿವಾಹ ಸಂದರ್ಭದಲ್ಲಿ ಮಂಟಪದ ಅಲಂಕರಣೆ, ವಧುವರರು ಹಾಗೂ ಆಹ್ವಾನಿತರು ಚಿನ್ನದ ಆಭರಣ, ಪಟ್ಟಾವಳಿ ವಸ್ತ್ರ ಧರಿಸಿದ್ದರು ಎಂಬುದನ್ನು ತಿಳಿಸುತ್ತದೆ. ಇದು ಆರ್ಥಿಕವಾಗಿ ಪ್ರಬಲರಾದ ವರ್ಗದವರ ವಿವಾಹ ಸಂದರ್ಭವಾದರೆ, ಕೆಲವರ್ಗಗಳ ಅತ್ಯಗತ್ಯ ಆಭರಣಗಳು ಚಿನ್ನದಿಂದ ಕೂಡಿದ್ದು, ಉಳಿದವು ಗಿಲೀಟಿನ ಆಭರಣಗಳಾಗಿರುತ್ತವೆ. ಉದಾಹರಣೆಗೆ ತಾಳಿ, ಮೂಗುತಿ, ಕರ್ಣಾಭರಣ.

ದೇವಾಲಯ ಅಥವಾ ಧಾರ್ಮಿಕ ಕಾರ್ಯಗಳಲ್ಲಿ ತೊಡುತ್ತಿದ್ದ ವಸ್ತ್ರ ಮತ್ತು ಆಭರಣಗಳು ಸರಳವಾಗಿರುತ್ತಿದ್ದವು. ರಾಜರು ಬಿಳಿ ರೇಷ್ಮೆ ವಸ್ತ್ರ ಧರಿಸಿದರೆ. ಸಾಮಾನ್ಯರು ಬಿಳಿ ನೂಲಿನ ವಸ್ತ್ರ ಧರಿಸುತ್ತಿದ್ದರು. ಇಲ್ಲಿ ವಸ್ತ್ರಗಳ ಬಣ್ಣ ಒಂದೇ ಆಗಿದ್ದರು ಅವುಗಳ ತಯಾರಿಕೆಗೆ ಬಳಸಿದ್ದ ಕಚ್ಚಾ ಪದಾರ್ಥಗಳು ಬೇರೆಯದಾಗಿದ್ದವು.

ಸ್ತ್ರೀಯರನ್ನು ಕುರಿತು ತಿಳಿಯುವಲ್ಲಿ ರಾಣಿಯರು ಅವರ ಸೇವಕಿಯರು ಉತ್ತಮವಾದ ವಸ್ತ್ರ ಮತ್ತು ಆಭರಣಗಳನ್ನು ತೊಡುತ್ತಿದ್ದರು. ಹಾಗೆಯೇ ನರ್ತಕಿಯರು, ವಾರಾಂಗನೆಯರು ಸಹ. ರಾಣಿಯರು ಸೀರೆಯನ್ನು ನಾಭಿಯಿಂದ ಕಾಲಂದಿಗೆಯ ಮೇಲಿನ ಭಾಗದವರೆಗೆ ಧರಿಸುತ್ತಿದ್ದರು. ಸೀರೆಯನ್ನು ಧರಿಸಿ ನಿತಂಬಗಳ ಮಧ್ಯೆ ನಿರಿಗೆ ಹಿಡಿದ ವಸ್ತ್ರವನ್ನು ತೆರೆದ ಬೀಸಣಿಕೆಯಂತೆ ಅದರ ಮೇಲೆ ಧರಿಸುತ್ತಿದ್ದರು. ಹಾಗೆಯೇ ಸೀರೆಯ ಪಾದಭಾಗದಲ್ಲಿ ನಿರಿಗೆಗಳು ತೆರೆದ ಬೀಸಣಿಗೆಯಂತೆ ಕಾಣುತ್ತಿದ್ದವು. ಸೀರೆಯ ಸೆರಗನ್ನು ಎಡಭುಜದ ಮೇಲೆ, ಬಲಭುಜದ ಮೇಲೆ ಬರುವಂತೆ ಕೆಲವೊಮ್ಮೆ ನಡುವನ್ನು ಹಿಂದಿನಿಂದ ಸುತ್ತಿ ಬಲಭುಜದ ಮೇಲೆ ಬರುವಂತೆ ವಿಭಿನ್ನ ಶೈಲಿಯಲ್ಲಿ ಧರಿಸುತ್ತಿದ್ದರು. ದೇಹದ ಮೇಲ್ಭಾಗಕ್ಕೆ ಕಂಚುಕ, ದುಪ್ಪಟವೆಂಬ ತೆಳುವಾದ ಪರದೆಯನ್ನು ಹೊದೆದುಕೊಳ್ಳುತ್ತಿದ್ದುದು ಕಂಡುಬರುತ್ತದೆ. ಅದೇ ರೀತಿಯಲ್ಲಿ ಕಂಚುಕವನ್ನು ನೃತ್ಯಗಾರ್ತಿಯರು ಧರಿಸುತ್ತಿದ್ದರು. ಇದು ವಿಜಯನಗರ ಕಾಲದ ವಸ್ತ್ರಗಳಲ್ಲಿ ಸೀರೆಯನ್ನು ವಿಶೇಷ ವಿನ್ಯಾಸದಲ್ಲಿ ಧರಿಸುತ್ತಿದ್ದುದ್ದನ್ನು ವಿಶೇಷವಾಗಿ ಗುರುತಿಸ ಬಹುದಾಗಿದೆ. ಇದು ವಿಜಯನಗರ ಕಾಲದ ಸೀರೆಯ ವಸ್ತ್ರ ವಿನ್ಯಾಸದ ವಿಶೇಷತೆಯಾಗಿದೆ.

ಮಹಾನವಮಿ ಉತ್ಸವದ ಸಂದರ್ಭದಲ್ಲಿ ರಾಜನ ಮುಂದೆ ಹಲವು ಆಟಗಳ ಪ್ರದರ್ಶನದ ನಂತರ ಸೇನಾ ಪ್ರದರ್ಶನ ನಡೆಯುತ್ತಿತ್ತು. ಆ ಸಂದರ್ಭದಲ್ಲಿ ಕಾಲ್ದಳ, ಅಶ್ವದಳ, ಗಜದಳಗಳು ವಿಭಿನ್ನ ಅಲಂಕರಣೆ ಮಾಡಲ್ಪಟ್ಟಿದ್ದವು. ಆನೆ, ಕುದುರೆಗಳಿಗೆ ಝೂಲ, ಮೊಗರಂಭ, ಕಾಲಗಗ್ಗರ, ಗೆಜ್ಜೆಸರಗಳನ್ನು ತೊಡಿಸುತ್ತಿದ್ದರು. ಅಲ್ಲದೆ ಆನೆಗೆ ವಿಭಿನ್ನ ಚಿತ್ತಾರಗಳಿಂದ ಅಲಂಕರಿಸಲಾಗುತ್ತಿತ್ತು ಎಂಬುದಾಗಿ ಪಾಯೇಸ್ ಮತ್ತು ನ್ಯೂನಿಜ್‌ನ ಬರಹಗಳು ಸಾಕ್ಷೀಕರಿಸುತ್ತವೆ. ಅಲ್ಲದೆ ಸೈನಿಕರಿಗೆ ಬಣ್ಣ ಬಣ್ಣದ ವಸ್ತ್ರಗಳನ್ನು ಧರಿಸಿ ತಮ್ಮ ಸೇನಾಬಲ ಪ್ರದರ್ಶನಗೊಳಿಸುತ್ತಿದ್ದರು ಎಂಬುದಾಗಿ ತಿಳಿಸಲಾಗಿದೆ. ಬಹುಶಃ ಇದು ಉತ್ಸವದ ಸಂದರ್ಭವಾದ್ದರಿಂದ ಅವರು ಸಮವಸ್ತ್ರಗಳನ್ನು ಧರಿಸಿ, ರಾಜನ ಮುಂದೆ ಪ್ರದರ್ಶನ ಗೊಳ್ಳುತ್ತಿದ್ದರು. ಆದರೆ ವಾಸ್ತವವಾಗಿ ವಿಜಯನಗರದ ಸೈನ್ಯ ಸಂಖ್ಯೆಯಲ್ಲಿ ದೊಡ್ಡದಿದ್ದು, ಎಲ್ಲರಿಗೂ ಸಮವಸ್ತ್ರಗಳನ್ನು ಅಂದು ಒದಗಿಸಿದ್ದರು ಎಂಬುದು ನಂಬಲು ಅಸಾಧ್ಯ. ಆದರೆ ಉತ್ಸವ ಸಂದರ್ಭದಲ್ಲಿ ಈ ರೀತಿಯ ಅಲಂಕರಣೆಯಿತ್ತು ಎಂಬುದಾಗಿ ತಿಳಿಯಬಹುದಾಗಿದೆ.

ಹಾಗೆಯೇ ವಾದ್ಯಗಾರರು ಸಹ ಉತ್ಸವದ ಸಂದರ್ಭದಲ್ಲಿ ಸಮವಸ್ತ್ರವನ್ನು ಧರಿಸಿದ್ದು, ದೇವಾಲಯಗಳಲ್ಲಿ ನಡೆಯುತ್ತಿದ್ದ ವಿಶೇಷ ಆಚರಣೆಗಳಲ್ಲಿ ಮೈತುಂಬ ವಸ್ತ್ರವನ್ನು ಧರಿಸು ತ್ತಿದ್ದನ್ನು ಶಿಲ್ಪಗಳಲ್ಲಿ ಕಾಣಬಹುದಾಗಿದೆ. ಇದು ಕೆಲವೊಮ್ಮೆ ರಾಜನ ವಸ್ತ್ರ ಸಂಹಿತೆಯನ್ನು ಹೋಲುತ್ತಿತ್ತು. ಹಾಗಾಗಿ ವಿಭಿನ್ನ ಸಾಮಾಜಿಕ ಸಂದರ್ಭಗಳಲ್ಲಿ ಇವರ ವಸ್ತ್ರ ಮತ್ತು ಆಭರಣಗಳ ವೈವಿಧ್ಯತೆಯಿಂದ

ಕೂಡಿದ್ದರೂ, ಅದಕ್ಕೆ ಬಳಸುತ್ತಿದ್ದ ಬಟ್ಟೆ (ಟೈಪ್ ಆಫ್ ಮಟಿರಿಯಲ್), ಅಲಂಕರಣೆ ಸಾಮಾನ್ಯವಾಗಿದ್ದವು. ಹಾಗಾಗಿ ಇಲ್ಲಿ ಹೋಲಿಕೆಗಳ ನಡುವೆಯೂ ವ್ಯತ್ಯಾಸಗಳನ್ನು ಕಾಣಬಹುದು.

ಸಾಮಾಜಿಕ ಸಂದರ್ಭಗಳಲ್ಲಿ ಪ್ರಶಸ್ತಿ ಬಹುಮಾನಗಳನ್ನು ನೀಡಲು ವಿಜಯನಗರ ರಾಜರು ವಸ್ತ್ರ ಮತ್ತು ಆಭರಣಗಳನ್ನು ಬಳಸುತ್ತಿದ್ದರು. ಈ ಕುರಿತು ಪಾಯೇಸ್ ವಿವರಿಸುವಂತೆ, ಕೃಷ್ಣದೇವರಾಯನ ಕಾಲದಲ್ಲಿ ಭೇಟಿ ನೀಡಿದ್ದ ಪೋರ್ಚುಗೀಸ್ ರಾಯಭಾರಿ ಫಿಗೈರೆಡೋಗೆ, "ರಾಜನು ತಮ್ಮ ನಾಯಕನಿಗೆ(ಫಿಗೈರೆಡೋಗೆ) ಕಿಂಕಾಪಿನ ಅಂಗಿಯನ್ನು ತಾನು ಧರಿಸುತ್ತಿದ್ದಂತಹ ತಲೆಯೊಡಿಗೆಯನ್ನು ಕೊಟ್ಟು ಸತ್ಕರಿಸಿ ಬೀಳ್ಕೊಟ್ಟನು. ಪ್ರತಿಯೊಬ್ಬ ಪೋರ್ಚುಗೀಸನಿಗೂ ಸುಂದರವಾದ ಚಿತ್ರಗಳಿದ್ದ ಮಗುಟಗಳನ್ನು ಕೊಟ್ಟನು"[೧೧] ಎಂದು ಹೇಳುತ್ತಾನೆ. ಅದನ್ನು ನೀಡಿದ್ದು ಇಲ್ಲಿನ ಪದ್ಧತಿಗನುಗುಣವಾಗಿ ಹಾಗೂ ಸ್ನೇಹ ಮತ್ತು ಪ್ರೀತಿಗಾಗಿ ಎಂದು ವಾಸ್ತವ ಅಂಶವನ್ನು ಪಾಯೇಸ್ ಬಿಂಬಿಸುತ್ತಾನೆ.

ಇದಕ್ಕೆ ಸಂಬಂಧಿಸಿದಂತೆ ಇನ್ನೂ ಹಲವು ಪೂರಕ ವಿವರಗಳನ್ನು ತಿಳಿಯ ಬಹುದಾಗಿದೆ. ಕೃಷ್ಣದೇವರಾಯನು ದುರ್ಗಾವತಿಯೆಂಬ ವಾರಾಂಗನೆಯ ಉತ್ತಮ ನಾಟ್ಯ ಪ್ರದರ್ಶನವನ್ನು ಮೆಚ್ಚಿ, ಅವಳಿಗೆ ಬಹುಮಾನವಾಗಿ ಬಹಳ ದುಬಾರಿಯಾದ ವಜ್ರಗಳಿಂದ ಅಲಂಕರಿಸಿದ ಚಿನ್ನದ ಸೊಂಟಪಟ್ಟಿಯನ್ನು ಕೊಡುಗೆಯಾಗಿ ನೀಡಿದ್ದನು.[೨]

ಅಂತೆಯೇ ಕೆಳದಿ ನೃಪವಿಜಯದಲ್ಲಿ ಕುದುರೆ ವ್ಯಾಪಾರಿಗಳಿಗೆ ರಾಜನು ಉತ್ತಮ ಕುದುರೆ ಗಳನ್ನು ತಂದು ಒಪ್ಪಿಸಿದ್ದಕ್ಕಾಗಿ ತನ್ನ ಕೊರಳ ಹಾರವನ್ನು ನೀಡಿದ್ದನು ಎಂಬುದಾಗಿ ತಿಳಿಸುತ್ತದೆ. ಇದೇ ವಿಷಯವನ್ನು ವಿಜಯವಿಠಲ ದೇವಾಲಯದ ಕಲ್ಯಾಣದ ಮಂಟಪದ ಅಧಿಷ್ಠಾನದಲ್ಲಿರುವ ಶಿಲ್ಪಪಟ್ಟಿಕೆಯಲ್ಲಿ ಕುದುರೆ ವ್ಯಾಪಾರಿಗೆ ಕಂಠಾಭರಣವನ್ನು ನೀಡುತ್ತಿರುವ ಸ್ಪಷ್ಟ ಚಿತ್ರಣವಿರುವ ಶಿಲ್ಪವಿದ್ದು, ಸಾಹಿತ್ಯಾಕರಗಳಲ್ಲದೆ, ಶಿಲ್ಪಗಳು ಉತ್ತಮ ವಿವರಣೆ ಹಾಗೂ ಸಮರ್ಥನೆಯನ್ನು ನೀಡುತ್ತವೆ.

'ವೀರ ಪೆಂಡೇಯ' ಇದು ಯುದ್ಧ ಸಂದರ್ಭದಲ್ಲಿ ಸಾಧನೆ ಮಾಡಿದ ವೀರರನ್ನು ಸನ್ಮಾನಿಸಿ, ಪ್ರೋತ್ಸಾಹಿಸಲು ಈ ರೀತಿಯ ಕಾಲಿನ ಆಭರಣವನ್ನು ನೀಡುತ್ತಿದ್ದರು. ಹೀಗೆ ವಸ್ತ್ರ ಮತ್ತು ಅಭರಣಗಳು ಸಮಾಜದ ವರ್ಗಗಳು ಮತ್ತು ಅಂದಿನ ಸಾಮಾಜಿಕ ಸ್ತರಗಳನ್ನು ಅರ್ಥಮಾಡಿಕೊಳ್ಳಲು ಸಹಾಯಕವಾಗಿವೆ.

ಧಾರ್ಮಿಕ : ಧರ್ಮ ಮತ್ತು ದೇವರು

ವಸ್ತ್ರ ಮತ್ತು ಆಭರಣಗಳಿಂದ ಆಯಾ ಕಾಲದ ಮತ, ಧರ್ಮ, ದೇವರು ಮತ್ತು ಆರಾಧನೆಗಳ ಮೂಲಕ ಅಂದಿನ ಧಾರ್ಮಿಕ ಸ್ವರೂಪವನ್ನು ಗುರುತಿಸಬಹುದಾಗಿದೆ. ಜಟಾಮಕುಟ, ನಾಗಕುಂಡಲ, ನಾಗಮುರಿಗೆ, ನಾಗಕಂಕಣ, ನಾಗಯಜ್ಞೋಪವೀತ, ರುಂಡಮಾಲೆ, ವ್ಯಾಘ್ರದುಡಿಗೆ, ವಿಭೂತಿ ಮೊದಲಾದವುಗಳು ಶಿವನು ಧರಿಸುವ ವಸ್ತ್ರ ಮತ್ತು ಆಭರಣಗಳಾಗಿದ್ದು, ಶೈವಧರ್ಮವನ್ನು ಸೂಚಿಸುತ್ತವೆ.

ಹಾಗೆಯೇ ಕಿರೀಟಮುಕುಟ, ಮಕರಕುಂಡಲ, ಪತ್ರಕುಂಡಲ, ಕೇಯೂರ, ವಾಜೀ ಬಂಧ, ತ್ರಿಮುಂಡ್ರ (ನಾಮ), ತುಳಸಿಮಾಲೆ, ವೈಜಯಂತಿಮಾಲೆ, ಪೀತಾಂಬರ, ಛನ್ನವೀರ ಇವು ವಿಷ್ಣು ಧರಿಸುವ ವಸ್ತ್ರ ಮತ್ತು ಆಭರಣಳಾಗಿದ್ದು ವೈಷ್ಣವ ಧರ್ಮವನ್ನು ಸೂಚಿಸುತ್ತವೆ.

ಲಕ್ಷ್ಮಿ, ಪಾರ್ವತಿ ಮೊದಲಾದ ದೇವತೆಗಳು ಉತ್ಪಲ(ಹೂ) ಅಥವಾ ಕಮಲದ ಮೊಗ್ಗು ಹಿಡಿದಿದ್ದು, ಕಂಚುಕ, ವೃತ್ತಕುಂಡಲ, ಸ್ತನಹಾರ ಇವು ಸ್ತ್ರೀ ದೇವತೆಗಳನ್ನು ಸೂಚಿಸುತ್ತವೆ.

ಒಟ್ಟಾರೆ ಆಯಾ ಅರಸರ ಕಾಲದಲ್ಲಿ ಅನುಸರಿಸುತ್ತಿದ್ದ, ಧರ್ಮ, ಆರಾಧಿಸುತ್ತಿದ್ದ ದೈವ, ಧಾರ್ಮಿಕ ಸಾಮರಸ್ಯ ಮೊದಲಾದ ಸಂಗತಿಗಳನ್ನು ಈ ಮೇಲಿನ ವಸ್ತ್ರ ಮತ್ತು ಆಭರಣಗಳಿಂದ ಗಮನಿಸಬಹುದಾಗಿದೆ.

ಭಾಷೆ

ದಕ್ಷಿಣ ಭಾರತವನ್ನು ಆಳ್ವಿಕೆ ಮಾಡಿದ ವಿಜಯನಗರ ಅರಸರು ಸಹಜವಾಗಿ ಕನ್ನಡ, ತೆಲುಗು, ಸಂಸ್ಕೃತ ಭಾಷೆಗಳನ್ನು ಸಂವಹನ ಭಾಷೆಗಳಾಗಿ ಅಳವಡಿಸಿಕೊಂಡಿದ್ದರು. ಈ ಭಾಷೆಗಳು ಆ ದಿನಗಳಲ್ಲಿ ಬಳಸುತ್ತಿದ್ದ ವಸ್ತ್ರ ಮತ್ತು ಆಭರಣಗಳ ಹೆಸರುಗಳ ಮೇಲೆ ಸಹ ಪ್ರಭಾವ ಬೀರಿವೆ.

ಗೆಜ್ಜೆಸರ, ಕಾಲಂದಿಗೆ, ಮಗಾಯಿ, ಹುಲಿಯುಗುರು, ಸೀರೆ, ರವಿಕೆ, ಇಂತಹ ಪದಗಳು ಕನ್ನಡ ಭಾಷೆಯವೆಂದು ನಮಗೆ ಸರಳವಾಗಿ ಅರ್ಥವಾಗುತ್ತದೆ. ಶ್ರೀವತ್ಸಲಾಂಛನ, ಕೌಸ್ತುಭಹಾರ, ತ್ರಿಪುಂಡ್ರ, ವಾಜೀಬಂಧ, ಸೀತಾಂಬ, ಅರ್ಧೋರುಕ, ಪೂರ್ಣೋರುಕ ಮುಂತಾದ ಪದಗಳು ಸಂಸ್ಕೃತ ಮೂಲದವಾಗಿದ್ದು, ಸಾಮಾನ್ಯ ಜನರಿಗೆ ಬೇಗ ಅರ್ಥವಾಗುವುದಿಲ್ಲ. ಅಂತೆಯೇ ಬಿಂಬಮು, ಮುತ್ಸಾಲಜಲ್ಲಿ, ಶೇಖರಮು, ಪೈಟ, ಪಾವಡ ಮೊದಲಾದವು ತೆಲುಗು ಮೂಲದ ಪದಗಳಾಗಿವೆ. ಶರಾಯಿ, ಸೆಲ್ವಾರ್, ಪೈಜಾಮ ಇವು ಪರ್ಶಿಯ ಮೂಲದ ಪದಗಳಾಗಿವೆ. ಬಹುಶಃ ಇವು ನೆರೆಯ ಬಹಮನಿ ಸುಲ್ತಾನರ ಅಥವಾ ವಿದೇಶಿ ಪ್ರವಾಸಿಗರ ಪ್ರಭಾವದಿಂದ ಬಳಕೆಗೆ ಬಂದಿರುವ ಸಾಧ್ಯತೆಯಿದೆ.

ವಸ್ತ್ರ ಮತ್ತು ಆಭರಣಗಳಲ್ಲಿ ಬಳಸುತ್ತಿದ್ದ ಭಾಷೆಯ ಆಧಾರದ ಮೇಲೆ ವಿಜಯನಗರ ಕಾಲದಲ್ಲಿ ಬಳಕೆಯಲ್ಲಿದ್ದ ಭಾಷೆಯನ್ನು ಅರಿಯಬಹುದು. ಹಾಗೆಯೇ ಭಾಷೆಯ ಬಳಕೆ ವಸ್ತ್ರ ಮತ್ತು ಆಭರಣಗಳ ಪದಪ್ರಯೋಗಗಳ ಮೇಲೆ ಆಗಿರುವ ಪರಿಣಾಮವನ್ನು ಗಮನಿಸ ಬಹುದಾಗಿದೆ.

ಪ್ರಸ್ತುತ ದಿನಗಳಲ್ಲಿ ವಸ್ತ್ರ ಮತ್ತು ಆಭರಣಗಳು

ಪ್ರಾಚೀನ ಕಾಲದಿಂದಲೂ ಬೆಳೆದು ಬಂದ ವಸ್ತ್ರ ಮತ್ತು ಆಭರಣಗಳು ಆಯಾ ಕಾಲಘಟ್ಟಕ್ಕೆ ಹೊಸ ಸೇರ್ಪಡೆಯನ್ನು, ನವೀನ ವಿನ್ಯಾಸವನ್ನು ಹೊಂದುತ್ತಾ ಬಂದಿರುವುದು ಇತಿಹಾಸದಲ್ಲಿ ಕಾಣಬಹುದಾಗಿದೆ.

'ಉದ್ದನೆಯ ನಿಲುವಂಗಿ' ವಿಜಯನಗರ ಕಾಲದಲ್ಲಿ ರಾಜರು ಆಡಳಿತದ ಪ್ರಮುಖರು ಧರಿಸುತ್ತಿದ್ದ ಉದ್ದವಾದ ನಿಲುವಂಗಿಯನ್ನು ಪ್ರಸ್ತುತ ಕಾಲದಲ್ಲಿಯೂ ಆಡಳಿತ ವರ್ಗ ಹಾಗೂ

ವಿವಾಹ ಮೊದಲಾದ ಸಾಮಾಜಿಕ ಸಂದರ್ಭಗಳಲ್ಲಿ ಧರಿಸುವುದು ಕಂಡುಬರುತ್ತದೆ. ಆದರೆ ಕುಸುರಿ ಕೆಲಸ, ನವರತ್ನಗಳಿಂದ ಅಲಂಕರಣೆಯನ್ನು ಮಾಡಿದ ನಿಲುವಂಗಿಯನ್ನು ವಿಜಯ ನಗರದ ರಾಜರು ಮಾತ್ರ ಧರಿಸುತ್ತಿದ್ದರು. ಇದು ಅಂದಿನ ಆಡಳಿತ ವರ್ಗದ ಕೇಂದ್ರ ಬಿಂದುವಾದ ರಾಜನ ವಸ್ತ್ರಸಂಹಿತೆ ಮತ್ತು ಶ್ರೀಮಂತಿಕೆಯನ್ನು ತೋರುತ್ತದೆ.

ಆದರೆ ಇಂದಿನ ಪ್ರಜಾಪ್ರಭುತ್ವ ಆಡಳಿತ ವ್ಯವಸ್ಥೆಯಲ್ಲಿ ಉನ್ನತ ಹುದ್ದೆಗಳಾದ ರಾಷ್ಟ್ರಪತಿ, ಪ್ರಧಾನಮಂತ್ರಿಗಳು ಇಂತಹ ನಿಲುವಂಗಿಯನ್ನು ಧರಿಸಬಹುದಾಗಿದ್ದರೂ, ಆಭರಣಗಳಿಂದ ಕೂಡಿದ ಕುಸುರಿ ಕೆಲಸದ ವಸ್ತ್ರಧಾರಣೆ ನಿಷಿದ್ಧವಾಗಿದೆ. ಉದಾಹರಣೆಗೆ ಭಾರತದ ಪ್ರಧಾನಮಂತ್ರಿ ನರೇಂದ್ರ ಮೋದಿಯವರು ಉಡುಗೊರೆಯಾಗಿ ಬಂದ ಚಿನ್ನದ ಎಳೆಗಳಿಂದ ಕೂಡಿದ ಮೋದಿಯೆಂಬ ಹೆಸರಿರುವ ಉದ್ದನೆಯ ನಿಲುವಂಗಿಯನ್ನು ಧರಿಸಿದ್ದರು. ಇದರಿಂದ ಅವರು ಸಮಾಜದ ಟೀಕೆಗೆ ಗುರಿಯಾಗಬೇಕಾಯಿತು. ಕೊನೆಗೆ ಅವರು ಅದನ್ನು ಸರ್ಕಾರಕ್ಕೆ ನೀಡಿದರು. ಹಾಗಾಗಿ ಅದು ಈಗ ಸರ್ಕಾರದ ಕಡತಗಳ ಲೆಕ್ಕದಲ್ಲಿ ಸೇರಿ ಸಂರಕ್ಷಿಸುವ ಕೆಲಸವಾಗಿದೆ.

ಇದರಿಂದ ತಿಳಿದುಬರುವ ಸಂಗತಿ ಚಿನ್ನಾಭರಣ ರಹಿತವಾದ ಕುಸುರಿಕೆಲಸದ ವಸ್ತ್ರಗಳನ್ನು ಹಿಂದಿನ ಮಾದರಿಯಲ್ಲಿಯೇ ಇಂದು ಧರಿಸುತ್ತಾ ಮುಂದುವರೆದಿರುವುದನ್ನು ಕಾಣಬಹುದಾಗಿದೆ. ಕಾಲಚಲ್ಲಣಗಳು, ಉತ್ತರೀಯ, ಅವೇ ಮಾದರಿಯಲ್ಲಿ ಮುಂದುವರೆದಿವೆ.

'ಮಕುಟ' ವಿಜಯನಗರ ಕಾಲದಲ್ಲಿ ರಾಜ ಪೋರ್ಚುಗೀಸ್ ರಾಯಭಾರಿಗೆ ಹಾಗೂ ಅವನೊಂದಿಗಿದ್ದ ಇತರರಿಗೆ ಪ್ರೀತಿಯಿಂದ ಬಹುಮಾನವಾಗಿ ನೀಡಿದ್ದ. ಸುಂದರ ಚಿತ್ರಗಳಿದ್ದ ಮಗುಟ(ಮಕುಟ), ತಲೆಯುಡಿಗೆಗಳು ಇಂದು ರೂಪಾಂತರ ಹೊಂದಿ ವಿಶೇಷ ಸಾಧನೆ ಮಾಡಿದ ಗಣ್ಯವ್ಯಕ್ತಿಗಳಿಗೆ ಪ್ರಶಸ್ತಿ ಸಮಾರಂಭಗಳಲ್ಲಿ ಸನ್ಮಾನಿಸುವಾಗ ಅಂದಿನ ಮಗುಟ ಇಂದು 'ಪೇಟ'ವಾಗಿ ಬದಲಾಗಿರುವುದನ್ನು ಕಾಣಬಹುದಾಗಿದೆ. ಅಲ್ಲದೆ ಸಾಧಕರನ್ನು ಶಾಲು ಹೊದಿಸಿ ಸನ್ಮಾನಿಸುವುದು ಅದರೊಂದಿಗೆ ಸಂಸ್ಕೃತಿಯಲ್ಲಿ ಸೇರಿಕೊಂಡಿದೆ. ಕರ್ನಾಟಕದ ವಿಶಿಷ್ಟ ತಲೆಯುಡುಗೆ ಎಂಬುದಾಗಿ 'ಮೈಸೂರು ಪೇಟ' ಖ್ಯಾತಿಯನ್ನು ಗಳಿಸಿದೆ. ಹಾಗಾಗಿ ಮಕುಟವು, ಪೇಟವಾಗಿ ರೂಪಾಂತರ ಹೊಂದಿದೆ ಮತ್ತು ಶಾಲನ್ನು ಜೊತೆಯಲ್ಲಿ ಸನ್ಮಾನಿಸಲು ಬಳಸುತ್ತಿದ್ದರೆಂಬುದು ಗಮನಾರ್ಹ.

ರಕ್ಷಾ ಕವಚಗಳಾಗಿ ವಿಜಯನಗರ ಕಾಲದಲ್ಲಿ ಶಿರಸ್ತ್ರಾಣ, ಉಕ್ಕಿನ ಕವಚ, ರಜಾಯಿ ಅಂಗಿಗಳನ್ನು ಬಳಸುತ್ತಿದ್ದರು. ಇಂದು ಅವು ಗುಂಡು ನಿರೋಧಕವಾಗಿ (ಬುಲೆಟ್ ಪ್ರೂಫ್) ಧರಿಸಲಾಗುತ್ತಿದೆ. ಅಶ್ವಪಡೆ, ಗಜಪಡೆಗಳ ಸ್ಥಾನದಲ್ಲಿ ಯುದ್ಧ ವಿಮಾನಗಳು, ಯುದ್ಧ ಟ್ಯಾಂಕರ್‌ಗಳು ಬಂದಿವೆ. ಆನೆ ಕುದುರೆಗಳಿಗೆ ತೊಡಿಸುತ್ತಿದ್ದಂತಹ ರಕ್ಷಾ ಕವಚಗಳನ್ನು ಯುದ್ಧವಿಮಾನ, ಕಾರುಗಳಿಗೆ ತೊಡಿಸಲಾಗುತ್ತಿದೆ. ಅತಿಗಣ್ಯ ವ್ಯಕ್ತಿಗಳಿಗೆ ಜೀವಭಯ ವಿದೆಯೆಂದು ತಿಳಿದುಬಂದರೆ ಅವರಿಗೆ ರಕ್ಷಾ ಕವಚವನ್ನು ವಸ್ತ್ರವಾಗಿ ಧರಿಸಲು ಸರ್ಕಾರ ಅನುಮತಿ ನೀಡುತ್ತದೆ. ಭಾರತದ ಮಾಜಿ ಪ್ರಧಾನಿ ದಿವಂಗತ ಶ್ರೀಮತಿ ಇಂದಿರಾ ಗಾಂಧಿ ಯವರು ರಕ್ಷಾ ಕವಚ ಧರಿಸುತ್ತಿದ್ದರು ಎಂಬುದು ಈ ಸಂದಭದಲ್ಲಿ ಉಲ್ಲೇಖನೀಯ.

ಹಿಂದೆ ವೀರರು ಮಾಡಿದ ಸಾಧನೆಯನ್ನು ಗಮನಿಸಿ ಅವರಿಗೆ ವೀರಪೆಂಡೇಯವೆಂಬ ಆಭರಣವನ್ನು ತೊಡಿಸಿ, ಸನ್ಮಾನಿಸಿ ಪ್ರೋತ್ಸಾಹಿಸುತ್ತಿದ್ದರು. ಆದರೆ ಇಂದು ಅದು ಪ್ರಶಸ್ತಿ ಫಲಕಗಳಾಗಿ ಬದಲಾಗಿ 'ಅಶೋಕಚಕ್ರ', 'ಅರ್ಜುನ ಪ್ರಶಸ್ತಿ', 'ಪರಮವೀರ ಚಕ್ರ' ಮುಂತಾದ ಪಾರಿತೋಷಕಗಳಾಗಿ ರೂಪಾಂತರ ಹೊಂದಿವೆ.

ಅಂದು ಚಲಾವಣೆಯಲ್ಲಿದ್ದ ಮುದ್ರೆಯುಂಗುರ ರಾಜ್ಯಸ್ವಾಮ್ಯದ ಸನ್ನದುಗಳಾಗಿದ್ದವು. ಆದರೆ ಇಂದು ಮುದ್ರೆಯುಂಗುರವಿಲ್ಲ. ಆದರೆ ಅದರ ಸ್ಥಾನವನ್ನು 'ಮೊಹರು'(ಸೀಲ್) ಅಲಂಕರಿಸಿದೆ. ಹಾಗಾಗಿ ಸರ್ಕಾರದ ಸ್ವಾಮ್ಯದ ಸನ್ನದ್ದುಗಳಾಗಿ ಮೊಹರುಗಳು ಕಾರ್ಯ ನಿರ್ವಹಿಸುತ್ತಿವೆ. ಹೀಗೆ ಮುದ್ರೆಯುಂಗುರ ಮೊಹರಾಗಿ ರೂಪಾಂತರ ಹೊಂದಿದೆ.

ವಿಜಯನಗರ ಸಾಮ್ರಾಜ್ಯದಲ್ಲಿ ಆಚರಣೆಯಲ್ಲಿದ್ದ 'ಮಹಾನವಮಿ ಉತ್ಸವ'ವನ್ನು 'ವಿಶ್ವವಿಖ್ಯಾತ ಮೈಸೂರು ದಸರ'ವಾಗಿ ಇಂದಿಗೂ ಮುಂದುವರೆದುಕೊಂಡು ಬಂದಿದೆ. ಆದರೆ ಅಂದು ರಾಜನ ಮುಂದೆ ಪ್ರದರ್ಶನಗೊಳ್ಳುತ್ತಿದ್ದ ಸಮವಸ್ತ್ರಧರಿಸಿದ್ದ ಸೇನಾಶಿಬಿರಗಳ ಪಥಸಂಚಲನ ಇಂದು ಬದಲಾಗಿದೆ. ರಾಷ್ಟ್ರೀಯ ಹಬ್ಬಗಳಾದ ಗಣರಾಜ್ಯೋತ್ಸವದ ದಿನದಂದು ರಾಷ್ಟ್ರಪತಿಯವರ ಮುಂದೆ ಸೇನಾ ಪ್ರದರ್ಶನ, ಪಥಸಂಚಲನ ಪ್ರದರ್ಶನಗೊಳ್ಳುತ್ತವೆ. ಹೀಗೆ ಪಥಸಂಚಲನ ಉತ್ಸವ ಸಂದರ್ಭದಿಂದ ರಾಷ್ಟ್ರೀಯ ಹಬ್ಬದ ರೂಪದಲ್ಲಿ ಪರಿವರ್ತನೆಯಾಗಿ ರಾಜನ ಸ್ಥಾನವನ್ನು ರಾಷ್ಟ್ರಪತಿಗಳು ಅಲಂಕರಿಸಿದ್ದು, ರೂಪಾಂತರದ ವ್ಯವಸ್ಥೆಯಲ್ಲೂ ಮುಂದುವರೆದುಕೊಂಡು ಬಂದಿರುವುದು ಗಮನಾರ್ಹ ಅಂಶವಾಗಿದೆ.

ಹೀಗೆ ವಿಜಯನಗರ ಕಾಲದ ವಸ್ತ್ರ ಮತ್ತು ಆಭರಣಗಳ ವಿವಿಧ ಮಜಲುಗಳನ್ನು ಅಧ್ಯಯನಕ್ಕೆ ಒಳಪಡಿಸಿದಾಗ ಆ ಕಾಲದ ಚರಿತ್ರೆಯನ್ನು ಸಾಂಸ್ಕೃತಿಕ ನೆಲೆಗಟ್ಟಿನಲ್ಲಿ ಕಟ್ಟಿಕೊಡಲು ಸಾಧ್ಯವಾಗುತ್ತದೆ. ಅಲ್ಲದೇ ಬದಲಾದ ವ್ಯವಸ್ಥೆಯಲ್ಲೂ ವಿಭಿನ್ನ ರೂಪಗಳನ್ನು ಪಡೆದು ಚಲಾವಣೆಯಲ್ಲಿರುವುದು ಪ್ರಸ್ತುತ ಅಧ್ಯಯನದಿಂದ ವ್ಯಕ್ತವಾಗುತ್ತದೆ.

ಆಕರ ಗ್ರಂಥಗಳು

೧. ಆಮುಕ್ತಮಾಲ್ಯದ, ಪು.ಸಂ.೪೦.

೨. ಅಬ್ದುರ್ ರಜಾಕ್, ಪ್ರ.ಕ.ಇಂ., ಸಂ–೨, ಪು.ಸಂ.೧೪೭.

೩. ಪಾಯೇಸ್, ಪ್ರ.ಕಂ.ಇಂ., ಪು.ಸಂ.೩೨೮.

೪. ನ್ಯೂನಿಜ್, ಪ್ರ.ಕಂ.ಇಂ., ಪು.ಸಂ.೩೮೭.

೫. ಅಬ್ದುರ್ ರಜಾಕ್, ಪ್ರ.ಕಂ.ಇಂ., ಪು.ಸಂ.೧೪೯.

೬. ನ್ಯೂನಿಜ್, ಪ್ರ.ಕಂ.ಇಂ., ಪು.ಸಂ.೧೮೩.

೭. ತಮಿಳುನಾಡಿನ ಕನ್ನಡ ಶಾಸನಗಳು, ಕ.ವಿ.ವಿ, ಶಾ.ಸಂ.೪, ಶಾ.ಸಂಖ್ಯೆ.೧೬, ಪು.ಸಂ. ೨೧–೨೪.

೮. ಬಾರ್ಬೋಸ, ಪು.ಸ.೨೬೮.

೯. ಅದೇ, ಪು.ಸ.೩೨೧.

೧೦. ಮೋಹನತರಂಗಿಣಿ, ಪು.ಸಂ.೧೨.

೧೧. ಪಾಯೇಸ್, ಪ್ರ.ಕಂ.ಇಂ., ಪು.ಸಂ.೩೨೮.

೧೨. ಸರಸ್ವತಿ, ಎನ್., ವಿ.ಕಾ.ಮ.ಕೊ., ಪು.ಸಂ.೧೫೩

ಅಧ್ಯಾಯ ಆರು : ಸಮಾರೋಪ

ಸಮಾರೋಪ

ಪ್ರಸ್ತುತ ಅಧ್ಯಯನವು ವಿಜಯನಗರ ಕಾಲದ ವಸ್ತ್ರ ಮತ್ತು ಆಭರಣಗಳನ್ನು ಕುರಿತಿದೆ. ಈ ಅಧ್ಯಯನದ ಮೂಲಕ ವಿಜಯನಗರ ಕಾಲದಲ್ಲಿ ಅರಸರಿಂದ ಜನಸಾಮಾನ್ಯರವರೆಗೆ ಧರಿಸುತ್ತಿದ್ದ ಹಾಗೂ ದೇವತೆಗಳಿಂದ ಹಿಡಿದು ಪ್ರಾಣಿಗಳವರೆಗೆ ತೊಡಿಸುತ್ತಿದ್ದ ವಸ್ತ್ರ ಮತ್ತು ಆಭರಣಗಳನ್ನು ಅಭ್ಯಸಿಸುವುದು ಮುಖ್ಯವಾಗಿದೆ. ಇವುಗಳೊಂದಿಗೆ ಅವುಗಳ ತಯಾರಿಕಾ ವರ್ಗವನ್ನು ತಿಳಿಯುವುದರ ಜೊತೆಗೆ ಅಂದಿನ ಸಾಂಸ್ಕೃತಿಕ ಚಿತ್ರಣವನ್ನು ವಸ್ತ್ರ ಮತ್ತು ಆಭರಣಗಳ ಮೂಲಕ ಅರಿಯುವ ಪ್ರಯತ್ನ ಪ್ರಸ್ತುತ ಅಧ್ಯಯನದ್ದು.

'ವಸ್ತ್ರ' ವೆಂಬುದು ವಸನ, ಬಟ್ಟೆ, ಉಡುಗೆ ಎಂಬ ಅರ್ಥಗಳನ್ನು ಹೊಂದಿದ್ದರೆ, 'ಆಭರಣ'ಕ್ಕೆ ಒಡವೆ, ಭೂಷಣ ಎಂಬ ಅರ್ಥಗಳಿವೆ. ಒಟ್ಟಿನಲ್ಲಿ ವಸ್ತ್ರವು ಶರೀರವನ್ನು ಮುಚ್ಚುವ, ರಕ್ಷಿಸುವ ಮತ್ತು ಅಭಿವ್ಯಕ್ತಿಯ ಸಾಧನವಾದರೆ, ಆಭರಣವು ಅಲಂಕಾರ, ಪ್ರತಿಷ್ಠೆ ಹಾಗೂ ಸಂಪತ್ತಿನ ಆಗರವೂ ಆಗಿದೆ.

ವಸ್ತ್ರ ಮತ್ತು ಆಭರಣಗಳು ಒಂದು ಸಮಾಜ ಮತ್ತು ಸಂಸ್ಕೃತಿಯ ಪ್ರತೀಕ. ಪ್ರಾಗೈತಿಹಾಸಿಕ ಕಾಲ ದಿಂದಲೂ ನಿಸರ್ಗದತ್ತವಾಗಿ ಸಿಗುತ್ತಿದ್ದ ವಸ್ತುಗಳನ್ನು ವಸ್ತ್ರ ಮತ್ತು ಆಭರಣಗಳಿಗೆ ಬಳಸಲಾಗುತ್ತಿತ್ತು. ಅವು ಮುಂದೆ ಆವಿಷ್ಕಾರಗಳ ಹಿನ್ನೆಲೆಯಲ್ಲಿ ನೂಲಿನ ವಸ್ತ್ರ ಮತ್ತು ಲೋಹಗಳವರೆಗೆ ವಿವಿಧ ಕಾಲಘಟ್ಟಗಳಲ್ಲಿ ಬದಲಾಗಿರುವುದು ಗಮನೀಯ ಸಂಗತಿ. ಹಾಗಾಗಿ ವಸ್ತ್ರ ಮತ್ತು ಆಭರಣಗಳು ಇತಿಹಾಸ ಮತ್ತು ಪರಂಪರೆಯನ್ನು ತಿಳಿಯುವ, ಅವುಗಳ ಪ್ರಾಚೀನತೆಯನ್ನು ದೃಢೀಕರಿಸುವ ಆಕರಗಳೂ ಹೌದು. ವಿಜಯನಗರ ಪೂರ್ವ ಹಾಗೂ ವಿಜಯನಗರ ಕಾಲದ ಈ ಬಗೆಯ ಆಕರಗಳಿಂದ ವಸ್ತ್ರ ಮತ್ತು ಆಭರಣಗಳ ವಿಕಾಸದ ವಿವಿಧ ಮಜಲುಗಳನ್ನು ಅರಿಯುವುದೂ ಮುಖ್ಯವಾಗಿದೆ.

ಸಾಮ್ರಾಜ್ಯದ ಆದಾಯದ ನಾಲ್ಕು ಭಾಗಗಳಲ್ಲಿ ಒಂದು ಭಾಗವನ್ನು ಅರಸನು ವಸ್ತ್ರ,

ಆಭರಣ ಮೊದಲಾದ ವೈಯುಕ್ತಿಕ ಭೋಗಗಳಿಗೆಂದೇ ವಿನಿಯೋಗಿಸಲು ಅವಕಾಶವಿತ್ತು. ಹಾಗಾಗಿ ವಿಜಯನಗರದ ರಾಜರು ತಾವು ಧರಿಸುತ್ತಿದ್ದ ವಸ್ತ್ರ ಮತ್ತು ಆಭರಣಗಳಿಗೆ ಅಪಾರ ಹಣವನ್ನು ವ್ಯಯಿಸಿದ್ದುದು ತಿಳಿದುಬರುತ್ತದೆ. ಅರಸರು ವಸ್ತ್ರ ಮತ್ತು ಆಭರಣಗಳಿಗೆ ವಿದೇಶಗಳಾದ ಪರ್ಶಿಯಾದಿಂದ ಡಮಾಸ್ಕ್, ಸ್ಯಾಟೀನ್ ಬಟ್ಟೆ, ಚೀನಾ ಮತ್ತು ಅಲೆಗ್ಸಾಂಡ್ರಿಯಾದಿಂದ ರೇಷ್ಮೆ, ಕೆಂಪುಬಟ್ಟೆ ಹಾಗೂ ಅರೇಬಿಯಾ, ಓರ್ಮುಜ್, ಕಾಯಲ್‌ಗಳಿಂದ ಮುತ್ತು, ಪೆಗು ಮತ್ತು ಸಿಲೋನ್‌ಗಳಿಂದ ವಜ್ರವೈಢೂರ್ಯಗಳನ್ನು ಆಮದು ಮಾಡಿಕೊಂಡು ವಸ್ತ್ರ ಮತ್ತು ಆಭರಣಗಳ ತಯಾರಿಕೆಯಲ್ಲಿ ಬಳಸಿ ಧರಿಸುತ್ತಿದ್ದುದು ದಾಖಲಾರ್ಹ ಸಂಗತಿ.

ಅರಸ ಧರಿಸುತ್ತಿದ್ದ ವಸ್ತ್ರ ಮತ್ತು ಆಭರಣಗಳು ಬೆಲೆಬಾಳುವ, ಘನತೆ ಮತ್ತು ಪ್ರತಿಷ್ಠೆಯ ಸಾಧನಗಳಾಗಿ ದ್ದರಿಂದ, ಅಚ್ಯುತದೇವರಾಯನ ಕಾಲದಲ್ಲಿ ಅರಸ ಧರಿಸಿ ತೆಗೆದ ವಸ್ತ್ರಗಳನ್ನು ಘನತೆ ಮತ್ತು ಸ್ಥಾನದ ಕುರುಹೆಂದು ಪರಿಗಣಿಸಲಾಗಿತ್ತು. ಅಲ್ಲದೆ ವಿಜಯನಗರ ಅವಧಿಯಲ್ಲಿ ಅರಸನ ಅರಮನೆಯ ಖಜಾನೆಯ ವಿವಿಧ ಶಾಖೆಗಳಲ್ಲಿ ವಸ್ತ್ರ ಮತ್ತು ಆಭರಣಗಳಿಗೆಂದೇ ಪ್ರತ್ಯೇಕ ಶಾಖೆಗಳಿದ್ದುದು ಗಮನಾರ್ಹ.

ವಸ್ತ್ರ ಮತ್ತು ಆಭರಣಗಳು ಪ್ರಾಕೃತಿಕ ಪರಿಸರ, ಸಮಕಾಲೀನ ಪ್ರಭಾವ ಹಾಗೂ ಬದಲಾದ ಸಂದರ್ಭಗಳಿಗೆ ಅನುಗುಣವಾಗಿ ಮಾರ್ಪಾಡುಗೊಳ್ಳುತ್ತಿದ್ದವು. ವಿಜಯನಗರ ಕಾಲದ ವಸ್ತ್ರಗಳ ಮೇಲೆ ನೆರೆಯ ಬಹುಮನಿ ಶಾಹಿಸುಲ್ತಾನರ ಜೊತೆಗೆ ವಿದೇಶಿಯರ ಪ್ರಭಾವ ಆಗಿದ್ದುದು ಅಧ್ಯಯನಾರ್ಹ ಸಂಗತಿಯಾಗಿದೆ.

ವಿಜಯನಗರ ಸಾಮ್ರಾಜ್ಯದಲ್ಲಿ ಆಯಾ ಧರ್ಮೀಯರು ತಮ್ಮ ಧರ್ಮ ಮತ್ತು ಸಂಪ್ರದಾಯಕ್ಕೆ ಅನುಗುಣವಾಗಿ ವಸ್ತ್ರ ಮತ್ತು ಆಭರಣಗಳನ್ನು ಧರಿಸುತ್ತಿದ್ದರು ಎಂಬುದು ಸಾಹಿತ್ಯ ಮತ್ತು ಶಿಲ್ಪಗಳಿಂದ ಸ್ಪಷ್ಟವಾಗುವ ಸಂಗತಿ.

ವಿಜಯನಗರ ಸಾಮ್ರಾಜ್ಯದ ರಾಜಧಾನಿಯಾದ ಹಂಪಿ ಬಹುದೊಡ್ಡ ಜಾಗತಿಕ ವ್ಯಾಪಾರ ಕೇಂದ್ರವಾಗಿತ್ತು. ಇದಕ್ಕೆ ವಿಜಯನಗರದಲ್ಲಿ ಇದ್ದ ಏಳು ಬಜಾರುಗಳು, ಪ್ರತಿ ಬಜಾರಿನಲ್ಲಿ ವಾರಕ್ಕೆ ಒಂದೊಂದು ದಿನದಂತೆ ನಡೆಯುತ್ತಿದ್ದ ಸಂತೆಗಳು ಮುಖ್ಯವಾಗಿವೆ. ಆದರೆ ಅವುಗಳಲ್ಲಿ ಪಾನ್-ಸೂಪಾರಿ ಬಜಾರ್ ಪಟ್ಟಣದ ಕೇಂದ್ರ ಭಾಗದಲ್ಲಿ ಇದ್ದುದರಿಂದ ಅದು ಪ್ರಮುಖ ವ್ಯಾಪಾರಿ ತಾಣವಾಗಿತ್ತು. ಈ ಬಜಾರಿನಲ್ಲಿ ದೇಶ-ವಿದೇಶಗಳಿಂದ ತಂದ ಬೆಲೆಬಾಳುವ ವಸ್ತ್ರ ಮತ್ತು ಆಭರಣಗಳನ್ನು ಮಾರಾಟ ಮಾಡಲಾಗುತ್ತಿತ್ತು. ಇದಕ್ಕೆಂದೇ ಪ್ರತ್ಯೇಕ ಅಂಗಡಿ ಹಾಗೂ ಮಳಿಗೆ ಬೀದಿಗಳು ಇದ್ದುದು ಗಮನಾರ್ಹ ಅಂಶ. ಈ ಹಿನ್ನೆಲೆಯಲ್ಲಿಯೇ ಪಾಯೇಸ್ ವಿಜಯನಗರ ಪಟ್ಟಣವು ಜಗತ್ತಿನ ವ್ಯಾಪಾರಿಗಳು ಒಂದೆಡೆ ಸಂಧಿಸುವ ಕೇಂದ್ರವೆಂಬುದಾಗಿ ಉದ್ಗರಿಸಿರುವುದು.

ದೇವ ದೇವತೆಗಳ ವಸ್ತ್ರ ಮತ್ತು ಆಭರಣಗಳಲ್ಲಿ ಕೆಲವು ವಿಭಿನ್ನತೆಗಳನ್ನು ಕಾಣ ಬಹುದು. ಶೈವ ದೇವತೆಗಳಲ್ಲಿ ಶಿವನಿಗೆ ನಾಗಕುಂಡಲ, ನಾಗಮುರಿಗೆ, ನಾಗಕಂಕಣ, ರುಂಡಮಾಲೆ, ವ್ಯಾಘ್ರದುಡಿಗೆ, ರುದ್ರಾಕ್ಷಿ ಮತ್ತು ವಿಭೂತಿ ಪ್ರಮುಖವಾದರೆ, ವೈಷ್ಣವ ದೇವತೆಗಳಲ್ಲಿ ವಿಷ್ಣುವಿಗೆ

ಪತ್ರಕುಂಡಲ, ಮಕರಕುಂಡಲ, ವಾಜೀಬಂಧ, ತ್ರಿಪುಂಡ್ರ, ತುಳಸೀಮಾಲೆ, ಕೌಸ್ತುಭಹಾರ, ವೈಜಯಂತಿಮಾಲೆ, ರೇಷ್ಮೆ ಧೋತ್ರಗಳು ಮುಖ್ಯವಾಗಿರುವುದು ಅಧ್ಯಯನಾರ್ಹ ಸಂಗತಿ.

ದೇವರಿಗೆ ಸೇವಾ ಮನೋಭಾವದಿಂದ ದಾನಗಳನ್ನು ಅರಸರಿಂದ ಹಿಡಿದು ಸಾಮಾನ್ಯ ಜನರವರೆಗೆ ವಿವಿಧ ರೂಪದಲ್ಲಿ ತಮ್ಮ ಸಾಮರ್ಥ್ಯಕ್ಕೆ ಅನುಗುಣವಾಗಿ ನೀಡುವ ಪದ್ಧತಿ ಪರಂಪರಾಗತವಾಗಿದೆ. ಇಂದಿಗೂ ಅದು ಭಿನ್ನವಾಗಿಲ್ಲ. ದಾನದತ್ತಿಗಳಲ್ಲಿ ಬೆಲೆಬಾಳುವ ವಸ್ತ್ರ ಮತ್ತು ಆಭರಣಗಳೂ ಸ್ಥಾನ ಪಡೆದಿರುವುದು ವಿಜಯನಗರ ಕಾಲದ ವಿಶಿಷ್ಟ ಸಂಗತಿ. ಇದು ಕೃಷ್ಣದೇವರಾಯ ಮತ್ತು ನಂತರದ ಅರಸರು ದೇವಾಲಯಗಳಿಗೆ ಅದರಲ್ಲೂ ವೈಷ್ಣವ ದೇವಾಲಯಗಳಿಗೆ ನೀಡಿದ ದಾನಗಳಿಂದ ದೃಢವಾಗುತ್ತದೆ.

ವೈಷ್ಣವ ದೇವಾಲಯಗಳಿಗೆ ವಸ್ತ್ರ ಮತ್ತು ಆಭರಣಗಳನ್ನು ವಿಶೇಷವಾಗಿ ದಾನ ನೀಡಿದ್ದಾರೆ. ಇದಕ್ಕೆ ಅರಸರಿಗೆ ಇದ್ದ ವೈಷ್ಣವ ಭಕ್ತಿ ಒಂದೆಡೆಯಾದರೆ ಮೂರ್ತಿಶಿಲ್ಪದ ದೃಷ್ಟಿಯಿಂದ ವೈಷ್ಣವ ಶಿಲ್ಪಗಳಿಗೆ ಹೆಚ್ಚಿನ ವಸ್ತ್ರ ಮತ್ತು ಆಭರಣಗಳನ್ನು ತೊಡಿಸಲು ಸಾಧ್ಯವಾಗುತ್ತಿದ್ದುದು ಮತ್ತೊಂದು ಕಾರಣವಾಗಿದೆ. ಶೈವಶಿಲ್ಪಗಳು ಹೆಚ್ಚಾಗಿ ಲಿಂಗರೂಪಿಯಾಗಿದ್ದು ವಸ್ತ್ರ ಮತ್ತು ಆಭರಣಗಳಿಗೆ ಅವಕಾಶ ಕಡಿಮೆಯೆಂದೇ ಹೇಳಬಹುದು. ಈ ಹಿನ್ನೆಲೆಯಲ್ಲಿ ಶೈವ ದೇವಾಲಯಗಳಿಗೆ ನೀಡಿದ ವಸ್ತ್ರ ಮತ್ತು ಅಭರಣಗಳು ವಿರಳವಾಗಿವೆ.

ವಿಜಯನಗರ ಕಾಲದ ದೇವಾಲಯಗಳು ಅಪಾರವಾಗಿ ಸಂಗ್ರಹಿಸಿಟ್ಟಿದ್ದ ವಸ್ತ್ರ ಮತ್ತು ಆಭರಣಗಳನ್ನೊಳಗೊಂಡ ಸಂಪತ್ತಿನ ಭಂಡಾರವೇ ಅಗಿದ್ದವು. ಅದರಲ್ಲೂ ಶೈವ ದೇವಾಲಯ ಗಳಿಗಿಂತ ವೈಷ್ಣವ ದೇವಾಲಯಗಳು ವಸ್ತ್ರ ಮತ್ತು ಆಭರಣಗಳ ಆಗರವೇ ಆಗಿದ್ದುದು ಶಾಸನಗಳಿಂದ ದೃಢಪಡುವ ಸಂಗತಿ.

ವಸ್ತ್ರ ಮತ್ತು ಆಭರಣಗಳನ್ನು ಒಳಗೊಂಡ ಸಂಪತ್ತಿನ ಈ ಬಗೆಯ ಭಂಡಾರಗಳೇ ವಿಜಯನಗರ ನಿರ್ಣಾಯಕ ಯುದ್ಧವಾದ ರಕ್ಕಸಗಿ-ತಂಗಡಗಿಯ ಸೋಲಿನ ನಂತರ ಈ ಎಲ್ಲ ದೇವಾಲಯಗಳು ಭಗ್ನಗೊಳ್ಳಲು ಹಾಗೂ ಇಡೀ ನಗರ ಹಾಳು ಪಟ್ಟಣವಾಗಲು ಕಾರಣವಾಯಿ ತೆಂಬುದನ್ನು ಮರೆಮಾಚುವಂತಿಲ್ಲ.

ವಸ್ತ್ರ ಮತ್ತು ಆಭರಣಗಳು ಸಾಮಾಜಿಕ ಮತ್ತು ಆರ್ಥಿಕ ಜೀವನದ ಅವಿಭಾಜ್ಯ ಅಂಗಗಳು. ನಿತ್ಯ ಜೀವನದ ಜೊತೆಗೆ ಹಬ್ಬ-ಉತ್ಸವ, ಜಾತ್ರೆ ಮೊದಲಾದ ವಿಶೇಷ ಸಂದರ್ಭಗಳಲ್ಲಿ ಅರಸರಿಂದ ಹಿಡಿದು ಸಾಮಾನ್ಯ ಜನರವರೆಗೆ ಹಾಗೂ ಸಾಕು ಪ್ರಾಣಿಗಳಿಗೂ ತಮ್ಮಲ್ಲಿರುವ ವಸ್ತ್ರ ಮತ್ತು ಆಭರಣಗಳನ್ನು ತೊಡಿಸಿ ಅಲಂಕೃತಗೊಳಿಸಿ ಸಂತಸಪಡುತ್ತಿದ್ದುದು ಪ್ರಾಚೀನ ಕಾಲದಿಂದಲೂ ರೂಢಿಯಲ್ಲಿತ್ತು. ವಿಜಯನಗರ ಕಾಲದಲ್ಲಿ ಅನೇಕ ಧಾರ್ಮಿಕ ಹಬ್ಬ, ಹರಿದಿನ, ಉತ್ಸವ, ರಥೋತ್ಸವಗಳು ಆಚರಣೆಯಲ್ಲಿದ್ದವು. ಈ ಬಗೆಯ ಹಬ್ಬ ಉತ್ಸವವಾದಾಗ ವಿಶೇಷ ವಸ್ತ್ರ ಮತ್ತು ಆಭರಣಗಳ ಧಾರಣೆ ಹಾಗೂ ಅನಾವರಣಕ್ಕೆ ಪ್ರೇರಣೆಯಾಗಿದ್ದ ವೆಂಬುದಂತೂ ಸತ್ಯ. ಈ ಕುರಿತು ಮಹಾನವಮಿ ಉತ್ಸವದ ಸಂದರ್ಭದಲ್ಲಿ ಈ ಆಭರಣಗಳ ಅಲಂಕರಣೆ ಹೆಚ್ಚಾಗಿ ಅವುಗಳ

ಮಣಭಾರಕ್ಕೆ ರಾಣಿಯರು ಹೆಜ್ಜೆ ಮುಂದಿಡಲಾರದೆ ತಮ್ಮ ಸಖಿಯರ ನೆರವನ್ನು ಪಡೆದಿದ್ದರೆಂಬ ನ್ಯೂನಿಜ್‌ನ ವರ್ಣನೆ ನೈಜನೀಯವೇ ಆಗಿದೆ.

ವಿಜಯನಗರ ಕಾಲದಲ್ಲಿ ಯುದ್ಧಗಳು ನಿರಂತರವಾಗಿ ನಡೆದುದು ಚರಿತ್ರೆಯಿಂದ ತಿಳಿದುಬರುವ ಸಂಗತಿ. ಈ ಯುದ್ಧಗಳಿಗೆ ಸೈನಿಕರನ್ನು ಪ್ರೇರೇಪಿಸಲು, ಅವರಲ್ಲಿ ಕೆಚ್ಚನ್ನು ತುಂಬಲು ವಸ್ತ್ರ ಮತ್ತು ಆಭರಣಗಳನ್ನು ಪ್ರೇರಣಾ ಮತ್ತು ಬಹುಮಾನದ ಸಾಧನಗಳಾಗಿ ಬಳಸಿರುವುದು ಗಮನಾರ್ಹ. ಇದಕ್ಕೆ ಕೃಷ್ಣದೇವರಾಯನ ರಾಯಚೂರು ಹಾಗೂ ರಾಮರಾಯ ಕೈಗೊಂಡ ರಕ್ಕಸಗಿ–ತಂಗಡಗಿ ಯುದ್ಧಗಳು ಸಾಕ್ಷ್ಯಗಳಾಗಿವೆ.

ವಿಸ್ತಾರವಾದ ವಿಜಯನಗರ ಸಾಮ್ರಾಜ್ಯದ ಜನತೆಯ ಅಗತ್ಯತೆಗೆ ಅನುಗುಣವಾಗಿ ವಸ್ತ್ರ ಮತ್ತು ಆಭರಣಗಳನ್ನು ತಯಾರಿಸುವಲ್ಲಿ ನೇಕಾರ ಮತ್ತು ಅಕ್ಕಸಾಲಿಗ ಸಮುದಾಯ ಪ್ರಮುಖ ಪಾತ್ರ ವಹಿಸಿವೆ.

ಹತ್ತಿಯಿಂದ ಬೀಜವನ್ನು ಬೇರ್ಪಡಿಸುವ ಕಾಯಕದಿಂದ ಹಿಡಿದು ವಸ್ತ್ರವನ್ನು ತಯಾರಿಸಿ ಮಾರಾಟ ಮಾಡುವವರೆಗೆ ನೇಕಾರರಲ್ಲಿ ನಿರ್ದಿಷ್ಟ ಪಂಗಡಗಳಿದ್ದವು. ಈ ಪಂಗಡಗಳು ನಿರ್ದಿಷ್ಟಪಡಿಸಿದ ಕೆಲಸವನ್ನು ವ್ಯವಸ್ಥಿತವಾಗಿ ನಿರ್ವಹಿಸಿದ್ದುದು ದೃಢವಾಗುತ್ತದೆ.

ಆಭರಣ ತಯಾರಿಕಾ ವರ್ಗವಾದ ಅಕ್ಕಸಾಲಿಗರು ಹೆಚ್ಚಾಗಿ ನಗರವಾಸಿಗಳಾಗಿದ್ದು, ರಾಜರಿಂದ ಮನ್ನಣೆ ಗಳಿಸಿದ್ದರು. ಅವರು ಅರಸರ ಅಗತ್ಯತೆಗಳನ್ನು ಪೂರೈಸುತ್ತ ಗೌರವ ಪುರಸ್ಕಾರಗಳಿಗೆ ಭಾಜನರಾಗಿದ್ದುದು ಅಧ್ಯಯನದಿಂದ ವ್ಯಕ್ತಗೊಳ್ಳುವ ಅಂಶ.

ನೇಕಾರರು ಮತ್ತು ಅಕ್ಕಸಾಲಿಗರು ಸಾಮಾಜಿಕ ಮತ್ತು ಆರ್ಥಿಕವಾಗಿ ಉತ್ತಮ ಸ್ಥಾನ ಮಾನ ಹೊಂದಿದ್ದರು ಎಂಬುದಕ್ಕೆ ಅವರ ಮೇಲೆ ವಿಧಿಸಿದ್ದ ತೆರಿಗೆಗಳಿಂದ ಸ್ಪಷ್ಟವಾಗುತ್ತದೆ.

ವಸ್ತ್ರಗಳ ವೈವಿಧ್ಯತೆ ವಿನ್ಯಾಸವನ್ನು ಗಮನದಲ್ಲಿಟ್ಟುಕೊಂಡು ವಿಶ್ಲೇಷಿಸುವುದಾದರೆ, ಸೀರೆ ಮತ್ತು ಧೋತ್ರಗಳು ವಿಜಯನಗರ ಕಾಲದ ಸ್ತ್ರೀ–ಪುರುಷರ ಸಾಮಾನ್ಯ ಉಡುಪುಗಳಾಗಿದ್ದವು. ಇವುಗಳನ್ನು ಅರ್ಧೋರುಕ ಮತ್ತು ಪೂರ್ಣೋರುಕಗಳಾಗಿ ಧರಿಸುತ್ತಿದ್ದುದು ಗಮನಾರ್ಹ.

ಉದ್ದನೆಯ ನಿಲುವಂಗಿ, ಪಾದಚಲ್ಲಣ ಹಾಗೂ ವಿಭಿನ್ನ ಶೈಲಿಯಲ್ಲಿ ಹಿಡಿದಿರುವ ಉತ್ತರೀಯ ಇವು ಆಡಳಿತ ವರ್ಗ ಅದರಲ್ಲೂ ವಿಜಯನಗರ ಅರಸನ ವಸ್ತ್ರ ಸಂಹಿತೆಯನ್ನು ಪ್ರತಿನಿಧಿಸುತ್ತದೆ.

ಸೀರೆಯನ್ನು ಕಟಿಯಿಂದ ಪಾದಗಳವರೆಗೆ ಧರಿಸಿದ್ದುದು, ಅಲ್ಲದೆ ಸೀರೆಯ ನಿರಿಗೆಗಳು ಕಟಿ ಮತ್ತು ಪಾದ ಭಾಗದಲ್ಲಿ ಒತ್ತೊತ್ತಾಗಿ ಬೀಸಣಿಗೆಯ ಮಾದರಿಯಲ್ಲಿ ಧಾರಣೆ ಕಂಡುಬಂದಿರುವುದು ವಿಜಯನಗರ ಕಾಲದ ಸೀರೆ ಧಾರಣೆಯ ಪ್ರಮುಖ ಲಕ್ಷಣವಾಗಿದೆ.

ಚೋಳರ ಕಾಲದ ಕಿರೀಟದ ಮಾದರಿಯನ್ನು ವಿಜಯನಗರದವರು ಅಳವಡಿಸಿ ಕೊಂಡಿದ್ದರು. ಆದರೆ ಕಿರೀಟದ ಎತ್ತರವನ್ನು ಮತ್ತಷ್ಟು ಎತ್ತರಿಸಿ ಅಲಂಕೃತಗೊಳಿಸಿ ಧರಿಸಿದ್ದುದು ಈ ಕಾಲದ ಪ್ರಮುಖ ಲಕ್ಷಣವಾಗಿದೆ.

ವಿಜಯನಗರ ಕಾಲದಲ್ಲಿ ನರಸಿಂಹನ ಆರಾಧನೆ ಹೆಚ್ಚಾದಂತೆ ದೇವರಿಗೆ ತೊಡಿಸುವ ಕಿರೀಟದಲ್ಲಿಯೂ ಹೊಸ ವಿನ್ಯಾಸವನ್ನು ರೂಪಿಸಿ ತೊಡಿಸಿದ್ದುದನ್ನು ಕಾಣಬಹುದು. ಹಂಪೆಯ ಏಕಶಿಲಾ ಲಕ್ಷ್ಮೀನರಸಿಂಹ ಶಿಲ್ಪದಲ್ಲಿ ಕಡೆದಿರುವ ಕಿರೀಟದ ಶಿಖರ ಭಾಗದಲ್ಲಿರುವ ಕೀರ್ತಿಮುಖದಿಂದ ವಿಜಯನಗರದ ಆಭರಣ ವಿನ್ಯಾಸದ ವಿಶೇಷತೆಯನ್ನು ಅರಿಯಲು ಸಾಧ್ಯವಾಗುತ್ತದೆ.

ಒಟ್ಟಿನಲ್ಲಿ ಬದಲಾದ ಸಂದರ್ಭ, ಕಾಲ, ದೇಶ, ವಯೋಮಾನ, ವೃತ್ತಿ, ಲಿಂಗ, ಪ್ರಮಾಣ, ಮಾದರಿ ಮತ್ತು ವಿನ್ಯಾಸಗಳಿಗೆ ಅನುಗುಣವಾಗಿ ವಿಜಯನಗರ ಕಾಲದ ವಸ್ತ್ರ ಮತ್ತು ಅಭರಣಗಳು ಮಾರ್ಪಾಡುಗೊಳ್ಳುತ್ತಿದ್ದುದು ಅಧ್ಯಯನಾರ್ಹ ಸಂಗತಿ. ಈ ಎಲ್ಲ ಸಂಗತಿಗಳು ವಸ್ತ್ರ ಮತ್ತು ಆಭರಣಗಳ ಮೇಲೆ ಬೀರಿದ ಪ್ರಭಾವ ಮತ್ತು ಪರಿಣಾಮಗಳು ವಿಜಯನಗರ ಕಾಲದ ಸಾಮಾಜಿಕ, ಆರ್ಥಿಕ ಮತ್ತು ಸಾಂಸ್ಕೃತಿಕ ಚರಿತ್ರೆಯನ್ನು ಅರಿಯಲು ಕೈಕನ್ನಡಿಗಳೆಂದರೆ ತಪ್ಪಾಗಲಾರದು.

ಅನುಬಂಧಗಳು

ಪದಕೋಶ

ಗ್ರಂಥಸೂಚಿ

ಸಂಕ್ಷೇಪಸೂಚಿ

ಛಾಯಾಚಿತ್ರಗಳು

ವಸ್ತ್ರಾಭರಣಗಳ ಪದಕೋಶ

ಅಂಗದ	–	ತೋಳಿನ ಬಳೆ
ಅಂಗಚಿತ್ತ	–	ಪಾರಿತೋಷಕ; ಉಡುಗೊರೆ
ಅಂಗವಸ್ತ್ರ	–	ಹೊದೆಯುವ ವಸ್ತ್ರ; ವಲ್ಲಿ
ಅಂಗಿ	–	ತೋಳುಗಳುಳ್ಳ ಒಂದು ಉಡುಪು
ಅಂಚಲ	–	ಬಟ್ಟೆಯ ಅಥವಾ ಸೀರೆಯ ಸೆರಗು
ಅಂಚು	–	ಬಟ್ಟೆ ಸೀರೆ ಧೋತ್ರಗಳ ಉದ್ದದ ಕಡೆಯ ಭಾಗ
ಅಂತಃಪಟ	–	ಮದುವೆಯ ಮಹೂರ್ತದಲ್ಲಿ ವಧುವರರಿಗೆ ನಡುವೆ ಅಡ್ಡಲಾಗಿ ಹಿಡಿಯುವ ವಸ್ತ್ರ
ಅಂತರೀಯ	–	ಉಡಿಗೆ, ಒಳಉಡಿಗೆ
ಅಂದಿಗೆ	–	ನೂಪುರ, ಕಾಲಿನ ಕಡಗ
ಅಂದುಗೆ	–	ಅಂದಿಗೆ
ಅಂಬರ	–	ಬಟ್ಟೆ
ಅಂಬಾರಿ	–	ಆನೆಯ ಮೇಲೆ ಕುಳಿತು ಕೊಳ್ಳಲು ಹಾಕುವ ಮಂಟಪದಂತಹ ಭದ್ರಾಸನ
ಅಟ್ಟೆ	–	ಪಾದರಕ್ಷೆಯ ತಳಭಾಗದ ಹಲ್ಲೆ
ಅಡ್ಡಿಕೆ	–	ಕೊರಳಲ್ಲಿ ಧರಿಸುವ ಅರ್ಧ ಚಂದ್ರಾಕಾರದ ಆಭರಣ
ಅರಿವೆ	–	ಬಟ್ಟೆ, ವಸ್ತ್ರ
ಅಕ್ಷರಮಾಲಾ	–	ಮಣಿಗಳ ಸರ (ಜಪಮಾಲೆ)
ಆಚ್ಛಾದನ	–	ಹೊದಿಕೆ, ಬಟ್ಟೆ
ಆಚ್ಛಾದಿತ	–	ಮುಚ್ಚಲ್ಪಟ್ಟ ಅಥವಾ ಹೊದಿಸಲ್ಪಟ್ಟ ವಸ್ತ್ರ
ಆಭರಣ	–	ಒಡವೆ
ಉಂಗುರ	–	ಬೆರಳಿಗೆ ಇಡುವ ಆಭರಣ

ಉಡಿದಾರ	–	ಸೊಂಟಕ್ಕೆ ಕಟ್ಟಿಕೊಳ್ಳುವ ದಾರ ಅಥವಾ ಒಂದು ತರದ ಆಭರಣ
ಉಡುಪು	–	ಉಡುವ ಬಟ್ಟೆ
ಉತ್ತಂಸ	–	ತಲೆಯಲ್ಲಿ ಧರಿಸುವ ಆಭರಣ, ಶಿರೋಭೂಷಣ, ಕಿವಿಯ ಓಲೆ, ಕರ್ಣಪೂರ
ಉತ್ತರೀಯ	–	ಮೇಲು ಹೊದಿಕೆ, ಹೊದೆಯುವ ಬಟ್ಟೆ
ಉತ್ಪಲ	–	ಕನ್ನೈದಿಲೆ
ಉಪವೀತ	–	ಜನಿವಾರ, ಯಜ್ಞೋಪವೀತ
ಉರಸ್ತ್ರಾಣ	–	ಕವಚ, ಚಿಲಖತ್ತು
ಉರಪಾಶ	–	ಎದೆಗೆ ಬಿಗಿಯುವ ಹಗ್ಗ, ಎದೆಪಟ್ಟಿ
ಉಷ್ಣೀಷ	–	ರುಮಾಲು, ಕಿರೀಟ
ಏಕಾವಳಿ	–	ಒಂದು ಎಳೆಯ ಸರ
ಒಂಟ	–	ಒಂದು ಬಗೆಯ ಕಿವಿಯ ಆಭರಣ
ಒಡವೆ	–	ಆಭರಣ
ಒಡ್ಯಾಣ	–	ನಡುವಿಗೆ ಹಾಕಿಕೊಳ್ಳುವ ಬೆಳ್ಳಿ ಅಥವಾ ಚಿನ್ನದ ಪಟ್ಟಿ; ಮೇಖಲೆ; ಡಾಬು; ನಡುಕಟ್ಟು
ಓಲೆ	–	ಕಿವಿಗಿಡುವ ಆಭರಣ
ಓಲಗ	–	ನಾಗಸ್ವರ ಮುಂತಾದ ವಾದ್ಯ
ಕಂಕಣ	–	ಕಡಗ; ಹಸ್ತಾಭರಣ, ಬಳೆ
ಕಂಚುಕ	–	ಕುಪ್ಪಸ; ರವಿಕೆ
ಕಂಟಕ	–	ಕೊರಳಲ್ಲಿ ಧರಿಸುವ ಏಕಾವಳಿ ಸರ; ಒಂದೆಳೆ ಸರ
ಕಂತೆ	–	ಚಿಂದಿ ಬಟ್ಟೆ; ಸನ್ಯಾಸಿಗಳು ಧರಿಸುವ ಬಟ್ಟೆ; ಕವುದಿ
ಕಂಬಳಿ	–	ಉಣ್ಣೆಯ ಉತ್ತರೀಯ
ಕಂಬಿ	–	ಸೀರೆ ಮೊದಲಾದ ಬಟ್ಟೆಗಳ ಕಲಾಬತ್ತಿನ ಅಂಚು
ಕಂಜರಿ	–	ಚಿಕ್ಕ ಚರ್ಮವಾದ್ಯ
ಕಚ	–	ತುರುಬು; ಹೆಡ ತಲೆಯಲ್ಲಿನ ಕೂದಲ ಗಂಟು
ಕಟಕ	–	ಕಡಗ; ಕೈಬಳೆ
ಕಡಗ	–	ಬಳೆ; ಕೈಗೆ ಅಥವಾ ಕಾಲಿಗೆ ಧರಿಸುವ ಆಭರಣ
ಕಣ	–	ಹೆಂಗಸರ ರವಿಕೆ ಪಟ್ಟಿ; ಬಟ್ಟೆ
ಕಪ್ಪ	–	ಪೊಗದಿ, ಅಲಂಕಾರಕ್ಕಾಗಿ ಕೈಯಲ್ಲಿ ಧರಿಸುವ ಚಿನ್ನದ ಅಥವಾ ಬೆಳ್ಳಿಯ ಕಡಗ
ಕರವಸ್ತ್ರ	–	ಚಿಕ್ಕ ವಸ್ತ್ರ; ಕೈವಸ್ತ್ರ

ಕರೆ – ಬಟ್ಟೆಯ ಅಂಚು

ಕಲ್ಲು – ಹರಳು; ವಜ್ರ ಮುಂತಾದ ಬೆಲೆಬಾಳುವ ಮಣಿ

ಕವಚ – ಹೊದಿಕೆ; ಯುದ್ಧದಲ್ಲಿ ರಕ್ಷಣೆಗಾಗಿ ತೊಟ್ಟುಕೊಳ್ಳುವ ಅಂಗಿ

ಕಸೂತಿ – ಬಣ್ಣ ಬಣ್ಣದ ದಾರಗಳಿಂದ ಬಟ್ಟೆಗಳಿಗೆ ಮಾಡುವ ಹೆಣಿಗೆಯ ಅಲಂಕಾರ

ಕಾಂಚಿ – ಡಾಬು; ಕಟಿಸೂತ್ರ

ಕಾಚ – ಕಾಸೆ; ಚಡ್ಡಿ

ಕಾಜ – ಅಂಗಿ, ಕೋಟು ಮೊದಲಾದವುಗಳಲ್ಲಿ ಗುಂಡಿ ಹಾಕುವುದಕ್ಕಾಗಿ ಮಾಡಿದ ತೂತು

ಕಾಲುಚೀಲ – ಕಾಲಿಗೆ ಹಾಕಿಕೊಳ್ಳುವ ಚೀಲದಂಥ ಉಡುಪು; ಸಾಕ್ಸ್

ಕಾಲುಮರ – ಪಾದರಕ್ಷೆ; ಮೆಟ್ಟು

ಕಾವಿ – ಕಾವಿ ಬಣ್ಣದ ಬಟ್ಟೆ

ಕಾಸೆ – ಕಚ್ಚೆ ಹಾಕಿ ಉಟ್ಟುಕೊಳ್ಳುವ ವಸ್ತ್ರ

ಕಿಂಕಾಪು – ಜರತಾರಿಯನ್ನು ನೇಯ್ದ ರೇಷ್ಮೆಯ ಬಟ್ಟೆ

ಕಿರೀಟ – ತಲೆಯ ಮೇಲೆ ಧರಿಸುವ ರತ್ನ ಖಚಿತವಾದ ಟೊಪ್ಪಿಗೆ

ಕಲ್ಲತ್ತು – ಸನ್ಮಾರ್ಥಕವಾಗಿ ಕೊಡುವ ಪೋಷಾಕು; ಉಡುಗೊರೆ

ಕಿಸೆ – ಅಂಗಿ ಮೊದಲಾದವುಗಳಲ್ಲಿನ ಜೇಬು

ಕುಚಬಂಧ – ಸ್ತನಪಟ್ಟಿ

ಕುಂಕುಮ – ಹೆಂಗಸರು ಹಣೆಗೆ ಇಟ್ಟುಕೊಳ್ಳುವ ಕೆಂಪು ಬಣ್ಣದ ಪುಡಿ

ಕುಂಡಲ – ಕಿವಿಯ ಆಭರಣ

ಕುಪ್ಪಸ – ರವಿಕೆ

ಕುಸುರಿ – ಕುಸುರಿ ಕೆಲಸದಿಂದ ಕೂಡಿದ ಆಭರಣ

ಕೇಶಬಂಧ – ಕೂದಲನ್ನು ಕಟ್ಟುವಿಕೆ; ಮುಡಿ

ಕೈಗಡಿಯಾರ – ಕೈಯಲ್ಲಿ ಕಟ್ಟಿಕೊಳ್ಳುವ ಸಣ್ಣ ಗಡಿಯಾರ

ಕೈಗವಸು – ಹಸ್ತ ಕವಚ; ಕೈಯನ್ನು ಮುಚ್ಚಿಕೊಳ್ಳಲು ಬಳಸುವ ವಸ್ತ್ರ

ಕೈ ಬೆತ್ತ – ಕೈಯಲ್ಲಿ ಹಿಡಿಯುವ ಕೋಲು

ಕೈವಸ್ತ್ರ – ಕರವಸ್ತ್ರ

ಕೊರಳು ಪಟ್ಟಿ – ಕುತ್ತಿಗೆಗೆ ಹೊಂದಿಕೊಳ್ಳುವ ಅಂಗಿಯ ಭಾಗ

ಕೋಟು – ಮೈಗೆ ತೊಡುವ ದಪ್ಪವಾದ ಉಡುಪು; ಮೇಲಂಗಿ

ಕೋರ – ಮಡಿಯಾಗದ ಬಟ್ಟೆ

ಖದ್ದರ್ – ಖಾದಿ ಬಟ್ಟೆ

ಖಾಡಿ	–	ವರ್ತುಲಾಕಾರದ ಬಳೆ, ಕೈಗೆ ಮತ್ತು ಕಾಲಿಗೆ ತೊಡುವಂತಹುದು.
ಗಗ್ಗರ	–	ಕಿರುಗೆಜ್ಜೆಗಳುಳ್ಳ ಆಭರಣ, ಕಾಲು ಕಡಗ
ಗಗ್ಗರಿ	–	ಗೆಜ್ಜೆ, ಕಿರುಗಂಟೆ, ಬಹಳ ನಿರಿಗೆಯುಳ್ಳ ಲಂಗ
ಗಂಟೆ	–	ಕಂಚು ಇತ್ಯಾದಿ ಲೋಹಗಳಿಂದ ಮಾಡಿದ ಬಾರಿಸುವ ಸಾಧನ
ಗಳಿಗೆ	–	ಬಟ್ಟೆಯ ಮಡಿಕೆ
ಗುಂಡಿ	–	ಉಡುಪಿನ ಭಾಗಗಳನ್ನು ಸೇರಿಸುವುದಕ್ಕಾಗಿ ಬಳಸುವ ಸಾಧನ
ಗೆಜ್ಜೆ	–	ಗುಂಡಾಗಿರುವ, ಕಿಣಿಕಿಣಿ ಶಬ್ದ ಮಾಡುವ ಚಿಕ್ಕಗಂಟೆ; ಕಿರುಗಂಟೆ
ಗೊಂಡೆ	–	ಒಂದು ಬಗೆಯ ಆಭರಣ; ಕುಚ್ಚು
ಗೋಮೇಧಿಕ	–	ಒಂದು ಬಗೆಯ ರತ್ನ; ನವರತ್ನಗಳಲ್ಲಿ ಒಂದು
ಗೋಷಾ	–	ಹೆಂಗಸರು ಮುಖ ಮೈಗಳನ್ನು ಮುಚ್ಚುವಂತೆ ಧರಿಸುವ ಮುಸುಕು; ಬುರುಕ; ಅವಕುಂಠನ
ಗೌನು	–	ಅರಸು, ನ್ಯಾಯಾಧಿಪತಿ, ವಕೀಲ ಮೊದಲಾದವರು ಧರಿಸುವ ಉದ್ಯೋಗ ಸೂಚಕ ನಿಲುವಂಗಿ
ಗಂಡ ಪೆಂಡೇರ	–	ಎಡಗಾಲಿಗೆ ಹಾಕಿಕೊಳ್ಳುವ ವಿಶಿಷ್ಟವಾದ ಚಿನ್ನದ ಆಭರಣ
ಘೋಟ	–	ಕುದುರೆ, ಅಶ್ವ
ಘೋಟಕ	–	ಕುದುರೆ ಮಾರುವವ
ಘೋಲಾಯಿಲ	–	ಕುದುರೆ ಸವಾರ, ರಾವುತ
ಚಟ್ಟಿಕಾರ	–	ಯೂರೋಪಿನವರ ವೇಷವನ್ನು ಧರಿಸಿದವನು
ಚಲ್ಲಣ	–	ಚಡ್ಡಿ; ಮೊಣಕಾಲಿನವರೆಗೆ ಬರುವ ಉಡುಪು; ಅರ್ಧೋರುಕ
ಚಂದ್ರಗಾವಿ	–	ಒಂದು ಬಗೆಯ ಕೆಂಪುಬಣ್ಣದ ಸಿಂಧೂರ ವರ್ಣದ ಸೀರೆ; ವಸ್ತ್ರ
ಚಿಂದಿ	–	ಹರಕು ಬಟ್ಟೆ; ತುಂಡು ಬಟ್ಟೆ
ಚಿಲಖತ್ತು	–	ಉಕ್ಕಿನ ಕವಚ; ಉರಸ್ತ್ರಾಣ; ತವಂಗ
ಚಿಂಡಿಕೆ	–	ಜುಟ್ಟು; ಶಿಖೆ
ಚೆಕ್ಕು	–	ಚೌಕಳಿ ಬಟ್ಟೆ; ಚೌಕಳಿ ಆಕೃತಿಯಾಗಿ ನೆಯ್ದ ಅಥವಾ ಅಚ್ಚೊತ್ತಿದ ಬಟ್ಟೆ
ಚೈನು	–	ಸರಪಣಿ; ಕೊರಳಲ್ಲಿ ಅಥವಾ ಕಾಲಿನಲ್ಲಿ ಧರಿಸುವ ಆಭರಣ
ಚೌಕ	–	ಕರವಸ್ತ್ರ; ಚೌಕಾಕಾರದ ವಸ್ತ್ರ
ಚೌಕಳಿ	–	ಸೀರೆ ಮೊದಲಾದವುಗಳ ಮೇಲೆ ಇರುವ ಚಚ್ಚೌಕದ ಮನೆ
ಚಕ್ರಕುಂಡಲ	–	ದುಂಡಾಕಾರದ ಕಿವಿಯೋಲೆ
ಚಿಂತಾಕು	–	ಕೊರಳಲ್ಲಿ ಧರಿಸುವ ಒಂದು ಬಗೆಯ ಆಭರಣ; ಡಾಬು
ಜವಾಹಿರಿ	–	ಬೆಲೆಯುಳ್ಳ ಮಣಿ; ರತ್ನ
ಜಾಕೆಟ್ಟು	–	ಒಂದು ಬಗೆಯ ಅಂಗಿ

ಜೀನು	–	ಕುಳಿತುಕೊಳ್ಳಲು ಕುದುರೆಯ ಮೇಲೆ ಹಾಕುವ ಚರ್ಮದ ತಡಿ
ಜೇಬು	–	ಉಡುಪಿನಲ್ಲಿ ಅಕ್ಕಪಕ್ಕಗಳಲ್ಲಿರುವ ಸಣ್ಣ ಚೀಲ
ಜೋಳಿಗೆ	–	ಚಚ್ಚೌಕವಾದ ವಸ್ತ್ರ ನಾಲ್ಕು ಮೂಲೆಗಳನ್ನು ಸೇರಿಸಿ ಮಾಡಿದ ಚೀಲ
ಝುಂಡ	–	ಬಾವುಟ; ಧ್ವಜ
ಟವಲು	–	ಒಂದು ಚೌಕ; ಮೈ ಒರೆಸಿಕೊಳ್ಳುವ ಬಟ್ಟೆ
ಟೇಪು	–	ಲಾಡಿ; ಕಿರಿಯಲಗದ ಬಟ್ಟೆ
ಟೊಪ್ಪಿಗೆ	–	ಟೋಪಿ; ತಲೆಗೆ ಧರಿಸುವ ತೊಡುಗೆ
ಟೋಪನ್ನು	–	ನಾಟಕದಲ್ಲಿ ಪಾತ್ರಧಾರಿಗಳು ಧರಿಸುವ ಕೃತಕ ಕೇಶರಾಶಿ
ಟೋಪಿ	–	ಹೆಣೆದು ಅಥವಾ ಹೊಲಿದು ತಯಾರಿಸಿದ ತಲೆಯ ತೊಡುಗೆ
ಠೌಳಿ	–	ಲೋಹದ ಟೊಪ್ಪಿಗೆ; ಶಿರಸ್ತ್ರಾಣ
ಡವಾಲಿ	–	ಸೇವಕರು ಎದೆಯ ಮೇಲೆ ಅಡ್ಡಲಾಗಿ ಧರಿಸುವ ಬಿಲ್ಲೆಯನ್ನುಳ್ಳ ಪಟ್ಟಿ
ಡಪ್ಪು	–	ಒಂದು ಬಗೆಯ ಚರ್ಮವಾದ್ಯ
ತಮಟೆ	–	ಒಂದು ಬಗೆಯ ಚಪ್ಪಟೆಯಾದ ಚರ್ಮವಾದ್ಯ, ತಂಬಟ
ತಲ	–	ಬಿಲ್ಲುಗಾರರು ಎಡಗೈ ಮೇಲೆ ಧರಿಸುವ ತೊಗಲಿನ ಪಟ್ಟಿ
ತಲವಾರ	–	ಕತ್ತಿ; ಖಡ್ಗ
ತಲೆಗಾಪು	–	ತಲೆಯ ರಕ್ಷಣೆಗಾಗಿ ಧರಿಸುವ ಟೊಪ್ಪಿಗೆ; ಶಿರಸ್ತ್ರಾಣ
ತಳಿರುಗಾವಿ	–	ಚಿಗುರಿನ ಬಣ್ಣದ ಅಂಚಿನ ಬಟ್ಟೆ
ತಾಳ	–	ಕಂಚಿನ ಚಪ್ಪಟೆಯಾದ ಜೋಡುವಾದ್ಯ
ತಾಳಿ	–	ಮಾಂಗಲ್ಯ; ಮದುವೆಯ ಸಂಕೇತವಾಗಿ ಸ್ತ್ರೀಯು ಕೊರಳಲ್ಲಿ ಧರಿಸುವ ಆಭರಣ
ತಿಲಕ	–	ಹಣೆಯ ಮೇಲೆ ಇಟ್ಟುಕೊಳ್ಳುವ ಕಸ್ತೂರಿ, ಕುಂಕುಮ ಮೊದಲಾದವುಗಳ ಬೊಟ್ಟು
ತುತ್ತೂರಿ	–	ಉದ್ದವಾದ ಒಂದು ಬಗೆಯ ಊದುವ ವಾದ್ಯ
ತೊಡಪು	–	ದಟ್ಟಿ; ಲುಂಗಿ
ತೊಡವು	–	ಆಭರಣ
ತೊಡಿಗೆ	–	ಉಡುಪು
ತೋಳೇರಿಸು	–	ಅಂಗಿಯ ತೋಳನ್ನು ಮೇಲೆತ್ತು
ತ್ರಿಪುಂಡ್ರ	–	ಹಣೆಯಲ್ಲಿ ಹಾಕಿಕೊಳ್ಳುವ ತಿರ್ಯಕ್ ಅಥವಾ ಉರ್ಧ್ವಪುಂಡ್ರ (ವಿಭೂತಿ ಅಥವಾ ನಾಮ)
ದಿರೆಸು	–	ಉಡುಪು
ದುಕೂಲ	–	ರೇಷ್ಮೆ ಬಟ್ಟೆ

ದುಪ್ಪಟ	–	ಹೊದೆಯಲು ಅಥವಾ ಹಾಸಲು ಬಳಸುವ ವಸ್ತ್ರ
ಧೋತ್ರ	–	ಗಂಡಸರು ಉಡುವ ಬಟ್ಟೆ;ಪಂಚೆ; ಭುಜದ ಮೇಲೆ ಹಾಕಿಕೊಳ್ಳುವ ವಸ್ತ್ರ
ಧಾರೆಸೀರೆ	–	ಹೆಣ್ಣುಮಕ್ಕಳ ಮೇಲು ಹೊದಿಕೆ; ಧಾವಣಿ
ಧಟ್ಟಿ	–	ಸೊಂಟಕ್ಕೆ ಸುತ್ತಿಕೊಳ್ಳುವ ಬಟ್ಟೆ
ನತ್ತು	–	ಮೂಗಿನಲ್ಲಿ ಧರಿಸುವ ಆಭರಣ
ನಾಗಗ್ರೈವೇಯ	–	ಹಾವಿನ ಮಾಲೆ
ನಿರಿಗೆ	–	ಮಡಿಕೆ; ಪದರ; ನೆರಿಗೆ
ನೂಪುರ	–	ಕಾಲಂದುಗೆ; ನೇವುರ; ಕಾಲ್ಗೆಜ್ಜೆ
ನ್ಯಾಚನಿ	–	ಒಂದು ಒಡವೆ
ನೊಸಲ್	–	ಹಣೆ, ಲಲಾಟ
ಪಪ್ಪಳಿ ಸೀರೆ	–	ಚೌಕಳಿ ನಮೂನೆಯಲ್ಲಿ ನೇಯ್ದ ಬಟ್ಟೆ
ಪಾಗು	–	ಮುಂಡಾಸು; ರುಮಾಲು; ಪಗಡಿ; ಶ್ರೇಷ್ಠವಾದ ಒಂದು ಬಗೆಯ ಸೀರೆ
ಪಟ	–	ಬಟ್ಟೆ; ವಸ್ತ್ರ
ಪಟ್ಟ	–	ರೇಷ್ಮೆಯ ವಸ್ತ್ರ; ಪಟ್ಟಾಭಿಷೇಕದ ಸಂದರ್ಭದಲ್ಲಿ ರಾಜನ ಹಣೆಗೆ ಕಟ್ಟುವ ಅಧಿಕಾರ ಸೂಚಕವಾದ ಚಿನ್ನದ ಪಟ್ಟಿ
ಪಾದಬಂಧ	–	ಕಾಲಿನ ಆಭರಣ
ಪಾಗುಡ	–	ಮುಂಡಾಸು; ರುಮಾಲು
ಪೀತಾಂಬರ	–	ಹಳದಿ ವಸ್ತ್ರವನ್ನು ಧರಿಸಿರುವ ಮಹಾವಿಷ್ಣು
ಪ್ರಚ್ಛನ್ನ	–	ರಹಸ್ಯ, ವೇಷಾಂತರ, ಛದ್ಮವೇಷ
ಪ್ರಚ್ಛಾದನ	–	ಹೊದೆಯುವ ವಸ್ತ್ರ
ಪತ್ತಲ	–	ತೆಳುವಾದ ಸೀರೆ
ಪೇಟ	–	ರುಮಾಲು; ತಲೆತೊಡುಗೆ
ಪೋಷಾಕು	–	ಉಡುಗೆ–ತೊಡುಗೆ
ಪ್ರಭಾವಳಿ	–	ವಿಗ್ರಹಗಳ ಹಿಂದೆ ಅಲಂಕಾರಕ್ಕಾಗಿ ಅಳವಡಿಸುವ ಕಮಾನಿನಾಕಾರದ ಒಂದು ಉಪಕರಣ; ಮೂರ್ತಿಗಳ ಬೆನ್ನ ಹಿಂದೆ ಮೂಡಿಸುವ ಸುತ್ತಲಿನ ಅಲಂಕಾರಿಕ ಪಟ್ಟಿ
ಪಟವಾಸೆ	–	ಪಟಕುಟಿ; ಒಳವಸ್ತ್ರ; ಒಳಪಾವಡೆ
ಪದಕ	–	ಹಾರ ಮೊದಲಾದವುಗಳ ಮಧ್ಯದಲ್ಲಿ ಅಳವಡಿಸಿರುವ ಅಲಂಕಾರಯುಕ್ತವಾದ ಬಿಲ್ಲೆ; ಸರದ ನಡುವಿನ ಬಿಲ್ಲೆ
ಬಾರು	–	ಚರ್ಮದ ಪಟ್ಟಿ

ಬಾವುಲಿ	–	ಕಿವಿಯ ಅಥವಾ ಕಾಲಿನ ಒಂದು ಆಭರಣ; ಪೆಂಡೆಯ
ಬಿಂದಿ	–	ಒಂದು ಬಗೆಯ ಆಭರಣ; ಹಣೆಬೊಟ್ಟು
ಬಿಂಬಮು	–	ರತ್ನಗಳಿಂದ ಸುತ್ತುವರೆದ ಬಂಗಾರದ ವರ್ತುಲಾಕಾರದ ಆಭರಣ
ಬಟ್ಟೆ	–	ವಸ್ತ್ರ; ಅರಿವೆ
ಬಳೆ	–	ಕಡಗ; ಕಂಕಣ
ಬ್ರಹ್ಮಸೂತ್ರ (ವೈಜಯಂತಿಮಾಲೆ)	–	ಹೊಕ್ಕಳಿವರೆಗೂ ಮತ್ತು ಹೊಕ್ಕಳಿನಿಂದ ಕೆಳಗಿಳಿದು ಮಂಡಿಯವರೆಗೆ ತೂಗಾಡುವಂತಹ ಬೃಹತ್ ಆಭರಣ
ಭಾಳ	–	ಹಣೆ
ಭಾಳ ಲಾಂಛನ	–	ಹಣೆಯ ಗುರುತು
ಭುಜಬಂಧ	–	ಮೂರ್ತಿಭುಜಕ್ಕೆ ಧರಿಸಿದ ಆಭರಣ
ಮಕಮಲ್ಲು	–	ಒಂದು ಬಗೆಯ ನಯವಾದ ಬಟ್ಟೆ
ಮಕುಟ	–	ಕಿರೀಟ
ಮಫ್ತಿ	–	ಸಾಧಾರಣವಾದ ಬಟ್ಟೆ
ಮದ್ದಳೆ	–	ಒಂದು ಬಗೆಯ ಚರ್ಮವಾದ್ಯ
ಮುತ್ತಾಲಜಲ್ಲಿ	–	ಮುತ್ತುಗಳಿಂದ ಕೂಡಿದ ತಲೆಯ ಬಲೆ
ಮಾವಟಿಗ	–	ಆನೆ ನಡೆಸುವವನು
ಮುಂಡಾಸು	–	ರುಮಾಲು
ಮುಖವಾಡ	–	ಮುಖಕ್ಕೆ ಧರಿಸಿಕೊಳ್ಳುವ ಆಭರಣ; ಮೊಗವಾಸೆ
ಮಂಜೀರ	–	ಪಾದದ ಹದಡಿನ ಕೆಳಗೆ ಧರಿಸುವ ಕಾಲಿನ ಆಭರಣ (ಕಾಲಿಗೆ ಹಾಕುವ ಜೈನು)
ಮುದ್ರಿಕೆ	–	ಮುದ್ರೆ, ಠಸ್ಸೆ; ಮುದ್ರೆಯುಳ್ಳ ಉಂಗುರ; ಸಂಕೇತವನ್ನು ಕೆತ್ತಿರುವ ಉಂಗುರ
ಮುರಿಗೆ	–	ಕೈಗೆ ಧರಿಸುವ ಒಂದು ಆಭರಣ
ಮೂಗುತಿ	–	ಮೂಗಿಗೆ ಧರಿಸುವ ಆಭರಣ
ಮೊಗಮುಟ್ಟು	–	ಆನೆ ಕುದುರೆ ಮುಂತಾದವುಗಳ ಮುಖಕ್ಕೆ ತೊಡಿಸುವ ಒಂದು ಬಗೆಯ ಅಲಂಕಾರ ಸಾಧನ
ಮೊಗರಂಬ	–	ಮೊಗಮುಟ್ಟು
ಮಂಜಿ	–	ನೂಲು
ಮಂಜಿಷ್ಠೆ	–	ಕೆಂಪುಬಣ್ಣದ ಬಟ್ಟೆ ಅಥವಾ ಸೀರೆ

ಮಂಜಿಟಿ	–	ಬಟ್ಟೆಗಳಿಗೆ ಹಾಕಲು, ಗಾಢವಾದ ಕೆಂಪುಬಣ್ಣವನ್ನು ತಯಾರಿಸಲು ಮತ್ತು ಔಷಧ ದ್ರವ್ಯವಾಗಿ ಉಪಯೋಗಿಸುವ ಒಂದು ಬಗೆಯ ಸಸ್ಯ
ಮಂಜೀರ	–	ಕಾಲಿಗೆ ಹಾಕಿಕೊಳ್ಳುವ ಆಭರಣ; ಗೆಜ್ಜೆ
ಮಂಜೀರಕ	–	ಕಾಲ್ಕಡಗ; ಕಾಲಂದುಗೆ
ಮುಕ್ತಾವಳಿ	–	ಮುತ್ತಿನ ಸರ
ಯಜ್ಞೋಪವೀತ	–	ದೇಹದಲ್ಲಿ ಧರಿಸುವ ಪವಿತ್ರ ದಾರ
ರಟ್ಟು	–	ದಪ್ಪನಾದ ಬಟ್ಟೆ; ಒರಟು ಬಟ್ಟೆ
ರತ್ನಗಂಬಳಿ	–	ಸೊಗಸಾದ ಚಿತ್ರಗಳನ್ನು ನೆಯ್ದಿರುವ ಕಂಬಳಿ
ರುಮಾಲು	–	ತಲೆಗೆ ಸುತ್ತಿಕೊಳ್ಳುವ ಬಟ್ಟೆ; ಮುಂಡಾಸು
ರೇಷ್ಮೆ	–	ಒಂದು ಜಾತಿಯ ಹುಳುವಿನ ಗೂಡಿನಿಂದ ಬರುವ ದಾರದಿಂದ ಮಾಡಿದ ಬಟ್ಟೆ; ದುಕೂಲ
ರುಕ್ಮ	–	ವಕ್ಷದ ಮೇಲೆ ಧರಿಸುವ ಒಂದು ಆಭರಣ
ರುಕ್ಮಾಂಗದ	–	ಚಿನ್ನದ ತೋಳುಬಂಧಿ
ರುಚಿರ ಮಾಲೆ	–	ಬೆಳ್ಳಿಯ ಹಾರ
ಲಂಗ	–	ಹೆಣ್ಣುಮಕ್ಕಳ ಒಂದು ಉಡುಗೆ;
ಲಂಗೋಟ	–	ಕೌಪೀನ; ಕೋವಣ
ಲೋಲುಕು	–	ಕಿವಿಯಲ್ಲಿ ನೇತಾಡುವಂತೆ ಧರಿಸುವ ಆಭರಣ
ಲೋಹ ಮುಕ್ತಿಕಾ	–	ಕೆಂಪು ಮುತ್ತು
ಲೋಹಜಿತ್	–	ವಜ್ರ
ವಂಕಿ	–	ತೋಳು ಬಂದಿಯೆಂಬ ಆಭರಣ
ವಸನ	–	ಬಟ್ಟೆ, ಉಡುಗೆ
ವಾಜಿ	–	ಕುದುರೆ
ವಾಜಿಪ	–	ಕುದುರೆಗಳನ್ನು ನೋಡಿಕೊಳ್ಳುವವ
ವಾಜೀಬಂಧ	–	ಶಕ್ತಿಯನ್ನು ವೃದ್ಧಿಸುವ ಆಭರಣ
ವೇಣು	–	ಕೊಳಲು
ವೇಷ	–	ಉಡುಗೆ
ವೈಢೂರ್ಯ	–	ನವರತ್ನಗಳಲ್ಲಿ ಒಂದು
ವೈಜಯಂತಿ ಮಾಲೆ	–	ವಿಷ್ಣುಹಾರ
ಶಲ್ಯ	–	ಹೊದೆಯುವ ತೆಳ್ಳನೆಯ ವಸ್ತ್ರ
ಶಾಲು	–	ಉಣ್ಣೆಯಿಂದ ಮಾಡಿದ ಹೊದಿಕೆ

ಶಿರಸ್ತ್ರಾಣ	–	ತಲೆಯನ್ನು ಕಾಪಾಡುವುದು; ಸೀಸಕ
ಶೇಖರಮು	–	ವೃತ್ತಾಕಾರದ ಆಭರಣವಾಗಿದ್ದು, ಸ್ತ್ರೀಯರು ಹೆಣೆದ ಜಡೆಯ ಮೇಲೆ ಧರಿಸುವ ಆಭರಣ
ಷಾರಾಯಿ	–	ಗಂಡಸರು ತೊಡುವ ಉಡುಪಿನಲ್ಲಿ ಒಂದು; ಇಜಾರ; ಕಾಲುಮುಚ್ಚುವ ಚಲ್ಲಣ
ಸತ್ತಿಗೆ	–	ಕೊಡೆ, ಛತ್ರಿ
ಸಂಚಿ	–	ಚೀಲ; ಎಲೆ ಅಡಿಕೆಯ ಚೀಲ
ಸೀರೆ	–	ಸಾಲೆ; ಹೆಂಗಸರು ಉಡುವ ಬಟ್ಟೆ
ಸೀತಾಂಬರ(ಸೀತಾಂಬ್ರ)	–	ಬಿಳಿವಸ್ತ್ರ
ಹಚ್ಚಡ	–	ಹೊದಿಕೆ; ದುಪ್ಪಟ; ಪಚ್ಚಡ; ವಸ್ತ್ರ
ಹಸ್ತಸರ	–	ಮುಂಗೈಗೆ ಧರಿಸುವ ಒಂದು ಆಭರಣ
ಹಾಹೆ	–	ಗೊಂಬೆಗಳಿಂದ ಕೂಡಿದ ಬಿರುದಿನ ಪೆಂಡೇಯ

ಗ್ರಂಥಸೂಚಿ

ಪ್ರಾಥಮಿಕ ಆಕರ – ಕನ್ನಡ

ಎಪಿಗ್ರಾಫಿಯ ಕರ್ನಾಟಕ, ಹದಿಮೂರು ಸಂಪುಟಗಳು.

ಆದ್ಯರಂಗಾಚಾಯ(ಅನು), ೨೦೦೩, **ನಾಟ್ಯಶಾಸ್ತ್ರ**, ಅಕ್ಷರ ಪ್ರಕಾಶನ, ಹೆಗ್ಗೋಡು.

ಕಲ್ಬುರ್ಗಿ, ಎಂ.ಎಂ., (ಸಂ)., ೧೯೯೪, **ಕರ್ನಾಟಕದ ಕೈಫಿಯತ್ತುಗಳು**, ಕನ್ನಡ ವಿಶ್ವವಿದ್ಯಾಲಯ, ಹಂಪಿ.

ಕಲ್ಬುರ್ಗಿ, ಎಂ.ಎಂ., (ಸಂ)., ೧೯೯೮, **ಮಾನಸೋಲ್ಲಾಸ** (ಮೂಲ:ಸೋಮೇಶ್ವರ), ಸಂಪುಟ–೦೧, ಪ್ರಸಾರಾಂಗ, ಕರ್ನಾಟಕ ವಿಶ್ವವಿದ್ಯಾಲಯ, ಧಾರವಾಡ.

ಕುಶಾಲಪ್ಪಗೌಡ.ಕೆ.,(ಅನು), ೨೦೧೧, **ಗಂಗಾದೇವಿಯ ಮಧುರಾವಿಜಯಂ ಅಥವಾ ವೀರಕಂಪಣರಾಯ ಚರಿತಂ**, ಪ್ರಸಾರಾಂಗ, ಕನ್ನಡ ವಿಶ್ವವಿದ್ಯಾಲಯ, ಹಂಪಿ.

ಗುರುಮೂರ್ತಿ ಪೆಂಡಕೂರು, (ಅನು), ೨೦೧೦, **ಭಗ್ನ ವಿಜಯನಗರ ಚರಿತ್ರೆ**, (ಮೂಲ:ಕುಂದೂರಿ ಈಶ್ವರದತ್ತು) ಪ್ರಸಾರಾಂಗ, ಕನ್ನಡ ವಿಶ್ವವಿದ್ಯಾಲಯ, ಹಂಪಿ.

ಕೆಳದಿ ಗುಂಡಾ ಜೋಯಿಸ್, (ಅನು), ೧೮೭೭, **ಕೆಳದಿ ನೃಪವಿಜಯ**, ಕನ್ನಡ ಸಾಹಿತ್ಯ ಪರಿಷತ್ತು, ಬೆಂಗಳೂರು.

ಕೃಷ್ಣ ಕೊಲ್ಹಾರ ಕುಲಕರ್ಣಿ, (ಅನು), ೧೯೯೯, **ಬುಸಾತಿನೆ–ಸಲಾತೀನ** (ಮಹಮ್ಮದ್ ಇಬ್ರಾಹಿಂ ಜುಬೇರಿ) ಪ್ರಸಾರಾಂಗ, ಕನ್ನಡ ವಿಶ್ವವಿದ್ಯಾಲಯ, ಹಂಪಿ.

ಕೃಷ್ಣಭಟ್ಟ, ಕೆ., (ಅನು), ೧೯೭೨, **ಕೌಟಲ್ಯನ ಅರ್ಥಶಾಸ್ತ್ರ**, ಸಮಾಜ ಪುಸ್ತಕಾಲಯ, ಧಾರವಾಡ.

ಗಣೇಶ್, ಕೆ.ಆರ್., ೧೯೭೬, **ಆಂಧ್ರ ಪ್ರದೇಶದ ಕನ್ನಡ ಶಾಸನಗಳು**, ಕನ್ನಡ ಸಾಹಿತ್ಯ ಪರಿಷತ್ತು, ಚಾಮರಾಜಪೇಟೆ, ಬೆಂಗಳೂರು.

ಗೋಪಾಲ್, ಬಿ.ಆರ್., ಮತ್ತು ಇತರರು (ಸಂ)., ೨೦೦೦, **ಕನ್ನಡ ವಿಶ್ವವಿದ್ಯಾಲಯ, ಶಾಸನ ಸಂಪುಟ–೪**, ಹಂಪಿ.

ಚಿದಾನಂದಮೂರ್ತಿ, ಎಂ., ೨೦೦೮, **ಕನ್ನಡ ಶಾಸನಗಳ ಸಾಂಸ್ಕೃತಿಕ ಅಧ್ಯಯನ**, ಸಪ್ನ ಬುಕ್ ಹೌಸ್, ಬೆಂಗಳೂರು

ಚಿದಾನಂದಮೂರ್ತಿ, ಎಂ., ೧೯೮೮೪, **ಕನ್ನಡ ಸಾಹಿತ್ಯ–ಶಾಸನಗಳಲ್ಲಿ ಸಂಗೀತ ವಿಚಾರ**, ಪ್ರಸಾರಾಂಗ, ಬೆಂಗಳೂರು ವಿಶ್ವವಿದ್ಯಾಲಯ, ಬೆಂಗಳೂರು.

ಜವರೇಗೌಡ, ದೇ., ೧೯೯೦, **ಕನಕ ಸಾಹಿತ್ಯ ದರ್ಶನ**, ಕನ್ನಡ ಮತ್ತು ಸಂಸ್ಕೃತಿ ನಿರ್ದೇಶನಾಲಯ, ಬೆಂಗಳೂರು.

ತೊರವೆ ನರಹರಿ, ೧೯೫೬–೫೭, **ತೊರವೆ ರಾಮಾಯಣ**, ಭಾಗ–೧ ಮತ್ತು ೨, ಮೈಸೂರು ವಿಶ್ವವಿದ್ಯಾಲಯ, ಮೈಸೂರು.

ದೇವರಕೊಂಡಾರೆಡ್ಡಿ ಮತ್ತು ಇತರರು(ಸಂ.)., ೧೯೯೮-೨೦೦೦, **ಕನ್ನಡ ವಿಶ್ವವಿದ್ಯಾಲಯ ಶಾಸನ ಸಂಪುಟ-೧.೨.೩**, ಕನ್ನಡ ವಿಶ್ವವಿದ್ಯಾಲಯ, ಹಂಪಿ.

ದೇವೀರಪ್ಪ, ಎಚ್., (ಸಂ)., ೧೯೯೪, **ರಾಮನಾಥಚರಿತ** (ಮೂಲ: ನಂಜುಂಡಕವಿ), ಸಂ.೨-೩, ಮೈಸೂರು ವಿಶ್ವವಿದ್ಯಾಲಯ, ಮೈಸೂರು.

ನರಸಿಂಹಾಚಾರ್, ಡಿ.ಎಲ್., (ಸಂ)., ೧೯೫೫, **ವಡ್ಡಾರಾಧನೆ**, ಶಾರದಾಮಂದಿರ, ಮೈಸೂರು

ನಾವಡ, ಎ.ವಿ., (ಸಂ)., ೨೦೦೫, **ವಾದಿರಾಜರ ಶ್ರೀಕೃಷ್ಣಬಾಲಲೀಲೆ**, ಪ್ರಸಾರಾಂಗ, ಕನ್ನಡ ವಿಶ್ವವಿದ್ಯಾಲಯ ಹಂಪಿ.

ನಾವಡ, ಎ.ವಿ., (ಸಂ)., ೨೦೦೫, **ಹರಿದಾಸರ ಪಾಂಡುರಂಗ ವಿಠ್ಠಲ**, ಪ್ರಸಾರಾಂಗ, ಕನ್ನಡ ವಿಶ್ವವಿದ್ಯಾಲಯ, ಹಂಪಿ.

ನಾಗೇಗೌಡ, ಎಚ್.ಎಲ್., (ಸಂ), ೨೦೦೬, **ಪ್ರವಾಸಿ ಕಂಡ ಇಂಡಿಯಾ**, ಸಂಪುಟ ೧-೨, ಐ.ಬಿ.ಎಚ್.ಪ್ರಕಾಶನ, ಬೆಂಗಳೂರು.

ನಿರುಪಮಾ, (ಸಂ)., ೨೦೧೦, **ಶ್ರೀಕೃಷ್ಣದೇವರಾಯನ ಆಮುಕ್ತಮಾಲ್ಯದ** (ಮೂಲ:ಶ್ರೀ ಕೃಷ್ಣದೇವರಾಯ), ಪ್ರಸಾರಾಂಗ, ಕನ್ನಡ ವಿಶ್ವ ವಿದ್ಯಾಲಯ, ಹಂಪಿ.

ಪರಮಶಿವಮೂರ್ತಿ, ಡಿ.ವಿ., (ಸಂ)., ೨೦೦೭, **ಪ್ರೌಢದೇವರಾಯನ ಶಾಸನಗಳು**, ಪ್ರಸಾರಾಂಗ, ಕನ್ನಡ ವಿಶ್ವವಿದ್ಯಾಲಯ, ಹಂಪಿ.

ಪರಮಶಿವಮೂರ್ತಿ, ಡಿ.ವಿ., (ಸಂ)., ೨೦೧೦, **ಕೃಷ್ಣದೇವರಾಯನ ಶಾಸನಗಳು**, ಪ್ರಸಾರಾಂಗ, ಕನ್ನಡ ವಿಶ್ವವಿದ್ಯಾಲಯ, ಹಂಪಿ.

ಬಸಪ್ಪ, ಎಸ್., (ಸಂ)., ೧೯೬೦, **ಶಿವತತ್ತ್ವಚಿಂತಾಮಣಿ** (ಲಕ್ಕಣ್ಣ ದಂಡೇಶ), ಪ್ರಾಚ್ಯವಿದ್ಯಾ ಸಂಶೋಧನಾಲಯ, ಮೈಸೂರು ಕನ್ನಡ ವಿಶ್ವವಿದ್ಯಾಲಯ, ಮೈಸೂರು.

ಮಂಜುನಾಥನ್, ಜಿ.ಜಿ., (ಸಂ)., ೧೯೮೨, **ಸನತ್ಕುಮಾರ ಚರಿತೆ** (ತೆರಕಣಾಂಬಿ ಬೊಮ್ಮರಸ), ಪ್ರಸಾರಾಂಗ, ಮೈಸೂರು ವಿಶ್ವವಿದ್ಯಾಲಯ, ಮೈಸೂರು.

ಮಲ್ಲೇಪುರಂ, ಜಿ.ವೆಂಕಟೇಶ್, (ಸಂ)., ೧೯೯೭, **ಶಿವತತ್ವ ರತ್ನಾಕರ** (ಕೆಳದಿ ಬಸವರಾಜ್), ಪ್ರಸಾರಂಗ, ಕನ್ನಡ ವಿಶ್ವವಿದ್ಯಾಲಯ, ಹಂಪಿ.

ರಾಮಚಂದ್ರರಾವ್, ಸಿ.ವಿ., (ಸಂ)., ೨೦೦೮, **ರಾಯವಾಚಕಮು**, ದ್ರಾವಿಡ ಕನ್ನಡ ವಿಶ್ವವಿದ್ಯಾಲಯ, ಕುಪ್ಪಂ.

ಲಕ್ಷ್ಮಣ್ ತೆಲಗಾವಿ, (ಸಂ)., ೨೦೧೧, **ರಾಮರಾಜನ ಬಖೈರು**, ಪ್ರಸಾರಾಂಗ, ಕನ್ನಡ ವಿಶ್ವವಿದ್ಯಾಲಯ, ಹಂಪಿ.

ವಾಸುದೇವ ಅಗ್ನಿಹೋತ್ರಿ, ೧೯೯೧, **ಪುರಂದರದಾಸರು ಚಿತ್ರಿಸಿದ ಬಾಲಕೃಷ್ಣ**, ಪ್ರಸಾರಾಂಗ, ಗುಲ್ಬರ್ಗ ವಿಶ್ವವಿದ್ಯಾಲಯ, ಗುಲ್ಬರ್ಗ.

ಶಾಮಶಾಸ್ತ್ರಿ, ಆರ್, (ಸಂ)., ೧೯೨೬, **ಕಂಠೀರವ ನರಸರಾಜ ವಿಜಯಂ** (ಗೋವಿಂದ ವೈದ್ಯ), ಮೈಸೂರು ವಿಶ್ವವಿದ್ಯಾಲಯ, ಮೈಸೂರು.

ಶಾಮಶಾಸ್ತ್ರಿ, ಆರ್, (ಸಂ)., ೧೯೭೩, **ಕೆಳದಿ ನೃಪವಿಜಯಂ** (ಲಿಂಗಣ್ಣ ಕವಿ), ಮೈಸೂರು ವಿಶ್ವವಿದ್ಯಾಲಯ, ಮೈಸೂರು.

ಶೇಷಶಾಸ್ತ್ರಿ, ಆರ್., ೨೦೦೪, **ಕರ್ನಾಟಕದ ವೀರಗಲ್ಲುಗಳು**, ಕನ್ನಡ ಸಾಹಿತ್ಯ ಪರಿಷತ್ತು, ಬೆಂಗಳೂರು.

ಶ್ರೀನಿವಾಸಮೂರ್ತಿ, ಎಂ.ಆರ್, (ಸಂ)., ೧೯೭೬, **ಚೆನ್ನಬಸವ ಪುರಾಣ ಸಂಗ್ರಹ**, (ಮೂಲ: ವಿರೂಪಾಕ್ಷ ಪಂಡಿತ), ಕನ್ನಡ ಸಾಹಿತ್ಯ ಪರಿಷತ್ತು, ಬೆಂಗಳೂರು.

ಸದಾನಂದ ಕನವಳ್ಳಿ, (ಅನು), ೧೯೯೨, **ಮರೆತುಹೋದ ಮಹಾಸಾಮ್ರಾಜ್ಯ ವಿಜಯನಗರ** (ರಾಬರ್ಟ್‌ಸಿವೆಲ್) ಪ್ರಸಾರಾಂಗ, ಕನ್ನಡ ವಿಶ್ವವಿದ್ಯಾಲಯ, ಹಂಪಿ.

ಸಣ್ಣಯ್ಯ, ಬಿ.ಎಸ್., (ಸಂ)., ೧೯೭೦, **ಮೋಹನತರಂಗಿಣಿ ಸಂಗ್ರಹ** (ಮೂಲ:ಕನಕದಾಸರು), ಗೀತಾ ಬುಕ್ ಹೌಸ್, ಮೈಸೂರು.

ಸೀತಾರಾಮಯ್ಯ, ಎಂ.ವಿ., (ಸಂ.)., ೧೯೭೫, **ಕವಿರಾಜಮಾರ್ಗಂ**, ಡಿ.ವಿ.ಕೆ.ಮೂರ್ತಿ ಪ್ರಕಾಶನ, ಮೈಸೂರು.

ಸೀತಾರಾಮಯ್ಯ, ಎಂ.ವಿ., (ಸಂ)., ೧೯೮೩, **ಶ್ರೀಕೃಷ್ಣದೇವರಾಯನ ದಿನಚರಿ**, ಬಿ.ಎಂ.ಶ್ರೀ, ಸ್ಮಾರಕ ಪ್ರತಿಷ್ಠಾನ, ಬೆಂಗಳೂರು.

ವಿವೇಕ ರೈ, (ಸಂ)., **ಪ್ರವಾಸಿಕಂಡ ವಿಜಯನಗರ**, ಪ್ರಸಾರಾಂಗ, ಕನ್ನಡ ವಿಶ್ವವಿದ್ಯಾಲಯ, ಹಂಪಿ.

ವಿದ್ವಾನ್, ಎನ್.ರಂಗನಾಥ ಶರ್ಮ, (ಸಂ)., ೨೦೦೦, **ಅಮರಕೋಶ**, (ಮೂಲ:ಅಮರಸಿಂಹ), ಕಾವ್ಯಾಲಯ ಪ್ರಕಾಶಕರು, ಮೈಸೂರು.

ವೆಂಕಟರಾಮಪ್ಪ, ಕೆ., ೧೯೭೪, **ಶ್ರೀ ಕೃಷ್ಣದೇವರಾಯನ ಕಾಲದ ಕರ್ನಾಟಾಂಧ್ರ ಸಾಹಿತ್ಯ ಸಮೀಕ್ಷೆ**, ಮೈಸೂರು ವಿಶ್ವವಿದ್ಯಾಲಯ, ಮೈಸೂರು.

ಪೂರಕ ಆಕರ – ಕನ್ನಡ

ಅಪರ್ಣ, ಕೂ.ಸ., ೧೯೯೯, **ದೇವಾಲಯ ವಾಸ್ತುಶಿಲ್ಪ ಪರಿಚಯ**, ಪ್ರಸಾರಾಂಗ, ಕನ್ನಡ ವಿಶ್ವವಿದ್ಯಾಲಯ, ಹಂಪಿ.

ಆದ್ಯರಾಮಾಚಾರ್ಯ, ೧೯೮೫, **ಶ್ರೀಕ್ಷೇತ್ರ ತಿರುಪತಿ**, ವರದರಾಜ ಪ್ರಕಾಶನ, ಶಂಕರವನ, ರಂಗರಾವ್ ರಸ್ತೆ, ಬೆಂಗಳೂರು.

ಕರ್ನಾಟಕ ಚರಿತ್ರೆ, ೧೯೯೫ – ೧೯೯೭, ಏಳು ಸಂಪುಟಗಳು, ಕನ್ನಡ ವಿಶ್ವವಿದ್ಯಾಲಯ, ಹಂಪಿ.

ಕರ್ನಾಟಕ ದೇವಾಲಯ ಕೋಶಗಳು, ಪ್ರಸಾರಾಂಗ, ಕ.ವಿ.ವಿ., ಹಂಪಿ.

ಕಮಲಮ್ಮ, ಎಸ್.ವಿ., ೨೦೦೫, **ಜನಪದ ಮಹಿಳೆಯರ ಉಡುಗೆ-ತೊಡುಗೆಗಳು** (ಅಪ್ರಕಟಿತ ಮಹಾಪ್ರಬಂಧ), ಕುವೆಂಪು ವಿಶ್ವವಿದ್ಯಾಲಯ, ಶಿವಮೊಗ್ಗ.

ಕಪಿಲವಾಯಿ ಲಿಂಗಮೂರ್ತಿ ಮತ್ತು ಜ್ಞಾನಾನಂದ, ಜಿ., ೨೦೦೭, **ಸ್ವರ್ಣ ಶಿಲ್ಪಶಾಸ್ತ್ರ**, ಸಂಸ್ಕೃತಿ ಸಾಹಿತ್ಯ ಪ್ರತಿಷ್ಠಾನ, ರಾಜೇಶ್ವರಿನಗರ, ಬೆಂಗಳೂರು.

ಕರೀಗೌಡ ಬೀಚನಹಳ್ಳಿ, (ಸಂ)., ೨೦೦೦, **ಕರಕುಶಲ ಕಲೆಗಳ ಪರಂಪರೆ ಮತ್ತು ಇತಿಹಾಸ**, ಪ್ರಸಾರಾಂಗ, ಕನ್ನಡ ವಿಶ್ವವಿದ್ಯಾಲಯ, ಹಂಪಿ.

ಕರುಣಾ ವಿಜಯೇಂದ್ರ, ೨೦೦೮, **ಕರ್ನಾಟಕ ದೇವಾಲಯಗಳಲ್ಲಿ ರಂಗಭೋಗ (ನೃತ್ಯ)**, ಕರ್ನಾಟಕ ಇತಿಹಾಸ ಸಂಶೋಧನ ಮಂಡಲ, ಧಾರವಾಡ.

ಕಲಮದಾನಿ ಗುರುರಾಯರು, ೧೯೭೪, **ವಿಜಯನಗರ ಸಾಮ್ರಾಜ್ಯ**, ಎಂ.ಎಂ.ಕರಡಿ, ಹುಬ್ಬಳ್ಳಿ.

ಕಲ್ಬುರ್ಗಿ, ಎಂ.ಎಂ., ೧೯೮೦, **ಸಮಾಧಿ–ಬಲಿದಾನ–ವೀರಮರಣ ಸ್ಮಾರಕಗಳು**, ಸಪ್ನ ಬುಕ್ ಹೌಸ್, ಬೆಂಗಳೂರು.

ಕುಮಾರಸ್ವಾಮಿ, ಕೆ.ಎಸ್., ೧೯೯೬, **ಪ್ರಾಚೀನ ಕರ್ನಾಟಕದಲ್ಲಿ ಶಿಲ್ಪಾಚಾರಿಯರು**, ಕನ್ನಡ ಸಾಹಿತ್ಯ ಪರಿಷತ್ತು, ಬೆಂಗಳೂರು.

ಕುಮಾರಿ ಶಾಂತ, ಎನ್.ಕಾಲವಾಡ, ೧೯೯೭, **ಜನಪದ ಆಭರಣಗಳ ಸಾಂಸ್ಕೃತಿಕ ಅಧ್ಯಯನ** (ಅಪ್ರಕಟಿತ ಮಹಾಪ್ರಬಂಧ), ಕರ್ನಾಟಕ ವಿಶ್ವವಿದ್ಯಾಲಯ, ಧಾರವಾಡ.

ಖಂಡೋಬಾ, ಪಿ.ಕೆ., ೧೯೯೧, **ಕರ್ನಾಟಕದಲ್ಲಿ ಲಂಬಾಣಿಗರು – ಒಂದು ಸಾಂಸ್ಕೃತಿಕ ಅಧ್ಯಯನ**, ದಿ.ತೇಜಸಿಂಗ್ ರಾಠೋಡ ಮೆಮೋರಿಯಲ್ ಟ್ರಸ್ಟ್, ಗುಲ್ಬರ್ಗ.

ಗಣೇಶ್, ಕೆ.ಆರ್., ೧೯೯೭, **ಆಂಧ್ರಪ್ರದೇಶದ ಕನ್ನಡ ಶಾಸನಗಳು**, ಕನ್ನಡ ಸಾಹಿತ್ಯ ಪರಿಷತ್ತು, ಬೆಂಗಳೂರು.

ಗಾದೆಪ್ಪ, ೨೦೧೨, **ಪಂಪಾಕ್ಷೇತ್ರ**, ಪ್ರಸಾರಾಂಗ, ಕನ್ನಡ ವಿಶ್ವವಿದ್ಯಾಲಯ, ಹಂಪಿ.

ಗೋಪಾಲರಾವ್, ಎಚ್.ಎಸ್., (ಸಂ)., ೨೦೦೮, **ಕರ್ನಾಟಕದ ಆರಂಭಿಕ ಶಿಲ್ಪಕಲೆ**, ಕರ್ನಾಟಕ ಶಿಲ್ಪಕಲಾ ಆಕಾಡೆಮಿ, ಕನ್ನಡ ಭವನ, ಜೆ.ಸಿ.ರಸ್ತೆ, ಬೆಂಗಳೂರು.

ಗೋಪಾಲರಾವ್, ಎಚ್.ಎಸ್., (ಸಂ)., ೨೦೦೮, **ಪಲ್ಲವ–ಚೋಳ ಶಿಲ್ಪಕಲೆ**, ಕರ್ನಾಟಕ ಶಿಲ್ಪಕಲಾ ಅಕಾಡೆಮಿ, ಕನ್ನಡಭವನ, ಬೆಂಗಳೂರು.

ಗೋಪಾಲರಾವ್, ಎಚ್.ಎಸ್., (ಸಂ)., ೨೦೦೮, **ಬಾದಾಮಿ ಚಾಲುಕ್ಯ ಶಿಲ್ಪಕಲೆ**, ಕರ್ನಾಟಕ ಶಿಲ್ಪಕಲಾ ಅಕಾಡೆಮಿ, ಕನ್ನಡಭವನ, ಬೆಂಗಳೂರು.

ಗೋಪಾಲರಾವ್, ಎಚ್.ಎಸ್., (ಸಂ)., ೨೦೦೮, **ಕಲ್ಯಾಣ ಚಾಲುಕ್ಯ ಶಿಲ್ಪಕಲೆ**, ಕರ್ನಾಟಕ ಶಿಲ್ಪಕಲಾ ಅಕಾಡೆಮಿ, ಕನ್ನಡಭವನ, ಬೆಂಗಳೂರು.

ಗೋಪಾಲರಾವ್, ಎಚ್.ಎಸ್., (ಸಂ)., ೨೦೦೮, **ರಾಷ್ಟ್ರಕೂಟ ಶಿಲ್ಪಕಲೆ**, ಕರ್ನಾಟಕ ಶಿಲ್ಪಕಲಾ ಅಕಾಡೆಮಿ, ಕನ್ನಡಭವನ, ಬೆಂಗಳೂರು.

ಗೋಪಾಲರಾವ್, ಎಚ್.ಎಸ್., (ಸಂ)., ೨೦೦೮, **ಹೊಯ್ಸಳ ಶಿಲ್ಪಕಲೆ**, ಕರ್ನಾಟಕ ಶಿಲ್ಪಕಲಾ ಅಕಾಡೆಮಿ, ಕನ್ನಡಭವನ, ಬೆಂಗಳೂರು.

ಗೋಪಾಲರಾವ್, ಎಚ್.ಎಸ್., (ಸಂ)., ೨೦೦೮, **ವಿಜಯನಗರ ಶಿಲ್ಪಕಲೆ**, ಕರ್ನಾಟಕ ಶಿಲ್ಪಕಲಾ ಅಕಾಡೆಮಿ, ಕನ್ನಡಭವನ, ಬೆಂಗಳೂರು.

ಚಿದಾನಂದಮೂರ್ತಿ, ಎಂ., ೧೯೬೬, **ಕನ್ನಡ ಶಾಸನಗಳ ಸಾಂಸ್ಕೃತಿಕ ಅಧ್ಯಯನ**, ಮೈಸೂರು ವಿಶ್ವವಿದ್ಯಾಲಯ, ಮೈಸೂರು.

ಚೆನ್ನಕ್ಕ ಎಲಿಗಾರ, ೧೯೯೦, **ಶಾಸನಗಳಲ್ಲಿ ಕರ್ನಾಟಕದ ಸ್ತ್ರೀ ಸಮಾಜ**, ಪ್ರಸಾರಾಂಗ, ಕರ್ನಾಟಕ ವಿಶ್ವವಿದ್ಯಾಲಯ, ಧಾರವಾಡ.

ಚೆಲುವರಾಜು, ೨೦೦೦, **ಹಂಪಿಯ ಸ್ಮಾರಕಗಳಲ್ಲಿ ಜಾನಪದೀಯ ಅಂಶಗಳು**, ಪ್ರಸಾರಾಂಗ, ಕನ್ನಡ ವಿಶ್ವವಿದ್ಯಾಲಯ, ಹಂಪಿ.

ಚೂಡಾಮಣಿ ನಂದಗೋಪಾಲ್, ೨೦೦೭, **ಶಿಲೆ–ಕಲೆ**, ಸುಂದರ ಪ್ರಕಾಶನ, ಹನುಮಂತ ನಗರ, ಬೆಂಗಳೂರು.

ತಾರಿಹಳ್ಳಿ ಹನುಮಂತಪ್ಪ, (ಸಂ)., ೨೦೧೩, **ಕಮಲಾಪುರ ಬೇಡ ನಾಯಕರ ಸಾಮಾಜಿಕ ಮತ್ತು ಸಾಂಸ್ಕೃತಿಕ ಬದಲಾವಣೆಗಳು**, ಪ್ರಸಾರಾಂಗ, ಕನ್ನಡ ವಿಶ್ವವಿದ್ಯಾಲಯ, ಹಂಪಿ.

ತಿಮ್ಮಾರೆಡ್ಡಿ, ಎಸ್.ವೈ., ೨೦೧೦, **ಕುಲಕಸಬುಗಳು ಮತ್ತು ಆಧುನಿಕತೆ**, (ಅಪ್ರಕಟಿತ ಪಿಎಚ್.ಡಿ. ಮಹಾಪ್ರಬಂಧ), ಕನ್ನಡ ವಿಶ್ವವಿದ್ಯಾಲಯ, ಹಂಪಿ.

ದೀಕ್ಷಿತ್, ಜಿ.ಎಸ್., ಮತ್ತು ಇತರರು, ೧೯೯೭, **ಶ್ರೀಕೃಷ್ಣದೇವರಾಯ–ಜೀವನ ಸಾಧನೆಗಳು**, ಮೈಸೂರು, ಪ್ರಾಚ್ಯವಸ್ತು ಮತ್ತು ಸಂಗ್ರಹಾಲಯಗಳ ನಿರ್ದೇಶನಾಲಯ, ಮೈಸೂರು.

ದುರುಗಪ್ಪ, ಎಂ.ಕೆ., ೨೦೧೧, **ಕುಮಾರರಾಮ**, ಪ್ರಸಾರಾಂಗ, ಕನ್ನಡ ವಿಶ್ವವಿದ್ಯಾಲಯ, ಹಂಪಿ.

ನಂಜುಂಡಸ್ವಾಮಿ, ಎ.ಎಸ್., ೨೦೦೯, **ಕದಂಬ–ಗಂಗರ ಇತಿಹಾಸ**, ಸಮಾಜ ಪ್ರಸ್ತಕಾಲಯ, ಶಿವಾಜಿ ಬೀದಿ, ಧಾರವಾಡ.

ನರಸಿಂಹಮೂರ್ತಿ, ಎ.ವಿ., ೨೦೦೩, **ಕರ್ನಾಟಕ ನಾಣ್ಯ ಪರಂಪರೆ**, ಕನ್ನಡ ಪುಸ್ತಕ ಪ್ರಾಧಿಕಾರ, ಚಾಮರಾಜಪೇಟೆ, ಬೆಂಗಳೂರು.

ನರಸಿಂಹಮೂರ್ತಿ, ಎ.ವಿ., ೧೯೯೬, **ವಿಜಯನಗರದ ನಾಣ್ಯ ಸಂಪತ್ತು**, ಪ್ರಸಾರಾಂಗ, ಮೈಸೂರು, ವಿಶ್ವವಿದ್ಯಾಲಯ, ಮೈಸೂರು.

ನರಸಿಂಹಮೂರ್ತಿ, ಎ.ವಿ., ೧೯೮೬, **ಚಾಲುಕ್ಯ ವಾಸ್ತುಶಿಲ್ಪ ಪರಿಚಯ**, ಕನ್ನಡ ಮತ್ತು ಸಂಸ್ಕೃತಿ ನಿರ್ದೇಶನಾಲಯ, ಬೆಂಗಳೂರು.

ನಾಗಯ್ಯ, ಜಿ.ಎಂ., ೨೦೦೨, **ಬಳ್ಳಾರಿ ಜಿಲ್ಲೆಯ ಸಾಂಸ್ಕೃತಿಕ ಇತಿಹಾಸ**, ಲೋಹಿಯಾ ಪ್ರಕಾಶನ, ಬಳ್ಳಾರಿ.

ನಾಗೇಶ್ ರಾವ್, ಕೆ., ಮತ್ತು ಅನಂತರಾಮು, ಟಿ.ಆರ್., ೧೯೯೯, **ಪ್ರಾಚೀನ ಭಾರತದಲ್ಲಿ ಲೋಹ ತಂತ್ರಜ್ಞಾನ**, ಬ್ಯಾಲದಕೆರೆ ಪ್ರಕಾಶನ, ಮಂಡ್ಯ ಜಿಲ್ಲೆ.

ಪರಮಶಿವಮೂರ್ತಿ, ಡಿ.ವಿ., ೧೯೯೯, **ಕನ್ನಡ ಶಾಸನಶಿಲ್ಪ**, ಕನ್ನಡ ವಿಶ್ವವಿದ್ಯಾಲಯ, ಹಂಪಿ.

ಪಾಟೀಲ್, ಎಸ್.ಇ., ೧೯೯೨, **ಕರ್ನಾಟಕದ ಜನಪದ ಚಿತ್ರಕಲೆ**, ವೀರಶೈವ ಅಧ್ಯಯನ ಸಂಸ್ಥೆ, ಶ್ರೀ ಜಗದ್ಗುರು ತೋಂಟದಾರ್ಯ ಸಂಸ್ಥಾನ ಮಠ, ಗದಗ.

ಪುರುಷೋತ್ತಮ ಬಿಳಿಮಲೆ, ೧೯೯೬, **ಹಂಪಿ ಜಾನಪದ**, ಪ್ರಸಾರಾಂಗ, ಕನ್ನಡ ವಿಶ್ವವಿದ್ಯಾಲಯ, ವಿದ್ಯಾರಣ್ಯ, ಹಂಪಿ.

ಪುಲಮತಿ ಶ್ಯಾಮರಾವ್, ೧೯೭೦, **ವಿಜಯನಗರ ಕಲೆ ಮತ್ತು ಸಾಹಿತ್ಯ**, ಮೈಸೂರು ಸಂಸ್ಥಾನ ಸಾಹಿತ್ಯ ಮತ್ತು ಸಂಸ್ಕೃತಿ ಅಭಿವೃದ್ಧಿ ಇಲಾಖೆ, ಬೆಂಗಳೂರು.

ಪ್ರಜ್ಞಾ, ಕೆ.ವಿ., ೨೦೧೧, **ನೇಕಾರರ ಸಮುದಾಯ: ಸಾಮಾಜಿಕ ಮತ್ತು ಆರ್ಥಿಕ ಅಧ್ಯಯನ** (ಅಪ್ರಕಟಿತ ಪಿಎಚ್.ಡಿ. ಮಹಾಪ್ರಬಂಧ), ಕನ್ನಡ ವಿಶ್ವವಿದ್ಯಾಲಯ, ಹಂಪಿ.

ಬೆಟಗೇರಿ ಕೃಷ್ಣಶರ್ಮ, ೧೯೮೩, **ಕರ್ನಾಟಕದ ಜನಜೀವನ**, ನಿರ್ದೇಶಕರು, ವಿಶ್ವ ಕನ್ನಡ ಸಮ್ಮೇಳನ, ನೃಪತುಂಗ ರಸ್ತೆ, ಬೆಂಗಳೂರು.

ಭೂಸನೂರಮಠ, ಸಂ.ಶಿ.(ಸಂ)., ೧೯೮೮, **ವಿಜಯ ಕಲ್ಯಾಣ**, ಹಂಪೆ, ಶ್ರೀ ಜಗದ್ಗುರು ಕೊಟ್ಟೂರು ಸ್ವಾಮಿ ಮಠ.

ಮಹದೇವ, ಸಿ., ೨೦೦೦, **ವಿಜಯನಗರದ ಗಾರೆಶಿಲ್ಪ**, ಪ್ರಸಾರಾಂಗ, ಕನ್ನಡ ವಿಶ್ವವಿದ್ಯಾಲಯ, ಹಂಪಿ.

ಮಹದೇವ, ಸಿ., ಸುಬ್ಬಣ್ಣ ರೈ, ಎಂ., ಮತ್ತು ಮಾಧವ ಪೆರಾಜೆ, ೨೦೦೦, **ಹೊಸಪೇಟೆ ತಾಲ್ಲೂಕು ದರ್ಶನ**, ಪ್ರಸಾರಾಂಗ, ಕನ್ನಡ ವಿಶ್ವವಿದ್ಯಾಲಯ, ಹಂಪಿ.

ಮಹದೇವ, ಸಿ., (ಸಂ)., ೨೦೦೯, **ನೇಕಾರ ಸಮಾಜ, ಸಂಸ್ಕೃತಿ, ಆರ್ಥಿಕ ಸ್ಥಿತಿಗತಿ**, ಪ್ರಸಾರಾಂಗ, ಕನ್ನಡ ವಿಶ್ವವಿದ್ಯಾಲಯ, ಹಂಪಿ.

ಮಹೇಶ್, ಕೆ., ೨೦೦೮, **ಕೃಷ್ಣದೇವರಾಯನ ಕಾಲದ ವೈಷ್ಣವ ದೇವಾಲಯಗಳು**, ಜಗದ್ಗುರು ಶ್ರೀಮನ್ಮಧ್ವಾಚಾರ್ಯ ಮೂಲ ಸಂಸ್ಥಾನ, ಶ್ರೀ ನರಹರಿ ತೀರ್ಥ ದಾಸಸಾಹಿತ್ಯ ಅಧ್ಯಯನ ಕೇಂದ್ರ, ರಾಯಚೂರು.

ಮೂರ್ತಿ, ಕೆ.ಎಲ್.ಎನ್., ೧೯೯೮, **ಕರ್ನಾಟಕದ ಕಲೆ ಮತ್ತು ವಾಸ್ತುಶಿಲ್ಪ**, ರಂಜಿತಾ ಪ್ರಕಾಶನ, ತುಮಕೂರು.

ರಮೇಶ್, ಸಿ.ಚಿ., (ಸಂ)., ೨೦೧೦, **ಜಾನಪದ ಕರ್ನಾಟಕ**, ಪ್ರಸಾರಂಗ, ಕನ್ನಡ ವಿಶ್ವವಿದ್ಯಾಲಯ, ಹಂಪಿ.

ರಾಮಚಂದ್ರ ರಾವ್, ಸಾ.ಕೃ., ೨೦೦೬, **ತಿರುಪತಿ ತಿಮ್ಮಪ್ಪ** , ಪ್ರಸಾರಾಂಗ, ಕರ್ನಾಟಕ ವಿಶ್ವವಿದ್ಯಾಲಯ, ಧಾರವಾಡ.

ರಾಮಚಂದ್ರರಾವ್, ಎಸ್.ಕೆ., ೧೯೭೫, **ಮೂರ್ತಿಶಿಲ್ಪ ನೆಲೆ:ಹಿನ್ನೆಲೆ**, ಬೆಂಗಳೂರು ವಿಶ್ವವಿದ್ಯಾಲಯ, ಬೆಂಗಳೂರು.

ರಾಮಚಂದ್ರರಾವ್, ಎಸ್.ಕೆ., ೧೯೮೦, **ಭಾರತದ ದೇವಾಲಯ ನೆಲೆ:ಹಿನ್ನೆಲೆ**, ಐಬಿಎಚ್ ಪ್ರಕಾಶನ, ಗಾಂಧಿನಗರ, ಬೆಂಗಳೂರು.

ರಾಮಶೇಷನ್, ಎನ್.ಕೆ., ೨೦೧೧, **ದಕ್ಷಿಣ ಭಾರತದ ಆಳ್ವಾರರು ಒಂದು ಅವಲೋಕನ**, ಪ್ರಸಾರಾಂಗ, ಕನ್ನಡ ವಿಶ್ವವಿದ್ಯಾಲಯ, ಹಂಪಿ.

ರೋಹಿಣಿ, ಬಿ.ಎಂ., ಮತ್ತು ಶಶಿಲೇಖಾ, ಬಿ., ೨೦೧೦, **ತುಳುನಾಡಿನ ಮಾಸ್ತಿಕಲ್ಲುಗಳು–ವೀರಗಲ್ಲುಗಳು**, ಕೃಷ್ಣ ಪ್ರಕಾಶನ, ಮಂಗಳೂರು.

ಲಕ್ಷ್ಮಣ್ ತೆಲಗಾವಿ, ೨೦೦೯, **ವಿಜಯನಗರ ಕಾಲದ ರಾಮಾನುಜಕೂಟಗಳು**, ಪ್ರಸಾರಾಂಗ, ಕನ್ನಡ ವಿಶ್ವವಿದ್ಯಾಲಯ, ಹಂಪಿ.

ವಸಂತ ಕುಷ್ಟಗಿ, ೨೦೦೨, **ವಿಜಯನಗರ ಸಾಮ್ರಾಜ್ಯದ ಪತನಾನಂತರದ ಹರಿದಾಸ ಸಾಹಿತ್ಯ**, ಪ್ರಸಾರಾಂಗ, ಕನ್ನಡ ವಿಶ್ವವಿದ್ಯಾಲಯ, ಹಂಪಿ.

ವಾಸುದೇವ ಬಡಿಗೇರ, ೨೦೧೨, **ಬಳ್ಳಾರಿ ಪರಿಸರದ ಸಾಂಸ್ಕೃತಿಕ ಪರಂಪರೆ**, ಪ್ರಸಾರಾಂಗ, ಕನ್ನಡ ವಿಶ್ವವಿದ್ಯಾಲಯ, ಹಂಪಿ.

ವಿಠಲರಾವ್ ಗಾಯಕ್ವಾಡ್, ೨೦೦೫, **ವಿಠ್ಠಲಸಂಪ್ರದಾಯ**, ಪ್ರಸಾರಾಂಗ, ಕನ್ನಡವಿಶ್ವವಿದ್ಯಾಲಯ, ಹಂಪಿ.

ವಿರಕ್ತಮಠ ಶಿವಾನಂದ, ೧೯೭೮, **ಪ್ರೌಢದೇವರಾಯನ ಕಾಲದ ಕನ್ನಡ ಸಾಹಿತ್ಯ**, ಕರ್ನಾಟಕ ವಿಶ್ವ ವಿದ್ಯಾಲಯ, ಧಾರವಾಡ.

ವಿರೂಪಾಕ್ಷಿ ಪೂಜಾರಹಳ್ಳಿ, ೨೦೦೬, **ಕರ್ನಾಟಕದಲ್ಲಿ ತಳವಾರಿಕೆ**, ಪ್ರಸಾರಾಂಗ, ಕನ್ನಡ ವಿಶ್ವವಿದ್ಯಾಲಯ, ಹಂಪಿ.

ವೀರೇಶ ಬಡಿಗೇರ, ೨೦೧೦, **ಶಾಸನಗಳಲ್ಲಿ ಆಯಗಾರಿಕೆ ಸಂಸ್ಕೃತಿ**, ಪ್ರಸಾರಾಂಗ, ಕನ್ನಡ ವಿಶ್ವವಿದ್ಯಾಲಯ, ಹಂಪಿ.

ವಿಷ್ಣುವರ್ಧನ, ಎಚ್., ೨೦೦೭, **ಕೆಳದಿ ವೀರಶೈವ ನಾಯಕರು ಮತ್ತು ಶೃಂಗೇರಿ ಮಠ** (ಅಪ್ರಕಟಿತ ಮಹಾಪ್ರಬಂಧ), ಕುವೆಂಪು ಕನ್ನಡ ವಿಶ್ವವಿದ್ಯಾಲಯ, ಶಿವಮೊಗ್ಗ.

ವೆಂಕಟರತ್ನಂ, ಎ.ವಿ., ೧೯೭೪, **ವಿಜಯನಗರ ಸಾಮ್ರಾಜ್ಯದಲ್ಲಿ ಸ್ಥಳೀಯ ಸರ್ಕಾರ**, ಮೈಸೂರು ವಿಶ್ವವಿದ್ಯಾಲಯ, ಮೈಸೂರು.

ವೆಂಕಟರಾಮಣ್ಣ, ಬಿ., ೧೯೯೪, **ವಿಜಯನಗರದ ಇತಿಹಾಸಕ್ಕೆ ಕೋಲಾರ ಜಿಲ್ಲೆಯ ಕೊಡುಗೆಗಳು**(ಅಪ್ರಕಟಿತ ಮಹಾಪ್ರಬಂಧ), ಮೈಸೂರು ವಿಶ್ವವಿದ್ಯಾಲಯ, ಮೈಸೂರು.

ವೆಂಕಟರಾಮಪ್ಪ, ಕೆ: ೧೯೭೪, **ಶ್ರೀಕೃಷ್ಣದೇವರಾಯನ ಕಾಲದ ಕರ್ಣಾಟಾಂಧ್ರ ಸಾಹಿತ್ಯ ಸಮೀಕ್ಷೆ**, ಮೈಸೂರು ವಿಶ್ವವಿದ್ಯಾಲಯ, ಮೈಸೂರು.

ಶ್ರೀಕಂಠಯ್ಯ, ಕೆ., ೧೯೮೩, **ವಿಜಯನಗರ ಕಾಲದ ಕನ್ನಡ ಸಾಹಿತ್ಯದಲ್ಲಿ ಜನಜೀವನ ಚಿತ್ರ** , ಗೀತಾ ಬುಕ್‌ಹೌಸ್, ಮೈಸೂರು.

ಶ್ರೀನಿವಾಸಚಾರಿ, ಬಿ., ೨೦೦೪, **ಬಡತನದ ದೇಶೀಯ ತಂತ್ರಜ್ಞಾನ**(ಅಪ್ರಕಟಿತ ಎಂ.ಫಿಲ್. ಮಹಾಪ್ರಬಂಧ), ಕನ್ನಡ ವಿಶ್ವವಿದ್ಯಾಲಯ, ಹಂಪಿ.

ಶ್ರೀನಿವಾಸ ವೆಂ.ಪಾಡಿಗಾರ, ೨೦೦೮, **ಬಾದಾಮಿಯ ಚಾಲುಕ್ಯರ ಶಾಸನಗಳು, ವಾಸ್ತು ಮತ್ತು ಶಿಲ್ಪಕಲೆ**, ಕರ್ನಾಟಕ ಇತಿಹಾಸ ಸಂಶೋಧನ ಮಂಡಲ, ಧಾರವಾಡ.

ಶಿವರಾಮ ಕಾರಂತ, ೧೯೩೦, **ಭಾರತೀಯ ಚಿತ್ರಕಲೆ**, ಕನ್ನಡ ಪುಸ್ತಕ ಪ್ರಾಧಿಕಾರ, ಚಾಮರಾಜಪೇಟೆ, ಬೆಂಗಳೂರು.

ಶಿವಪ್ರಸಾದ್, ಟಿ.ಆರ್., ೨೦೦೭, **ಶ್ರೀಕೃಷ್ಣದೇವರಾಯ**, ಚಿಂತನಗಂಗಾ ಪ್ರಕಾಶನ, ದಾವಣಗೆರೆ.

ಶೀಲಾಕಾಂತ ಪತ್ತಾರ, ೨೦೦೦, **ಬಾದಾಮಿ: ಸಾಂಸ್ಕೃತಿಕ ಅಧ್ಯಯನ**, ಪ್ರಸಾರಾಂಗ, ಕನ್ನಡ ವಿಶ್ವವಿದ್ಯಾಲಯ, ಹಂಪಿ.

ಶೇಖರಾಚಾರಿ, ಕೆ., ೨೦೧೦, **ಪಾಂಚಾಳರ ಭಾಷೆ ಮತ್ತು ಸಂಸ್ಕೃತಿ** (ಅಪ್ರಕಟಿತ ಎಂ.ಫಿಲ್. ಮಹಾಪ್ರಬಂಧ), ಕನ್ನಡ ವಿಶ್ವವಿದ್ಯಾಲಯ, ಹಂಪಿ.

ಶೇತೆ, ಬಿ.ಎಸ್., ೧೯೯೧, **ಕರ್ನಾಟಕದಲ್ಲಿ ಸತಿಪದ್ಧತಿ**, ವೀರಶೈವ ಅಧ್ಯಯನ ಅಕಾಡೆಮಿ, ಬೆಳಗಾವಿ.

ಶೇಷಾಶಾಸ್ತ್ರಿ, ಆರ್., ೧೯೬೮, **ಕರ್ನಾಟಕದ ವೀರಗಲ್ಲುಗಳು**, ಕನ್ನಡ ಸಾಹಿತ್ಯ ಪರಿಷತ್ತು, ಬೆಂಗಳೂರು.

ಶ್ರೀ ಜಯತೀರ್ಥ ರಾಜಪುರೋಹಿತ, ೧೯೬೮, **ತುಂಗಾತರಂಗ**, ತುಂಗಭದ್ರಾ ಯೋಜನೆಯ ಆಡಳಿತಾಧಿಕಾರಿಗಳು, ಕಲ್ಬುರ್ಗಿ.

ಸರಸ್ವತಿ, ಎನ್., ೨೦೦೮, **ವಿಜಯನಗರ ಕಾಲದ ಮಹಿಳೆಯರ ಕೊಡುಗೆಗಳು**, ಸಿಂಚು ಮಲ್ಟಿಗ್ರಾಫ್, ವಿದ್ಯಾರಣ್ಯಪುರಂ, ಮೈಸೂರು.

ಸರಸ್ವತಿದೇವಿ, ಎಸ್.ಭಗವತಿ, ೨೦೦೭, **ಹಂಪಿಯ ಶಾಸನಗಳು–ಒಂದು ಅಧ್ಯಯನ**, ಕರ್ನಾಟಕ ಇತಿಹಾಸ ಸಂಶೋಧನ ಮಂಡಲ, ಧಾರವಾಡ.

ಸಿದ್ದಲಿಂಗಮ್ಮ, ಬಿ.ಜಿ., ೨೦೦೭, **ಮಧ್ಯಕಾಲೀನ ಕರ್ನಾಟಕದಲ್ಲಿ ಕುಶಲಕರ್ಮಿಗಳು ಒಂದು ಸಾಮಾಜಿಕ ಮತ್ತು ಚಾರಿತ್ರಿಕ ಅಧ್ಯಯನ**(ಅಪ್ರಕಟಿತ ಮಹಾಪ್ರಬಂಧ), ಕುವೆಂಪು ವಿಶ್ವವಿದ್ಯಾಲಯ, ಶಂಕರಘಟ್ಟ, ಶಿವಮೊಗ್ಗ.

ಸುಚಿತ್ರಾ ಲಿಂಗದಹಳ್ಳಿ, ೨೦೦೬, **ವಿಜಯನಗರ ಭಿತ್ತಿ ಚಿತ್ರಕಲೆ**(ಅಪ್ರಕಟಿತ ಪ್ರಬಂಧ), ಲಲಿತಕಲಾ ನಿಕಾಯ, ಕನ್ನಡ ವಿಶ್ವವಿದ್ಯಾಲಯ, ಹಂಪಿ.

ಸೋಮಶೇಖರ್, ಎಸ್.ವೈ., ೧೯೯೭, **ಹಂಪಿಯ ಬಜಾರುಗಳು**, ಕನ್ನಡ ವಿಶ್ವವಿದ್ಯಾಲಯ, ಹಂಪಿ.

ಸೋಮಶೇಖರ್, ಎಸ್.ವೈ., ೨೦೦೯, **ವಿಜಯನಗರ ಕಾಲದ ಸೈನ್ಯವ್ಯವಸ್ಥೆ ಮತ್ತು ಯುದ್ಧನೀತಿ**, ಸಂಚಿಕೆ ಪ್ರಕಾಶನ, ಚಿತ್ರದುರ್ಗ.

ಸೋಮಶೇಖರ್, ಎಸ್.ವೈ., ೨೦೧೪, **ಕರ್ನಾಟಕದ ಬಿರುದಾವಳಿಗಳು ಚಾರಿತ್ರಿಕ ಮತ್ತು ಸಾಂಸ್ಕೃತಿಕ ಅಧ್ಯಯನ**, ಪ್ರಸಾರಾಂಗ, ಕನ್ನಡ ವಿಶ್ವವಿದ್ಯಾಲಯ, ಹಂಪಿ.

ಸೌಭಾಗ್ಯವತಿ, ಕೆ., ೨೦೦೭, **ಜನಪದ ಆಭರಣಗಳು**, ಚೇತನ ಬುಕ್ ಹೌಸ್, ಮೈಸೂರು.

ಶ್ರೀ ಆನಂದ, ಬಿ.ಭೈರಾಪುರದ., ೨೦೦೭, **ರಾಯಲ ಸೀಮೆಯ ವಿಜಯನಗರ ದೇವಾಲಯಗಳ ವಾಸ್ತು ಮತ್ತು ಮೂರ್ತಿ ಶಿಲ್ಪಗಳು–ಒಂದು ಅಧ್ಯಯನ** (ಅಪ್ರಕಟಿತ ಮಹಾಪ್ರಬಂಧ), ಕರ್ನಾಟಕ ವಿಶ್ವವಿದ್ಯಾಲಯ, ಧಾರವಾಡ

ಹಜರತ್‌ಸಾಬ್, ಹು.ನದಾಫ್, ೨೦೦೭, **ಕನಕದಾಸರ ಕೃತಿಗಳು ಜಾನಪದೀಯ ಅಧ್ಯಯನ**, ಸಿರಾ ಪಬ್ಲಿಂಷಿಗ್ ಹೌಸ್, ಮೈಸೂರು.

ಹಿರೇಮಠ, ಬಿ.ಆರ್., ೧೯೮೦, **ಶಾಸನಗಳಲ್ಲಿ ಕರ್ನಾಟಕದ ವರ್ತಕರು**, ಕರ್ನಾಟಕ ವಿಶ್ವವಿದ್ಯಾಲಯ, ಧಾರವಾಡ.

ಹಿರೇಮಠ, ಬಿ.ಆರ್., (ಸಂ)., ೨೦೧೨, **ಶಾಸನ ಅಧ್ಯಯನ**, **ಪ್ರಸಾರಾಂಗ**, ಕನ್ನಡ ವಿಶ್ವವಿದ್ಯಾಲಯ, ಹಂಪಿ.

ಹುಚ್ಚುಸಾಬ್, ಪಿ., ೨೦೦೭, **ಬಳ್ಳಾರಿ ಜಿಲ್ಲಾ ಗಣಿ ಕಾರ್ಮಿಕರ ಸಮಾಜೋ–ಆರ್ಥಿಕ ಅಧ್ಯಯನ** (ಅಪ್ರಕಟಿತ ಪಿಎಚ್.ಡಿ. ಮಹಾಪ್ರಬಂಧ), ಕನ್ನಡ ವಿಶ್ವವಿದ್ಯಾಲಯ, ಹಂಪಿ.

ಜ್ಞಾನಾನಂದ, ಜಿ., **ಶಿಲ್ಪಶಾಸ್ತ್ರ**, ಸಂಪುಟ–೧ ಮತ್ತು ೨, ಪ್ರಸಾರಾಂಗ, ಕನ್ನಡ ವಿಶ್ವವಿದ್ಯಾಲಯ, ಹಂಪಿ.

ಜ್ಞಾನಾನಂದ, ಜಿ., ೨೦೦೫, **ಪಾರಂಪರಿಕ ಶಿಲ್ಪ ನೆನ್ನೆ – ನಾಳೆ**, ಸಂಕೃತಿ ಸಾಹಿತ್ಯ ಪ್ರತಿಷ್ಠಾನ, ಬೆಂಗಳೂರು.

ವಿಶ್ವಕೋಶ ಮತ್ತು ಪದಕೋಶ

ಸಂಕ್ಷಿಪ್ತ ಕನ್ನಡ ನಿಘಂಟು, ೨೦೦೧, ಕನ್ನಡ ಸಾಹಿತ್ಯ ಪರಿಷತ್ತು, ಬೆಂಗಳೂರು.

ಇಗೋ ಕನ್ನಡ(ಸಾಮಾಜಿಕ ನಿಘಂಟು), ೧೯೯೭, ನವಕರ್ನಾಟಕ ಪಬ್ಲಿಕೇಷನ್ಸ್ ಪ್ರೈವೇಟ್ ಲಿಮಿಟೆಡ್, (ಜಿ.ವೆಂಕಟಸುಬ್ಬಯ್ಯ).

ಸಂಸ್ಕೃತ – ಕನ್ನಡ ನಿಘಂಟು, ೨೦೦೯, ಗೀತಾ ಬುಕ್ ಹೌಸ್, ಮೈಸೂರು (ಜಿ.ಎನ್.ಚಕ್ರವರ್ತಿ)

ಕನ್ನಡ ವಿಶ್ವಕೋಶ, ಮೈಸೂರು.

ಪತ್ರಿಕೆಗಳು ಮತ್ತು ಇತರೆ

ಇತಿಹಾಸ ದರ್ಪಣ(ತ್ರೈಮಾಸಿಕ), ಕೆಂಪೇಗೌಡ ನಗರ, ಬೆಂಗಳೂರು.

ಇತಿಹಾಸ ದರ್ಶನ, ಕರ್ನಾಟಕ ಇತಿಹಾಸ ಅಕಾಡೆಮಿ, ಬೆಂಗಳೂರು.

ಕನ್ನಡ ಸಾಹಿತ್ಯ ಪರಿಷತ್ ಪತ್ರಿಕೆ, ಕನ್ನಡ ಸಾಹಿತ್ಯ ಪರಿಷತ್ತು, ಬೆಂಗಳೂರು.

ಚರಿತ್ರೆ ಅಧ್ಯಯನ, ಸಂಪುಟಗಳು, ಪ್ರಸಾರಾಂಗ, ಕನ್ನಡ ವಿಶ್ವವಿದ್ಯಾಲಯ, ಹಂಪಿ.

ಜಾನಪದ ಕರ್ನಾಟಕ, ಸಂಪುಟಗಳು, ಪ್ರಸಾರಾಂಗ, ಕನ್ನಡ ವಿಶ್ವವಿದ್ಯಾಲಯ, ಹಂಪಿ.

ದೇಸಿಚರಿತ್ರೆ(ತ್ರೈಮಾಸಿಕ), ಸರ್ಕಾರಿ ಮಹಿಳಾ ಕಾಲೇಜ್, ಚಿಂತಾಮಣಿ, ಚಿಕ್ಕಬಳ್ಳಾಪುರ ಜಿಲ್ಲೆ

ಮಾನವಿಕ ಕರ್ನಾಟಕ, ಪ್ರಸಾರಾಂಗ, ಮೈಸೂರು ವಿ.ವಿ., ಮೈಸೂರು.

ವಿಜಯನಗರ ಅಧ್ಯಯನ ಸಂಪುಟಗಳು, ರಾಜ್ಯ ಪುರಾತತ್ವ ಮತ್ತು ವಸ್ತು ಸಂಗ್ರಹಾಲಯ. ನಿರ್ದೇಶನಾಲಯ, ಮೈಸೂರು.

Madras Christian College Magazine.

Quarterly Journal of the Mythic Society, Bangalore.

South Indian History Congress.

ENGLISH BOOKS

Epigraphia Carnatica.

Epigraphis Indica.

Anna, L.Dallapiccola and Anil Verghese, 1998, **Sculpture at Vijayanagara Iconography and Style**, Manohar, AIIS, New Delhi.

Anna,L.Dallapiccola and others: 1992, **The Ramachandra Temple at Vijayanagara, Manohar, American Institute of Indian Studies**, New Delhi.

Anil Verghese, 1995, **Religious Traditions at Vijayanagara**, Manohar, AIIS, New Delhi.

Ayyangar, Krishnaswamy.S., (Ed.)., 1986, **Sources of Vijayanagara History**, Gian Publishing House, Delhi.

Choodamani Nandagopal, 1990, **Dance and Music in the Temple Architecture**, Agamkala Prakashana, Delhi.

Gopal, R., 2005, **Venetian Coins in Karnataka**, Directorate ofArchaeology and Museums, Hospet.

Jagadesh, G.Kivudanavar., 2000, **Festival in Vijayanagara Empire** (Unpublished Ph.D.Thesis), Karnataka University, Dharwad.

Jayanthi, V.G.,1993, **Hampi – A Cultural Study** (Unpublished Ph.D.Thesis), Karnataka University, Dharawad.

Kathernine Prior, 2004, **Maharaja's Jewels**, Mapin Pulication Pvt., Ltd., Ahmedabad.

Kumaraswamy, M.C., 2009, **Industries in Karnataka with Special Reference to Vijayanagara Period** (1336-1565), (M.Phil.Thesis) Mysore University, Mysore

Mahalingam, T.V., 1975, **Administration and Social Life under Vijayangara Part – 1 and 2**, University of Madras, Madras.

Mahesh, G., 2009, **Trade in Karnataka with Special Reference to Vijayanagara Period 1336-1565**(M.Phil.Thesis), Mysore University, Mysore

Manjunatha, P., 2009, Vijayangara Urbanity (M.Phil.Thesis), Mysore University, Mysore.

Michel Postel, 1989, **Ear Ornaments of Ancient India**, Project for Indian Cultural Studies, Bombay.

Madharao, P.Patil, 1999, **Court Life under the Vijayanagara Rulers**, B.R.Publising Corporation, Delhi.

Nagaraju, H.M., 1991, **Devararaya – II and His Times**, Prasaranga, Mysore University, Mysore.

Nilakanta Sastri, K.A., and Venkata Ramanayya.N., 1946, **Further Sources of Vijayanagara History**, Madras.

Padma, M.B., 1993, **The Position of Women in Mediaval Karnataka**, the Director, Prasaranga, Manasagangothri, Mysore.

Padmanabha, K., 1989, **Hoysala Scupture – A Cultural Study**, Sundeep Prakashana, Delhi.

Prasanna Kumar Acharya, 1980, **Archietecture of Manasara**, Oriental Books Re-print Corporation, New Delhi.

Rai Govind Chandra, 1979, **Indo-Greek Jewellery**, Shakti Maok, Abhinav Publication, New Delhi.

Rajashekara, S., 1983, **Masterpieces of Vijayanagara Art**, Taraporevala, Bombay.

Raghunath Bhat, H.R., 2003, **Studies in the Early Coins of Karnataka**, Directorate of Archaealogy and Museums, Hospet.

Reddappa, K., 2000, **Material Culture Depicted in VijayanagaraTemples**, Bharatiya Kala Prakashana, Delhi.

Sachidanand Sahay, 1975, **Indian Costumes, Coiffure and Ornament**, Munshiram Mohonlal Publishers Pvt.,Ltd., New Delhi.

Saletore, R.N., 1982, **Vijayanagara Art**, Sandeep Prakashan, Delhi.

Shivarudraswamy, S.N., 1996, **Vijayanagara Temples in Karnataka**.

Sivaramamurthi, C., 1970, **Indian Painting**, National Book Trust India, New Delhi.

Subramany Sastry.S (Tr):1984, **Inscriptions of Saluva Narashima's Time**, Sri Satguru Publications, India.

Sudarshan, S., 2010, **Women in Hoysala Sculptures – A Cultural Study**, Mysore University, Mysore.

Tewari, S.P., 1982, **Nupura – The Anklet in Indian Literature and Art**, Agamkala Publication, Delhi.

Umamaheshwari, C.S., **Dress and Jewellery of Women, Satavahana to Kakatiya**, New Era Publications, Madras.

Vasundra Fillozat, 1977, **Vijayanagara**, National Book Traust, India.

Vasudevan, C.S., (Ed)., 2000, **Kannada Inscriptions of Andra Pradesh**, Prasaranga, Kannada University, Hampi.

Vasudevan, C.S., 2014, **Report on the excavations at HAMPI (1991-2010),Vol-1 and 2**, Department of Archaeology, Museums and Heritate, Mysore.

Vijayanagara Inscriptions, 4 vols. (Ed. B.R.Gopal) Directorate of Archaeology and Museums, Mysore.

Vijayaraghawa Charya(Ed)., **Inscriptions of Krishnadevaraya's Time**.

Vijayaraghawa Charya(Ed)., **Inscriptions of Achyutadevaraya's Time**.

Vohra, J.N., 2000, **Evolution of Modern Textiles**, Originals Publications, Delhi.

REPORTS

Dallapiccola, Anna Libera, 1985, Vijayanagara, City and Empire, Sturgart.

Devaraj, D.V., and Patil.C.S., (Ed.), In Vijayanagara: Progress of Research 1983 to 88, Directorate of Archaeology and Museums, Mysore.

Nagaraja Rao, M.S., (Ed.), In Vijayanagara: Progress of Research, Directorate of Archaeology and Museums, Mysore.

Ramamurthy, J.R., 1996, The Vijayanagara Heritage, Vijyanagara Hampi Heritage Trust, Anegondi, N.C.Colony, Hospet.

ಸಂಕ್ಷೇಪಸೂಚಿ

ಪ್ರ.ಕ.ಇಂ	–	ಪ್ರವಾಸಿ ಕಂಡ ಇಂಡಿಯ
ವಿ.ಕಾ.ಕ.ಸಾ.ಜ.ಚಿತ್ರ	–	ವಿಜಯನಗರ ಕಾಲದ ಕನ್ನಡ ಸಾಹಿತ್ಯದಲ್ಲಿ ಜನಜೀವನ ಚಿತ್ರ
ಕ.ವಿ.ವಿ	–	ಕನ್ನಡ ವಿಶ್ವವಿದ್ಯಾಲಯ
ಕ.ವಿ.ವಿ.ಶಾ.ಸಂ	–	ಕನ್ನಡ ವಿಶ್ವವಿದ್ಯಾಲಯ ಶಾಸನ ಸಂಪುಟ
ಪ್ರೌ.ಶಾ	–	ಪ್ರೌಢದೇವರಾಯನ ಶಾಸನಗಳು




ಚಿತ್ರ – ೧ : ರಾಜ ಮತ್ತು ದಂಡನಾಯಕ, ವಿಠಲ ದೇವಾಲಯ, ಹಂಪಿ




ಚಿತ್ರ – ೨ : ರಾಯಭಾರಿಗಳು, ಮಹಾನವಮಿದಿಬ್ಬ, ಹಂಪಿ




ಚಿತ್ರ – ೩ : ತಳವಾರ, ಮಹಾನವಮಿದಿಬ್ಬ, ಹಂಪಿ




ಚಿತ್ರ – ೪ : ಸೈನಿಕರು ಕೃಷ್ಣದೇವಾಲಯ, ಹಂಪಿ



ಚಿತ್ರ – ೫ : ರಾವುತರು ಮಲ್ಲಿಕಾರ್ಜುನ ದೇವಾಲಯ, ಶ್ರೀಶೈಲ, ಆಂಧ್ರಪ್ರದೇಶ



ಚಿತ್ರ – ೬ : ಸೈನಿಕ,
ವಿಠಲದೇವಾಲಯ, ಹಂಪಿ



ಚಿತ್ರ – ೭ : ಸೈನಿಕ,
ವಿಠಲದೇವಾಲಯ, ಹಂಪಿ



ಚಿತ್ರ – ೮ : ಪುರೋಹಿತ, ಶ್ರೀರಂಗನಾಥ
ದೇವಾಲಯ, ಶ್ರೀರಂಗಂ, ತಮಿಳುನಾಡು



ಚಿತ್ರ – ೯ : ದನಗಾಹಿ, ಶ್ರೀ ಮಲ್ಲಿಕಾರ್ಜುನ
ದೇವಾಲಯ, ಶ್ರೀಶೈಲ, ಆಂಧ್ರಪ್ರದೇಶ



ಚಿತ್ರ – ೧೦ : ಕುರಿಗಾಹಿ, ಶ್ರೀಮಲ್ಲಿಕಾರ್ಜುನ
ದೇವಾಲಯ, ಶ್ರೀಶೈಲ, ಆಂಧ್ರಪ್ರದೇಶ



ಚಿತ್ರ – ೧೧ : ಗೊರಗುದಾರಿ, ಅಚ್ಯುತರಾಯ ದೇವಾಲಯ, ಹಂಪಿ



ಚಿತ್ರ – ೧೨ :
ಕೃಷಿಕ, ಅಚ್ಯುತರಾಯ ದೇವಾಲಯ, ಹಂಪಿ



ಚಿತ್ರ – ೧೩ : ಗಜಪಳಗಿಸುತ್ತಿರುವ ಮಾವುತ, ಮಹಾನವಮಿದಿಬ್ಬ, ಹಂಪಿ



ಚಿತ್ರ – ೧೪ : ಬೇಟೆಗಾರ್ತಿ, ಮಹಾನವಮಿದಿಬ್ಬ, ಹಂಪಿ



ಚಿತ್ರ – ೧೫ : ಮಲ್ಲಯುದ್ಧ ವೀಕ್ಷಣೆಯಲ್ಲಿ ರಾಣಿಯೊಂದಿಗೆ ಸೇವಕಿಯರು, ಮಹಾನವಮಿದಿಬ್ಬ, ಹಂಪಿ




ಚಿತ್ರ – ೧೬ : ಹಾಸ್ಯಗಾರ,
ವಿಠಲದೇವಾಲಯ, ಹಂಪಿ



ಚಿತ್ರ – ೧೭ : ಹಾಸ್ಯಗಾರ,
ವಿಠಲದೇವಾಲಯ, ಹಂಪಿ



ಚಿತ್ರ – ೧೮ : ದೊಂಬರಾಟ, ಮಹಾನವಮಿದಿಬ್ಬ, ಹಂಪಿ



ಚಿತ್ರ – ೧೯ : ಕೋತಿ ಆಡಿಸುವವನು,
ಹಜಾರರಾಮ ದೇವಾಲಯ, ಹಂಪಿ



ಚಿತ್ರ – ೨೦ : ಆಸ್ಥಾನಕ್ಕೆ ಹೋಗುತ್ತಿರುವ ವಿದೇಶಿ ವ್ಯಾಪಾರಿಗಳು, ವಿಠಲ ದೇವಾಲಯ, ಹಂಪಿ



ಚಿತ್ರ – ೨೧ : ಕುದುರೆ ವ್ಯಾಪಾರಿ, ಮಹಾನವಮಿದಿಬ್ಬ, ಹಂಪಿ




ಚಿತ್ರ – ೨೨ : ರಾಜನಿಂದ ಬಹುಮಾನ ಪಡೆಯುತ್ತಿರುವ ವಿದೇಶಿ ವ್ಯಾಪಾರಿಗಳು,
ಮಹಾನವಮಿದಿಬ್ಬ, ಹಂಪಿ



ಚಿತ್ರ – ೨೨–ಎ : ಆಸ್ಥಾನದಲ್ಲಿ ವಿದೇಶಿ ವ್ಯಾಪಾರಿಗಳು, ಹಜಾರರಾಮ ದೇವಾಲಯ, ಹಂಪಿ



ಚಿತ್ರ – ೨೩ : ಆಸ್ಥಾನದಲ್ಲಿ ರಾಜನಿಂದ ಕಂಠಮಾಲೆ ಸ್ವೀಕರಿಸುತ್ತಿರುವ ವಿದೇಶಿ ಆನೆಯ ವ್ಯಾಪಾರಿ,
ವಿಠಲದೇವಾಲಯ, ಹಂಪಿ




ಚಿತ್ರ – ೨೪ : ಮದ್ದಳೆ ಮತ್ತು ತಾಳವಾದಕರು,
ವಿರೂಪಾಕ್ಷ ದೇವಾಲಯ, ಹಂಪಿ



ಚಿತ್ರ – ೨೫ : ಮದ್ದಳೆವಾದಕ, ಲೇಪಾಕ್ಷಿ



ಚಿತ್ರ – ೨೬ : ಡೋಲು ಮತ್ತು
ನಾದಸ್ವರವಾದಕರು, ಶ್ರೀಶೈಲ



ಚಿತ್ರ – ೨೭ : ತಾಳವಾದಕ,
ವಿರೂಪಾಕ್ಷ ದೇವಾಲಯ, ಹಂಪಿ



ಚಿತ್ರ – ೨೮ : ಕೊಳಲುವಾದಕ, ಶ್ರೀಶೈಲ



ಚಿತ್ರ – ೩೯ : ವಾದ್ಯಗಾರರು, ಮಹಾನವಮಿದಿಬ್ಬ, ಹಂಪಿ



ಚಿತ್ರ – ೩೦ : ನಾಗಸ್ವರವಾದಕರು,
ವೀರಭದ್ರ ದೇವಾಲಯ, ಲೇಪಾಕ್ಷಿ, ಆಂಧ್ರಪ್ರದೇಶ




ಚಿತ್ರ – ೩೧ : ಕಿನ್ನರಿವಾದಕ,
ವಿರೂಪಾಕ್ಷ ದೇವಾಲಯ, ಹಂಪಿ




ಚಿತ್ರ – ೩೨ : ತಬಲವಾದಕ,
ವೀರಭದ್ರ ದೇವಾಲಯ, ಲೇಪಾಕ್ಷಿ



ಚಿತ್ರ – ೩೩ : ಶಂಖವಾದಕ
ವಿಠಲ ದೇವಾಲಯ, ಹಂಪಿ



ಚಿತ್ರ – ೩೪ : ಕಹಳೆವಾದಕ,
ಅಚ್ಯುತರಾಯ ದೇವಾಲಯ, ಹಂಪಿ




ಚಿತ್ರ – ೩೫ : ಢಕ್ಕೆವಾದಕ,
ಅಚ್ಯುತರಾಯ ದೇವಾಲಯ, ಹಂಪಿ



ಚಿತ್ರ – ೩೬ : ಕಂಜರಿವಾದಕ,
ವಿಠಲದೇವಾಲಯ, ಹಂಪಿ




ಚಿತ್ರ – ೩೭ : ಚಾಮರಧಾರಿಣಿ,
ಅನಂತಶಯನ ದೇವಾಲಯ, ಹಂಪಿ



ಚಿತ್ರ – ೩೮ : ಚಾಮರಧಾರಿಣಿ,
ಹಜಾರರಾಮಚಂದ್ರ ದೇವಾಲಯ, ಹಂಪಿ



ಚಿತ್ರ – ೩೯ : ಚಾಮರಧಾರಿಣಿ,
ಹಜಾರರಾಮಚಂದ್ರ ದೇವಾಲಯ, ಹಂಪಿ



ಚಿತ್ರ – ೪೦ : ನರ್ತಕಿ,
ವೀರಭದ್ರ ದೇವಾಲಯ, ಲೇಪಾಕ್ಷಿ



ಚಿತ್ರ – ೪೧ : ನರ್ತಕಿ,
ಹಜಾರರಾಮ ದೇವಾಲಯ, ಹಂಪಿ



ಚಿತ್ರ – ೪೨ : ರಾಜನ ಆಸ್ಥಾನದಲ್ಲಿ ನೃತ್ಯ ಪ್ರದರ್ಶನ – ವಿಠಲ ದೇವಾಲಯ, ಹಂಪಿ




ಚಿತ್ರ – ೪೩ : ಕೋಲಾಟನಿರತರು, ವಿಠಲ ದೇವಾಲಯ, ಹಂಪಿ



ಚಿತ್ರ – ೪೪ : ಕೋಲಾಟನಿರತರು, ವಿಠಲ ದೇವಾಲಯ, ಹಂಪಿ



ಚಿತ್ರ – ೪೫ : ಓಕುಳಿಯಾಟದಲ್ಲಿ ನಿರತರು, ವಿಠಲ ದೇವಾಲಯ, ಹಂಪಿ




ಚಿತ್ರ – ೪೬ : ಗೋಪಿಕಾ ಸ್ತ್ರೀಯರು, ವಿಠಲ ದೇವಾಲಯ, ಹಂಪಿ



ಚಿತ್ರ – ೪೭ : ದೀಪಾರತಿ ಹಿಡಿದಿರುವ ಸ್ತ್ರೀ, ಹಜಾರರಾಮಚಂದ್ರ ದೇವಾಲಯ, ಹಂಪಿ



ಚಿತ್ರ – ೪೮ : ಕಳಸಹಿಡಿದಿರುವ ಸ್ತ್ರೀ, ಹಜಾರರಾಮಚಂದ್ರ ದೇವಾಲಯ, ಹಂಪಿ



ಚಿತ್ರ – ೪೯ : ಬೇಟೆಗಾರ್ತಿ,
ಮಹಾನವಮಿದಿಬ್ಬ, ಹಂಪಿ



ಚಿತ್ರ – ೫೦ : ಗೊಲ್ಲತಿ,
ವಿಠಲ ದೇವಾಲಯ, ಹಂಪಿ




ಚಿತ್ರ – ೫೧: ತಾಯಿ ಮತ್ತು ಮಗು,
ವಿಠಲ ದೇವಾಲಯ, ಹಂಪಿ



ಚಿತ್ರ – ೫೨: ಏಕತಾರಿವಾದಕರು,
ವಿರೂಪಾಕ್ಷ ದೇವಾಲಯ, ಹಂಪಿ




ಚಿತ್ರ – ೫೩ : ಸತಿಶಿಲ್ಪ, ವಸ್ತು
ಸಂಗ್ರಹಾಲಯ, ಕಮಲಾಪುರ



ಚಿತ್ರ – ೫೪ : ಶ್ರೀರಾಮನುಜಚಾರ್ಯರು,
ವಿಠಲ ದೇವಾಲಯ, ಹಂಪಿ



ಚಿತ್ರ – ೫೫ : ಯತಿ ಮತ್ತು
ರಾಜ, ವಿಠಲ ದೇವಾಲಯ, ಹಂಪಿ



ಚಿತ್ರ – ೫೬ : ಶೈವಯತಿ,
ವಿರೂಪಾಕ್ಷ ದೇವಾಲಯ, ಹಂಪಿ



ಚಿತ್ರ – ೫೬–(ಎ) : ಮತ್ಸ್ಯೇಂದ್ರನಾಥ,
ಮಾಧವ ದೇವಾಲಯ ಹಂಪಿ



ಚಿತ್ರ – ೫೬ (ಬಿ) : ನಾಗಲಿಂಗ,
ವೀರಭದ್ರ ದೇವಾಲಯ, ಲೇಪಾಕ್ಷಿ



ಚಿತ್ರ – ೫೭ : ವೀರಭದ್ರ,
ಕಮಲಾಪುರ ವಸ್ತು ಸಂಗ್ರಹಾಲಯ




ಚಿತ್ರ – ೫೮ : ಗಿರಿಜಾ ಕಲ್ಯಾಣ,
ವಿರೂಪಾಕ್ಷ ದೇವಾಲಯ, ಹಂಪಿ



ಚಿತ್ರ – ೫೯ : ಹಿಮವಂತ,
ವೀರಭದ್ರ ದೇವಾಲಯ, ಲೇಪಾಕ್ಷಿ



ಚಿತ್ರ – ೫೯–(ಎ) : ಗಿರಿಜೆ,
ವೀರಭದ್ರದೇವಾಲಯ, ಲೇಪಾಕ್ಷಿ




ಚಿತ್ರ – ೬೦ : ಗಿರಿಜಾ ಕಲ್ಯಾಣ, ವೀರಭದ್ರ ದೇವಾಲಯ, ಲೇಪಾಕ್ಷಿ, ಆಂಧ್ರಪ್ರದೇಶ



ಚಿತ್ರ – ೬೧ : ಶೇಷಶಯನ ವಿಷ್ಣು, ವಸ್ತು ಸಂಗ್ರಹಾಲಯ, ಕಮಲಾಪುರ



ಚಿತ್ರ – ೬೨ : ನರಸಿಂಹಾವತರ, ವಿಠಲ ದೇವಾಲಯ, ಹಂಪಿ




ಚಿತ್ರ – ೬೩ : ಬಾಲಕೃಷ್ಣ, ವಿರೂಪಾಕ್ಷ ದೇವಾಲಯ, ಹಂಪಿ



ಚಿತ್ರ – ೬೪ : ಬಾಲಕೃಷ್ಣ, ಹಜಾರರಾಮಚಂದ್ರ ದೇವಾಲಯ, ಹಂಪಿ



ಚಿತ್ರ – ೬೫ : ಕಾಳಿಂಗ ಮರ್ದನ, ಹಜಾರ ರಾಮಚಂದ್ರ ದೇವಾಲಯ, ಹಂಪಿ



ಚಿತ್ರ – ೬೬ : ಗೋಪಾಲಕೃಷ್ಣ, ಹಜಾರರಾಮ ಚಂದ್ರ ದೇವಾಲಯ, ಹಂಪಿ



ಚಿತ್ರ – ೬೭ : ವೆಂಕಟೇಶಸ್ವಾಮಿ, ರಾಜ ಮತ್ತು ಯತಿ ವಿಠಲ ದೇವಾಲಯ, ಹಂಪಿ



ಚಿತ್ರ – ೧೮ : ಗಣಪತಿ,
ಹಜಾರರಾಮಚಂದ್ರ ದೇವಾಲಯ, ಹಂಪಿ



ಚಿತ್ರ – ೧೯: ಸುಬ್ರಹ್ಮಣ್ಯ,
ಹಜಾರರಾಮಚಂದ್ರ ದೇವಾಲಯ, ಹಂಪಿ



ಚಿತ್ರ – ೨೦ : ಹನುಮಂತ,
ವಿಠಲದೇವಾಲಯ, ಹಂಪಿ




ಚಿತ್ರ – ೨೧ : ವರಾಹ,
ವಿಠಲದೇವಾಲಯ, ಹಂಪಿ




ಚಿತ್ರ – ೨೨ : ನಂದಿ,
ವಿರುಪಾಕ್ಷದೇವಾಲಯ,ಹಂಪಿ




ಚಿತ್ರ – ೨೩ : ನಂದಿ,
ಲೇಪಾಕ್ಷಿ, ಆಂಧ್ರಪ್ರದೇಶ



ಚಿತ್ರ – ೨೪ : ಆನೆ,
ಮಹಾನವಮಿದಿಬ್ಬ, ಹಂಪಿ




ಚಿತ್ರ – ೨೫ : ನಾಯಿ, ವಿಠಲ ದೇವಾಲಯ, ಹಂಪಿ



ಚಿತ್ರ – ೭೬ : ಕುರಿ,
ವಿಠಲ ದೇವಾಲಯ, ಹಂಪಿ




ಚಿತ್ರ – ೭೭ : ಶುಕಭಾಷಿಣಿ,
ವಿಠಲದೇವಾಲಯ, ಹಂಪಿ




Gold Amulet



Stone Beats





Bangle Pieces

ಕೃಪೆ : **Report on The excavations At Hampi (1991-2010)**

ದ್ರಾವಿಡ ಸಂಸ್ಕೃತಿ ಮತ್ತು ಬುಡಕಟ್ಟು ಅಧ್ಯಯನ ವಿಭಾಗ